ಸಹಕಾರಿ ಬೇಸಾಯ

ವಿ ಗು ಅಂಗಡಿ



ಕನ್ನಡ ಅಧ್ಯಯನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-24

ಪ್ರಕಟಣೆ 65

ಸಹಕಾರಿ ಬೇಸಾಯ

ವಿ. ಗು. ಅಂಗಡಿ

ಕರ್ನಾಟಕ ರಾಜ್ಯ ಸರಕಾರದ ಸಹಕಾರಿ ಬೇಸಾಯದ ಸ್ಪೆಶಲ್ ಅಧಿಕಾರಿಗಳು (ನಿವೃತ್ತ)

1978

ಕನ್ನಡ ಅಧ್ಯಯನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು - 560024

ಸಹಕಾರಿ ಬೇಸಾಯ (ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದಿಂದ ಸಿದ್ಧಗೊಂಡು ಸಂವಹನ ಸಮಿತಿಯಿಂದ ಪ್ರಕಾಶಿತ) ಪ್ರಥಮ ಮುದ್ರಣ 1978, ಪ್ರತಿಗಳು 1000, ಪುಟ XII + 255 ಬೆಲೆ: ಸಾದಾಪ್ರತಿ 18–00

ಕ್ಯಾಲಿಕೋ ಪ್ರತಿ 23–00

ಸಂಪಾದನೆ

ಪ್ರಾ। ವೀ. ಚ. ಹಿತ್ತಲಮನಿ
ಕನ್ನಡ ಪ್ರಾಧ್ಯಾಪಕರು

ತಾಂತ್ರಿಕ ಪರಿಶೀಲನೆ

ಡಾ। ಎನ್. ಪಿ. ಪಾಟೀಲ
ಕೃಷಿ ಸಂಶೋಧನಾ ನಿರ್ದೇಶಕರು (ನಿವೃತ್ತ)

ಮುದ್ರಣ : ಡಬ್ಲ್ಯು. ಕ್ಯು. ಜಡ್ಜ್ ಪ್ರೆಸ್, ಬೆಂಗಳೂರು-560025.

ಕುಲಪತಿಗಳ ಹಾರೈಕೆ

ಇಂದಿನ ವಿಶ್ವದಲ್ಲಿನ ಹಲವಾರು ಸಮಸ್ಯೆಗಳಿಗೆ ಕೃಷಿ ಉತ್ಪಾದನೆಯ ಹೆಚ್ಚಳವೇ ಬಹುಮಟ್ಟಿಗೆ ಪರಿಹಾರ ಒದಗಿಸಲು ಸಾಧ್ಯ. ಕೃಷಿ ಉತ್ಪಾದನೆಯ ಹೆಚ್ಚಳವು ಕೃಷಿ ಸಂಶೋಧನೆಗಳ ಫಲಿತಾಂಶಗಳನ್ನಳವಡಿಸುವಿಕೆಯನ್ನು ಅವಲಂಬಿಸಿದೆ. ಕಳೆದ ಒಂದು ದಶಕದಲ್ಲಿ ಕೃಷಿ ಸಂಶೋಧನೆಯು ನಾನಾ ಮುಖವಾಗಿ ಬೆಳೆದಿದೆ. ಅದರ ಪ್ರಯೋಜನವನ್ನು ಕೆಲವು ರೈತರು ಪಡೆದಿದ್ದಾರೆ. ಅವರಲ್ಲಿ ಕೆಲವರು ಹೆಚ್ಚಿನ ಪ್ರಗತಿಯನ್ನು ಸಾಧಿಸಿ ಜಾಗತಿಕ ಗರಿಷ್ಠ ಸಾಧನೆಯನ್ನು ನಾವೂ ಸಾಧಿಸಲು ಭರವಸೆಯ ದೃಷ್ಟಾಂತವೆನಿಸಿದ್ದಾರೆ. ಈ ಅಳವಡಿಕೆ ಹಾಗೂ ಸಾಧನೆಗಳು ಕೆಲವರ ಸ್ವತ್ತಾಗಿ ಉಳಿಯದೆ ಸಾರ್ವತ್ರಿಕವಾಗಬೇಕು. ಆಗ ರಾಷ್ಟ್ರದಲ್ಲಿ ನಿಜವಾದ ಕೃಷಿ ಪ್ರಗತಿ ಹಾಗೂ ಸಾಮಾಜಿಕ ಕಲ್ಯಾಣ ಮೂಡಿಬರುತ್ತದೆ. ಈ ಕಾರ್ಯಸಾಧನೆಯಲ್ಲಿ ಕೃಷಿ ವಿಜ್ಞಾನ ಸಾಹಿತ್ಯ ರಚನೆಯು ಮಹತ್ವದ ಅಂಶವಾಗಿದೆ. ಈ ದೃಷ್ಟಿಯಲ್ಲಿ ಕೃಷಿ ವಿಜ್ಞಾನ ಪುಸ್ತಕಗಳು ಪ್ರಾದೇಶಿಕ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಔಚಿತ್ಯಪೂರ್ಣವಾಗಿದೆ.

ಸ್ವಾತಂತ್ರ್ಯಾನಂತರದ ಅಭ್ಯುದಯದ ಹಲವಾರು ಯತ್ನಗಳಲ್ಲಿ ರಾಷ್ಟ್ರೀಯ ಭಾಷೆಗಳ ಅಭಿವೃದ್ಧಿಯೂ ಒಂದು. ಹಿಂದಿ ಭಾಷೆಯೊಂದಿಗೇನೇ ಇತರ ಎಲ್ಲ ಪ್ರಾದೇಶಿಕ ಭಾಷೆಗಳ ಬೆಳವಣಿಗೆ ನಡೆಯಬೇಕೆಂದು ಸಂಸತ್ತು ನಿರ್ಧರಿಸಿದೆ. ಹಲವಾರು ಭಾಷೆಗಳು ಒಳಕೆಯಲ್ಲಿರುವ ನಮ್ಮ ರಾಷ್ಟ್ರದಲ್ಲಿ ಎಲ್ಲ ಭಾಷೆಗಳೂ ಸಮತೂಕವಾಗಿ ಬೆಳೆದು ಬಂದಾಗಲೇ ರಾಷ್ಟ್ರದ ಸಮಗ್ರತೆ ಬೆಳೆದುಬರುತ್ತದೆ. ಈ ಭಾಷೆಗಳು ಸಾಕಷ್ಟು ಅಭಿವೃದ್ಧಿ ಹೊಂದಿದಾಗ ಶಿಕ್ಷಣ ಮಾಧ್ಯಮಗಳಾಗಲು ಸಮರ್ಥವಾಗುತ್ತವೆ. ನಾಡಿನ ಭಾಷೆಗಳೆಲ್ಲವನ್ನೂ ಶಿಕ್ಷಣ ಮಾಧ್ಯಮಗಳಾಗುವಂತೆ ಬಲಗೊಳಿಸುವ ಹೊಣೆ ವಿವಿಧ ವಿಶ್ವವಿದ್ಯಾನಿಲಯಗಳದ್ದು. ಅದಕ್ಕನುಗುಣವಾಗಿ ಪ್ರಾದೇಶಿಕ ಭಾಷೆಗಳು ಕೃಷಿ ಶಿಕ್ಷಣ ಮಾಧ್ಯಮಗಳಾಗುವಂತೆ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾದದ್ದು ಕೃಷಿ ವಿಶ್ವವಿದ್ಯಾನಿಲಯಗಳ ಕೆಲಸವಾಗಿದೆ. ನಮ್ಮ ಕೃಷಿ ವಿಶ್ವವಿದ್ಯಾನಿಲಯವು ಈ ಕಾರ್ಯಸಾಧನೆಗೋಸುಗ ಕನ್ನಡದಲ್ಲಿ ಕೃಷಿ ಸಾಹಿತ್ಯ ನಿರ್ಮಾಣ ಕೈಗೆತ್ತಿಕೊಂಡಿದೆ. ಇಷ್ಟು ದಿನ ಇಂಗ್ಲಿಷ್ ಭಾಷೆಯಲ್ಲಿಯೇ ಶಿಕ್ಷಣ ಪಡೆದು, ಬಳಿಕೆ ನಡೆಯಿಸಿದ ಶಿಕ್ಷಕ ಹಾಗೂ ವಿಜ್ಞಾನಿಗಳಿಗೆ ಒಮ್ಮೆಲೇ ಪ್ರಾದೇಶಿಕ ಭಾಷೆಗಳಲ್ಲಿ ಗ್ರಂಥರಚನೆ ಮಾಡುವುದು ಸುಲಭ ಕಾರ್ಯವೇನಲ್ಲ. ಇಂಥದರಲ್ಲಿ ಈ ಕೆಲಸ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭವಾದ ಅಲ್ಪಾವಧಿಯಲ್ಲಿ ಮುಕ್ಕಾಲು ಶತಕ್ಕಿಂತಲೂ ಹೆಚ್ಚು ಗ್ರಂಥಗಳು ಪ್ರಕಟಗೊಂಡು ಜನಪ್ರಿಯವಾದುದು ಅತ್ಯಂತ ಹೆಮ್ಮೆಯ ಸಾಧನೆ.

ಉಪಯುಕ್ತ ಸಂಶೋಧನಾಧಾರಿತ ಆಳ ಅಭ್ಯಾಸದ ಫಲವಾಗಿ ಸೃಷ್ಟಿಗೊಂಡ ಕೃಷಿ ವಿಜ್ಞಾನ ಗ್ರಂಥಗಳು ನಮ್ಮ ರಾಜ್ಯದ ಕೃಷಿ ವಿದ್ಯಾರ್ಥಿ ಹಾಗೂ ಕೃಷಿಕರಿಗೆ ಅಮೂಲ್ಯ ಕೊಡುಗೆಗಳಾಗುವುದರಲ್ಲಿ ಸಂದೇಹವಿಲ್ಲ. ಈ ಕಾರ್ಯ ಮಿಂಚಿನ ವೇಗ ದಿಂದ ನಡೆಯಲೆಂದು ನಾನು ಹಾರೈಸುತ್ತೇನೆ.

ಕೃಷಿ ವಿಶ್ವವಿದ್ಯಾನಿಲಯ,
ಬೆಂಗಳೂರು-560024

ಹ. ರಾ. ಅರಕೇರಿ
ಕುಲಪತಿಗಳು

ಸಂಪಾದಕರ ಮಾತು

ವಿವಿಧ ಬೇಸಾಯ ಪದ್ಧತಿಗಳಲ್ಲಿ ಸಹಕಾರಿ ಕೃಷಿಯು ಹಲವಾರು ವಿಧಗಳಲ್ಲಿ ಅನುಕರಣೀಯವಾಗಿದೆ. ಕೃಷಿ ಅರ್ಥಶಾಸ್ತ್ರಾಭ್ಯಾಸ ಕ್ರಮದಲ್ಲಿ ಇದು ಮಹತ್ವದ ಅಂಶವಾಗಿದೆ.

ಕ್ರಾಂತಿಕಾರ, ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಅಂಗಡಿಯವರು ಇದರ ಲೇಖಕರು. ಕ್ರಾಂತಿಕಾರಿ ಚಟುವಟಿಕೆಯಲ್ಲಿ ತೊಡಗಿದ್ದಕ್ಕಾಗಿ ದೀರ್ಘಕಾಲ ಕಾರಾಗೃಹವಾಸ ಅನುಭವಿಸಬೇಕಾದ ಸಂದರ್ಭದಲ್ಲಿ ವಿವಿಧ ದೇಶಗಳಲ್ಲಿನ ಕೃಷಿಯ ಅಭಿವೃದ್ಧಿಯ ಅಭ್ಯಾಸ ಮಾಡಿದರು. ಇಸ್ರೇಲ್ ಹಾಗೂ ರಶಿಯಾ ಮೊದಲಾದ ದೇಶಗಳ ಕೃಷಿ ಅಭಿವೃದ್ಧಿಯಿಂದ ಪ್ರಭಾವಿತರಾಗಿ ನಮ್ಮ ದೇಶದಲ್ಲಿಯೂ ಅದು ನಡೆಯಬೇಕೆಂಬ ಉತ್ಕಟ ಆಕಾಂಕ್ಷೆಗಳನ್ನು ಮೆಲುಕು ಹಾಕಿದರು. ಸ್ವಾತಂತ್ರ್ಯಾನಂತರ ಅವರ ಬಿಡುಗಡೆಯಾದಾಗ ಜೀವನ ಮಾರ್ಗಕ್ಕಾಗಿ ಹಲವಾರು ಮಾರ್ಗಗಳು ಎದುರಿನಲ್ಲಿದ್ದವಾದರೂ ಕೃಷಿರಂಗವನ್ನೇ ಆರಿಸಿಕೊಂಡು ಸ್ವತಃ ಒಂದು ಸಹಕಾರಿ ಬೇಸಾಯಸಂಘದ ಸಕ್ರಿಯ ಸದಸ್ಯರಾಗಿ ಸೇರಿ, ಸಹ ಸದಸ್ಯರಲ್ಲಿ ಸಹಕಾರೀ ಬೇಸಾಯದ ಬಗೆಗೆ ವಿಶ್ವಾಸ ಕುದುರಿಸಿದರು. ಜೊತೆಗೆ ಇನ್ನೂ ಮೂರು ಸಹಕಾರಿ ಬೇಸಾಯಸಂಘಗಳಿಗೆ ಚೇತನ ನೀಡಿದರು. ಕೃಷಿ ಬೇಸಾಯದ ಬಗೆಗೆ ಇವರಲ್ಲಿ ಹೊತ್ತಿದ ಪ್ರಜ್ಞೆಯ ಜ್ವಾಲೆಯನ್ನು ಗುರುತಿಸಿ ರಾಜ್ಯದ ಮೂಲೆ ಮೂಲೆಗಳಲ್ಲಿ ಸಹಕಾರಿ ಬೇಸಾಯ ವಿದ್ಯುತ್ ಸಂಚಾರಗೊಳ್ಳಲೆಂದು 1957ರಲ್ಲಿ ಇವರನ್ನು ಸರಕಾರವು ಸಹಕಾರಿ ಬೇಸಾಯದ ವಿಶೇಷ ಅಧಿಕಾರಿಯನ್ನಾಗಿ ನಿಯಮಿಸಿತು. ಅಂದಿನಿಂದ ಹದಿಮೂರು ವರ್ಷಕಾಲ 1970ರ ವರೆಗೆ, ಮನಮುಟ್ಟಿ ಮಡಿದು, ಬೇಸಾಯಗಾರರ ಹೃದಯ ತಟ್ಟಿ, ಸಹಕಾರಿ ಬೇಸಾಯ ಕರ್ನಾಟಕದಲ್ಲಿ ಭದ್ರವಾಗಿ ನೆಲೆಗೊಳ್ಳಲು ಶ್ರೀ ಅಂಗಡಿಯವರು ಶ್ರಮಿಸಿದರು. ಒಂದು ಮಾತಿನಲ್ಲಿ ಹೇಳುವುದಾದರೆ ಇದೊಂದು ಅನುಭಾವಿಯ ಒರೆಗಲ್ಲಿಗೆ ಹಚ್ಚಿದ ಅಪರಂಜಿ. ನಮ್ಮ ವಿಶ್ವವಿದ್ಯಾನಿಲಯದಲ್ಲಿ ಕೃಷಿಸಂಶೋಧನಾ ನಿರ್ದೇಶಕರೂ, ಅರ್ಥಶಾಸ್ತ್ರಜ್ಞರೂ, ಕೃಷಿಯಲ್ಲಿ ಅಪಾರ ಅನುಕಂಪ ಹೊಂದಿದವರೂ ಆಗಿ, ಸಧ್ಯ ನಿವೃತ್ತರಾಗಿರುವ ಡಾ। ಎನ್. ಪಿ. ಪಾಟೀಲರು ಇದರ ತಾಂತ್ರಿಕ ಪರಿಶೀಲನೆಗೈದಿದ್ದಾರೆ. ಈ ಪುಸ್ತಕದ ಕರಡೋದುವಿಕೆಯನ್ನು ಶ್ರೀ ಬಿ. ಐ. ದೇವರಮನಿ ಮಾಡಿದ್ದಾರೆ; ಹಸ್ತಪ್ರತಿಯನ್ನು ಅಚ್ಚಿಗೆ ಶ್ರೀಮತಿ ರಂಗಮಣಿ ಸಿದ್ಧಪಡಿಸಿದ್ದಾರೆ. ಡಬ್ಲ್ಯು. ಕ್ಯು. ಜಡ್ ಪ್ರೆಸ್ಸಿನವರು ಮುದ್ರಿಸಿ ಕೊಟ್ಟಿದ್ದಾರೆ. ಇವರೆಲ್ಲರಿಗೆ ಅನಂತ ವಂದನೆಗಳು.

ಈ ಪುಸ್ತಕವು ಕೃಷಿ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಹಾಗೂ ಬೇಸಾಯಶಾಸ್ತ್ರದ ಶಿಕ್ಷಕರಿಗೂ, ವಿದ್ಯಾರ್ಥಿಗಳಿಗೂ, ಸಹಕಾರಿಸಂಘಗಳ ಅಧಿಕಾರಿಗಳಿಗೂ, ಸಹಕಾರಿ ಬೇಸಾಯಸಂಘದ ಸಂಘಟನಕಾರರಿಗೂ ಹಾಗೂ ಸದಸ್ಯರಿಗೂ ಅತ್ಯುಪಯುಕ್ತವಾಗಿದೆ. ಅವರೆಲ್ಲರೂ ಇದರ ಪ್ರಯೋಜನ ಪಡೆಯುವರೆಂದು ಆಶಿಸಲಾಗಿದೆ.

ಜೇಷ್ಠ ಮಾಸ, ಕಾಳಯುಕ್ತಿ ಸಂವತ್ಸರ
ಶಾಲಿವಾಹನ ಶಕ 1899
ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು–560024

ವೀ. ಚೆ. ಹಿತ್ತಲಮನಿ
ಕನ್ನಡ ಪ್ರಾಧ್ಯಾಪಕರು
ಹಾಗೂ
ಕನ್ನಡ ಅಭಿವೃದ್ಧಿ ಸಮಿತಿ ಕಾರ್ಯದರ್ಶಿಗಳು

ಲೇಖಕರ ಮಾತು

ಭಾರತವು ಕೃಷಿಪ್ರಧಾನ ದೇಶ. ಕೃಷಿಯ ಸಾಮೂಹಿಕ ಸಮೃದ್ಧಿಯಾಗದೆ ದೇಶದ ಉನ್ನತಿಯು ಸಾಧಿಸದು. ಕೃಷಿ ಉತ್ಪತ್ತಿಯ ಹೆಚ್ಚಳದಿಂದಲೇ ದೇಶವು ಆಹಾರ ಹಾಗೂ ಇತರ ಕೃಷಿ ವಸ್ತುಗಳ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಬಲ್ಲದು ಕೃಷಿಯಲ್ಲಿ ಪ್ರಗತಿ ತಲೆದೋರಿದರೂ ಬಹುಸಂಖ್ಯಾತ ಬೇಸಾಯಗಾರರು ಕೃಷಿ ಸುಧಾರಣೆಗಳ ಪ್ರಯೋಜನಗಳನ್ನು ಪಡೆಯುವುದು ಸಾಧ್ಯವಾಗಿಲ್ಲ. ಆದ್ದರಿಂದ ದೇಶದ ಸರಾಸರಿ ಬೇಸಾಯದ ಉತ್ಪತ್ತಿಯು ಇನ್ನೂ ತೀರ ಕೆಳಮಟ್ಟದಲ್ಲಿಯೇ ಇದೆ. ಏಕೆಂದರೆ ಶೇಕಡಾ 60ರಷ್ಟಿರುವ ಚಿಕ್ಕ ಮತ್ತು ಬಡಬೇಸಾಯಗಾರರು ಇನ್ನೂ ಓಬೀರಾಯನ ಕಾಲದ ಕಟ್ಟಿಗೆಯ ರಂಟೆ. ಕುಂಟೆ ಮುಂತಾದ ಸಲಕರಣೆಗಳನ್ನೇ ಬಳಸುತ್ತಿದ್ದಾರೆ. ಅವರ ಬಳಿ ಸಾಕಷ್ಟು ಎತ್ತು. ಸಲಕರಣೆ. ಬಂಡವಲು ಇರದ್ದರಿಂದ ಅವರ ಬೇಸಾಯ ಹಿಂದುಳಿದ ಸ್ಥಿತಿಯಲ್ಲಿಯೇ ಇದೆ. ಚಿಕ್ಕಬೇಸಾಯಗಾರರ ಸಮೃದ್ಧಿ ಯೋಜನೆಗಳಿಗೂ ಸಹ ಬಡಬೇಸಾಯಗಾರರನ್ನು ಸಾಮೂಹಿಕವಾಗಿ ಹೆಚ್ಚು ಮುನ್ನಡೆಸಲು ಸಾಧ್ಯವಾಗಿಲ್ಲ. ಈ ಚಿಕ್ಕಬೇಸಾಯಗಾರರ ಹಿಡುವಳಿಗಳು ಅನಾರ್ಥಿಕವಾಗಿವೆ. ಪ್ರತಿ ಕುಟುಂಬಕ್ಕಿರುವ 45 ಎಕರೆ ಭೂಮಿಯು ಸಹ 4–6 ತುಂಡುಗಳಲ್ಲಿ ಹರಿದು ಹಂಚಿರುತ್ತದೆ. ಇಂಥ ತುಂಡು ಬೇಸಾಯದಲ್ಲಿ ಯಾವ ಯೋಜನೆಯಿಂದಲೂ ಅವರ ಬೇಸಾಯವನ್ನು ಸುಧಾರಿಸುವುದು ಅಸಾಧ್ಯ.

ಈ ಗ್ರಾಮಾಂತರ ಪರಿಸ್ಥಿತಿಗಳನ್ನು ಅನೇಕ ತಜ್ಞಸಮಿತಿಗಳು. ಮಹಾತ್ಮ ಗಾಂಧಿಯವರು. ದಿ| ಪ್ರಧಾನಿ ಜವಹರಲಾಲ್ ನೆಹರೂ ಅವರು ಮೊದಲಾದ ರಾಷ್ಟ್ರದ ನಾಯಕರು ಪರಿಶೀಲಿಸಿ, ಚಿಕ್ಕಬೇಸಾಯಗಾರಲ್ಲಿ ಬೇಸಾಯವನ್ನು ಸುಧಾರಿಸಿ, ಅವರ ಉತ್ಪತ್ತಿ. ಆದಾಯಗಳನ್ನು ಹೆಚ್ಚಿಸಿ. ಅವರ ಜೀವನ ಸ್ಥಿತಿಯನ್ನು ಸುಧಾರಿಸಲು ಹಾಗೂ ರಾಷ್ಟ್ರದ ಉನ್ನತಿಯನ್ನು ಸಾಧಿಸಲು ಸಹಕಾರಿ ಬೇಸಾಯವೊಂದೇ ಮಾರ್ಗವೆಂದು ಒತ್ತಿ ಶಿಫಾರಸು ಮಾಡಿದ್ದಾರೆ.

ಸಹಕಾರಿ ಬೇಸಾಯದ ಮಹತ್ವವನ್ನು ಲಕ್ಷಿಸಿಯೇ ತೃತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಈ ಕಾರ್ಯಕ್ರಮವನ್ನು ಸಮಸ್ತ ದೇಶದಲ್ಲಿ ಕಾರ್ಯರೂಪದಲ್ಲಿ ತರಲಾಯಿತು. ಬೇಸಾಯಗಾರರಲ್ಲಿ ಸಹಕಾರಿ ಬೇಸಾಯದ ಬಗ್ಗೆ ಸಾಕಷ್ಟು ತಿಳಿವಳಿಕೆಯನ್ನು ತುಂಬಿದಲ್ಲಿ, ತತ್ವನಿಷ್ಠ ಹಾಗೂ ದಕ್ಷ ಮುಂದಾಳುಗಳು ಅವುಗಳ ಸಂಚಾಲನ ಮಾಡಿದ ಹಾಗೂ ಅಗತ್ಯ ಸಾಲ ಸಹಾಯ. ಸವಲತ್ತುಗಳು ಬೇಸಾಯ ಸಂಘಗಳಿಗೆ ದೊರೆತೆಡೆಗಳಲ್ಲಿ ಹಲವಾರು ಬೇಸಾಯಸಂಘಗಳು ಉತ್ಪತ್ತಿಯಲ್ಲಿ ಅದ್ಭುತ ಪ್ರಗತಿಯನ್ನು ಸಾಧಿಸಿವೆ. ಆದರೆ ಬಹುಸಂಖ್ಯಾತ ಬೇಸಾಯಸಂಘಗಳಿಗೆ ಇಂಥ ಮಾರ್ಗದರ್ಶನ, ಮುಂದಾಳುತನ. ಸವಲತ್ತುಗಳು ದೊರಕದ್ದರಿಂದ ಅವುಗಳ ಪ್ರಗತಿಯು ಕುಂಠಿತವಾಗಿದೆ.

ಸಹಕಾರಿ ಬೇಸಾಯಸಂಘಗಳ ಸದಸ್ಯರಲ್ಲಿ ದೇಶದ ಸಂಸ್ಥೆಗಳಲ್ಲಿ. ನಾಯಕರಲ್ಲಿ. ಕಾರ್ಯಕರ್ತರಲ್ಲಿ ಸಹಕಾರಿ ಬೇಸಾಯದ ಮಹತ್ವ, ತತ್ವವಿಧಾನಗಳ ಬಗ್ಗೆ ಹೆಚ್ಚಿನ ತಿಳಿವಳಿಕೆ ಹಾಗೂ ನಿಷ್ಠೆ ಬೆಳೆಯಬೇಕಾಗಿದೆ. ದೇಶದ ಎಲ್ಲೆಡೆಗಳಲ್ಲಿನಂತೆ ಕರ್ನಾಟಕದಲ್ಲೂ ಹೊಸ ಭೂ ಸುಧಾರಣೆಯ ಕಾನೂನು ಪ್ರಾಮಾಣಿಕವಾಗಿ ಮತ್ತು ಯಶಸ್ವಿಯಾಗಿ ಅನುಷ್ಠಾನಕ್ಕೆ ಬಂದು. ಬಡಬೇಸಾಯಗಾರರ ಉನ್ನತಿಯಾಗಬೇಕಾದರೆ ಮತ್ತು ದೇಶವು ಸಮಾಜವಾದದತ್ತ ತೀವ್ರಗತಿಯಿಂದ ಮುನ್ನಡೆಯಬೇಕಾದರೆ ಸಹಕಾರಿ ಬೇಸಾಯದ ಕಾರ್ಯಕ್ರಮವು ಯಶಸ್ವಿಯಾಗುವುದು ಅಗತ್ಯ. ಆದಾಗದಿದ್ದರೆ ಭೂ ಸುಧಾರಣೆಯ ಕಾನೂನು ಸಹ ವಿಫಲವಾಗಿ ಬಡಬೇಸಾಯಗಾರರು ಶ್ರೀಮಂತ ಬೇಸಾಯಗಾರರ ಶೋಷಣೆಯಿಂದ ಹೆಚ್ಚು ಕಂಗಾಲತನದಲ್ಲಿ ಮುಳುಗುತ್ತಾರೆ. ಗಾಡಗೀಳ ಸಮಿತಿಯ ಮಹತ್ವದ ಶಿಫಾರಸಿನ ಪ್ರಕಾರ ಸಹಕಾರಿಬೇಸಾಯದ ಇನ್ನೂ ಹೆಚ್ಚಿನ ಪ್ರಚಾರದಿಂದ ಬೇಸಾಯಗಾರ ಜನತೆಯಲ್ಲಿ ಅದರ ಬಗ್ಗೆ ಜಾಗೃತಿಯನ್ನು ಹೆಚ್ಚಿಸಬೇಕಾಗಿದೆ. ಅದಕ್ಕೋಸುಗ ಜನನಾಯಕರು, ಜನಸಂಸ್ಥೆಗಳು ನಿಷ್ಠೆಯಿಂದ ಪ್ರಯತ್ನಿಸಬೇಕು. ಜನನಾಯಕರಲ್ಲಿ. ಜನಸಂಸ್ಥೆಗಳಲ್ಲಿ. ಅಧಿಕಾರಿಗಳಲ್ಲಿ. ಕಾರ್ಯಕರ್ತರಲ್ಲಿ ಸಹಕಾರಿ ಬೇಸಾಯದ ನಿಷ್ಠೆ ಬೆಳೆಸಲು ಸಹಕಾರಿ ಬೇಸಾಯದ ಬಗ್ಗೆ ಪ್ರಭಾವಶಾಲಿ ಸಾಹಿತ್ಯವು ಹರಡಬೇಕು. ಈ ಮಹತ್ವದ ಕಾರ್ಯದಲ್ಲಿ ಕೃಷಿವಿಶ್ವವಿದ್ಯಾನಿಲಯ ಹಾಗೂ ಸಂಶೋಧನೆ ಸಂಸ್ಥೆಗಳು ಸಕ್ರಿಯವಾಗಿ ಆಸ್ಥೆವಹಿಸಬೇಕೆಂದು ಸಹಕಾರಿ ಬೇಸಾಯದ ಕಾರ್ಯನಿರತ ಸಮಿತಿಯು ಮತ್ತು ಸಹಕಾರಿ ಬೇಸಾಯದ ನಿರ್ದೇಶಕ ಸಮಿತಿಯು ಬಲವಾಗಿ ಶಿಫಾರಸು ಮಾಡಿವೆ. ಸಮಾಜವಾದಿ ದೇಶಗಳಲ್ಲಿ ಕೃಷಿತಜ್ಞರೆಲ್ಲರೂ. ಕೃಷಿ ವಿದ್ಯಾಸಂಸ್ಥೆಗಳೂ. ಕೃಷಿಸಂಶೋಧನ ಸಂಸ್ಥೆಗಳೂ ತತ್ವನಿಷ್ಠ ಉತ್ಸಾಹದಿಂದ ಸಹಕಾರಿ ಬೇಸಾಯವನ್ನು ಯಶಸ್ವಿಗೊಳಿಸುವಲ್ಲಿ ಪ್ರಮುಖ ಪಾಲುಗೊಂಡಿದ್ದರಿಂದಲೇ ಅಲ್ಲಿ ಸಹಕಾರಿ ಬೇಸಾಯವು ಯಶಸ್ವಿಯಾಗಿ ಹಬ್ಬಿತು. ಭಾರತದಲ್ಲೂ ತರುಣ ಕೃಷಿ ಪದವೀಧರರಲ್ಲಿ. ಸಹಕಾರಿ ಬೇಸಾಯದಲ್ಲಿ ಇಂಥ ನಿಷ್ಠೆ, ಉತ್ಸಾಹಗಳೂ. ಅದರ ತತ್ವವಿಧಾನಗಳ ಬಗ್ಗೆ ಜ್ಞಾನವೂ ಬೆಳೆಯುವುದಗತ್ಯ. ಕೃಷಿ ವಿಶ್ವವಿದ್ಯಾನಿಲಯವು ಈ ದಿಶೆಯಲ್ಲಿ ಪ್ರಕಟಿಸುತ್ತಿರುವ ಈ ಗ್ರಂಥವು ಮಹತ್ವಪೂರ್ಣವಾಗಿದೆ.

ಈ ಗ್ರಂಥದಲ್ಲಿ ಪ್ರಾರಂಭದ 6 ಅಧ್ಯಾಯಗಳಲ್ಲಿ ದೇಶದ ಆರ್ಥಿಕ ಹಾಗೂ ಬೇಸಾಯದ ಪರಿಸ್ಥಿತಿಗಳನ್ನು ಕೂಲಂಕಷವಾಗಿ ವಿವೇಚಿಸಿ ಸಹಕಾರಿ ಬೇಸಾಯದ ರಾಷ್ಟ್ರೀಯ ಹಾಗೂ ಆರ್ಥಿಕ ಮಹತ್ವವನ್ನು ತಿಳಿಸಲಾಗಿದೆ ಮತ್ತು ಸಹಕಾರಿ ಬೇಸಾಯದ ಬಗ್ಗೆ ರಾಷ್ಟ್ರೀಯ ಧೋರಣೆಯ ವಿಕಾಸವನ್ನು ವಿವರಿಸಲಾಗಿದೆ. ಸಹಕಾರಿ ಬೇಸಾಯದ ವಿರುದ್ಧ ಇರುವ ಆಕ್ಷೇಪಗಳನ್ನು ವಿಶ್ಲೇಷಿಸಿ. ಅವುಗಳ ನಿರರ್ಥಕತೆಯನ್ನು ತೋರಿಸಿ ಸಹಕಾರಿ ಬೇಸಾಯದ ಪ್ರಯೋಜನಗಳನ್ನು ಮಂಡಿಸಲಾಗಿದೆ. ಸಹಕಾರಿ ಬೇಸಾಯದ ಮಂದಗತಿಗೆ ಕಾರಣಗಳನ್ನು ವಿಶ್ಲೇಷಿಸಿ ಪ್ರಗತಿಯನ್ನು ತೀವ್ರಗೊಳಿಸುವ ಮತ್ತು ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುವ ಉಪಾಯಗಳನ್ನು. ಸಹಕಾರಿ ಬೇಸಾಯದ ಕಾರ್ಯಕ್ರಮದ ಅಧ್ಯಯನಕ್ಕಾಗಿ ಮತ್ತು ಸಲಹೆ, ಶಿಫಾರಸುಗಳನ್ನು ಕೊಡುವುದಕ್ಕಾಗಿ ಸ್ವಾತಂತ್ರ್ಯದ ನಂತರ ಭಾರತ ಸರಕಾರವು ನೇಮಿಸಿದ ಮಹತ್ವದ

ತಜ್ಞರ ಸಮಿತಿಗಳ ಹಾಗೂ ಶಿಷ್ಟಮಂಡಲಗಳ ವರದಿಗಳು ಹಾಗೂ ಅವುಗಳ ಶಿಫಾರಸು ಗಳಿವೆ. ಏಳರಿಂದ ಹನ್ನೆರಡರವರೆಗಿನ ಅಧ್ಯಾಯಗಳಲ್ಲಿ ಸಹಕಾರಿ ಬೇಸಾಯಸಂಘಗಳ ತತ್ವ, ವಿಧಾನ, ಸಂಘಟನ, ಸಂಚಾಲನ, ಲೆಕ್ಕಪತ್ರ ಮುಂತಾದ ವ್ಯಾವಹಾರಿಕ ವಿಷಯಗಳ ಕೂಲಂಕಷವಾದ ಚರ್ಚೆ ಇದೆ. ರಾಷ್ಟ್ರೀಯ ಧೋರಣೆಯ ಹಿನ್ನೆಲೆಯಲ್ಲಿ ಅಧ್ಯಯನ ಹಾಗೂ ಅನುಭವಗಳ ಆಧಾರದ ಮೇಲೆ ಈ ವಿಷಯಗಳನ್ನು ವಿವರಿಸಲಾಗಿದೆ. ಸಹಕಾರಿ ಬೇಸಾಯದ ಕಾರ್ಯಕ್ಷೇತ್ರದಲ್ಲಿ ಪ್ರತ್ಯಕ್ಷವಾಗಿ ತೊಡಗಿದವರಿಗೆ ಈ ವಿವೇಚನೆ ಗಳು ಸಹಾಯಕವಾಗಬಲ್ಲವು. ಸಹಕಾರಿ ಬೇಸಾಯದ ಪ್ರಗತಿ, ಮುಖ್ಯವಾಗಿ ಕರ್ನಾಟಕದಲ್ಲಿ ಆದ ಪ್ರಗತಿ, ಸಾಮಾಜಿಕ ಹಾಗೂ ಆರ್ಥಿಕ ಉನ್ನತಿಯ ಹಿನ್ನೆಲೆಯಲ್ಲಿ ಸಮೀಕ್ಷಣೆಗೊಂಡಿದೆ.

ವಿಶ್ವದ ಹಲವು ರಾಷ್ಟ್ರಗಳು, ರಶಿಯ, ಚೀನ, ಇಸ್ರೇಲ್ ದೇಶಗಳು ಸಹಕಾರಿ ಕೃಷಿಯಲ್ಲಿ ಬಹು ಮುಂದುವರೆದಿವೆ. ದೇಶಗಳಲ್ಲಿ ನಡೆದ ಸಹಕಾರಿ ಬೇಸಾಯದ ಅನುಭವಗಳು ನಮಗೂ ಅನುಕರಣೀಯವಾಗಿವೆ. 13ನೇ ಅಧ್ಯಾಯದಲ್ಲಿ ಇವುಗಳ ವಿವರಗಳಿವೆ.

ಈ ಗ್ರಂಥವನ್ನು ಬರೆದುಕೊಡಲು ಸ್ಫೂರ್ತಿಕೊಟ್ಟದ್ದಕ್ಕಾಗಿ, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಪ್ರಾಧ್ಯಾಪಕರಾದ ಶ್ರೀ ವಿ. ಸಿ. ಹಿತ್ತಲಮನಿ ಯವರಿಗೆ ನಾನು ಚಿರಋಣಿ. ಅದೇ ವಿದ್ಯಾನಿಲಯದ ಕೃಷಿ ಸಂಶೋಧನೆಯ ಡೈರೆಕ್ಟರರಾದ ಡಾ। ಎನ್. ಪಿ. ಪಾಟೀಲರು ಸುಮಾರು ವರ್ಷಗಳಿಂದ ಕರ್ನಾಟಕದಲ್ಲಿ ಸಹಕಾರಿ ಬೇಸಾಯವನ್ನು ಹಬ್ಬಿಸುವ ಕಾರ್ಯದಲ್ಲಿ ನನಗೆ ಸ್ಫೂರ್ತಿ ಹಾಗೂ ಮಾರ್ಗದರ್ಶನ ಕೊಡುತ್ತ ಬಂದಿದ್ದು ಪ್ರಸ್ತುತ ಗ್ರಂಥವನ್ನು ಸಮರ್ಪಕವಾಗಿ ಬರೆಯುವಲ್ಲಿ ನಿರ್ದಿಷ್ಟ ಮಾರ್ಗದರ್ಶನ ಮಾಡಿದ್ದಾರೆ. ಅವರ ಉಪಕಾರವನ್ನು ನಾನು ಅಂತಃಕರಣಪೂರ್ವಕವಾಗಿ ಸ್ಮರಿಸುವೆ.

ಕೃಷಿ ಅಧ್ಯಯನದಲ್ಲಿ ಹಾಗೂ ಕೃಷಿ ವಿಕಾಸದಲ್ಲಿ ತೊಡಗಿರುವ ತರುಣ ರಾಷ್ಟ್ರ ನಿರ್ಮಾಪಕರಿಗೆ ಸಹಕಾರಿ ಬೇಸಾಯವನ್ನು ಹಬ್ಬಿಸಿ ಕೃಷಿಸಮೃದ್ಧಿಯನ್ನು ಸಾಧಿಸು ವಲ್ಲಿ ಕೆಲಮಟ್ಟಿಗಾದರೂ ಈ ಪುಸ್ತಕದಿಂದ ಸ್ಫೂರ್ತಿ ಮತ್ತು ಮಾರ್ಗದರ್ಶನ ದೊರೆತರೆ ನನ್ನ ಚಿಕ್ಕ ಪ್ರಯಾಸವು ಸಾರ್ಥಕವಾದಂತೆ. ಅಷ್ಟಾದರೂ ದೇಶದ ಅಭಿವೃದ್ಧಿಗೆ ನನ್ನ ಅಳಿಲಭಕ್ತಿಯ ಮಳಲಸೇವೆ ಸಲ್ಲಲೆಂದು ನನ್ನ ಹಾರೈಕೆ.

ವಿ. ಗು. ಅಂಗಡಿ

ಪರಿವಿಡಿ

ಸಹಕಾರಿ ಬೇಸಾಯ

ಅಧ್ಯಾಯ 1

ಭಾರತದಲ್ಲಿ ಬೇಸಾಯದ ಸ್ಥಿತಿ ಹಾಗೂ ಸಹಕಾರಿ ಬೇಸಾಯದ ಮಹತ್ವ

ಆಹಾರ ಸ್ವಾವಲಂಬನೆಗೆ ಬೇಸಾಯದ ಮಹತ್ವ

ಭಾರತದಲ್ಲಿ ಶೇಕಡಾ 82.66ರಷ್ಟು ಜನರು 5.5000 ಗ್ರಾಮಗಳಲ್ಲಿ ವಾಸಿಸುತ್ತಾರೆ. ಅವರೆಲ್ಲರೂ ಮುಖ್ಯವಾಗಿ ವ್ಯವಸಾಯದ ಮೇಲೆಯೇ ತಮ್ಮ ಉಪಜೀವನವನ್ನು ಸಾಗಿಸಲು ಅವಲಂಬಿಸುತ್ತಾರೆ. ಶೇಕಡಾ 70ರಷ್ಟು ಜನರು ನೇರವಾಗಿ ಬೇಸಾಯದಲ್ಲಿಯೇ ತೊಡಗಿರುತ್ತಾರೆ. ಅವರಲ್ಲಿ ಭೂಮಾಲಿಕರು, ರೈತಸಾಗುವಳಿದಾರರು, ಬೇಸಾಯದ ಕೂಲಿಗಾರರು ಎಲ್ಲರೂ ಸೇರಿರುತ್ತಾರೆ.

ಭಾರತದಲ್ಲಿ ಪ್ರತಿವರ್ಷ ಶೇಕಡಾ 2ರಷ್ಟು ಜನಸಂಖ್ಯೆಯ ವೃದ್ಧಿಯು ಆಗುತ್ತಿದೆ. ಅದು 1951ರಲ್ಲಿ 36 ಕೋಟಿ ಇದ್ದದ್ದು 1976ರಲ್ಲಿ ಸುಮಾರು 61 ಕೋಟಿಗೆ ಏರಿತು. ಬೇಸಾಯದಿಂದಲೇ ಜನರಿಗೆ ಆಹಾರವು ದೊರೆಯುತ್ತದೆ. ಜಗತ್ತಿನ ಜನಸಂಖ್ಯೆಯ ಶೇಕಡಾ 14.2ರಷ್ಟು ಜನಸಂಖ್ಯೆ ಭಾರತದಲ್ಲಿದೆ. ಆದರೆ ಭಾರತದ ಆಹಾರೋತ್ಪತ್ತಿಯು ಜಗತ್ತಿನ ಆಹಾರೋತ್ಪತ್ತಿಯ ಹತ್ತರಲ್ಲಿ ಒಂದು ಅಂಶ ಮಾತ್ರ. ಹೀಗಾಗಿ ನಮ್ಮ ಆಹಾರದ ಕೊರತೆಯನ್ನು ನೀಗಿಸಲು ಪ್ರತಿವರ್ಷ ಪರದೇಶಗಳಿಂದ ಆಹಾರ ಧಾನ್ಯಗ' ಆಯಾತ ಮಾಡಬೇಕಾಗುತ್ತದೆ. ಸ್ವಾತಂತ್ರ್ಯಪ್ರಾಪ್ತಿಯ ನಂತರದ ವರ್ಷಗಳಲ್ಲಿ ಹಲವಾರು ಕೋಟಿ ರೂಪಾಯಿ ಆಹಾರಧಾನ್ಯಗಳ ಆಯಾತವನ್ನು ಮಾಡಬೇಕಾಯಿತು. ಅಲ್ಲದೆ ಕೆಳಗಿನ ವರ್ಗದ ಬಡಜನತೆಗೆ ಅಗ್ಗದ ಧಾರಣೆಯಿಂದ ಆಯಾತ ಮಾಡಿದ ಆಹಾರಧಾನ್ಯಗಳನ್ನು ಪೂರೈಸಲು ಸರಕಾರವು ಈ ಅವಧಿಯಲ್ಲಿ ಕೋಟ್ಯಾಂತರ ರೂಪಾಯಿಗಳ ಸಹಾಯಧನವನ್ನು ವೆಚ್ಚಮಾಡಬೇಕಾಯಿತು. 1965ನೇ ವರ್ಷ ಒಂದರಲ್ಲಿಯೇ 390.3 ಕೋಟಿ ರೂಪಾಯಿ ಬೆಲೆಯ 75 ಲಕ್ಷ ಟನ್ನು ಆಹಾರಧಾನ್ಯಗಳನ್ನು ಆಮದು ಮಾಡಲಾಯಿತು.

ಆಹಾರಕ್ಕಾಗಿ ನಿರಂತರವಾಗಿ ಪರದೇಶಗಳನ್ನು ಅವಲಂಬಿಸುವುದು ಹಿತಕರವಲ್ಲ. ಗತ ಮಹಾಯುದ್ಧದಲ್ಲಿ ಒಂದೇ ಒಂದು ವರ್ಷ ಬರ್ಮಾದಿಂದ ಬರುತ್ತಿದ್ದ ಅಕ್ಕಿಯು ನಿಂತದ್ದರಿಂದ 1945ರಲ್ಲಿ ಬಂಗಾಲದಲ್ಲಿ ಭೀಕರವಾದ ಬರಗಾಲವು ಬಂತು. ಅದರಲ್ಲಿ ಸುಮಾರು 35 ಲಕ್ಷ ಜನ ನಮ್ಮ ದೇಶವಾಸಿಗಳು ಸತ್ತು, ಹಾದಿ ಹಾದಿಯಲ್ಲಿ ಹೆಣಗಳ ರಾಶಿಗಳು ಬಿದ್ದವು. ನಮ್ಮ ಅಸಹಾಯ ಸೋದರಿಯರು ಒಂದು ತುತ್ತು ಅನ್ನಕ್ಕಾಗಿ ತಮ್ಮ ಶೀಲವನ್ನು, ತಮ್ಮ ಕರುಳಿನ ಕಂದಮ್ಮಗಳನ್ನು ಸಹ ಮಾರಿಕೊಂಡ

ದಾರುಣ ಕತೆಗಳನ್ನು ಕೇಳುವ ಪ್ರಸಂಗ ಒದಗಿತು. 1973ರಲ್ಲಿ ಸ್ವತಂತ್ರ ಭಾರತದಲ್ಲಿ ಸಹ ಒಂದೇ ವರ್ಷದ ಮಳೆಯ ಕೊರತೆಯಿಂದ ದೇಶದ ತುಂಬ ಭೀಕರ ಬರಗಾಲವು ಬಂತು. ಬಂಗಾಲದ ಬರದಂತೆ ಹಾದಿಯಲ್ಲಿ ಹೆಣದ ರಾಶಿಗಳನ್ನು ಸರಕಾರವು ಬೀಳ ಗೊಡದಿದ್ದರೂ ಈ ಅಕಾಲದಲ್ಲಿ ಅನ್ನ, ನೀರು ಇಲ್ಲದೆ ಕಂಗಾಲತನದಿಂದ ಲಕ್ಷಗಟ್ಲೆ ಜನರು ಮತ್ತು ಮೇವು ನೀರು ಇಲ್ಲದೆ ಲಕ್ಷಗಟ್ಲೆ ದನಕರುಗಳು ಸತ್ತ ಹೃದಯ ವಿದ್ರಾವಕ ದೃಶ್ಯಗಳು ಕಂಡವು. ಈ ಕೆಲವು ಉದಾಹರಣೆಗಳು ಬೇಸಾಯದ ಉತ್ಪತ್ತಿ ಯನ್ನು ಹೆಚ್ಚಿಸಿ ಆಹಾರೋತ್ಪನ್ನವನ್ನು ಹೆಚ್ಚಿಸುವ ಮಹತ್ವವನ್ನು ಬಿಂಬಿಸುತ್ತವೆ.

ಉದ್ಯೋಗದ ಉನ್ನತಿಗೆ ಬೇಸಾಯದ ಮಹತ್ವ

ಬೇರೆ ದೇಶಗಳಂತೆ ಔದ್ಯೋಗಿಕ ಉನ್ನತಿಯಿಂದಲೇ ಭಾರತದ ಸರ್ವಾಂಗೀಣ ಉನ್ನತಿಯು ಸಾಧ್ಯ. ಉದ್ಯೋಗದ ಉನ್ನತಿಗೋಸುಗ ಹೇರಳವಾಗಿ ಬಂಡವಲು, ಕಚ್ಚಾಮಾಲು ಹಾಗೂ ಮಾಲಿನ ಮಾರಾಟಕ್ಕೆ ಬೆಳೆಯುತ್ತಿರುವ ಮಾರುಕಟ್ಟೆ ಅಗತ್ಯ. ಔದ್ಯೋಗಿಕ ಉನ್ನತಿಗಾಗಿ ವ್ಯಕ್ತಿಸ್ವಾತಂತ್ರ್ಯ, ಪ್ರಜಾತಂತ್ರಗಳನ್ನು ಆದರ್ಶಗಳೆಂಬ ಭಾವನೆಯಿಂದ ಇಂಗ್ಲಂಡ್, ಅಮೆರಿಕ ಮೊದಲಾದ ಪಾಶ್ಚಿಮಾತ್ಯ ದೇಶಗಳ ಹಾಗೂ ಜಪಾನಿನ ಅನುಕರಣ ಮಾಡಬೇಕೆಂದು ಒಂದು ವಾದವಿದೆ. ಆದರೆ ಆ ದೇಶಗಳ ಐತಿಹಾಸಿಕ ಪರಿಸ್ಥಿತಿಗಳು ಭಾರತಕ್ಕಿಲ್ಲ. ಈ ದೇಶಗಳು ಪ್ರಾದೇಶಿಕ ಅಥವಾ ಆರ್ಥಿಕ ಉಪನಿವೇಶಗಳನ್ನು ಜಯಿಸಿ ಒಂದಿಲ್ಲೊಂದು ರೀತಿಯಿಂದ ಔಪನಿವೇಶಿಕ ದೇಶಗಳ ಶೋಷಣೆಯಿಂದ ತಮ್ಮ ಔದ್ಯೋಗಿಕ ಉನ್ನತಿಗೆ ಅಗತ್ಯವಾದ ಬಂಡವಲು, ಕಚ್ಚಾಮಾಲು ಮತ್ತು ಮಾರುಕಟ್ಟೆಗಳನ್ನು ದೊರಕಿಸಿಕೊಂಡವು. ಬೇರೆ ದೇಶಗಳ ಶೋಷಣೆಯು ಭಾರತಕ್ಕೆ ಬೇಕಿಲ್ಲ. ಜಗತ್ತಿನ ಪರಿವರ್ತಿತ ಪರಿಸ್ಥಿತಿಗಳಲ್ಲಿ ಅದು ಸಾಧ್ಯವೂ ಇಲ್ಲ.

ಬೇರೆ ದೇಶಗಳಿಂದ ಹೇರಳವಾಗಿ ಸಾಲಗಳನ್ನು ಪಡೆದು ತೀವ್ರವಾಗಿ ಔದ್ಯೋಗೀ ಕರಣವನ್ನು ಸಾಧಿಸುವುದು ರಾಷ್ಟ್ರದ ಹಿತದೃಷ್ಟಿಯಿಂದ ಅಷ್ಟೊಂದು ಸೂಕ್ತ ಧೋರಣೆ ಯಲ್ಲ. ಇಂಥ ಪರಾವಲಂಬನದಿಂದ ರಾಷ್ಟ್ರದ ಸ್ವಾವಲಂಬನ, ಸ್ವಾತಂತ್ರ್ಯಗಳು ಗಂಡಾಂತರದಲ್ಲಿ ಬೀಳುವ ಸಂಭವವುಂಟು. ಆದ್ದರಿಂದ ರಾಷ್ಟ್ರದ ಸ್ವಂತ ಸಾಧನೆ ಗಳಿಂದಲೇ ತೀವ್ರ ಔದ್ಯೋಗೀಕರಣವನ್ನು ಸಾಧಿಸುವುದು ಒಳ್ಳೆಯದು.

ಬೇಸಾಯವು ದೇಶದ ಎಲ್ಲಕ್ಕೂ ಪ್ರಮುಖ ಉದ್ಯೋಗ. ಅದರಿಂದಲೇ ರಾಷ್ಟ್ರದ ಶೇಕಡಾ 50ರಷ್ಟು ಆದಾಯವು ದೊರಕುತ್ತದೆ. ಬೇಸಾಯದ ಉತ್ಪತ್ತಿಯನ್ನು ತೀವ್ರ ವಾಗಿ ಹೆಚ್ಚಿಸಿ, ಈ ಆದಾಯವನ್ನು ಹೆಚ್ಚಿಸುವುದು ಸಾಧ್ಯವಿದೆ ಮತ್ತು ಇದರಿಂದ ಔದ್ಯೋಗೀಕರಣಕ್ಕೆ ಅಗತ್ಯವಿದ್ದ ಬಂಡವಾಳ ದೊರಕಬಲ್ಲದು. ಔದ್ಯೋಗೀಕರಣಕ್ಕೆ ಅಗತ್ಯವಿದ್ದ ಎಲ್ಲ ಕಚ್ಚಾಸರಕುಗಳನ್ನು ಸಹ ಬೇಸಾಯದ ಉತ್ಪತ್ತಿಯ ಪ್ರಗತಿಯಿಂದ ದೊರಕಿಸಲು ಸಾಧ್ಯವಾಗುವುದು. ಬೇಸಾಯದ ಉತ್ಪತ್ತಿಯ ಹೆಚ್ಚಳದಿಂದ ದೇಶದ ಬಹುಸಂಖ್ಯಾತ ನಾಗರಿಕರಾದ ಬೇಸಾಯಗಾರರ ಆದಾಯ ಹಾಗೂ ಕ್ರಿಯಾಶಕ್ತಿ

ಹೆಚ್ಚಿ ಹೊಸ ಉದ್ಯೋಗಗಳಲ್ಲಿ ಉತ್ಪತ್ತಿಯಾದ ಔದ್ಯೋಗಿಕ ಸರಕುಗಳಿಗೆ ದೇಶದೊಳಗೆ ವಿಸ್ತರಿಸುವ ಮಾರುಕಟ್ಟೆಯು ದೊರಕುವುದು. ಉದ್ಯೋಗಗಳ ಬೆಳವಣಿಗೆಯಿಂದ ಬೇಸಾಯದ ಶಾಸ್ತ್ರೀಯ ಪ್ರಗತಿಯನ್ನು ಹೆಚ್ಚೆಚ್ಚು ಸಾಧಿಸಲು ಬೇಸಾಯದ ಯಂತ್ರಗಳು, ರಾಸಾಯನಿಕ ಗೊಬ್ಬರಗಳು, ಔಷಧಿಗಳು ಹೆಚ್ಚೆಚ್ಚು ದೊರಕುವುವು. ಹೀಗೆ ಬೇಸಾಯದ ಪ್ರಗತಿಯಿಂದ ಸರ್ವಾಂಗೀಣ ಉನ್ನತಿಯು ಸಾಧಿಸುವುದು. ಅಂತೆಯೇ ಓರ್ವ ವಿಖ್ಯಾತ ಅರ್ಥಶಾಸ್ತ್ರಜ್ಞರು 'ಉನ್ನತ ಕೃಷಿ ಇದ್ದ ದೇಶವೇ ಉನ್ನತ ಔದ್ಯೋಗಿಕ ದೇಶವೆಂದು ನನ್ನ ವ್ಯಾಖ್ಯೆ' ಎಂದು ಹೇಳಿದ್ದಾರೆ. ಯಾವುದೇ ದೇಶದ ಅಂಧಾನುಕರಣ ಮಾಡದಿದ್ದರೂ ಆಂತರಿಕ ಸಾಧನಗಳಿಂದಲೇ ಔದ್ಯೋಗಿಕ ಉನ್ನತಿಯನ್ನು ಮತ್ತು ಕೃಷಿಯ ಉನ್ನತಿಯನ್ನು ಸಾಧಿಸಲು ಸಮಾಜವಾದಿ ದೇಶಗಳಿಂದ ಭಾರತವು ಉಪಯುಕ್ತ ಪಾಠವನ್ನು ಕಲಿಯಬಹುದು.

ಔದ್ಯೋಗಿಕ ಉನ್ನತಿಗೆ ಕೇವಲ ಕಚ್ಚಾಮಾಲು, ಬಂಡವಲು ಅಷ್ಟೇ ಬೇಕಾಗುವುದಿಲ್ಲ. ಉದ್ಯೋಗಗಳಲ್ಲಿ ಹೆಚ್ಚೆಚ್ಚು ತೊಡಗುವ ಜನರಿಗೆ ಹೆಚ್ಚೆಚ್ಚು ಆಹಾರಧಾನ್ಯಗಳು ಬೇಕಾಗುತ್ತವೆ. ತಾವೇ ಉಪವಾಸ ಬೀಳುವ ಅಥವಾ ಒಪ್ಪತ್ತು ಉಣ್ಣುವ ಬೇಸಾಯಗಾರರು ಔದ್ಯೋಗಿಕ ಜನತೆಗೆ ಅಗತ್ಯವಿದ್ದ ಹೆಚ್ಚೆಚ್ಚು ಆಹಾರಧಾನ್ಯಗಳನ್ನು ಒದಗಿಸಲಾರರು; ಬೇಸಾಯದ ಆದಾಯದಲ್ಲಿ ಉಳಿತಾಯಮಾಡಿ ಉದ್ಯೋಗಗಳಿಗೆ ಬಂಡವಲನ್ನು ಒದಗಿಸುವುದಂತೂ ದೂರದ ಮಾತು. ಬೇಸಾಯದ ಉತ್ಪತ್ತಿಯು ಸಾಕಷ್ಟು ಹೆಚ್ಚದಿದ್ದಲ್ಲಿ ಪೇಟೆಯ ಮುಖಾಂತರ ಬೇಸಾಯದ ಸರಕುಗಳನ್ನು ಮುಖ್ಯವಾಗಿ ಆಹಾರಧಾನ್ಯಗಳನ್ನು ದೊರಕಿಸಲು ಯಾವುದೇ ರೀತಿಯಿಂದ ಪ್ರಯತ್ನಿಸಿದರೂ ಧಾರಣೆಗಳು ವೇಗದಿಂದ ಹೆಚ್ಚುತ್ತವೆ: ಹಣದುಬ್ಬರವು ಹೆಚ್ಚುತ್ತದೆ. ನಿಯಂತ್ರಣಗಳಿಂದ ಸಂಗ್ರಹ, ಕಳ್ಳಸಂತೆ ಲಾಭಬಡಕತನಗಳ ಅನಿಷ್ಟ ಚಕ್ರವೇ ಬೆಳೆಯುವುದು. ಭಾರತದಲ್ಲಿ ಜನಸಂಖ್ಯೆಯ ಹೆಚ್ಚಳದಿಂದ ಹಾಗೂ ಅದೇ ಪ್ರಮಾಣದಲ್ಲಿ ಆಹಾರದ ಉತ್ಪತ್ತಿಯು ಹೆಚ್ಚದಿದ್ದರಿಂದ ಈಗ ಅದೇ ಅನಿಷ್ಟ ಚಕ್ರವು ಬೆಳೆದಿದೆ. ಇದರಿಂದ ರಾಷ್ಟ್ರನಿರ್ಮಾಣದ ಯೋಜನೆಗಳು ಕುಂಠಿತವಾಗುವುದು ಸ್ವಾಭಾವಿಕ. ಆದ್ದರಿಂದ ದೇಶದ ಔದ್ಯೋಗಿಕ ಬೆಳವಣಿಗೆಯನ್ನು ಮತ್ತು ಅದರಿಂದ ಸರ್ವಾಂಗೀಣ ಉನ್ನತಿಯನ್ನು ಉತ್ತರೋತ್ತರವಾಗಿ ಸಾಧಿಸಬೇಕಾದರೆ ಬೇಸಾಯದ ಪ್ರಗತಿಯನ್ನು ಸಾಧಿಸಿ, ಅದರ ಹೆಚ್ಚುವರಿ ಉತ್ಪತ್ತಿಯನ್ನು ಪಡೆದು, ಹೆಚ್ಚುವರಿಯನ್ನು ಔದ್ಯೋಗೀಕರಣಕ್ಕೆ ಒದಗಿಸುವುದು ಅತ್ಯಗತ್ಯ. ಇಂಥ ಉತ್ಪತ್ತಿಯ ಹೆಚ್ಚಳದಿಂದಲೇ ವಿದೇಶೀವಿನಿಮಯ ಹೆಚ್ಚಿ ದೇಶದ ನಿರ್ಯಾತಗಳೂ ಹೆಚ್ಚುವುವು. ವಿದೇಶೀ ವ್ಯಾಪಾರವೂ ಬೆಳೆಯುವುದು, ದೇಶದ ಸರ್ವತೋಮುಖ ಸಮೃದ್ಧಿಯೂ ಹೆಚ್ಚುವುದು.

ಭಾರತದ ಕೆಳಮಟ್ಟದ ಬೇಸಾಯದ ಉತ್ಪತ್ತಿ

ದೇಶದ ಭದ್ರತೆಗೆ ಹಾಗೂ ಸಮೃದ್ಧಿಗೆ ಬೇಸಾಯವು ಇಷ್ಟೊಂದು ಮಹತ್ವದ ಉದ್ಯೋಗವಾಗಿದ್ದರೂ, ಅದರ ಪ್ರಗತಿಗೆ ಅನೇಕ ಯೋಜನೆಗಳನ್ನು ಕೈಕೊಂಡಿದ್ದಾಗ್ಯೂ

ಭಾರತದ ಬೇಸಾಯದ ಉತ್ಪತ್ತಿಯು ಇನ್ನೂ ಕೆಳಮಟ್ಟದಲ್ಲಿರುವುದು ಕಳವಳದ ಸಂಗತಿ.

ಸ್ವಾತಂತ್ರ್ಯಾನಂತರ ಅದರಲ್ಲಿಯೂ ಕಳೆದ ಒಂದು ದಶಕದಲ್ಲಿ ಅನೇಕ ಬೇಸಾಯದ ಸುಧಾರಣೆಗಳ ಯೋಜನೆಗಳಿಂದ 'ಹಸುರುಕ್ರಾಂತಿ'ಯನ್ನು ಸಾಧಿಸಿದ್ದರೂ ಸರಾಸರಿ ಉತ್ಪತ್ತಿಯು ಪರಿಣಾಮಕಾರಿಯಾಗಿ ಹೆಚ್ಚಿಲ್ಲ. ಏಕೆಂದರೆ ಹಸುರುಕ್ರಾಂತಿಯನ್ನು ಸಾಧಿಸಿದ ಬೇಸಾಯದ ವೈಜ್ಞಾನಿಕ ಸುಧಾರಣೆಗಳು ಮೇಲ್ವರಗತಿಯ ಹಾಗೂ ಮಧ್ಯಮ ವರ್ಗದ ಬೇಸಾಯಗಾರರಿಗೆ ಮಾತ್ರ ನಿಲುಕಿವೆ; ಬಹುಸಂಖ್ಯಾತರಾದ ಚಿಕ್ಕ ಬೇಸಾಯ ಗಾರರಿಗೆ ನಿಲುಕಿಲ್ಲ. ಅಂತೆಯೇ ಆಹಾರದ ಉತ್ಪತ್ತಿ ಸಾಕಷ್ಟು ಹೆಚ್ಚಿ ಆಹಾರದ ಆಮದು ಮಾಡುವುದು ಭಾರತಕ್ಕೆ ತಪ್ಪಿಲ್ಲ.

ಕಡಮೆ ಉತ್ಪತ್ತಿಯ ಕಾರಣಗಳು

ಬೇಸಾಯದ ಉತ್ಪತ್ತಿಯನ್ನು ಹೆಚ್ಚಿಸಲು ಕೈಕೊಳ್ಳಬೇಕಾದ ಬೇಸಾಯದ ತಾಂತ್ರಿಕ ಸುಧಾರಣೆಗಳು ಭಾರತೀಯ ಬೇಸಾಯಗಾರರಿಗೆ ಗೊತ್ತಿದೆ. ಸರಕಾರದ ಕೃಷಿ ಇಲಾಖೆಯ ಹಾಗೂ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಈ ಬಗ್ಗೆ ಸಾಕಷ್ಟು ಪ್ರಚಾರಮಾಡಿದ್ದಾರೆ. ಆದರೆ ಇಂಥ ಸುಧಾರಣೆಗಳು ಬಹಳ ಕಡಮೆ ಪ್ರಮಾಣದಲ್ಲಿ ಕಾರ್ಯಗತ ಆಗಿವೆ. ರಾಷ್ಟ್ರದಲ್ಲಿ ಕೋಟಿಗಟ್ಟಲೆ ಎಕರೆ ಭೂಮಿಯಲ್ಲಿ ನೀರಾವರಿ ಯನ್ನು ವಿಸ್ತರಿಸುವುದು ಸಾಧ್ಯವಿದ್ದರೂ ಅದರ ಕೆಲವಂಶ ಭೂಮಿಯಲ್ಲಿ ಮಾತ್ರ ನೀರಾವರಿ ಬೇಸಾಯವನ್ನು ಹೆಚ್ಚಿಸಲಾಗಿದೆ. ಹಳ್ಳಿಗಳಲ್ಲಿ ನಿರುದ್ಯೋಗಿಯಾಗಿರುವ ಅಥವಾ ಅಲ್ಪೋದ್ಯೋಗಿಯಾಗಿರುವ ಜನಶಕ್ತಿ ವಿಪುಲವಾಗಿದ್ದರೂ ಭೂಸುಧಾರಣೆ, ಒಡ್ಡುಹಾಕುವುದು, ಬಾವಿ ತೋಡುವುದು ಮುಂತಾದ ಕಾರ್ಯಗಳು ಬೇಕಾದಷ್ಟು ಮಾಡದೇ ಉಳಿದಿವೆ. ಬೇಸಾಯದಲ್ಲಿ ಉತ್ಪತ್ತಿ, ಆದಾಯ ಹೆಚ್ಚಿ, ಉಳಿತಾಯ ಹೆಚ್ಚಿ, ರಾಷ್ಟ್ರೋನ್ನತಿಯು ವೇಗದಿಂದ ನಡೆದಿಲ್ಲ. ಇಂಥಾ ಸುಧಾರಣೆಗಳನ್ನು ಬೇಸಾಯ ಗಾರರು ಕೈಕೊಳ್ಳಲು ಈ ಮುಂದೆ ವಿವರಿಸಿದ ಸಂಗತಿಗಳು ಅಡ್ಡಿಆತಂಕಗಳನ್ನು ತಂದೊಡ್ಡಿವೆ:

1. **ಭೂಒಡೆತನ:** ಭಾರತ ಸ್ವಾತಂತ್ರ್ಯ ಪಡೆದಾಗ ದೇಶದಲ್ಲಿ ಶೇಕಡಾ 5ರಷ್ಟು ಭೂಮಾಲೀಕರ ವಶದಲ್ಲಿ ಶೇಕಡಾ 38ರಷ್ಟು ಸಾಗುವಳಿ ಭೂಮಿ ಇತ್ತು. ಮಿಕ್ಕ ಶೇಕಡಾ 62ರಷ್ಟು ಭೂಮಿಗೆ ಶೇಕಡಾ 95ರಷ್ಟು ಜನರು ಒಡೆತನ ಹೊಂದಿದ್ದರು. ಅವರಲ್ಲಿ ಬಹುಮಂದಿ 5 ಎಕರೆಗಳಿಗಿಂತ ಕಡಮೆ ಜಮೀನುಳ್ಳ ಚಿಕ್ಕರೈತರು. ಕೃಷಿ ಜನ ಸಂಖ್ಯೆಯಲ್ಲಿ ಮೂರರಲ್ಲಿ ಒಂದುಭಾಗ ಭೂಹೀನ ಕೂಲಿಕಾರರಾಗಿದ್ದಾರೆ. ಜನ ಸಂಖ್ಯೆಯು ಹೆಚ್ಚಿದಂತೆ ಭೂಮಿಯ ವಿಭಜನೆಯು ಹೆಚ್ಚುತ್ತ ಹೋಗಿದೆ.

ತಮ್ಮ ಭೂಮಿಯಲ್ಲೇ ವಾಸಿಸದ ಭೂಮಾಲಿಕರು ಆ ಭೂಮಿಯ ಆದಾಯ ವನ್ನು ಭೂಸುಧಾರಣೆಗಳಿಗೆ ಉಪಯೋಗಿಸದೆ ತಮ್ಮ ಉಪಭೋಗಕ್ಕೆ ಬಳಸುತ್ತ

ಬಂದಿದ್ದಾರೆ. ಅವರ ಗೇಣಿದಾರರಾಗಿ, ಬೇಸಾಯಮಾಡಿ ದುಡಿಯುತ್ತಿರುವ ರೈತರಿಗೆ ದೊರಕುತ್ತಿರುವ ಪಾಲು ಅವರ ಜೀವನಕ್ಕೇ ಸಾಲುವುದಿಲ್ಲ. ತಮ್ಮ ಜಮೀನಿನ ಒಡೆತನ ಇರದೆ, ಆದಾಯದ ಭರವಸೆಯೂ ಇರದೇ ಇರುವಾಗ ಹೆಚ್ಚಿನ ಸುಧಾರಣೆ ಗಳನ್ನು ಕೈಕೊಳ್ಳಲು ತಮ್ಮ ಶ್ರಮದಿಂದಲೇ ಕಷ್ಟಪಟ್ಟು ದುಡಿಯಲು ಅವರಿಗೆ ಉತ್ತೇಜನವಾದರೂ ಹೇಗೆ ಬರಬೇಕು?

ಜಮೀನುದಾರಿ ಪದ್ಧತಿಯನ್ನು ಕಾಯಿದೆಯಿಂದ ನಿರ್ಮೂಲವಮಾಡಿ, ದುಡಿ ಯುವ ರೈತರಿಗೆ ಭೂಮಿಯನ್ನು ಹೊಂದುವ, ಭೂಸುಧಾರಣೆಯ ಕಾರ್ಯಕ್ರಮ ಇಂದು ದೇಶದ ಮುಂದೆ ಇದೆ. ಅದರ ಅನುಷ್ಠಾನ ಭರದಿಂದ ನಡೆದಿದೆ. ಈ ಸುಧಾರಣೆಯಿಂದ ಬೇಸಾಯದ ಉತ್ಪತ್ತಿಯ ಮಹತ್ವದ ಸಾಧನವಾದ ಉಳುಮೆಗಾರನ ಶ್ರಮ, ಉತ್ಸಾಹಗಳು ಮುಕ್ತವಾಗಿ ಬೇಸಾಯದ ಉತ್ಪತ್ತಿಯು ಹೆಚ್ಚುವ ನಿರೀಕ್ಷೆ ಯಿದೆ.

2. **ಅನಾರ್ಥಿಕ ಚಿಕ್ಕ ತುಂಡು ಹಿಡುವಳಿಗಳು:** ಭಾರತದಲ್ಲಿ ಪ್ರತಿಯೊ ಬ್ಬನ ಪಾಲಿಗೆ ಒಂದು ಎಕರೆಗಿಂತ ಕಡಮೆ ಸಾಗುವಳಿ ಭೂಮಿ ಬರುತ್ತದೆ. ಬೇಸಾಯದ ಮೇಲೆಯೇ ಜೀವನ ಸಾಗಿಸುವವನಿಗೆ ಸರಾಸರಿಯಾಗಿ 1.6 ಎಕರೆ ಭೂಮಿ ಬರುತ್ತದೆ. ಒಟ್ಟು ಹಿಡುವಳಿಗಳಲ್ಲಿ $\frac{2}{3}$ರಷ್ಟು ಹಿಡುವಳಿಗಳು $2\frac{1}{2}$ ಎಕರೆಗಳಿಗಿಂತ ಚಿಕ್ಕವು.

ಈ ಚಿಕ್ಕ ತುಂಡು ಹಿಡುವಳಿಗಳ ಬೇಸಾಯಗಾರರಿಗೆ ಭೂಸುಧಾರಣೆಗಳನ್ನು ಕೈಕೊಂಡು, ನೀರಾವರಿ ಬೇಸಾಯ ಮಾಡಿ ತಮ್ಮ ಬೇಸಾಯವನ್ನು ಸುಧಾರಿಸಿ ಹೆಚ್ಚು ಆದಾಯ ಪಡೆಯಲು ಸಾಕಷ್ಟು ಹಣದ ಸಹಾಯ ಹಾಗೂ ತಾಂತ್ರಿಕ ಮಾರ್ಗದರ್ಶನ ದೊರಕದಾಗಿದೆ. ಚಿಕ್ಕ ಬೇಸಾಯಗಾರರ ಜೀವನಸ್ಥಿತಿಯೂ ದಯನೀಯವಾಗುತ್ತ ನಡೆದಿದೆ. ಅವರ ಶ್ರಮಶಕ್ತಿಯು ಹೇರಳವಾಗಿದ್ದರೂ. ಸಾಕಷ್ಟು ಉದ್ಯೋಗಾವ ಕಾಶ ದೊರಕದೆ ಅದು ವ್ಯರ್ಥವಾಗಿ ಹಾಳಾಗುತ್ತಿದೆ.

ತುಂಡು ಹಿಡುವಳಿಗಳ ಆರ್ಥಿಕ ಕೊರತೆಗಳು

ಚಿಕ್ಕ ತುಂಡುಗಳಲ್ಲಿ ಎತ್ತು ಉಪಕರಣಗಳ ಶಕ್ತಿಯು ಪೂರ್ಣ ಉಪಯೋಗ ವಾಗದೆ ಹಾಳಾಗುತ್ತದೆ ಮತ್ತು ಅದರಿಂದ ಸಾಗುವಳಿ ವೆಚ್ಚವು ಆದಾಯಕ್ಕಿಂತ ಹೆಚ್ಚಾಗುತ್ತದೆ. ಬೇಸಾಯದ ಬಂಡವಾಳಿನ ಸಂಗ್ರಹಕ್ಕಾಗಿ ಉಳಿತಾಯವಂತೂ ಆಗು ವುದೇ ಇಲ್ಲ. ಇಂಥ ಹಿಡುವಳಿಗಳಲ್ಲಿ ಬೇಸಾಯದ ಸಾಧನಗಳಲ್ಲಿ ಹಾಗೂ ಪದ್ಧತಿಗಳಲ್ಲಿ ಯಾವ ಬದಲಾವಣೆಯೂ ಆಗದೆ ಚಿಕ್ಕ ಬೇಸಾಯಗಾರರು ಓಬೀರಾಯನ ಕಾಲದ ರಂಟೆಕುಂಟೆಗಳನ್ನೇ ಉಪಯೋಗಿಸುತ್ತಾರೆ. ಹೂಡಲು ಒಂದು ಜೊತೆ ಸಬಲ ಎತ್ತು ಗಳೂ ಅವರ ಒಳಿ ಅನೇಕಸಲ ಇರುವುದಿಲ್ಲ. ಸುಧಾರಿಸಿದ ಬೀಜ, ಗೊಬ್ಬರಗಳ ಬಳಕೆಗಳ ಬಗ್ಗೆ ಅವರು ಉಪದೇಶ ಹೇಳುತ್ತಿದ್ದರೂ ತಮ್ಮ ಆರ್ಥಿಕ ಅಸಹಾಯತನದಿಂದ ಸ್ವಂತದ ಅಲ್ಪಸ್ವಲ್ಪ ದನದ ಗೊಬ್ಬರವನ್ನು ಹೊರಗಡೆ ಮಾರಿಕೊಂಡು ಬಿಡುತ್ತಾರೆ.

ಈ ಕಾರಣಗಳಿಂದಲೇ ಭಾರತದ ಸರಾಸರಿ ಉತ್ಪತ್ತಿಯಲ್ಲಿ ವಿಶೇಷವಾಗಿ ಹೆಚ್ಚಳವಾಗುತ್ತಿಲ್ಲ. ಹೀಗೆ ಬೇಸಾಯವನ್ನು ಸುಧಾರಿಸಲು ಭಾರತದ ಚಿಕ್ಕ ಬೇಸಾಯಗಾರರ ಬಳಿ ಸಾಧನಗಳೂ ಇಲ್ಲ. ಎತ್ತು ಇಲ್ಲ, ಜಾಣತನವೂ ಇಲ್ಲ. ಹೇಗೋ ಸಾಲಮೂಲ ಮಾಡಿ ಸುಧಾರಣೆಗಳನ್ನು ಅವರು ಕೈಕೊಳ್ಳಲು ಯತ್ನಿಸಿದರೆ, ಅವರ ತುಂಡು ಭೂಮಿಗಳ ಮೇಲೆ ಸುಧಾರಣೆಯ ಬಂಡವಲು ಹೊರಲಾರದ ಹೊರೆಯಾಗಿಬಿಡುತ್ತದೆ.

ಬೇಸಾಯದ ಉತ್ಪತ್ತಿಯನ್ನು ಬೇರೆ ದೇಶಗಳಿಗೆ ಸರಿಸಮಾನವಾಗಿ ಹೆಚ್ಚಿಸಬೇಕಾದರೆ ಭಾರತದ ಬಹುಸಂಖ್ಯಾತ ಚಿಕ್ಕ ಬೇಸಾಯಗಾರರು. ಬೇಸಾಯದಲ್ಲಿ ವೈಜ್ಞಾನಿಕ ಸುಧಾರಣೆಗಳನ್ನು ಕೈಕೊಳ್ಳಲೇಬೇಕು. ಅದಕ್ಕಾಗಿ ಅವರಿಗೆ ಸಾಕಷ್ಟು ಸಾಧನ ಸಲಕರಣೆಗಳೂ. ಜಾಣತನವೂ ಒದಗಲೇಬೇಕು. ತುಂಡುಹಿಡುವಳಿಗಳನ್ನು ಒಂದುಗೂಡಿಸಿ ಲಾಭದಾಯಕವಾದ ಬೇಸಾಯವನ್ನು ಕೈಕೊಳ್ಳದೆ ಅದು ಸಾಧ್ಯವಾಗಲಾರದು. ಹೀಗೆ ಬೇಸಾಯದ ವೈಜ್ಞಾನಿಕ ಸುಧಾರಣೆಗಾಗಿ ಸಹಕಾರಿ ಬೇಸಾಯದ ಹೊರತಾಗಿ ಬೇರೆ ದಾರಿಯೇ ಇಲ್ಲ.

ಭೂ ಹಿಡುವಳಿಗಳಲ್ಲಿರುವ ಸದ್ಯದ ದೋಷಗಳನ್ನು ದೂರಮಾಡದೇ ವೈಜ್ಞಾನಿಕ ಬೇಸಾಯದ ಸರಾಸರಿ ಉತ್ಪತ್ತಿಯು ಹೆಚ್ಚಾಗದು. ಜಮೀನುದಾರಿ ಪದ್ಧತಿಯ ದೋಷವನ್ನು ದೂರಮಾಡಲು ಭೂಸುಧಾರಣೆಯ ಕಾಯಿದೆಯು ಎಲ್ಲ ಕಡೆಗೂ ಪೂರ್ಣವಾಗಿ ಕಾರ್ಯಗತವಾಗಬೇಕು. ಚಿಕ್ಕ ಹಿಡುವಳಿಗಳ ಅನಾರ್ಥಿಕ ಸ್ವರೂಪವನ್ನು ದೂರಮಾಡಿ ಅದನ್ನು ಲಾಭದಾಯಕ ಹಿಡುವಳಿಗಳನ್ನಾಗಿ ಮಾಡಲು ಸಹಕಾರಿ ಬೇಸಾಯ ಸಂಘಗಳ ಸ್ಥಾಪನೆಯಾಗಬೇಕು.

ಹಿಡುವಳಿ ಕ್ರೋಢೀಕರಣ ಮತ್ತು ಬೇಸಾಯದ ಸೇವೆಗಳಿಂದ ಅನಾರ್ಥಿಕ ಹಿಡುವಳಿಗಳನ್ನು ಲಾಭದಾಯಕಗೊಳಿಸುವಿಕೆ

ಕ್ರೋಢೀಕರಣದಿಂದ ಒಂದು ಹಿಡುವಳಿಯು 3–4 ತುಂಡುಗಳನ್ನು ಒಂದುಗೂಡಿಸಬಹುದು. ಆದರೆ 2–3 ಎಕರೆ ಮಾತ್ರ ಅಥವಾ ಬಹಳವಾದರೆ 5 ಎಕರೆ ವಿಸ್ತಾರದ ಹಿಡುವಳಿಯ ವಿಸ್ತಾರವು ಹೆಚ್ಚಾಗಲಾರದು. ಈ ವಿಸ್ತಾರವು ಸಹ ಲಾಭದಾಯಕವಲ್ಲ. ಅಲ್ಲದೆ ಮುಂದೆ ಕುಟುಂಬದ ವಿಭಜನೆಯಾದಂತೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಈ ಹಿಡುವಳಿಯ ತುಂಡೀಕರಣವನ್ನು ತಡೆಗಟ್ಟಲಿಕ್ಕಾಗುವುದಿಲ್ಲ.

ಇದೇ ರೀತಿಯಿಂದ ಇಂಥ ಹಿಡುವಳಿಗಳ ಬೇಸಾಯಕ್ಕೆ ಬೇಸಾಯದ ಸೇವೆಗಳನ್ನು ಒದಗಿಸುವುದರಿಂದಲೂ ಹೆಚ್ಚಿನ ಪ್ರಯೋಜನವಾಗದು. ಇಂಥ ವ್ಯವಸಾಯದ ಸಹಾಯ ಸವಲತ್ತುಗಳು ಬೇಸಾಯದ ಉನ್ನತಿಗೆ ಬಹಳ ಮಹತ್ವವಾದವು. ಇದರಿಂದ ಸೇವಾ ಸಹಕಾರಿ ಸಂಘವು ಬೇಸಾಯಗಾರರ ಉಳಿತಾಯದ ಹಣವನ್ನು ಸಂಗ್ರಹಿಸಿ, ಸುಧಾರಿಸಿದ ಬೀಜ, ಗೊಬ್ಬರ ಮುಂತಾದ ಸಲಕರಣೆಗಳನ್ನು ಒದಗಿಸಬಹುದು.

ಬೇಸಾಯಗಾರರ ಉಪಯೋಗವಾಗದ ಶ್ರಮಶಕ್ತಿಯು ಹೇರಳವಾದ ಬಂಡವಾಳ ವ್ಯರ್ಥವಾಗಿ ಹಾಳಾಗುತ್ತಿದೆ. ಅದನ್ನು ಉಪಯೋಗಿಸಲು ಯತ್ನಿಸಬೇಕು. ಸಹಕಾರಿ ಬೇಸಾಯ ಸಂಘವು ಈ ಕಾರ್ಯವನ್ನು ಸಾಧಿಸಿ ಹೆಚ್ಚಿನ ಸುಧಾರಣೆಗಳನ್ನು ಕೈಕೊಳ್ಳಲು ಸಾಧ್ಯ.

ಸಹಕಾರಿ ಬೇಸಾಯ ಚಿಕ್ಕ ಬೇಸಾಯಗಾರರ ಶ್ರಮಸಂಘಟನ ಹಾಗೂ ಉಳಿತಾಯದ ಸಾಧನ

ಸಹಕಾರಿ ಬೇಸಾಯದ ಪ್ರಬಲವಾದ ಆರ್ಥಿಕ ತತ್ವವೆಂದರೆ ಅದು ಚಿಕ್ಕ ಬೇಸಾಯಗಾರರ ಹೆಚ್ಚಿನ ಶ್ರಮಶಕ್ತಿಯನ್ನು ಸಂಘಟಿಸುತ್ತದೆ ಮತ್ತು ಅವರ ಅಲ್ಪ ಉಳಿತಾಯವನ್ನು ಸಂಗ್ರಹಿಸುತ್ತದೆ: ನಿರುಪಯೋಗಿಯಾಗಿ ಹಾಳಾಗುತ್ತಿರುವ ಈ ವಿಪುಲವಾದ ಸಂಪನ್ಮೂಲಗಳನ್ನು ಉಪಯೋಗಿಸಿ ಚಿಕ್ಕ ಬೇಸಾಯಗಾರರ ಹಿಡುವಳಿಗಳಲ್ಲಿ ವ್ಯಾಪಕವಾಗಿ ಭೂಸುಧಾರಣೆಗಳನ್ನು, ನೀರಾವರಿಯ ಯೋಜನೆಗಳನ್ನು, ಸಾಂದ್ರ ಬೇಸಾಯವನ್ನು ಕೈಕೊಂಡು ಅವರ ಉತ್ಪತ್ತಿ ಆದಾಯಗಳನ್ನು ಹೆಚ್ಚಿಸುವುದಲ್ಲದೆ ದೇಶದ ಔದ್ಯೋಗಿಕ ಉನ್ನತಿಗೆ ಬೇಸಾಯದ ಉಳಿತಾಯದಿಂದ ಬಂಡವಲನ್ನು ಸಂಗ್ರಹಿಸುತ್ತದೆ.

ಇಪ್ಪತ್ತು ಚಿಕ್ಕ ಬೇಸಾಯಗಾರರು ಒಂದು ಬೇಸಾಯ ಸಂಘದಲ್ಲಿ ತಮ್ಮ ತುಂಡುಭೂಮಿಗಳನ್ನು, ತಮ್ಮ ಶ್ರಮವನ್ನು, ಸಾಧನ ಸಾಮಗ್ರಿಗಳನ್ನು, ಬೇಸಾಯದ ಕುಶಲತೆಯನ್ನು ಎಲ್ಲವನ್ನೂ ಯೋಜನಾಬದ್ಧವಾಗಿ ಒಂದುಗೂಡಿಸುತ್ತಾರೆ. ವೈಯಕ್ತಿಕ ಕೌಟುಂಬಿಕ ಬೇಸಾಯದಲ್ಲಿ ಸಾಧಿತವಾಗದ್ದು ಅಲ್ಲಿ ಸಾಧ್ಯವಾಗುತ್ತದೆ. ಆದ್ದರಿಂದ ಒಂದು ಸಹಕಾರಿ ಬೇಸಾಯ ಸಂಘದಲ್ಲಿನ ಹಲವಾರು ಪರಿವಾರಗಳು ಒಂದುಗೂಡಿ. ಉಳಿತಾಯದ ಶ್ರಮಶಕ್ತಿಯನ್ನು ಸಂಘಟಿಸಿ, ಅನೇಕ ವರ್ಷಗಳಲ್ಲಿ ಆಗಬಹುದಾದ ಬೇಸಾಯದ ಸುಧಾರಣೆಯನ್ನು ಕೆಲವೇ ತಿಂಗಳಲ್ಲಿ ಮಾಡಿಮುಗಿಸಬಹುದು ಮತ್ತು ಅದರಿಂದ ಲಾಭಪಡೆಯಬಹುದು.

ಹಣದ ಉಳಿತಾಯದ ಉಪಯೋಗವಾದರೂ ಇದೇ ರೀತಿಯಾಗಿ ಫಲಕಾರಿಯಾಗುತ್ತದೆ. ಒಂದು ಪರಿವಾರದ ವಾರ್ಷಿಕ ಹಣದ ಉಳಿತಾಯವು ಕೆಲವೇ ರೂಪಾಯಿ ಇರುತ್ತದೆ. ಒಂದು ಸುಧಾರಣೆಯ ಯೋಜನೆಗೆ ಸಹಸ್ರಾರು ರೂಪಾಯಿ ವೆಚ್ಚವು ತಗಲುತ್ತದೆ. ಹಾಗಾದರೆ ಆ ಪರಿವಾರವು ಆ ಸುಧಾರಣೆಯನ್ನು ಕೈಕೊಂಡು ಮುಗಿಸಲು ಹಲವು ವರ್ಷಗಳು ಬೇಕಾಗುತ್ತವೆ. ಆದುದರಿಂದ ಇಂಥ ಸುಧಾರಣೆಯನ್ನು ಕೈಕೊಳ್ಳುವಲ್ಲಿ ಚಿಕ್ಕ ಬೇಸಾಯಗಾರನ ಪರಿವಾರಕ್ಕೆ ಯಾವ ಉತ್ಸಾಹವೂ ಇರುವುದಿಲ್ಲ. ಆದರೆ ಇಂಥ ಹಲವು ಪರಿವಾರಗಳು ಒಂದುಗೂಡಿದಾಗ ಅವರೆಲ್ಲರ ಉಳಿತಾಯವು ಒಂದೇ ವರ್ಷದಲ್ಲಿ ಸಹಸ್ರಾರು ರೂಪಾಯಿ ಆಗುವುದು. ಆಗ ಅವರೆಲ್ಲರೂ ಹುಮ್ಮಸ್ಸಿನಿಂದ ತಮ್ಮ ಉಳಿತಾಯದ ಹಣವನ್ನೇ ಕೂಡಿಸಿ ಆ ಸುಧಾರಣೆ

ಯನ್ನು ಮಾಡಿ ಮುಗಿಸಿ ಅದರಿಂದ ಪ್ರಯೋಜನ ಪಡೆಯುವರು. ಈ ಸುಧಾರಣೆಗಳ ಕಾರ್ಯಗಳಲ್ಲಿ ಅವರೆಲ್ಲರಿಗೆ ಉದ್ಯೋಗಾವಕಾಶವು ಹೆಚ್ಚುವುದು. ಮುಂದೆ ಆದಾಯವೂ ಹೆಚ್ಚುವುದು. ಹೀಗೆ ವೈಯಕ್ತಿಕ, ಪಾರಿವಾರಿಕ ಬೇಸಾಯದಿಂದ ಸಾಧಿಸದೇ ಇದ್ದ ಭೂಸುಧಾರಣೆ, ಒಡ್ಡುಹಾಕುವುದು, ಸಾಂದ್ರಬೇಸಾಯ, ನೀರಾವರಿ ಮುಂತಾದ ಅನೇಕ ಸುಧಾರಣೆಗಳು ವ್ಯಾಪಕವಾಗಿ ಜನರ ಶ್ರಮಸಾಧನಗಳಿಂದಲೇ ಆಗುತ್ತದೆ.

ಆರ್ಥಿಕ ಹಿಡುವಳಿಗಳಲ್ಲೂ ಸಹ ಸುಧಾರಣೆಗೆ ಸಹಕಾರಿ ಬೇಸಾಯದಿಂದ ಉತ್ತೇಜನ

ಮೂರರಲ್ಲಿ ಎರಡರಷ್ಟು ಹಿಡುವಳಿಗಳು 10 ಎಕರೆಗೆ ಮೇಲ್ಪಟ್ಟಿದ್ದು ಆರ್ಥಿಕ ಹಿಡುವಳಿಗಳಾಗಿವೆ. ಆದರೆ ಈ ಹಿಡುವಳಿಗಳಲ್ಲೂ ಭೂಸುಧಾರಣೆ, ನೀರಾವರಿ, ಸಾಂದ್ರಬೇಸಾಯದ ಕೆಲಸಗಳು ಸಾಕಷ್ಟು ಹೆಚ್ಚುವ ಸಾಧ್ಯತೆಯಿದ್ದರೂ, ಹೆಚ್ಚಿಲ್ಲ. ಇಂಥ ಸಣ್ಣ ಮಧ್ಯಮ ತರಗತಿಯ ಬೇಸಾಯಗಾರರು ಈ ಸುಧಾರಣೆಗಳನ್ನು ತಮ್ಮ ಪಾರಿವಾರಿಕ ಶ್ರಮದಿಂದಲೇ ಮಾಡಲು ಸಾಧ್ಯವಾಗುವುದಿಲ್ಲ; ಹೊರಗಿನ ಕೂಲಿಯ ಶ್ರಮಹಚ್ಚಿ ಮಾಡಿಸಬೇಕಾಗುತ್ತದೆ. ಏರಿಳಿತದ ಸದ್ಯದ ಬೆಲೆ ಹಾಗೂ ಕೂಲಿಗಳ ಪರಿಸ್ಥಿತಿಗಳಲ್ಲಿ ಕೂಲಿಗಳ ಶ್ರಮದಿಂದ ಸುಧಾರಣೆಗಳನ್ನು ಮಾಡಿಸುವುದು ಮಧ್ಯಮ ತರಗತಿಯ ಬೇಸಾಯಗಾರರಿಗೆ ವೈಯಕ್ತಿಕವಾಗಿ ಲಾಭದಾಯಕವಾಗುವುದಿಲ್ಲ. ತಂದ ಸಾಲ, ಬಡ್ಡಿ, ಕೂಲಿಯ ವೆಚ್ಚಗಳನ್ನು ವಜಾತೆಗೆದು ಅವರಿಗೆ ಲಾಭವು ಉಳಿಯುವುದಿಲ್ಲ. ಆದ್ದರಿಂದ ಅವರು ಇಂಥ ಸುಧಾರಣೆಗಳನ್ನು ಮಾಡುವ ಗೋಜಿಗೆ ಹೋಗುವುದಿಲ್ಲ. ಸೇವಾ ಸಹಕಾರಿ ಸಂಘಗಳಿಂದ ಅಥವಾ ಬ್ಯಾಂಕುಗಳಿಂದ ಸಾಲ ದೊರೆಯುತ್ತಿದ್ದರೂ ಅದನ್ನು ಅವರು ಉಪಯೋಗಿಸುವುದಿಲ್ಲ. ಹಲವರು ಸಾಲತೆಗೆದುಕೊಂಡು ಇಂಥ ಸುಧಾರಣೆಗಳಿಗೆ ಉಪಯೋಗಿಸಿದರೂ ವೈಯಕ್ತಿಕವಾಗಿ ತೊಡಗಿದ ಬಂಡವಾಳಕ್ಕಿಂತ ವೈಯಕ್ತಿಕ ಪ್ರಾಪ್ತಿ ಕಡಮೆ ಆಗುವುದರಿಂದ ಮತ್ತು ಇಳಿಕೆ ಆದಾಯ ನಿಯಮವು ಕಾರ್ಯಮಾಡುವುದರಿಂದ ಅವರು ಒಮ್ಮೆ ಸಾಲದಲ್ಲಿ ಬಿದ್ದವರು ಯಾವಾಗಲೂ ಸಾಲದಲ್ಲೇ ಮುಳುಗಿರುವರು. ಸೇವಾ ಸಹಕಾರಿ ಸಂಘಗಳಿಗೆ ಮತ್ತು ಬ್ಯಾಂಕುಗಳಿಗೆ ಇಂಥ ಬೇಸಾಯಗಾರರಿಂದ ಸಾಲದ ವಸೂಲಿಯು ಒಂದು ದೊಡ್ಡ ಸಮಸ್ಯೆಯೇ ಆಗಿಬಿಡುತ್ತದೆ.

ಇಂಥ ಮಧ್ಯಮ ತರಗತಿಯ ಸಣ್ಣ ಬೇಸಾಯಗಾರರೂ ತಮ್ಮ ಹಿಡುವಳಿಗಳನ್ನು ಒಂದುಗೂಡಿಸಿ ಸಾಮೂಹಿಕ ಬೇಸಾಯವನ್ನು ಕೈಕೊಂಡರೆಂದರೆ ಅವರ ಒಟ್ಟು ಹಿಡುವಳಿಗಳ ಕ್ಷೇತ್ರವು ವಿಸ್ತೃತವಾಗಿ ಸುಧಾರಣೆಗಳೆಲ್ಲವೂ ಲಾಭದಾಯಕವಾಗುತ್ತವೆ. ತೊಡಗಿದ ಬಂಡವಲು ಆದಾಯ ನಿಯಮವು ವೈಯಕ್ತಿಕವಾಗಿ ಕಾರ್ಯಮಾಡದೆ ಸಾಮಾಜಿಕವಾಗಿ ಕಾರ್ಯಮಾಡ ಹತ್ತುವುದು. ಒಂದುಗೂಡಿದ ಬೇಸಾಯಗಾರರ ಬಹಳಷ್ಟು ಶ್ರಮವು ನಿಷ್ಕ್ರಿಯವಾಗಿ, ನಿರುಪಯೋಗವಾಗಿ ಹಾಳಾಗುತ್ತಿರುತ್ತದೆ. ಅಂಥ ಶ್ರಮಕ್ಕೆ ಈಗ ಉದ್ಯೋಗ ದೊರಕುತ್ತದೆ; ಆದಾಯವೂ ಅವರಿಗೆ

ತುರ್ತು ಆಗಲೀ, ತಡೆದು ಉತ್ಪತ್ತಿಯಿಂದಾಗಲೀ ದೊರಕುತ್ತದೆ. ಏಕೆಂದರೆ ಅಂಥ ಶ್ರಮವನ್ನು ಅವರು ಒಗ್ಗಟ್ಟಿನಿಂದ ಪೂರ್ಣ ಉಪಯೋಗಿಸಿ ಭೂಸುಧಾರಣೆ, ಬಾವಿ, ನೀರಾವರಿ, ಸಾಂದ್ರಬೇಸಾಯದ ಕೆಲಸಗಳನ್ನು ಬಹಳಷ್ಟು ಅವರು ಮುಖ್ಯವಾಗಿ ತಮ್ಮ ಶ್ರಮದ ಬಂಡವಲಿನಿಂದಲೇ, ಅಗತ್ಯವಿದ್ದಷ್ಟು ಕಡಮೆ ಹೊರಗಿನ ಹಣದ ಬಂಡವಲಿನಿಂದ ಮಾಡಿಮುಗಿಸುತ್ತಾರೆ. ಈ ಸುಧಾರಣೆಗಳಿಂದ, ಹೆಚ್ಚಿದ ಆದಾಯ ದಿಂದ ಮತ್ತು ಉಳಿತಾಯದಿಂದ ಹೆಚ್ಚೆಚ್ಚು ಬೇಸಾಯದ ಸುಧಾರಣೆಗಳನ್ನು ಮಾಡುತ್ತ ಹೋಗುತ್ತಾರೆ. ಅವುಗಳಿಂದ ಉತ್ಪತ್ತಿ, ಆದಾಯಗಳು ಹೆಚ್ಚಿ ಅವರಿಗೆ ಉದ್ಯೋಗ, ಆದಾಯಗಳೂ ಹೆಚ್ಚುತ್ತವೆ. ಈ ರೀತಿಯಿಂದ ಸಹಕಾರಿ ಬೇಸಾಯದ ಬೆಳವಣಿಗೆ ಯಿಂದ ಸಾಮಾಜಿಕ ಪ್ರಗತಿಗೆ ಹಾಗೂ ರಾಷ್ಟ್ರೀಯ ವಿಕಾಸಕ್ಕೆ ಸಹಾಯವಾಗುತ್ತದೆ.

ಸಹಕಾರಿ ಬೇಸಾಯದಿಂದ ಔದ್ಯೋಗಿಕ ಉನ್ನತಿಯ ಪ್ರಗತಿ

ಈ ಮೊದಲು ಆನುಷಂಗಿಕವಾಗಿ ಸೂಚಿಸಿದಂತೆ ಸಹಕಾರಿ ಬೇಸಾಯದ ಬೆಳವಣಿಗೆಯಿಂದ ದೇಶದ ಔದ್ಯೋಗಿಕ ವಿಕಾಸಕ್ಕೆ ಉತ್ತೇಜನ ದೊರಕುತ್ತದೆ. ದೇಶವಲ್ಲಿ ಉದ್ಯೋಗಗಳ ಬೆಳವಣಿಗೆಯಾಗದೆ ನಿರುದ್ಯೋಗ, ಬಡತನಗಳ ನಿವಾರಣೆಯಾಗದು, ಕೇವಲ ಬೇಸಾಯದಲ್ಲಿಯೇ ಎಲ್ಲರಿಗೂ ಸಾಕಷ್ಟು ಉದ್ಯೋಗ, ಉಪಜೀವನ ದೊರಕು ವುದು ಸಾಧ್ಯವಿಲ್ಲ. ಅಲ್ಲದೆ ಉದ್ಯೋಗಗಳ ವೃದ್ಧಿಯಿಂದ ರಾಷ್ಟ್ರೀಯ ಆದಾಯವು ಹೆಚ್ಚುವುದು ಮತ್ತು ದೇಶವು ಸ್ವಾವಲಂಬಿಯಾಗುವುದು, ರಾಷ್ಟ್ರರಕ್ಷಣೆಯ ವ್ಯವಸ್ಥೆಯೂ ಅದರಿಂದ ಭದ್ರವಾಗುವುದು.

ಆದರೆ ಭಾರತದಲ್ಲಿ ಸಾಕಷ್ಟು ಉದ್ಯೋಗಗಳನ್ನು ಬೆಳೆಸಲು ಹೇರಳವಾಗಿ ಬಂಡವಾಳಗಳನ್ನು ಪರದೇಶಗಳಿಂದ ಸಾಲತರಬೇಕಾಗಿದೆ. ಭಾರತ ಸರಕಾರದಿಂದ 1967ರಲ್ಲಿ ಪ್ರಕಟಿಸಲ್ಪಟ್ಟ ಅಂಕಿಸಂಖ್ಯೆಗಳ ಕಿರುಹೊತ್ತಗೆಯಲ್ಲಿ ಕಾಣಿಸಿವಂತೆ ಭಾರತದ ಮೇಲೆ ಪರದೇಶಗಳ ಸಾಲದ ಹೊರೆಯು 1950–51ರಲ್ಲಿ 32 ಕೋಟಿ ರೂಪಾಯಿ ಇದ್ದದ್ದು 1967–68ರಲ್ಲಿ 6082.4 ಕೋಟಿ ರೂಪಾಯಿಗಳಿಗೆ ಏರಿತು. ಏಕೆಂದರೆ ರಾಷ್ಟ್ರೀಯ ಆದಾಯವು ನಿರೀಕ್ಷಿಸಿದಷ್ಟು ಹೆಚ್ಚುತ್ತಿಲ್ಲ. 1948–49ರಲ್ಲಿ ರಾಷ್ಟ್ರೀಯ ವಾರ್ಷಿಕ ಆದಾಯವು 860 ಕೋಟಿ 50 ಲಕ್ಷ ರೂಪಾಯಿ ಇದ್ದದ್ದು 1963–64ರಲ್ಲಿ 1720 ಕೋಟಿ 10 ಲಕ್ಷ ರೂಪಾಯಿಗಳಿಗೆ ಏರಿತು. ಪ್ರತಿ ನಾಗರಿಕನ ಸರಾಸರಿ ವಾರ್ಷಿಕ ಆದಾಯವು 1948–49ರಲ್ಲಿ 249.6 ರೂಪಾಯಿ ಇದ್ದದ್ದು 1963–64ರಲ್ಲಿ 301.1 ರೂಪಾಯಿಗಳಷ್ಟು ಮಾತ್ರ ಹೆಚ್ಚಿತು. ಅನೇಕ ಕಚ್ಚಾ ಮಾಲುಗಳನ್ನು ಬೇರೆ ದೇಶಗಳಿಂದ ಆಯಾತ ಮಾಡಬೇಕಾಗಿದೆ. ಅಲ್ಲದೆ ನಮ್ಮ ಉದ್ಯೋಗಗಳಿಂದ ತಯಾರಾದ ಪಕ್ಕಾಮಾಲನ್ನು ಮಾರಲು ಹಿಂದಿನ ಸಾಮ್ರಾಜ್ಯವಾದಿ ದೇಶಗಳಂತೆ ಪರದೇಶಗಳಲ್ಲಿ ಪೇಟೆಯನ್ನು ಹುಡುಕುವ ಸ್ಥಿತಿ ಈಗ ಭಾರತಕ್ಕೆ ಉಳಿ ದಿಲ್ಲ. ಅದು ಭಾರತದ ಧ್ಯೇಯ ಧೋರಣೆಗಳಿಗೆ ವಿರುದ್ಧವಾಗಿದೆ. ಆ ಸರಕನ್ನೂ ನಮ್ಮ ದೇಶದೊಳಗೇ ಮಾರುವ ವ್ಯವಸ್ಥೆ ಮಾಡಬೇಕಾಗುವುದು. ಆದರೆ ಇಂದು

ಭಾರತದ ಹಳ್ಳಿಗಳಲ್ಲಿ ವಾಸಿಸುತ್ತಿರುವ ಜನಸಾಮಾನ್ಯರಲ್ಲಿ, ಹೊಟ್ಟೆಗೆ ಅನ್ನದ ಕೊರತೆಯೇ ಇರುವಾಗ, ಈ ಔದ್ಯೋಗಿಕ ಸರಕನ್ನು ಕೊಳ್ಳುವ ಶಕ್ತಿಯು ತೀರ ಕಡಮೆ ಇದೆ. ಬೇಸಾಯದ ಸಮೃದ್ಧಿಯಿಂದಲೇ ಈ ಜನಸಾಮಾನ್ಯರ ಕೊಳ್ಳುವ ಶಕ್ತಿಯು ಹೆಚ್ಚಿ ಔದ್ಯೋಗಿಕ ಸರಕಿಗೆ ಸಾಕಷ್ಟು ಪೇಟೆಯು ದೇಶದೊಳಗೆ ದೊರಕಬಲ್ಲದು. ಅದರಿಂದ ಉದ್ಯೋಗಗಳಿಗೆ ಅಗತ್ಯವಿದ್ದ ಕಚ್ಚಾ ಮಾಲು ಹಾಗೂ ಬೇಸಾಯದ ಹೆಚ್ಚಿದ ಉತ್ಪತ್ತಿಯಿಂದ ಮತ್ತು ಉಳಿತಾಯದಿಂದ ಬಂಡವಾಳವೂ ದೇಶದೊಳಗೇ ದೊರಕುವುದು. ಬಹುಸಂಖ್ಯಾತ ಬೇಸಾಯಗಾರರ ಸಹಕಾರಿ ಬೇಸಾಯದಿಂದಲೇ ಭಾರತದ ಔದ್ಯೋಗಿಕ ಹಾಗೂ ಆರ್ಥಿಕ ಉನ್ನತಿಯು ತೀವ್ರಗತಿಯಿಂದ ಮುಂದುವರಿಯಬಲ್ಲದೆಂಬುದು ಸ್ಪಷ್ಟವಾಗಿದೆ. ಅಂತೆಯೇ ಹೊಸದಾಗಿ ಅಭಿವೃದ್ಧಿ ಹೊಂದಿದ ಸಮಾಜವಾದಿ ದೇಶಗಳು ಬೇಸಾಯದ ಸಮೃದ್ಧಿಗಾಗಿ ಉತ್ಸಾಹದಿಂದ ವ್ಯಾಪಕವಾಗಿ ಸಹಕಾರಿ ಬೇಸಾಯದ ಕಾರ್ಯಕ್ರಮವನ್ನು ಕಾರ್ಯಗತಮಾಡಿದವು.

ಶ್ರಮಸಂಪತ್ತಿನ ಪೂರ್ಣ ಉಪಯೋಗ

ಭಾರತವು ಜಮೀನು, ಬಂಡವಾಳಿನಲ್ಲಿ ಬಡದೇಶವಾಗಿದ್ದರೂ ಶ್ರಮಸಂಪತ್ತಿನಲ್ಲಿ ಶ್ರೀಮಂತ ದೇಶವಾಗಿದೆ. ಈಗ ಅದರ ಅಪಾರ ಜನಶಕ್ತಿಯ ಪೂರ್ಣ ಉಪಯೋಗವಾಗುತ್ತಿಲ್ಲ. ಹಳ್ಳಿಗಳಲ್ಲಿ ಪರಿಸ್ಥಿತಿಗಳ ಒತ್ತಾಯದಿಂದಲೂ ನಿರುದ್ಯೋಗದಿಂದಲೂ, ಕೈತುಂಬ ಮತ್ತು ಕುಶಲ ಲಾಭದಾಯಕ ಉದ್ಯೋಗದ ಕೊರತೆಯಿಂದಲೂ ಈ ಶ್ರಮಸಂಪತ್ತು ಹೇರಳವಾಗಿ ಹಾಳಾಗುತ್ತಿದೆ ಮತ್ತು ಒತ್ತಟ್ಟಿಗೆ ಪಡಭೂಮಿಯ ಸುಧಾರಣೆ, ಒಡ್ಡು, ಕಾಲುವೆ ತೋಡುವುದು, ನೀರಾವರಿ, ಸಾಂದ್ರಬೇಸಾಯ ವಿಸ್ತಾರ ಹೀಗೆ ಮಾಡಬೇಕಾದ ಸುಧಾರಣೆಗಳು ಬಹಳಷ್ಟಿವೆ. ಉದಾಹರಣೆಗೆ 40 ಕೋಟಿ ಎಕರೆ ಹೊಸ ಭೂಮಿಯನ್ನು ಸುಧಾರಿಸಿ ಲಾಭದಾಯಕವಾಗಿ ಉಳುಮೆಯಲ್ಲಿ ತರಬಹುದು. 20 ಕೋಟಿ ಎಕರೆ ಭೂಮಿಯ ಮಣ್ಣು ಅವ್ಯಾಹತವಾಗಿ ಸವೆಯುತ್ತಿದೆ. ಈ ಮಣ್ಣಿನ ಸವಕಳಿಯನ್ನು ತಡೆಗಟ್ಟುವುದಿದೆ. ಇದರಲ್ಲಿ 10 ಕೋಟಿ ಎಕರೆ ಭೂಮಿಯು ಸಾಗುವಳಿಯಲ್ಲಿದೆ. ಸದ್ಯಕ್ಕೆ 5 ಕೋಟಿ 79 ಲಕ್ಷ ಎಕರೆ ಭೂಮಿಯಲ್ಲಿ ಮಾತ್ರ ಅಂದರೆ ಶೇಕಡಾ 18ರಷ್ಟು ಭೂಮಿಯಲ್ಲಿ ಮಾತ್ರ ನೀರಾವರಿಯ ಸೌಲಭ್ಯವಿದೆ. ಕೇವಲ ದೊಡ್ಡ ಯೋಜನೆಗಳಿಂದಷ್ಟೇ ಅಲ್ಲ, ನೀರಾವರಿಯ ಬಾವಿ, ಕೆರೆ ಮುಂತಾದ ಚಿಕ್ಕ ಯೋಜನೆಗಳಿಂದ ಸುಮಾರು 20 ಕೋಟಿ ಎಕರೆ ಭೂಮಿಯಲ್ಲಿ ನೀರಾವರಿಯ ಅನುಕೂಲತೆ ಮಾಡಬಹುದು. ಈ ಎಲ್ಲ ಅಭಿವೃದ್ಧಿಯ ಕಾರ್ಯಗಳಿಗೆ ಹೇರಳವಾದ ಬಂಡವಾಳ ಬೇಕು. ಭಾರತವು ಬಂಡವಾಳದಲ್ಲಿ ಬಡದೇಶ. ಆದರೆ ಇಲ್ಲಿ ವೈಯಕ್ತಿಕ ಬೇಸಾಯದಿಂದ, ಪ್ರಕಟ ಹಾಗೂ ಅಪ್ರಕಟ ನಿರುದ್ಯೋಗದಿಂದ ಹಾಳಾಗುತ್ತಿರುವ ವಿಪುಲವಾದ ಶ್ರಮಸಂಪತ್ತಿನಿಂದ ಈ ಕೆಲಸಗಳನ್ನು ಸುಲಭವಾಗಿ ಮಾಡಬಹುದು.

ಆದರೆ ವೈಯಕ್ತಿಕ ಬೇಸಾಯದಲ್ಲಿ ವೈಯಕ್ತಿಕ ಬಂಡವಾಳ, ವೈಯಕ್ತಿಕ ಆದಾಯಗಳು ಲಾಭದಾಯಕವಾಗದ್ದರಿಂದ ಈ ಮೊದಲು ವಿವರಿಸಿದಂತೆ ಈ ಸುಧಾರಣೆಯು

ಕಾರ್ಯಗಳು ಆಗುತ್ತಿಲ್ಲ. ಸಹಕಾರಿ ಬೇಸಾಯದಿಂದ ಈ ಸುಧಾರಣೆಗಳ ಕ್ಷೇತ್ರಗಳು ವಿಶಾಲವಾಗುವುದರಿಂದ ಬಂಡವಾಳ, ಆದಾಯಗಳ ನಿಯಮವು ಸಾಮಾಜಿಕವಾಗಿ, ರಾಷ್ಟ್ರೀಯವಾಗಿ ಲಾಭದಾಯಕವಾಗುತ್ತದೆ. ಏಕೆಂದರೆ ಅದರಲ್ಲಿ ಹಾಳಾಗುತ್ತಿರುವ ದೇಶದ ನಿರುದ್ಯೋಗಿ ಶ್ರಮವು ಉತ್ಪಾದನೆ ಹೆಚ್ಚಿಸುವಲ್ಲಿ ತೊಡಗುತ್ತದೆ. ಈಗಿರುವ ಉತ್ಪಾದನೆಯ ಸಾಧನಗಳಲ್ಲಿನ ಆಂತರಿಕ ವಿರೋಧವನ್ನು ಸಹಕಾರಿ ಬೇಸಾಯವು ದೂರಮಾಡುತ್ತದೆ. ಸಹಕಾರಿ ಬೇಸಾಯದಲ್ಲಿ ಅದರಲ್ಲಿ ಒಂದುಗೂಡಿಸುವ ಜಮೀನುಗಳನ್ನೆಲ್ಲ ಒಂದು ದೊಡ್ಡ ಘಟಕವನ್ನಾಗಿ ಎಣಿಸಲಾಗುತ್ತದೆ. ಈ ವಿಸ್ತೃತ ಜಮೀನಿನಲ್ಲಿ ಮಾಡಲ್ಪಟ್ಟ ಸುಧಾರಣೆಗಳ ಹೆಚ್ಚಿನ ಲಾಭವು ಅವುಗಳಲ್ಲಿ ಕಷ್ಟಪಟ್ಟು ದುಡಿದವರಿಗೆ. ಅವರು ಒಡೆಯರಿರಲಿ ಅಥವಾ ಕೇವಲ ದುಡಿಯುವವರಲಿ, ಎಲ್ಲರಿಗೂ ಹೋಗುತ್ತದೆ. ಹೀಗೆ ಸಹಕಾರಿ ಬೇಸಾಯದಿಂದ ಇದ್ದ ಶ್ರಮಶಕ್ತಿಯನ್ನು ಪರಿಣಾಮಕಾರಿಯಾಗಿಯೂ, ಬುದ್ಧಿಸಂಗತವಾಗಿಯೂ ಸಂಘಟಿಸಲಾಗುತ್ತದೆ ಮತ್ತು ಜಮೀನಿನಲ್ಲಿ ಪರಮಾವಧಿ ಉತ್ಪತ್ತಿ ತೆಗೆಯಲು ಉತ್ಪಾದನೆಯ ಸಾಧನಗಳನ್ನೆಲ್ಲ ಬಿಡುಗಡೆ ಮಾಡಲಾಗುತ್ತದೆ; ಅದರಿಂದ ಎಲ್ಲಕ್ಕೂ ಸಮೃದ್ಧವಾದ ನಮ್ಮ ರಾಷ್ಟ್ರೀಯ ಸಂಪತ್ತಿನಿಂದ ಜನಶಕ್ತಿಯ ಭದ್ರ ತಳಹದಿಯ ಮೇಲೆ ನಮ್ಮ ಆರ್ಥಿಕ ವ್ಯವಸ್ಥೆಯನ್ನು ಸಮೃದ್ಧಿ ಹಾಗೂ ಪ್ರಗತಿಗಳನ್ನು ಯೋಜನಾಬದ್ಧವಾಗಿ ಬೆಳೆಯಿಸಲು ಸಾಧ್ಯವಾಗುತ್ತದೆ.

ಸಹಕಾರಿ ಬೇಸಾಯದಿಂದ ಭೂಸುಧಾರಣೆಗಳ ಯಶಸ್ಸು

ಭೂಸುಧಾರಣೆಯ ಕಾಯಿದೆ ಹಾಗೂ ಸಹಕಾರಿ ಬೇಸಾಯದ ಕಾರ್ಯಕ್ರಮ ಇವು ಪರಸ್ಪರವಾಗಿ ಸಹಾಯಕವಾಗಿವೆ. ಭೂಸುಧಾರಣೆ ಕಾಯಿದೆಯಿಂದ ಮಧ್ಯಸ್ಥರು ಇಲ್ಲವಾಗಿ ಉಳುವವರೇ ಭೂ ಒಡೆಯರಾಗಿದ್ದಾರೆ. ಅನೇಕ ವ್ಯವಸಾಯ ಕೂಲಿಕಾರರಿಗೆ ಭೂಮಿ ದೊರಕಿದೆ. ಇಂಥ ಅನೇಕರಿಗೆ ಬೇಸಾಯದ ಜ್ಞಾನ. ಅನುಭವಗಳು ಸಾಕಷ್ಟು ಇಲ್ಲ. ಅನೇಕ ಭೂಮಾಲೀಕರು ಜಮೀನು ಕಳೆದುಕೊಂಡು ಬೇಸಾಯದ ಶ್ರಮಿಕರಾಗಿದ್ದಾರೆ. ಇವರಲ್ಲಿ ಹಲವರಿಗೆ ಸರಿಯಾದ ಜ್ಞಾನಪರಿಶ್ರಮಗಳಿರದೆ, ಬೇಸಾಯದ ಕುಶಲತೆ ಹಾಗೂ ದುಡಿತ ಹಾಳಾಗುತ್ತಿವೆ. ಈ ವಿಷಮ ಪರಿಸ್ಥಿತಿಯಿಂದ ಜಮೀನಿನ ಮೇಲಿನ ಒತ್ತಡವೂ ಹೆಚ್ಚಾಗಿದೆಯಲ್ಲದೆ. ಬೇಸಾಯದ ಉತ್ಪತ್ತಿಗೂ ಧಕ್ಕೆ ತಗುಲುತ್ತಿದೆ. ಹಿಡುವಳಿಯ ಮಿತಿಯೂ ನಿರ್ಧರಿಸಲ್ಪಟ್ಟಿದೆ. ಇವರಲ್ಲಿ ಹಲವರ ಹಿಡುವಳಿಗಳು ಚಿಕ್ಕವು. ಈ ಪರಿಸ್ಥಿತಿಯಲ್ಲಿ ಇಂಥ ಹಿಡುವಳಿಗಳನ್ನೆಲ್ಲ ಸಂಘಟಿಸಿ ಹಳ್ಳಿಗಳಲ್ಲಿ ಹಾಳಾಗುತ್ತಿರುವ ರೈತ ಬೇಸಾಯಗಾರರ ಎಲ್ಲ ಶ್ರಮವನ್ನೂ ಒಂದುಗೂಡಿಸಿ, ಅದರ ಪೂರ್ಣ ಉಪಯೋಗ ಪಡೆದು ಬೇಸಾಯವನ್ನು ಶಾಸ್ತ್ರೀಯ ಪದ್ಧತಿಯಿಂದ ಅಭಿವೃದ್ಧಿಗೊಳಿಸಲು ಸಹಕಾರಿ ಬೇಸಾಯವೊಂದೇ ಮಾರ್ಗವು.

ಭೂಸುಧಾರಣೆಯ ಪರಿಣಾಮವಾಗಿ ಹೆಚ್ಚುವರಿ ಭೂಮಿಯನ್ನು ಹೊಸದಾಗಿ ಪಡೆದವರು, ಚಿಕ್ಕಹಿಡುವಳಿದಾರರು. ಅವರ ಬಳಿ ಬೇಸಾಯದ ಸಲಕರಣೆಯಿರುವುದಿಲ್ಲ. ಅವರಿಗೆ ಒಬ್ಬೊಬ್ಬರಿಗೇ ತುಂಡು ಸಾಗುವಳಿಗೋಸುಗ ಬೇಸಾಯದ ಎಲ್ಲ ಅನು

ಕೂಲತೆಗಳನ್ನು ಒದಗಿಸುವುದು ಸಾಧ್ಯವಾಗದು. ಈ ಸ್ಥಿತಿಯಲ್ಲಿ ಅವರು ಒಂದಿಲ್ಲೊಂದು ರೀತಿಯಿಂದ ತಮ್ಮ ಹಿಡುವಳಿಗಳನ್ನು ಶ್ರೀಮಂತ ರೈತರಿಗೆ ನಾಮಮಾತ್ರದ ಪ್ರತಿಫಲಕ್ಕಾಗಿ ಒಳಗೊಳಗೇ ಕೊಟ್ಟುಬಿಡುವರು. ಭೂಸುಧಾರಣೆಯ ಪ್ರಕಾರ ಅವರು ಕಾಗದಪತ್ರಗಳಲ್ಲಿ ಒಡೆಯ ಬೇಸಾಯಗಾರರಾಗಿ ಉಳಿಯುವರು. ಪ್ರತ್ಯಕ್ಷವಾಗಿ ಅವರು ಮತ್ತೆ ಬೇಸಾಯದ ಕೂಲಿಕಾರರೇ ಆಗಿ ಉಳಿಯುತ್ತಾರೆ. ಈ ಅನಿಷ್ಟ ಬೆಳವಣಿಗೆಯನ್ನು ತಡೆಗಟ್ಟುವುದಕ್ಕಾಗಿಯೇ ಕೆಲವು ದೇಶಗಳಲ್ಲಿ ದೇಶವ್ಯಾಪಿಯಾಗಿ ಸಹಕಾರಿ ಬೇಸಾಯದ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲಾಗಿದೆ.

ಭೂಸುಧಾರಣೆಯ ಕಾಯಿದೆಯು ಪರಿಣಾಮಕಾರಿಯಾಗಿ ಕಾರ್ಯಗತವಾಗದೇ ಇರುವುದರಿಂದಲೇ ಸಹಕಾರಿ ಬೇಸಾಯದ ಕಾರ್ಯಕ್ರಮವು ಕುಂಠಿತವಾಗಿದೆ. ಏಕೆಂದರೆ ಭೂಸುಧಾರಣೆ, ಸಹಕಾರಿ ಬೇಸಾಯಗಳ ಕಾರ್ಯಕ್ರಮಗಳಿಂದ ಪ್ರತ್ಯಕ್ಷವಾಗಿ ದುಡಿಯುವ ಬೇಸಾಯಗಾರರು ತಮ್ಮ ಕಾಲಮೇಲೆ ನಿಲ್ಲುವುದಾದರೆ ಜಮೀನುದಾರರಿಗೆ, ಶ್ರೀಮಂತ ರೈತರಿಗೆ, ಹಳ್ಳಿಯ ಸಾಹುಕಾರರಿಗೆ ಬಿಟ್ಟಿ ಆಳುಗಳು ಅಥವಾ ಅರೆಹೊಟ್ಟೆಗೆ ದುಡಿಯುವ ಆಳುಗಳು ಸಿಗದಂತಾಗುತ್ತದೆ. ಇಷ್ಟು ದಿನಗಳ ತನಕ ಒಂದಿಲ್ಲೊಂದು ಜಾಗೆಯಿಂದ ಈ ನಿರ್ಗತಿಕರನ್ನು ಸಾಲದ ಜಾಲದಲ್ಲಿ ಸಿಲುಕಿಸಿ, ತಲತಲಾಂತರಗಳವರೆಗೆ ಅವರ ಶೋಷಣೆ ಮಾಡುವುದು ಸಾಧ್ಯವಾಯಿತು. ಹಳ್ಳಿಯಲ್ಲಿಯ ಈ ಪಟ್ಟಭದ್ರಹಿತದವರೆಲ್ಲರೂ ಸಹಕಾರಿ ಬೇಸಾಯದ ವಿರುದ್ಧ ಅಪಪ್ರಚಾರವಷ್ಟೇ ಅಲ್ಲ, ಅದನ್ನು ವಿಫಲಗೊಳಿಸಲು ಉಚಿತ, ಅನುಚಿತ ಎಲ್ಲ ಉಪಾಯಗಳನ್ನು ಕೈಕೊಂಡರು. ಬೇಸಾಯ ಸಂಘಗಳಲ್ಲಿ ಸೇರಿದ ಬೇಸಾಯಗಾರರಿಗೆ ಕಡ, ಸಾಲ, ದುಡಿಮೆ ಎಲ್ಲವನ್ನೂ ಅವರು ನಿಲ್ಲಿಸಿದರು. ತಮ್ಮ ಸಾಲಕ್ಕಾಗಿ ಸಾಹುಕಾರರು ಸಹಕಾರಿ ಬೇಸಾಯಗಾರರ ಎತ್ತುಗಳನ್ನು ಹಿಡಿದೊಯ್ದರು. ಬೇಸಾಯಗಾರರನ್ನೂ ಎಳೆದೊಯ್ಯಲು ಹಿಂದೆಮುಂದೆ ನೋಡಲಿಲ್ಲ. ಇನ್ನೂ ಕೆಲವು ಜಮೀನುದಾರರು ಮತ್ತು ಶ್ರೀಮಂತ ಬೇಸಾಯಗಾರರು ಬೇಸಾಯ ಸಂಘಗಳಲ್ಲಿ ಸೇರಿಕೊಂಡು ಬಡ ಬೇಸಾಯಗಾರರ ಹಾಗೂ ಕೂಲಿಗಾರರ ಶೋಷಣೆ ಮಾಡಿ, ತಮ್ಮ ಸ್ವಾರ್ಥವನ್ನೇ ಸಾಧಿಸಿದ್ದಾರೆ. ಕೆಲವೆಡೆ ವಿಷಮ ಹಿಡುವಳಿಗಾರರು ತಮ್ಮ ತಮ್ಮ ಸ್ವಾರ್ಥಗಳ ತಾಕಲಾಟದಿಂದ ಬೇಸಾಯ ಸಂಘವನ್ನೇ ಮುರಿದು ಬಿಟ್ಟಿರುತ್ತಾರೆ. ಭೂಸುಧಾರಣೆ ಕಾಯಿದೆಯು ಸರಿಯಾಗಿ ಕಾರ್ಯಗತವಾದರೆ ಹಿಡುವಳಿಗಳ ವಿಷಮತೆಯು ಕಡಮೆಯಾಗಿ ಹೆಚ್ಚುಕಡಮೆ ಸಮಾನ ಹಿಡುವಳಿಗಳುಳ್ಳ ಚಿಕ್ಕ ಬೇಸಾಯಗಾರರು ತಮ್ಮದೇ ಬೇಸಾಯ ಸಂಘಗಳನ್ನು ಸ್ಥಾಪಿಸಿಕೊಂಡು ಅವುಗಳನ್ನು ಯಶಸ್ವಿಯಾಗಿ ನಡೆಸಿ ತಮ್ಮ ಉನ್ನತಿಯನ್ನು ಸಾಧಿಸಲು ಅನುಕೂಲವಾಗುವುದು.

ಸಹಕಾರಿ ಬೇಸಾಯದಿಂದ ಅನುಭವ ಹಾಗೂ ಕುಶಲತೆಗಳ ಸಂಘಟನೆ

ಸಹಕಾರಿ ಬೇಸಾಯದಿಂದ ಭೂಮಿ, ಶ್ರಮ ಸಾಧನಗಳನ್ನಷ್ಟೇ ಅಲ್ಲ, ಬೇಸಾಯದ ಅನುಭವ ಕುಶಲತೆಗಳನ್ನು ಒಂದುಗೂಡಿಸಿ ಹೆಚ್ಚು ಯೋಜನಾಬದ್ಧವಾಗಿ ಉಪಯೋಗಿ

ಸುವುದು ಸಾಧ್ಯವಾಗುತ್ತದೆ. ಸದ್ಯದ ವೈಯಕ್ತಿಕ ತುಂಡು ಬೇಸಾಯದಲ್ಲಿ ಅದು ಸಾಧಿಸದೆ ಇವೆರಡೂ ಉತ್ಪಾದನೆಯ ಶಕ್ತಿಗಳೂ ಸಹ ಹಾಳಾಗುತ್ತಿವೆ. ನೀರಾವರಿ ಹೊಸದಾಗಿ ಬಂದ ಪ್ರದೇಶದಲ್ಲಿ ಸಾಂದ್ರಬೇಸಾಯ ಕೈಕೊಳ್ಳಲು ಅಗತ್ಯವಿದ್ದ ಶಾಸ್ತ್ರೀಯ ಕುಶಲತೆ ಅನುಭವಗಳು ಎಲ್ಲ ಬೇಸಾಯಗಾರರಲ್ಲಿ ಸಮನಾಗಿ ಇರುವುದಿಲ್ಲ. ಇಂಥ ಕುಶಲತೆ ಇದ್ದ ಕೆಲವೇ ಬೇಸಾಯಗಾರರು ತಮ್ಮ ತುಂಡು ಭೂಮಿಗಳಲ್ಲಿ ತಮ್ಮ ಕುಶಲತೆಯನ್ನು ಪೂರ್ಣ ಉಪಯೋಗಿಸುವುದು ಸಾಧ್ಯವಾಗದೆ ಮಿಡುಕುತ್ತಾರೆ. ಸಹಕಾರಿ ಬೇಸಾಯದಲ್ಲಿ ಅನುಭವಿ ಹಾಗೂ ಅನನುಭವಿಗಳಿಬ್ಬರೂ ಸೇರಬಹುದು. ಅವರು ಕೂಡಿ ಕೆಲಸ ಮಾಡುವುದರಿಂದ ಬೇಸಾಯಗಾರ ಬಂಧುಗಳ ಕಲ್ಯಾಣವನ್ನು ಸಾಧಿಸುವುದು ಸಾಧ್ಯವಾಗುತ್ತದೆ. ಇದರಿಂದ ಅವರು ಇಡಿಯ ಸಮಾಜಕ್ಕಾಗಿ, ದೇಶಕ್ಕಾಗಿ ಉತ್ಪತ್ತಿಯನ್ನು ಹೆಚ್ಚಿಸಲು ತಮ್ಮ ಸೇವೆ ಸಲ್ಲಿಸಿದಂತಾಗುತ್ತದೆ. ವೈಯಕ್ತಿಕ ತುಂಡು ಬೇಸಾಯದಲ್ಲಿ ಭೂಮಿಯಷ್ಟೇ ಅಲ್ಲ ಬೇಸಾಯಗಾರರ ಮನಸ್ಸು, ಹೃದಯ, ಸಾಧನಶಕ್ತಿ ಎಲ್ಲವೂ ಹರಿದು ಹಂಚಿ ಹಾಳಾಗುತ್ತವೆ. ಸಹಕಾರಿ ಬೇಸಾಯದಿಂದ ಅವೆಲ್ಲ ಒಂದುಗೂಡಿ ರಾಷ್ಟ್ರದ ಸಮೃದ್ಧಿಗೆ ಅಣಿಯಾಗುತ್ತವೆ.

ಇತ್ತೀಚೆಗೆ ಬೇಸಾಯದ ಪದ್ಧತಿಗಳಲ್ಲಿ ವೈಜ್ಞಾನಿಕ ಕ್ರಾಂತಿಯೇ ಆಗಿದೆ. ಹೆಚ್ಚು ಇಳುವರಿಯ ಬೆಳೆಗಳ ಉತ್ಪಾದನೆ, ರಾಸಾಯನಿಕ ಗೊಬ್ಬರಗಳ ಪ್ರಯೋಗ, ಕ್ರಿಮಿ ನಾಶಕಗಳ ಪ್ರಯೋಗ, ಬಹುಬೆಳೆಗಳ ಪ್ರಯೋಗ, ಮಿಶ್ರಬೇಸಾಯ ಇವೆಲ್ಲ ಕಾರ್ಯ ಕ್ರಮಗಳು ಬೇಸಾಯದ ಉತ್ಪತ್ತಿಯನ್ನು ಮೊದಲಿಗಿಂತ ನಾಲ್ಕರಷ್ಟು, ಐದರಷ್ಟು ಹೆಚ್ಚಿಸಿ 'ಹಸುರುಕ್ರಾಂತಿ'ಯನ್ನು ಸಾಧಿಸಿವೆ. ಅದರಿಂದ ಬೇಸಾಯವು ಈಗ ಕೇವಲ ಉಪಜೀವನದ ಮಾರ್ಗವಾಗಿ ಉಳಿದಿರದೆ 'ವ್ಯಾಪಾರಿಕ ಲಾಭದಾಯಕ ಬೇಸಾಯ' ವಾಗಿದೆ. ಆದರೆ ತಜ್ಞರು ಈ ಹಸುರುಕ್ರಾಂತಿಯ ಸಮೀಕ್ಷೆ ನಡೆಸಿ ಇದರಿಂದ ಬೇಸಾಯಗಾರರಲ್ಲಿಯ ವಿಷಮತೆ ಮತ್ತಷ್ಟು ಹೆಚ್ಚಿ ಶ್ರೀಮಂತ ಬೇಸಾಯಗಾರರು ಹೆಚ್ಚು ಶ್ರೀಮಂತರಾಗಿ ಬಡ ಬೇಸಾಯಗಾರರು ಹೆಚ್ಚು ಬಡವರಾಗಿದ್ದಾರೆ ಎಂಬ ನಿಷ್ಕರ್ಷೆ ತೆಗೆದಿದ್ದಾರೆ. ಬಡ ಬೇಸಾಯಗಾರರು ಕೈಲಾಗದ್ದಕ್ಕೆ ತಮ್ಮ ಉಪಜೀವನ ಹೇಗೋ ಸಾಗಿಸಲು ತಮ್ಮ ತುಂಡು ಭೂಮಿಗಳನ್ನು ಶ್ರೀಮಂತ ಬೇಸಾಯಗಾರರಿಗೆ ಸಾಗುವಳಿಗಾಗಿ ಕೊಟ್ಟಿದ್ದಾರೆ. ಶ್ರೀಮಂತ ಬೇಸಾಯಗಾರರು ಇಂಥ ಬಡವರ ತುಂಡು ಭೂಮಿಗಳಲ್ಲಿ ಹಸುರುಕ್ರಾಂತಿಯನ್ನು ಸಾಧಿಸಿ ತಮ್ಮ ಸಮೃದ್ಧಿಯನ್ನು ಹೆಚ್ಚಿಸಿದ್ದೂ ಉಂಟು.

ಈ ಹಸುರುಕ್ರಾಂತಿಯು ವೈಜ್ಞಾನಿಕ ಲಾಭ ಪಡೆಯದ್ದಕ್ಕೆ ಸಾಧನಗಳ ಅಭಾವ ವೊಂದೇ ಕಾರಣವಲ್ಲ, ಬಡ ಬೇಸಾಯಗಾರರಲ್ಲಿಯ ಕುಶಲತೆಯ ಅಭಾವವೂ ಮಹತ್ವದ ಕಾರಣವಾಗಿದೆ. ಇಂಥ ನಿರಕ್ಷರ ಹಾಗೂ ಅಜ್ಞ ಕೋಟಿಗಟ್ಟಲೆ ಬೇಸಾಯಗಾರರಿಗೆ ಕುಶಲತೆಯನ್ನು ವೈಯಕ್ತಿಕವಾಗಿ ಕಲಿಸುವುದು ಅಥವಾ ಅವರಿಗೆ ಹೆಜ್ಜೆಹೆಜ್ಜೆಗೆ ತಾಂತ್ರಿಕ ಮಾರ್ಗದರ್ಶನ ಮಾಡುವುದು ದುಃಸಾಧ್ಯ. ಇಂಥ ಬೇಸಾಯಗಾರರನ್ನು ಸಹಕಾರಿ ಬೇಸಾಯ ಸಂಘಗಳಲ್ಲಿ ಸಂಘಟಿಸಿದ ಬಳಿಕ ಅವುಗಳಲ್ಲಿ ಮುಂದಾಳುಗಳಾಗಿರುವ

ತಕ್ಕಮಟ್ಟಿಗೆ ತಿಳಿವಳಿಕೆ, ವಿದ್ಯೆ, ಪ್ರಗತಿಶೀಲ ದೃಷ್ಟಿಕೋನ ಇರುವ ತರುಣರಿಗೆ ತಕ್ಕ ತರಬೇತು ಕೊಟ್ಟು ಈ ಎಲ್ಲ ಬೇಸಾಯಗಾರರಿಗೆ ಈ ತರುಣರ ಮುಖಾಂತರ ವೈಜ್ಞಾನಿಕ ಬೇಸಾಯದ ಕುಶಲತೆಯನ್ನು ಸುಲಭವಾಗಿ ಒದಗಿಸಬಹುದು.

ನಿರ್ಗತಿಕರಿಗೆ ಸಹಕಾರಿ ಬೇಸಾಯದಿಂದ ಪತ್ತಿನ ಮಾರ್ಗ

1951ರಲ್ಲಿ ಭಾರತದ ಬೇಸಾಯಗಾರರ ಒಟ್ಟು ಸಾಲದ ಹೊರೆಯು, 1951ರ ಗ್ರಾಮಾಂತರ ಪತ್ತಿನ ಸಮೀಕ್ಷೆಯ ಪ್ರಕಾರ, 750 ಕೋಟಿ ರೂಪಾಯಿಗಳಾಗಿ ಇತ್ತು. ಈ ರಕಮಿನಲ್ಲಿ 45 ಕೋಟಿ ರೂಪಾಯಿಗಳಷ್ಟು ಮಾತ್ರ ಸರಕಾರದಿಂದ ಹಾಗೂ ಸಹಕಾರಿ ಸಂಸ್ಥೆಗಳಿಂದ ದೊರಕಿತ್ತು. ಅಂದರೆ ಶೇಕಡಾ 6.2ರಷ್ಟು ಮಾತ್ರ ಸರಕಾರ ದಿಂದ ಹಾಗೂ ಸಹಕಾರಿ ಸಂಸ್ಥೆಗಳಿಂದ ಸಾಲ ದೊರಕಿದ್ದು, ಸಾಹುಕಾರರಿಂದ, ದಲಾಲ ರಿಂದ ಶೇಕಡಾ 93.8ರಷ್ಟು ಸಾಲ ದೊರಕಿತ್ತು. 1954ರಲ್ಲಿ ಗ್ರಾಮಾಂತರ ಪತ್ತಿನ ಸಮೀಕ್ಷೆಯ ಪ್ರಕಾರ ಇನ್ನೂ ಹೆಚ್ಚಾದ ಸಾಲದ ರಕಮಿನಲ್ಲಿ ಶೇಕಡಾ 11.2ರಷ್ಟು ಸರಕಾರದಿಂದ ಹಾಗೂ ಸಹಕಾರಿ ಸಂಸ್ಥೆಗಳಿಂದ ಬೇಸಾಯಗಾರರಿಗೆ ದೊರಕಿದ್ದು ಶೇಕಡಾ 88.8ರಷ್ಟು ಸಾಲವನ್ನು ದೊರಕಿಸಲು ಬಡ ಬೇಸಾಯಗಾರರು ಖಾಸಗೀ ಸಾಹುಕಾರರ ಹಾಗೂ ದಲಾಲರ ಮೊರೆಯನ್ನೇ ಹೋಗಬೇಕಾಯಿತು. ಈಗಂತೂ ಬೆಲೆಗಳು ಹೆಚ್ಚಿಗೆ ಏರಿದ್ದು ಬಡಬೇಸಾಯಗಾರರಿಗೆ ಸಾಲದ ಅವಶ್ಯಕತೆಯು ಬೇಸಾಯ ಕ್ಕಷ್ಟೇ ಅಲ್ಲ, ಅವರ ಉಪಜೀವನಕ್ಕೆ ಸಹ ಹೆಚ್ಚಿದೆ. ಸರಕಾರದಿಂದ ಹಾಗೂ ಸಹಕಾರಿ ಸಂಸ್ಥೆಗಳಿಂದ ಎಲ್ಲ ಉದ್ದೇಶಗಳಿಗಾಗಿ ಸಾಲವು ಮೇಲಿನ ಸಮೀಕ್ಷೆಯ ಪ್ರಕಾರ ಶೇಕಡಾ 4.6ಕ್ಕಿಂತ ಹೆಚ್ಚಿಗೆ ದೊರಕಿಲ್ಲ. ಅಗತ್ಯವಿದ್ದ ಹೆಚ್ಚಿನ ಸಾಲವು ಬಡಬೇಸಾಯಗಾರರಿಗೆ ಖಾಸಗೀ ಸಾಹುಕಾರರಿಂದಲೂ ಈಗ ದೊರಕುವಂತಿಲ್ಲ. ಹೀಗಾಗಿ ನಿರ್ಗತಿಕ ಚಿಕ್ಕ ಬೇಸಾಯಗಾರರು ಇನ್ನೂ ಹೆಚ್ಚಿನ ಪೇಚಾಟದಲ್ಲಿ ಬಿದ್ದು ಹೀನಸ್ಥಿತಿಗೀಡಾಗುತ್ತಿದ್ದಾರೆ. ಈ ಚಿಕ್ಕ ಬೇಸಾಯಗಾರರಿಗೆ, ಅವರ ಬೇಸಾಯವನ್ನಾದರೂ ಅಚ್ಚುಕಟ್ಟಾಗಿ ಸಾಗಿಸಲು ಸಾಕಷ್ಟು ಸಾಲ ಒದಗಿಸಲು ಸರಕಾರವು ಅನೇಕ ಉಪಾಯಗಳನ್ನು ಯೋಚಿಸುತ್ತಿದೆ. ಅನಾರ್ಥಿಕ ತುಂಡುಹಿಡುವಳಿಗಳ ಬೇಸಾಯವನ್ನು ಸುಧಾರಿಸಲು ಬೇರೆ ಬೇರೆಯಾಗಿ ಸಾಕಷ್ಟು ಸಾಲ ಒದಗಿಸುವುದೆಂದರೆ ಆ ಹಿಡುವಳಿದಾರರ ಮೇಲೂ ಹೊರಲಾರದ ಹೊರೆಯನ್ನು ಹೊರೆಸಿದಂತೆಯೇ. ಒಮ್ಮೆ ಅವರು ಸಾಲದಲ್ಲಿ ಸಿಲುಕಿದರೆಂದರೆ ಕೊನೆವರೆಗೂ ಅವರು ಸಾಲದಲ್ಲಿ ಹೆಚ್ಚೆಚ್ಚು ಮುಳುಗುತ್ತ ಹೋಗಬೇಕಾಗುತ್ತದೆ. ಏಕೆಂದರೆ ಅವರು ತುಂಡು ಹಿಡುವಳಿಯಲ್ಲಿ ತೊಡಗಿಸುವ ಬಂಡವಾಳವಾದರೂ ಭಾರಿಯಾಗಿ, ಅದರ ಪ್ರಮಾಣಕ್ಕೆ ತೀರ ಕಡಮೆ ಆದಾಯವು ಅವರಿಗೆ ದೊರಕುವುದು. ಆದ್ದರಿಂದ ಪಡೆದ ಸಾಲವನ್ನು ಅವರು ತೀರಿಸುವುದು ಸಾಧ್ಯವೇ ಆಗುವುದಿಲ್ಲ. ಇಂಥ ಹಿಡುವಳಿಗಳ ಮೇಲೆ ಸಾಕಷ್ಟು ಬಂಡವಾಳವನ್ನು ಒದಗಿಸಲು ಸಾಲದ ರೂಪದಲ್ಲಿ ತಂದು ಒದಗಿಸುತ್ತ ಹೋದರೆ ಅದು ದೇಶದ ಮೇಲೂ ಹೊರಲಾರದ ಹೊರೆ ಆದೀತು.

ಜಮೀನು, ಬಂಡವಾಳು ಎರಡರ ಕೊರತೆಯೂ ಭಾರತದಲ್ಲಿದ್ದರೂ ವ್ಯೆಯಕ್ತಿಕ ತುಂಡು ಬೇಸಾಯದಲ್ಲಿ ಇವೆರಡೂ ವಿಪುಲವಾಗಿ ಹಾಳಾಗುತ್ತಿವೆ. ಅವುಗಳ ಪೂರ್ಣ ಉಪಯೋಗವಾಗದೆ ಭಾರತೀಯ ರೈತರು ಎತ್ತು, ಬೇಸಾಯ ಸಲಕರಣೆ ಮತ್ತು ಶ್ರಮ ಎಲ್ಲವನ್ನೂ ಹಾಳುಮಾಡುತ್ತಿದ್ದಾರೆ. ಇಂಥ ಸ್ಥಿತಿಯಲ್ಲಿ ಅವರ ತುಂಡು ಬೇಸಾಯಕ್ಕೆ ಸರಕಾರ ಮತ್ತು ಸೇವಾ ಸಹಕಾರಿ ಸಂಘಗಳು ಪೂರ್ಣ ಸಹಾಯ ಒದಗಿಸುವ ಸಾಹಸ ಮಾಡಿದರೂ ಬೇಸಾಯ ಬಂಡವಾಳದ ನಷ್ಟವು ಹೆಚ್ಚೇ ಆಗುತ್ತ ಹೋಗುತ್ತದೆ. ಬೇಸಾಯಗಾರರ ಸಾಲದ ಹೊರೆಯೂ ಹೆಚ್ಚುತ್ತಲೇ ಹೋಗುತ್ತದೆ.

ಸಹಕಾರಿ ತಳಹದಿಯ ಮೇಲೆ ಬೇಸಾಯುವನ್ನು ಪುನಃ ಸಂಘಟಿಸಿದರೆ ಬೇಸಾಯ ಬಂಡವಾಳದ ಈ ಅಪಾರ ನಷ್ಟವು ತಡೆಗಟ್ಟುವುದು. ಅದರಿಂದ ಉಳಿತಾಯವಾಗಿ ಬೇಸಾಯದ ತನ್ನದೇ ಬಂಡವಾಳವು ಕೂಡಿ ಬೀಳುವುದು. ಈಗ ಇದ್ದ ಬೇಸಾಯ ಸಲಕರಣೆಗಳನ್ನೆಲ್ಲ ಸಹಕಾರಿ ಬೇಸಾಯುವು ಹೆಚ್ಚು ಪರಿಣಾಮಕಾರಿಯಾಗಿಯೂ, ಫಲದಾಯಕವಾಗಿಯೂ ಉಪಯೋಗಿಸಿದರೆ ಬೇಸಾಯಕ್ಕಾಗಿ ಹೊರಗಿನ ಸಾಲದ ಅವಶ್ಯಕತೆಯನ್ನು ಕಡಮೆ ಮಾಡುವುದು ಮತ್ತು ಬೇಸಾಯಕ್ಕೆ ಅಗತ್ಯವಿದ್ದ ಹೊರಗಿನ ಹಣದ ಬಂಡವಾಳವು ಸಹಕಾರಿ ಬೇಸಾಯಗಾರರಿಗೆ ಸುಲಭವಾಗಿ ದೊರಕಬಲ್ಲದು.

ಪಡಭೂಮಿಗಳ ಸಾಗುವಳಿಗಾಗಿ ಹಾಗೂ ನಿರಾಧಾರರನ್ನು ನೆಲೆಯಿಸಲು ಸಹಕಾರಿ ಬೇಸಾಯ

ಉಪ್ಪಾಳ ಸಮಿತಿಯವರ ಶಿಫಾರಸಿನ ಪ್ರಕಾರ ಭಾರತದಲ್ಲಿ ಅದರಲ್ಲೂ ಕರ್ನಾಟಕ ರಾಜ್ಯದಲ್ಲಿ ವಿಸ್ತಾರವಾದ ಸಹಕಾರಿ ಪಡಭೂಮಿಗಳು ಬಿದ್ದಿವೆ. 1959ರಲ್ಲಿ ಪ್ರಕಟಿಸಲ್ಪಟ್ಟ 'ಭಾರತದ ಕೃಷಿ ಅಂಕಿಸಂಖ್ಯೆಗಳು' ಎಂಬ ಪುಸ್ತಕದ ಪ್ರಕಾರ 9.22 ಕೋಟಿ ಎಕರೆ ಭೂಮಿಯು ಅಂದರೆ ಒಟ್ಟು ಭೂಮಿಯ ಶೇಕಡಾ 13.6ರಷ್ಟು ಭೂಮಿಯು ಪಡಭೂಮಿಯು ಇದೆ. ಇದರಲ್ಲಿ 5–30 ಕೋಟಿ ಎಕರೆ ಭೂಮಿಯನ್ನು ಅಂದರೆ ಒಟ್ಟು ಭೂಮಿಯ ಶೇಕಡಾ 2–3ರಷ್ಟು ಭೂಮಿಯನ್ನು ಲಾಭದಾಯಕವಾಗಿ ಸಾಗುವಳಿಯಲ್ಲಿ ತರುವುದು ಸಾಧ್ಯವಿದೆ. ಭೂಮಿ, ಆಹಾರಗಳ ಇಂಥ ಕೊರತೆಯ ಕಾಲದಲ್ಲಿ ಈ ಪಡಭೂಮಿಯನ್ನು ಸಾಗುಮಾಡುವುದು ಅಗತ್ಯವೆಂಬ ಧೋರಣೆಯನ್ನು ಸರಕಾರವು ಕೈಕೊಂಡಿದೆ. ಭೂಮಿ ಇಲ್ಲದ ನಿರಾಧಾರರ ಸಂಖ್ಯೆಯೂ ಬೇಕಾದಷ್ಟಿದೆ. ಅಂಥವರನ್ನೇ ಸರಕಾರಿ ಪಡಭೂಮಿಗಳಲ್ಲಿ ನೆಲಸುವ ಪ್ರಯತ್ನವು ನಡೆದೇ ಇದೆ. ಮೊದಲೇ ಇಂಥ ಪಡ ಹಾಗೂ ಕಾಡುಭೂಮಿಗಳ ಸುಧಾರಣೆಯು ತೀರ ವೆಚ್ಚದ ಕೆಲಸ. ಅವರಲ್ಲಿ ಅವನ್ನು ಪಡೆಯುತ್ತಿರುವ ಭೂಹೀನರೂ, ಸಾಧನಹೀನರೂ ಆದವರಿಗೆ ವ್ಯೆಯಕ್ತಿಕವಾಗಿ ಈ ಕಾಡುಭೂಮಿಗಳನ್ನು ಸುಧಾರಿಸುವುದು ಸಾಧ್ಯವಾಗುವುದಿಲ್ಲ. ಬೇಸಾಯ ಸಂಘಗಳಲ್ಲಿ ಅವರು ಸೇರಿದರೆ ಮಾತ್ರ ಅವರ ಸಾಮೂಹಿಕ ಶ್ರಮದಿಂದ ಅಂಥ ಪಡಭೂಮಿಗಳನ್ನು ಸುಧಾರಿಸಿಕೊಂಡು ತಮ್ಮ ಉನ್ನತಿಯನ್ನು ಮಾಡಲು ಅವರಿಗೆ ಸಾಧ್ಯವಾಗುವುದು. ಇದರಿಂದ ಬಹುಮಟ್ಟಿಗೆ ಭೂಹೀನರಾದ ಶ್ರಮಿಕರ ಉದ್ಯೋಗದ ಸಮಸ್ಯೆಯನ್ನು ಬಿಡಿಸುವಲ್ಲಿ ನೆರವಾಗುತ್ತದೆ.

ಹರಿಜನರನ್ನು, ಗಿರಿಜನರನ್ನು ನೆಲೆಸುವ ಉದ್ದೇಶದಿಂದ ಈಗಾಗಲೇ ಕರ್ನಾಟಕ ರಾಜ್ಯದಲ್ಲಿ 127 ಕೃಷಿವಸತಿಗಳನ್ನು 60 ರೈತ ಪದ್ಧತಿಯ ಬೇಸಾಯ ಸಂಘಗಳನ್ನು ಸ್ಥಾಪಿಸಲಾಗಿತ್ತು. ಅವಕ್ಕೆ ಕೆಲವೊಂದು ಹಣಕಾಸಿನ ಸಹಾಯವನ್ನು ಒದಗಿಸಲಾಗಿತ್ತು. ಆದರೆ ಅಲ್ಲಿಯ ಸದಸ್ಯರು ಕೈಕೊಂಡಿದ್ದ ವ್ಯಯಕ್ತಿಕ ಬೇಸಾಯದಲ್ಲಿ ಅವರ ಇದ್ದ ಅಲ್ಪ ಸ್ವಲ್ಪ ಸಾಧನಗಳೂ, ಶ್ರಮವೂ ಭಿನ್ನಭಿನ್ನವಾಗಿ ಅವುಗಳ ಪೂರ್ಣ ಉಪಯೋಗ ವಾಗದಾಯಿತು. ಹೀಗಾಗಿ ಈ ಸಂಸ್ಥೆಗಳಲ್ಲಿ ಭೂಮಿಯ ಪೂರ್ಣ ಅಭಿವೃದ್ಧಿಯೂ ಆಗಲಿಲ್ಲ; ನಿರೀಕ್ಷಿಸಿದಷ್ಟು ಉತ್ಪತ್ತಿಯೂ ಹೆಚ್ಚಲಿಲ್ಲ; ಜನರ ಕಂಗಾಲತನವೂ ದೂರಾಗ ಲಿಲ್ಲ. ಅಲ್ಲಿಯ ಜನರಿಗೆ ಮನವೊಲಿಸಿ ಅವರ ಇದ್ದ ಜಮೀನು, ಇದ್ದ ಅಲ್ಪ ಸಾಧನ ಗಳನ್ನು ಒಂದುಗೂಡಿಸಿ ಅವರ ಸಾಮೂಹಿಕ ಬೇಸಾಯ ಸಂಘಗಳನ್ನು ಮಾಡಿದ್ದಾದರೆ ಅವರ ಜಮೀನುಗಳು ಹೆಚ್ಚಿನ ಅಭಿವೃದ್ಧಿಯಾಗಿ, ಉತ್ಪತ್ತಿಯನ್ನು ಸಮಾಧಾನಕರವಾಗಿ ಹೆಚ್ಚಿಸಲು ಸಾಧ್ಯವಾಗುವುದು. ಕೋಳಿ, ಕುರಿ, ಹಂದಿ, ದನ ಮುಂತಾದುವುಗಳನ್ನು ಸಾಕಿ ಅವರ ಒಟ್ಟು ಆದಾಯವನ್ನು ಹೆಚ್ಚಿಸಲು ಸಾಧ್ಯವಾಗುವುದು. ಹೀಗೆ ಆ ಬಡ ಜನರನ್ನು ಸ್ಥಿರವಾಗಿ ನೆಲೆಸಿ ಅವರ ಉನ್ನತಿಯನ್ನು ಸಾಧಿಸಿದಂತಾಗುತ್ತದೆ.

ಸಹಕಾರಿ ಬೇಸಾಯದಿಂದ ದನಗಳ ಸಮೃದ್ಧಿ

ಬೇಸಾಯ ಸಾಗಿಸಲಿಕ್ಕೂ, ಹೈನಕ್ಕಾಗಿಯೂ ಬೇಸಾಯಗಾರರಿಗೆ ಪಶುಸಂಪತ್ತಿನ ಮಹತ್ವವು ಅಷ್ಟಿಷ್ಟಲ್ಲ. ಬೇಸಾಯದ ಸಮೃದ್ಧಿಗೆ ಅಗತ್ಯವಿದ್ದ ಗೊಬ್ಬರವೂ ಬೇಸಾಯ ಗಾರರಿಗೆ ದನಗಳಿಂದಲೇ ದೊರಕುತ್ತದೆ. ಆದರೆ ಚಿಕ್ಕ ಬೇಸಾಯಗಾರರು ಇಂಥ ದನಕರುಗಳನ್ನು ಕೊಳ್ಳಲು ಅಥವಾ ಕೊಂಡರೆ ಸಾಕಲು ಸಾಧ್ಯವಾಗುವುದಿಲ್ಲ. ಅವು ಗಳಿಗೆ ಮೇಯಿಸಲು ಅವರ ಬಳಿ ಹುಲ್ಲುಗಾವಲೂ ಇರುವುದಿಲ್ಲ. ಹೀಗಾಗಿ ಇದ್ದ ಕೆಲವು ದನಗಳು ಬಹಳ ಹೀನಸ್ಥಿತಿಯಲ್ಲಿರುತ್ತವೆ. ಮೇಲಿಂದ ಮೇಲೆ ಅವು ಪಿಡುಗು ಗಳಿಗೆ ತುತ್ತಾಗುತ್ತವೆ. ಇದರಿಂದಂತೂ ಚಿಕ್ಕ ಬೇಸಾಯಗಾರರಿಗೆ ಅಪಾರ ಹಾನಿ ಯಾಗುತ್ತದೆ. ಸಹಕಾರಿ ಬೇಸಾಯದಿಂದ ಸಂಘಟಿತರಾಗಿ ದನಗಳನ್ನು ಸಾಕಲು, ಚೆನ್ನಾಗಿ ಮೇಯಿಸಲು ಮತ್ತು ಅವುಗಳ ತಳಿ ಸುಧಾರಿಸಲು ಅವರಿಗೆ ಸಾಧ್ಯವಾಗು ವುದು.

ಸಹಕಾರಿ ಬೇಸಾಯದಿಂದ ಗ್ರಾಮಸುಧಾರಣೆ

ಇಂದು ಭಾರತದ ಹಳ್ಳಿಗಳು ಕೊಳಚೆ ಗುಂಡಿಗಳಾಗಿವೆ. ಮಳೆಗಾಲದಲ್ಲಿ ಸರಿಯಾದ ರಸ್ತೆಗಳಿಲ್ಲದ್ದರಿಂದ ಓಡಾಡಲು ಬರುವಂತಿರುವುದಿಲ್ಲ. ಇವೆಲ್ಲ ಪರಿಸ್ಥಿತಿ ಗಳನ್ನು ಹೋಗಲಾಡಿಸಿ ಹಳ್ಳಿಗಳಲ್ಲಿ ಎಲ್ಲ ಸೌಕರ್ಯಗಳನ್ನು ಮಾಡಿಕೊಡಲು ಸರಕಾರವು ಒಂದೇಸಮನೆ ಹೆಣಗುತ್ತಿದೆ. ಆದರೆ ಈ ಗ್ರಾಮಾಂತರದಲ್ಲಿಯ ಸಾಮಾಜಿಕ ಸೌಕರ್ಯಗಳ ಅಪಾರವಾದ ಕೆಲಸವನ್ನು ಹೊರಗಿನಿಂದ ಸಾಲತಂದು ಪೂರ್ಣಮಾಡಲು ಸಾಧ್ಯವಿಲ್ಲ. ಹಳ್ಳಿಗಳಲ್ಲಿ ಹಾಳಾಗುತ್ತಿರುವ ಜನಶಕ್ತಿಯನ್ನು ಸಂಘಟಿಸಿ ಇದನ್ನೇ ಮಾಡಬೇಕಾಗಿದೆ. ಆದರೆ ಇಂಥ ಕೆಲಸಕ್ಕೆ ತಮ್ಮ ಎಡಬಿಡದ ಕೆಲಸಗಳಲ್ಲಿ ಬಿಡುವೇ

ಇಲ್ಲವೆಂದು ಹಳ್ಳಿಗರು ಗೊಣಗುಟ್ಟುತ್ತಾರೆ. ಅಲ್ಲದೆ ಇವತ್ತು ಅವರಿಗೆ ಹೊಟ್ಟೆ ತುಂಬ ಅನ್ನ, ಮೈಮುಚ್ಚಲು ಸಾಕಷ್ಟು ಬಟ್ಟೆಯೂ ಇಲ್ಲದಿರುವಾಗ ಸಾಮಾಜಿಕ ಸೌಕರ್ಯಗಳ ಕೆಲಸವನ್ನು ತಮ್ಮ ಶ್ರಮದಾನದಿಂದ ಕೈಕೊಳ್ಳಲು ಅವರಿಗೆ ಉತ್ಸಾಹವೂ ಇಲ್ಲದಾಗಿದೆ.

ಸಹಕಾರಿ ಬೇಸಾಯದಿಂದ ಹಳ್ಳಿಗರಿಗೆ ಕೈತುಂಬ ದಕ್ಷ, ಲಾಭದಾಯಕ ಕೆಲಸವು ದೊರಕುವುದು. ಸಾಮಾಜಿಕ ಕೆಲಸಗಳನ್ನು ಮಾಡಲು ಅಗತ್ಯವಿದ್ದ ಸಾಮೂಹಿಕ ಭಾವನೆಯೂ ಅವರಲ್ಲಿ ಬೆಳೆಯುವುದು. ಬೇಸಾಯದ ಕೆಲಸಗಳನ್ನು ಸುಧಾರಿಸಿದ ಸಾಧನಗಳಿಂದ ಬೇಗ ಪೂರ್ಣಗೊಳಿಸುವುದರಿಂದ ಅವರಿಗೆ ಬೇರೆ ಸಾಮಾಜಿಕ ಕೆಲಸಗಳನ್ನು ಮಾಡಲು ಬಿಡುವು ದೊರಕುವುದು. ಅಲ್ಲದೆ ಹೆಚ್ಚಿನ ಆದಾಯದಿಂದ ಅವರ ಅನ್ನಬಟ್ಟೆಗಳ ಚಿಂತೆಯಾದರೂ ದೂರಾಗಿರುವುದರಿಂದ ಹಳ್ಳಿಯಲ್ಲಿ ಸಾಮಾಜಿಕ ಸೌಕರ್ಯಗಳನ್ನು, ಉದ್ಯೋಗಗಳನ್ನು ಬೆಳಸಲು, ಅವರಲ್ಲಿ ಹುಮ್ಮಸ್ಸು ತಾನಾಗಿಯೇ ಬೆಳೆಯುವುದು. ಹೀಗಾಗಿ ಸಹಕಾರಿ ಬೇಸಾಯವು ಗ್ರಾಮಾಂತರದಲ್ಲಿ ಉದ್ಯೋಗಗಳನ್ನು ಬೆಳೆಸಲು ಹಳ್ಳಿಯ ಜನಶಕ್ತಿಯನ್ನು ಸಂಘಟಿಸಲು ಸಹಾಯಕವಾಗುತ್ತದೆ. ಇವತ್ತಿನ ನೀರಸ ಕೃಷಿಯಂಥ ಮಡಿತ, ಕಂಗಾಲತನ, ಉಪವಾಸ, ಅಜ್ಞಾನಗಳಿಂದ ಹಳ್ಳಿಗರನ್ನು ಮೇಲೆತ್ತಲು ಸಹಕಾರಿ ಬೇಸಾಯವು ಮಾರ್ಗಮಾಡಿಕೊಡುತ್ತದೆ.

ಇಂದು ಹಳ್ಳಿಗರ ಬೇಸಾಯವನ್ನೂ ಹಾಗೂ ಜೀವನಸ್ಥಿತಿಯನ್ನೂ ಸುಧಾರಿಸಲು ಸರಕಾರವು ಅನೇಕ ಬಗೆಯಿಂದ ಆದರೆ ವೈಯಕ್ತಿಕವಾಗಿ ಸಹಾಯ ಕೊಡುತ್ತಿದೆ. ಇಂಥ ವೈಯಕ್ತಿಕ ಸಹಾಯವು ಅವರಿಗೆ ಸಾಲುವುದೂ ಇಲ್ಲ ಅಲ್ಲದೆ ಅದರ ಬಹಳಂಶ ದುರುಪಯೋಗವಾಗುತ್ತಿದೆ. ವೈಯಕ್ತಿಕವಾಗಿ ಅದನ್ನು ನಿಯಂತ್ರಿಸುವುದು ಸಾಧ್ಯವೇ ಇಲ್ಲ. ಗೊಬ್ಬರಕ್ಕಾಗಿ ಒಯ್ದ ಹಣವನ್ನು ಸಹ ರೈತನು ಸಾಹುಕಾರನ ಬಡ್ಡಿಯನ್ನು ಮುಟ್ಟಿಸಲು ಉಪಯೋಗಿಸುತ್ತಾನೆ. ಬಿತ್ತಲು ಒಯ್ದ ಸುಧಾರಿಸಿದ ಬೀಜಗಳನ್ನು ತನ್ನ ಮಕ್ಕಳ ಹಸಿದ ಹೊಟ್ಟೆಯನ್ನು ಎರಡು ದಿವಸ ತಣಿಸಲು ಉಪಯೋಗಿಸಿ ಬಿಡುತ್ತಾನೆ. ಬೇಸಾಯ ಸಂಘದಂಥ ಸಂಸ್ಥೆಗಳು ದೇಶದ ತುಂಬ ಹರಡಿದವೆಂದರೆ ಸಂಸ್ಥೆಗಳ ಮುಖಾಂತರ ಬೇಸಾಯದ ಸಲಕರಣೆ ಪೂರೈಸುವುದು ಮತ್ತು ಅವುಗಳ ಉಪಯೋಗವನ್ನು ಮೇಲ್ವಿಚಾರಿಸುವುದು ಹೆಚ್ಚು ಸುಗಮವಾಗುವುದು. ಅದರಿಂದ ಹಳ್ಳಿಗರ ಬೇಸಾಯವನ್ನೂ ಅವರ ಜೀವನ ಸ್ಥಿತಿಯನ್ನೂ ಸುಧಾರಿಸಲು ಸಹಾಯ ಒದಗಿಸಲು ಸಹಕಾರಿ ಬೇಸಾಯದಿಂದ ಸರಕಾರಕ್ಕೆ ಹೆಚ್ಚು ಅನುಕೂಲವಾಗುವುದು.

'ಹೆಚ್ಚು ಆಹಾರ ಬೆಳೆಯಿರಿ' ಹಾಗೂ ಭೂದಾನ ಆಂದೋಲನಗಳು

ಆಹಾರ ಸಮಸ್ಯೆಯನ್ನು ಹಾಗೂ ಭೂಸಮಸ್ಯೆಯನ್ನು ಪರಿಹರಿಸಲು ಅನೇಕ ಉಪಾಯಗಳ ಪ್ರಯೋಗ ನಡೆದಿದೆ. 'ಹೆಚ್ಚು ಆಹಾರ ಬೆಳೆಯಿರಿ' ಆಂದೋಲನವು ಇಂಥದೊಂದು ಉಪಾಯ. ಇದರಿಂದ ಆಹಾರಧಾನ್ಯಗಳ ಬೇಸಾಯವನ್ನು ಸುಧಾರಿಸಿದ

ಪದ್ಧತಿಗಳಿಂದ ತೀವ್ರಗೊಳಿಸಿ, ಸಾವಿರಾರು ಎಕರೆ ಸರಕಾರಿ ಪಡಭೂಮಿಗಳನ್ನು ಸಾಗುವಳಿಯಲ್ಲಿ ತಂದು ಆಹಾರೋತ್ಪತ್ತಿಯನ್ನು ಹೆಚ್ಚಿಸುವ ಪ್ರಯತ್ನ ನಡೆಯಿತು. ಅದರಿಂದ ಆಹಾರೋತ್ಪತ್ತಿಯು ಕೆಲಮಟ್ಟಿಗೆ ಹೆಚ್ಚಿತೇನೋ ನಿಜ. ಆದರೆ ನಮ್ಮಲ್ಲಿ ಬೆಳೆಯುತ್ತಿರುವ ಆಹಾರದ ಬೇಡಿಕೆಯನ್ನು ಪೂರ್ಣವಾಗಿ ಪೂರೈಸುವಷ್ಟು ಆ ಹೆಚ್ಚಳ ವಾಗಲಿಲ್ಲ.

ಬೇಸಾಯದ ಅಭಿವೃದ್ಧಿಗಾಗಿ, ಹಳ್ಳಿಯಲ್ಲಿ ಸಾಮಾಜಿಕ ಸೌಕರ್ಯಗಳನ್ನು ಹೆಚ್ಚಿಸಲು, ಹಳ್ಳಿಗಳಲ್ಲಿ ಸಾಮೂಹಿಕ ಅಭಿವೃದ್ಧಿಯ, ಸ್ವಾವಲಂಬನದ ಮತ್ತು ಪರಸ್ಪರ ಸಹಾಯದ ಭಾವನೆ ಬೆಳೆಸಲು ಸಾಮೂಹಿಕ ಅಭಿವೃದ್ಧಿಯ ಅಂದೋಲನವನ್ನು ಹೂಡಲಾಯಿತು. ಈ ಅಂದೋಲನವು ಕೆಲಮಟ್ಟಿಗೆ ಯಶಸ್ವಿ ಏನೋ ಆಯಿತು. ಆದರೆ ತಮ್ಮ ಹಳ್ಳಿಗಳ ಪುನರ್ರಚನೆಯ ಎಲ್ಲ ಚಟುವಟಿಕೆಗಳನ್ನೂ ತಮ್ಮ ಶಕ್ತಿ ಯಿಂದಲೇ ನಡೆಸುವಷ್ಟು ಸ್ವಾವಲಂಬನ ಹಳ್ಳಿಗರಲ್ಲಿ ಇನ್ನೂ ಬೆಳೆಯಬೇಕಾಗಿದೆ. ಹಳ್ಳಿಯ ಮುಖ್ಯ ಉದ್ಯೋಗವಾದ ಬೇಸಾಯವನ್ನು ಸಹಕಾರದ ತಳಹದಿಯ ಮೇಲೆ ಪುನಃ ಸಂಘಟಿಸಿದಾಗಲೇ ಇಂಥ ಸಂಪೂರ್ಣಸ್ವಾವಲಂಬನವು ಬೆಳೆಯಬಲ್ಲದು.

ಅದರಂತೆಯೇ ಸಾಗುವಳಿಗಾಗಿ ಭೂಮಿಯನ್ನು ನ್ಯಾಯಸಮ್ಮತವಾಗಿ ಪುನ ರ್ವಿತರಣೆ ಮಾಡಲೂ ಮತ್ತು ಬೇಸಾಯವನ್ನು ಹಾಗೂ ಹಳ್ಳಿಯ ಜೀವನವನ್ನು ಸುಧಾರಿಸುವಲ್ಲಿ ಸೋದರ ಭಾವನೆ ಮತ್ತು ಒಗ್ಗಟ್ಟು ಬೆಳೆಸಲು ಭೂದಾನ, ಗ್ರಾಮದಾನ ಆಂದೋಲನಗಳನ್ನು ಆಚಾರ್ಯ ವಿನೋಬಾ ಭಾವೆಯವರು ನಡೆಸಿದರು. ಈ ಆಂದೋಲನದ ನೈತಿಕ ಪ್ರಭಾವವೇನೋ ಸಮಾಜದ ಮೇಲೆ ಸಾಕಷ್ಟು ಬಿದ್ದಿತು. ಸುಮಾರು 5000 ಗ್ರಾಮಗಳು ಗ್ರಾಮದಾನ ಮಾಡಿದವು ಮತ್ತು ಸುಮಾರು 5 ಲಕ್ಷ ಎಕರೆ ಭೂಮಿಯು ಭೂದಾನದಲ್ಲಿ ದೊರಕಿ ಅದರ ಬಹುಭಾಗವನ್ನು ಭೂಹೀನರಿಗೆ ಹಂಚಲಾಯಿತು. ಆದರೆ ಭೂಸಮಸ್ಯೆಯನ್ನು ಮತ್ತು ಬೇರೆ ಗ್ರಾಮೀಣ ಸಮಸ್ಯೆ ಗಳನ್ನು ಪರಿಹರಿಸುವಲ್ಲಿ ಈ ಆಂದೋಲನದ ಪರಿಣಾಮವು ಸಮುದ್ರದಲ್ಲಿನ ಹನಿ ಯಂತಿದೆ. ಭೂದಾನ, ಗ್ರಾಮದಾನ ಭೂಮಿಗಳಲ್ಲಿ ಸಹ ವೈಯಕ್ತಿಕ ಬೇಸಾಯ ನಡೆಯುತ್ತಿರುವಲ್ಲಿ ಸಾಮೂಹಿಕ ವಿಕಾಸಕ್ಕೆ ಅಗತ್ಯವಾದ ಭೂದಾನ ಗ್ರಾಮದಾನದ ಭಾವವು ಮಾತ್ರ ಲೋಪವಾಗುತ್ತ ಬಂದಿದೆ.

ಸಹಕಾರಿ ಬೇಸಾಯವು ಈ ಎಲ್ಲ ರಚನಾತ್ಮಕ ಗ್ರಾಮೀಣ ಆಂದೋಲನಗಳನ್ನು ಪೂರ್ಣಗೊಳಿಸುವ ಆಂದೋಲನ. ಸಹಕಾರಿ ಬೇಸಾಯದ ಬಗ್ಗೆ ಸರಿಯಾದ ಜನ ಜಾಗೃತಿ ಹಬ್ಬಿಸಿದಲ್ಲಿ ಅದರಿಂದ ಮೇಲಿನ ಅಂದೋಲನಗಳ ಅಪೂರ್ಣ ಕಾರ್ಯಗಳೆಲ್ಲ ಪೂರ್ಣವಾಗುತ್ತವೆ ಮತ್ತು ಬೇಸಾಯದಲ್ಲಿ ಹಾಗೂ ಗ್ರಾಮೀಣ ಜೀವನದಲ್ಲಿ ಕ್ರಾಂತಿಕಾರಿ ಬದಲಾವಣೆ ಆಗದೆ ಇರಲಾರದು.

ಸಹಕಾರಿ ಬೇಸಾಯದಿಂದ ಚಿಕ್ಕಬೇಸಾಯಗಾರರ ಅಭಿವೃದ್ಧಿ ಯೋಜನೆಗಳ ಯಶಸ್ಸು

1960ರಿಂದ 1970ರವರೆಗಿನ ದಶಕದ ಮಧ್ಯದಲ್ಲಿ ಭಾರತದಲ್ಲಿ ಬೇಸಾಯದಲ್ಲಿ ಹೆಚ್ಚಿನ ವೈಜ್ಞಾನಿಕ ಸುಧಾರಣೆಗಳಾಗಿ ಅವುಗಳಿಂದ ಬೇಸಾಯದ ಉತ್ಪತ್ತಿಯು ಮೂರರಷ್ಟು, ನಾಲ್ಕರಷ್ಟು ಹೆಚ್ಚಿತು. ಜೋಳ, ಗೋಧಿ, ಭತ್ತ, ಸಜ್ಜೆ, ಮುಸುಕಿನ ಜೋಳ ಮುಂತಾದ ಆಹಾರ ಧಾನ್ಯಗಳ ಹೆಚ್ಚು ಇಳುವರಿ ಕೊಡುವ ತಳಿಗಳ ಪ್ರಯೋಗವು ವ್ಯಾಪಕವಾಗಿ ನಡೆಯಿತು. ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ ಔಷಧಿ, ಸುಧಾರಿಸಿದ ಬೇಸಾಯ ಪದ್ಧತಿ ಪ್ರಯೋಗಗಳು ವ್ಯಾಪಕವಾಗಿ ನಡೆದವು. ಇಂಥ ಪ್ರಯೋಗಗಳು ಯಶಸ್ವಿಯಾಗಿ ನಡೆದಲ್ಲಿ ಬೇಸಾಯದ ಉತ್ಪತ್ತಿಯು, ಮುಖ್ಯವಾಗಿ ಆಹಾರಧಾನ್ಯಗಳ ಉತ್ಪತ್ತಿಯು, ಖಂಡಿತವಾಗಿಯೂ ಹೆಚ್ಚೀತು. ಇದರಿಂದ ಬೇಸಾಯವು ಕೇವಲ 'ಜೀವನೋಪಾಯದ ಬೇಸಾಯ'ವಾಗಿ ಉಳಿಯದೆ 'ಲಾಭದಾಯಕವಾದ ವ್ಯಾಪಾರಿಕ ಬೇಸಾಯ' ಆಗಿ ಪರಿವರ್ತನೆ ಹೊಂದೀತು. ಬೇಸಾಯವು ಇದುವರೆಗೆ ನಿರಕ್ಷರ, ದಡ್ಡರೈತರ, ಹಳ್ಳಿಗರ ಉದ್ಯೋಗವಾಗಿತ್ತು. ಅವರಿಗೆ ಉಪಜೀವನದ ಬೇರೆ ಮಾರ್ಗವಿಲ್ಲದೆ ಅನಿವಾರ್ಯವಾಗಿ ಅವರು ಬೇಸಾಯವನ್ನು ಕೈಕೊಳ್ಳುತ್ತಿದ್ದರು. ವಿದ್ಯಾವಂತರು, ಅನುಕೂಲಸ್ಥರು, ಹೊಲಗಳಿದ್ದರೂ ಬೇಸಾಯವನ್ನು ತಿರಸ್ಕರಿಸಿ, ನೌಕರಿ, ಉದ್ಯೋಗಗಳನ್ನು ಈ ಹಿಂದೆ ಕೈಕೊಳ್ಳುತ್ತಿದ್ದರು. ಆದರೆ ಬೇಸಾಯದಲ್ಲಿ ಮೇಲ್ಕಾಣಿಸಿದ ವೈಜ್ಞಾನಿಕ ಸುಧಾರಣೆಗಳು ಬಂದನಂತರ ಇಂಥ ವಿದ್ಯಾವಂತರು, ಅನುಕೂಲಸ್ಥರು ಹೆಚ್ಚಾಗಿ ಬೇಸಾಯವನ್ನು ಕೈಕೊಂಡು ಹಸುರು ಕ್ರಾಂತಿಯ ಸಾಧನೆಯ ಲಾಭವನ್ನು ಪಡೆದಿದ್ದಾರೆ. ನಿಜವೆಂದರೆ ಸರ್ವಸಾಮಾನ್ಯ ನಿರಕ್ಷರ, ಅಜ್ಞ, ಬಡ ಬೇಸಾಯಗಾರರಿಗೆ ಈ ಹಸುರುಕ್ರಾಂತಿಯ ಲಾಭವನ್ನು ಪಡೆಯುವುದೇ ಆಗಿಲ್ಲವೆಂದು ಇತ್ತೀಚೆಗಿನ ಸಮೀಕ್ಷೆಯಿಂದ ಕಂಡುಬಂದಿದೆ. 1969ರಲ್ಲಿ ಅಖಿಲ ಭಾರತ ಗ್ರಾಮಾಂತರ ಪತ್ತಿನ ಸಮೀಕ್ಷೆಯ ಸಮಿತಿಯು ಇದೇ ನಿಷ್ಕರ್ಷೆಯನ್ನು ಪ್ರಕಟಿಸಿದೆ. ಅಂತೆಯೇ ಈ ಬೆಳವಣಿಗೆಯಿಂದ ಗ್ರಾಮಾಂತರ ಆರ್ಥಿಕ ವಿಷಮತೆಯು ಇನ್ನೂ ಹೆಚ್ಚಿ ಶ್ರೀಮಂತ ಬೇಸಾಯಗಾರರು ಹೆಚ್ಚು ಶ್ರೀಮಂತರಾದರೆಂದು, ಬಡ ಬೇಸಾಯಗಾರರು ಇನ್ನೂ ಹೆಚ್ಚಿನ ಬಡತನಕ್ಕೆ ಇಳಿದರೆಂದೂ ಈ ಸಮೀಕ್ಷೆಯಿಂದ ಕಂಡುಬಂದಿದೆ.

ಬೇಸಾಯದ ಈ ವಿಷಮ ಪ್ರಗತಿಯಿಂದ ರಾಷ್ಟ್ರದ ಬೇಸಾಯದ ಒಟ್ಟು ಉತ್ಪತ್ತಿಯಾಗಲೀ, ಸರಾಸರಿ ಉತ್ಪತ್ತಿಯಾಗಲೀ ನಿರೀಕ್ಷಿಸಿದಷ್ಟು ಹೆಚ್ಚಲಿಲ್ಲ. ಏಕೆಂದರೆ ಬಹುಸಂಖ್ಯಾತ ಬೇಸಾಯಗಾರರು ಚಿಕ್ಕ, ಬಡಬೇಸಾಯಗಾರರಾಗಿದ್ದರಿಂದ, ಬೇಸಾಯದ ವೈಜ್ಞಾನಿಕ ಸಂಶೋಧನೆಗಳ ಪ್ರಯೋಜನ ಪಡೆಯಲು ಅಗತ್ಯವಿದ್ದ ಅನುಕೂಲತೆಗಳು ಅವರಿಗಿರಲಿಲ್ಲ. ಅವರ ಉತ್ಪತ್ತಿ ಹೆಚ್ಚದೆ ರಾಷ್ಟ್ರದ ಉತ್ಪತ್ತಿಯು ಹೇಗೆ ಹೆಚ್ಚಾದೀತು? ಆಹಾರೋತ್ಪತ್ತಿಯ ಹೆಚ್ಚಳ 1950ಕ್ಕಿಂತ 1965–66ರಲ್ಲಿ 21.4 ಶೇಕಡಾದಷ್ಟು ಮಾತ್ರ ಆಯಿತು. ಆಹಾರ ಧಾನ್ಯಗಳ ಆಮದು ಸಹ 1950ರಲ್ಲಿ 25 ಲಕ್ಷ ಟನ್

ಇದ್ದದು 1966ರಲ್ಲಿ 1 ಕೋಟಿ 4 ಲಕ್ಷ ಟನ್‌ಗಳಷ್ಟು ಹೆಚ್ಚಾಯಿತು. ಈ ಎಲ್ಲ ಕಾರಣಗಳಿಂದಲೇ ಇತ್ತೀಚಿನ ವರುಷಗಳಲ್ಲಿ ರಾಷ್ಟ್ರದ ಉನ್ನತಿಗಾಗಿ ಸಾಮಾಜಿಕ ನ್ಯಾಯದೊಂದಿಗೆ ಆರ್ಥಿಕ ಅಭಿವೃದ್ಧಿಯಾಗುವುದು ಅಗತ್ಯವೆಂದು ಘೋಷಿಸಲಾಗಿದೆ. ಈ ಘೋಷಣೆಗನುಸರಿಸಿ 1970ರಲ್ಲಿ ಚಿಕ್ಕಬೇಸಾಯಗಾರರಿಗೆ ಹಸುರು ಕ್ರಾಂತಿಯ ಲಾಭಗಳನ್ನು ಪಡೆಯಲು ಎಲ್ಲ ಅಗತ್ಯವಿದ್ದ ಅನುಕೂಲತೆಗಳನ್ನು ಒದಗಿಸಲು 'ಚಿಕ್ಕ ಬೇಸಾಯಗಾರರ ಅಭಿವೃದ್ಧಿಯ ಯೋಜನೆ'ಯನ್ನು ರೂಪಿಸಿ ಕಾರ್ಯಗತ ಮಾಡಲಾಯಿತು.

ಗ್ರಾಮಾಂತರ ಪತ್ತಿನ ಸಮೀಕ್ಷೆಯ ಸಮಿತಿಯು ಪ್ರಾಯೋಗಿಕವಾಗಿ ಪ್ರಾರಂಭದಲ್ಲಿ ದೇಶದಲ್ಲಿ 20 'ಚಿಕ್ಕಬೇಸಾಯಗಾರರ ಅಭಿವೃದ್ಧಿ ಯೋಜನೆ'ಯ ಪ್ರಯೋಗ ಕ್ಷೇತ್ರಗಳನ್ನು ಸ್ಥಾಪಿಸಲು ಹಾಗೂ ಅವುಗಳಿಗಾಗಿ 30 ಕೋಟಿ ರೂಪಾಯಿ ಹಣದ ವ್ಯವಸ್ಥೆ ಮಾಡಲು ಶಿಫಾರಸು ಮಾಡಿತು. ಮುಂದೆ ಚತುರ್ಥಪಂಚವಾರ್ಷಿಕ ಯೋಜನೆಯಲ್ಲಿ ಈ ಪ್ರಯೋಗ ಕ್ಷೇತ್ರಗಳ ಸಂಖ್ಯೆಯನ್ನು 46ಕ್ಕೆ ಹೆಚ್ಚಿಸಲಾಯಿತು ಮತ್ತು ಇವುಗಳಿಗಾಗಿ 67½ ಕೋಟಿ ರೂಪಾಯಿಯ ಹಣದ ವ್ಯವಸ್ಥೆ ಮಾಡಲಾಯಿತು. ಈ ಪ್ರಯೋಗ ಕ್ಷೇತ್ರಗಳಿಂದ 30 ಲಕ್ಷ ಬೇಸಾಯಗಾರರು ಪ್ರಯೋಜನ ಪಡೆಯುವರೆಂದು ನಿರೀಕ್ಷಿಸಲಾಯಿತು.

'ಚಿಕ್ಕ ಬೇಸಾಯಗಾರರ ಅಭಿವೃದ್ಧಿಯ ಯೋಜನೆ'ಯಿಂದ ಚಿಕ್ಕ ಅನಾರ್ಥಿಕ ಬೇಸಾಯಗಾರರಿಗೆ ಬೇಸಾಯದ ಆಧುನಿಕ ವೈಜ್ಞಾನಿಕ ಅಭಿವೃದ್ಧಿಗಾಗಿ ಸಾಕಷ್ಟು ಹಣದ ಅನುಕೂಲತೆ ಒದಗಿಸಿ ಅವರ ಬೇಸಾಯವನ್ನು ಲಾಭದಾಯಕ ಮಾಡುವ ಉದ್ದೇಶವಿತ್ತು. ಕೇವಲ ಬೇಸಾಯದಿಂದಲೇ ಅವರು ಸ್ವಾವಲಂಬಿಯಾಗುವ ಶಕ್ತಿ ಬಾರದೆಂದು, ಬೇಸಾಯದ ಜೊತೆಗೆ, ಬೇಸಾಯಕ್ಕೆ ಸಹಾಯಕವಾಗುವ ಹೈನುಗಾರಿಕೆ, ಕೋಳಿಯ ಸಾಕಾಣಿಕೆ, ಕುರಿ ಸಂಗೋಪನೆ ಮುಂತಾದ ಉದ್ಯೋಗಗಳನ್ನು ಕೈಕೊಳ್ಳಲು ಸಹ ಹಣದ ಹಾಗೂ ತಾಂತ್ರಿಕ ಅನುಕೂಲತೆಯನ್ನು ಒದಗಿಸಲಾಯಿತು. ಈ ಅನುಕೂಲತೆಗಳಿಂದ ಚಿಕ್ಕ ಬೇಸಾಯಗಾರರು ತಮ್ಮ ಬೇಸಾಯವನ್ನು ಹಾಗೂ ಸಹಾಯಕ ಉದ್ಯೋಗಗಳನ್ನು ವೈಯಕ್ತಿಕವಾಗಿಯೇ ಆದರೂ, ಲಾಭದಾಯಕವಾಗಿ ನಡೆಸಿ ಸ್ವಾವಲಂಬಿ ಆಗುವರೆಂದೂ, ಅದರಿಂದ ಅವರು ದೇಶದ ಆಹಾರೋತ್ಪತ್ತಿಯನ್ನು ಸಾಕಷ್ಟು ಹೆಚ್ಚಿಸಿ, ಆಹಾರ ವಿಷಯದಲ್ಲಿ ದೇಶವನ್ನು ಸ್ವಾವಲಂಬಿ ಮಾಡುವರೆಂದು ನಿರೀಕ್ಷಿಸಲಾಗಿದೆ. ಈ ಯೋಜನೆಯಿಂದ ಪಶುಗಳಂತೆ ಜೀವಿಸುತ್ತಿರುವ ಹಾಗೂ ಯಾವುದೇ ರೀತಿಯ ಆರ್ಥಿಕ ಪ್ರಗತಿ ಸಾಧಿಸಲು ಅಸಮರ್ಥರಾದ ಶೇಕಡಾ 40ರಷ್ಟಿರುವ ಚಿಕ್ಕಬೇಸಾಯಗಾರರಿಗೆ ಆರ್ಥಿಕ ಪ್ರಗತಿಯ ಹಾಗೂ ಮಾನವೋಚಿತ ಜೀವನದ ಮಾರ್ಗ ತೆರೆಯುವುದೆಂದು ಗ್ರಹಿಸಲಾಗಿದೆ.

ಈ ಯೋಜನೆಯ ಪ್ರಗತಿಯನ್ನು ಅಳೆಯಲು ಸಾಕಷ್ಟು ಅವಧಿ ಆಗಿರದಿದ್ದರೂ 1971ರ ಜೂನ್‌ನಲ್ಲಿ ಮೈಸೂರಲ್ಲಿ ಆಡಳಿತ ತರಬೇತಿ ಕೇಂದ್ರದಲ್ಲಿ ದಕ್ಷಿಣ ರಾಜ್ಯಗಳ ಕಾರ್ಯಗಾರ ಸಮ್ಮೇಳನವು ಈ ಯೋಜನೆಯ ಸಮಸ್ಯೆಗಳನ್ನು ಚರ್ಚಿಸಲು

ಕೂಡಿತ್ತು. ಈ ಸಮ್ಮೇಳನದಲ್ಲಿ ಅಭ್ಯಾಸ ಮಾಡಬೇಕಾದ ಕೆಲವು ಮಹತ್ವದ ಸಮಸ್ಯೆಗಳು ಪ್ರಕಾಶಕ್ಕೆ ಬಂದವು. ಈ ಯೋಜನೆಯಿಂದ ಚಿಕ್ಕ ಬೇಸಾಯಗಾರರಿಗೆ ಎಷ್ಟೇ ಉದಾರವಾಗಿ ಹಣದ ಸವಲತ್ತುಗಳನ್ನು ಒದಗಿಸಿದರೂ ಅವರು ತಮ್ಮ ಚಿಕ್ಕ ತುಂಡು ಹಾಗೂ ನಷ್ಟಕರ ಹಿಡುವಳಿಗಳ ಕಾರಣದಿಂದ ಈ ಸವಲತ್ತುಗಳ ಪ್ರಯೋಜನ ಪಡೆಯಲು ಅಸಮರ್ಥರಾಗಿದ್ದುದು ಕಂಡುಬಂದಿತು. ಈ ಅಸಹಾಯ ತನವನ್ನು ಹೋಗಲಾಡಿಸಲು ಚಿಕ್ಕಬೇಸಾಯಗಾರರ ತುಂಡುಹಿಂಡುವಳಿಗಳ ಕ್ರೋಢೀ ಕರಣವನ್ನು ಬೇಗ ಕೈಕೊಳ್ಳಲು ಸಮ್ಮೇಳನವು ಶಿಫಾರಸು ಮಾಡಿತು ಮತ್ತು ಸಾಲದ ಭದ್ರತೆಯ ಕರಾರನ್ನು ಇನ್ನೂ ಹೆಚ್ಚು ಸಡಿಲಿಸಲು ಸೂಚನೆ ಮಾಡಲಾಯಿತು. ಈ ಶಿಫಾರಸುಗಳು ಕಾರ್ಯಗತವಾದಾಗ್ಯೂ ಚಿಕ್ಕ ಹಿಡುವಳಿಗಳು ಪೂರ್ಣ ಲಾಭ ದಾಯಕವಾಗಲು ಅಗತ್ಯವಿದ್ದಷ್ಟು ಹಣವಿಲ್ಲ ಮತ್ತು ತಾಂತ್ರಿಕಜ್ಞಾನ ಚಿಕ್ಕ ಬೇಸಾಯ ಗಾರರಿಗೆ ದೊರಕುವ ಭರವಸೆ ಇಲ್ಲ. ಏಕೆಂದರೆ ನೀರಾವರಿಯ ಅನುಕೂಲತೆ ಇದ್ದಲ್ಲಿಯೇ ಹಣದ ಹಾಗೂ ತಾಂತ್ರಿಕ ಸವಲತ್ತುಗಳ ಲಾಭದಾಯಕ ಉಪಯೋಗ ವಾಗಬಲ್ಲದೆಂದು ಹೇಳಲಾಯಿತು; ಆದರೆ ಈ ನೀರಾವರಿಯ ಅನುಕೂಲತೆ ಎಲ್ಲೆಡೆಯೂ ಸಮರ್ಪಕವಾಗಿ ಇಲ್ಲವೆಂದು ಎತ್ತಿತೋರಿಸಲಾಯಿತು. ನೀರಾವರಿಯ ಹಾಗೂ ಭೂ ಸುಧಾರಣೆಗಳ ಹೆಚ್ಚಿನ ವೆಚ್ಚದ ಕೆಲಸಗಳನ್ನು ಕೈಕೊಳ್ಳಲು ವೈಯಕ್ತಿಕವಾಗಿ ಚಿಕ್ಕ ಬೇಸಾಯಗಾರರಿಗೆ ಹಣ ಒದಗಿಸುವುದರಿಂದ ಈ ಎಲ್ಲ ಕೆಲಸಗಳು ಸಾಧಿಸುವುದಿಲ್ಲ. ವೈಯಕ್ತಿಕ ಚಿಕ್ಕ ಬೇಸಾಯದಲ್ಲಿ ಹೇರಳವಾಗಿ ಹಾಳಾಗುತ್ತಿರುವ ಚಿಕ್ಕ ಬೇಸಾಯಗಾರರ ಶ್ರಮಸಂಪತ್ತನ್ನು ಹಾಗೂ ಸಾಧನಗಳನ್ನು ಸಂಘಟಿಸಿ ಉಪಯೋಗಿಸುವುದು ಅಗತ್ಯ ವಿದೆ. ಈ ಯೋಜನೆಯಲ್ಲಿ ಇಂಥ ಸಾಧನೆಯ ಉಪಾಯವಿಲ್ಲ. ಈ ಯೋಜನೆಯು ಫಲಕಾರಿಯಾಗಲು ನೀರಾವರಿಯ ಅನುಕೂಲತೆಯು ಅತ್ಯಗತ್ಯವೆಂದು ರಾಷ್ಟ್ರೀಯ ಕೃಷಿ ಆಯೋಗವು ಸಹ ಒತ್ತಿ ಹೇಳಿದೆ: ಇಂಥ ಅನುಕೂಲತೆ ಬಹುಸಂಖ್ಯಾತ ಚಿಕ್ಕ ಬೇಸಾಯಗಾರರ ಭೂಮಿಗಳಲ್ಲಿ ಇಲ್ಲವೆಂಬ ಸತ್ಯವನ್ನು ಸಹ ಕೃಷಿ ಆಯೋಗವು ಒಪ್ಪಿಕೊಂಡಿದೆ. ಅಂದಬಳಿಕ ಭಾರತದ ಅನಾರ್ಥಿಕ ಬೇಸಾಯದ ಹಿಡುವಳಿಗಳ ಮೂಲಭೂತ ಸಮಸ್ಯೆಯನ್ನು 'ಚಿಕ್ಕಬೇಸಾಯಗಾರರ ಅಭಿವೃದ್ಧಿ ಯೋಜನೆ'ಯು ಪರಿಣಾಮಕಾರಿಯಾಗಿ ಪರಿಹರಿಸದು. ಸಹಕಾರಿ ಬೇಸಾಯದ ಕಾರ್ಯಕ್ರಮವನ್ನು ದೇಶದಲ್ಲೆಲ್ಲ ಜನಪ್ರಿಯಮಾಡಿ ಅದನ್ನು 'ಚಿಕ್ಕಬೇಸಾಯಗಾರರ ಅಭಿವೃದ್ಧಿ ಯೋಜನೆ'ಗೆ ಹೊಂದಾಣಿಕೆ ಮಾಡಿದಾಗ ಮಾತ್ರ ಈ ಒಳ್ಳೆಯ ಯೋಜನೆಯು ಪೂರ್ಣವಾಗಿ ಫಲಕಾರಿ ಯಾಗಬಲ್ಲದೆಂದು ಸ್ಪಷ್ಟವಾಗುತ್ತದೆ.

ಸಹಕಾರಿ ಬೇಸಾಯದಿಂದ ಸಾಮಾಜಿಕ ಪ್ರಗತಿ ಹಾಗೂ ಒಗ್ಗಟ್ಟು

ಇಂದು ಭಾರತದ ಹಳ್ಳಿಗಳು ಜಾತಿ, ಪಂಗಡ, ರಾಜಕೀಯ ಬಣಗಳು ಇವುಗಳ ತಿಕ್ಕಾಟದಲ್ಲಿ ಹರಿದು ಹಂಚಿವೆ. ಇವನ್ನೆಲ್ಲ ಅಡಗಿಸಲು ಯಾವುದೊಂದು ಪ್ರಭಾವ ಶಾಲಿಯಾದ ರಚನಾತ್ಮಕ ಕಾರ್ಯದ ಸ್ಫೂರ್ತಿ ಇಲ್ಲದ್ದರಿಂದ ಮೇಲಿನ ತಿಕ್ಕಾಟಗಳಲ್ಲಿಯೇ ಹಳ್ಳಿಗರ ಬಹಳ ಶಕ್ತಿಯು ಹಾಳಾಗುತ್ತಿದೆ. ಸಹಕಾರಿ ಬೇಸಾಯವು ಇಂಥ ತಿಕ್ಕಾಟ

ಗಳನ್ನು ಅಡಗಿಸಲು ಪ್ರಭಾವಶಾಲಿ ರಚನಾತ್ಮಕ ಕಾರ್ಯದ ಸ್ಫೂರ್ತಿಯನ್ನು ಒದಗಿಸುತ್ತದೆ. ಏಕೆಂದರೆ ಹಳ್ಳಿಗರ ಜೀವನವನ್ನು ಸಮೃದ್ಧಗೊಳಿಸುವ ಬೇಸಾಯದ ಪುನಃ ಸಂಘಟನೆಯಂಥ ಮಹತ್ವದ ಕಾರ್ಯವೂ ಅದಾಗಿದೆ. ಬೇಸಾಯವು ಗ್ರಾಮೀಣ ಜೀವನದ ಬೆನ್ನೆಲುಬು. ಆದ್ದರಿಂದ ಹಳ್ಳಿಗರು ಬೇಸಾಯದ ಅಭಿವೃದ್ಧಿಯಲ್ಲಿ ನೇರವಾಗಿ ಆಸ್ಥೆವಹಿಸುತ್ತಾರೆ. ತಮ್ಮ ಬೇಸಾಯವನ್ನು, ತಮ್ಮ ಗ್ರಾಮೀಣ ಜೀವನವನ್ನು ಮೇಲೆತ್ತಲು ಸಹಕಾರಿ ಬೇಸಾಯದ ಹೊರತಾಗಿ ಬೇರೆ ಮಾರ್ಗವೇ ಇಲ್ಲವೆಂದು ಒಮ್ಮೆ ಹಳ್ಳಿಗರಿಗೆ ಮನವರಿಕೆ ಆಯಿತೆಂದರೆ ಸಹಕಾರಿ ಬೇಸಾಯದ ಆಂದೋಲನಕ್ಕೆ ಅವರು ತಮ್ಮ ಎಲ್ಲ ಚಟುವಟಿಕೆಗಳನ್ನು ಹೊಂದಿಸಿಕೊಳ್ಳುವರು. ಸಾಮೂಹಿಕ ಅಭಿವೃದ್ಧಿಗಾಗಿ ಬೇಸಾಯ ಸಂಘದಲ್ಲಿ ಕೂಡಿ ದುಡಿಯುವುದರಿಂದ ಅವರಲ್ಲಿ ಸಾಮೂಹಿಕ ಒಗ್ಗಟ್ಟು ಹೆಚ್ಚೆಚ್ಚು ಬೆಳೆಯುತ್ತ ಹೋಗುವುದು. ಅದರಿಂದ ಈಗಿನ ಭೇದಭಾವಗಳೆಲ್ಲ ಅಳಿಯುತ್ತ ಹೋಗುವವು. ಹೀಗೆ ಆರ್ಥಿಕ ಸಮೃದ್ಧಿಯೂ, ಸಾಮಾಜಿಕ ಒಗ್ಗಟ್ಟೂ ಬೆಳೆಯುವುದರಿಂದ ಹಳ್ಳಿಗರು ಹಳ್ಳಿಗಳಲ್ಲಿ ಸ್ವಚ್ಛತೆ, ರಸ್ತೆ ಚಿಕಿತ್ಸೆ ಮುಂತಾದ ಸಾಮಾಜಿಕ ಸೌಕರ್ಯಗಳನ್ನು ಹೆಚ್ಚಿಸುವುದರಲ್ಲಿ ತೊಡಗುತ್ತಾರೆ. ಹೀಗೆ ಸರಿಯಾಗಿ. ಯಶಸ್ವಿಯಾಗಿ ಸಹಕಾರಿ ಬೇಸಾಯವನ್ನು ಸಂಘಟಿಸಿದಲ್ಲಿ ಹಳ್ಳಿಯ ಜನತೆಯ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಉನ್ನತಿಯ ವಿಶಾಲವಾದ ಮಾರ್ಗವು ತೆರೆದಂತಾಗುವುದು.

ಸಹಕಾರಿ ಬೇಸಾಯವು ಹಳ್ಳಿಗಳಲ್ಲಿಯ ರಾಜಕೀಯ ಪಕ್ಷಗಳಿಗೂ, ಕಾರ್ಯಕರ್ತರಿಗೂ ಸಹ ಒಂದು ರಚನಾತ್ಮಕ ಆಹ್ವಾನವಾಗಿದೆ. ಸಧ್ಯಕ್ಕೆ ಚುನಾವಣೆಯ ಮತ್ತು ರಾಜಕೀಯ ತಿಕ್ಕಾಟಗಳಲ್ಲಿಯೇ ಇಂಥ ಪಕ್ಷಗಳು ಹಾಗೂ ಕಾರ್ಯಕರ್ತರು ತೊಡಗಿರುವುದುಂಟು. ಸಹಕಾರಿ ಬೇಸಾಯವು ಇವರೆದುರು ಹಳ್ಳಿಗಳನ್ನು ಸಮೃದ್ಧ ಪಡಿಸುವ ಒಂದು ನಿರ್ದಿಷ್ಟ, ನಿಶ್ಚಯಾತ್ಮಕ, ರಚನಾತ್ಮಕ ಕಾರ್ಯಕ್ರಮವನ್ನು ಇಡುತ್ತದೆ. ಇಂಥ ಕಾರ್ಯಕ್ರಮದಲ್ಲಿ ಅವರೆಲ್ಲರೂ ಸಕ್ರಿಯವಾಗಿ ಭಾಗವಹಿಸುತ್ತ ಹೋಗುವುದರಿಂದ ಅವರು ಹೆಚ್ಚೆಚ್ಚು ಜನರಲ್ಲಿ ಬೆರೆಯುತ್ತ ಹೋಗುತ್ತಾರೆ. ಅದರಿಂದ ಈಗ ಒಣ, ತಿಕ್ಕಾಟಗಳಲ್ಲಿ ಹಾಳಾಗುತ್ತಿರುವ ತಮ್ಮ ಬುದ್ಧಿಶಕ್ತಿಗಳನ್ನು ಅವರು ರಾಷ್ಟ್ರವನು ಸಮೃದ್ಧಗೊಳಿಸುವ ಕಾರ್ಯದಲ್ಲಿ ತೊಡಗುತ್ತ ಹೋಗುತ್ತಾರೆ.

ಸಹಕಾರಿ ಬೇಸಾಯದಿಂದ ರಾಷ್ಟ್ರೀಯ ಧ್ಯೇಯಸಾಧನೆ

ಭಾರತದ ರಾಷ್ಟ್ರೀಯ ಧ್ಯೇಯಕ್ಕೂ. ಸಹಕಾರಿ ಬೇಸಾಯಕ್ಕೂ ಗರಿಷ್ಠ ಸಂಬಂಧವಿದೆ. ಈ ಸಂಬಂಧದ ಮಹತ್ವದ ಅರಿವು ರಾಷ್ಟ್ರೀಯ ಮುಂದಾಳುಗಳಿಗೆ ಮತ್ತು ಕಾರ್ಯಕರ್ತರಿಗೆ ಆಗುವುದರಿಂದ ರಾಷ್ಟ್ರೀಯ ಧ್ಯೇಯವನ್ನು ಸಾಧಿಸಲು ಸಹಕಾರಿ ಬೇಸಾಯವು ಮಹತ್ವದ ರಾಷ್ಟ್ರೀಯ ಕಾರ್ಯಕ್ರಮವೆಂಬ ಧ್ಯೇಯನಿಷ್ಠೆ ಹಾಗೂ ಹುಮ್ಮಸ್ಸು ಅವರಲ್ಲಿ ಬೆಳೆಯುತ್ತದೆ.

ಸಮಾಜವಾದಿ ಸಮಾಜದ ರಚನೆಯು ಭಾರತದ ರಾಷ್ಟ್ರೀಯ ಗುರಿ. ಅದರಿಂದಲೇ ಸರ್ವರಿಗೂ, ಅದರಲ್ಲೂ ಕಂಗಾಲತನದಲ್ಲಿ ಕೊಳೆಯುತ್ತಿರುವ ಸಾಮಾನ್ಯ ಜನರಿಗೆ

ವಿಕಾಸದ ಸಮಾನ ಸವಲತ್ತುಗಳು ದೊರಕಬಲ್ಲವು. ಈ ಧ್ಯೇಯವನ್ನು ಸಾಧಿಸಲು ಭೂಮಿ, ಕಾರಖಾನೆ, ಗಣಿ ಮುಂತಾದ ಮುಖ್ಯ ಉತ್ಪಾದನೆಯ ಸಾಧನಗಳನ್ನು ವೈಯಕ್ತಿಕ ಲಾಭ ಸಂಗ್ರಹಿಸಲು ಬಿಡದೆ, ಎಲ್ಲರ ಸಾಮಾನ್ಯ ಹಿತವನ್ನು ಹೆಚ್ಚಿಸುವುದಕ್ಕಾಗಿ ಒಂದಿಲ್ಲೊಂದು ಒಗೆಯ ಸಾಮಾಜಿಕ ನಿಯಂತ್ರಣದಲ್ಲಿ ತರುವುದು ಅಗತ್ಯವಿದೆ. ಈ ತತ್ವವು ಸಮಾಜವಾದದ ತಿರುಳು. ಈ ಉದ್ದೇಶದಿಂದ ಪತ್ತು, ಹಣ, ವಿನಿಮಯ, ಮಾರಾಟ, ಉದ್ಯೋಗ ಮುಂತಾದವು ರಾಷ್ಟ್ರೀಯ ಅರ್ಥವ್ಯವಸ್ಥೆಯ ಬಹು ಮುಖ್ಯ ರಂಗ. ಬೇಸಾಯದ ಉತ್ಪಾದನೆಯನ್ನು ವೈಯಕ್ತಿಕ ಬೇಸಾಯದ ಎಲ್ಲೆಗಳಲ್ಲಿಯೇ ಬಂಧಿಸಿಟ್ಟರೆ, ಬೇರೆ ಕ್ಷೇತ್ರಗಳಲ್ಲಿಯ ಸಹಕಾರವು ಅಷ್ಟೊಂದು ಪ್ರಗತಿಯನ್ನು ಸಾಧಿಸದು. ಆದ್ದರಿಂದ ಜನಜಾಗೃತಿಯನ್ನು ಹಬ್ಬಿಸಿ ಆತ್ಮಸಂತೋಷದಿಂದ ಮಾಡುವ ಸಹಕಾರಿ ಬೇಸಾಯವನ್ನು ಬೆಳೆಸುವುದರಿಂದ ಸಂಪೂರ್ಣ ರಾಷ್ಟ್ರೀಯ ಅರ್ಥವ್ಯವಸ್ಥೆಯನ್ನು ಸಹಕಾರದ ತಳಹದಿಯ ಮೇಲೆ ಪುನಃ ಸಂಘಟಿಸುವುದು ಸಾಧ್ಯವಾಗುವುದು. ಆದ್ದರಿಂದ ಸಹಕಾರಿ ಬೇಸಾಯವು ರಾಷ್ಟ್ರದ ಸಮಾಜವಾದಿ ಧ್ಯೇಯದ ಸಾಧನೆಗೂ ಸಹ ಅತ್ಯಗತ್ಯವಾಗಿದೆ.

ಅಧ್ಯಾಯ 2

ಸಹಕಾರಿ ಬೇಸಾಯದಿಂದ ಬೇಸಾಯಗಾರರಿಗೆ ವೈಯಕ್ತಿಕ ಪ್ರಯೋಜನಗಳು

ಭಾರತೀಯ ಬೇಸಾಯಗಾರನು ಅವಿದ್ಯೆಯ ಕಾರಣದಿಂದ ಇಂದು ಇಡಿಯ ರಾಷ್ಟ್ರಹಿತವನ್ನು ವ್ಯಾಪಕವಾದ ಅಥವಾ ದೂರದೃಷ್ಟಿಯಿಂದ ವಿಚಾರಿಸ ಹೋಗುವುದಿಲ್ಲ. ವೈಯಕ್ತಿಕವಾಗಿ ತನಗೇನು ಸಹಕಾರಿ ಬೇಸಾಯದಿಂದ ಪ್ರಯೋಜನವಾಗುತ್ತದೆ ಎಂಬ ಸಂಕುಚಿತ ದೃಷ್ಟಿಯಿಂದ ವಿಚಾರಿಸುತ್ತಾನೆ. ರಾಷ್ಟ್ರಹಿತದ ವಿಶಾಲವಾದ ವಿಚಾರವನ್ನು ಅವನಲ್ಲಿ ಬೆಳೆಸುವುದು ಸಹಕಾರಿ ಬೇಸಾಯದ ಯಶಸ್ಸಿಗೂ ಹಾಗೂ ದೇಶದ ಅಭಿವೃದ್ಧಿಗೂ ಅತ್ಯಗತ್ಯ. ಬೇಸಾಯಗಾರನ ವೈಯಕ್ತಿಕ ಹಿತ ದೇಶದ ಹಿತದಿಂದ ಬೇರೆಯಾಗಿಲ್ಲ. ಅವು ಒಂದಕ್ಕೊಂದು ಪೂರಕವಾಗಿವೆ.

ರೈತನ ವೈಯಕ್ತಿಕ ಹಿತದ ದೃಷ್ಟಿಯಿಂದಲೂ ಸಹಕಾರಿ ಬೇಸಾಯವು ಲಾಭದಾಯಕವಾದದ್ದೆಂದು ಅವನಿಗೆ ಮನಗಾಣಿಸುವುದು ಅಗತ್ಯವಾಗಿದೆ. ಸಹಕಾರಿ ಬೇಸಾಯದಿಂದ ವೈಯಕ್ತಿಕವಾಗಿ ರೈತರಿಗಾಗುವ ಲಾಭಗಳನ್ನು ಕೆಳಗೆ ವಿವರಿಸಿದೆ:

1. ವಿಪತ್ತಿನಲ್ಲಿ ಸಂರಕ್ಷಣೆ

ವೈಯಕ್ತಿಕ ಬೇಸಾಯದಲ್ಲಿ ಒಬ್ಬ ಬೇಸಾಯಗಾರನು ಹಂಗಾಮಿನಲ್ಲೆಲ್ಲ ದುಡಿದಿರಬಹುದು. ಆದರೆ ಒಮ್ಮೆ ಬಿತ್ತುವ ಅಥವಾ ಒಕ್ಕಣೆಯ ಕಾಲಕ್ಕೆ ಅವನು ರೋಗದಿಂದ ಹಾಸಿಗೆ ಹಿಡಿದರೆ ಮತ್ತು ಅವನ ಕೆಲಸಕ್ಕೆ ಕೆಲಸಗಾರರನ್ನು ಹಚ್ಚುವುದಾಗದಿದ್ದರೆ ಅವನ ಬೆಳೆಯೆಲ್ಲ ಹಾಳಾಗಿ ಅವನು ಇಡೀ ವರ್ಷ ದುಡಿದದ್ದೆಲ್ಲ ವ್ಯರ್ಥವಾಗಬಹುದು. ಬೇಸಾಯ ಸಂಘದಲ್ಲಿ ಶ್ರಮಿಕ ಸದಸ್ಯರ ಸಂಘಟನದಿಂದ ಇಂಥ ತೊಂದರೆಯನ್ನು ಸುಗಮವಾಗಿ ದೂರಮಾಡಬಹುದು. ಒಬ್ಬಿಬ್ಬ ಸದಸ್ಯರು ಅನಾರೋಗ್ಯದಿಂದ ಕೆಲಸಕ್ಕೆ ಬಾರದಿದ್ದರೂ ಉಳಿದ ಸದಸ್ಯರು ಬಿತ್ತನೆ, ಒಕ್ಕಣೆ ಮುಂತಾದ ಮಹತ್ವದ ಬೇಸಾಯ ಕೆಲಸಗಳನ್ನು ಸಕಾಲದಲ್ಲಿ ಮಾಡಿ ಮುಗಿಸಬಹುದು. ಈ ರೀತಿಯಲ್ಲಿ ಅನಾರೋಗ್ಯದಿಂದ ಕೆಲಸಕ್ಕೆ ಬಾರದ ಸದಸ್ಯನು ಸಹ-ವರ್ಷದ ದುಡಿತದ ಪ್ರತಿಫಲವನ್ನೆಲ್ಲ ಕಳೆದುಕೊಳ್ಳದೆ, ಅನಾರೋಗ್ಯದ ಕೆಲವು ದಿವಸಗಳ ಹೊರತಾಗಿ ಉಳಿದ ದುಡಿದ ದಿವಸಗಳಿಗೆ ಸಾಕಷ್ಟು ಫಲವನ್ನು ಪಡೆಯುವನು.

2. ಪ್ರತಿಯೊಬ್ಬನಿಗೂ ಶಕ್ತಿಗನುಸರಿಸಿ ಕೆಲಸ

ವೈಯಕ್ತಿಕ ಸಾಗುವಳಿಯಲ್ಲಿ ಬೇಸಾಯಗಾರನು ಮುದುಕನೇ ಇರಲಿ, ಹುಡುಗನೇ ಇರಲಿ, ಸ್ವಸ್ಥನಿರಲಿ, ಅಸ್ವಸ್ಥನಿರಲಿ, ಬೇಸಾಯದ ಹಗುರು, ಭಾರವಾದ ಎಲ್ಲ ಕೆಲಸ

ಗಳನ್ನು ತಾನೇ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ತನಗೆ ನೀಗದ ಕೆಲಸಗಳಿಗಾಗಿ ಅವನು ಕೂಲಿಯ ಆಳುಗಳನ್ನು ಹಚ್ಚಬೇಕಾಗುವುದು. ಅದಕ್ಕೆ ಅವನ ಬಳಿ ಹಣ ವಿರದಿದ್ದರೆ ಅವನ ಬೇಸಾಯವು ಹಾಳುಬೀಳುತ್ತದೆ. ಹಾಗೆಯೇ ತನ್ನ ಆಶ್ರಿತರಾದ ಮುದುಕರಿಗೆ, ಮಹಿಳೆಯರಿಗೆ ಅವನು ಕೈತುಂಬ ಲಾಭದಾಯಕವಾದ ಉದ್ಯೋಗ ವನ್ನು ಒದಗಿಸಲಾರನು. ಇಂಥ ರೈತನು ಬೇಸಾಯ ಸಂಘದಲ್ಲಿ ಸೇರಿದನೆಂದರೆ, ಅಲ್ಲಿ ಅವನಿಗೆ ಅವನ ವಯಸ್ಸು, ಶಕ್ತಿಗೆ ತಕ್ಕಂತೆ ಕೆಲಸವನ್ನು ಒದಗಿಸಲಾಗುವುದು. ಅಲ್ಲದೆ ಅವನ ಆಶ್ರಿತರಿಗೂ ತಕ್ಕ ಒಂದಿಲ್ಲೊಂದು ಉದ್ಯೋಗ ಹೆಚ್ಚು ಅವಧಿಯವರೆಗೆ ದೊರಕಬಲ್ಲದು. ಅದರಿಂದ ಅವನ ಪರಿವಾರದ ಒಟ್ಟು ಆದಾಯವೂ ಹೆಚ್ಚುವುದು.

3. ಬೇಸಾಯ ಸಂಘದಲ್ಲಿ ರೈತನು ಲಾಭದಾಯಕವಾದ ಬೆಳೆಯಯೋಜನೆ ಮಾಡುವನು.

ವೈಯಕ್ತಿಕ ಬೇಸಾಯಗಾರನು ತನ್ನ ತುಂಡು ಹೊಲದಲ್ಲಿ ಭೂಮಿಯ ಅರ್ಹತೆ ಯನ್ನು ಹೆಚ್ಚು ಲಕ್ಷಿಸದೆ, ಆಹಾರದ ಬೆಳೆಯೇ ಆಗಲಿ, ದುಡ್ಡಿನ ಬೆಳೆಯೇ ಆಗಲಿ. ಕೆಲವೇ ಬೆಳೆಗಳನ್ನು ಬೆಳೆಯಬಲ್ಲನು. ಬೇರೆ ಬೇರೆ ಪ್ರಕಾರದ ಹೆಚ್ಚು ಆದಾಯದ ಬೆಳೆಗಳನ್ನು ಬೆಳೆಯಲು ಅವನಿಗೆ ಸಾಕಷ್ಟು ಭೂಮಿಯೂ ಇರುವುದಿಲ್ಲ; ಬೇರೆ ಅನು ಕೂಲತೆಗಳೂ ಇರುವುದಿಲ್ಲ. ಮಳೆ, ಗಾಳಿಗಳು ಪ್ರತಿಕೂಲವಾಗಿ, ಅವನ ಕೆಲವೇ ಬೆಳೆಗಳು ಹಾಳಾದರೂ ಅವನ ಭವಿಷ್ಯವೇ ಮಣ್ಣುಗೂಡಿದಂತೆ. ಇಂತಹ ಚಿಕ್ಕ ಬೇಸಾಯಗಾರರು ತಮ್ಮ ತುಂಡು ಹೊಲಗಳ ಒಂದು ಬೇಸಾಯ ಸಂಘವನ್ನು ಸಂಘಟಿಸಿಕೊಂಡರೆಂದರೆ ಅವರು ಒಂದುಗೂಡಿಸಿದ ಭೂಮಿಯಲ್ಲಿ ಭೂಮಿಗೆ ತಕ್ಕಂತೆ ಅನೇಕ ತರಹದ ಹೆಚ್ಚು ಆದಾಯದ ಬೆಳೆಗಳನ್ನು ಬೆಳೆಯಲು ಸಾಧ್ಯವಾಗುವುದು. ಅವುಗಳಲ್ಲಿ ಪ್ರತಿಕೂಲ ಮಳೆಗಾಳಿಗಳಿಂದ ಕೆಲವು ಬೆಳೆಗಳು ಹಾಳಾದರೂ ಉಳಿದ ಬೆಳೆ ಗಳಿಂದ ಸಾಕಷ್ಟು ಉತ್ಪತ್ತಿ ದೊರೆಯುವುದು. ಅಲ್ಲದೆ ಬೇಸಾಯ ಸಂಘವು ತನ್ನ ಸಾಮೂಹಿಕ ಶ್ರಮಸಾಧನಗಳಿಂದ ವಿನಾಶಕಾರಿ ಮಳೆಗಾಳಿಗಳಂತಹ ಕುತ್ತುಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಎದುರಿಸಿ ಹಾಳಾಗುವ ಬೆಳೆಗಳನ್ನೂ ಬಹುಮಟ್ಟಿಗೆ ಉಳಿಸಬಲ್ಲದು. ಹೀಗೆ ಏನೇ ನೈಸರ್ಗಿಕ ವಿಪತ್ತು ಬಂದರೂ ಸಹಕಾರಿ ಬೇಸಾಯ ದಿಂದ ಬೇಸಾಯಗಾರನಿಗೆ ವೈಯಕ್ತಿಕವಾಗಿಯೂ ಖಂಡಿತವಾಗಿ ನಿಶ್ಚಿತ ಮತ್ತು ಹೆಚ್ಚಿನ ಆದಾಯವು ದೊರಕುವುದು.

4. ಬೇಸಾಯ ಸಂಘದಲ್ಲಿ ಬಡ ಬೇಸಾಯಗಾರನ ಪತ್ತು ಹೆಚ್ಚುವುದು.

ವೈಯಕ್ತಿಕವಾಗಿ ಚಿಕ್ಕ ಬೇಸಾಯಗಾರನಿಗೆ ತನ್ನ ತುಂಡು ಭೂಮಿಯಲ್ಲಿ ಸುಧಾರಿಸಿದ ಬೇಸಾಯ ಕೈಕೊಳ್ಳಲು ಬೇಸಾಯ ಬಂಡವಾಳು 1000 ರೂಪಾಯಿ ಗಳಾದರೂ ಬೇಕು. ಅಲ್ಲದೆ ನಿಶ್ಚಿತ ಆದಾಯ ಪಡೆಯಲು ನೀರಾವರಿಯ ಬಾವಿ ಹಾಗೂ ಅದಕ್ಕೆ ನೀರೆತ್ತುವ ಪಂಪು ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು. ಅದಕ್ಕೆ ಅವನಿಗೆ ಮತ್ತೆ 6000 ರೂಪಾಯಿಗಳಾದರೂ ಬೇಕು. ಹೀಗೆ ಅವನ 4–5 ಎಕರೆಯ

ತುಂಡು ಭೂಮಿಯ ಮೇಲೆ 9000 ರೂಪಾಯಿಯ ಬಂಡವಾಳ ಬೇಕಾಗುವುದು. ಇಷ್ಟು ಬಂಡವಾಳ ಅವನ ತುಂಡು ಜಮೀನಿಗೆ ಭಾರವಾಗುವುದರಿಂದ ಅವನಿಗೆ ಅಷ್ಟು ಹಣ ದೊರಕುವುದು ಕಷ್ಟಸಾಧ್ಯ. ಚಿಕ್ಕ ಬೇಸಾಯಗಾರರು ಬೇಸಾಯ ಸಂಘದಲ್ಲಿ ಸೇರಿದ ಬಳಿಕ ಅವರ ಸಾಮೂಹಿಕ ಶ್ರಮಸಾಧನಗಳಿಂದ ಅವರ ಪತ್ತು ಅಂದರೆ ಸಾಲ ಪಡೆಯುವ ಶಕ್ತಿಯೂ ಹೆಚ್ಚುವುದು. ಆದರಿಂದ ಅವರು ಹೆಚ್ಚು ಬೇಸಾಯ ಸುಧಾರಣೆಗಳನ್ನು ಕೈಕೊಳ್ಳಲು, ಸಹಾಯಕ ಉದ್ಯೋಗಗಳನ್ನು ಕೈಕೊಳ್ಳಲು ಹೆಚ್ಚು ಲಾಭದಾಯಕವಾದ ಉದ್ಯೋಗ ಪಡೆದು ತಮ್ಮ ಜೀವನ ಸ್ಥಿತಿಯನ್ನು ಸುಧಾರಿಸಿಕೊಳ್ಳಲೂ ಸಾಧ್ಯವಾಗುವುದು.

5. ಸಹಕಾರಿ ಬೇಸಾಯದಿಂದ ಸಾಮೂಹಿಕ ಸಮೃದ್ಧಿ

ವೈಯಕ್ತಿಕ ಬೇಸಾಯದಲ್ಲಿ ಕೆಲವೇ ದಕ್ಷ ಬೇಸಾಯಗಾರರು ತಮ್ಮ ಜಾಣತನ ದಿಂದ ಬಹುಮಟ್ಟಿಗೆ ತಮ್ಮ ಅಸಹಾಯ ನೆರೆಯ ಬಂಧುಗಳ ಶೋಷಣೆಮಾಡಿ ಅಭಿವೃದ್ಧಿ ಹೊಂದುತ್ತಾರೆ. ಅವರು ತಮ್ಮ ಕುಶಲತನದಿಂದ ತಮ್ಮ ನೆರೆಯವರ ಸಮೃದ್ಧಿ ಹಾಗೂ ದೇಶದ ಸಮೃದ್ಧಿ ಮಾಡಲಾರರು. ಅವರು ಬೇಸಾಯ ಸಂಘದಲ್ಲಿ ಸೇರಿದರೆಂದರೆ ಅವರಲ್ಲಿಯೇ ಹೆಚ್ಚು ವಿಶಾಲವಾದ ಹಾಗೂ ದೇಶಭಕ್ತಿಯ ದೃಷ್ಟಿ ಬೆಳೆಯುವುದು. ಏಕೆಂದರೆ ಆಗ ಅವರ ಬುದ್ಧಿ, ಕುಶಲತೆಗಳ ಉಪಯೋಗವು ಬೇಸಾಯ ಸಂಘದ ಎಲ್ಲ ಸದಸ್ಯರ ಸಮಸ್ತ ಭೂಮಿಗಾಗಿ ಆಗುವುದು. ಹೀಗೆ ಅವರು ಸದಸ್ಯರ ಸಾಮೂಹಿಕ ಅಭಿವೃದ್ಧಿಗಾಗಿಯೂ. ದೇಶದ ಉನ್ನತಿಗಾಗಿಯೂ ತಮ್ಮ ಸೇವೆ ಸಲ್ಲಿಸಲನುವಾಗುವುದು.

6. ಸಹಕಾರಿ ಬೇಸಾಯದಿಂದ ಬೇಸಾಯಗಾರನಿಗೆ ಆರ್ಥಿಕ ಸಂರಕ್ಷಣೆ

ಬಡ ವೈಯಕ್ತಿಕ ಬೇಸಾಯಗಾರರು ಬಹಳ ಅಸಹಾಯರಾಗಿರುತ್ತಾರೆ. ಔಷಧ, ಚಿಕಿತ್ಸೆ. ಮುಪ್ಪು. ದುರ್ಬಲತೆಗಳಲ್ಲಿ ಸಂರಕ್ಷಣೆ ಯಾವುದೂ ಅವರಿಗಿಲ್ಲದೆ ಅವರು ತೊಳಲಾಡುತ್ತಾರೆ. ಎಂಥ ಕಡ್ಡಾಯದ ಶಿಕ್ಷಣದ ಕಾಯಿದೆ ಬಂದರೂ ಹೊಟ್ಟೆಯ ಪಾಡಿಗಾಗಿ ತಮ್ಮ ಹಸುಮಕ್ಕಳನ್ನು ಮೇಕೆಕಾಯಲು ಕಳುಹಿಸುವುದು ಅವರಿಗೆ ತಪ್ಪುವುದಿಲ್ಲ. ಮದುವೆ. ಮುಂಜಿ ಎಂದರೆ ಅವರಿಗೆ ಇನ್ನಷ್ಟು ಸಾಲದ ಹೊರೆಯೇ. ಅಲ್ಲದೆ ಅವರ ಆರ್ಥಿಕ ಜೀವನದ ಅಭದ್ರತೆಯ ಕಾರಣದಿಂದ ಅವರ ಅನೇಕ ಮಕ್ಕಳು ಮದುವೆ ಆಗದೆಯೇ ಉಳಿಯಬೇಕಾಗುತ್ತದೆ.

ಸಹಕಾರಿ ಬೇಸಾಯ ಸಂಘದಲ್ಲಿ ಇಂಥ ಕಂಗೆಟ್ಟ ಬೇಸಾಯಗಾರರು ಸೇರಿ ಕೊಂಡರೆ ಅವರ ಜೀವನ ಸ್ಥಿತಿಯಲ್ಲಿ ಸುಧಾರಣೆಯಾಗುತ್ತದೆ. ಬೇಸಾಯ ಸಂಘವು ತನ್ನ ಸಾಮೂಹಿಕ ಆದಾಯದಿಂದ ಕ್ರಮೇಣವಾಗಿ ಸಾಕಷ್ಟು ಸಾಮಾಜಿಕ ಕಲ್ಯಾಣ ನಿಧಿಯನ್ನು ಸಂಗ್ರಹಿಸುತ್ತದೆ. ಅದರಿಂದ ಬೇಸಾಯ ಸಂಘವು ಶಿಕ್ಷಣ, ಚಿಕಿತ್ಸೆ, ವಿಮೆ, ಮದುವೆ ಮುಂತಾದ ಎಲ್ಲ ಬೇಸಾಯಗಾರರ ಅವಶ್ಯಕತೆಗಳನ್ನು ಪೂರೈಸಲು ಸಹಾಯ

ಮಾಡುತ್ತದೆ. ಹೀಗೆ ಅದು ತನ್ನ ಸದಸ್ಯರ ಎಲ್ಲ ಅನುಕೂಲತೆಗಳಿಗಾಗಿ ಸಹಾಯ ಮಾಡುವುದು. ಅವರಿಗೆ ವಾಸದ ಮನೆಗಳ ಸೌಕರ್ಯವನ್ನು ಒದಗಿಸುತ್ತದೆ.

7. ಸಹಕಾರಿ ಬೇಸಾಯದಿಂದ ಸಹಕಾರಿ ಮಾರಾಟದ ಲಾಭ

ಸಹಕಾರಿ ಮಾರಾಟದ ಲಾಭಗಳ ಬಗ್ಗೆ ಬೇಕಾದಷ್ಟು ಪ್ರಚಾರ ನಡೆಯುತ್ತಿದ್ದರೂ ತುಂಡು ಬೇಸಾಯಗಾರರು ಅದರ ಲಾಭ ಪಡೆಯುತ್ತಿಲ್ಲ. ಏಕೆ? ತಾವು ಶ್ರಮ ಪಟ್ಟು ಉತ್ಪಾದಿಸಿದ ಮಾಲಿಗೆ ಅವರಿಗೆ ಹೆಚ್ಚಿನ ಬೆಲೆ ಬೇಕಿಲ್ಲವೆಂದಲ್ಲವೇ ವರ್ಷವೆಲ್ಲ ಬೆವರುಸುರಿಸಿ ಅವರು ಬೆಳೆದ ರಾಗಿಯನ್ನು ಯಾವುದೋ ಒಬ್ಬ ದಲಾಲನಿಗೆ ಅಸಹಾಯಕತೆಯಿಂದ ಕಡಮೆ ಬೆಲೆಗೆ ಮಾರಿಬಿಡುತ್ತಾರೆ. ಅದೇ ರಾಗಿಯನ್ನು ರೈತರು ತಮ್ಮಲ್ಲಿಯ ದವಸ ತೀರಿದ ಬಳಿಕ, ತಾವು ಮಾರಿದ ಬೆಲೆಗಿಂತ ಒಂದೂವರೆ ಅಥವಾ ಎರಡರಷ್ಟು ಬೆಲೆಕೊಟ್ಟು ಕೊಂಡುಕೊಳ್ಳುತ್ತಾರೆ. ಹಸಿವೆಯ ಬವಣೆಯನ್ನು ತೀರಿಸಲು ಅವರು ಎಲ್ಲೆಲ್ಲಿಯೋ ಸಾಲಮಾಡಿರುತ್ತಾರೆ. ಅಂತೆಯೇ ಮುಂದೆ ಅವರು ಸುಗ್ಗಿಯ ನಂತರ ಕೈಗೆ ಬಂದಂತೆ ತಮ್ಮ ಉತ್ಪತ್ತಿಯನ್ನು ಮಾರಲೇ ಬೇಕಾಗುತ್ತದೆ. ಹೀಗೆ ಬೇಸಾಯಗಾರರು ಹಳ್ಳಿಯ ಸಾಹುಕಾರರ, ದಲಾಲರ ಬಿಗಿಹಿಡಿತದಿಂದ ಹೊರಬೀಳಲು ಸಾಧ್ಯವೇ ಆಗುವುದಿಲ್ಲ ಮತ್ತು ಅವರಿಗೆ ಸಹಕಾರಿ ಮಾರಾಟದ ಲಾಭವೆಂದೂ ಮುಟ್ಟುವುದಿಲ್ಲ.

ತನ್ನ ಬೆಳೆಯುತ್ತಿರುವ ಆದಾಯದಿಂದ ಹಾಗೂ ಸಾಮೂಹಿಕ ಸಾಧನಗಳಿಂದ ಬೇಸಾಯ ಸಂಘವು ಅದರಲ್ಲಿ ಸೇರಿದ ಬಡ ಬೇಸಾಯಗಾರರನ್ನು ಕ್ರಮೇಣವಾಗಿ ಹಳ್ಳಿಯ ಸಾಹುಕಾರರ ಹಾಗೂ ದಲಾಲರ ಬಂಧನದಿಂದ ಮುಕ್ತಮಾಡುತ್ತದೆ. ಅದು ಇಂಥ ಬೇಸಾಯಗಾರರ ಬೇಸಾಯದ ಸಾಲದ ಒಜ್ಜೆಯನ್ನು ಹಗುರು ಮಾಡುವುದಲ್ಲದೆ ಅವರ ಮನೆತನದ ಅವಶ್ಯಕತೆಗಳಿಗೂ ಸೋವೀ ಬಡ್ಡಿಯಿಂದ ಸಾಲ ಒದಗಿಸುತ್ತದೆ. ಅದಲ್ಲದೆ ಎಂಥ ಪರಿಸ್ಥಿತಿಯಲ್ಲೂ ಬೇಸಾಯ ಸಂಘವು ತನ್ನ ಬೇಸಾಯದ ಅವಶ್ಯಕತೆಗಳನ್ನೆಲ್ಲ ಒಟ್ಟಿನಲ್ಲಿ ಮಾರಾಟ ಸಂಘದಿಂದ ಯೋಗ್ಯ ಬೆಲೆಗೆ ಕೊಳ್ಳುತ್ತದೆ. ತನ್ನ ಮಾರಾಟದ ಉತ್ಪತ್ತಿಯನ್ನು ಅದು ಸಾಕಷ್ಟು ಅವಧಿಯವರೆಗೆ ತಡೆಹಿಡಿದು ಯೋಗ್ಯ ಬೆಲೆ ಬಂದಾಗ ಮಾರಾಟ ಸಂಘದ ಮುಖಾಂತರ ಒಟ್ಟಿನಲ್ಲಿ ಮಾರುತ್ತದೆ. ಹೀಗೆ ಚಿಕ್ಕ ಬೇಸಾಯಗಾರರಿಗೆ ಸಹಕಾರಿ ಮಾರಾಟದ ಪೂರ್ಣ ಲಾಭಗಳು ದೊರಕುವುದು ಸಹಕಾರಿ ಬೇಸಾಯದಿಂದ ಮಾತ್ರ ಸಾಧ್ಯವಾಗುತ್ತದೆ.

8. ಸಹಕಾರಿ ಬೇಸಾಯದಿಂದ ಚಿಕ್ಕಬೇಸಾಯಗಾರನ ತುಂಡು ಭೂಮಿಗಳ ಕ್ರೋಢೀಕರಣ

ಚಿಕ್ಕ ಬೇಸಾಯಗಾರನ ಹಿಡುವಳಿಯು ಚಿಕ್ಕದಾಗಿರುವುದಷ್ಟೇ ಅಲ್ಲ, ನಾಲ್ಕಾರು ಕಡೆಗೆ ನಾಲ್ಕಾರು ತುಂಡುಗಳಲ್ಲಿ ಹರಿದು ಹಂಚಿರುತ್ತದೆ. ಪರಿವಾರದ ವಿಭಜನೆಯಾದಂತೆ ಈ ತುಂಡುಗಳು ಹೆಚ್ಚುತ್ತಲೇ ಹೋಗುತ್ತವೆ. ಚಿಕ್ಕ ಬೇಸಾಯಗಾರನು

ತನ್ನ ಇಂಥ ತುಂಡು ಭೂಮಿಯಲ್ಲಿ ತನ್ನ ಅಲ್ಪ ಸಾಧನಗಳಿಂದ ಲಾಭದಾಯಕವಾಗಿ ಸಾಗುವಳಿ ನಡೆಸುವುದು ಸಾಧ್ಯವೇ ಆಗುವುದಿಲ್ಲ. ಅಸಹಾಯನಾಗಿ ಅವನು ಇಂಥ ತುಂಡುಗಳನ್ನು ಗ್ರಾಮದಲ್ಲಿಯ ಶ್ರೀಮಂತ ರೈತರಿಗೆ ಕೊಟ್ಟು ಒಂದಿಷ್ಟು ಪ್ರತಿಫಲ ದಿಂದ ಸಮಾಧಾನ ಮಾಡಿಕೊಳ್ಳುತ್ತಾನೆ. ಭೂಮಿಯ ಕ್ರೋಢೀಕರಣದ ಕಾಯಿದೆಯು ಜಾರಿಯಲ್ಲಿ ಬಂದಲ್ಲಿ ಸಹ ಅದರಿಂದ ಅವನಿಗೆ ಹೆಚ್ಚಿನ ಪ್ರಯೋಜನವಾಗುವುದಿಲ್ಲ. ಅದರಿಂದ ಅವನ ಹಿಡುವಳಿಯು ಲಾಭದಾಯಕವಾಗಿ ದೊಡ್ಡದಾಗುವುದಿಲ್ಲ ಮತ್ತು ಪಾರಿವಾರಿಕ ವಿಭಜನೆಯಿಂದ ದಾಖಲೆಗಳಲ್ಲಿ ಕಾಣಿಸದಿದ್ದರೂ, ಸಾಗುವಳಿಯಲ್ಲಿ ಮಾತ್ರ ಅವನ ಹಿಡುವಳಿ ತುಂಡಾಗುತ್ತಲೇ ಹೋಗುತ್ತದೆ. ಬೇಸಾಯ ಸಂಘದಲ್ಲಿ ಅವನು ತನ್ನ ತುಂಡು ಹಿಡುವಳಿಯೊಂದಿಗೆ ಸೇರಿದನೆಂದರೆ, ದಾಖಲೆಗಳಲ್ಲಿ ಹಕ್ಕು, ಖಾತೆಗಳು ಹೆಚ್ಚಿಗೆ ಇದ್ದರೂ, ಅವನು ಬೇರೆ ಚಿಕ್ಕ ಬೇಸಾಯಗಾರರ ಜೊತೆಗೆ ಕೂಡಿ ತನ್ನ ಹಿಡು ವಳಿಯನ್ನು ಲಾಭದಾಯಕವಾಗಿ ವಿಸ್ತರಿಸುತ್ತಾನೆ. ಸುಗಮವಾಗಿ ಅವನ ತುಂಡುಗಳ ಕ್ರೋಢೀಕರಣವಾಗುತ್ತದೆ. ಅವನ ತುಂಡು ಸಾಗುವಳಿಯ ಅಸಹಾಯಕತನವು ದೂರಾಗಿ, ಶ್ರೀಮಂತ ಬೇಸಾಯಗಾರರಿಂದ ತನ್ನ ಭೂಮಿಯನ್ನು ಸಾಗುವಳಿ ಮಾಡುತ್ತಾನೆ.

9. ವೈಯಕ್ತಿಕವಾಗಿ ನೀಗದ ಅಭಿವೃದ್ಧಿಯ ಕಾರ್ಯಗಳ ಸಾಧನೆ

ತನ್ನ ಪಾರಿವಾರಿಕ ಶ್ರಮವು ಬಹಳಷ್ಟು ಕೆಲಸವಿಲ್ಲದೆ ಹಾಳಾಗುತ್ತಿದ್ದರೂ ಚಿಕ್ಕ ಬೇಸಾಯಗಾರನು ಈ ಮೊದಲು ಸೂಚಿಸಿದಂತೆ ತನ್ನ ತುಂಡು ಭೂಮಿಯಲ್ಲಿ ಒಂದು ನೀರಾವರಿ ಬಾವಿಯನ್ನು ತೋಡಲಾರನು; ಒಂದು ಒಡ್ಡನ್ನು ಹಾಕಲಾರನು; ಏಕೆಂದರೆ ಇಂಥ ಸುಧಾರಣೆಯ ಕೆಲಸವನ್ನು ಅವನು ಕೇವಲ ತನ್ನ ಪರಿವಾರದ ಹೆಚ್ಚಿನ ಶ್ರಮ ಅಥವಾ ಉಳಿತಾಯದಿಂದ ಮಾಡಿ ಮುಗಿಸಬೇಕಾದರೆ 20–30 ವರ್ಷಗಳು ಹತ್ತ ಬಹುದು. ಇಂಥ ನಿರುಪಯೋಗದ, ಕೂಡಲೇ ಲಾಭದಾಯಕವಲ್ಲದ ದುಡಿತ ಮಾಡಲು ಅವನು ಮನಸ್ಸು ಮಾಡಲಾರನು. ಆದರೆ ಇಂಥ 20 ಚಿಕ್ಕಬೇಸಾಯ ಗಾರರು ಒಂದು ಬೇಸಾಯ ಸಂಘದಲ್ಲಿ ತಮ್ಮ ಶ್ರಮ ಸಾಧನಗಳನ್ನು ಒಂದುಗೂಡಿಸಿದರೆ ಅವರೆಲ್ಲರ ಹೆಚ್ಚಿನ ಶ್ರಮ ಹಾಗೂ ಉಳಿತಾಯಗಳನ್ನು ಕೂಡಿಸಿ ಅಂಥ ಸುಧಾರಣೆಯ ಕೆಲಸವನ್ನು ಕೇವಲ 6 ತಿಂಗಳಲ್ಲಿ ಮಾಡಿಮುಗಿಸುವುದು ಸಾಧ್ಯವಾಗಬಹುದು. ಹೀಗೆ ಚಿಕ್ಕ ಬೇಸಾಯಗಾರರು ಸಹಕಾರಿ ಬೇಸಾಯದಿಂದ ತಮ್ಮದೇ ಅಲ್ಪ ಉಳಿತಾಯ, ಹಾಗೂ ಹಾಳಾಗುತ್ತಿರುವ ಶ್ರಮಗಳನ್ನು ಒಂದುಗೂಡಿಸಿ ತಮ್ಮ ತುಂಡು ಭೂಮಿಗಳಲ್ಲಿ ಹೆಚ್ಚೆಚ್ಚು ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತ ಹೋಗುವುದು ಸಾಧ್ಯವಾಗುವುದು.

ಅಧ್ಯಾಯ 3

ಸಹಕಾರಿ ಕೃಷಿಯ ವಿರೋಧವು ಸಾಧುವಲ್ಲ

ಭಾರತದಲ್ಲಿ ಹಲವಾರು ಕಾರಣಗಳಿಂದ ಸಹಕಾರಿ ಬೇಸಾಯದ ವಿರುದ್ಧ ಅನೇಕ ಆಕ್ಷೇಪಗಳನ್ನು ಎತ್ತಲಾಗುತ್ತದೆ. ಇಂಥ ಆಕ್ಷೇಪಗಳ ಪ್ರಚಾರದಿಂದ ಸಹಕಾರಿ ಬೇಸಾಯದ ವಿರುದ್ಧ ಸಾಕಷ್ಟು ಅಪಪ್ರಚಾರವಾಗಿ ಸಹಕಾರಿ ಬೇಸಾಯದ ಪ್ರಗತಿಯು ಕುಂಠಿತವಾಗಿದೆ. ದೇಶದಲ್ಲಿ ಸಹಕಾರಿ ಬೇಸಾಯದ ಬೆಳವಣಿಗೆಗೆ ಅನುಕೂಲವಾದ ಮಾನಸಿಕ ವಾತಾವರಣವನ್ನೂ ಹಬ್ಬಿಸಲು ಇಂಥ ಆಕ್ಷೇಪಗಳ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಹೆಚ್ಚಿಸುವುದು ಅತ್ಯಗತ್ಯವಿದೆ.

ಸಹಕಾರಿ ಬೇಸಾಯದಿಂದ ಉತ್ಪತ್ತಿಯು ಹೆಚ್ಚದೇ ?

ಸಾಮಾಜಿಕ ಬೇಸಾಯದಲ್ಲಿ ಸೋಮಾರಿತನ ಮಾತ್ರ ಬೆಳೆಯುತ್ತದೆ; ಆಡಳಿತದ ವೆಚ್ಚವು ಬೆಳೆಯುತ್ತದೆ, ಹೀಗಾಗಿ ಆದಾಯಕ್ಕಿಂತ ವೆಚ್ಚವೇ ಹೆಚ್ಚುತ್ತದೆ. ಭೂಮಿಯ ಒಡೆತನ ಹಾಗೂ ವೈಯಕ್ತಿಕ ದುಡಿತಗಳಿಂದ ಬೇಸಾಯಗಾರನು ಹೆಚ್ಚೆಚ್ಚು ಆಸ್ಥೆಯಿಂದ ಹೆಚ್ಚು ಉತ್ಪತ್ತಿಯನ್ನು ಬೆಳೆಯುವುದು ಸಾಧ್ಯ. ಸಾಮೂಹಿಕ ಬೇಸಾಯದಿಂದ ವಿಸ್ತೃತ ಬೇಸಾಯವನ್ನು ಸಾಧಿಸಬಹುದು; ಆದರೆ ಅದರಿಂದ ಅದೇ ಪ್ರಮಾಣದಲ್ಲಿ ಉತ್ಪತ್ತಿಯು ಹೆಚ್ಚುವುದಿಲ್ಲ. ಬೇಸಾಯವು ಹೆಚ್ಚು ವಿಸ್ತಾರವಾದಂತೆ ಇಳಿಮುಖ ಆದಾಯ ನಿಯಮವು ಕಾರ್ಯಮಾಡುತ್ತದೆ. ಆದರಿಂದ ಸಹಕಾರಿ ಬೇಸಾಯವು ನಷ್ಟದಾಯಕವಾಗುತ್ತದೆ. ಇದೊಂದು ವಾದ.

ಈ ಆಕ್ಷೇಪದ ವಾದವು ಬೇಸಾಯವು ಎಷ್ಟು ಮಿತಿಗಿಂತ ಹೆಚ್ಚು ವಿಸ್ತರಿಸಿದರೆ ಅನ್ವಯಿಸುತ್ತದೆ ಎಂಬುದನ್ನು ಪ್ರಾಮಾಣಿಕವಾಗಿ ಪರೀಕ್ಷಿಸಬೇಕು. ಭಾರತದಲ್ಲಿ ಶೇಕಡಾ 60ರಷ್ಟು 5 ಎಕರೆಗಿಂತ ಕಡಮೆ ಇರುವ ಹಿಡುವಳಿಗಳ ಹಾಗೂ ಶೇಕಡಾ 38ರಷ್ಟು $2\frac{1}{2}$ ಎಕರೆಗಿಂತ ಕಡಮೆ ಇರುವ ಹಿಡುವಳಿಗಳ ಬೇಸಾಯವು ಲಾಭದಾಯಕ ವಾಗಿ ನಡೆಯುತ್ತಿಲ್ಲ. ಇಂಥ ಹಿಡುವಳಿಗಳ ಅನಾರ್ಥಿಕ ಬೇಸಾಯವು ಬೇಸಾಯ ಗಾರರ ಪರಿವಾರಕ್ಕೆ ಪೂರ್ಣ ಉದ್ಯೋಗವನ್ನು ಕೊಡುತ್ತಿಲ್ಲ. ಎತ್ತು, ಸಲಕರಣೆಗಳ ಪೂರ್ಣ ಉಪಯೋಗವೂ ಆಗುತ್ತಿಲ್ಲ. ಇಂಥ ಚಿಕ್ಕ ಬೇಸಾಯಗಾರರು ತಮ್ಮ ಹೊಟ್ಟೆ ಹೊರೆಯಲು ಶ್ರೀಮಂತ ರೈತರ ಹೊಲಗಳಲ್ಲಿ ಕೂಲಿಗಾಗಿ ದುಡಿಯಲು ಹೋಗಬೇಕಾಗುತ್ತದೆ. ಅಲ್ಲಿಯೂ ಅವರಿಗೆ ಸಾಕಷ್ಟು ಉದ್ಯೋಗ ದೊರಕದೆ ಉಪವಾಸ, ಅರೆಹೊಟ್ಟೆಯ ಜೀವನವನ್ನು ಅವರು ನಡೆಸುತ್ತಿದ್ದಾರೆ. ಇಂಥ ಬೇಸಾಯ ಗಾರರಿಗೆ ಒಂದುಗೂಡಿ ವಿಸ್ತಾರವಾದ ಬೇಸಾಯ ನಡೆಸಿದರೆ ನಷ್ಟಕ್ಕೀಡಾಗುತ್ತೀರೆಂದು ಭಯಭೀತಗೊಳಿಸುವದೆಂದರೆ ಅರೆಹೊಟ್ಟೆ ಉಂಡವನಿಗೆ ಹೊಟ್ಟೆತುಂಬ ಉಂಡರೆ

ಅಜೀರ್ಣವಾಗುತ್ತದೆಂದು ಅಂಜಿಸಿದಂತೆ. ಇಂಥ ಚಿಕ್ಕ ಬೇಸಾಯಗಾರರು 15–20 ಜನರು ತಮ್ಮ ಚಿಕ್ಕ ಹಿಡುವಳಿಗಳನ್ನು 50 ಹಾಗೂ 100 ಎಕರೆಗಳಷ್ಟು ಒಂದುಗೂಡಿಸಿ ಬೇಸಾಯ ನಡೆಸಿ ತಮ್ಮ ಶ್ರಮಸಾಧನಗಳನ್ನು ಪೂರ್ಣ ಉಪಯೋಗಿಸಿದರೆ 'ಇಳಿಕೆಯ ಆದಾಯ ನಿಯಮ'ವು ಎಂದಿಗೂ ಕಾರ್ಯಮಾಡದು. ಸಾವಿರಾರು ಎಕರೆಯ ಬೇಸಾಯವನ್ನು ನಡೆಸಿದಾಗ ಈ ನಿಯಮದ ಪ್ರಭಾವ ಬಿದ್ದರೂ ಬಿದ್ದೀತು. ಆದ್ದರಿಂದ ಭಾರತದ ಅತಿ ತುಂಡುಹಿಡುವಳಿಗಳ ಚಿಕ್ಕ ಬೇಸಾಯಗಾರರು ಒಂದುಗೂಡಿ ಸಹಕಾರಿ ಬೇಸಾಯ ನಡೆಸಿದರೆ, ತಮ್ಮ ಬೇಸಾಯವನ್ನು ಖಂಡಿತವಾಗಿ, ಲಾಭದಾಯಕವಾಗಿ ನಡೆಸಿ ತಮ್ಮ ಉತ್ಪತ್ತಿಯನ್ನು ಮೊದಲಿಗಿಂತ ಹೆಚ್ಚಿಸುವರು.

ಸಹಕಾರಿ ಬೇಸಾಯದಿಂದ ಉತ್ಪತ್ತಿಯು ಹೆಚ್ಚಾಗದಿದ್ದರೆ ಸಹಕಾರಿ ಬೇಸಾಯವು ನಿಷ್ಪ್ರಯೋಜಕವಾದದ್ದು. ಆದರೆ ಭೂಮಿಯ ಒಡೆತನದ ಹಾಗೂ ವೈಯಕ್ತಿಕ ಬೇಸಾಯದ ಚಮತ್ಕಾರಿಕ ಶಕ್ತಿಯಿಂದ ಇದುವರೆಗೆ ನಿರೀಕ್ಷಿಸಿದಷ್ಟು ಬೇಸಾಯದ ಉತ್ಪತ್ತಿಯು ಏಕೆ ಹೆಚ್ಚಾಗಿಲ್ಲ? ಏಕೆ ಬಹುಸಂಖ್ಯಾತ ಬೇಸಾಯಗಾರರು ಈ ಹಸುರುಕ್ರಾಂತಿಯ ಯುಗದಲ್ಲೂ ಇನ್ನೂ ಓಬೀರಾಯನ ಕಾಲದ ಬೇಸಾಯವನ್ನು ನಡೆಸುತ್ತಿದ್ದಾರೆ? ಈ ಬಗ್ಗೆ ಗಂಭೀರವಾಗಿ ಯೋಚಿಸಬೇಕು.

ವಿಷಮ ತುಲನೆಯ ವಿಚಿತ್ರ ತರ್ಕ

ವಿಸ್ತಾರವಾದ ಬೇಸಾಯಕ್ಕಿಂತ ಚಿಕ್ಕಬೇಸಾಯವೇ ಹೆಚ್ಚು ಉತ್ಪಾದಕವೆಂದೂ ಸಿದ್ಧಪಡಿಸಲು ಬೇರೆ ಬೇರೆ ಬಗೆಯಿಂದ ಚಿಕ್ಕ ಹಾಗೂ ದೊಡ್ಡ ಬೇಸಾಯಗಳ ವಿಷಮ ತುಲನೆ ಮಾಡಲಾಗುತ್ತದೆ. ಇಂಥ ಹೋಲಿಕೆಯು ಯುಕ್ತಿಸಂಗತವಾದದ್ದಲ್ಲ. ವಿಸ್ತೃತ ವಾದ ಒಂದು ಬೇಸಾಯ ಸಂಘದಲ್ಲಿ ಭೂಮಿಯು ವಿಶಾಲವಾದದ್ದಷ್ಟೇ ಸಾಲದು. ಅದರ ಜೊತೆಗೆ ಅದಕ್ಕೆ ಅಗತ್ಯವಿದ್ದ ಬಂಡವಾಳ, ಶ್ರಮ ಸಂಚಾಲನೆಯ ಕುಶಲತೆ, ತಾಂತ್ರಿಕ ಅನುಭವ ಎಲ್ಲವೂ ಅದೇ ಪ್ರಮಾಣದಲ್ಲಿ ಸಮನಾಗಿ ಹೆಚ್ಚಬೇಕು. ಅಂಥ ಬೇಸಾಯ ಸಂಘದ ದೊಡ್ಡ ಫಾರ್ಮಿನ ಉತ್ಪತ್ತಿಯೊಡನೆ ಒಬ್ಬ ಅದೇ ಸ್ಥಿತಿಯ ವೈಯಕ್ತಿಕ ಬೇಸಾಯಗಾರನ ಉತ್ಪತ್ತಿಯನ್ನು ಹೋಲಿಸಿದಲ್ಲಿ ಬೇಸಾಯ ಸಂಘದ ಉತ್ಪತ್ತಿಯು ಕಡಮೆ ಕಾಣಲಾರದು ಅಥವಾ ಬೇಸಾಯ ಸಂಘದ ಸಾಧನಸೌಕರ್ಯ ಗಳು ಹೆಚ್ಚದೇ ಇದ್ದಾಗ ಅದೇ ಸ್ಥಿತಿಯಿದ್ದಿರುವ ಪಕ್ಕದ ಬಡ ಬೇಸಾಯಗಾರನ ಭೂಮಿಯ ಉತ್ಪತ್ತಿಯೊಡನೆ ಬೇಸಾಯ ಸಂಘದ ಉತ್ಪತ್ತಿಯ ತುಲನೆ ಮಾಡಿದರೆ ಬೇಸಾಯ ಸಂಘದ ಉತ್ಪತ್ತಿಯು ಹೆಚ್ಚಾದದ್ದೇ ಕಂಡುಬರುತ್ತದೆ ಅಥವಾ ಎಲ್ಲಕ್ಕೂ ಯುಕ್ತಿಸಂಗತ ತುಲನೆ ಎಂದರೆ ಬೇಸಾಯ ಸಂಘದಲ್ಲಿ ಸೇರಿದ ಭೂಮಿಯ ಸ್ಥಿತಿಯು ಮೊದಲು ವೈಯಕ್ತಿಕ ಬೇಸಾಯವಿದ್ದಾಗ ಏನಿತ್ತು, ಅದರಲ್ಲಿ ಪ್ರತಿ ಎಕರೆಗೆ, ಪ್ರತಿ ವ್ಯಕ್ತಿಗೆ ಉತ್ಪತ್ತಿ ಎಷ್ಟು ಬರುತ್ತಿತ್ತು, ಈಗ ಸಾಮೂಹಿಕ ಬೇಸಾಯವಾದ ಬಳಿಕ ಉತ್ಪತ್ತಿಯು ಎಷ್ಟು ಬರುತ್ತಿದೆ ಹೀಗೆ ಹೋಲಿಸಿದರೆ ಬೇಸಾಯ ಸಂಘದ ಮೇಲ್ಮೆ ಕಾಣುವುದು. ಎಲ್ಲ ಸಾಧನ ಸಂಪತ್ತು, ವೈಜ್ಞಾನಿಕ ಕುಶಲತೆ, ಫಲವತ್ತಾದ ಭೂಮಿ ಇದ್ದ ಒಬ್ಬ ಶ್ರೀಮಂತ ವೈಯಕ್ತಿಕ ಬೇಸಾಯಗಾರನ ಉತ್ಪತ್ತಿಯೊಡನೆ, ಒಂದು

ಬಡಕಲು ಭೂಮಿಯು, ಸಾಧನಹೀನ ಬಡಕಲು ಬೇಸಾಯ ಸಂಘದ ಉತ್ಪತ್ತಿಯನ್ನು ಹೋಲಿಸಿ ಸಹಕಾರಿ ಬೇಸಾಯವನ್ನು ಹೀಯಾಳಿಸುವುದು ಸರಿಯಲ್ಲ. ಸಾಮಾನ್ಯವಾಗಿ ಬೇಸಾಯ ಸಂಘದ ಭೂಮಿಯು ಬಡಕಲಾಗಿರುತ್ತದೆ. ಅದರ ಸದಸ್ಯರು ನಿರ್ಗತಿಕರು, ಸಾಧನಹೀನರು. ಅದಕ್ಕೆ ದೊರಕುವ ಹೊರಗಿನ ಸಹಾಯ ಅಥವಾ ಬಂಡವಾಳ ಸಾಕಷ್ಟು ಇರುವುದಿಲ್ಲ. ಇಂಥ ಸ್ಥಿತಿಯಲ್ಲಿ ಬೇಸಾಯ ಸಂಘದ ಭೂಮಿಯಲ್ಲಿ ಪರಮಾವಧಿ ಉತ್ಪತ್ತಿಯು ದೊರಕಲಿಲ್ಲವೆಂದು ಗೊಣಗುಟ್ಟದೆ, ಅದರ ಭೂಮಿ, ಬಂಡವಾಳಕ್ಕೆ ತಕ್ಕಂತೆ ಉತ್ಪತ್ತಿಯು ಹೆಚ್ಚಿತೋ ಇಲ್ಲವೋ ನೋಡಿದರೆ ಉತ್ಪತ್ತಿಯು ಹೆಚ್ಚಿದ್ದೇ ಕಂಡುಬರುತ್ತದೆ.

ವಿಸ್ತೃತ ಬೇಸಾಯದಲ್ಲಿ ಆಡಳಿತ ದೋಷ, ವೆಚ್ಚ ಬೆಳೆಯುತ್ತವೆಂಬ ಆಕ್ಷೇಪವನ್ನು ಸಹಕಾರಿ ಬೇಸಾಯಕ್ಕೆ ಹೊಂದಿಸುವುದು ಸರಿಯಲ್ಲ. ಸಾವಿರಾರು ಎಕರೆಗಳ ದೊಡ್ಡ ಬೇಸಾಯದಲ್ಲಿ ಈ ದೋಷವಿರುವುದು ನಿಜವಿರಬಹುದು. ಆದರೆ ಭಾರತದ ಬಹು ಸಂಖ್ಯಾತ ಅನಾರ್ಥಿಕ ಹಿಡುವಳಿಗಳನ್ನು ಒಂದುಗೂಡಿಸಿ ಸ್ಥಾಪಿಸಲ್ಪಟ್ಟ 50–100 ಎಕರೆಗಳ ಬೇಸಾಯ ಸಂಘಗಳ ಬೇಸಾಯಕ್ಕೆ ಈ ನಿಯಮವು ಅನ್ವಯಿಸದು. ಇವು ಗಳಲ್ಲಿ ಆಗುವ ಬೇಸಾಯದ ವಿಸ್ತಾರವು ಚಿಕ್ಕಬೇಸಾಯಗಾರರಿಗೆ ಲಾಭದಾಯಕವೇ ಆಗುವುದು. ವಾಸ್ತವಿಕ ಪರಿಸ್ಥಿತಿಗಳನ್ನು ಕಡೆಗಣಿಸಿ ಸಹಕಾರಿ ಬೇಸಾಯದ ವಿಸ್ತೃತ ಬೇಸಾಯವನ್ನು ತೆಗಳಿ, ಚಿಕ್ಕ ತುಂಡುಬೇಸಾಯದ ಗುಣಗಾನ ಮಾಡುವುದು ಸಮಂಜಸವಲ್ಲ. ಇಂಥ ವಿಷಯ ತುಲನೆಮಾಡುವುದೇ ಆದರೆ ಭಾರತದ ಒಂದು ಚಿಕ್ಕ ಬಡಕಲು ಬೇಸಾಯವನ್ನು ಅಮೇರಿಕೆಯ ಒಂದು ಸಾಧನ ಸಂಪನ್ನ ವಿಶಾಲವಾದ ಫಾರ್ಮಿನೊಡನೆ ಹೋಲಿಸಿ ವಿಸ್ತೃತ ಬೇಸಾಯವೇ ಲಾಭದಾಯಕ ವಾದದ್ದೆಂದು ನಿಷ್ಕರ್ಷಿಸುವುದು ಸಮಂಜಸವಾಗಲಿಕ್ಕಿಲ್ಲ.

ಸಹಕಾರಿ ಬೇಸಾಯದಲ್ಲಿ ಅದರಲ್ಲಿ ಸೇರುವ ಸದಸ್ಯರ ಸಾಧನ ಸಾಮಗ್ರಿ, ಕುಶಲತೆ, ಅನುಭವ ಇವೆಲ್ಲವೂ ಒಂದುಗೂಡಿ ಅವುಗಳ ಶಕ್ತಿಯು ಗುಣನಾತ್ಮಕ ವಾಗಿಯೂ ಹೆಚ್ಚಾಗುತ್ತದೆ. ಇದರಿಂದ ಸಹಕಾರಿ ಬೇಸಾಯದಿಂದ ಅಭಿವೃದ್ಧಿಯೂ, ಉತ್ಪತ್ತಿಯೂ ಖಂಡಿತವಾಗಿ ಹೆಚ್ಚಾಗುತ್ತವೆ.

ಸಹಕಾರಿ ಬೇಸಾಯದಲ್ಲಿ ಉತ್ಪಾದನೆ ವೆಚ್ಚ ಹೆಚ್ಚಾಗಲಾರದು

ಉತ್ಪಾದನೆಯ ವೆಚ್ಚವನ್ನು ಕಡಮೆ ಮಾಡುವುದು ಸಹಕಾರಿ ಬೇಸಾಯದ ಒಂದು ಮುಖ್ಯ ಉದ್ದೇಶ. ಚಿಕ್ಕ ತುಂಡು ಬೇಸಾಯದಲ್ಲಿ ಜಮೀನು ಹಾಳಾಗುವು ದಲ್ಲದೆ ಎತ್ತು ಮತ್ತು ಸಲಕರಣೆಗಳ ಹಾಗೂ ದುಡಿಮೆಗಾರರ ಶ್ರಮದ ಶಕ್ತಿಯೂ ಹಾಳಾಗುತ್ತಿರುತ್ತದೆ. ತುಂಡು ಬೇಸಾಯದಲ್ಲಿ 10 ಜನರು ಎತ್ತು ಕಾಯುವುದು ಅಥವಾ ಹೊಲ ಕಾಯುವುದು ಮಾಡುತ್ತಿದ್ದರೆ ಆ ಕೆಲಸವನ್ನು ಸಾಮೂಹಿಕ ಬೇಸಾಯ ದಲ್ಲಿ ಇಬ್ಬರೇ ಮಾಡುವುದು ಸಾಧ್ಯವಾಗಬಹುದು. ಇದರಿಂದ ಖರ್ಚು ಹೆಚ್ಚಾಗದೆ ಕಡಮೆಯೇ ಆದೀತು. ತುಂಡು ಬೇಸಾಯದಲ್ಲಿ ವ್ಯಾಜ್ಯಗಳು ಹೆಚ್ಚು ಇರುತ್ತವೆ.

ನೀರಾವರಿಯ ಬೇಸಾಯದಲ್ಲಿ ಹೀಗೆ ನೀರಿನ ದುರುಪಯೋಗವಾಗಿ ನೀರು ಹಾಳಾಗುವುದೂ ಬಹಳ. ಈ ಎಲ್ಲ ವ್ಯಯಗಳೂ ಸಹಕಾರಿ ಬೇಸಾಯದಲ್ಲಿ ಕಡಮೆಯೇ ಆಗುವುವು.

ಸಹಕಾರಿ ಬೇಸಾಯದಲ್ಲಿ ಸಿಬ್ಬಂದಿ ವೆಚ್ಚ, ಮೇಲ್ವಿಚಾರಣೆಯ ವೆಚ್ಚ ಹೆಚ್ಚುವುವೆಂಬ ದೂರನ್ನು ಬಹಳ ಹೇಳಲಾಗುತ್ತದೆ. ಈ ಹೆಚ್ಚಿನ ವೆಚ್ಚವು ಸಹಕಾರಿ ಬೇಸಾಯವನ್ನು ನಷ್ಟದಾಯಕವಾದದ್ದನ್ನಾಗಿ ಮಾಡುತ್ತದಂತೆ. ತುಂಡು ಬೇಸಾಯದಲ್ಲಿ ಒಂದು ಎರಡು ಎಕರೆಯ ಬೇಸಾಯದ ಮೇಲ್ವಿಚಾರಣೆ ಮಾಡುವುದಕ್ಕೂ ಮನೆಯುವನೊಬ್ಬನು ಮೇಲ್ವಿಚಾರಣೆ ಮಾಡುತ್ತಾನೆ. ಇಂಥ ಶ್ರಮದ ವ್ಯಯವನ್ನು ಲೆಕ್ಕದಲ್ಲಿ ಹಿಡಿಯುವುದೇ ಇಲ್ಲ. ಏಕೆಂದರೆ ಅದು ಕಾಣಬರುವುದಿಲ್ಲ. ತುಂಡು ಬೇಸಾಯದಲ್ಲಿ ಮನೆಯ ಜನರೇ ಸೇರಿ ಎಲ್ಲ ಬೇಸಾಯದ ಕೆಲಸಗಳನ್ನು ಮಾಡುತ್ತಾರೆ. ಆದ್ದರಿಂದ ವೆಚ್ಚವು ಹೆಚ್ಚಾಗದೆ ಕೆಲಸವು ಬಹಳವಾಗುತ್ತದೆ. ಸಹಕಾರಿ ಬೇಸಾಯದಲ್ಲಿ ಎಲ್ಲದಕ್ಕೂ ಕೂಲಿಯನ್ನು ಕೊಡಬೇಕಾಗುತ್ತದೆಂದು ದೂರು. ಹಾಗಾದರೆ ತುಂಡು ಜಮೀನಿನಲ್ಲಿ ದುಡಿಯುವ ಮನೆಯ ಜನರ ಶ್ರಮಕ್ಕೆ ಬೆಲೆಯೇ ಇಲ್ಲವೇ? ಆದರೆ ವೈಯಕ್ತಿಕ ಬೇಸಾಯದಲ್ಲಿ ಅದರ ಲೆಕ್ಕವನ್ನೇ ಹಾಕುವುದಿಲ್ಲ. ಇದೆಲ್ಲದರ ಲೆಕ್ಕಹಾಕಿದರೆ ವೈಯಕ್ತಿಕ ಬೇಸಾಯದ ವೆಚ್ಚವು ಸಹಕಾರಿ ಬೇಸಾಯದ ವೆಚ್ಚಕ್ಕಿಂತ ಬಹಳೇ ಹೆಚ್ಚಾಗುತ್ತದೆಂಬುದರಲ್ಲಿ ಸಂಶಯವಿಲ್ಲ.

ಸಹಕಾರಿ ಬೇಸಾಯದಿಂದ ಬೇಸಾಯಗಾರನ ಸ್ವಾತಂತ್ರ್ಯಕ್ಕೆ ಧಕ್ಕೆಯೇ ?

ಬೇಸಾಯಗಾರನು ಬೇಸಾಯ ಸಂಘದಲ್ಲಿ ಸೇರಿದನೆಂದರೆ ಅವನ ಸ್ವಾತಂತ್ರ್ಯದ ಅಪಹರಣವೇ ಆಗಿ ಅವನೊಬ್ಬ ದಾಸನಾಗಿ ಬಿಡುತ್ತಾನೆಂದು ಅನೇಕರ ತಿಳಿವಳಿಕೆ. ಈಗ ಬಡ ಚಿಕ್ಕ ಬೇಸಾಯಗಾರನಿಗಿರುವ ಸ್ವಾತಂತ್ರ್ಯವಾದರೂ ಯಾವುದು? ಅವನು ಎಷ್ಟೇ ಹೇಸರಗತ್ತೆಯಂತೆ ದುಡಿದರೂ ಅವನಿಗೆ ಹಂಗಾಮಿನಲ್ಲಿ ಬಿತ್ತಲು ಒಳ್ಳೇ ಬೀಜ ಕೂಡ ಸಿಕ್ಕದು. ತನ್ನ ಚಿಕ್ಕ ತುಂಡು ಭೂಮಿಯಲ್ಲಿ ಹಾಕದೆ ತನ್ನದೇ ತಿಪ್ಪೆಯ ಗೊಬ್ಬರವನ್ನು ಹಸಿವೆಯ ಬವಣೆಯನ್ನು ತಣಿಸಲು ಅವನು ಮಾರಿಕೊಂಡು ಬಿಡುತ್ತಾನೆ. ಎತ್ತು, ಗಾಡಿ, ನೇಗಿಲು ಮುಂತಾದ ಸಲಕರಣೆಗಳು ಅವನ ಬಳಿ ಸಾಕಷ್ಟು ಇರದ್ದರಿಂದ ಬೇರೆಯವರಿಂದ ಅವುಗಳ ನೆರವು ಸಿಕ್ಕರೇನೇ ಅವನ ಬೇಸಾಯ. ಈ ಎಲ್ಲ ಅಸಹಾಯತನದಿಂದ ಅವನಿಗೆ ತನ್ನ ತುಂಡುಭೂಮಿಯಲ್ಲಿ ಸಾಕಷ್ಟು ಬೆಳೆದು ತನ್ನ ಜೀವನ ಸಾಗಿಸುವುದಕ್ಕಾಗದೆ ಹಳ್ಳಿಯ ಸಾಹುಕಾರರಿಂದ ಚೀಲಕ್ಕೆ ಚೀಲ ಬಡ್ಡಿತೆತ್ತು ಅವನು ಕಾಳಿನ ಸಾಲ ತಂದು ತಿನ್ನಬೇಕಾಗುತ್ತದೆ. ಬಡ್ಡಿಯಲ್ಲಿಯೇ ಅವನು ಮಕ್ಕಳನ್ನು ಜೀತ ದುಡಿಸಬೇಕು. ಸಾಮಾನ್ಯವಾಗಿ ಚಿಕ್ಕ ಬೇಸಾಯಗಾರನಿಗಿರುವ ಸ್ವಾತಂತ್ರ್ಯ ಇದೇ.

ಚಿಕ್ಕ ಬೇಸಾಯಗಾರರು ಒಂದುಗೂಡಿಕೊಂಡು ಮಾತ್ರ ಈ ಅಸಹಾಯತನವನ್ನು ದೂರಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಒಗ್ಗಟ್ಟಿನ ಶಕ್ತಿಯಿಂದ, ಸಾಮೂಹಿಕ

ಯೋಜನೆಯ ಮಿತವ್ಯಯದಿಂದ ಅವರಿಗೆ ಬೇಸಾಯದ ಸೌಕರ್ಯಗಳನ್ನು ದೊರಕಿಸಿ ಕೊಂಡು ತಮ್ಮ ಭೂಮಿ-ಶ್ರಮಗಳ ಪೂರ್ಣ ಉಪಯೋಗ ಮಾಡಿ ತಮ್ಮ ಉತ್ಪತ್ತಿಯನ್ನು ಅವರು ಹೆಚ್ಚಿಸಿಕೊಳ್ಳುತ್ತಾರೆ. ಅದರಿಂದ ಅವರ ಜೀವನವೂ ಸಮೃದ್ಧವಾಗಿ ಹಳ್ಳಿಯ ಸಾಹುಕಾರರ, ದಲಾಲರ ಹಂಗಿನಿಂದ ಅವರು ಮುಕ್ತರಾಗುತ್ತಾರೆ. ಹೀಗೆ ಸಹಕಾರಿ ಬೇಸಾಯದಿಂದ ಚಿಕ್ಕ ಬೇಸಾಯಗಾರರಿಗೆ ನಿಜವೆಂದರೆ ಸ್ವಾತಂತ್ರ್ಯದ ದಾರಿ ತೆರೆಯುತ್ತದೆಂದೇ ಹೇಳಬೇಕು.

ಇನ್ನು ಬೇಸಾಯಗಾರ ಒಂದು ಗುಂಪಿನಲ್ಲಿ ಒಂದು ಯೋಜನೆಯ ಪ್ರಕಾರ ದುಡಿಯಲು ಒಪ್ಪಿದ ಬಳಿಕ ತಾನೇ ಒಪ್ಪಿಕೊಂಡ ಒಂದು ದುಡಿತದ ಶಿಸ್ತಿಗೆ ಅವನು ಒಪ್ಪಿಕೊಳ್ಳಬೇಕಾಗುತ್ತದೆ. ಅದು ಸಹ ತಾನೇ ನಿರ್ಧರಿಸಿಕೊಂಡ ಒಂದು ಅವಧಿಯ ವರೆಗೆ. ಇಷ್ಟೊಂದು ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಸ್ವಾತಂತ್ರ್ಯವನ್ನು ಅವನಿಗೆ ಒದಗಿಸುವ ದುಡಿತದ ಶಿಸ್ತು ಅವನಿಗೆ ಸಂಕೋಲೆಯೇ? ವೈಯಕ್ತಿಕ ಬೇಸಾಯದಲ್ಲಿ ಮನಸ್ಸಿಗೆ ಬಂದರೆ ದುಡಿದ; ಮನಸ್ಸಿಗೆ ಬಾರದಿದ್ದರೆ ಬಿಟ್ಟ; ಮನ ಬಂದ ಬೀಜ, ಗೊಬ್ಬರ ಹಾಕಿ, ಬೆಳೆ ಹಾಳುಮಾಡಿಕೊಂಡ; ಸ್ವೇಚ್ಛಾಚಾರವೇ ಅವನ ಸ್ವಾತಂತ್ರ್ಯ! ಇಂಥ ಸ್ವೇಚ್ಛಾಚಾರದಿಂದ ಅವನ ಕಲ್ಯಾಣವೂ ಇಲ್ಲ, ದೇಶದ ಕಲ್ಯಾಣವೂ ಇಲ್ಲ, ಪಟ್ಟಭದ್ರ ಹಿತದ ಉದ್ದೇಶದಿಂದ ಅವನಲ್ಲಿ ತನ್ನ ಸ್ವೇಚ್ಛಾಚಾರದ ನಿಷ್ಠೆಯನ್ನೂ, ಸಾಮೂಹಿಕ ದುಡಿತದ ಬಗ್ಗೆ ತಿರಸ್ಕಾರವನ್ನೂ ಬೇರೂರಿಸಲಾಗುತ್ತದಷ್ಟೇ.

ಚಿಕ್ಕ ಬೇಸಾಯಗಾರನು ತನ್ನ ಅಸಹಾಯತನದಿಂದ ಹೆಚ್ಚೆಚ್ಚು ಸಾಹುಕಾರನ ಸಾಲದಲ್ಲಿ ಮುಳುಗುತ್ತ ಕೊನೆಗೆ ತನ್ನ ತುಂಡು ಭೂಮಿಯನ್ನೂ ಸಾಹುಕಾರನಿಗೆ ಅವನು ಮಾರಿಬಿಡುತ್ತಾನೆ ಅಥವಾ ಭೋಗ್ಯಕ್ಕೆ ಹಾಕಿಬಿಡುತ್ತಾನೆ. ಹೀಗೆ ಅವನು ತನ್ನ ತುಂಡು ಭೂಮಿಯಿಂದಲೇ ಬೇರ್ಪಡಿಸಲ್ಪಡುತ್ತಾನೆ. ಭೂಮಿಯನ್ನು ಮಾರದೇ ಇದ್ದ ಬೇಸಾಯಗಾರರು ಸಹ ತಮ್ಮ ಬಳಿಯ ಎತ್ತು, ಸಲಕರಣೆ ಇಲ್ಲದ್ದಕ್ಕೆ ತಮ್ಮ ತುಂಡು ಭೂಮಿಗಾಗಿ ಇಂಥ ಸಲಕರಣೆಗಳನ್ನು ಇಡುವುದೂ ಒಜ್ಜೆಯೆನಿಸಿ, ಶ್ರೀಮಂತ ಬೇಸಾಯಗಾರರಿಗೆ ಲಾವಣಿ(ಗೇಣಿ)ಕರಾರಿನಿಂದಾಗಲಿ, ಪಾಲಿನಿಂದಾಗಲಿ, ಅಲ್ಪಸ್ವಲ್ಪ ಪ್ರಾಪ್ತಿಗಾಗಿ ಸಾಗುವಳಿಗಾಗಿ ಹಚ್ಚಿ ಬಿಡುತ್ತಾರೆ. (ಇದು ಕಾಯಿದೆಯಿಂದ ಅಪರಾಧವೆನಿಸಿದರೂ, ಒಳಗೊಳಗೇ ನಡೆದಿರುತ್ತದೆ). ಸಾಮೂಹಿಕ ಬೇಸಾಯವು ಚಿಕ್ಕ ಬೇಸಾಯಗಾರರ ಇಂಥ ಅಸಹಾಯತನವನ್ನು ಹೋಗಲಾಡಿಸಿ, ಅನುಕೂಲತೆಗಳನ್ನು ಒದಗಿಸಿ ಬೇರೆ ಬೇಸಾಯಗಾರರೊಡನೆ ಕೂಡಿಕೊಂಡು ತಮ್ಮ ಭೂಮಿಯನ್ನು ಲಾಭದಾಯಕವಾಗಿ ಸಾಗುವಳಿ ಮಾಡಲು ಅನುಕೂಲ ಮಾಡಿಕೊಡುತ್ತದೆ.

ಸಹಕಾರಿ ಬೇಸಾಯದಲ್ಲಿ ರೈತನು ಅಂಗೀಕರಿಸುವ ದುಡಿತದ ಶಿಸ್ತು ಅವನ ಮೇಲೆ ಯಾರೋ ಹೇರಿದ್ದಲ್ಲ. ಸ್ವಯಂಸ್ಫೂರ್ತಿಯಿಂದ ತಾನೇ ಅದನ್ನು ಸ್ವೀಕರಿಸಿದ್ದು: ತಾನೇ ಜನತಾಂತ್ರಿಕವಾಗಿ ಅದನ್ನು ನಡೆಸುತ್ತಾನೆ. ಇವರ ಸಾಕಷ್ಟು ಜಾಗೃತಿ ಮಾತ್ರ

ಅವನಲ್ಲಿ ಪ್ರಚಾರ ಶಿಕ್ಷಣಗಳಿಂದ ಉಂಟಾಗುವಂತೆ ಮಾಡಬೇಕಷ್ಟೇ. ಈ ತರಹದ ಜಾಗೃತಿಯಿಂದ ಬೇಸಾಯಗಾರನ ಕ್ರಿಯಾಶಕ್ತಿಯು ಕುಗ್ಗದೆ ಹೆಚ್ಚುತ್ತ ಹೋಗುತ್ತದೆ.

ಸಾಮೂಹಿಕ ದುಡಿತ ವ್ಯಕ್ತಿವಾದಿ ಮಾನವ ಸ್ವಭಾವಕ್ಕೆ ವಿಪರೀತ

ಮಾನವ ಸ್ವಭಾವವು ಮೂಲತಃ ವ್ಯಕ್ತಿವಾದಿ ಹಾಗೂ ಸ್ವಾರ್ಥಿಯಾಗಿರುತ್ತದೆ. ಸಾಮೂಹಿಕ ಬೇಸಾಯದಲ್ಲಿ ವ್ಯಕ್ತಿಹಿತ, ಸಮೂಹದ ಹಿತಗಳಲ್ಲಿ ತಾಕಲಾಟವಾಗುತ್ತದೆ. ಬೇಸಾಯಗಾರನು ತನ್ನ ವ್ಯಕ್ತಿಹಿತದ ಕಡೆಗೇ ಜಗ್ಗುವುದರಿಂದ ಅವನು ಸಮೂಹದ ಹಿತವನ್ನು ಕಡೆಗಾಣಿಸುತ್ತಾನೆ. ಇದರಿಂದ ಸಾಮೂಹಿಕ ಬೇಸಾಯವು ವಿಫಲವಾಗುತ್ತದೆ. ಬೇಸಾಯಗಾರನ ಮಾನವೀಯ ಸ್ವಾರ್ಥೀಸ್ವಭಾವವು ಬದಲಿಸದು. ಅದರಲ್ಲಿ ಭಾರತೀಯ ಬೇಸಾಯಗಾರನು ಜಗತ್ತಿನಲ್ಲೇ ಹೆಚ್ಚು ವ್ಯಕ್ತಿವಾದಿ. ಆದ್ದರಿಂದ ಬೇಸಾಯಗಾರನ ಸಾಮೂಹಿಕ ಸ್ವಭಾವದ ತಪ್ಪುಗ್ರಹಿಕೆಯನ್ನು ಆಧರಿಸುವ ಸಹಕಾರಿ ಬೇಸಾಯವು ಎಂದಿಗೂ ಯಶಸ್ವಿಯಾಗದು.

ಈ ಆಕ್ಷೇಪದಲ್ಲಿರುವ ಮಾನವ ಸ್ವಭಾವವು ಪರಿವರ್ತನಶೀಲವಲ್ಲವೆಂಬುದು ಸಾಧುವಲ್ಲ. ನಿಜವೆಂದರೆ ಮಾನವ ಸ್ವಭಾವವು ನಿರಂತರವಾಗಿ, ಅವ್ಯಾಹತವಾಗಿ ಪರಿವರ್ತನಶೀಲವಾಗಿದೆ. ಆದಿಯ ಕಾಡುಮಾನವನು ಪೂರ್ಣ ವ್ಯಕ್ತಿವಾದಿ. ಸ್ವಾರ್ಥಿ ಆಗಿದ್ದ. ಅವನು ಕ್ರಮೇಣ ತನ್ನ ಸಂರಕ್ಷಣೆ, ಜೀವನ ಹಾಗೂ ವಿಶ್ವಾಸಕ್ಕಾಗಿ ಸಹವಾಸ ಸಮಾಜವನ್ನು ಬೆಳೆಸಿಕೊಂಡ. ಅವನು ಪಶುವಿಗಿಂತ ಶ್ರೇಷ್ಠ; ಬುದ್ಧಿಜೀವಿ. ಹೆಚ್ಚೆಚ್ಚು ತನ್ನ ಆತ್ಮವಿಶ್ವಾಸಕ್ಕಾಗಿ ನಿರಂತರ ಚಿಂತಿಸುತ್ತ, ಪ್ರಯತ್ನವನ್ನೂ ಮಾಡುತ್ತ, ಮಾನವನು ಸಭ್ಯತೆ, ಸಂಸ್ಕೃತಿ, ಧರ್ಮ, ನೀತಿ, ಸೋದರಭಾವ, ಸೇವೆಯ ಆದರ್ಶ ಇವೆಲ್ಲವನ್ನೂ ಬೆಳೆಸಿಕೊಂಡಿರುವನು. ಇದೆಲ್ಲ ವಿಕಾಸವು ಅವನ ಸ್ವಭಾವದ ನಿರಂತರ ಪರಿವರ್ತನದಿಂದ. ಹೆಚ್ಚೆಚ್ಚು ಸಮಾಜಹಿತದ ಭಾವನೆ ಬೆಳೆದದ್ದರಿಂದ ಆಗಿದೆ. ಆದ್ದರಿಂದ ಸಹಕಾರಿ ಬೇಸಾಯ, ಸಮಾಜವಾದದಂಥ ಸಾಮಾಜಿಕ ವಿಶ್ವಾಸಕ್ಕಾಗಿ ಅಗತ್ಯವಿದ್ದ ಬೇಸಾಯಗಾರನ ಸಾಮೂಹಿಕ ಸ್ವಭಾವವು ಅಥವಾ ಅವನಲ್ಲಿ ಸಮೂಹ ಹಿತದ ಭಾವವು ಬೆಳೆಯದೆಂಬ ಅನುಮಾನವು ಸಮಂಜಸವಲ್ಲ. ನಿಜವೆಂದರೆ ಭಾರತೀಯ ಬೇಸಾಯಗಾರನು ತನ್ನ ಸಂಸ್ಕಾರಬಲದಿಂದ ಜಗತ್ತಿನಲ್ಲಿ ಬೇರೆ ದೇಶಗಳ ಬೇಸಾಯಗಾರನಿಗಿಂತ ಹೆಚ್ಚು ಸಮಾಜಹಿತದ ಭಾವನೆಯಿಂದ ದಾನಧರ್ಮ, ಪರೋಪಕಾರಗಳನ್ನು ಮಾಡುತ್ತಾನೆ. ಅವನು ಜಗತ್ತಿನಲ್ಲೇ ಹೆಚ್ಚು ವ್ಯಕ್ತಿವಾದಿ ಎಂದು ಅವನನ್ನು ದೂಷಿಸುವುದು ಸರಿ ಅಲ್ಲ.

ಸಮಾಜದಲ್ಲಿ ಬೆಳೆಯುತ್ತಿರುವ ಮಾನವನಲ್ಲಿ ವ್ಯಕ್ತಿಹಿತ, ಸಮೂಹ ಹಿತಗಳ ಮಾನಸಿಕ ತಾಕಲಾಟ ನಡೆಯುತ್ತಿರುವುದು ನಿಜ. ಸಮಾಜದಲ್ಲಿ ಸಮಾಜಹಿತಕ್ಕಾಗಿ ವ್ಯಕ್ತಿಹಿತವನ್ನು ತ್ಯಾಗಮಾಡುವುದಕ್ಕೆ ಅಥವಾ ಸಮಾಜಹಿತಕ್ಕೆ ವ್ಯಕ್ತಿಹಿತವನ್ನು ಸರಿಹೊಂದಿಸುವುದಕ್ಕೆ ಮಹತ್ವಕೊಡಲಾಗುತ್ತದೆ. ತನ್ನ ವ್ಯಕ್ತಿಹಿತಕ್ಕೆ ತಿಲಾಂಜಲಿ ಕೊಟ್ಟು

ದೇಶಕ್ಕಾಗಿ, ಸಮಾಜಕ್ಕಾಗಿ ಮಾಡಿದವರಿಗೆ, ಮಡಿದವರಿಗೆ ಹೆಚ್ಚೆಚ್ಚು ಗೌರವ, ಸನ್ಮಾನಗಳನ್ನು ಕೊಡಲಾಗುತ್ತದೆ. ಸರ್ವಸಾಮಾನ್ಯ ಜನರಲ್ಲಿ ಸಹ ಸಾಮಾಜಿಕ ಜಾಗೃತಿ ಹೆಚ್ಚಿದಷ್ಟು ಸಾಮಾಜಿಕ ಪ್ರಗತಿಯೂ ಹೆಚ್ಚುತ್ತದೆ: ಅಂತೆಯೇ ಸಾಮಾಜಿಕ ಜಾಗೃತಿಗೆ ಪ್ರೋತ್ಸಾಹಕೊಟ್ಟು ಬೆಳೆಸಲಾಗುತ್ತದೆ. ದೇಶದ ಉನ್ನತಿಗಾಗಿ, ಬೇಸಾಯಗಾರ ಜನತೆಯ ಉನ್ನತಿಗಾಗಿ, ಹೆಚ್ಚಿನ ಸಾಮಾಜಿಕ ಜಾಗೃತಿಯನ್ನು ಬೆಳೆಸುವ ಸಹಕಾರಿ ಬೇಸಾಯದ ಕಾರ್ಯಕ್ರಮವು ಮಾನವ ಸ್ವಭಾವಕ್ಕೆ ಅಥವಾ ಮಾನವ ಪ್ರಗತಿಗೆ ವಿರುದ್ಧವಾಗಲಾರದು.

ಕೆಲಮಟ್ಟಿಗೆ ಮಾನವ ಸ್ವಭಾವದ ಅಪರಿವರ್ತನಶೀಲತೆಯೂ, ಅಂದರೆ ಅಂಥ ರೂಢಿಶಕ್ತಿಯು ಸಮಾಜದ ಉನ್ನತಿಗಾಗಿ ಅಗತ್ಯವಿರುವ ನವೀನ ಸುಧಾರಣೆಗಳನ್ನು ವಿರೋಧಿಸುವುದು ನಿಜ. ಇಂಥ ರೂಢಿವಾದಿ ವಿರೋಧವನ್ನು ಪವಿತ್ರಮಾನವ ಸ್ವಭಾವವೆಂದು ಭಾವಿಸಿ ಅದಕ್ಕೆ ಮನಸೋಲುವುದು ದೇಶದ ಉನ್ನತಿಗಾಗಿ ಸಹಾಯಕವಾಗದು. ವಿಕಾಸ, ಶಿಕ್ಷಣ. ತರಬೇತು, ಪ್ರಚಾರ, ಸಾಮೂಹಿಕ ಕಾರ್ಯ ಇವೆಲ್ಲವುಗಳಿಂದ ರೂಢಿವಾದಿ ಮಾನವ ಸ್ವಭಾವವನ್ನು ಬದಲಿಸಲು ಮತ್ತು ನವೀನ ಸುಧಾರಣೆಗಳಿಗೆ ಅನುಕೂಲಮಾಡಲು ಸತತವಾಗಿ ಹೆಣಗಬೇಕಾಗುತ್ತದೆ. ಹೀಗೆ ಸಹಕಾರಿ ಬೇಸಾಯದ ಬೆಳವಣಿಗೆಗೆ ಸಹ ಅನುಕೂಲ ವಾತಾವರಣವನ್ನು ತಯಾರಿಸಲು, ಜನತೆಯಲ್ಲಿ ಜಾಗೃತಿ ಹೆಚ್ಚಿಸಲು ಹೆಚ್ಚು ತೀವ್ರತರವಾದ ಪ್ರಚಾರ ಶಿಕ್ಷಣಗಳನ್ನು ಕೈಕೊಳ್ಳುವುದು ಅಗತ್ಯ. ವ್ಯಕ್ತಿಹಿತದ ಭಾವನೆ. ಸಮೂಹ ಹಿತದ ಭಾವನೆಗಳನ್ನು ಹೆಚ್ಚೆಚ್ಚು ಸಮನ್ವಯಗೊಳಿಸುವುದೂ ಅಗತ್ಯವಿದೆ. ಸಹಕಾರಿ ಬೇಸಾಯವು ಸಾಮಾಜಿಕ ಜಾಗೃತಿಯ ತರಬೇತಿಯ ಕ್ಷೇತ್ರವೂ ಆಗುವುದು.

ಸಹಕಾರಿ ಬೇಸಾಯದಲ್ಲಿ ಕೆಲಸಕ್ಕೆ ಉತ್ತೇಜನವಿಲ್ಲವೇ ?

'ಸಹಕಾರಿ ಬೇಸಾಯದಲ್ಲಿ ಸೋಮಾರಿ, ಹಾಗೂ ಮೈಗಳ್ಳರಿಗೂ, ಕಷ್ಟಪಟ್ಟು ದುಡಿಯುವವರಿಗೂ ಸಮನಾದ ಪಾಲೇ? ಆದ್ದರಿಂದ ಅದರಲ್ಲಿ ಕೂಡಿ ದುಡಿಯುವಾಗ ಕೆಲಸಕ್ಕೆ ಉತ್ತೇಜನ ಬಾರದು' ಎಂಬುದೊಂದು ದೂರು. ಈ ದೂರಿನಲ್ಲಿ ಕೆಲವಂಶ ಸತ್ಯವಿದ್ದರೂ ಇದು ಸಂಪೂರ್ಣ ಸತ್ಯವಲ್ಲ. ಸಾಮಾನ್ಯವಾಗಿ ಮನುಷ್ಯನು ತನ್ನ ವೈಯಕ್ತಿಕ ಲಾಭದ ಆಶೆಯಿಂದಲೇ ಹೆಚ್ಚೆಚ್ಚು ದುಡಿಯುತ್ತಾನೆ. ಆದರೆ ಈ ಮೊದಲು ಹೇಳಿದಂತೆ ಮನುಷ್ಯನು ಬುದ್ಧಿಜೀವಿ ಹಾಗೂ ಸಮಾಜಜೀವಿ. ಹೆಚ್ಚುಕಡಮೆ ಅಂಶದಲ್ಲಾದರೂ ಸಾಮಾನ್ಯ ದುಡಿಮೆಗಾರರಲ್ಲಿ ಸಹ ತನ್ನ ಸಮಾಜದ ಹಿತದ ಜೊತೆಗೆ ತನ್ನ ಹಿತವನ್ನೂ ಸಾಧಿಸುವುದು ಸಾಧ್ಯವೆಂಬ ಅರಿವು ಇದ್ದೇ ಇರುತ್ತದೆ. ಇಲ್ಲದಿದ್ದರೆ ಹಳ್ಳಿಗಳಲ್ಲಿ ಸಾಮಾನ್ಯ ದುಡಿಮೆಗಾರ ಮಹಿಳೆಯರು ಸಹ ಬೇಸಾಯದ ಗುತ್ತಿಗೆಯ ಕೆಲಸಗಳನ್ನು ಗುಂಪು ಕಟ್ಟಿಕೊಂಡೇ ಏಕೆ ಮಾಡುತ್ತಾರೆ? ಸಾಮೂಹಿಕ ದುಡಿತವೇ ಅವರಿಗೆ ಲಾಭದಾಯಕವೆಂದು ಅವರು ತಿಳಿದಿರುತ್ತಾರೆ. ಸಾಮೂಹಿಕ ದುಡಿತಕ್ಕಿರುವಂತಹ ಸಾಮಾಜಿಕ ಉತ್ತೇಜನದ ಉಪಯೋಗಗಳನ್ನು ಸಹಕಾರಿ ಬೇಸಾಯದಲ್ಲಿ ಮಾಡಿಕೊಳ್ಳಬಹುದು. ಇಂಥ ಕೆಲಸಗಳಲ್ಲಿ ಹಳ್ಳಿಗರು ಬಣಜಿಗನಂತೆ ತಕ್ಕಡಿಯ

ಲೆಕ್ಕಹಾಕದೆ ದುಡಿಯುವ ಶಕ್ತಿಯಲ್ಲಿಯ ಹೆಚ್ಚುಕಡಮೆಗಳನ್ನು ಸಹ ದೊಡ್ಡ ಮನಸ್ಸಿನಿಂದ ಸಹಿಸಿಕೊಳ್ಳುತ್ತಾರೆ. 'ತನಗಾಗಿ ಎಲ್ಲರೂ' ಎಂಬ ಭಾವನೆಯನ್ನಷ್ಟೇ ಅಲ್ಲ, 'ಎಲ್ಲರಿಗಾಗಿ ತಾನೂ' ಎಂಬ ಭಾವನೆಯನ್ನು ಹೆಚ್ಚೆಚ್ಚು ಬೆಳೆಸುವ ಕಾರ್ಯ ಬೇಸಾಯ ಸಂಘದ ಕಾರ್ಯಾಚರಣೆಯಿಂದ ಒಂದೇ ಸಮನೆ ನಡೆಯುತ್ತದೆ. ಇದರಿಂದ ಸಾಮೂಹಿಕ ಬೇಸಾಯಗಾರರ ಸಾಮೂಹಿಕ ಭಾವನೆಯು ಹೆಚ್ಚೆಚ್ಚು ಬೆಳೆಯುತ್ತದೆಂಬುದನ್ನು ಮರೆಯಕೂಡದು. ತನ್ನ ಸಮಾಜದ ಉನ್ನತಿಯು ಹೆಚ್ಚುವುದಲ್ಲದೆ ಅದರಲ್ಲೇ ತನ್ನ ಉನ್ನತಿಯು ಹೆಚ್ಚುವುದೆಂಬ ಅರಿವಿನಿಂದ ಸಹಕಾರಿ ಬೇಸಾಯಗಾರನು ಹೆಚ್ಚೆಚ್ಚು ಹುಮ್ಮಸ್ಸಿನಿಂದ ದುಡಿಯಬಲ್ಲ.

ಸಹಕಾರಿ ಬೇಸಾಯಗಾರರಲ್ಲಿ ಇಂಥ ಸಾಮೂಹಿಕ ಉತ್ತೇಜನೆಯ ಭಾವನೆಯನ್ನು ಬೆಳೆಸಬೇಕಾದರೆ ಬೇಸಾಯಸಂಘದ ಸ್ಥಾಪನೆಯು ಸಂಪೂರ್ಣವಾಗಿ ಒಂದುಗೂಡುವ ಬೇಸಾಯಗಾರರ ಸಂತೋಷದ ಒಪ್ಪಿಗೆಯಿಂದಲೇ ಆಗಿರಬೇಕು. ಅಲ್ಲದೆ ಸಂಘದ ಆಡಳಿತವು ಯಾವನೊಬ್ಬ ಸಂಚಾಲಕನ ಸರ್ವಾಧಿಕಾರದಿಂದ ನಡೆಯದೆ ಜನತಾಂತ್ರಿಕವಾಗಿ ಎಲ್ಲರ ಸಲಹೆ, ಪರಾಮರ್ಶೆಯಿಂದ ನಡೆಯಬೇಕು. ಸರಿಯಾದ ಅಭಿವೃದ್ಧಿ, ಉತ್ಪಾದನೆ ಹಾಗೂ ಉದ್ಯೋಗಗಳ ಯೋಜನೆಯಿಂದ ಉತ್ಪತ್ತಿ ಆದಾಯಗಳು ಹೆಚ್ಚಿ ಬೇಸಾಯ ಸಂಘದ ಸದಸ್ಯರ ಜೀವನವು ಸುಧಾರಿಸುತ್ತ ಹೋಗಬೇಕು. ಇಂಥ ಸುಧಾರಿಸಿದ ಪರಿಸ್ಥಿತಿಗಳೇ ಸಾಮೂಹಿಕ ದುಡಿತಕ್ಕೆ ಸಾಕಷ್ಟು ಉತ್ತೇಜನವಾಗಬಲ್ಲವು.

ಏನೇ ಆದರೂ ಸಾಮಾನ್ಯ ಮನುಷ್ಯ ಸ್ವಭಾವವನ್ನು ಕಡೆಗಾಣಿಸುವುದಕ್ಕಾಗುವುದಿಲ್ಲ. ಪ್ರತಿಯೊಬ್ಬ ಸಹಕಾರಿ ಬೇಸಾಯಗಾರನಿಗೆ ದುಡಿತಕ್ಕೆ ತಕ್ಕ ಉತ್ತೇಜನವೂ ಬೇಕು. ಹೆಚ್ಚು ದುಡಿದವನಿಗೆ ಹೆಚ್ಚು ಪುರಸ್ಕಾರವಿದ್ದರೇನೇ ಎಲ್ಲರೂ ಹೆಚ್ಚೆಚ್ಚು ದುಡಿಯಲು ಹಂಬಲಿಸುವರು. ಅದರಿಂದ ಅಭಿವೃದ್ಧಿಯ ಕೆಲಸವು ಹೆಚ್ಚಾಗಿ, ಉತ್ಪತ್ತಿಯೂ ಹೆಚ್ಚಿ ಬೇಸಾಯದಂಥ ಪ್ರಗತಿಯು ಆಗಬಲ್ಲದು. ಸಹಕಾರಿ ಬೇಸಾಯ ಸಂಘದಲ್ಲಿ ದುಡಿತಕ್ಕೆ ತಕ್ಕ ಉತ್ತೇಜನ ಕೊಡಲು ಅವಕಾಶವಿದೆ. ದುಡಿತಕ್ಕೆ ಉತ್ತೇಜನವು ಎರಡು ಬಗೆಯದಾಗಿರುತ್ತದೆ: 1. ಆರ್ಥಿಕ ಉತ್ತೇಜನ; 2. ಸಾಮಾಜಿಕ ಉತ್ತೇಜನ. ಈ ಎರಡೂ ತೆರನಾದ ಉತ್ತೇಜನಗಳ ವ್ಯವಸ್ಥೆಯನ್ನು ಬೇಸಾಯ ಸಂಘದಲ್ಲಿ ಮಾಡಬೇಕು.

ದುಡಿತಕ್ಕೆ ತಕ್ಕ ಉತ್ತೇಜನ ಕೊಡಲು ಅನೇಕ ಕಡೆಗೆ ಕೆಲಸದ ಪ್ರಕಾರ ಪ್ರತಿಫಲ ಕೊಡುವ ಪದ್ಧತಿ(ಪೀಸ್ ವೇಜ್ ಸಿಸ್ಟಮ್)ಯು ಜಾರಿಯಲ್ಲುಂಟು. ಆಯಾ ಕೆಲಸಗಳಿಗೆ ತಕ್ಕಂತೆ ಕೆಲಸದ ಅಳತೆಗಳಿರುತ್ತವೆ. ಆ ಅಳತೆಯ ಮೇಲೆ ಪ್ರತಿಫಲವನ್ನು ಕೊಡಲಾಗುತ್ತದೆ. ಉದಾಹರಣೆಗೆ ಒಡ್ಡು ಹಾಕುವ, ನಟ್ಟುಕಡಿಯುವ ಕೆಲಸಗಳಲ್ಲಿ 'ಬ್ರಾಸು', 'ಕಟ್ಟಿಗೆ' ಅಥವಾ 'ಮಾರು'ಗಳ ಮೇಲೆ ಮಜೂರಿಯನ್ನು ಕೊಡಲಾಗುತ್ತದೆ. ಹೆಚ್ಚು ಮಾರು ಕೆಲಸ ಮಾಡಿದವನಿಗೆ ಹೆಚ್ಚು ಮಜೂರಿಯು ದೊರಕುತ್ತದೆ.

ಕೊಯ್ಯಲು, ಕಳೆ ಮುಂತಾದ ಕೆಲಸಗಳಲ್ಲಿ ಸಾಲು ಅಥವಾ ಕ್ಷೇತ್ರದ ಅಳತೆಗಳಿರುತ್ತವೆ. ಈ ಅಳತೆಗಳ ಮೇಲೆ ಕೂಲಿಯನ್ನು ಕೊಡಲಾಗುತ್ತದೆ. ಇಂಥ ದುಡಿತದ ಉತ್ತೇಜನದ ವ್ಯವಸ್ಥೆಯಿಂದ ಹಳ್ಳಿಗಳಲ್ಲಿ ಸಾಮಾನ್ಯ ಜನರು, ಸ್ತ್ರೀಯರು ಸಹ ಸಾಕಷ್ಟು ದೊಡ್ಡ ತಂಡಗಳಲ್ಲಿ ಬೇಸಾಯದ ಕೆಲಸಗಳನ್ನು ಸಾಕಷ್ಟು ಉತ್ಸಾಹದಿಂದ 2–3 ತಿಂಗಳವರೆಗೆ ಮಾಡುತ್ತಿರುವುದನ್ನು ಕಾಣಬಹುದು. ಅನೇಕ ಬೇಸಾಯ ಸಂಘಗಳು ಇಂಥ ಸ್ಥಳಿಕ ಕೆಲಸದ ಅಳತೆಗಳನ್ನೂ ಹಾಗೂ ಅವಕ್ಕನುಸರಿಸಿ ಪ್ರತಿಫಲದ ಪದ್ಧತಿಯನ್ನೂ ಅನುಸರಿಸುತ್ತಿವೆ. ಆದ್ದರಿಂದ ಅವುಗಳ ಕೆಲಸವು ಸುಗಮವಾಗಿ ನಡೆದದ್ದು ಕಂಡುಬರುತ್ತದೆ.

ಬೇಸಾಯದ ಎಲ್ಲ ಕೆಲಸಗಳಲ್ಲಿ ಇಂಥ ಅಳತೆಗಳನ್ನು ಗೊತ್ತುಪಡಿಸುವುದಾಗಲಿಕ್ಕಿಲ್ಲ. ಅಂಥಲ್ಲಿ ಕೇವಲ ಕೆಲಸದ ಸಮಯದ ಮೇಲೆಯೇ ಪ್ರತಿಫಲವನ್ನು ಹಂಚಬೇಕಾಗಬಹುದು. ಅಂಥಲ್ಲಿ ಸಹ ಕೆಲಸದ ಭಾರ, ಮಹತ್ವ, ಸಮಯ ಇವನ್ನು ಲಕ್ಷಿಸಿ ಬೇರೆ ಬೇರೆ ಕೆಲಸಗಳಿಗೆ ಬೇರೆ ಬೇರೆ ದರದ ಕೂಲಿ ಕೊಡುವುದನ್ನು ನಾವು ಕಾಣುತ್ತೇವೆ. ಇಂಥ ಸ್ಥಳಿಕ ಸುಲಭವಾದ ಪದ್ಧತಿಗಳನ್ನೇ ಬೇಸಾಯ ಸಂಘಗಳಲ್ಲಿ ದುಡಿತಕ್ಕೆ ಉತ್ತೇಜನ ಕೊಡಲು ಜಾರಿಯಲ್ಲಿ ತರಬಹುದು. ಕ್ರಮೇಣವಾಗಿ ಬೇಸಾಯ ಸಂಘವು ಹೆಚ್ಚೆಚ್ಚು ಪ್ರಗತಿ ಸಾಧಿಸಿದಂತೆ ಬೇಕಾದರೆ ಅವರ ಯೋಗ್ಯತೆ, ಸದಸ್ಯರ ತಿಳಿವಳಿಕೆಗನುಸರಿಸಿ ಹೆಚ್ಚು ಜಟಿಲವಾದ ಕೆಲಸದ ಅಳತೆಗಳನ್ನೂ, ದುಡಿತಕ್ಕೆ ತಕ್ಕ ಉತ್ತೇಜನ ಕೊಡುವ ಪ್ರತಿಫಲದ ದರಗಳನ್ನೂ ಯೋಜಿಸಿಕೊಳ್ಳಬಹುದು.

ಕೇವಲ ನಿರ್ದಿಷ್ಟ ಕೂಲಿಯನ್ನು ಕೊಡುವ ಬದಲು ವರ್ಷದ ಕೊನೆಯಲ್ಲಿ ಉತ್ಪತ್ತಿಯ ನಿರ್ದಿಷ್ಟ ಭಾಗವನ್ನೇ ದುಡಿತದ ದಿವಸಗಳ ಪ್ರಕಾರ ಹಂಚುವ ಒಂದು ಪದ್ಧತಿಯು ಕೆಲವು ಬೇಸಾಯ ಸಂಘಗಳಲ್ಲುಂಟು. ಇದರಿಂದ ಹೆಚ್ಚು ದುಡಿದವನಿಗೆ ಹೆಚ್ಚು ಪ್ರತಿಫಲವಷ್ಟೇ ಅಲ್ಲ, ಹೆಚ್ಚು ಬೆಳೆದರೇನೇ ಹೆಚ್ಚು ಫಲ ದೊರಕುವುದೆಂಬ ಹಾಗೂ ತಾವು ಕೂಲಿಯವರಲ್ಲ, ಉತ್ಪತ್ತಿಯಲ್ಲಿ ಪಾಲುಗಾರರೆಂಬ ಭಾವನೆಯು ಬೆಳೆಯುತ್ತದೆ. ದುಡಿತಕ್ಕೆ ಇದೂ ಒಂದು ಉತ್ತೇಜನವಾಗಬಲ್ಲದು. ಇಂಥಲ್ಲಿ ವರ್ಷದ ಕೊನೆಯವರೆಗೆ ಸದಸ್ಯರಿಗೆ ಜೀವನಕ್ಕೆ ಮುಂಗಡ ಹಣ ಕೊಡುವುದುಂಟು. ಅನೇಕ ಕಡೆಗೆ ಸಾಮೂಹಿಕ ಬೇಸಾಯಗಾರರು ದೈನಿಕ ಕೂಲಿಯನ್ನೇ ತಕ್ಕೊಳ್ಳಲೊಪ್ಪುತ್ತಾರೆ. ಅಂಥಲ್ಲಿ ಆಯಾ ಪ್ರದೇಶಗಳಲ್ಲಿ, ಆಯಾ ಕಾಲಕ್ಕೆ ನಡೆದ ದರಗಳ ಪ್ರಕಾರ ಕೂಲಿಯನ್ನು ಕೊಡುವುದೇ ಲೇಸು. ಮೇಲೆ ಸಾಧ್ಯವಿದ್ದಷ್ಟು ಹೆಚ್ಚಿನ ಕೆಲವು ಸಾಮೂಹಿಕ ಸವಲತ್ತು, ವೈದ್ಯಕೀಯ ಸಹಾಯ, ವಿದ್ಯಾಭ್ಯಾಸಕ್ಕೆ ಸಹಾಯ ಮುಂತಾದುವುಗಳನ್ನು ಕೊಡಬಹುದು. ಇದರಿಂದ ದುಡಿಮೆಗಾರನಿಗೆ ತಕ್ಕ ಉತ್ತೇಜನವು ದೊರಕುವುದಲ್ಲದೆ, ಸಂಘದ ಪ್ರಗತಿಯೂ ಸಾಧಿಸುವುದು.

ಒಳ್ಳೇ ದುಡಿತಕ್ಕೆ ದುಡ್ಡೊಂದೇ ಉತ್ತೇಜನವಲ್ಲ; ಸಾಮಾಜಿಕ ಪ್ರಶಂಸೆಯೂ ಒಳ್ಳೇ ಉತ್ತೇಜನವಾಗಿ ಕಾರ್ಯಮಾಡುತ್ತದೆ. ಹಳ್ಳಿಯ ಷಥಪಂದ್ಯಗಳಲ್ಲಿ ದುಡ್ಡಿನ ಪುರಸ್ಕಾರ ಏನಿರದಿದ್ದರೂ ಸಮಾಜದ ಪ್ರಶಂಸೆಗಾಗಿ ಒಳ್ಳೇ ಎತ್ತು ಬೆಳೆಸುವುದು, ಒಳ್ಳೇ ಬೆಳೆ ಮಾಡಿ ತೋರಿಸುವುದು ಇಂಥ ಅನೇಕ ಉದಾಹರಣೆಗಳನ್ನು ಕಾಣುತ್ತೇವೆ. ಸಹಕಾರಿ ಬೇಸಾಯದಲ್ಲಿ ಕೆಲಸದ ಸ್ಪರ್ಧೆ, ಒಳ್ಳೇ ಕೆಲಸಕ್ಕೆ ಪ್ರಶಸ್ತಿಪತ್ರ ಅಥವಾ ಪುರಸ್ಕಾರಗಳನ್ನು ಏರ್ಪಡಿಸಿ ದುಡಿತಕ್ಕೆ ತಕ್ಕ ಸಾಮಾಜಿಕ ಉತ್ತೇಜನವನ್ನು ಕೊಡಬಹುದು. ಗುಂಪಿನ ದುಡಿತದಲ್ಲಿ ಮೈಗಳ್ಳತನ ಮಾಡುವುದೊಂದೇ ಪ್ರವೃತ್ತಿ ಇರುತ್ತದೆಂದು ಹೇಳಲಿಕ್ಕಾಗದು. ಗುಂಪಿನ ದುಡಿತದಲ್ಲಿ ಹಿಂಜಡ್ಡಾಗಿ. ಹೀಯಾಳಿಕೆಗೀಡಾಗಬಾರದೆಂಬ ಹೇಯವನ್ನೂ ಕಾಣಬಹುದು. ಒಳ್ಳೇ ಕೆಲಸಕ್ಕೆ ತಕ್ಕ ಸಾಮೂಹಿಕ ಪ್ರಶಂಸೆಯ ವ್ಯವಸ್ಥೆ ಮಾಡಿದರೆ. ದುಡಿತದ ದಕ್ಷತೆಗೆ ಬೇಕಾದಷ್ಟು ಉತ್ತೇಜನವೂ ದೊರಕುತ್ತದೆ.

ಮನುಷ್ಯನು ತನ್ನ ವೈಯಕ್ತಿಕ ಪ್ರತಿಫಲ ಅಥವಾ ಹೆಚ್ಚಳಕ್ಕಷ್ಟೇ ಅಲ್ಲ, ತನ್ನ ಗುಂಪಿನ ಪ್ರತಿಫಲ ಹಾಗೂ ಹೆಚ್ಚಳಕ್ಕಾಗಿಯೂ ಬಹಳ ಹೆಣಗುತ್ತಾನೆ. ಬೇಸಾಯ ಸಂಘದಲ್ಲಿ ತಕ್ಕ ಕೆಲಸದ ಗುಂಪುಗಳನ್ನು ರಚಿಸಿ ಅವುಗಳಲ್ಲಿ ರಚನಾತ್ಮಕ ಮೇಲಾಟವನ್ನು ಏರ್ಪಡಿಸಿ ಕೆಲಸಕ್ಕೆ ಹೆಚ್ಚೆಚ್ಚು ಉತ್ತೇಜನ ಕೊಡಬಹುದು.

ಈ ಎಲ್ಲ ಉಪಾಯಗಳಿಂದ ಸಹಕಾರಿ ಬೇಸಾಯದಲ್ಲಿ ದುಡಿತಕ್ಕೆ ಸಾಕಷ್ಟು ಉತ್ತೇಜನದ ವ್ಯವಸ್ಥೆಮಾಡಿ, ಉತ್ಪಾದನೆಯನ್ನು ಹೆಚ್ಚಿಸಲು ಸಾಧ್ಯವಿದೆ.

ಬೇಸಾಯಗಾರನ ಭೂಮಿಯ ಮೋಹವು ಸಹಕಾರಿ ಬೇಸಾಯಕ್ಕೆ ಬಾಧಕವೇ?

'ಭಾರತೀಯ ಬೇಸಾಯಗಾರನಿಗೆ ತನ್ನ ತುಂಡುಭೂಮಿಯ ಮೋಹ, ಆಸಕ್ತಿಯು ಬಹಳವಾಗಿದೆ. ಅವನು ಬೇಸಾಯ ಸಂಘದಲ್ಲಿ ಅದನ್ನು ಒಂದುಗೂಡಿಸಿ ಅದರಿಂದ ಆಗಲಲು ಎಂದಿಗೂ ಸಂತೋಷದಿಂದ ಒಪ್ಪನು' ಎಂದು ಪ್ರಬಲವಾದ ವಾದವಿದೆ. ಇದೂ ಸಹ ಅತಿರಂಜಿತವಾದ ವಾದವಾಗಿದೆ. ಬೇಸಾಯಗಾರನು ತನ್ನ ಭೂಮಿಯ ಮಣ್ಣನ್ನೇನೂ ಉಣ್ಣುವುದಿಲ್ಲ; ಅದರ ಉತ್ಪನ್ನವನ್ನೇ ಉಣ್ಣುತ್ತಾನೆ. ಯಾವುದೇ ಪದ್ಧತಿಯಿಂದ ಅಂಥ ಉತ್ಪನ್ನವನ್ನು ಹೆಚ್ಚಿಸಿಕೊಂಡು ತನ್ನ ಸುಖವನ್ನು ಹೆಚ್ಚಿಸಿಕೊಳ್ಳುವುದು ಏಕೆ ಅವನಿಗೆ ಬೇಡವಾದೀತು? ಅವನಿಗೆ ಭೂಮಿಯ ಹೊರತಾಗಿ ಬೇರೆ ಜೀವನಾಧಾರವಿಲ್ಲ. ಮದುವೆಮುಂಜಿ, ಅನುವುಆಪತ್ತು, ಸಾವುಮುಪ್ಪು ಎಲ್ಲವುಗಳಲ್ಲೂ ಅವನಿಗೆ ತನ್ನ ತುಂಡು ಭೂಮಿಯೊಂದೇ ಆರ್ಥಿಕ ಆಸರೆ. ತನ್ನ ಮಕ್ಕಳು-ಮಡದಿಯರ ಭವಿಷ್ಯಕ್ಕೂ ಭೂಮಿಯೇ ಆಸರೆ. ಈ ಕಾರಣದಿಂದಲೇ ಅವನಿಗೆ ಭೂಮಿಯಲ್ಲಿ ಅಷ್ಟೊಂದು ಆಸಕ್ತಿ ಇದೆ. ಸಹಕಾರಿ ಬೇಸಾಯದಿಂದ ಅವನ ಭೂಮಿಯ ಉತ್ಪನ್ನವು ಮೂರರಷ್ಟು, ನಾಲ್ಕರಷ್ಟು ಹೆಚ್ಚಿ ಅವನ ಅವಶ್ಯಕತೆಗಳೆಲ್ಲ ಇನ್ನೂ ಹೆಚ್ಚು ಸಮರ್ಪಕವಾಗಿ ಪೂರೈಕೆ ಆಗುವುದೆಂದು ಅವನಿಗೆ ಮನವರಿಕೆಯಾದರೆ,

ಅವನ ಹಾಗೂ ಅವನ ಪರಿವಾರದ ಭವಿಷ್ಯವೂ ಹೆಚ್ಚು ಭದ್ರವಾಗುವುದೆಂದು ಅವನಿಗೆ ತಿಳಿದರೆ ಅವನು ಸಹಕಾರಿ ಬೇಸಾಯದಲ್ಲಿ ಸೇರಲು ಸಂತೋಷದಿಂದ ಒಪ್ಪುವನು.

ತನ್ನ ಗ್ರಾಮದ ಪಕ್ಕದಲ್ಲಿಯೇ ಒಂದು ಕಾರಖಾನೆಯು ಸ್ಥಾಪಿಸಲ್ಪಟ್ಟರೆ ಅದರಲ್ಲಿ ಅವನಿಗೆ ಉದ್ಯೋಗ ಸಿಕ್ಕಿ ದಿನವೂ 4–5 ರೂಪಾಯಿ ಕೂಲಿ ಸಿಗಹತ್ತಿದರೆ ಬೇಸಾಯಗಾರನು ತನ್ನ ಭೂಮಿಯನ್ನು ಯಾರಿಗೋ ಕೊಟ್ಟು ಅಥವಾ ಮಾರಿತೂರಿ, ಆ ಕಾರಖಾನೆಯಲ್ಲಿ ಕೂಲಿಕಾರನಾಗಿ ಬಿಡುವನು. ಅಲ್ಲಿಯ ಆಡಳಿತ, ಶಿಸ್ತುಗಳಲ್ಲಿ ಅವನಿಗೆ ಎಷ್ಟೇ ಅಪಮಾನವಾದರೂ ಸಹಿಸುವನು; ತನ್ನ ಭೂಮಿಯ ಮೋಹ, ವ್ಯಕ್ತಿ ಸ್ವಾತಂತ್ರ್ಯಗಳಿಗಂತೂ ತಾನಾಗಿಯೇ ತಿಲಾಂಜಲಿ ಕೊಡುವನು. ಇಂಥ ಕಾರಖಾನೆಯ ಕೂಲಿಕಾರನ ಪರಾಧೀನತೆಯನ್ನು ಬೇಸಾಯಗಾರನು ಸ್ವಸಂತೋಷದಿಂದ ಸ್ವೀಕರಿಸುತ್ತಾನೆ. ಏಕೆಂದರೆ ಬೇಸಾಯಗಾರನ ನಿರರ್ಥಕ, ಅರೆಹೊಟ್ಟೆಯ, ಕಂಗಾಲತನದ ಸ್ವಾತಂತ್ರ್ಯಕ್ಕಿಂತ ಕೂಲಿಕಾರನ ಪರಾಧೀನತೆಯ ಆದರೆ ಆರ್ಥಿಕ ನೆಮ್ಮದಿಯ ಜೀವನವು ಅವನಿಗೆ ಮೇಲೆನಿಸುತ್ತದೆ. ಸಹಕಾರಿ ಬೇಸಾಯದಲ್ಲಿ ತಾನಾಗಿಯೇ ತನ್ನ ಸರಿಸಮಾನ ಜೊತೆಗಾರ ಬೇಸಾಯಗಾರರೊಡನೆ ಒಂದುಗೂಡಿ ತಾನೇ ನಿರ್ಧರಿಸುವ ಕಟ್ಟುಪಾಡಿನಲ್ಲಿ ತನ್ನ ನೆಮ್ಮದಿ ಹೆಚ್ಚಿಸಿಕೊಳ್ಳಲು ದುಡಿಯುವುದರಲ್ಲಿ ಕಾರಕಾನೆಯ ಕೂಲಿಕಾರನ ಜೀವನಕ್ಕಿಂತ ಹೆಚ್ಚಿನ ಪರಾಧೀನತೆ, ಹೆಚ್ಚಿನ ಆತ್ಮಗ್ಲಾನಿ ಏನಿದೆ? ತನ್ನ ತುಂಡು ಭೂಮಿಯನ್ನು ತ್ಯಜಿಸಿ, ಕಾರಖಾನೆಯನ್ನು ಸೇರುವಾಗ ಅವನಿಗೇನೂ ಕಾರಖಾನೆಯನ್ನು ಒಡೆದು ಹಂಚುವುದಿಲ್ಲವಲ್ಲ. ಅವನಿಗೆ ಹೆಚ್ಚಿನ ಆದಾಯ ಅನುಕೂಲತೆಗಳನ್ನು ಒದಗಿಸುತ್ತದೆಂದು ಅವನು ಸಾಮೂಹಿಕ ಆಸ್ತಿಯಾದ ಕಾರಖಾನೆಯನ್ನು ಅಪ್ಪಿಕೊಳ್ಳುತ್ತಾನೆ. ಹಾಗೆಯೇ ಅವನ ವೈಯಕ್ತಿಕ ಒಡೆತನವನ್ನೂ ಕಾದಿಟ್ಟು ಅವನಿಗೆ ಹೆಚ್ಚಿನ ಆದಾಯವನ್ನು ಒದಗಿಸುವ ಸಾಮೂಹಿಕ ಬೇಸಾಯವು ಅವನ ಹಿತಕ್ಕಾಗಿಯೇ ಇದೆ ಎಂದು ಅವನಿಗೆ ಮನಗಾಣಿಸಿದರೆ ಅವನ ತುಂಡು ಬೇಸಾಯದ ಮೋಹವು ಕಡಮೆಯಾಗಿ ಅವನು ಸಂತೋಷದಿಂದ ಸಹಕಾರಿ ಬೇಸಾಯವನ್ನು ಸ್ವೀಕರಿಸುವನು.

ಬಲಾತ್ಕಾರದಿಂದ ಮಾತ್ರ ಸಹಕಾರಿ ಬೇಸಾಯವು ಹಬ್ಬುವುದೇ?

ಬಲಾತ್ಕಾರವಿಲ್ಲದೆಯೇ ಸಹಕಾರಿ ಬೇಸಾಯವು ಹಬ್ಬುವುದು ಸಾಧ್ಯವಿಲ್ಲವೆಂಬುದೊಂದು ಆಕ್ಷೇಪ. ನಿಜವೆಂದರೆ ಯಥಾರ್ಥವಾದ ಸಹಕಾರಿ ಬೇಸಾಯವು ಸ್ವಯಂಸ್ಫೂರ್ತಿಯಿಂದಲೇ ಹಬ್ಬುತ್ತದೆಂದು ಹೇಳಬಹುದು. ಬಲಾತ್ಕಾರದಿಂದ ಅವನ್ನು ಹಬ್ಬಿಸಲು ಯತ್ನಿಸಿದರೆ ಅದು ಯಶಸ್ವಿಯಾಗದು. ಆದರಿಂದ ಉತ್ಪತ್ತಿಯು ಖಂಡಿತವಾಗಿಯೂ ಕಡಮೆಯಾಗಿ ಜನತೆಯಲ್ಲಿ ನಿರುತ್ಸಾಹವು ಹಬ್ಬುವುದು. ಯಾವ ಸರಕಾರವೂ ಬಹುದಿವಸಗಳವರೆಗೆ ಒತ್ತಾಯದಿಂದ ಈ ಕಾರ್ಯಕ್ರಮವನ್ನು ನಡೆಸಲು ಸಾಧ್ಯವಿಲ್ಲ.

ಸ್ವಯಂಸ್ಫೂರ್ತಿಯ ಅರ್ಥ ಸಹಕಾರಿ ಬೇಸಾಯದ ಪ್ರಚಾರದಲ್ಲಿ ನಿಷ್ಕ್ರಿಯತೆ ಇರಬೇಕೆಂದಲ್ಲಿ ಸರಕಾರ ಅಥವಾ ಸಾರ್ವಜನಿಕ ಸಂಸ್ಥೆಗಳು ಏನೂ ಮಾಡದೆಂದು

ಆಗುತ್ತದೆ. ಜನರು ಬೇಕಾದರೆ ಬೇಸಾಯ ಸಂಘಗಳನ್ನು ತಾವೇ ಮಾಡಿಕೊಳ್ಳಲಿ ಎಂದು ಸ್ವಸಂತೋಷದ ಅರ್ಥ ಹಲವರು ಹಚ್ಚುತ್ತಾರೆ. ಇಂಥ ಬೇಸಾಯ ಸಂಘಗಳಿಗೆ ಯಾವ ವಿಶಿಷ್ಟ ಸಹಾಯವನ್ನೂ ಕೊಡಕೂಡದಂತೆ. ಇದು ಸ್ವಸಂತೋಷದ ಅಪಾರ್ಥವಷ್ಟೇ.

ಯಾವುದೊಂದು ಕಾರ್ಯಕ್ರಮವು ದೇಶಕ್ಕೆ ಉಪಯುಕ್ತ ಕಾರ್ಯಕ್ರಮವೆಂದು ಒಪ್ಪಿದ ಬಳಿಕ ಅದರ ಪ್ರಚಾರ ಮಾಡುವುದು, ಅದಕ್ಕೆ ತಕ್ಕ ಉತ್ತೇಜನ ಕೊಡುವುದು ಕಲ್ಯಾಣರಾಜ್ಯದ ಕರ್ತವ್ಯವಾಗುತ್ತದೆ. ಪ್ರಚಾರ, ಶಿಕ್ಷಣ, ಮನವೊಲಿಸುವುದು, ವಿಶಿಷ್ಟ ಸಹಾಯದಿಂದ ಉತ್ತೇಜನ ಕೊಡುವುದು ಇವು ಸ್ವಸಂತೋಷದ ತತ್ವಕ್ಕೆ ವಿರುದ್ಧವಾದವುಗಳಲ್ಲ. ಈ ಉಪಾಯಗಳಿಂದ ಬೇಸಾಯಗಾರರು ತಮ್ಮ ಸಂತೋಷದಿಂದ ಬೇಸಾಯ ಸಂಘಗಳಲ್ಲಿ ಸೇರಲು ಅನುಕೂಲ ವಾತಾವರಣವು ಉಂಟಾಗುತ್ತದೆ. ಇದೇ ಧೋರಣದಿಂದ ಸರಕಾರವು ರಾಷ್ಟ್ರೀಯ ವಿಸ್ತರಣೆಯ ಸಾಮೂಹಿಕ ಅಭಿವೃದ್ಧಿಯ ಸಹಕಾರ ಆಂದೋಲನದ ಕಾರ್ಯಕ್ರಮಗಳಿಗೆ ಪ್ರೋತ್ಸಾಹವೀಯುತ್ತದೆ. ಸರಕಾರದ ಈ ಪ್ರೋತ್ಸಾಹಕ್ಕೆ ಬಲಾತ್ಕಾರವೆಂದು ಯಾರೂ ಹೇಳರು. ಸಹಕಾರಿ ಬೇಸಾಯಕ್ಕೂ ಇಂಥ ಪ್ರೋತ್ಸಾಹನ ಮಾತ್ರ ಬೇಕೆಂದು ಹೇಳಿದರೆ ಅದು ಬಲಾತ್ಕಾರ ಮಾಡಿದಂತೆ ಎಂದು ಹೇಳುವುದು ಸರಿಯಾಗದು.

ಸಹಕಾರಿ ಬೇಸಾಯ ಭಾರತೀಯ ಪರಂಪರೆಗೆ ವಿರುದ್ಧವೇ?

ಭಾರತೀಯ ಬೇಸಾಯಗಾರನಿಗೆ ಭೂಮಿ 'ತಾಯಿ' ಎಂಬ ಮಾನಸಿಕ ಆಸಕ್ತಿ ಇದೆ. ಸತ್ತಬಳಿಕ ಸಹ ತನ್ನನ್ನು ತನ್ನ ಭೂಮಿಯಲ್ಲಿ ಹೂಳಬೇಕೆಂಬ ಹಂಬಲ ಅವನಿಗೆ. ಸಹಕಾರಿ ಬೇಸಾಯವು ಈ ಸಂಸ್ಕಾರಕ್ಕೆ ಧಕ್ಕೆ ತರುತ್ತದೆ. ಏಕೆಂದರೆ ಸಹಕಾರಿ ಬೇಸಾಯವು ಸಾಮ್ಯವಾದದ ತತ್ವವು. ಸಾಮ್ಯವಾದವು ಭೂಮಿಯ ವೈಯಕ್ತಿಕ ಒಡೆತನವನ್ನೇ ಕಿತ್ತುಹಾಕುವ ಗುರಿ ಇಟ್ಟುಕೊಂಡಿದೆ. ಆದ್ದರಿಂದ ಸಹಕಾರಿ ಬೇಸಾಯವು ಭಾರತೀಯ ಪರಿಸ್ಥಿತಿಗೆ, ಪರಂಪರೆಗೆ ವಿಪರೀತವಾಗಿದೆ ಎಂದು ಒಂದು ತರ್ಕ.

ಸಹಕಾರಿ ಬೇಸಾಯದ ಕಾರ್ಯಕ್ರಮದಲ್ಲಿ ಭೂಮಿಯ ಒಡೆತನವನ್ನು ಕಾಯ್ದಿರಿಸಲಾಗುತ್ತದೆಂದು ಘಂಟಾಘೋಷವಾಗಿ ಸಾರಲಾಗಿದೆ. ಈ ಒಡೆತನಕ್ಕೆ ಪ್ರತಿಫಲವು ದೊರಕುವ ವ್ಯವಸ್ಥೆಯೂ ಸಹಕಾರಿ ಬೇಸಾಯದಲ್ಲಿ ಉಂಟು. ನಿಜವೆಂದರೆ ಈ ಮೊದಲು ವಿವರಿಸಿದಂತೆ ಸಹಕಾರಿ ಬೇಸಾಯದಿಂದಲೇ ಚಿಕ್ಕ ಬೇಸಾಯಗಾರನ ಒಡೆತನಕ್ಕೆ ಸಂರಕ್ಷಣೆ ಇದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ವೈಯಕ್ತಿಕವಾಗಿ ಸರಕಾರಿ ಭೂಮಿಯನ್ನು ಹಂಚಿದಲ್ಲಿ ಹರಿಜನರು, ಗಿರಿಜನರು, ತಮ್ಮ ಭೂಮಿಯನ್ನು ಶ್ರೀಮಂತ ಬೇಸಾಯಗಾರರಿಗೆ ಮಾರಿಕೊಂಡು ಮತ್ತೆ ಭೂಹೀನರಾಗಿರುವುದು ಎಲ್ಲ ಕಡೆಯ ಅನುಭವ. ಆದರೆ ಬೇಸಾಯ ಸಂಘಗಳನ್ನು ಸ್ಥಾಪಿಸಿ ಅವುಗಳ ಮುಖಾಂತರ ಅವರಿಗೆ ಭೂಮಿಯನ್ನು ಕೊಟ್ಟು ಸಾಗುವಳಿ ಮಾಡಹಚ್ಚಿದಲ್ಲಿ ಭೂಮಿಯು ಅವರ ವಶದಲ್ಲಿಯೇ ಉಳಿದಿದೆ. ಇವತ್ತು ವೈಯಕ್ತಿಕ ಚಿಕ್ಕ ಬೇಸಾಯ

ಗಾರನ ಆಸಕ್ತಿಯು ಭೂಮಿತಾಯಿ ಒಂದಿಲ್ಲೊಂದು ಪ್ರಕಾರದ ಸಾಲದಲ್ಲಿ ಸಾಹುಕಾರನ ಅಥವಾ ದಲಾಲನ ದವಡೆಯಲ್ಲಿ ಸಿಲುಕಿರುತ್ತದೆ. ಯಾವ ಗಳಿಗೆಯಲ್ಲೂ ಅವನು ಅದನ್ನು ಕಳೆದುಕೊಂಡು ಭೂಹೀನನಾಗಿ ಬಿಡುತ್ತಾನೆ. ಹೀಗೆ ಸಾವಿರಾರು ಚಿಕ್ಕ ಬೇಸಾಯಗಾರರು ಭೂಹೀನರಾಗುತ್ತಿರುವುದು ಸಾಮಾನ್ಯವಾದ ಅನುಭವ. ಸಹಕಾರಿ ಬೇಸಾಯದಿಂದ ಹೆಚ್ಚಿನ ಅನುಕೂಲತೆ, ಆದಾಯಗಳನ್ನು ಪಡೆದು ಚಿಕ್ಕಬೇಸಾಯ ಗಾರರು ತಮ್ಮ ಭೂಮಿತಾಯಿಯನ್ನು ಸಾಹುಕಾರರ, ದಲಾಲರ ದವಡೆಯಿಂದ ಮುಕ್ತ ಮಾಡಿಕೊಳ್ಳುತ್ತಾರೆ. ಆದ್ದರಿಂದ ಸಹಕಾರಿ ಬೇಸಾಯವು ಭಾರತದ ಬೇಸಾಯ ಗಾರರ ಪರಂಪರೆಗೆ, ಸಂಸ್ಕಾರಗಳಿಗೆ ಧಕ್ಕೆಹಚ್ಚುವ ಪ್ರಶ್ನೆಯೇ ಇಲ್ಲ.

ಸಹಕಾರಿ ಬೇಸಾಯದಿಂದ ಸರಕಾರವು ಬೇಸಾಯಗಾರನಿಂದ ಭೂಮಿಯನ್ನು ಕಿತ್ತುಕೊಳ್ಳುತ್ತದೆಂದು ಒಂದು ಸುಳ್ಳು ಪ್ರಚಾರ. ಸರಕಾರಕ್ಕೆ ಜಮೀನುದಾರ ಏನೂ ಅಲ್ಲ. ಚಿಕ್ಕ ಬೇಸಾಯಗಾರರಿಗೆ ತಮ್ಮ ಭೂಮಿಗಳನ್ನು ತಾವೇ ಚೆನ್ನಾಗಿ, ಸುಗಮವಾಗಿ ಸಾಗುಮಾಡಿಕೊಳ್ಳಲು ಅನುಕೂಲತೆಗಳನ್ನೊದಗಿಸಲು ಈ ಕಾರ್ಯಕ್ರಮವಿದೆ.

ನಾಲ್ಕು ಜನ ಅಣ್ಣತಮ್ಮಂದಿರು ಕೂಡಿ ನಡೆಯದೆ ಭಾರತದಲ್ಲಿಯ ಪುರಾತನ ಸಂಯುಕ್ತ ಕುಟುಂಬವೇ ಒಡೆದುಹೋಗುತ್ತಿದೆ. ಹೀಗಿರುವಾಗ ಸಾಮೂಹಿಕ ಬೇಸಾಯವು ಹೇಗೆ ನಡೆದೀತೆಂದು ಸಂದೇಹ. ಸಾಮೂಹಿಕ ಬೇಸಾಯದಲ್ಲಿ ಕೂಡಿ ದುಡಿಯುವ, ಕೂಡಿ ಉನ್ನತಿ ಸಾಧಿಸುವ, ಸೋದರ ಭಾವನೆಯನ್ನು ಬೆಳೆಸುವ ಉದ್ದೇಶವೇನೋ ಇದೆ. ಆದರೆ ಬೇಸಾಯ ಸಂಘವು ಕೆಲವು ಆರ್ಥಿಕ ಹಾಗೂ ವ್ಯಾವಹಾರಿಕ ತತ್ವಗಳ ಆಧಾರದ ಮೇಲೆ ನಡೆಯುತ್ತದೆ: ಭಾವನಾತ್ಮಕ, ಆತ್ಮೀಯತೆಯ ಮೇಲೆಯೇ ಅದು ನಡೆಯುವುದಿಲ್ಲ. ಸಂಯುಕ್ತ ಪರಿವಾರದಲ್ಲಿ ಹಿರಿಯಣ್ಣ ದುಡಿದರೂ ಸರಿ, ದುಡಿಯದಿದ್ದರೂ ಸರಿ, ಅವನಿಗೆ ಸರಿಪಾಲು ಕೊಡಬೇಕು. ಸಾಮೂಹಿಕ ಬೇಸಾಯದಲ್ಲಿ ಈ ತತ್ವ ನಡೆಯದು. ಹಿರಿಯಣ್ಣ ದುಡಿಯದಿದ್ದರೆ ಅವನಿಗೆ ಬೇಸಾಯ ಸಂಘದಲ್ಲಿ ದುಡಿತದ ಪಾಲು ಏನೂ ಸಿಕ್ಕುವುದಿಲ್ಲ ಅಥವಾ ಅವನಿಗೆ ದುಡಿದಾಗ ದುಡಿದಷ್ಟು ಮಾತ್ರ ಆದಾಯವು ದೊರಕುತ್ತದೆ. ಸಾಮೂಹಿಕ ಬೇಸಾಯವು ಒಂದು ಪಾಲುಗಾರಿಕೆಯ ಉದ್ಯೋಗ. ಅದರಲ್ಲಿ ಸಂಯುಕ್ತ ಕುಟುಂಬದಲ್ಲಿ ಕೂಡಿ ನಡೆಯದ ಸೋದರರರೂ, ನ್ಯಾಯವಾದ ಯೋಜನೆಯಿಂದ ಸೌಹಾರ್ದದಿಂದ ಕೂಡಿ ಕೆಲಸಮಾಡ ಬಹುದು.

ಸಹಕಾರಿ ಬೇಸಾಯವು ಭಾರತದ ಪರಂಪರೆಗೆ ಒಗ್ಗದೆಂದು ಹೇಳುವವರು ದೇಶದ ಬೇರೆ ಬೇರೆ ಹಲವು ಭಾಗಗಳಲ್ಲಿ ಹಿಂದಿನಿಂದ ಇದುವರೆಗೂ ನಡೆದು ಬಂದಿರುವ ಕೆಲವು ಪರಂಪರಾಗತ ಸಾಮೂಹಿಕ ಬೇಸಾಯದ ಪದ್ಧತಿಗಳನ್ನು ಲಕ್ಷಿಸಬೇಕು. ಹಳ್ಳಿ ಗಳಲ್ಲಿ ಮುಯ್ಯಾಳಿನಿಂದ ಒಬ್ಬರು ಇನ್ನೊಬ್ಬರ ಹೊಲದಲ್ಲಿ ಬಿತ್ತನೆ, ಕೊಯ್ಯಲು ಮುಂತಾದ ಕೆಲಸಗಳನ್ನು ಮಾಡುವುದು ಹಿಂದೆ ಎಲ್ಲೆಡೆಯೂ ಇತ್ತು; ಈಗಲೂ ಹಲವೆಡೆ ಪ್ರಚಲಿತವಾಗಿದೆ. ಗ್ರಾಮದ ಕೆರೆಕಟ್ಟೆಗಳ ಹೂಳನ್ನು ಸಾಮೂಹಿಕವಾಗಿ

ತೆಗೆಯುವ ಪದ್ಧತಿಯು ಹಳ್ಳಿಗಳಲ್ಲಿ ವಾಡಿಕೆಯಾಗಿತ್ತು. ಇಂತಹ ಸ್ಥೂಲವಾದ ಸಾಮೂಹಿಕ ಕೆಲಸಗಳಲ್ಲದೆ ಡಾಂಗ ಜಿಲ್ಲೆಯಲ್ಲಿ ಮತ್ತು ಈಶಾನ್ಯ ಪ್ರದೇಶದಲ್ಲಿ ಆದಿವಾಸಿಗಳು ಸಾಮೂಹಿಕವಾಗಿಯೇ ಬೆಳೆಯನ್ನು ಉತ್ತು, ಸಾಮೂಹಿಕವಾಗಿ ಉತ್ಪತ್ತಿಯನ್ನು ಹಂಚಿಕೊಳ್ಳುತ್ತಾರೆ. ಆಂಧ್ರಪ್ರದೇಶದಲ್ಲಿ ಅನಂತಪುರ ಜಿಲ್ಲೆಯಲ್ಲಿ ಕೆಲವು ಭಾಗಗಳಲ್ಲಿರುವ 'ಗೊಂತಿ ಬೇಸಾಯ.' ಮಹಾರಾಷ್ಟ್ರದಲ್ಲಿ ಕೊಲ್ಲಾಪುರ ಜಿಲ್ಲೆಯಲ್ಲಿ ಈಗಲೂ ನಡೆದಿರುವ 'ಫಡಬೇಸಾಯ' ಪರಂಪರಾಗತ ಸಾಮೂಹಿಕ ಬೇಸಾಯದ ರೂಪಗಳೇ. 'ಫಡ ಬೇಸಾಯ'ವು ಸುಮಾರು 100 ವರ್ಷಗಳಿಂದ ನಡೆದು ಬಂದಿದೆ. ಇಬ್ಬರಲ್ಲಿ 10–12 ಚಿಕ್ಕಬೇಸಾಯಗಾರರು ತಮ್ಮ ಭೂಮಿಯನ್ನು ಎತ್ತು, ನೇಗಿಲು, ಮುಂತಾದ ಸಲಕರಣೆಗಳನ್ನೂ, ಶ್ರಮವನ್ನೂ ಒಂದುಗೂಡಿಸಿ ದುಡಿಯುತ್ತಾರೆ. ವರ್ಷದ ಕೊನೆಯಲ್ಲಿ ಒಟ್ಟು ಉತ್ಪತ್ತಿಯಲ್ಲಿ ವೆಚ್ಚಗಳನ್ನೆಲ್ಲ ಕಳೆದು ಸರಿಯಾದ ರೀತಿಯಲ್ಲಿ ಉಳಿದ ಆದಾಯವನ್ನು ಅವರು ಹಂಚಿಕೊಳ್ಳುತ್ತಾರೆ. ಹೆಚ್ಚಾಗಿ ಈ ಪದ್ಧತಿಯಿಂದ ಕಬ್ಬಿನ ಬೇಸಾಯವನ್ನು ಮಾಡಲಾಗುತ್ತಿದೆ. 1959ರಲ್ಲಿ ಕೊಲ್ಲಾಪುರ ಜಿಲ್ಲೆಯಲ್ಲಿ 1000 'ಫಡ'ಗಳಿದ್ದವು. ಇವು ನೊಂದಾಯಿಸಲ್ಪಡದ ಸಹಕಾರಿ ಬೇಸಾಯ ಸಂಘಗಳೇ. ಶೇಕಡಾ 80–90ರಷ್ಟು ಕಬ್ಬಿನ ಸಾಗುವಳಿಯು ಫಡ ಬೇಸಾಯದಿಂದಲೇ ನಡೆದದ್ದು ಅಲ್ಲಿ ಕಂಡುಬರುತ್ತದೆ.

ಅಂದಬಳಿಕ ಸಾಮೂಹಿಕ ಬೇಸಾಯವು ಭಾರತೀಯ ಪರಂಪರೆಗೆ ಒಗ್ಗದೆಂದು ಹೇಳುವುದು ಸರಿಯಲ್ಲ. ಇಂದು ಭಾರತದ ಬೇಸಾಯಗಾರರಲ್ಲಿ ಸಾಮೂಹಿಕ ಬೇಸಾಯದ ಬಗ್ಗೆ ಸರಿಯಾದ ಜಾಗೃತಿ ಇಲ್ಲ. ಅವರಲ್ಲಿ ಸಾಕಷ್ಟು ತಪ್ಪು ತಿಳಿವಳಿಕೆಗಳನ್ನೇ ಸಹಕಾರಿ ಬೇಸಾಯದ ಬಗ್ಗೆ ತುಂಬಲಾಗಿದೆ. ಆದರೆ ಸಹಕಾರಿ ಬೇಸಾಯದ ಲಾಭಗಳನ್ನು ಭಾರತದ ಬೇಸಾಯಗಾರರಿಗೆ. ಅದರಲ್ಲೂ ಚಿಕ್ಕ ಬೇಸಾಯಗಾರರಿಗೆ ಸರಿಯಾಗಿ ತಿಳಿಸಿ. ಮನವರಿಕೆ ಮಾಡಿಕೊಟ್ಟರೆ, ಕೆಲವು ಮಾದರಿ ಬೇಸಾಯ ಸಂಘಗಳ ಯಶಸ್ಸಿನ ಉದಾಹರಣೆಗಳನ್ನು ತೋರಿಸಿದರೆ ಭಾರತೀಯ ಬೇಸಾಯಗಾರರು ತಮ್ಮ ಸಂತೋಷದಿಂದಲೇ ಸಾಮೂಹಿಕ ಬೇಸಾಯವನ್ನು ಹೆಚ್ಚುಹೆಚ್ಚಾಗಿ ಅಂಗೀಕರಿಸುವುದರಲ್ಲಿ ಸಂದೇಹವಿಲ್ಲ.

ಕೆಲಮಟ್ಟಿಗೆ ನವೀನ ಸುಧಾರಣೆಗಳು ಪರಂಪರಾಗತ ರೂಢಿಗಳಿಗೆ ವ್ಯತಿರಿಕ್ತವಾಗಿರುತ್ತವೆ. ಭಾರತದಲ್ಲಿ ಹಸುರುಕ್ರಾಂತಿಯನ್ನು ತಂದಿರುವ ವೈಜ್ಞಾನಿಕ ಸಾಂದ್ರ ಬೇಸಾಯದ ಪದ್ಧತಿಗಳೆಲ್ಲವೂ ಓಬೀರಾಯನ ರೂಢಿಗತ ಬೇಸಾಯಕ್ಕಿಂತ ಭಿನ್ನವಾಗಿವೆ. ಅವನ್ನು ಹಾಗಾದರೆ ಕೈಬಿಡಬೇಕೇ? ಒಂದಾನೊಂದು ಕಾಲಕ್ಕೆ 'ಸತಿಪ್ರಥೆ', 'ಪರದಾ ಪದ್ಧತಿ' ಇವೆಲ್ಲ ಪರಂಪರೆಗಳಾಗಿದ್ದವು. ಅವನ್ನು ತ್ಯಜಿಸದಿದ್ದರೆ ಭಾರತದ ಸಾಮಾಜಿಕ, ಪ್ರಗತಿಯಾಗುತ್ತಿತ್ತೆ? ಉಡಿಗೆತೊಡಿಗೆ, ಖಾನಪಾನ ಎಲ್ಲವೂ ಈಗ ಬದಲಿಸಿಲ್ಲವೇ? ಇಂಥ ಬದಲಾವಣೆಗಳ ವಿರುದ್ಧ ಕೋಲಾಹಲವೇನೂ ಇಲ್ಲವಲ್ಲ? ಸಹಕಾರಿ ಬೇಸಾಯವೊಂದೇ ಭಾರತದ ಪರಂಪರೆಯನ್ನು ಮುರಿಯುತ್ತದೆಂದು ಯಾಕೆ ಬೊಬ್ಬಾಟ? ಭಾರತದ ಸಾಮಾಜಿಕ, ಆರ್ಥಿಕ ಉನ್ನತಿಯು ನಿರಂತರವಾಗಿ ಆಗಬೇಕಾದರೆ ಎಲ್ಲ

ಕ್ಷೇತ್ರಗಳಲ್ಲೂ ನವೀನ ಸುಧಾರಣೆಗಳಾಗಲೇ ಬೇಕು. ಅವಕ್ಕೆ ತಕ್ಕ ಮಾನಸಿಕ ವಾತಾವರಣವನ್ನು ತಯಾರಿಸಲು ಯೋಗ್ಯ ಪ್ರಯತ್ನಗಳು ನಡೆಯಬೇಕಷ್ಟೆ. ಹಾಗೆಯೇ ಸಹಕಾರಿ ಬೇಸಾಯದಂಥ ಮಹತ್ವದ ಸುಧಾರಣೆಗೆ ತಕ್ಕ ಮಾನಸಿಕ ವಾತಾವರಣವನ್ನು ಹಬ್ಬಿಸಲು ಪ್ರಯತ್ನ ನಡೆಯಬೇಕಾಗಿದೆ.

ದೇಶದ ಆರ್ಥಿಕ ಅಭಿವೃದ್ಧಿಗೆ ಅಗತ್ಯವಿದ್ದ ಉತ್ಪತ್ತಿಯ ಹೆಚ್ಚಳ ಸಹಕಾರಿ ಬೇಸಾಯದಿಂದ ಸಾಧಿಸದೇ?

ದೇಶದ ಔದ್ಯೋಗಿಕ ಹಾಗೂ ಆರ್ಥಿಕ ಅಭ್ಯುದಯಕ್ಕೋಸುಗ ಬೇಸಾಯದ ಉತ್ಪತ್ತಿಯಲ್ಲಿ ಸಾಕಷ್ಟು ಹೆಚ್ಚಳವಾಗಿ ಅದು ಮಾರಾಟದ ಮುಖಾಂತರ ಉದ್ಯೋಗ ಗಳಲ್ಲಿ ತೊಡಗಿರುವ ಜನತೆಗೆ ದೊರಕಬೇಕೆಂಬುದು ನಿರ್ವಿವಾದದ ಸಂಗತಿಯು. ಆದರೆ ಸಹಕಾರಿ ಬೇಸಾಯದಿಂದ ಬೇಸಾಯಗಾರರ ವೈಯಕ್ತಿಕ ಉತ್ತೇಜನ, ಉತ್ಸಾಹ ಗಳು ಶಿಥಿಲವಾಗಿ ಪೇಟೆಗೆ ಬರುವಷ್ಟು ಉತ್ಪತ್ತಿಯ ಹೆಚ್ಚಳವೇ ಆಗದಾಗುವುದಂತೆ. ಉದ್ಯೋಗಗಳ ಉನ್ನತಿಗೆ ದೊರಕುವಷ್ಟು ಉತ್ಪತ್ತಿಯ ಹೆಚ್ಚಳವು ಪೇಟೆಗೆ ಬರದಿದ್ದರೆ ನಿಜವಾಗಿಯೂ ಸಹಕಾರಿ ಬೇಸಾಯವು ನಿರುಪಯೋಗಿಯಷ್ಟೇ ಅಲ್ಲ, ಘಾತಕವಾದ ಕಾರ್ಯಕ್ರಮವೆಂದು ಹೇಳಬೇಕಾದೀತು. ಆದರೆ ಇದು ಯಥಾರ್ಥವಲ್ಲ.

ಸಧ್ಯದ ತುಂಡು ಬೇಸಾಯದಲ್ಲಿ ಸಾಕಷ್ಟು ಉತ್ಪತ್ತಿಯಾಗದ್ದರಿಂದ ಚಿಕ್ಕ ಬೇಸಾಯಗಾರರು ಬೆಳೆದದ್ದನ್ನೆಲ್ಲ ಗ್ರಾಮಗಳಲ್ಲಿಯೇ ತಿಂದುಹಾಕಿ ಬಿಡುತ್ತಾರೆ. ಅವರಿಗೆ ಸಾಲದ್ದಕ್ಕೆ ಹೊರಗಿನಿಂದ ಸರಕುಗಳನ್ನು ಆಮದುಮಾಡಬೇಕಾಗುತ್ತದೆ. ಅಂದ ಬಳಿಕ ಪೇಟೆಗೆ ಕಳಿಸಲು ಸಾಕಷ್ಟು ಮಾಲು ಎಲ್ಲಿಂದ ಬರಬೇಕು? ಕೆಲವರು ದೊಡ್ಡ ಬೇಸಾಯಗಾರರು ತಾವು ಬೆಳೆವ ಉತ್ಪತ್ತಿಯ ಹೆಚ್ಚಳವನ್ನೆಲ್ಲ ಹೆಚ್ಚು ಲಾಭವನ್ನು ಸಂಪಾದಿಸಲು ಹೂಳಿಡುತ್ತಾರೆ. ಅಂತೆಯೇ ಸರಕುಗಳ ಬೆಲೆಗಳು ಗಗನಕ್ಕೇರುತ್ತವೆ. ಅತಿಪ್ರಸರಣವು ಮಿತಿಮೀರಿ ಹೆಚ್ಚುತ್ತದೆ. ಆದ್ದರಿಂದ ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳನ್ನು ಮೊಟಕು ಮಾಡಬೇಕಾಗುತ್ತದೆ. ದೇಶದ ತುಂಬ ಸಂಗ್ರಹ, ಕಳ್ಳಸಂತೆ, ಲಾಭಬಡಕತನಗಳು ಬೆಳೆಯುತ್ತವೆ. ಈ ಪರಿಸ್ಥಿತಿಗಳಲ್ಲಿ ರಾಜ್ಯದ ವ್ಯಾಪಾರ ನಿಯಂ ತ್ರಣ ಮುಂತಾದ ವ್ಯವಸ್ಥೆಗಳೂ ಸಮರ್ಪಕವಾಗಿ ಕಾರ್ಯಗತವಾಗಿ ಅತಿ ಪ್ರಸರಣವನ್ನು ಹತೋಟಿಗೆ ತರುವಲ್ಲಿ ವಿಫಲವಾಗುತ್ತವೆ.

ಸಹಕಾರಿ ಬೇಸಾಯ ಸಂಘಗಳು ವ್ಯಾಪಕವಾಗಿ ಹಬ್ಬುವುದರಿಂದ ಉತ್ಪತ್ತಿಯು ಹೆಚ್ಚಳವಾಗಿ ಅದು ಮಾರಾಟಕ್ಕೆ ಪೇಟೆಗೆ ಬರುವುದು. ಅದರಿಂದ ಬೆಲೆಗಳು ತಾವಾಗಿಯೇ ಹತೋಟಿಗೆ ಬರುವವು. ಬೆಲೆಗಳು ತೀರ ಕೆಳಗೆ ಬಿದ್ದು ಬೇಸಾಯ ಸಂಘಗಳ ಪ್ರಗತಿಯು ಕುಂಠಿತವಾಗಲೂ ಬಹುದು. ಅಂಥ ಪರಿಸ್ಥಿತಿಯಲ್ಲಿ ಬೇಸಾಯ ಸಂಘಗಳ ಸರಕುಗಳಿಗೆ ಯೋಗ್ಯ ಬೆಲೆಯನ್ನು ಕೊಡಿಸುವ ವ್ಯವಸ್ಥೆಯನ್ನು ಸರಕಾರವು ಮಾಡುವುದು ಸಹ ಅಗತ್ಯವಾದೀತು. ಸಂಗ್ರಹ, ಕಳ್ಳಸಂತೆ, ಲಾಭಬಡಕತನಗಳು ಉತ್ಪತ್ತಿಯ ಸಾಕಷ್ಟು ಹೆಚ್ಚಳವಾದ ಕೂಡಲೇ ತಾವಾಗಿಯೇ ಅಡಗುತ್ತವೆ. ಅದಾಗ್ಯೂ

ಉತ್ಪತ್ತಿಯ ಕೊರತೆ ಇನ್ನೂ ಉಳಿದರೆ ಎತ್ತುವಳಿ, ನಿಯಂತ್ರಣ, ವಿತರಣೆಗಳ ವ್ಯವಸ್ಥೆ ಮಾಡುವುದು ಅಗತ್ಯಬಿದ್ದರೆ ಅದನ್ನು ಬೇಸಾಯ ಸಂಘಗಳ ಮುಖಾಂತರ ಹೆಚ್ಚು ಸುಲಭವಾಗಿ ಹಾಗೆ ಮಾಡಲು ಸಾಧ್ಯವಾಗುವುದು. ಏಕೆಂದರೆ ಬೇಸಾಯ ಸಂಘಗಳು ವೈಯಕ್ತಿಕ ಬೇಸಾಯಗಾರರಿಗಿಂತ ಸಂಖ್ಯೆಯಲ್ಲಿ ಕಡಮೆ ಇರುತ್ತವೆ. ಅವುಗಳ ಉತ್ಪಾದನೆಯ, ಬಳಕೆಯ ಸರಿಯಾದ ಲೆಕ್ಕಗಳೂ ಇರುತ್ತವೆ. ಸಹಕಾರಿ ವ್ಯಾಪಾರವು ಸಹ ಇದರಿಂದ ಸುಲಭವಾಗುವುದು. ಭಾರತದ ಪ್ರಜಾತಾಂತ್ರಿಕ ಪರಿಸ್ಥಿತಿಗಳಲ್ಲಿ ಎತ್ತುವಳಿ, ನಿಯಂತ್ರಣಗಳಿಂದ ಭಾರತೀಯ ಬೇಸಾಯಗಾರರಿಂದ ಅವರ ಉತ್ಪತ್ತಿಯನ್ನೆಲ್ಲ ಹಿಂಡಿ ಹೀರುವುದು ಸಾಧ್ಯವಿಲ್ಲ. ಬೇಸಾಯ ಸಂಘಗಳಿಂದ ಅಭಿವೃದ್ಧಿಗೆ ಅಗತ್ಯವಿರುವ ಕರಕಂದಾಯಗಳು ಸಹ ಸುಲಭವಾಗಿ ವಸೂಲು ಆಗುತ್ತವೆ. ಹೀಗೆ ದೇಶದ ಆರ್ಥಿಕ ಹಾಗೂ ಔದ್ಯೋಗಿಕ ಉನ್ನತಿಗಾಗಿ ಸಹಕಾರಿ ಬೇಸಾಯ ಸಂಘಗಳ ಮುಖಾಂತರ ಮಾರಾಟಕ್ಕೆ ಉತ್ಪತ್ತಿಯು, ಹೆಚ್ಚಳದ ಬೇಸಾಯದ ಸರಕುಗಳು ಸಾಕಷ್ಟು ಪ್ರಮಾಣದಲ್ಲಿ ದೊರಕುತ್ತವೆ.

ಸಹಕಾರಿ ಬೇಸಾಯದಿಂದ ಯಾಂತ್ರೀಕರಣ ಹಾಗೂ ಯೋಜನಾಬದ್ಧತೆ ಹೆಚ್ಚಿ ನಿರುದ್ಯೋಗದ ಹೆಚ್ಚಳವಾಗುವುದೇ?

ಸಹಕಾರಿ ಬೇಸಾಯವು ಯಾಂತ್ರೀಕರಣವನ್ನು ಹಬ್ಬಿಸಿ ನಿರುದ್ಯೋಗವನ್ನು ಇನ್ನೂ ಹೆಚ್ಚಿಸುವುದೆಂದು ಆಕ್ಷೇಪ. ಯಾಂತ್ರೀಕರಣದಿಂದಲೇ ಸಹಕಾರಿ ಬೇಸಾಯವನ್ನು ವಿಸ್ತರಿಸುವುದು ಭಾರತದ ಪರಿಸ್ಥಿತಿಗಳಲ್ಲಿ ಅಗತ್ಯವೇನಿಲ್ಲ. ಸಾಮೂಹಿಕ ಬೇಸಾಯವನ್ನು ಕೈಕೊಂಡಾಕ್ಷಣವೇ ಎಲ್ಲ ಯಂತ್ರಗಳನ್ನೂ ಅನಿವಾರ್ಯವಾಗಿ ಉಪಯೋಗಿಸಲಾಗುವುದೆಂಬುದು ತಪ್ಪುಗ್ರಹಿಕೆ. ಭಾರತದ ಪರಿಸ್ಥಿತಿಗಳಲ್ಲಿ ಜನಶಕ್ತಿಯು ಹೇರಳವಿರುವಾಗ ಅದನ್ನು ಹಾಳಾಗಗೊಟ್ಟು ಯಂತ್ರಗಳನ್ನು ಬಳಸುವುದು ಸಮಂಜಸವಲ್ಲ. ಹಾಗೆ ಜನತಾಂತ್ರಿಕ ಬೇಸಾಯ ಸಂಘಗಳು ಮಾಡಲಾರವು. ಬೇಸಾಯ ಸಂಘಗಳು ಹೆಚ್ಚಾಗಿ ಪರಿಶ್ರಮದ ಪರಮಾವಧಿ ಉಪಯೋಗ ಮಾಡುವಂಥ ಭೂಮಿಯ ಸುಧಾರಣೆ, ನೀರಾವರಿ ಮುಂತಾದ ಯೋಜನೆಗಳನ್ನು ಕೈಕೊಳ್ಳುತ್ತವೆ. ತುಂಗಭದ್ರಾ ಅಯಕಟ್ಟಿನ ಪ್ರದೇಶದಂಥ ಕಡೆಗೆ, ಎಲ್ಲಿ ಜನಸಂಖ್ಯೆಯೇ ವಿರಳವೋ, ದುಡಿಯಲು ಜನರು ಸಿಕ್ಕುವುದಿಲ್ಲವೋ ಅಥವಾ ವಿಶಾಲವಾದ ಹೊಸ ಕಾಡುಗಳನ್ನು ತ್ವರಿತವಾಗಿ ಅಭಿವೃದ್ಧಿಗೊಳಿಸಬೇಕಾಗಿದೆಯೋ, ಅಂಥಲ್ಲಿ ಟ್ರಾಕ್ಟರು ಮುಂತಾದ ಬೇಸಾಯ ಯಂತ್ರಗಳನ್ನು ಲಾಭದಾಯಕವಾಗಿ ಉಪಯೋಗಿಸಬಹುದು. ಅಂಥಲ್ಲಿ ನಿರುದ್ಯೋಗ ಹಬ್ಬಿಸುವ ಪ್ರಶ್ನೆಯೇ ಬಾರದು.

ಬೇಸಾಯದ ಕೆಲವು ಮಹತ್ವದ ಕೆಲಸಗಳನ್ನು, ಗರಿಕೆ(ಕರಿಕೆ) ತೆಗೆಯುವುದು, ಆಳಾಗಿ ಉಳುಮೆ ಮಾಡುವುದು ಮುಂತಾದ ಕೆಲಸಗಳನ್ನು ಸಕಾಲದಲ್ಲಿ ತ್ವರಿತವಾಗಿ ಮುಗಿಸಲು ಕೆಲವು ಯಂತ್ರಗಳನ್ನು ಉಪಯೋಗಿಸಬಹುದು. ಅದರಂತೆ ನೀರಾವರಿಗಾಗಿ ಪಂಪುಸೆಟ್ಟುಗಳನ್ನು ಬೇಸಾಯ ಸಂಘಗಳು ಉಪಯೋಗಿಸಬಹುದು. ಅಲ್ಲದೆ ಸಾಮೂಹಿಕವಾಗಿ, ಯೋಜನಾಬದ್ಧವಾಗಿ ಕೆಲವು ಕೆಲಸ ಮಾಡುವುದರಿಂದ ಮತ್ತು

ಮೇಲೆ ಹೇಳಿದಂತೆ ಹಲವಾರು ಯಂತ್ರಗಳ ಉಪಯೋಗದಿಂದ, ಬೇಸಾಯ ಸಂಘಗಳಿಂದ ದುಡಿತದ ಉಳಿತಾಯವಾಗಲೂ ಬಹುದು. ಇವರಿಂದ ನಿರುದ್ಯೋಗವು ಹಬ್ಬುವುದು ಅನಿವಾರ್ಯವಲ್ಲ. ಸಹಕಾರಿ ಬೇಸಾಯುವು ಸಾಮೂಹಿಕ ಸಾಧನ ಶ್ರಮಗಳಿಂದ ಅನೇಕ ಹೊಸ ಹೊಸ ಅಭಿವೃದ್ಧಿಯ ಕಾರ್ಯಗಳನ್ನೂ, ಕೋಳಿಯ ಸಾಕಾಣಿಕೆ, ಹೈನುಗಾರಿಕೆ ಮುಂತಾದ ಸಹಾಯಕ ಉದ್ಯೋಗಗಳನ್ನೂ, ಸಾಂದ್ರ ಬೇಸಾಯ, ತೋಟಗಾರಿಕೆ ಮುಂತಾದುವನ್ನೂ ಕೈಕೊಳ್ಳಲು ಅವಕಾಶ ಮಾಡಿಕೊಡುತ್ತ ದೆಂಬುದನ್ನು ಮರೆಯಕೂಡದು. ಇದರಿಂದ ಬೇಸಾಯ ಸಂಘದಲ್ಲಿ ಉಳಿಯುವ, ದುಡಿಯುವ ಶಕ್ತಿಯು ತೊಡಗುವುದಲ್ಲದೆ ಇನ್ನೂ ಹೆಚ್ಚೆಚ್ಚು ಬೇಸಾಯ ಸಂಘಗಳ ಹೊರಗಿನ ಜನರಿಗೆ ಸಹ ಉದ್ಯೋಗ ಕೊಡುವುದು ಸಾಧ್ಯವಾಗುವುದೆಂಬುದನ್ನು ಅನುಭವದಿಂದ ಕಾಣಲಾಗಿದೆ.

ದೇಶದಲ್ಲೆಲ್ಲ ಸಹಕಾರಿ ಬೇಸಾಯ ಹಬ್ಬಬೇಕು. ಬೇಸಾಯ ಯಂತ್ರಗಳು ಹರಡುವ ಸ್ಥಿತಿಯೂ ನಮ್ಮ ದೇಶದಲ್ಲಿ ಸಧ್ಯಕ್ಕೆ ಇಲ್ಲ. ಅಷ್ಟೊಂದು ಬೇಸಾಯ ಯಂತ್ರಗಳ ಉತ್ಪಾದನೆಯೇ ಸದ್ಯಕ್ಕಿಲ್ಲ. ಪರದೇಶಗಳಿಂದಲೇ ಅಷ್ಟೊಂದು ಯಂತ್ರಗಳನ್ನು ತರಿಸುವುದೂ ಈಗಿನ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ. ಯಂತ್ರಗಳ ಬಳಕೆ ಬೆಳೆಯ ಹತ್ತಿದರೆ ಯಂತ್ರಗಳಷ್ಟೇ ದೊರಕಿದರೆ ಸಾಲದು. ಅವುಗಳ ಬಿಡಿಭಾಗಗಳೂ, ಅವುಗಳನ್ನು ದುರಸ್ತಿಮಾಡಲು ಮೇಸ್ತ್ರಿಗಳೂ ಬೇಕಾದಲ್ಲಿ ಸುಲಭವಾಗಿ ದೊರಕಬೇಕು. ಅಷ್ಟೊಂದು ಔದ್ಯೋಗಿಕ ಹಾಗೂ ಯಾಂತ್ರಿಕಪ್ರಗತಿ ಭಾರತದಲ್ಲಿ ಆಗಲು ಇನ್ನೂ ಸಾಕಷ್ಟು ಕಾಲ ಬೇಕು. ಆದ್ದರಿಂದ ಸಹಕಾರಿ ಬೇಸಾಯದಿಂದ ದೇಶದ ತುಂಬ ಬೇಸಾಯ ಯಂತ್ರಗಳು ಹರಡಿ ನಿರುದ್ಯೋಗವು ಬೆಳೆಯುವುದೆಂಬ ಭೀತಿಯು ನಿರಾಧಾರವಾದದ್ದು.

ಟ್ರಾಕ್ಟರು ಮುಂತಾದ ದೊಡ್ಡ ಬೇಸಾಯ ಯಂತ್ರಗಳನ್ನು ಸತತವಾಗಿ ಉಪಯೋಗಿಸಲು ವಿಶಾಲವಾದ ಭೂಮಿಗಳು ಬೇಕು. ದೇಶದಲ್ಲಿ ಬಹಳ ಕಡೆಗೆ ಬೇಸಾಯ ಸಂಘಗಳಲ್ಲಿ ವಿಶಾಲವಾದ ಭೂಮಿಗಳೇ ಇರಲಾರವು. ತುಂಡು ಹಿಡುವಳಿದಾರರು ತಮ್ಮ ತುಂಡು ಭೂಮಿಗಳನ್ನು ಅಂದರೆ 4, 6, ಅಥವಾ 800 ಎಕರೆ ಭೂಮಿಗಳನ್ನು ಒಂದುಗೂಡಿಸಿದರೆ ಬಹಳವಾದರೆ ಒಂದು ಬೇಸಾಯ ಸಂಘದಲ್ಲಿ 60 ಎಕರೆಯಿಂದ 100–120 ಎಕರೆಯವರೆಗೆ ಭೂಮಿಯು ಕೂಡಬಹುದು. ರಾಯಚೂರು ಜಿಲ್ಲೆ ಯಂಥ ಬಯಲು ಪ್ರದೇಶದಲ್ಲಿ ಸಹ ಸರಾಸರಿಯಾಗಿ ಒಂದೊಂದು ಬೇಸಾಯ ಸಂಘದಲ್ಲಿ 100–120 ಎಕರೆಗಿಂತ ಹೆಚ್ಚಿಗೆ ಭೂಮಿ ಕೂಡಿಲ್ಲ. ಅದು ಸಹ 3–4 ಕಡೆಗೆ ಇರುತ್ತದೆ. ಅಂಥಲ್ಲಿ ಎಲ್ಲ ಬೇಸಾಯದ ಕೆಲಸಗಳಿಗೆ ಯಂತ್ರಗಳನ್ನು ಉಪಯೋಗಿಸುವುದು ಲಾಭದಾಯಕವೂ ಅಲ್ಲ, ಸಾಧ್ಯವೂ ಇಲ್ಲ. ಅಂಥಲ್ಲಿ ಭೂಮಿಯನ್ನು ಹದಗೊಳಿಸಿ ನೀರಾವರಿಯ ಸರಿಯಾದ ಉಪಯೋಗಮಾಡಲು ಬದಿಪಟ್ಟಿಗಳನ್ನು ಹಾಕುವ ಸುಧಾರಣೆಯೊಂದನ್ನು ಎಲ್ಲ ಕಡೆಗೂ ಕೈಕೊಳ್ಳಲಾಗಿದೆ. ಆದ್ದರಿಂದ ಬೇಸಾಯ ಕೆಲಸಗಳಲ್ಲಿ ದೊಡ್ಡ ಯಂತ್ರಗಳ ಉಪಯೋಗವು ಇನ್ನೂ ಸೀಮಿತವಾಗುತ್ತದೆ. ಬಹಳವಾದರೆ ಇಂಥಲ್ಲಿ ಮತ್ತು ಕಾಡು ಮತ್ತು ಪಡಭೂಮಿಗಳಲ್ಲಿ ಆರಂಭವಾದ

ಅಭಿವೃದ್ಧಿಯ ಕಾರ್ಯಕ್ಕೆ, ಆಳ ಉಳುಮೆಗೆ, ನೆಲಸಮ ಮಾಡುವ ಕಾರ್ಯಕ್ಕೆ ಟ್ರಾಕ್ಟರು ಮುಂತಾದ ಯಂತ್ರಗಳನ್ನು ಉಪಯೋಗಿಸಬಹುದು.

ಬೇಸಾಯ ಸಂಘದಲ್ಲಿ ಹೆಚ್ಚು ಶಾಸ್ತ್ರೀಯವಾಗಿ, ಯೋಜನಾಬದ್ಧವಾಗಿ ಶ್ರಮ ಸಾಧನಗಳನ್ನು ಉಪಯೋಗಿಸುವುದರಿಂದ ಶ್ರಮದ ಉಳಿತಾಯವಾಗಿ ನಿರುದ್ಯೋಗ ಬೆಳೆಯುವುದೆಂದು ಆಕ್ಷೇಪವಿದೆ, ನಿಜ. ಬೇಸಾಯ ಸಂಘದಲ್ಲಿ 10 ಎತ್ತುಗಳನ್ನು ಮೇಯಿಸಲು 10 ಜನರು ಹೋಗದೆ ಇಬ್ಬರೇ ಹೋಗುತ್ತಾರೆ. ಆದರೆ ಉಳಿದ 8 ಜನರಿಗೆ ಬಾವಿಯನ್ನು ತೋಡುವುದರಲ್ಲಾಗಲೀ, ಒಡ್ಡು ಹಾಕುವುದರಲ್ಲಾಗಲೀ, ತೋಟಗಾರಿಕೆಯಲ್ಲಾಗಲೀ ಸಾಕಾಗುವಷ್ಟು ಕೆಲಸ ದೊರಕಬಲ್ಲದು. ಸಹಕಾರಿ ಬೇಸಾಯವು ಶಾಸ್ತ್ರೀಯವಾಗಿ ಶ್ರಮವನ್ನು ಸಂಘಟಿಸಿ ಉಪಯೋಗಿಸುವುದರಿಂದ ಅದರ ಹೆಚ್ಚಾನು ಹೆಚ್ಚು ಲಾಭದಾಯಕ ಉಪಯೋಗವಾಗುತ್ತದೆ.

ಸಹಕಾರಿ ಬೇಸಾಯದಿಂದ ತುಂಡುಹಿಡುವಳಿಗಳ ಬದುಗಳ ನಿರ್ಮೂಲನದಿಂದ ಹೆಚ್ಚಿನ ಭೂಮಿಯ ಕ್ಷೇತ್ರವು ದೊರಕಿ, ಸಾಗುವಳಿಯ ಕೆಲಸವು ಹೆಚ್ಚುವುದು. ಹೀಗೆ ಹೆಚ್ಚಾಗಿ ದೊರಕಿದ ಭೂಮಿಯಲ್ಲಿ ಕೆಲವು ಪ್ರದೇಶವು ಗ್ರಾಮದ ರಸ್ತೆ, ಕ್ರೀಡಾಂಗಣ, ಶಾಲೆ ಮುಂತಾದ ಸೌಕರ್ಯಗಳಿಗಾಗಿ ದೊರಕುತ್ತದೆ. ದೇಶದಲ್ಲಿ ಇಂದು 4 ಕೋಟಿ ಹಿಡುವಳಿಗಳಲ್ಲಿ, ಒಂದು ಹಿಡುವಳಿಯಲ್ಲಿ ಸರಾಸರಿಯಾಗಿ 5 ತುಂಡುಗಳಂತೆ 20 ಕೋಟಿ ಭೂಮಿಯ ತುಂಡುಗಳಿವೆ. ಈ ತುಂಡುಗಳ ಬದುಗಳಿಂದ ಉಳಿತಾಯವಾಗುವ ಭೂಮಿಯ ಕ್ಷೇತ್ರವು ಸಾಕಷ್ಟು ವಿಶಾಲವಾಗುವುದರಲ್ಲಿ ಸಂದೇಹವಿಲ್ಲ. ಶೇಕಡಾ 14ರಷ್ಟು ಸಾಗುವಳಿ ಆಗಬಹುದಾದ ಸಾಕಷ್ಟು ವಿಶಾಲವಾದ ಕ್ಷೇತ್ರದಲ್ಲಿ ಭೂ ಅಭಿವೃದ್ಧಿಯ ವ್ಯಾಪಕವಾದ ಕೆಲಸಗಳನ್ನು ಸಹಕಾರಿ ಬೇಸಾಯದಿಂದ ಉಳಿತಾಯ ವಾದ ಶ್ರಮಸಾಧನಗಳಿಂದ ಕೈಕೊಳ್ಳಬಹುದು. ಜೊತೆಯಲ್ಲಿ ಸಾಂದ್ರಬೇಸಾಯದ ವಿಸ್ತಾರ, ಸಾಧ್ಯವಾಗಬಹುದಾದ ಸಹಾಯ ಉದ್ಯೋಗಗಳ ಕೆಲಸಗಳೂ ಹೆಚ್ಚುತ್ತವೆ. ಈ ಎಲ್ಲ ಬೆಳೆಯುತ್ತಿರುವ ಕೆಲಸಗಳಲ್ಲಿ ಬೇಸಾಯಗಾರರಿಗೆ ಮೊದಲಿಗಿಂತ ಉದ್ಯೋಗಾವ ಕಾಶವು ಕಡಮೆ ಆಗದೆ ಹೆಚ್ಚಾಗುತ್ತದೆ. ಹೀಗೆ ಬೇಸಾಯಗಾರರಿಗೆ ಹೆಚ್ಚು ಉದ್ಯೋಗ, ಆದಾಯಗಳು ದೊರಕಿ, ಅವರ ಕೊಳ್ಳುವ ಶಕ್ತಿಯೂ ಹೆಚ್ಚಿದ ಬಳಿಕ ಗ್ರಾಮಾಂತರದಲ್ಲಿ ಅವರ ಬೆಳೆಯುತ್ತಿರುವ ಅವಶ್ಯಕತೆಗಳನ್ನು ಪೂರೈಸಲು ಹೊಸ ಹೊಸ ಕೈಗಾರಿಕೆಗಳು ಬೆಳೆಯುತ್ತವೆ. ಅದರಿಂದ ಅವರಿಗೆ ಇನ್ನೂ ಹೆಚ್ಚಿನ ಉದ್ಯೋಗಾವಕಾಶವು ದೊರಕು ತ್ತದೆ. ಹೀಗೆ ಸಹಕಾರಿ ಬೇಸಾಯದ ಯೋಜನಾಬದ್ಧ ದುಡಿತದಿಂದ ನಿರುದ್ಯೋಗವು ಹೆಚ್ಚದೆ ಬೇಸಾಯಗಾರರಿಗೆ ಹೆಚ್ಚಿಚ್ಚು ಲಾಭದಾಯಕವಾದ ಪೂರ್ಣ ಉದ್ಯೋಗವು ದೊರಕುವುದು.

ಸಹಕಾರಿ ಬೇಸಾಯವು ಪ್ರಜಾತಂತ್ರಕ್ಕೆ ಮಾರಕವೇ ?

ಸಹಕಾರಿ ಬೇಸಾಯವು ಸಾಮ್ಯವಾದಿ ರಾಷ್ಟ್ರಗಳ ಸೊತ್ತು; ಇದರಿಂದ ಪ್ರಜಾ ತಂತ್ರದ ನಾಶವಾಗುತ್ತದೆಂದು ಆಕ್ಷೇಪ. ಸರ್ವಾಧಿಕಾರದಿಂದ ಮಾತ್ರ ಸಹಕಾರಿ

ಬೇಸಾಯವು ಜಾರಿಯಲ್ಲಿ ಬರಲು ಸಾಧ್ಯವೆಂದೂ ಜನತಾಂತ್ರಿಕ ವಾತಾವರಣದಲ್ಲಿ ಅದು ನಡೆಯುವುದೇ ಇಲ್ಲವೆಂದು ಹೇಳಲಾಗುತ್ತದೆ. ಆದ್ದರಿಂದ ಜನತಂತ್ರದ ಗುರಿಯನ್ನಿಟ್ಟುಕೊಂಡ ಭಾರತ ದೇಶಕ್ಕೆ ಸಹಕಾರಿ ಬೇಸಾಯವು ಸೂಕ್ತ ಕಾರ್ಯಕ್ರಮವಲ್ಲವೆಂದು ಹಲವರ ವಾದ.

ಸಹಕಾರಿ ಬೇಸಾಯದ ಕಾರ್ಯಕ್ರಮವನ್ನು ಬೇಸಾಯದ ಉತ್ಪತ್ತಿಯನ್ನು ಹೆಚ್ಚಿಸಲು, ಅನೇಕ ಕಮ್ಯುನಿಸ್ಟೇತರ ರಾಷ್ಟ್ರಗಳು ಸಹ ಕೈಗೊಂಡಿವೆ. ಇಂಗ್ಲೆಂಡ್, ಅಮೆರಿಕೆಗಳಲ್ಲಿ ಸಹ ಒಂದು ವಿಧದ ಸಹಕಾರಿ ಬೇಸಾಯದ ಸಂಘಗಳಿವೆ. ಇಸ್ರೇಲ್ ದೇಶದಲ್ಲಿ ಸಹಕಾರಿ ಬೇಸಾಯವು ಕಮ್ಯೂನಿಸ್ಟ್ ದೇಶಗಳಲ್ಲಿಗಿಂತ ಉನ್ನತ ಮಟ್ಟವನ್ನು ಮುಟ್ಟಿದೆ ಎಂಬುದು ಸರ್ವವಿದಿತವಿದೆ. ಭಾರತದ ರಾಷ್ಟ್ರಪಿತರಾದ ಗಾಂಧೀಜಿಯವರೂ, ಗುರುದೇವ ರವೀಂದ್ರನಾಥ ಠಾಕೂರರೂ ಸಹಕಾರಿ ಬೇಸಾಯದಿಂದಲೇ ನಮ್ಮ ಕೃಷಿಯ ಉನ್ನತಿ ಸಾಧ್ಯವೆಂದು ಸಾರಿದರು. ಇವರು ಸರ್ವಾಧಿಕಾರವನ್ನು ಬೆನ್ನುಹತ್ತಿದವರೆಂದು ಯಾರೂ ಹೇಳರು. ಯಾವುದೊಂದು ದೇಶದ ಸಾಮಾಜಿಕ, ಆರ್ಥಿಕ, ರಾಜಕೀಯ ವ್ಯವಸ್ಥೆಯ ಪ್ರಭಾವದಿಂದ ಸಹಕಾರಿ ಬೇಸಾಯದ ಸ್ವರೂಪವೂ ಬದಲಾಗುತ್ತದೆ. ವೈಯಕ್ತಿಕ ಬೇಸಾಯದಿಂದ ಅಥವಾ ಸಹಕಾರಿ ಬೇಸಾಯದಿಂದ ಇಂಥ ವ್ಯವಸ್ಥೆಯ ರಚನೆಯಾಗದು. ವೈಯಕ್ತಿಕ ಬೇಸಾಯವಿದ್ದರೂ ಸರ್ವಾಧಿಕಾರದ ಆಡಳಿತವಿರಬಹುದು. ಸಹಕಾರಿ ಬೇಸಾಯವಿದ್ದು ಜನತಂತ್ರವಿರಬಹುದು. ನಿಜವೆಂದರೆ ಎಲ್ಲ ಮಟ್ಟಗಳಲ್ಲಿಯೂ ಸಹಕಾರಿ ಬೇಸಾಯವು ಜನತಂತ್ರದ ಕಾರ್ಯಾಚರಣೆಗೆ ತಕ್ಕ ಆರ್ಥಿಕ ಪರಿಸ್ಥಿತಿಗಳನ್ನೂ ವಾತಾವರಣವನ್ನೂ ತಯಾರಿಸುತ್ತದೆ.

ಸಹಕಾರಿ ಬೇಸಾಯವು ಜನರಿಗೆ ಬೇಕಾಗಿಲ್ಲವೆ? ಸಹಕಾರಿ ಬೇಸಾಯದ ವಿರುದ್ಧವೇ ಹೆಚ್ಚು ಜನರು ಮತದಾನ ಮಾಡುವರೆಂಬ ಒಂದು ವಾದವೂ ಇದೆ. ಪ್ರಾರಂಭದಲ್ಲಿ ಜಾಗೃತಿಯ ಅಭಾವದಿಂದ ಜನರು ಎಲ್ಲ ಸುಧಾರಣೆಗಳನ್ನೂ ವಿರೋಧಿಸುತ್ತಾರೆ. ಭೂಮಿಯ ಕ್ರೋಢೀಕರಣವನ್ನೂ ಅವರು ವಿರೋಧಿಸುತ್ತಾರೆ. ಆದ್ದರಿಂದ ಈ ಎಲ್ಲ ಸುಧಾರಣೆಗಳನ್ನು ಕೈಬಿಡಬೇಕೆಂದು ಯಾರೂ ಹೇಳಲಾರರು. ಜ್ಞಾನ ವಿಜ್ಞಾನಗಳ ವಿಕಾಸ ಮಾಡಲು ಜನತೆಯ ಒಲವಿನಂತೆ ಮುಂದಡಿ ಇಡಬೇಕಾಗಿಲ್ಲ. ಹಾಗೆ ಯಾವ ದೇಶದ ಪ್ರಗತಿಯನ್ನೂ ಸಾಧಿಸದು. ಆದ್ದರಿಂದ ಸಹಕಾರಿ ಬೇಸಾಯದ ಪ್ರಗತಿಯ ಸಲುವಾಗಿ ಜ್ಞಾನವಿಜ್ಞಾನಗಳ ವಿಕಾಸಕ್ಕಾಗಿ ಪ್ರಯತ್ನಿಸಿದಂತೆ ಪ್ರಯತ್ನಿಸಬೇಕು. ಸಹಕಾರಿ ಬೇಸಾಯಕ್ಕೆ ಪ್ರೋತ್ಸಾಹಿಸಿದರೆ ಅದು ಪ್ರಜಾತಂತ್ರ ವಿರೋಧವಾಗಲಾರದು.

ಭಾರತದಲ್ಲಿ ಸಹಕಾರಿ ಬೇಸಾಯವು ವಿಫಲವಾಗಿದೆಯೇ?

ಭಾರತದಲ್ಲಿ ಸಹಕಾರಿ ಬೇಸಾಯ ವಿಫಲವಾಗಿದೆಯೆ? ನಿಜವೆಂದರೆ ಇದುವರೆಗೆ ಭಾರತದಲ್ಲಿ ಸಹಕಾರಿ ಬೇಸಾಯವು ಪ್ರಯೋಗಾತ್ಮಕವಾಗಿಯೇ ನಡೆದಿದೆ. ಆರಂಭದ ಪ್ರಯೋಗಗಳಲ್ಲಿ ವಿಫಲತೆ ದೊರಕುವುದು ಸಹಜ. ಅಲ್ಲದೆ ಇದುವರೆಗೆ

ಆದ ಪ್ರಯೋಗಗಳಿಗೆ ಅಗ್ಯತವಿದ್ದ ಎಲ್ಲ ಅನುಕೂಲತೆಗಳೂ ಒದಗಿಲ್ಲ. ಇದನ್ನು ಲಕ್ಷಿಸಿ ಅವುಗಳ ಫಲವನ್ನು ಅಳೆಯಬೇಕು. ಈವರೆಗೆ ಆದ ಬೇಸಾಯ ಸಂಘಗಳು ಸಾಮಾನ್ಯವಾಗಿ ಸರಕಾರಿ ಪಡಭೂಮಿಗಳಲ್ಲಿ ನಿರ್ಗತಿಕ ಭೂಹೀನರಿಂದ ಸ್ಥಾಪಿಸಲ್ಪಟ್ಟಿದ್ದವು ಅಥವಾ ನಿರ್ಗತಿಕ ಬೇಸಾಯಗಾರರಿಂದ ತಮ್ಮ ಬಡಕಲು ಭೂಮಿಗಳಲ್ಲಿ ಅವು ಸ್ಥಾಪಿಸಲ್ಪಟ್ಟಿದ್ದವು. ಆದರೆ ಅವುಗಳಲ್ಲಿ ಸಹ ಮೊದಲು ಎಲ್ಲಿ ಏನೂ ಬೆಳೆಯುತ್ತಿದ್ದಿಲ್ಲವೋ ಅಂಥಲ್ಲಿ ಸರಾಸರಿಯಾಗಿ ಎಕರೆವಾರು ಉತ್ಪತ್ತಿ ಹೆಚ್ಚಾಗಿದೆ. ಅದರಿಂದ ಸಾವಿರಾರು ನಿರ್ಗತಿಕರಿಗೆ ನೆಲೆ ದೊರೆತಿದೆ. ವೈಯಕ್ತಿಕ ದುಡಿತದಿಂದ ಈ ಪ್ರಗತಿ ಸಾಧ್ಯವೇ ಇರಲಿಲ್ಲ. 'ಬೇಸಾಯ ಸಂಘಗಳು ತಮ್ಮ ಪಡಭೂಮಿಗಳನ್ನು ಪಡಬಿಟ್ಟಿವೆ; ಅಲ್ಲಿ ಏನೂ ಬೆಳೆಯುತ್ತಿಲ್ಲ; ಸರಕಾರದ ದುಡ್ಡನ್ನು ನೀರಿನಲ್ಲಿ ಹಾಕಿದಂತಾಗಿದೆ' ಎಂಬ ಪ್ರಚಾರ ಸರಿಯಾದುದಲ್ಲ. ಉದಾಹರಣೆಗೆ 1959ರಲ್ಲಿ ಉತ್ತಮ ಹಾಗೂ ರೈತ ಪದ್ಧತಿಯ ಬೇಸಾಯ ಸಂಘಗಳನ್ನು ಸೇರಿ ಕರ್ನಾಟಕದಲ್ಲಿ 80 ಸರಾಸರಿ ಪಡಭೂಮಿಗಳಲ್ಲಿ ಸ್ಥಾಪಿಸಲ್ಪಟ್ಟ ಬೇಸಾಯ ಸಂಘಗಳಿದ್ದವು. ಅವಕ್ಕೆ 30,000 ಎಕರೆ ಬಂಜರು ಭೂಮಿ ಹಾಗೂ 85,000 ರೂಪಾಯಿ ಆರ್ಥಿಕ ಸಹಾಯವು ಸರಕಾರದಿಂದ ದೊರಕಿತ್ತು. ಈ ಸಂಘಗಳಲ್ಲಿ ಒಟ್ಟು 5,550 ಬಡ ಪರಿವಾರಗಳು ನೆಲಸಿ ಸುಮಾರು 9 ಲಕ್ಷ ರೂಪಾಯಿಯ ಬೆಲೆಯ ತಮ್ಮ ಶ್ರಮ ಬಂಡವಾಳಿನಿಂದ 17,500 ಎಕರೆ ಭೂಮಿಯನ್ನು ಸುಧಾರಿಸಿ ಸಾಗುವಳಿ ಮಾಡಿದವು. ಪ್ರತಿ ವರ್ಷ ಅದರಿಂದ ಸುಮಾರು 7 ಲಕ್ಷ ರೂಪಾಯಿಗಳು ಉತ್ಪತ್ತಿ ತೆಗೆದು ದೇಶದ ಉತ್ಪಾದನೆ ಹೆಚ್ಚಿಸಲು ಸಹಾಯಕವಾಗಿದ್ದವು. ರೈತ ಪದ್ಧತಿಯ ಬೇಸಾಯ ಸಂಘಗಳಲ್ಲಿ ಸಹ ಕಾಡು ಕತ್ತರಿಸಿ, ಬಂಜರು ಭೂಮಿಯನ್ನು ಉಳುವ ಹಾಗೂ ಇನ್ನೂ ಅನೇಕ ಅಭಿವೃದ್ಧಿಯ ಕಾರ್ಯಗಳನ್ನು ಜನರು ಸಾಮೂಹಿಕವಾಗಿಯೇ ಮಾಡಿದ್ದರು. ಈ ಸಂಘಗಳಲ್ಲಿ ಹೆಚ್ಚಾಗಿ ವೈಯಕ್ತಿಕ ಬೇಸಾಯ ನಡೆಯುತ್ತಿದ್ದ ರೈತಪದ್ಧತಿಯ ಬೇಸಾಯ ಸಂಘಗಳಾಗಿದ್ದವು; ಸಾಮೂಹಿಕ ಸಾಗುವಳಿಯನ್ನು ನಡೆಸುತ್ತಿದ್ದ ಸಂಘಗಳು ಬೆರಳಿನಿಂದ ಎಣಿಸುವಷ್ಟು ಇದ್ದವು. ಉತ್ಪಾದನೆಯ ಎಲ್ಲ ಕಾರ್ಯಗಳನ್ನು ಯೋಜನಾಬದ್ಧವಾಗಿ ಹಾಗೂ ಸಾಮೂಹಿಕವಾಗಿ ನಡೆಸುವುದರ ಪೂರ್ಣ ಲಾಭಗಳನ್ನು ಈ ಸಂಘಗಳಿಂದ ಕಾಣುವಂತಿರಲಿಲ್ಲ.

ಈಗಿನ ಸರಕಾರದ ಧೋರಣದ ಪ್ರಕಾರ ಸಂಯುಕ್ತ ಹಾಗೂ ಸಾಮುದಾಯಿಕ ಬೇಸಾಯಸಂಘಗಳನ್ನು ಮಾತ್ರ ಸಹಕಾರಿ ಬೇಸಾಯಸಂಘಗಳೆಂದು ಪರಿಗಣಿಸಲಾಗುತ್ತದೆ. ಅಂಥ ಬೇಸಾಯಸಂಘಗಳು ಕರ್ನಾಟಕದಲ್ಲಿ 30–6–1972ರ ವರೆಗೆ 597 ಇದ್ದವು. ಅವೆಲ್ಲ ಸಹಕಾರಿ ಪಡಭೂಮಿಗಳಲ್ಲಿ ಅಥವಾ ಬಡರೈತರ ಬಡಕಲು ಭೂಮಿಗಳಲ್ಲಿಯೇ ಸ್ಥಾಪಿತವಾದವುಗಳು. ಅವುಗಳಲ್ಲಿ ಬಹಳ ಸಂಘಗಳು ಇನ್ನೂ ಪ್ರಾರಂಭಾವಸ್ಥೆಯಲ್ಲಿಯೇ ಇವೆ ಮತ್ತು ಅನೇಕ ಎಡರುತೊಡರುಗಳನ್ನು ಎದುರಿಸುತ್ತಿವೆ. ಆದರೂ ಅವುಗಳಿಂದ 40,400 ಎಕರೆ ಭೂಮಿಯು ಮೊದಲಿಗಿಂತ ಹೆಚ್ಚು ಅಚ್ಚುಕಟ್ಟಾಗಿ ಉಳಲ್ಪಟ್ಟಿದೆ. 12,000 ಎಕರೆ ಬಂಜರು ಭೂಮಿಯು ಸಾಗುವಳಿಯಲ್ಲಿ ಬಂದಿವೆ. 19,900 ಬಡ ಬೇಸಾಯಗಾರರ ಪರಿವಾರಗಳು ಈ ಸಂಘಗಳಲ್ಲಿ ಸದಸ್ಯರಾಗಿದ್ದು ಮೊದಲಿಗಿಂತ ಹೆಚ್ಚು ಅನುಕೂಲತೆಗಳನ್ನು ಪಡೆದು ತಮ್ಮ ಜೀನವಸ್ಥಿತಿಯನ್ನು ಸುಧಾರಿಸಿಕೊಂಡಿದ್ದಾರೆ.

ಒಳ್ಳೇ ಮುಂದಾಳುಗಳು ಧ್ಯೇಯನಿಷ್ಠೆಯಿಂದ, ದಕ್ಷತೆಯಿಂದ ಮಾರ್ಗದರ್ಶನ ಮಾಡಿದಲ್ಲಿ ಕೆಲವು ಬೇಸಾಯ ಸಂಘಗಳು ಆಕರ್ಷಕ ಸುಧಾರಣೆಗಳನ್ನು ಮಾಡಿಕೊಂಡಿವೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ, ತರಿಕೆರೆ ತಾಲ್ಲೂಕಿನಲ್ಲಿ ತ್ಯಾಗದಬಾಗಿಯ ಶ್ರೀ ಸಿದ್ಧೇಶ್ವರ ಬೇಸಾಯ ಸಂಘವು 33 ಕುಟುಂಬಗಳ ಸಾಮೂಹಿಕ ಶ್ರಮದಿಂದ 300 ಎಕರೆ ಕಾಡನ್ನು ಕತ್ತರಿಸಿ ಸುಮಾರು 6 ಲಕ್ಷ ರೂಪಾಯಿ ಬೆಲೆ ಬಾಳುವ ಸಮೃದ್ಧ ಹೊಲವನ್ನಾಗಿ ಮಾಡಿದೆ ಮತ್ತು ಪ್ರತಿವರ್ಷ 50–60,000 ರೂಪಾಯಿಯ ಉತ್ಪತ್ತಿಯನ್ನು ಬೆಳೆಯುತ್ತಿದೆ. ಹಾಸನ ಜಿಲ್ಲೆಯಲ್ಲಿ ಅರಸಿಕೆರೆ ತಾಲ್ಲೂಕಿನಲ್ಲಿ ಹಬ್ಬಾನಘಟ್ಟ ಸಹಕಾರಿ ಬೇಸಾಯ ಸಂಘವು 40 ಎಕರೆಯಲ್ಲಿ ಸುಮಾರು 4 ಲಕ್ಷ ರೂಪಾಯಿ ಬೆಲೆ ಬಾಳುವ ತೆಂಗಿನ ತೋಟವನ್ನು ಸಾಮೂಹಿಕ ಶ್ರಮದಿಂದ ಬೆಳೆಸಿತು. ರಾಯಚೂರ ಜಿಲ್ಲೆಯಲ್ಲಿ ಕೊಪ್ಪಳ ತಾಲ್ಲೂಕಿನಲ್ಲಿ ಮಹಮ್ಮದನಗರ ಸಹಕಾರಿ ಬೇಸಾಯ ಸಂಘವು ಸಾಮೂಹಿಕ ಶ್ರಮದಿಂದ ತುಂಗಭದ್ರಾ ನದಿಯಿಂದ ನೀರೆತ್ತಿ 45 ಎಕರೆ ನೀರಾವರಿ ಬೇಸಾಯದ ಭೂಮಿಯನ್ನು ತಯಾರಿಸಿ ಸುಮಾರು 3½ ಲಕ್ಷ ರೂಪಾಯಿಯ ಆಸ್ತಿಯನ್ನಾಗಿ ಮಾಡಿ, ಅದರಲ್ಲಿ ಪ್ರತಿವರ್ಷ 1½ ಲಕ್ಷ ರೂಪಾಯಿಯ ಉತ್ಪತ್ತಿಯನ್ನು ತೆಗೆಯುತ್ತ ಬಂದಿದೆ. ಎಷ್ಟೋ ಎಡರುತೊಡರುಗಳಿದ್ದರೂ ಸಣ್ಣ ಬಡಬೇಸಾಯಗಾರರು ತಮ್ಮ ಬೇಸಾಯವನ್ನು ಖಂಡಿತವಾಗಿಯೂ ಸಮೃದ್ಧಿಗೊಳಿಸಿ ಆದಾಯವನ್ನು ಹೆಚ್ಚಿಸಿಕೊಳ್ಳಬಲ್ಲರು.

ಸದ್ಯದ ಬೇಸಾಯಸಂಘಗಳಲ್ಲಿ ಅನೇಕ ಸಂಘಗಳು ಭೂಸುಧಾರಣೆಯ ಕಾಯಿದೆಯನ್ನು ತಪ್ಪಿಸಲು ಜಮೀನುದಾರರಿಂದ ಸ್ಥಾಪಿಸಲ್ಪಟ್ಟಿವೆ. ಹಲವು ಕೇವಲ ಸರಕಾರದಿಂದ ಭೂಮಿಯನ್ನು ಪಡೆಯಲು, ಹಣಪಡೆಯಲು ಅಥವಾ ಇನ್ನೂ ಅನೇಕ ಸೌಲಭ್ಯಗಳನ್ನು ಪಡೆಯಲು ಆದಂಥವು. ಇಂಥ ಬೇಸಾಯ ಸಂಘಗಳಲ್ಲಿ ತಮ್ಮ ಶ್ರಮಸಾಧನಗಳನ್ನು ಒಂದುಗೂಡಿಸಿ ಸಾಮೂಹಿಕ ಅಭಿವೃದ್ಧಿಯನ್ನು ಸಾಧಿಸುವ ನೈಜ ಸಹಕಾರಿ ಬೇಸಾಯದ ಉದ್ದೇಶವು ಇರದು. ಇಂಥ ಬೇಸಾಯಗಳನ್ನೇ ಮಾದರಿಗಳೆಂದು ಎತ್ತಿತೋರಿಸಿ ಸಹಕಾರಿ ಬೇಸಾಯವನ್ನು ಖಂಡಿಸುವುದು ಸರಿ ಅಲ್ಲ. ಅಂಥ ಬೇಸಾಯ ಸಂಘಗಳು ಸಹಕಾರಿ ಬೇಸಾಯದ ವಿಕೃತಿಗಳು ಮಾತ್ರ. ಅವನ್ನೆಲ್ಲ ಮುಕ್ತಾಯಗೊಳಿಸಿದಷ್ಟು ಸಹಕಾರಿ ಬೇಸಾಯದ ಪ್ರಗತಿಗೆ ವಿಹಿತ. ಇಂಥ ವಿಕೃತ ಬೇಸಾಯ ಸಂಘಗಳು ಮುಂದೆ ಹೆಚ್ಚು ಬೆಳೆಯದಂತೆ ವ್ಯವಸ್ಥೆಯಾಗಬೇಕು.

ಸಂಚಾಲನ ಮಾಡಲು ಕಾರ್ಯಕರ್ತರ ಕೊರತೆಯಿಂದ ಸಹಕಾರಿ ಬೇಸಾಯವು ಪ್ರಗತಿ ಸಾಧಿಸದು

ಸಹಕಾರಿ ಬೇಸಾಯವು ವೈಯಕ್ತಿಕ ಬೇಸಾಯಕ್ಕಿಂತ ಜಟಿಲವಾದದ್ದು. ಬೇಸಾಯ ಸಂಘದಲ್ಲಿ ಲೆಕ್ಕಪತ್ರ ಬಹಳ ಇರಬೇಕಾಗುತ್ತದೆ. ಕೂಡಿದುಡಿಯುವಾಗ ಅನೇಕ ತೊಡಕು, ತೊಂದರೆ, ತಿಕ್ಕಾಟಗಳು ಬರುತ್ತವೆ. ಅಲ್ಲದೆ ಬೇಸಾಯ ಸಂಘದ ಉದ್ದೇಶಕ್ಕನುಸರಿಸಿ ಬೇಸಾಯದ ತಾಂತ್ರಿಕ ಸುಧಾರಣೆಗಳನ್ನು ಕೈಕೊಳ್ಳಬೇಕಾಗುತ್ತದೆ. ಇವೆಲ್ಲ ಹೊಣೆಗಳನ್ನು ನೀಗಿಸಲು ವಿದ್ಯಾವಂತ ತಜ್ಞ ಹಾಗೂ ಹಳ್ಳಿಯಲ್ಲಿ ನಿಂತು ದುಡಿಯುವ

ಸೇವಾಭಾವನೆಯ ಸಾವಿರಾರು ಕಾರ್ಯಕರ್ತರು ಬೇಕು. ಇಂಥ ಕಾರ್ಯಕರ್ತರು ಸಿಗುವುದು ವಿರಳ. ಅವರಿಲ್ಲದೆ ಹೆಜ್ಜೆಹೆಜ್ಜೆಗೆ ಬರುವ ಸಮಸ್ಯೆಗಳನ್ನು ಬಿಡಿಸುವುದು ಆಗದೆ ಬೇಸಾಯ ಸಂಘಗಳು ಒಡೆದು ಹೋಗುತ್ತವೆ. ಬೇಸಾಯಗಾರರಲ್ಲಿ ಇವೆಲ್ಲ ಜವಾಬ್ದಾರಿಗಳನ್ನು ಹೊರುವಂಥ ವಿದ್ಯಾವಂತರೇ ಇರುವುದಿಲ್ಲ. ಹೀಗೆ ಕಾರ್ಯಕರ್ತರ ಅಭಾವವೊಂದು ಸಹಕಾರಿ ಬೇಸಾಯವು ಕಾರ್ಯಗತವಾಗಲು ದೊಡ್ಡದೊಂದು ತೊಂದರೆ ಎಂದೂ ಆದ್ದರಿಂದ ಸಹಕಾರಿ ಬೇಸಾಯವು ಅವ್ಯವಹಾರಿಕವೆಂದೂ ಹೇಳಲಾಗುತ್ತಿದೆ. ಈ ತರ್ಕದಲ್ಲಿ ಸ್ವಲ್ಪ ಸತ್ಯವಿರುವುದೇನೋ ನಿಜ. ಆದರೆ ಸ್ಥಳೀಯ ಕಾರ್ಯಕರ್ತರು ಅಥವಾ ಮುಂದಾಳುಗಳು ಇಲ್ಲದೆಯೇ ಯಾವದೊಂದು ಜನಾಂದೋಲನವನ್ನು ನಡೆಸಲೇಕೂಡದೆಂಬ ವಾದ ಸರಿ ಅಲ್ಲ. ಕಾರ್ಯಕರ್ತರೇನೋ ಆಕಾಶದಿಂದ ಇಳಿದು ಬರುವುದಿಲ್ಲ. ಸಹಕಾರಿ ಬೇಸಾಯದ ಆಂದೋಲನವು ಬೆಳೆದಂತೆ ತಕ್ಕ ಕಾರ್ಯಕರ್ತರೂ ತಯಾರಾಗುತ್ತ ಹೋಗುತ್ತಾರೆ.

ಬೇಸಾಯ ಸಂಘದ ಲೆಕ್ಕಪತ್ರಗಳನ್ನಿಡಲು ಬಿ.ಎ., ಎಮ್.ಎ. ಓದಿದ ವಿದ್ಯಾವಂತರೇ ಬೇಕೆಂದೇನೂ ಇಲ್ಲ. ಬೇಸಾಯ ಸಂಘವೆಂದರೆ ಒಂದು ಸರಳವಾದ ಬೇಸಾಯಗಾರರ ಅಥವಾ ಹಳ್ಳಿಗರ ಸಂಸ್ಥೆ. ಬೇಸಾಯದ ಲೆಕ್ಕಗಳನ್ನು ಬೇಸಾಯಗಾರರು ಬಾಯಿಂದಲೇ ಮಾಡುತ್ತಲೇ ಇರುತ್ತಾರೆ. ಬೇಸಾಯ ಸಂಘದಲ್ಲಿ ಅವನ್ನೇ ಸ್ವಲ್ಪ ಪದ್ಧತಿ ಪ್ರಕಾರ ಇಡಬೇಕಾಗುತ್ತದೆ. ಆರಂಭದಲ್ಲಿ ಅಂಥ ಜಟಿಲವಾದ ಲೆಕ್ಕಗಳನ್ನೇನೂ ಇಡುವುದು ಅಗತ್ಯವಿಲ್ಲ. ಸ್ವಲ್ಪ ತರಬೇತು ಅಥವಾ ಅನುಭಾವದಿಂದ 6-7ನೇ ವರ್ಗದವರೆಗೆ ಕನ್ನಡ ಕಲಿತ ಬೇಸಾಯಗಾರನ ಮಗನೂ ಅಂಥ ಲೆಕ್ಕಗಳನ್ನು ಬರೆಯಬಲ್ಲನು. ಬೇಸಾಯ ಸಂಘದ ಅಧ್ಯಕ್ಷರು ಅಥವಾ ನಾಯಕರು ಅವನ್ನು ಯಶಸ್ವಿಯಾಗಿ ನಡೆಸಲು ಹೆಚ್ಚು ವಿದ್ಯಾವಂತರಿರಬೇಕೆಂಬ ಅಗತ್ಯವೂ ಇಲ್ಲ. ಅಕ್ಷರಾಭ್ಯಾಸವೇ ಮುಂದಾಳುತನದ ಶಕ್ತಿಯಲ್ಲ. ಪ್ರಭಾವಶಕ್ತಿ, ಕರ್ತೃತ್ವಶಕ್ತಿ, ವಿಚಾರಶಕ್ತಿ, ನಿಷ್ಠೆ, ಪ್ರಾಮಾಣಿಕತನ ಮುಂತಾದ ಗುಣಗಳು ಒಮ್ಮೊಮ್ಮೆ ಹೆಚ್ಚು ಅಕ್ಷರವಿದ್ಯೆ ಪಡೆದವರಿಗಿಂತ, ಕಡಮೆ ಅಕ್ಷರವಿದ್ಯೆ ಇರದಿದ್ದರೂ ಪ್ರಭಾವಶಾಲಿಗಳಾದ ವ್ಯಕ್ತಿಗಳಲ್ಲಿ ಕಂಡುಬರುವುದುಂಟು. ಬೇಸಾಯ ಸಂಘದ ನಿರಕ್ಷರ ಅಥವಾ ಕಡಮೆ ವಿದ್ಯೆ ಕಲಿತ ಬೇಸಾಯಗಾರರೆಲ್ಲರೂ ತಮ್ಮ ಹತ್ತೆಂಟು ರೈತಬಾಂಧವರ ವಿಶ್ವಾಸ ಸಂಪಾದಿಸಿಕೊಂಡು ಹತ್ತಾರು ಜನರ ಕಲ್ಯಾಣ ಅಥವಾ ಸೇವೆಮಾಡಿ ಅವರ ಹಿತದಲ್ಲಿ ತಮ್ಮ ಹಿತವನ್ನು ಕಾಣುವ ವ್ಯಕ್ತಿಗಳು ಅಲ್ಲಲ್ಲಿ ಇರುವುದುಂಟು. ಇಂಥ ರೈತರಿಗೆ ಸ್ವಲ್ಪ ತಿಳುವಳಿಕೆ ಕೊಟ್ಟು ಜವಾಬ್ದಾರಿಗಳನ್ನು ಕಲಿಸಿದ್ದಾದರೆ ಅವರು ಬೇಸಾಯ ಸಂಘಗಳನ್ನು ಬಹಳ ಯಶಸ್ವಿಯಾಗಿ ನಡೆಸಬಲ್ಲ ಮುಂದಾಳುಗಳಾಗಬಹುದು. ಲೆಕ್ಕಪತ್ರಗಳಿಗಾಗಿ ಕಾರ್ಯದರ್ಶಿಯಾಗಿಯೋ ಅಥವಾ ಗುಮಾಸ್ತನಾಗಿಯೋ ಅಕ್ಷರವಿದ್ಯೆ ಓದಿದವನನ್ನು ಸಹಾಯಕ್ಕೆ ತಕ್ಕೊಂಡು ಇಂಥವರು ಬೇಸಾಯ ಸಂಘಗಳನ್ನು ಬಹಳ ಚೆನ್ನಾಗಿ ನಡೆಸಬಲ್ಲರು.

ಬೇಸಾಯ ಸಂಘಗಳ ತಾಂತ್ರಿಕ ಮಾರ್ಗದರ್ಶನಕ್ಕಾಗಿ ತಾಂತ್ರಿಕ ತಜ್ಞರ ಅಗತ್ಯತೆಯನ್ನು ಒತ್ತಿಹೇಳಲಾಗುತ್ತದೆ. ಇವರು ಪ್ರತಿ ಸಂಘಗಳಲ್ಲಿಯೂ ಇರಬೇಕಾಗಿಲ್ಲ. ರಾಜ್ಯಗಳ ಕೃಷಿ ಇಲಾಖೆ ಈ ದಿಶೆಯಲ್ಲಿ ನೆರವಿಗೆ ಬರುವುದರಲ್ಲಿ ಸಂದೇಹವಿಲ್ಲ.

ಬೇಸಾಯ ಸಂಘಗಳ ಸದಸ್ಯರಿಗೆ ಹಾಗೂ ಮುಂದಾಳುಗಳಿಗೆ ತರಬೇತು ನೀಡುವ ಒಂದು ವ್ಯವಸ್ಥೆಯು ಬರುವುದು ಅವಶ್ಯವಿದೆ. ಬೇರೆ ಬೇರೆ ರಾಜ್ಯಗಳಲ್ಲಿರುವಂತೆ ಕರ್ನಾಟಕದಲ್ಲಿಯೂ ಇದರ ವ್ಯವಸ್ಥೆಗೆ ಏರ್ಪಾಡು ಮಾಡಲಾಗಿದೆ. ಧಾರವಾಡದಲ್ಲಿ ಗ್ರಾಮೀಣ ಅಭಿವೃದ್ಧಿಯ ತರಬೇತು ಕೇಂದ್ರದಲ್ಲಿ ಸಹಕಾರಿ ಬೇಸಾಯದ ವ್ಯವಸ್ಥೆಯಿದೆ.

ವಿದ್ಯಾವಂತ ನಿರುದ್ಯೋಗಿಗಳ ಭೂತಾಕಾರದ ಸಮಸ್ಯೆಯು ದೇಶದಲ್ಲಿ ಬೆಳೆಯುತ್ತಿದೆ. ಈ ಸಮಸ್ಯೆಯ ಪರಿಹಾರಕ್ಕಾಗಿ ಶಿಕ್ಷಣ ಕ್ರಮದಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡಿ ವಿದ್ಯಾವಂತ ತರುಣರಲ್ಲಿ ಗ್ರಾಮನಿಷ್ಠೆ, ಬೇಸಾಯನಿಷ್ಠೆಗಳನ್ನು ಬೆಳೆಸಲು ಹಾಗೂ ಬೇಸಾಯದಲ್ಲೇ ಅವರಿಗೆ ಉದ್ಯೋಗಾವಕಾಶ ಮಾಡಿಕೊಡಲು ಭರದಿಂದ ಪ್ರಯತ್ನ ನಡೆದಿವೆ. ಇಂದು ಶಿಕ್ಷಣ ಪದ್ಧತಿಯಲ್ಲಿ ಸಹಕಾರಿ ಬೇಸಾಯದ ತತ್ವ, ವಿಧಾನಗಳ ಜ್ಞಾನವನ್ನೂ ಮಾಡಿಕೊಡುವ ಏರ್ಪಾಡಾಗಬೇಕು. ಅದರಿಂದ ತರುಣರಿಗೆ ಬೇಸಾಯ ಸಂಘಗಳಲ್ಲಿ ಸೇರಿ, ಸಹಕಾರಿ ಬೇಸಾಯಗಾರರೊಡನೆ ಬೆರೆತು ದುಡಿಮೆ, ಬೇಸಾಯ ಸಂಘಗಳನ್ನು ಯಶಸ್ವಿಮಾಡಲು ಜ್ಞಾನ ಹಾಗೂ ಸ್ಫೂರ್ತಿ ದೊರೆಯುತ್ತದೆ. ಶಿಕ್ಷಣ ನಂತರ ಅವರಿಗೆ ಅವಶ್ಯಕ ಅನುಕೂಲತೆಗಳನ್ನು ಒದಗಿಸಬೇಕು.

ಅಧ್ಯಾಯ 4

ಸಹಕಾರಿ ಬೇಸಾಯದ ಯಶಸ್ಸು

ಯಾವುದೊಂದು ಆಂದೋಲನವು ಬೆಳೆದು ಜನತಾ ಆಂದೋಲನವಾಗಬೇಕಾದರೆ ಆ ಆಂದೋಲನದ ಬಗ್ಗೆ ಮೊದಲು ರಾಷ್ಟ್ರೀಯ ಮುಖಂಡರಲ್ಲಿ ಹಾಗೂ ಕಾರ್ಯಕರ್ತರಲ್ಲಿ ಅದರ ಬಗ್ಗೆ ದೃಢವಾದ ಧ್ಯೇಯನಿಷ್ಠೆ ಹಾಗೂ ತಿಳುವಳಿಕೆ ಹುಟ್ಟಿರಬೇಕು. ಸಹಕಾರಿ ಬೇಸಾಯವನ್ನು ಸ್ವರಾಜ್ಯ ಪ್ರಾಪ್ತಿಯ ನಂತರದಿಂದಲೇ ಒಂದು ಮಹತ್ವದ ರಾಷ್ಟ್ರನಿರ್ಮಾಣದ ಕಾರ್ಯಕ್ರಮವೆಂದು ಅಂಗೀಕರಿಸಿದಾಗ್ಯೂ ಅದಕ್ಕೆ ಅನುಕೂಲವಾದ ಮಾನಸಿಕ ವಾತಾವರಣವನ್ನು ತಯಾರಿಸಲು ಇದುವರೆಗೆ ಗಂಭೀರವಾದ, ವ್ಯಾಪಕವಾದ ಪ್ರಯತ್ನಗಳು ನಡೆದಿಲ್ಲ. ಅಂತೆಯೇ ಜನಸಾಮಾನ್ಯರಲ್ಲಿ ಸಹಕಾರಿ ಬೇಸಾಯದ ಬಗ್ಗೆ ವಿಶ್ವಾಸ. ಆಸ್ಥೆ ಬೆಳೆಯುವುದಂತೂ ದೂರ ಉಳಿಯಿತು. ಅದರ ಬಗ್ಗೆ ತಿಳುವಳಿಕೆ ಇಲ್ಲದೆ ಅಥವಾ ಅಪಪ್ರಚಾರದಿಂದ ತಪ್ಪು ಕಲ್ಪನೆಗಳೇ ಬೆಳೆದಿವೆ. ದಿ. ಪ್ರಧಾನಿ ಜವಹರಲಾಲ್ ನೆಹರೂ ಅವರು 'ನಾನು ಹೊಲಹೊಲಕ್ಕೆ ಹೋಗುವೆ; ನಿಮ್ಮ ಹಾಗೂ ದೇಶದ ಉನ್ನತಿಗಾಗಿ ಸಹಕಾರಿ ಬೇಸಾಯವನ್ನು ಕೈಕೊಳ್ಳಿರೆಂದು ಬೇಸಾಯಗಾರರಿಗೆ ಮನವೊಲಿಸುವೆ' ಎಂದು ಹಿಂದೆ ಲೋಕಸಭೆಯಲ್ಲಿ ಸಾರಿದ್ದರು. ಅವರು ಜೀವಂತವಿರುವವರೆಗೆ ಎಲ್ಲೆಡೆ, ಎಲ್ಲ ಸಭೆಸಮ್ಮೇಳನಗಳಲ್ಲಿ ಸಹಕಾರಿ ಬೇಸಾಯದ ಪ್ರಚಾರ ಮಾಡುತ್ತಿದ್ದರು. ಬೇಸಾಯಗಾರರಲ್ಲಿ ತಿಳುವಳಿಕೆ ತುಂಬಿ ಅವರ ಮನವೊಲಿಸಿ. ನಿರಂತರವಾಗಿ ಅವರಿಗೆ ಮಾರ್ಗದರ್ಶನ ನಡೆಯಬೇಕು. ಸಹಕಾರಿ ಬೇಸಾಯವು ರಾಷ್ಟ್ರೀಯ ಕಾರ್ಯಕ್ರಮವಾಗಿ ಯಶಸ್ವಿಯಾದ ದೇಶಗಳಲ್ಲಿ ಅಧಿಕಾರಿಗಳೆಲ್ಲರೂ, ರಾಷ್ಟ್ರೀಯ ಕಾರ್ಯಕರ್ತರೆಲ್ಲರೂ, ಮುಂದಾಳುಗಳೆಲ್ಲರೂ ರಾಷ್ಟ್ರರಕ್ಷಣೆಯ ಯುದ್ಧದ ಪ್ರಚಾರದಲ್ಲಿ ತೊಡಗಿದಂತೆ ತೊಡಗಿದ್ದರು. ಅಂಥ ರಾಷ್ಟ್ರೀಯ ಸಂಸ್ಥೆಯ ಸದಸ್ಯರಾದ 18–20 ವರ್ಷ ವಯಸ್ಸಿನ ವಿದ್ಯಾವತಿಯರಾದ ಕೋಮಲ ತರುಣಿಯರೂ ಸಹ ಬೇಸಾಯಗಾರರ ಗುಡಿಸಲುಗಳಲ್ಲಿ ನೆಲೆಸಿ, ಅವರ ಉರುಟು ಅನ್ನವುಂಡು, ಅವರೊಡನೆ ತಮ್ಮ ಕೋಮಲ ಕೈಗಳಿಂದ ನೇಗಿಲು ಹಿಡಿದು ಉಳುಮೆಮಾಡಿ, ಬೇಸಾಯಗಾರರಿಗೆ ತಮ್ಮ ಹಾಗೂ ದೇಶದ ಏಳಿಗೆಗಾಗಿ ಸಹಕಾರಿ ಬೇಸಾಯ ಕೈಕೊಳ್ಳಲು ಮನವೊಲಿಸಿದ್ದು ಕಂಡುಬರುತ್ತದೆ. ನಮ್ಮ ದೇಶದಲ್ಲಿಯೂ ಇಂಥ ಯತ್ನಗಳು ನಡೆಯಬೇಕು.

ಸಹಕಾರಿ ಬೇಸಾಯದ ವಿಧಾಯಕಕಾರ್ಯಕರ್ತರಿಗೆ ಪ್ರೋತ್ಸಾಹನ

ಸಹಕಾರಿ ಬೇಸಾಯದ ಕಾರ್ಯ ಸಮಿತಿ ಹಾಗೂ, ಸಹಕಾರಿ ಬೇಸಾಯದ ನಿರ್ದೇಶಕ ಸಮಿತಿ(ಗಾಡಗೀಳ ಸಮಿತಿ)ಯು ಎತ್ತಿತೋರಿಸಿದಂತೆ ಸಹಕಾರಿ ಬೇಸಾಯ ಸಂಘದಲ್ಲಿ ಮಾನವೀಯ ಮಾನಸಿಕ ಸಮಸ್ಯೆಗಳಿಗೆ ಹೆಚ್ಚಿಗೆ ಮಹತ್ವವಿರುತ್ತದೆ. ಸಹಕಾರಿ ಬೇಸಾಯವು ಬೇಸಾಯದ ಹೊಸ ಸುಧಾರಿಸಿದ ಪದ್ಧತಿಯಷ್ಟೇ ಅಲ್ಲ,

ಬೇಸಾಯಗಾರರಲ್ಲಿ ನವೀನ ಮಾನವೀಯ ಸಂಬಂಧಗಳ ಸಂಘಟನೆಯೂ ಅಹುದು. ಇದರಲ್ಲಿ ಒಂದುಗೂಡುವ ಬೇಸಾಯಗಾರರು ತಮ್ಮ ಭೂಮಿ ಹಾಗೂ ಸಲಕರಣೆಗಳನ್ನಷ್ಟೇ ಒಂದುಗೂಡಿಸಬೇಕಾಗುವುದಿಲ್ಲ; ತಮ್ಮ ಅನುಭಾವ, ತಮ್ಮ ದುಡಿತ, ತಮ್ಮ ಬುದ್ಧಿ, ತಮ್ಮ ಹೃದಯಗಳನ್ನೂ ಒಂದುಗೂಡಿಸಿ ಸೌಹಾರ್ದದಿಂದ ಯೋಜನಾಬದ್ಧವಾಗಿ ತಮ್ಮ ಹಾಗೂ ದೇಶದ ಉನ್ನತಿಗಾಗಿ ಉಪಯೋಗಿಸಬೇಕಾಗುತ್ತದೆ. ಇದರಲ್ಲಿ ಬೇಸಾಯಗಾರರಲ್ಲಿ ಅಗತ್ಯವಾದ ಹೊಸ ಸಹಕಾರದ ಮನೋಭಾವವನ್ನು ಬೆಳೆಸಬೇಕಾಗುತ್ತದೆ. ಇಂಥ ಮಾನಸಿಕ ಸಮಸ್ಯೆಗಳನ್ನು ಪರಿಹರಿಸಿ ಅನುಕೂಲವಾದ ಜನಜಾಗೃತಿಯನ್ನು ಬೆಳೆಸುವ ಮಹತ್ವದ ಕಾರ್ಯ ಪ್ರಾರಂಭದಲ್ಲಿ ಧ್ಯೇಯನಿಷ್ಠ ವಿಧಾಯಕ ಕಾರ್ಯಕರ್ತರಿಂದಲೇ ಆಗುವುದು ಸಾಧ್ಯ.

ಬೇಸಾಯ ಸಂಘಗಳ ಸಂಯುಕ್ತ ಸಂಘಗಳಿಗೆ ಉತ್ತೇಜನ

ಹೆಚ್ಚು ಸಂಖ್ಯೆಯಲ್ಲಿ ಬೇಸಾಯ ಸಂಘಗಳಿದ್ದಲ್ಲಿ ಸಹಕಾರಿ ಬೇಸಾಯ ಸಂಘಗಳ ಜಿಲ್ಲಾ ಸಂಯುಕ್ತ ಸಂಘಗಳನ್ನು ಹಾಗೂ ರಾಜ್ಯಮಟ್ಟದ ಸಂಯುಕ್ತ ಸಂಘ (ಫೆಡರೇಶನ್ನು)ಗಳನ್ನು ಸ್ಥಾಪಿಸಬೇಕು ಎಂದು ಗಾಡಗೀಳ ಸಮಿತಿಯು ಶಿಫಾರಸು ಮಾಡಿದೆ. ಆಗ ಹೆಚ್ಚು ಆಸ್ಥೆಯಿಂದ ಸಹಕಾರಿ ಬೇಸಾಯವನ್ನು ಹಬ್ಬಿಸಲು ಹಾಗೂ ಸ್ವಯಂಚಾಲಿತ ಜನಾಂದೋಲನವನ್ನಾಗಿ ಮಾಡಲು ಸಾಧ್ಯವಾಗುತ್ತದೆ.

ಇಂಥ ಸಂಯುಕ್ತ ಸಂಘಗಳಿಗೆ ಅನೇಕ ಉಪಯುಕ್ತವಾದ ಹಾಗೂ ಲಾಭದಾಯಕವಾದ ಚಟುವಟಿಕೆಗಳನ್ನು ಕೈಕೊಂಡು ಬೇಸಾಯ ಸಂಘಗಳಿಗೆ ನೇರವಾಗಿ ಸಹಾಯಮಾಡಿ ಅವುಗಳ ಮೇಲೆ ಪ್ರಭಾವಬೀರಲು ಹಾಗೂ ಆರ್ಥಿಕ ದೃಷ್ಟಿಯಿಂದ ಸ್ವಾವಲಂಬಿಯಾಗಲು ಅನುಕೂಲವಾಗುವಂತೆ ಸಾಕಷ್ಟು ಆರ್ಥಿಕ ಸಹಾಯ ಒದಗಿಸಬೇಕೆಂದು ಗಾಡಗೀಳ ಸಮಿತಿಯು ಶಿಫಾರಸು ಮಾಡಿದೆ. ಈ ಸಂಯುಕ್ತ ಸಂಘಗಳ ಮುಖಾಂತರ ಬೇಸಾಯ ಸಂಘಗಳಿಗೆ ಆರ್ಥಿಕ ಸಹಾಯ, ಬೀಜ, ಗೊಬ್ಬರ, ಕ್ರಿಮಿನಾಶಕ, ಹಾಗೂ, ಕೃಷಿಯಂತ್ರಗಳನ್ನು ಹಂಚುವ ವ್ಯವಸ್ಥೆ ಮಾಡಿದರೆ ಅದರಿಂದ ಬೇಸಾಯ ಸಂಘಗಳಿಗೆ ಸಮರ್ಪಕವಾಗಿ ಈ ಕೃಷಿ ಸಲಕರಣೆಗಳೆಲ್ಲ ಸಕಾಲದಲ್ಲಿ ದೊರಕಿ ಅವುಗಳ ಉನ್ನತಿಗೆ ನೆರವಾದಂತಾಗುವುದು. ಅದರಿಂದ ಕೆಲಮಟ್ಟಿನ ಆದಾಯವೂ ಸಂಯುಕ್ತ ಸಂಘಗಳಿಗೆ ದೊರಕುವುದು. ಅವುಗಳ ಪ್ರಭಾವ ಬೇಸಾಯ ಸಂಘಗಳ ಮೇಲೆ ಬಿದ್ದು ಅವು ಸಂಯುಕ್ತ ಸಂಘಗಳನ್ನು ಹೆಚ್ಚೆಚ್ಚು ಚಂದಾ ಹಾಗೂ ದೇಣಿಗೆಗಳಿಂದ ಮತ್ತು ಸದಸ್ಯತ್ವದಿಂದ ಆರ್ಥಿಕವಾಗಿ ಹಾಗೂ ಸಂಘಟನಾತ್ಮಕವಾಗಿ ಬಲಪಡಿಸುತ್ತವೆ. ಬೇಸಾಯಸಂಘಗಳ ಅಭಿವೃದ್ಧಿಯ ಕಾರ್ಯದಲ್ಲಿ ನೆರವಾಗಲು ಸಂಯುಕ್ತ ಸಂಘಗಳಿಗೆ ಸವಲತ್ತಿನಿಂದ ಕೃಷಿ ಯಂತ್ರಗಳನ್ನೂ ಒದಗಿಸಬಹುದು.

ಕರ್ನಾಟಕ ರಾಜ್ಯ ಸಹಕಾರಿ ಬೇಸಾಯ ಸಂಘಗಳ ಫೆಡರೇಶನ್ನು ದೇಶದಲ್ಲಿಯೇ ಪ್ರಥಮ ಹಾಗೂ ಒಂದೇ ಒಂದಾದ ರಾಜ್ಯಮಟ್ಟದ ಬೇಸಾಯ ಸಂಘಗಳ ಸಂಯುಕ್ತ ಸಂಘವಾಗಿದೆ. ಸಹಕಾರಿ ಬೇಸಾಯದ ಪ್ರಚಾರ ಶಿಕ್ಷಣಗಳ ಕಾರ್ಯವನ್ನು ಅದು

ಎಲ್ಲೂ ಆಗದಷ್ಟು ಮಾಡಿದೆ. ಸಹಕಾರಿ ಬೇಸಾಯದ ಬಗ್ಗೆ 20 ಪ್ರಚಾರ ಪುಸ್ತ ಗಳನ್ನು ಪ್ರಕಟಿಸಿದೆ. ಪ್ರತಿವರ್ಷ ಒಂದು ಯಶಸ್ವಿ ಬೇಸಾಯ ಸಂಘದಲ್ಲಿ ಸಹಕಾ ಬೇಸಾಯದ ವಿಚಾರಗೋಷ್ಠಿಯನ್ನು ಅದು ಏರ್ಪಡಿಸಿ ಸಹಕಾರಿ ಬೇಸಾಯ ಕ್ಷೇತ್ರದಲ್ಲಿಯ ಅಧಿಕಾರಿಗಳಿಗೆ ಹಾಗೂ ಕಾರ್ಯಕರ್ತರಿಗೆ ಸಹಕಾರಿ ಬೇಸಾಯ ತತ್ವವಿಧಾನಗಳನ್ನು ತಿಳಿಸುತ್ತ ಬಂದಿದೆ. ಬೇಸಾಯ ಸಂಘಗಳಿಗೆ ಮಾರ್ಗದರ್ಶ ಮಾಡುತ್ತ ಕೆಲವು ಒಳ್ಳೇ ಬೇಸಾಯ ಸಂಘಗಳನ್ನಾಗಿ ಮಾಡಿದೆ. ಇದರ ಕಾರ್ಯ ಚಟುವಟಿಕೆಗಳು ಹೆಚ್ಚಲು ಅವಶ್ಯವಿರುವ ಸಹಾಯ ಇದಕ್ಕೆ ಹೆಚ್ಚಿಚ್ಚಾಗಿ ದೊರೆತ ಸಹಕಾರಿ ಬೇಸಾಯ ಆಂದೋಲನ ಶೀಘ್ರಗತಿಯಲ್ಲಿ ನಡೆಯುತ್ತದೆ.

ಸಹಕಾರಿ ಬೇಸಾಯದ ಸಲಹಾಮಂಡಲಿಗಳು

ರಾಷ್ಟ್ರೀಯ ಸಹಕಾರಿ ಬೇಸಾಯದ ಸಲಹಾಮಂಡಲಿ ಹಾಗೂ ಅನೇ ರಾಜ್ಯಗಳಲ್ಲಿ ರಾಜ್ಯಮಟ್ಟದ ಸಹಕಾರಿ ಬೇಸಾಯದ ಸಲಹೆ ಮಂಡಲಿಗಳು ಸ್ಥಾ ಸಲ್ಪಟ್ಟಿವೆ. ಸಹಕಾರಿ ಬೇಸಾಯದ ಕಾರ್ಯಕ್ರಮವನ್ನು ಯಶಸ್ವಿಯಾಗಿ ಹೆಚ್ಚಿಸಲ ಸರಕಾರಕ್ಕೆ ಸೂಕ್ತಕ್ರಮಗಳನ್ನು ಕೈಕೊಳ್ಳಲು ಸಲಹೆ ಕೊಡುವುದೇ ಅವುಗಳ ಕಾರ್ಯ ತೃತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಈ ಸಲಹೆ ಮಂಡಲಿಗಳ ತಕ್ಕಮಟ್ಟಿಗೆ ಕಾರ್ಯ ಮಾಡುತ್ತಿದ್ದವು. ಮುಂದೆ ಅವು ಶಿಥಿಲವಾದವು. ಸಹಕಾ ಬೇಸಾಯದ ಬಗ್ಗೆ ದೇಶದಲ್ಲಿ ನಿರುತ್ಸಾಹದ ವಾತಾವರಣವು ಹಬ್ಬಿದ್ದರಿಂದ ಈ ಸಲಹ ಮಂಡಲಿಗಳೂ ನಿರುತ್ಸಾಹಗೊಂಡವು. ಈ ಸಲಹೆ ಮಂಡಲಿಗಳ ನಿರ್ಣಯಗಳ ಸೂಚನೆಗಳು ಮಾತ್ರ ಆಗಿರುತ್ತಿದ್ದವಾದ್ದರಿಂದ ಅವು ಪೂರ್ಣವಾಗಿ ಕಾರ್ಯದಲ್ಲು ಬರುತ್ತಿರಲಿಲ್ಲ. ಈ ಸಲಹೆ ಮಂಡಲಿಗಳಲ್ಲಿ ಹೆಚ್ಚಾಗಿ ಅಧಿಕಾರಿಗಳು ಹಾಗೂ ತಜ್ಞರ ಇರುತ್ತಿದ್ದರು. ಕೆಲವರು ಅಧಿಕಾರೇತರ ಸದಸ್ಯರಿದ್ದರೂ ಅವರಲ್ಲಿ ಸಹಕಾರಿ ಬೇಸಾಯ ದಲ್ಲಿ ತಾತ್ವಿಕ ನಿಷ್ಠೆಯುಳ್ಳವರು ಹಾಗೂ ಆ ಕ್ಷೇತ್ರದಲ್ಲಿ ಪ್ರತ್ಯಕ್ಷ ದುಡಿಯುತ್ತಿದ್ದವರ ಕಡಮೆ. ಹೀಗಾಗಿ ಬೇಸಾಯ ಸಂಘಗಳ ನೈಜ ಸಮಸ್ಯೆಗಳ ಪರಿಹಾರದಬಗ್ಗೆ ಸಲಹ ಮಂಡಲಿಗಳ ನಿರ್ಣಯಗಳು ಪರಿಣಾಮಕಾರಿಯಾಗಿದ್ದಂತೆ ಕಾಣಲಿಲ್ಲ. ಆದ್ದರಿಂದ ಈ ಸಲಹೆ ಮಂಡಲಿಗಳನ್ನು ಪುನರ್ಘಟಿಸುವುದು ಅಗತ್ಯ. ಅವುಗಳಲ್ಲಿ ಸಹಕಾರಿ ಬೇಸಾಯ ದಲ್ಲಿ ನೈಜ ನಿಷ್ಠೆ ಇದ್ದು ಅದಕ್ಕಾಗಿ ದುಡಿದವರನ್ನು ಹೆಚ್ಚಿಗೆ ಸೇರಿಸಬೇಕು; ಈ ಕಾರ್ಯ ಕ್ರಮದ ಬಗ್ಗೆ ಸಹಾನುಭೂತಿಯುಳ್ಳ ವಿಧಾಯಕ ಕಾರ್ಯಕರ್ತರನ್ನು ಸೇರಿಸಬೇಕು ಈ ಸಲಹೆ ಮಂಡಲಿಗಳ ಉಪಯುಕ್ತವಾದ ನಿರ್ಣಯಗಳಿಗೆ ಹೆಚ್ಚಿಗೆ ಮಹತ್ವ ಕೊಟ್ಟು ಅವು ಕಾರ್ಯದಲ್ಲಿ ಬರುವಂತೆ ಸರಕಾರವು ಮತ್ತು ಸಂಬಂಧಿಸಿದ ಕಾರ್ಯ ಕರ್ತರು ಮಾಡಬೇಕು. ಈ ಮಂಡಲಿಗಳಲ್ಲಿ ಬೇಸಾಯ ಸಂಘಗಳ ಫೆಡರೇಶನ್ನುಗಳ ಅಧ್ಯಕ್ಷರನ್ನು ಅಗತ್ಯವಾಗಿ ಸೇರಿಸಬೇಕು.

ಸಂಶೋಧನೆ, ಶಿಕ್ಷಣ, ತರಬೇತಿ

ಭಾರತದ ವಾಸ್ತವಿಕ ಪರಿಸ್ಥಿತಿಗನುಗುಣವಾಗಿ ಇಲ್ಲಿ ಸಹಕಾರಿ ಬೇಸಾಯವನ್ನು ಯಶಸ್ವಿಯಾಗಿ ಹಬ್ಬಿಸಲು ಸಹಕಾರಿ ಬೇಸಾಯದ ತತ್ವವಿಧಾನಗಳ ಬಗ್ಗೆ ಬಹಳಷ್ಟು

ಅನುಸಂಧಾನ ಆಗಬೇಕಾಗಿದೆ. ವಿಭಿನ್ನ ಭೂಮಿ. ಹವೆ. ನೀರು, ಮಳೆ, ಜನರ ಜಾಗೃತಿಗಳ ಪ್ರಕಾರ ವಿಭಿನ್ನ ಸಂಘಟನದ ಪದ್ಧತಿಗಳನ್ನು ಅನುಸರಿಸಬೇಕಾಗುವುದು. ಮುಖ್ಯವಾಗಿ ಶ್ರಮಸಂಘಟನ. ಕೆಲಸದ ಅಳತೆ. ಲೆಕ್ಕಪತ್ರಗಳರೂಪ. ಉತ್ಪನ್ನದ ವಿತರಣೆ, ಭೂಸುಧಾರಣೆಯ ಪರಿಹಾರ, ಇವುಗಳ ಬಗ್ಗೆ ಸಹಕಾರಿ ಬೇಸಾಯದಲ್ಲಿ ವಿಶ್ವಾಸವಿದ್ದ ತಜ್ಞರು ಹಾಗೂ ವಿಧಾಯಕ ಕಾರ್ಯಕರ್ತರು ತಮ್ಮ ಅನುಸಂಧಾನ ಹಾಗೂ ಅನುಭವಗಳನ್ನು ಕ್ರೋಢೀಕರಿಸಿ ಸಹಕಾರಿ ಬೇಸಾಯಗಾರರಿಗೆ ಸರಿಯಾಗಿ ಮಾರ್ಗದರ್ಶನ ಮಾಡಲು ಸೂಕ್ತವಿಧಾನಗಳನ್ನು ಹಾಕಿಕೊಡಬೇಕಾಗುತ್ತದೆ. ಅಲ್ಲದೆ ನಿರಂತರವಾಗಿ ಸಹಕಾರಿ ಬೇಸಾಯವನ್ನು ಜನಪ್ರಿಯ ಮಾಡಲು ಅಗತ್ಯವಿದ್ದ ಪ್ರಚಾರ ಸಾಹಿತ್ಯವನ್ನೂ, ಶಿಕ್ಷಣ ಸಾಹಿತ್ಯವನ್ನೂ ತಯಾರಿಸುತ್ತಿರಬೇಕಾಗುತ್ತದೆ. ಈ ಕಾರ್ಯಕ್ಕಾಗಿ ಒಂದು ರಾಷ್ಟ್ರೀಯ ಸಹಕಾರಿ ಬೇಸಾಯದ ಸಂಶೋಧನ ಸಮಿತಿಯನ್ನು ರಚಿಸಿ ಅದಕ್ಕೆ ಎಲ್ಲ ಅನುಕೂಲತೆಗಳನ್ನು ಒದಗಿಸುವುದು ಸೂಕ್ತ. ಚೆನ್ನಾಗಿ ನಡೆದ ರಾಜ್ಯದ ಅಥವಾ ರಾಷ್ಟ್ರೀಯ ಸಹಕಾರಿ ಬೇಸಾಯದ ಫೆಡರೇಶನ್ನುಗಳೊಡನೆ ಸಹಕರಿಸಿ ಈ ಸಮಿತಿಯು ಕೆಲಸ ಮಾಡಬಹುದು.

ಸಹಕಾರಿ ಬೇಸಾಯ ಸಂಘಗಳಲ್ಲಿ, ಸಹಕಾರಿ ಬೇಸಾಯದಲ್ಲಿ ನಿಷ್ಠೆಯುಳ್ಳ. ಶ್ರಮನಿಷ್ಠ, ಹಳ್ಳಿಯಲ್ಲಿ ನೆಲೆಸಬಯಸುವ ವಿದ್ಯಾವಂತ ತರುಣರು ಸಂಚಾಲಕರಾಗಿ ಅಥವಾ ಕಾರ್ಯದರ್ಶಿಗಳಾಗಿ ಕೆಲಸಮಾಡಲು ದೊರಕದಿದ್ದರಿಂದ ಬೇಸಾಯ ಸಂಘಗಳು ನಿರೀಕ್ಷಿಸಿದಷ್ಟು ಯಶಸ್ವಿಯಾಗಿಲ್ಲ. ಸಹಕಾರಿ ಯೂನಿಯನ್ನುಗಳು, ಬೇಸಾಯ ಸಂಘಗಳ ಸಂಯುಕ್ತ ಸಂಘಗಳು ಈ ಮನೋವೃತ್ತಿಯ ತರುಣರನ್ನು ಕೂಡಿಸಿ. ತರಬೇತು ಗೊಳಿಸಿ ಇಂಥ ಕಾರ್ಯಕರ್ತರನ್ನು ತಯಾರುಮಾಡಬೇಕು. ಇಂಥ ತರುಣರು ಸ್ಥಿರವಾಗಿ ನೆಲೆಸುವ ಭರವಸೆ ಹುಟ್ಟಿಸಲು ಅವರಿಗೆ ಜೀವನದ ಅನುಕೂಲತೆಗಳನ್ನು ಒದಗಿಸಬೇಕು. ಅವರ ಭವಿಷ್ಯದ ಭದ್ರತೆಗಾಗಿ ಸಾಧ್ಯವಿದ್ದಲ್ಲಿ ಅವರಿಗೆ ಅಲ್ಪಸ್ವಲ್ಪ ಭೂಮಿಯನ್ನು ಒದಗಿಸಿ ಅವರನ್ನು ಬೇಸಾಯ ಸಂಘಗಳ ಸದಸ್ಯರನ್ನಾಗಿ ಮಾಡಬಹುದು.

ಅನೇಕ ರಾಜ್ಯಗಳಲ್ಲಿ ಸಹಕಾರಿ ಬೇಸಾಯದ ತರಬೇತಿಗಾಗಿ. ಗ್ರಾಮೀಣ ಅಭಿವೃದ್ಧಿಯ ಶಿಕ್ಷಣ ಕೇಂದ್ರಗಳಲ್ಲಿ, ವಿಶಿಷ್ಟವರ್ಗಗಳನ್ನು ನಡೆಸಲಾಗುತ್ತಿದೆ. ಅವುಗಳಲ್ಲಿ ತರಬೇತಿ ಪಡೆಯಲು ಸಾಕಷ್ಟು ವಿದ್ಯಾರ್ಥಿಗಳು ದೊರಕುವುದೇ ಇಲ್ಲ. ಇದಕ್ಕೆ ಕಾರಣ ಈ ತರಬೇತಿಯ ಬಗ್ಗೆ ಮತ್ತು ಮುಂದೆ ತರಬೇತಿ ಮುಗಿಸಿ ಬೇಸಾಯ ಸಂಘಗಳಲ್ಲಿ ದುಡಿಯಲು ವಿದ್ಯಾವಂತ ತರುಣರಿಗೆ ಆಕರ್ಷಣೆಯೇ ಇಲ್ಲ. ಕಡ್ಡಾಯವಾಗಿ ಶಿಕ್ಷಣದ ಕ್ರಮದಲ್ಲಿ ಬೇಸಾಯದ ನಿಷ್ಠೆ ಹಾಗೂ ಶ್ರಮಪ್ರತಿಷ್ಠೆಗೆ ಮಹತ್ವವಿದ್ದಂತೆ ಸಹಕಾರಿ ಬೇಸಾಯದ ತತ್ವ, ವಿಧಾನಗಳ ಜ್ಞಾನಕ್ಕೂ ಮಹತ್ವ ಬರುತ್ತದೆ. ಆದ್ದರಿಂದ ಗಾಂಧೀಜಿಯವರು ಬೋಧಿಸಿದಂತೆ ತರುಣರಿಗೆ ಒಕ್ಕಲುತನ, ಉದ್ಯೋಗಗಳ ಮುಖಾಂತರ ವಿದ್ಯೆಯನ್ನು ಕಲಿಸುವ ಜೀವನಶಿಕ್ಷಣ ದೊರಕಬೇಕು. ಶಿಕ್ಷಣದ ಎಲ್ಲ ಮಟ್ಟಗಳಲ್ಲಿ ಸಹಕಾರಿ ಬೇಸಾಯದ ತತ್ವ, ವಿಧಾನ, ಮಹತ್ವಗಳನ್ನು ಕ್ರಿಯಾತ್ಮಕವಾಗಿ

ಕಲಿಸುವ ವ್ಯವಸ್ಥೆ ಆಗಬೇಕು. ಅಂಥ ಪಠ್ಯಕ್ರಮ, ಪಠ್ಯಪುಸ್ತಕಗಳು ತಯಾರಾಗ ಬೇಕು. ಆಗ ಮಾತ್ರ ಹೆಚ್ಚಿನ ವಿಶಿಷ್ಟ ತರಬೇತಿಗಾಗಿ ಸ್ಥಾಪಿಸಲ್ಪಟ್ಟ ಸಹಕಾರಿ ಬೇಸಾಯದ ತರಬೇತಿ ಕೇಂದ್ರಗಳಿಗೆ ವಿದ್ಯಾರ್ಥಿಗಳ ಕೊರತೆಯಾಗದು. ಅದರಲ್ಲಿ ಕೇವಲ ಬೇಸಾಯ ಸಂಘಗಳ ಕಾರ್ಯದರ್ಶಿಗಳೇ ಸೇರರು. ಆದರೆ ಗ್ರಾಮಪಂಚಾಯಿತಿ ಗಳ, ಸೇವಾ ಸಹಕಾರಿ ಸಂಘಗಳ ಹಾಗೂ ಬೇರೆ ಸಂಸ್ಥೆಗಳ ಸಿಬ್ಬಂದಿ ವರ್ಗದವರಿಗೆ ಹಾಗೂ ಕಾರ್ಯಕರ್ತರಿಗೆ ಸಹ ಸಹಕಾರಿ ಬೇಸಾಯದ ಬಗ್ಗೆ ಸಾರ್ವತ್ರಿಕವಾಗಿ ವಿಶ್ವಾಸ ಬೆಳೆಯುವುದಲ್ಲದೆ ಜನರಲ್ಲಿ ಪ್ರಭಾವವಿರುವ ಈ ಕಾರ್ಯಕರ್ತರು ಸಹಕಾರಿ ಬೇಸಾಯವನ್ನು ಹಬ್ಬಿಸಲು ಪ್ರಯತ್ನಿಸುತ್ತಾರೆ. ಅವರು ಕೆಲವು ಸಮಯವಾದರೂ ಬೇಸಾಯ ಸಂಘಗಳಲ್ಲಿ ದುಡಿಯಲು ಒಪ್ಪಬಹುದು. ಅದರಿಂದ ಬೇಸಾಯ ಸಂಘ ಗಳಿಗೆ ಯೋಗ್ಯ ಸಂಚಾಲನೆ ದೊರಕುವ ವ್ಯವಸ್ಥೆ ಆಗುತ್ತದೆ.

ಸಹಕಾರಿ ಬೇಸಾಯದ ಶಿಕ್ಷಣವು ಉಪಯುಕ್ತವೂ. ಪರಿಣಾಮಕಾರಿಯೂ ಆಗ ಬೇಕಾದರೆ ಅದು ಕೇವಲ ತಾತ್ವಿಕವಾಗದೆ ಕ್ರಿಯಾತ್ಮಕವಾಗಬೇಕು. ಈಚೆಗೆ ನವೀನ ತತ್ವ, ವಿಧಾನಗಳ ಬಗ್ಗೆ ತರಬೇತಿಯ ಕಾರ್ಯಕ್ರಮಗಳಲ್ಲಿ ಹೆಚ್ಚೆಚ್ಚು ಮಹತ್ವ ಕೊಡಲಾಗುತ್ತದೆ. ಅಂಥ ನವೀನ ತತ್ವವಿಧಾನಗಳು ಮಹತ್ವದವಲ್ಲವೆಂತಲ್ಲ. ಆದರೆ ಕಾರ್ಯಕರ್ತರಲ್ಲಿ ಧ್ಯೇಯನಿಷ್ಠೆ, ಶ್ರಮಪ್ರತಿಷ್ಠೆ ಹಾಗೂ ಜನಸಂಪರ್ಕದ ಭಾವನೆ ಗಳನ್ನು ಬೆಳೆಸದಿದ್ದರೆ ಕಲಿತ ತತ್ವವಿಧಾನಗಳಲ್ಲಿ ಕೆಲವನ್ನಾದರೂ ಅನುಷ್ಠಾನಕ್ಕೆ ತರಲು ಅವರು ಜನಸಾಮಾನ್ಯರ ಮೇಲೆ ತಮ್ಮ ಪ್ರಭಾವ ಬೀರಲಾರರು. ಆದ್ದರಿಂದ ಶಿಕ್ಷಣ ಕಾರ್ಯಕ್ರಮಗಳಲ್ಲಿ ಸೈದ್ಧಾಂತಿಕ ಶಿಕ್ಷಣವನ್ನು ಸ್ವಲ್ಪ ಮೊಟಕು ಮಾಡಿದರೂ ಚಿಂತೆ ಇಲ್ಲ; ಕಾರ್ಯಕರ್ತರ ಮನೋಭಾವವನ್ನು ಬದಲಿಸುವ ಕ್ರಿಯಾತ್ಮಕ ಶಿಕ್ಷಣಕ್ಕೆ ಮಹತ್ವ ಕೊಡಬೇಕು. ಅಂದರೆ ಅವರು ತಾವು ತರಬೇತಿ ಕೇಂದ್ರಗಳಲ್ಲಿ ಕಲಿತ ಕೆಲವು ಹೊಸ ವಿಧಾನಗಳನ್ನಾದರೂ ಕಾರ್ಯರೂಪಕ್ಕಿಳಿಸಲು ಸಮರ್ಥರಾಗುತ್ತಾರೆ. ಶಿಕ್ಷಣ ಪಡೆಯುವ ಕಾರ್ಯಕರ್ತರಿಗೆ ತರಬೇತಿನಲ್ಲಿ ಅವರು ಸಾಮಾನ್ಯ ಬೇಸಾಯಗಾರರ ಮಧ್ಯದಲ್ಲಿ ವಾಸಿಸಲು ಹಾಗೂ ದಿನಾಲು ಕೆಲಸಮಯವಾದರೂ ಅವರೊಡನೆ ಅಭಿಮಾನವಿಲ್ಲದೆ ದುಡಿಯಲು ಕಲಿಸಬೇಕು. ಅದರಿಂದ ಅವರು ಜನರಲ್ಲಿ ಬೆರೆಯುವು ದನ್ನು ಹಾಗೂ ದುಡಿತದ ಗೌರವವನ್ನು ಕಲಿಯುತ್ತಾರೆ. ಇಂಥ ತರಬೇತಿ ಕೇವಲ ತಾತ್ವಿಕ ಬೋಧನೆಯಿಂದಲೇ ಆಗದು, ಜೀವನವನ್ನೇ ವಿಧಾಯಕ ಕಾರ್ಯಕ್ಕೆ ಸಮರ್ಪಿಸಿದ ವಿಧಾಯಕ ಕಾರ್ಯಕರ್ತರ ನೇರವಾದ ಜೀವನ ಪ್ರಭಾವದಿಂದ ಅದು ಹೆಚ್ಚು ಪರಿಣಾಮಕಾರಿ ಆದೀತು. ತರಬೇತಿಗಾರರು ಈ ವಿಷಯ ತಿಳಿದಿರಬೇಕು.

ಸಹಕಾರಿ ಬೇಸಾಯದ ಶಿಕ್ಷಣಕ್ರಮದಲ್ಲಿ ಶ್ರಮಪ್ರತಿಷ್ಠೆಗೆ ಹೆಚ್ಚಿನ ಅದ್ಯತೆ ಕೊಡಬೇಕು. ಶ್ರಮಪ್ರತಿಷ್ಠೆ ಸಮಾಜದಲ್ಲಿ ಇಲ್ಲದ್ದಕ್ಕೆ ಇಂದು ಬೇಸಾಯಗಾರನು ಸಹ ಸಂತೋಷಶ್ರದ್ಧೆಗಳಿಂದ ತನ್ನ ಕಾ ುಕವನ್ನು ನಡೆಸುವುದಿಲ್ಲ. ಜನಸಾಮಾನ್ಯರಲ್ಲಿ ಸಹಕಾರಿ ಬೇಸಾಯದ ಬಗ್ಗೆ ಹಾಗೂ ಸಮಾಜವಾದದ ಬಗ್ಗೆ ವ್ಯಾಪಕವಾದ ಪ್ರಚಾರ ನಡೆಯಬೇಕು. ಚಿಕ್ಕಆ ಹಾಗೂ ಬಡ ಬೇಸಾಯಗಾರನಿಗೇನೇ ಸಹಕಾರಿ ಬೇಸಾಯ

ದಿಂದ ತತ್ಕಾಲಿಕ ಹಾಗೂ ಹೆಚ್ಚಿನ ಪ್ರಯೋಜನವಿದೆ. ಅವರಲ್ಲಿ ಈ ಪ್ರಚಾರ ಅವಶ್ಯವಿದೆ.

ಜನಸಂಪರ್ಕದಿಂದಲೇ ಜನಾಂದೋಲನವು ಬೆಳೆಯುತ್ತದೆ. ಸಹಕಾರಿ ಬೇಸಾಯವು ನವೀನ ಉಚ್ಚತರ ಸಂಬಂಧಗಳ ಸಂಘಟನವೂ ಹೌದು. ಅದರಲ್ಲಿ ಅಡಕವಾಗಿರುವ ಹೊಸ ಜೀವನ ದೃಷ್ಟಿಕೋನದ ಪ್ರಚಾರವು ಆಗಬೇಕು. ಹೊಸ ಪದ್ಧತಿಗಳನ್ನು, ಹೊಸ ಸಂಘಟನಗಳನ್ನು ಅನುಸರಿಸುವಲ್ಲಿ ಬೇಸಾಯಗಾರರು ಸಂಕೋಚ ಪಡುತ್ತಾರೆ. ಆದರೆ ಹೊಸ ಪದ್ಧತಿಗಳ, ಸಂಘಟನಗಳ ಹೆಚ್ಚಿನ ಪ್ರಯೋಜನಗಳು ಒಮ್ಮೆ ಮನವರಿಕೆಯಾದರೆ ಅವನ್ನು ಅವರು ಆಸಕ್ತಿಯಿಂದ ಗ್ರಹಿಸುತ್ತಾರೆ. ಮೊದ ಮೊದಲು ಹೊಸವಿಧಾನವನ್ನು ಸ್ಥಳಿಕ, ವಿಶ್ವಾಸಪಾತ್ರ ನಾಯಕನಲ್ಲಿರುವ ಶ್ರದ್ಧೆ ಯಿಂದ ಅವರು ಸ್ವೀಕರಿಸಬಹುದು. ಮುಂದೆ ಕ್ರಮೇಣವಾಗಿ ಹೊಸ ವಿಧಾನಗಳ ಉಪಯುಕ್ತತೆಯು ಸ್ವಾನುಭವದಿಂದಲೇ ಅವರಿಗೆ ಮನದಟ್ಟಾಗುತ್ತದೆ; ಆಗ ಅವರು ಹೊಸ ವಿಧಾನಗಳಿಗೆ ಆಸ್ಥೆಯಿಂದ ಅಂಟಿಕೊಳ್ಳುತ್ತಾರೆ.

ಕಾರ್ಯಕರ್ತರ ಶಿಕ್ಷಣಕ್ಕಾಗಿಯಾಗಲೀ, ಜನತೆಯ ಶಿಕ್ಷಣಕ್ಕಾಗಿಯಾಗಲೀ ಈಗ ಸಹಕಾರಿ ಬೇಸಾಯದ ಬಗ್ಗೆ ಸಾಕಷ್ಟು ಒಳ್ಳೇ ಸಾಹಿತ್ಯವಿಲ್ಲ. ಸಹಕಾರಿ ಬೇಸಾಯದ ಅನೇಕ ಜಟಿಲ ಸಮಸ್ಯೆಗಳ ಪರಿಹಾರಗಳ ಬಗ್ಗೆ ತಿಳಿವಳಿಕೆಯನ್ನು ಹಬ್ಬಿಸಲು ಇಂಥ ಸಾಹಿತ್ಯದ ಅಭಾವ ದೊಡ್ಡ ಕೊರತೆ. ಯಾವುದೇ ಹೊಸ ಆಂದೋಲನದ ಬಗ್ಗೆ ಸ್ಫೂರ್ತಿ ಹಬ್ಬಿಸಲು, ನಿರಂತರವಾಗಿ ಶಿಕ್ಷಣಕೊಡಲು ಹಾಗೂ ಮಾರ್ಗದರ್ಶನ ಮಾಡಲು ಸಾಕಷ್ಟು ಸಾಹಿತ್ಯ ಇರುವುದು ಅವಶ್ಯವಿದೆ.

ಮುಂದಾಳುತನದ ಬೆಳವಣಿಗೆ

ಎಲ್ಲ ಜನಾಂದೋಲನಗಳಿಗೆ ಅಗತ್ಯವಿದ್ದಂತೆ ಸಹಕಾರಿ ಬೇಸಾಯವೂ ಜನಾಂ ದೋಲನವಾಗಿ ಬೆಳೆಯಲು ಎಲ್ಲ ಮಟ್ಟಗಳಲ್ಲಿ ಜನನಾಯಕರು ಈ ಕೆಲಸ ಕೈಕೊಳ್ಳ ಬೇಕು. ಸಹಕಾರಿ ಬೇಸಾಯದ ಮಂದಪ್ರಗತಿಗೆ ಮುಂದಾಳುತನದ ಕೊರತೆಯು ಮಹತ್ವದ ಕಾರಣವೆಂದು ಗಾಡಗೀಳ ಸಮಿತಿಯು ಎತ್ತಿ ತೋರಿಸಿದೆ. ರಾಷ್ಟ್ರೀಯ ಹಾಗೂ ರಾಜ್ಯಗಳ ಸಹಕಾರಿ ಯೂನಿಯನ್ನುಗಳು ಮುಂದಾಗಿ, ವಿಶಿಷ್ಟ ಸಮಿತಿಗಳನ್ನು ರಚಿಸಿ ಸಹಕಾರಿ ಬೇಸಾಯ ಆಂದೋಲನವನ್ನು ಜನಪ್ರಿಯ ಮಾಡಲು ಮುಂದಾಳುತನ ವಹಿಸಬೇಕು. ಸಹಕಾರಿ ಬೇಸಾಯವು ಸಾಮೂಹಿಕ ಸಾಮಾಜಿಕ ವಿಕಾಸವನ್ನು ತೀವ್ರ ಗೊಳಿಸುವುದರಿಂದ ಪಂಚಾಯಿತಿ ರಾಜ್ಯದ ಸಂಸ್ಥೆಗಳ ನಾಯಕರೂ, ಅಧಿಕಾರಿಗಳೂ ಸಹಕಾರಿ ಬೇಸಾಯವನ್ನು ಹಬ್ಬಿಸಲು ಸಕ್ರಿಯ ಭಾಗವಹಿಸಬೇಕು. ಸಮಾಜವಾದ ದಲ್ಲಿ ಹಾಗೂ ಸರ್ವೋದಯದಲ್ಲಿ ವಿಶ್ವಾಸವಿದ್ದ ರಾಜಕೀಯ ಸಂಸ್ಥೆಗಳ ಹಾಗೂ ವಿಧಾಯಕ ಸಂಸ್ಥೆಗಳ ಮುಖಂಡರು ಸಹಕಾರಿ ಬೇಸಾಯವು ಸಮಾಜವಾದಕ್ಕೆ ಹಾಗೂ ಸರ್ವೋದಯಕ್ಕೆ ಭದ್ರವಾದ ಆರ್ಥಿಕ ಆಧಾರವೆಂಬುದನ್ನು ಮನಗಂಡು ಸಹಕಾರಿ

ಬೇಸಾಯದ ಪ್ರಚಾರಕ್ಕಾಗಿ ಹೆಣಗಬೇಕು. ಸಹಕಾರಿ ಬೇಸಾಯದ ರಾಷ್ಟ್ರೀಯ ಮಹತ್ವವನ್ನು ಈ ಎಲ್ಲ ಸಂಸ್ಥೆಗಳ ನಾಯಕರ ಮನಸ್ಸಿನ ಮೇಲೆ ಬಿಂಬಿಸಲು ವ್ಯಾಪಕ ವಾದ ಶಿಕ್ಷಣ ಕಾರ್ಯಕ್ರಮವನ್ನು ಕೈಕೊಳ್ಳಬೇಕು.

ಭೂಮಿತಿ, ಭೂಧಾರಣೆ ಹಾಗೂ ಸಹಕಾರಿ ಬೇಸಾಯದ ಕಾರ್ಯಕ್ರಮಗಳ ಸಮನ್ವಿತ ಕಾರ್ಯಾಚರಣೆ

ಸಹಕಾರಿ ಬೇಸಾಯದ ಕಾರ್ಯಕ್ರಮವು ಗ್ರಾಮೀಣ ಅರ್ಥವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಿಸಬಯಸುವ, ಬೇರೆ ಮಹತ್ವದ ಕಾರ್ಯಕ್ರಮಗಳಿಂದ ವಿಚ್ಛಿನ್ನವಾಗಿ ಪ್ರಗತಿಯನ್ನು ಸಾಧಿಸದೆಂದು ಅನುಭವವವು ತೋರಿಸಿದೆ. ಈ ಮಹತ್ವದ ರಾಷ್ಟ್ರನಿರ್ಮಾಣದ ಕಾರ್ಯಕ್ರಮಕ್ಕೆ ವೈಚಾರಿಕ ವಾತಾವರಣವು ಅನುಕೂಲವಾಗು ವಂತೆ ಗ್ರಾಮಾಂತರ ಆರ್ಥಿಕ ಸುಧಾರಣೆಗಳೂ ಅನುಕೂಲವಾದರೆ ಸಹಕಾರಿ ಬೇಸಾಯದ ಪ್ರಗತಿಗೆ ಅನುಕೂಲವಾದ ಭೌತಿಕ ಆಧಾರವೂ ತಯಾರಾಗುತ್ತದೆ. ಭೂಮಿತಿ ಹಾಗೂ ಭೂಸಂಧಾರಣೆ ಬಗೆಗೆ ಇಂದು ಒಳಕೆಯಲ್ಲಿ ಬಂದ ಸುಧಾರಣೆಗಳೊಂದಿಗೆ ಸಹಕಾರಿ ಬೇಸಾಯ ಕಾರ್ಯಕ್ರಮವೂ ಸಂಯೋಜನೆಗೊಳ್ಳಬೇಕು. ಭೂಸುಧಾರಣೆಯ ಕಾಯಿ ದೆಯ ಅನುಷ್ಠಾನದಿಂದ ದೊರಕುವ ಹೆಚ್ಚುವರಿ ಭೂಮಿಯ ತುಂಡುಗಳನ್ನು ಭೂಹೀನ ರಿಗೆ ಹಾಗೂ ಚಿಕ್ಕ ಹಿಡುವಳಿದಾರರಿಗೆ ಹಂಚಿ. ಸಹಕಾರಿ ಬೇಸಾಯ ಸಂಘಗಳಲ್ಲಿ ಸೇರಲು ಅವರನ್ನು ಪ್ರೋತ್ಸಾಹಿಸಬೇಕು.

ಭೂಸುಧಾರಣೆಯ ಕಾಯಿದೆಯನ್ನು ಜಾರಿಗೆ ತಂದುದರ ಪರಿಣಾಮವಾಗಿ ಸಾಮಾಜಿಕ ಹಾಗೂ ಆರ್ಥಿಕ ಸಹಕಾರಿ ಬೇಸಾಯದ ಪ್ರಗತಿಗೆ ಬಹಳ ಅನುಕೂಲ ವಾತಾವರಣ ನಿರ್ಮಾಣವಾಗಿದೆ. ಬಹಳಷ್ಟು ಚಿಕ್ಕ ಬೇಸಾಯಗಾರರಿಗೆ, ಭೂಹೀನರಿಗೆ ತಾವು ಊಳುವ ಭೂಮಿಯ ಮೇಲೆ ಒಡೆತನದ ಹಕ್ಕು ದೊರೆತಿದೆ.

ಭೂಸುಧಾರಣೆಗಳ ಸಮನ್ವಿತ ಕಾರ್ಯಾಚರಣೆಯಿಂದ ಆರ್ಥಿಕ ಉಳಿತಾಯ

ಭೂಸುಧಾರಣೆಯ ಕಾಯಿದೆ, ಭೂಮಿಯ ಕ್ರೋಢೀಕರಣದ ಕಾಯಿದೆ ಹಾಗೂ ಸಹಕಾರಿ ಬೇಸಾಯದ ಕಾರ್ಯಕ್ರಮ ಇವೆಲ್ಲವುಗಳನ್ನು ಏಕಕಾಲಕ್ಕೆ ಕಾರ್ಯರೂಪದಲ್ಲಿ ತರುವುದರಿಂದ ಅನೇಕ ಬಗೆಯ ಉಳಿತಾಯಗಳು ಆಗುತ್ತವೆ. ಭೂಮಿಯ ಕ್ರೋಢೀ ಕರಣದಿಂದ ಚಿಕ್ಕ ತುಂಡುಗಳು ಕಡಮೆಯಾಗಿ ಬದಿಗಳಲ್ಲಿ ಸಿಲುಕಿರುವ ಭೂಮಿಯು ಬಹಳಷ್ಟು ಉಳಿತಾಯವಾಗಿ ಅದು ಸಾಗುವಳಿಯಲ್ಲಿ ಬರುತ್ತದೆ. ಸಹಕಾರಿ ಬೇಸಾಯ ದಿಂದ ಹಿಡುವಳಿಗಳ ಕ್ರೋಢೀಕರಣವೂ ಆಗಿ, ಹಿಡುವಳಿಗಳ ನಡುವಿನ ಬದಿಗಳನ್ನು ತೆಗೆದು ಅದರಿಂದ ದೊರೆತ ಹೆಚ್ಚುವರಿ ಭೂಮಿಯನ್ನು ಸಾಗುವಳಿಯಲ್ಲಿ ತರಲಾಗು ವುದು. ಪಡಭೂಮಿಯ ಸುಧಾರಣೆಯಿಂದ ಸಾಗುವಳಿಗಾಗಿ ಹೆಚ್ಚಿಗೆ ಭೂಮಿ ದೊರಕು ತ್ತದೆ. ಏಕಕಾಲಕ್ಕೆ ಈ ಸುಧಾರಣೆಗಳು ಅನುಷ್ಠಾನಕ್ಕೆ ಬಂದಲ್ಲಿ ಸಾಕಷ್ಟು ಭೂಮಿ ಯನ್ನು ಭೂರಹಿತ ಬೇಸಾಯಗಾರರಿಗೆ ಹಂಚಲು ಸಾಧ್ಯವಾಗುತ್ತದೆ. ಇದೇ ಉದ್ದೇಶ

ಕ್ಕಾಗಿ ಭೂದಾನ, ಹಾಗೂ ಗ್ರಾಮದಾನ ಆಂದೋಲನಗಳಿಂದ ಭೂರಹಿತ ಬಡ ಬೇಸಾಯಗಾರರಿಗೆ ಸಾಕಷ್ಟು ಭೂಮಿಯನ್ನು ಹಂಚಲಾಗಿದೆ.

ಇದಲ್ಲದೆ ಏಕಕಾಲಕ್ಕೆ ಈ ಸುಧಾರಣೆಗಳನ್ನು ಅಮಲಿನಲ್ಲಿ ತಂದರೆ ಈ ಕಾರ್ಯಕ್ಕಾಗಿ ಅಗತ್ಯವಾಗುವ ಸಿಬ್ಬಂದಿ ವೆಚ್ಚವು ಸಹ ಬಹಳಷ್ಟು ಉಳಿಯುವುದು. ಒಂದೇ ಆಡಳಿತದ ಅಧಿಕಾರಿಗಳು ಈ ಎಲ್ಲ ಸುಧಾರಣೆಗಳನ್ನು ಅಮಲಿನಲ್ಲಿ ತರಲು ಸರಕಾರದ ವತಿಯಿಂದ ಕೆಲಸ ಮಾಡುತ್ತಾರೆ. ಪ್ರತಿಯೊಂದು ಗ್ರಾಮಾಂತರ ಸುಧಾರಣೆಯಾದ ಬಳಿಕ ಜನಸಾಮಾನ್ಯರ ಸಾಮಾಜಿಕ ಜೀವನದಲ್ಲಿ ಅಸ್ತವ್ಯಸ್ತವಾಗುವುದು ಸ್ವಾಭಾವಿಕ. ಬೇರೆಬೇರೆ ಸಮಯದಲ್ಲಿ ಈ ಸುಧಾರಣೆಗಳು ಕಾರ್ಯಗತವಾದರೆ ಅನೇಕ ಸಲ ಇಂಥ ಅಸ್ತವ್ಯಸ್ತವಾದರೆ, ಸಂಬಂಧಿಸಿದ ಬೇಸಾಯಗಾರರೂ ಹೆಚ್ಚು ಸಾಮಾಜಿಕ, ಆರ್ಥಿಕ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಏಕಕಾಲಕ್ಕೆ ಈ ಸುಧಾರಣೆಗಳು ಕಾರ್ಯಗತವಾದರೆ ಈ ತೊಂದರೆಗಳು ಕಡಮೆ ಆಗುತ್ತವೆ.

ಚಿಕ್ಕ ಹಿಡುವಳಿದಾರರಿಗೆ ಸಹಕಾರಿ ಬೇಸಾಯ ಸಂಘಗಳನ್ನು ಸ್ಥಾಪಿಸಲು ಉತ್ತೇಜನ ನೀಡಬೇಕು. ಭೂಮಿಯನ್ನು ಈ ಸಂಘಗಳಿಗೆ ಸೇರುವ ಜನರಿಗೇನೇ ಕೊಡುವ ಕರಾರು ಹಾಕಬೇಕು. ಆಗ ಸಾಮೂಹಿಕ ಶ್ರಮಸಾಧನಗಳಿಂದ ಹೊಸ ಭೂಮಿಯ ಅಭಿವೃದ್ಧಿ ಬೇಗ ಆಗುತ್ತದೆ.

ಬೇಸಾಯ ಸಂಘಗಳಿಗೆ ಸಂಯೋಜಿತವಾದ ಸಹಾಯ ಸವಲತ್ತುಗಳು

ಸಾಮಾನ್ಯವಾಗಿ ಸಹಕಾರಿ ಬೇಸಾಯ ಸಂಘಗಳು ಚಿಕ್ಕ ಮತ್ತು ಬಡ ಬೇಸಾಯಗಾರರ ಸಂಸ್ಥೆಗಳು. ಅವರು ಒಂದುಗೂಡಿಸುವ ತುಂಡುಭೂಮಿಗಳು ಸಹ ಅಭಿವೃದ್ಧಿಯಾಗದ ಬಡಕಲು ಭೂಮಿಗಳು. ಇಂಥ ಭೂಮಿಗಳ ಅಭಿವೃದ್ಧಿ ಮಾಡಿ ಲಾಭದಾಯಕವಾಗಿ ಅವುಗಳಲ್ಲಿ ಸಾಗುವಳಿ ನಡೆಸಲು ಪ್ರಾರಂಭದಲ್ಲಿ ಚಿಕ್ಕ ಬೇಸಾಯಗಾರರಿಗೆ ಬಹಳಷ್ಟು ಬಂಡವಾಳಿನ ಅಗತ್ಯವಿರುತ್ತದೆ. ಅಭಿವೃದ್ಧಿಯ ಕಾರ್ಯವಲ್ಲದೆ ಸಹಕಾರಿ ಬೇಸಾಯಗಾರರಿಗೆ, ಎತ್ತು, ನೇಗಿಲು, ಗಾಡಿ, ಸುಧಾರಿಸಿದ ಬೀಜ, ಗೊಬ್ಬರ, ಮುಂತಾದ ಸಲಕರಣೆಗಳೂ ಬೇಕಾಗುತ್ತವೆ. ಇವೆಲ್ಲವುಗಳಿಗೆ ಸಕಾಲದಲ್ಲಿ, ಸಾಕಷ್ಟು ಸಹಾಯವು ದೊರಕದಿದ್ದರೆ ಬೇಸಾಯ ಸಂಘಗಳು ಕುಂಟುತ್ತ ನಡೆದು ಮುರಿದುಹೋಗುತ್ತವೆ. ಆದರಿಂದ ಅವುಗಳಲ್ಲಿ ಸೇರಿದ ಬಡ ಬೇಸಾಯಗಾರರ ಆಕಾಂಕ್ಷೆಗಳೆಲ್ಲ ಭಗ್ನವಾಗಿ ಹೋಗುತ್ತವೆ.

ಇಂಥ ನಿರಾಶೆಯ ಸ್ಥಿತಿಯನ್ನು ತಪ್ಪಿಸಲು ಹಾಗೂ ಸಹಕಾರಿ ಬೇಸಾಯ ಸಂಘಗಳಿಗೆ ಪ್ರೋತ್ಸಾಹನ ಕೊಡಲು ಬೇರೆಬೇರೆ ಅಭಿವೃದ್ಧಿ ಯೋಜನೆಗಳ ಸಹಾಯವನ್ನೆಲ್ಲ ಸಾಲುವಷ್ಟು ಪ್ರಮಾಣದಲ್ಲಿ ಕೊಡುವ ಧೋರಣವನ್ನು ಸರಕಾರವು ಅಂಗೀಕರಿಸಿದೆ. ಈ ಸಹಾಯ ಸವಲತ್ತುಗಳ ಯೋಜನೆಗಳನ್ನು ಮುಂದೆ ಕೊಡಲಾಗಿದೆ. ಈ ಬಗ್ಗೆ

ಗಾಡಗೀಳ ಸಮಿತಿಯ ಶಿಫಾರಸುಗಳನ್ನು ಸರಕಾರವು ಸ್ವೀಕರಿಸಿದೆ. ಸಹಕಾರ ಇಲಾಖೆಯ ಯೋಜನಾಬದ್ಧ ಸಹಾಯವಲ್ಲದೆ ಬೇಸಾಯ ಸಂಘಗಳಿಗೆ ಆದ್ಯತೆ ಕೊಟ್ಟು ಬೇರೆ ಇಲಾಖೆಗಳ ಬೇರೆ ಯೋಜನೆಗಳ ಸಹಾಯವನ್ನು ಕೊಡಬೇಕೆಂದು ಸರಕಾರವು ವಿಧಿಸಿದೆ. ಮೀಸಲು ಹಣವನ್ನೇ ಇದಕ್ಕಾಗಿ ಕಾದಿರಿಸಿ ಬೇಸಾಯ ಸಂಘಗಳ ಪ್ರಗತಿಗೆ ಅದನ್ನು ಉಪಯೋಗಿಸಬೇಕು. ಅಗತ್ಯವಿದ್ದಲ್ಲಿ ಇದಕ್ಕಾಗಿ ಸದ್ಯದ ನಿಯಮ ಹಾಗೂ ವಿಧಾನ ಗಳನ್ನು ಸಮಂಜಸವಾಗಿ ಬದಲಿಸಬೇಕು. ವಿಧಿವಿಧಾನಗಳ ಜಟಿಲತೆಯಿಂದ ಹಾಗೂ ರೂಢಿಗತ, ಅತಿ ಜಾಗರೂಕ ದೃಷ್ಟಿಕೋನದಿಂದ ಬೇಸಾಯ ಸಂಘಗಳಿಗೆ ಎಲ್ಲ ಯೋಜನೆ ಗಳ ಪೂರ್ಣ ಸಹಾಯವು ದೊರಕಿಲ್ಲ.

ಅತಿ ಜಾಗರೂಕತೆಯ ದೃಷ್ಟಿಕೋನದಿಂದ ಮುಂಬರುವ ಆರ್ಥಿಕ ಸಹಾಯವು ಬೇಗನೇ ಉಪಯೋಗವಾಗದೆ. ಅನೇಕ ತಿಂಗಳುಗಳವರೆಗಷ್ಟೇ ಅಲ್ಲ, ಹಲವಾರು ವರ್ಷಗಳವರೆಗೆ ನಿರುಪಯೋಗಿಯಾಗಿ ಸಹಕಾರಿ ಬ್ಯಾಂಕುಗಳಲ್ಲಿ ಬಿದ್ದಿರುತ್ತದೆ. ಅದರಿಂದ ಮಂಜೂರಾದ ಸಹಾಯದ ಬಳಕೆ ಆಗದಿರುವುದು, ಬಳಕೆ ಆಗದೆಯೇ ಮಂಜೂರಾದ ಸಾಲದ ಕಂತುಗಳ ಸುಸ್ತಿ ಬಾಕಿ ಆಗುವುದು, ಇಂಥ ಅನಿಷ್ಟ ಚಕ್ರವು ಬೆಳೆಯುತ್ತದೆ. ಇದರಿಂದ ಮಂಜೂರಾದ ಸರಕಾರಿ ಸಹಾಯದ ಉದ್ದೇಶವೇ ವಿಫಲವಾಗುತ್ತದೆ. ಸಹಕಾರಿ ಬೇಸಾಯ ಸಂಘಗಳ ಪ್ರಗತಿಯಂತೂ ಇದರಿಂದ ಕುಂಠಿತವಾಗುವುದು ಸ್ವಾಭಾವಿಕ.

ಸರಕಾರದ ಉದ್ದೇಶಕ್ಕನುಸರಿಸಿ ಸಹಕಾರಿ ಬೇಸಾಯ ಸಂಘಗಳ ಆರ್ಥಿಕ ಅಭಿವೃದ್ಧಿ ಬೇಗ ಆಗಬೇಕಾದರೆ, ಗಾಡಗೀಳ ಸಮಿತಿಯ ಶಿಫಾರಸಿನ ಪ್ರಕಾರ ಅವುಗಳ ಪೂರ್ಣ ಅಭಿವೃದ್ಧಿಗಾಗಿ ಸಹಕಾರಿ ಇಲಾಖೆಯಿಂದಷ್ಟೇ ಅಲ್ಲ ಬೇರೆ ಇಲಾಖೆಗಳಿಂದ ಹಾಗೂ ಸಂಸ್ಥೆಗಳಿಂದ ಪೂರ್ಣ ಸಹಾಯವು ಬೇಸಾಯ ಸಂಘಗಳಿಗೆ ಸುಲಭವಾಗಿ ದೊರಕಬೇಕು. ಈ ದೊರಕಿದ ಸಹಾಯದ ಉಪಯೋಗವೂ ಬೇಗ ಆಗಬೇಕು. ಪ್ರಗತಿಶೀಲ, ವಿದ್ಯಾಯಕ ಧೋರಣೆಯಿಂದ ಸಂಬಂಧಿಸಿದ ಅಧಿಕಾರಿಗಳು ಬೇಗ ಇಂಥ ಸಹಾಯದ ಬಿಡುಗಡೆಯ ಹಾಗೂ ಉಪಯೋಗದ ವ್ಯವಸ್ಥೆ ಮಾಡಬೇಕು. ಗಾಡಗೀಳ ಸಮಿತಿಯು ಎತ್ತಿತೋರಿಸಿದಂತೆ ಬಡ ಬೇಸಾಯಗಾರರ ಬೇಸಾಯ ಸಂಘಗಳು ಕೇವಲ ಬೇಸಾಯದಿಂದ ಉನ್ನತಿಯನ್ನು ಸಾಧಿಸವು. ಅವುಗಳ ಭೂಮಿ ಕಡಮೆ ಹಾಗೂ ಬಡಕಲು ಇರುವುದರಿಂದ ಅವುಗಳ ಪೂರ್ಣ ವಿಕಾಸಕ್ಕಾಗಿ ತೋಟಗಾರಿಕೆ, ಸಹಾಯಕ ಉದ್ಯೋಗಗಳ ಬೆಳವಣಿಗೆಗಾಗಿ ಸಹ ಅವಕ್ಕೆ ಸಾಕಷ್ಟು ಸಹಾಯವನ್ನು ಒದಗಿಸಬೇಕು. ಬೇರೆ ಸಂಸ್ಥೆಗಳು ಬೇಸಾಯ ಸಂಘಗಳಿಗೆ ಸಹಾಯಮಾಡಲು ಸಂಕೋಚಪಡುವುದರಿಂದ ಸರಕಾರವೇ ನೇರವಾಗಿ ಕೆಲವು ಕಾಲ ನಿರ್ದಿಷ್ಟ ಮಿತಿಯಲ್ಲಿ ಈ ಚಟುವಟಿಕೆಗಳಿಗೋಸುಗ ಸಹಾಯವನ್ನು ಒದಗಿಸಬೇಕು. ಅಂದರೆ ಮಾತ್ರ ಪೂರ್ಣ ವಿಕಾಸಗೊಂಡ ಸಹಕಾರಿ ಬೇಸಾಯ ಸಂಘಗಳು ತಮ್ಮ ಯಶಸ್ಸಿನ ಪ್ರಭಾವ ವನ್ನು ಹಾಗೂ ಸಹಕಾರಿ ಬೇಸಾಯದ ಪ್ರಯೋಜನಗಳನ್ನು ಬೇರೆ ಬೇಸಾಯ ಸಂಘಗಳಿಗೆ ಹಾಗೂ ಬೇಸಾಯಗಾರರಿಗೆ ಬಿಂಬಿಸಬಲ್ಲವು.

ಬೇಸಾಯದ ಉತ್ಪಾದನೆಯ ಅವಶ್ಯಕತೆಗಳಿಗಾಗಿ ಬೀಜ, ಗೊಬ್ಬರ ಮುಂತಾದ ಸಾಮಗ್ರಿಗಳಿಗಾಗಿ, ಬೇಸಾಯ ಸಂಘಗಳಿಗೆ ಸಹಕಾರಿ ಬ್ಯಾಂಕುಗಳಿಂದ ಸಕಾಲದಲ್ಲಿ ಸಾಕಷ್ಟು ಸಾಲದ ಸೌಲಭ್ಯ ದೊರಕುವುದು ಅಗತ್ಯ. ಮಹಾರಾಷ್ಟ್ರದಲ್ಲಿ ಧುಳೇ ಜಿಲ್ಲಾ ಸಹಕಾರಿ ಬ್ಯಾಂಕು ಹೆಚ್ಚು ಸಾಲದ ಸವಲತ್ತಿನಿಂದ ಬೇಸಾಯ ಸಂಘಗಳಿಗೆ ಬಹಳಷ್ಟು ಪ್ರೋತ್ಸಾಹನ ಕೊಟ್ಟಿತ್ತು. ಉಳಿದ ಕಡೆಗೆ ಸಾಮಾನ್ಯವಾಗಿ ಅವಿಶ್ವಾಸದ, ಅತಿ ಜಾಗರೂಕತೆಯ ಧೋರಣೆಯಿಂದ ಇಂಥ ಸಾಲದ ಸವಲತ್ತು ದೊರಕಿದ್ದರಿಂದ ಬೇಸಾಯ ಸಂಘಗಳ ಪ್ರಗತಿಯು ಕುಂಠಿತವಾಯಿತು. ಸರಕಾರವು ಸಾಲ ಮುಟ್ಟಿಸುವ ಭರವಸೆ(ಗ್ಯಾರಂಟಿ) ಕೊಟ್ಟಾದರೂ ಸರಿ ಉತ್ಪಾದನೆಯ ಸಾಲಗಳನ್ನು ಸಹಕಾರಿ ಬೇಸಾಯ ಸಂಘಗಳಿಗೆ ತಪ್ಪದೇ, ನಿಯಮಿತವಾಗಿ, ಸಕಾಲದಲ್ಲಿ, ಸಾಕಷ್ಟು ಪ್ರಮಾಣ ದಲ್ಲಿ ಕೊಡಿಸಬೇಕು.

ಬೇಸಾಯ ಸಂಘಗಳಿಗೆ ಈ ಎಲ್ಲ ಸವಲತ್ತುಗಳು ಸುಲಭವಾಗಿ ಸಕಾಲದಲ್ಲಿ ದೊರೆಯಬೇಕು. ಬೇಸಾಯ ಸಂಘಗಳ ಫೆಡರೇಶನ್ನುಗಳ ಮುಖಾಂತರ ನೇರವಾಗಿ ಬೇಸಾಯ ಸಂಘಗಳಿಗೇನೇ ಈ ಸವಲತ್ತುಗಳನ್ನು ಒದಗಿಸಬೇಕು. ಬೆಳೆ ಸವಲತ್ತು ಗಳೂ, ತೆನೆ ಸಂಗ್ರಹದ ಸವಲತ್ತು ಹಾಗೂ ಮಾರಾಟದ ಸವಲತ್ತುಗಳು ಬೇಸಾಯ ಸಂಘಗಳಿಗೆ ಒದಗಬೇಕು. ಆರ್ಥಿಕ ಸಹಾಯ, ಸವಲತ್ತುಗಳನ್ನು ಕೊಡುವಲ್ಲಿ ಸಹಕಾರಿ ಬೇಸಾಯ ಸಂಘಗಳಿಗೆ ಪ್ರೋತ್ಸಾಹನವೀಯುವಂತೆ ಅವಕ್ಕೆ ಆದ್ಯತೆಯನ್ನು ಅಗತ್ಯವಾಗಿ ಕೊಡಬೇಕು.

ಸಹಕಾರಿ ಬೇಸಾಯ ಸಂಘಗಳಿಗೆ ವಿಶೇಷ ವಿನಾಯಿತಿಗಳನ್ನು ತೋರಿಸುವುದಕ್ಕೆ ಬದಲಾಗಿ ಕೆಲವು ಕಾಯಿದೆಗಳಲ್ಲಿರುವ ದೋಷಗಳಿಂದ ಅನುತ್ತೇಜಕ ತೊಂದರೆಗಳಿವೆ. ಉದಾಹರಣೆಗೆ 2 ಎಕರೆ ಭೂಮಿಯುಳ್ಳ ಒಬ್ಬ ಬಡ ಬೇಸಾಯಗಾರನು ಬೇಸಾಯದ ಆದಾಯ ತೆರಿಗೆಯನ್ನು ಸಾಮಾನ್ಯವಾಗಿ ಕೊಡುವುದಿಲ್ಲ; ಆಹಾರ ಧಾನ್ಯದ ಎತ್ತುವಳಿ ಯಲ್ಲಿ ಸಹ ಅವನಿಗೆ ವಿನಾಯಿತಿ ಇರುತ್ತದೆ; ಕೆಲವು ಕಡೆ ಕಂದಾಯದ ವಿನಾಯಿತಿ ಇರುತ್ತದೆ. ಆದರೆ ಇಂಥ 10 ಚಿಕ್ಕ ಬೇಸಾಯಗಾರರು ಒಂದುಗೂಡಿ 20 ಎಕರೆ ಯಲ್ಲಿ ಸಾಮೂಹಿಕ ಬೇಸಾಯ ನಡೆಸಿದರೆ, 20 ಎಕರೆಯ ಬೇಸಾಯವನ್ನು ಒಬ್ಬನೇ ಜಮೀನುದಾರನ ಬೇಸಾಯವೆಂದು ಎಣಿಸಿ ಈ ಬೇಸಾಯಗಾರರಿಂದ ಈ ವಿನಾಯಿತಿ ಗಳನ್ನು ಕಿತ್ತುಕೊಳ್ಳಲಾಗುತ್ತದೆ. 20 ಎಕರೆಯ ಬೇಸಾಯದ ನಿವ್ವಳ ಆದಾಯವನ್ನು 20 ಬಡ ಬೇಸಾಯಗಾರರು ಹಂಚಿಕೊಂಡಾಗ್ಗೆ ಅದು ದೊಡ್ಡ 20 ಎಕರೆಯ ಭೂ ಮಾಲಿಕನ ಆದಾಯದಷ್ಟು ಆಗುವುದಿಲ್ಲವೆಂಬುದನ್ನು ಕಡೆಗಣಿಸಲಾಗುತ್ತದೆ. ಇದು ಸಹಕಾರಿ ಬೇಸಾಯ ಸಂಘಗಳಿಗೆ ಅನುತ್ತೇಜಕ ಧೋರಣೆಯೆಂದು ಹೇಳಬೇಕು. ನಿಜವೆಂದರೆ ನ್ಯಾಯವಾಗಿ ಸಹಕಾರಿ ಬೇಸಾಯ ಸಂಘದ ಒಟ್ಟು ಆದಾಯದ ಮೇಲೆ ಹಾಕದೆ, ಸದಸ್ಯರ ವೈಯಕ್ತಿಕ ಆದಾಯದ ಮೇಲೆ ಆದಾಯಕರ ಎತ್ತುವಳಿ ಹೇರ ಬೇಕೆಂದು ಸಹಕಾರಿ ಬೇಸಾಯದ ಕಾರ್ಯಸಮಿತಿಯು ಶಿಫಾರಸು ಮಾಡಿದೆ. ಸಹಕಾರಿ ಬೇಸಾಯಕ್ಕೆ ಪ್ರೋತ್ಸಾಹನ ಕೊಡುವ ಈ ಧೋರಣೆಯನ್ನು ಬರಗಾಲ ಪ್ರದೇಶದಲ್ಲಿ ಅಮಲಿನಲ್ಲಿ ತರಲಾಗಿದೆ, ಉಳಿದ ಕಡೆಗೂ ಜಾರಿಯಲ್ಲಿ ತರುವುದು ಅಗತ್ಯ.

ಇದಕ್ಕೆ ವಿಪರೀತವಾಗಿ ಬೇಸಾಯದ ಹಾಗೂ ಉದ್ಯೋಗದ ಉನ್ನತಿಗಾಗಿ ವೈಯಕ್ತಿಕವಾಗಿ ಬೇಸಾಯಗಾರರಿಗೆ ಕೊಡುವ ಸವಲತ್ತುಗಳನ್ನು ಸಹಕಾರಿ ಬೇಸಾಯ ಸಂಘಗಳಿಗೆ, ಅವು ವೈಯಕ್ತಿಕ ಬೇಸಾಯಗಾರ ಅಲ್ಲದ್ದರಿಂದ, ನಿರಾಕರಿಸಲಾಗುತ್ತದೆ. ಪ್ರಯತ್ನದಿಂದ ಇಂಥ ಸವಲತ್ತನ್ನು ಕೊಟ್ಟರೂ ಬೇಸಾಯ ಸಂಘವನ್ನು ಒಬ್ಬ ಬೇಸಾಯಗಾರನೆಂಬ ಎಣಿಕೆಯಿಂದ ಕಡಮೆ ಸವಲತ್ತನ್ನು ಕೊಡಲಾಗುತ್ತದೆ. ಉದಾಹರಣೆಗೆ ರೇಶ್ಮೆ ಕೈಗಾರಿಕೆಗಾಗಿ ಒಬ್ಬ ಬೇಸಾಯಗಾರನಿಗೆ ಒಂದು ಚಂದ್ರಿಕೆಯನ್ನು ಕೊಡುತ್ತಿದ್ದರೆ, 20 ಬೇಸಾಯಗಾರರ ಒಂದು ಬೇಸಾಯ ಸಂಘಕ್ಕೂ ಒಂದೇ ಚಂದ್ರಿಕೆಯನ್ನು ಕೊಟ್ಟರೆ 20 ಬೇಸಾಯಗಾರರಿಗೂ ಉದ್ಯೋಗ ಒದಗಿಸಲು ಅದು ಸಾಲಬಹುದೇ? ಈ ಧೋರಣೆಯು ಸಹಕಾರಿ ಬೇಸಾಯವನ್ನು ನಿರುತ್ಸಾಹಗೊಳಿಸುವುದಿಲ್ಲವೇ? ಇದಕ್ಕೆ ಬದಲಾಗಿ ಸಹಕಾರಿ ಬೇಸಾಯಕ್ಕೆ ಉತ್ತೇಜನ ಕೊಡುವ ರೀತಿಯಲ್ಲಿ 20 ಜನ ಬೇಸಾಯಗಾರರಿಗೂ ವೈಯಕ್ತಿಕವಾಗಿ ಕೊಡುವ ಒಟ್ಟು ಸವಲತ್ತಿಗಿಂತ ಹೆಚ್ಚಿನ ಸವಲತ್ತನ್ನು ಅವರ ಬೇಸಾಯ ಸಂಘಕ್ಕೆ ಒದಗಿಸಿ ಉತ್ತೇಜನ ಕೊಡಬೇಕು.

ಪ್ರಾತ್ಯಕ್ಷಿಕೆಗಾಗಿ ಮಾದರಿ ಬೇಸಾಯ ಸಂಘಗಳ ಮಹತ್ವ

ಸಾಮಾನ್ಯ ಬೇಸಾಯಗಾರರು ಪುಸ್ತಕಗಳಿಂದ, ವ್ಯಾಖ್ಯಾನಗಳಿಂದ ಹೆಚ್ಚು ಕಲಿಯಲಾರರು. ಅವರು ಸಹಕಾರಿ ಬೇಸಾಯದ ಪ್ರಯೋಜನದ ಬಗ್ಗೆ ಯಶಸ್ವಿ ಬೇಸಾಯ ಸಂಘಗಳ ಪ್ರಾತ್ಯಕ್ಷಿಕೆಗಳಿಂದ ಹೆಚ್ಚು ಕಲಿಯುತ್ತಾರೆ. ಆದ್ದರಿಂದ ಎಲ್ಲೆಡೆಗೂ ಪ್ರತಿ ಜಿಲ್ಲೆಯಲ್ಲೂ ಒಂದೆರಡು ಯಶಸ್ವಿ ಮಾದರಿ ಬೇಸಾಯ ಸಂಘಗಳನ್ನು ಸ್ಥಾಪಿಸಿ ನಡೆಸಬೇಕು. ಅನುಕೂಲವಾದ ಭೂಮಿ, ನೀರಾವರಿಯ ಸೌಲಭ್ಯ ಮುಂತಾದ ನೈಸರ್ಗಿಕ ಸ್ಥಿತಿಗಳಷ್ಟೇ ಅಲ್ಲ, ಬೇಸಾಯಗಾರರಲ್ಲಿ ಸಹಕಾರದ ಭಾವನೆ, ಆರ್ಥಿಕ ಸಮಾನತೆ ಮತ್ತು ಎಲ್ಲಕ್ಕೂ ಹೆಚ್ಚು ಧ್ಯೇಯನಿಷ್ಠ, ಪ್ರಾಮಾಣಿಕ, ದಕ್ಷ ಸ್ಥಳೀಕ ಮುಂದಾಳುತನ ಇಂಥ ಬೇಸಾಯ ಸಂಘಗಳಲ್ಲಿರಬೇಕು. ಸರಕಾರಿ ಭೂಮಿಯ ವಿಶಾಲವಾದ ಕ್ಷೇತ್ರಗಳು ಇದ್ದಲ್ಲಿ ಇಂಥ ಅನುಕೂಲತೆಗಳಿದ್ದರೆ ಅಂಥ ಬೇಸಾಯ ಸಂಘಗಳು ಹೆಚ್ಚು ಯಶಸ್ವಿಯಾಗುವ ಸಾಧ್ಯತೆ ಇದೆ. ಇಂಥ ಬೇಸಾಯ ಸಂಘಗಳನ್ನು ತಾತ್ವಿಕ ಕಟ್ಟುನಿಟ್ಟಾಗಿ ಸ್ಥಾಪಿಸಿ ನಡೆಸಬೇಕು. ಅವುಗಳಲ್ಲಿ ಸಮಾನ ಆರ್ಥಿಕ, ಸಾಮಾಜಿಕ ಸ್ಥಿತಿಯ ಭೂರಹಿತ ಬೇಸಾಯಗಾರರು ಅಥವಾ ಎಲ್ಲ ತಮ್ಮ ಭೂಮಿಯನ್ನು ಒಂದುಗೂಡಿಸುವ ಚಿಕ್ಕ ಬೇಸಾಯಗಾರರಿರಬೇಕು.

ಇಂಥ ಬೇಸಾಯ ಸಂಘಗಳಲ್ಲಿ ಸ್ಥಿರವಾಗಿ ನೆಲೆಸಿ ದುಡಿಯುತ್ತಿರುವ ಮತ್ತು ಮಾರ್ಗದರ್ಶನ ಮಾಡುತ್ತಿರುವ ಮುಂದಾಳುಗಳು ಸಹಕಾರಿ ಬೇಸಾಯದಲ್ಲಿ ತಾತ್ವಿಕ ನಿಷ್ಠೆಯುಳ್ಳ ವಿಧಾಯ ಕಾರ್ಯಕರ್ತರಾಗಿರಬೇಕು. ತಮ್ಮ ನಿಷ್ಠೆ, ದುಡಿತ, ತ್ಯಾಗ, ಜನಸಂಪರ್ಕ, ಅನುಭವಗಳಿಂದ ಅವರು ತಮ್ಮ ಬೇಸಾಯ ಸಂಘಗಳ ದೈನಂದಿನ ಸಮಸ್ಯೆಗಳನ್ನು ಪರಿಹರಿಸಲು ಸಮರ್ಥರಿರಬೇಕು. ಇಸ್ರೇಲ್ ಹಾಗೂ ಸಮಾಜವಾದಿ ದೇಶಗಳಲ್ಲಿ ಅಲ್ಲಿಯ ರಾಷ್ಟ್ರೀಯ ಸಂಸ್ಥೆಗಳ ಸಾವಿರಾರು ತರುಣ ಕಾರ್ಯಕರ್ತರು

ಇಂಥ ಧ್ಯೇಯನಿಷ್ಠೆಯಿಂದ ಬೇಸಾಯುಗಾರರ ಗುಡಿಸಲುಗಳಲ್ಲಿ ನೆಲೆಸಿ, ಅವರೊಡನೆ ಬೇಸಾಯ ಕೆಲಸಮಾಡಿ ಪ್ರಾತ್ಯಕ್ಷಿಕೆಯ ಮಾದರಿ ಬೇಸಾಯ ಸಂಘಗಳನ್ನು ಸ್ಥಾಪಿಸಿ ಯಶಸ್ವಿಯಾಗಿ ನಡೆಸಿ ಅವುಗಳ ಪ್ರಭಾವವನ್ನು ಪ್ರಚಾರದಿಂದ ರೈತರ ಮೇಲೆ ಬಿಂಬಿಸಿದರು. ಭಾರತದಲ್ಲಿ ವಿದ್ಯಾವಂತ ತರುಣರು ಆಶಾಭಗ್ನರಾಗಿ ರಾಜಕೀಯ ನಿರಾಶೆಯಿಂದ ಕೇವಲ ನಿಷೇಧಾತ್ಮಕ ಚಟುವಟಿಕೆಗಳಲ್ಲಿ ತೊಡಗಿರುವವರಿಗೆ, ಮಾದರಿ ಬೇಸಾಯ ಸಂಘಗಳ ಕಾರ್ಯವು ವಿಧಾಯಕ ಕಾರ್ಯದ ಆಹ್ವಾನವಾಗಿದೆ. ವಿಶೇಷ ವಾಗಿ ರಾಷ್ಟ್ರೀಯ ಸಂಸ್ಥೆಗಳ ಕಾರ್ಯಕರ್ತರು ಕೇವಲ ಚುನಾವಣೆ, ಆಂದೋಲನಗಳಿಗೆ ಮಹತ್ವ ಕೊಡದೆ ಈ ವಿಧಾಯಕ ಕಾರ್ಯಕ್ಕೆ ಪ್ರಾಧಾನ್ಯತೆ ಕೊಟ್ಟು ಪ್ರಾತ್ಯಕ್ಷಿಕೆಯ ಮಾದರಿ ಬೇಸಾಯ ಸಂಘಗಳನ್ನು ಯಶಸ್ವಿಗೊಳಿಸಬಲ್ಲರು.

ಬೇರೆಬೇರೆ ಅಭಿವೃದ್ಧಿ ಇಲಾಖೆಗಳ ಅಧಿಕಾರಿಗಳು ಈ ಮಹತ್ವದ ಪ್ರಯೋಗ ಗಳಲ್ಲಿ ತಮ್ಮ ಹಾರ್ದಿಕ ಸಹಕಾರ ನೀಡಿ ತಮ್ಮತಮ್ಮ ಯೋಜನೆಗಳ ಪ್ರಕಾರ ಸಾಧ್ಯವಿದ್ದ ಎಲ್ಲ ಸಹಾಯ ಮಾರ್ಗದರ್ಶನಗಳನ್ನು ಈ ಮಾದರಿ ಬೇಸಾಯ ಸಂಘಗಳಿಗೆ ಕೊಡಬೇಕು. ಈ ಮಾದರಿ ಸಂಸ್ಥೆಗಳು ತಮ್ಮ ಪ್ರಾತ್ಯಕ್ಷಿಕೆಯಿಂದ ಸಹಕಾರದ ಪ್ರಚಾರವನ್ನಷ್ಟೇ ಅಲ್ಲ ಸುಧಾರಿಸಿದ ವೈಜ್ಞಾನಿಕ ಬೇಸಾಯದ, ವೈಜ್ಞಾನಿಕ, ಸಹಾಯಕ ಉದ್ಯೋಗಗಳ ಪ್ರಚಾರವನ್ನೂ ಜನರಲ್ಲಿ ಮಾಡುತ್ತವೆ. ಹೀಗೆ ಅವು ವಿಭಿನ್ನ ಇಲಾಖೆಗಳ ಅಧಿಕಾರಿಗಳು ಮನಗಂಡು ಈ ಸಂಸ್ಥೆಗಳಿಗೆ ಎಲ್ಲ ನೆರವು ಕೊಟ್ಟು ತಮ್ಮ ಕಾರ್ಯದ ಪ್ರಾತ್ಯಕ್ಷಿಕೆ ಕೇಂದ್ರಗಳೆಂದೇ ಭಾವಿಸಿ ಅವನ್ನು ಯಶಸ್ವಿಗೊಳಿಸಲು ಹೆಣಗ ಬೇಕು. ಮೇಲಿಂದ ಮೇಲೆ ಅವರು ಈ ಸಂಸ್ಥೆಗಳಿಗೆ ಭೇಟಿ ಇತ್ತು ಅವಕ್ಕೆ ಯೋಜನೆ ಹಾಕಿಕೊಟ್ಟು, ಮಾರ್ಗದರ್ಶನ ಹಾಗೂ ಸಹಾಯ ಮಾಡಬೇಕು. ಈಗಿದ್ದ ಸಂಸ್ಥೆಗಳಲ್ಲಿ ಅಂಥ ಅನುಕೂಲತೆಗಳಿದ್ದರೆ ಅವಕ್ಕೆ ಪ್ರೋತ್ಸಾಹನ ಕೊಟ್ಟು ಸುಧಾರಿಸಬೇಕು. ಇಂಥ ಮಾದರಿ ಬೇಸಾಯ ಸಂಘಗಳ ಯಶಸ್ಸಿನ ಕತೆಗಳನ್ನು ರೋಚಕವಾದ ಜನ ಸಾಹಿತ್ಯದಿಂದ, ಪ್ರಚಾರದಿಂದ ಹಾಗೂ ಕ್ಷೇತ್ರೋತ್ಸವಗಳಿಂದ ಜನರಲ್ಲಿ ಹರಡಬೇಕು. ಈ ಸಂಸ್ಥೆಗಳಿಗೆ ಆಯಾ ಯೋಜನೆಗಳ ಪ್ರಕಾರ ದೊರಕುವ ನೀರಾವರಿಯ ಸೌಲಭ್ಯ, ಆರ್ಥಿಕ ಸಹಾಯ ಎಲ್ಲವೂ ಆದ್ಯತೆಯಿಂದ ದೊರಕಬೇಕು.

ಬೇಸಾಯ ಸಂಘಗಳ ರಾಜ್ಯ ಫೆಡರೇಶನ್ನಿಗೆ ಮತ್ತು ಜಿಲ್ಲಾ ಫೆಡರೇಶನ್ನುಗಳಿಗೆ ಸರಕಾರವು ಒಳ್ಳೇ ಭೂಮಿಯನ್ನೂ, ಆರ್ಥಿಕ ಸಹಾಯವನ್ನು ಕೊಟ್ಟು ಈ ಫೆಡರೇಶನ್ನು ಗಳ ಧ್ಯೇಯನಿಷ್ಠ ಕಾರ್ಯಕರ್ತರಿಗೆ ಮಾದರಿ ಸಂಸ್ಥೆಗಳನ್ನು ಸ್ಥಾಪಿಸಿ ನಡೆಸಬಹುದು. ಸಹಕಾರಿ ಬೇಸಾಯದ ತರಬೇತು ಕೇಂದ್ರಗಳು ತಮ್ಮ ಹತ್ತಿರದ ಒಂದೆರಡು ಒಳ್ಳೇ ಬೇಸಾಯ ಸಂಘಗಳನ್ನು ಆರಿಸಿಕೊಂಡು ತಮ್ಮ ವಿಶೇಷ ಮಾರ್ಗದರ್ಶನದಿಂದ ಅವನ್ನು ಮಾದರಿ ಬೇಸಾಯ ಸಂಘಗಳನ್ನಾಗಿ ಮಾಡಬಹುದು. ಇಂಥ ತರಬೇತು ಕೇಂದ್ರದ ತಜ್ಞ ಅಧ್ಯಾಪಕರು ಮೇಲಿಂದ ಮೇಲೆ ಈ ಸಂಘಗಳಿಗೆ ಭೇಟಿಕೊಟ್ಟು ಯೋಜನೆ, ಮಾರ್ಗದರ್ಶನ ಕೊಡಬಹುದು. ತರಬೇತು ಕೇಂದ್ರದ ವಿದ್ಯಾರ್ಥಿಗಳು ಕ್ರಿಯಾತ್ಮಕ

ವಾಗಿ ಜನಸಂಪರ್ಕ ಹಾಗೂ ದುಡಿತದ ಗೌರವ ಕಲಿಯಲು ಕೆಲವು ಸಮಯವಾದರೂ, ಒಟ್ಟಾಗಿ ಬೇಸಾಯ ಸಂಘಗಳ ಸದಸ್ಯರಲ್ಲಿ ಬೆರೆತು ಸದಸ್ಯರೊಡನೆ ಬೇಸಾಯದ ಕೆಲಸಗಳನ್ನು ಮಾಡುತ್ತ ಸಂಘಗಳ ಅಭಿವೃದ್ಧಿಯಲ್ಲಿ ಅವರು ನೆರವಾಗಬಹುದು. ಈ ರೀತಿಯಾಗಿ ಈ ಬೇಸಾಯ ಸಂಘಗಳು ಸಹಕಾರಿ ಬೇಸಾಯದ ಕ್ರಿಯಾತ್ಮಕ ತರಬೇತಿನ ಕೇಂದ್ರಗಳೂ ಆಗಬಲ್ಲವು.

ಅಧ್ಯಾಯ 5

ಸ್ವಾತಂತ್ರ್ಯಪೂರ್ವದ ಭಾರತದಲ್ಲಿನ ಸಹಕಾರಿ ಬೇಸಾಯದ ಧೋರಣೆಗಳು

ಸಹಕಾರಿ ಆಂದೋಲನವು ಪ್ರಗತಿ ಸಾಧಿಸಿದಂತೆ ಬೇಸಾಯದ ಕೆಲಸಗಳಲ್ಲಿ ಹೆಚ್ಚೆಚ್ಚು ಸಹಕಾರವನ್ನು ಸಾಧಿಸಿ, ಬೇಸಾಯವನ್ನು ಸುಧಾರಿಸಿ, ಉತ್ಪತ್ತಿಯನ್ನು ಹೆಚ್ಚಿಸಬೇಕೆಂಬ ವಿಚಾರವನ್ನು ಮೊಟ್ಟಮೊದಲು ಕ್ರಿ.ಶ. 1944ರಲ್ಲಿ ಭಾರತೀಯ ಕೃಷಿ ಅನುಸಂಧಾನ ಸಮಿತಿಯು ಚೆನ್ನಾಗಿ ಪರಿಶೀಲಿಸಿತು. ಅದೇ ವರ್ಷ ಸಿದ್ಧವಾದ ಆರ್ಥಿಕ ಅಭಿವೃದ್ಧಿಯ ಮುಂಬಯಿ ಯೋಜನೆಯಲ್ಲಿ ಸಹ. ಸಹಕಾರಿ ಬೇಸಾಯಕ್ಕೆ ಸಾಕಷ್ಟು ಪುಷ್ಟಿ ದೊರಕಿತು. ತುಂಡು ತುಂಡು ಹಿಡುವಳಿಗಳನ್ನು ರೈತರ ಹಿಡಿತಕ್ಕೆ ಧಕ್ಕೆ ಹಚ್ಚದೆಯೇ, ಒಂದುಗೂಡಿಸುವುದರಿಂದ ಮಾತ್ರ ಬೇಸಾಯವನ್ನು ಹೆಚ್ಚು ಸುಧಾರಿಸುವುದು ಸಾಧ್ಯವೆಂದು ಅದರ ಅಭಿಪ್ರಾಯವಾಗಿತ್ತು.

1945ರಲ್ಲಿ ಸಹಕಾರಿ ಯೋಜನೆಯ ಸಮಿತಿಯು ಬೇಸಾಯದ ಉತ್ಪತ್ತಿಯನ್ನು ಹೆಚ್ಚಿಸಲು, ದೊಡ್ಡ ಪ್ರಮಾಣದ ಬೇಸಾಯವನ್ನು ಕೈಕೊಳ್ಳುವುದು ಅಗತ್ಯವೆಂದು ಅಭಿಪ್ರಾಯಪಟ್ಟಿತು. ಸಹಕಾರಿ ಬೇಸಾಯವು ಎಲ್ಲಕ್ಕೂ ಪರಿಣಾಮಕಾರಿಯಾದ ದೊಡ್ಡ ಪ್ರಮಾಣದ ಬೇಸಾಯ. ಏಕೆಂದರೆ ಅದರಿಂದ ಭೂಮಿಯ ಹೆಚ್ಚಿನ ಉಪಯೋಗವಾಗುವುದಲ್ಲದೆ, ಸುಧಾರಿಸಿದ ಬೇಸಾಯದ ಪದ್ಧತಿಗಳನ್ನು ಯಶಸ್ವಿಯಾಗಿ ಕೈಕೊಳ್ಳಲು ಸಾಧ್ಯವಾಗುತ್ತದೆ. ಪ್ರತಿಯೊಂದು ರಾಜ್ಯದಲ್ಲೂ ಸಹಕಾರಿ ಬೇಸಾಯದ ಪ್ರಯೋಗಗಳನ್ನು ಕೈಕೊಳ್ಳಲು ಸಮಿತಿಯು ಶಿಫಾರಸು ಮಾಡಿತು.

1946ರಲ್ಲಿ ಪ್ಯಾಲಸ್ಟೈನಕ್ಕೆ ಹೋಗಿಬಂದ ಅಧ್ಯಯನ ತಂಡವು ರೈತರು ಸಾಮೂಹಿಕ ಭಾವನೆಯಿಂದ ಸಹಕಾರಿ ಬೇಸಾಯವನ್ನಷ್ಟೇ ಅಲ್ಲ, ಸಾಮೂಹಿಕವಾಗಿ ಬೇರೆ ಉದ್ಯೋಗ, ಕೃಷಿ ಉತ್ಪಾದನೆಗಳ ರೂಪಾಂತರ, ಮಾರಾಟ ಮುಂತಾದ ಚಟುವಟಿಕೆಗಳನ್ನು ಕೈಕೊಳ್ಳಲು ಮುಂದೆ ಬಂದಲ್ಲಿ ಅಂಥ ಸಹಕಾರ ಸಂಘಗಳನ್ನು ಹಬ್ಬಿಸಲು ಪ್ರೋತ್ಸಾಹಿಸಬೇಕೆಂದು ಶಿಫಾರಸು ಮಾಡಿತು.

ಆದರೂ ಸ್ವರಾಜ್ಯ ಪ್ರಾಪ್ತಿಯ ಪೂರ್ವದಲ್ಲಿ ಸಹಕಾರಿ ಬೇಸಾಯದ ಬಗ್ಗೆ ಅಷ್ಟೊಂದು ಹೆಚ್ಚು ಮಹತ್ವ ಕೊಟ್ಟಿರಲಿಲ್ಲ. ಸ್ವಾತಂತ್ರ್ಯ ಬಂದ ಬಳಿಕ ಭಾರತವು ಕೃಷಿಪ್ರಧಾನ ದೇಶವಾಗಿರುವುದರಿಂದ ಕೃಷಿಯ ಉನ್ನತಿಗಾಗಿ ಯೋಜನೆಗಳನ್ನು ರಚಿಸುವಾಗ ಸಹಕಾರಿ ಬೇಸಾಯದ ಮಹತ್ವವನ್ನು ತಜ್ಞರು ಕಂಡರು.

ಕಾಂಗ್ರೆಸ್ಸಿನ ಗ್ರಾಮಾಂತರ ಸುಧಾರಣೆಗಳ ಸಮಿತಿ 1948

ಬೇಸಾಯದ ಅಭಿವೃದ್ಧಿಯ ಬಗ್ಗೆ ಕೂಲಂಕಷವಾಗಿ ವಿಚಾರಣೆ ನಡೆಸಲು 1948ರಲ್ಲಿ ಅಂದಿನ ಕಾಂಗ್ರೆಸ್ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರು 'ಕಾಂಗ್ರೆಸ್ ಗ್ರಾಮಾಂತರ ಸುಧಾರಣೆಗಳ ಸಮಿತಿ'ಯನ್ನು ನೇಮಿಸಿದರು. ದೇಶದಲ್ಲಿ ಹೊಸದಾಗಿ ಎಲ್ಲ ರಾಜ್ಯಗಳಲ್ಲಿ ಸ್ಥಾಪಿಸಲ್ಪಟ್ಟ ಕಾಂಗ್ರೆಸ್ ಸರಕಾರಗಳು ಈ ಸಮಿತಿಯ ಶಿಫಾರಸುಗಳ ಪ್ರಕಾರ ತಮ್ಮ ಕಾರ್ಯಕ್ರಮಗಳನ್ನು ಹಾಕಿಕೊಂಡವು. ಸಮಿತಿಯ ಇಂಥ ಒಂದು ಮಹತ್ವದ ಶಿಫಾರಸಿನಲ್ಲಿ 'ಮೂಲಹಿಡುವಳಿ' (ಬೇಸಿಕ್ ಹೋಲ್ಡಿಂಗ್)ಗಿಂತ ದೊಡ್ಡದಾದ ಹಿಡುವಳಿಗಳಲ್ಲಿ ವೈಯಕ್ತಿಕ ಸ್ವತಂತ್ರ ರೈತನ ಬೇಸಾಯವನ್ನು ಪ್ರೋತ್ಸಾಹಿಸಬಹುದಾದರೂ ಮೂಲ ಹಿಡುವಳಿಗಿಂತ ಚಿಕ್ಕ ಹಿಡುವಳಿಗಳಲ್ಲಿ ಮಾತ್ರ ಕಡ್ಡಾಯವಾಗಿ ಸಹಕಾರಿ ಬೇಸಾಯವನ್ನು ಕಾರ್ಯಗತ ಮಾಡಬೇಕೆಂದು ಸೂಚಿಸಲಾಗಿತ್ತು. ಮೂಲ ಹಿಡುವಳಿ ಎಂದರೆ 'ಆರ್ಥಿಕ ಹಿಡುವಳಿ'. (ಎಕನಾಮಿಕಲ್ ಹೋಲ್ಡಿಂಗ್)ಗಿಂತ ಚಿಕ್ಕ ಹಿಡುವಳಿ. ಆರ್ಥಿಕ ಹಿಡುವಳಿಯು ನಿಖರವಾಗಿ ರೈತನಿಗೆ ಜೀವನಾಧಾರವನ್ನು ಒದಗಿಸಿ ಕೊಡುವಂಥದು. ಸಾಧಾರಣ ಜನಸಂಖ್ಯೆಯ ಒಂದು ಕುಟುಂಬಕ್ಕೆ ಹಾಗೂ ಕನಿಷ್ಠ ಒಂದು ಜೊತೆ ಒಳ್ಳೆ ಎತ್ತುಗಳಿಗೆ ಅದರಿಂದ ಪೂರ್ಣಕೆಲಸ ದೊರಕುವಂಥದೂ ಆಗಿರಬೇಕಾಗುತ್ತದೆ.

ಈ ಸಮಿತಿಯ ಕೆಲವು ಮಹತ್ವದ ಶಿಫಾರಸುಗಳು :

(1) ಮೂಲ ಹಿಡುವಳಿಗಿಂತ ಚಿಕ್ಕ ಹಿಡುವಳಿಗಳುಳ್ಳ ಚಿಕ್ಕ ಬೇಸಾಯಗಾರರು ನಿರ್ದಿಷ್ಟ ಸಂಖ್ಯೆಯಲ್ಲಿ ಒಂದುಗೂಡಿದಲ್ಲಿ ಹಾಗೂ ಅವರು ಒಂದುಗೂಡಿಸಿದ ಭೂಮಿಯು 'ಆರ್ಥಿಕವಾಗಿ ಪರ್ಯಾಪ್ತ ಹಿಡುವಳಿ' ಆಗುವಂತಿದ್ದಲ್ಲಿ ಸಹಕಾರಿ ಸಂಯುಕ್ತ ಬೇಸಾಯ ಸಂಘಗಳನ್ನು ಸ್ಥಾಪಿಸಬೇಕು. ಪ್ರಾರಂಭದಲ್ಲಿ ಇಂಥ ಚಿಕ್ಕ ಬೇಸಾಯ ಸಂಘಗಳಲ್ಲಿ ಸ್ವಸಂತೋಷದಿಂದ ಸೇರಲು ಅನಾರ್ಥಿಕ ಹಿಡುವಳಿದಾರರಿಗೆ ಮನವೊಲಿಸಬೇಕು. 2ರಿಂದ 5 ವರ್ಷಗಳವರೆಗೆ ಸ್ವಸಂತೋಷದ ಧೋರಣೆ ಪ್ರಯೋಗವನ್ನು ನಡೆಸಿ, ಅದು ವಿಫಲವಾದಲ್ಲಿ ಕಡ್ಡಾಯವನ್ನು ಸಹ ಹೆಚ್ಚೆಚ್ಚು ಪ್ರಯೋಗಿಸಬೇಕು.

(2) ಸಾಮಾನ್ಯವಾಗಿ ಆರ್ಥಿಕ ಹಿಡುವಳಿಯ ಮೂರರಷ್ಟು ವಿಸ್ತಾರವಾಗುವವರೆಗೆ ಚಿಕ್ಕ ಬೇಸಾಯಗಾರರನ್ನು ಒಂದೇ ಸಂಯುಕ್ತ ಬೇಸಾಯ ಸಂಘದಲ್ಲಿ ಸಂಘಟಿಸಬೇಕು. ಇಂಥ ಬೇಸಾಯ ಸಂಘದ ಭೂಮಿಯು ವಿಸ್ತಾರ 30ರಿಂದ 50 ಎಕರೆಯಾಗಬಹುದು.

(3) ಜೊತೆಯಲ್ಲಿ 400ರಿಂದ 500 ಎಕರೆವರೆಗಿನ ವಿಸ್ತಾರವಾದ ಸಂಯುಕ್ತ ಬೇಸಾಯ ಸಂಘಗಳ ಪ್ರಯೋಗಗಳನ್ನು ನಡೆಸಬೇಕು.

(4) ಭೂಹಿಡುವಳಿ ಕಾಯಿದೆಯ ಅನುಷ್ಠಾನದಿಂದ ಪರಮಾವಧಿ ಹಿಡುವಳಿ ಮಿತಿಗಿಂತ ಹೆಚ್ಚಿನ ಭೂಮಿಯು ದೊಡ್ಡ ಕ್ಷೇತ್ರದಲ್ಲಿ ದೊರಕಿದಲ್ಲಿ ಅದನ್ನು ಸಂಯುಕ್ತ ಬೇಸಾಯ ಸಂಘವನ್ನು ಸಂಘಟಿಸಲು ಉಪಯೋಗಿಸಬೇಕು.

(5) ಈ ಚಿಕ್ಕ ಸಹಕಾರಿ ಬೇಸಾಯ ಸಂಘಗಳಿಗೆ ಉತ್ತಮ ಬೀಜ, ಗೊಬ್ಬರ, ನೇಗಿಲು, ಸಾಮಾನು, ಹಣಕಾಸು ಮುಂತಾದುವುಗಳನ್ನು ಆದ್ಯತೆಕೊಟ್ಟು ಸುಲಭವಾಗಿ ಒದಗಿಸಿ ಸರಕಾರವು ಸಹಾಯ ಮಾಡಬೇಕು.

(6) ಅದರಂತೆ ತಮ್ಮ ಹಿಡುವಳಿಗಳನ್ನೆಲ್ಲ ಶಾಸ್ತ್ರೀಯವಾಗಿ ಕ್ರೋಢೀಕರಿಸಲು ಈ ಬೇಸಾಯ ಸಂಘಗಳಿಗೆ ಸರಕಾರವು ನೆರವಾಗಬೇಕು.

(7) ಪ್ರತಿಯೊಂದು ಗ್ರಾಮದಲ್ಲಿ ಒಂದು ವಿವಿಧೋದ್ದೇಶಗಳ ಸಹಕಾರಿ ಸಂಘ ವಿರತಕ್ಕದ್ದು. ಅದರಲ್ಲಿ ಗ್ರಾಮದ ವೈಯಕ್ತಿಕ ಬೇಸಾಯಗಾರರೂ, ಸಹಕಾರಿ ಬೇಸಾಯ ಗಾರರೂ ಸದಸ್ಯರಾಗಿರತಕ್ಕದ್ದು. ಹೀಗೆ ಇವೆರಡೂ ಸಹಕಾರಿ ಸಂಘಗಳು ಸಹಕರಿಸಿ ಏಕಕಾಲಕ್ಕೆ ಕಾರ್ಯಮಾಡುವುದರಿಂದ ಗ್ರಾಮದ ವಿವಿಧ ಬೇಸಾಯಗಾರರ ಗುಂಪು ಗಳಲ್ಲಿ ಮತ್ತು ಬೇರೆ ವರ್ಗಗಳಲ್ಲಿ ಹೆಚ್ಚಿನ ಪರಸ್ಪರ ತಿಳಿವಳಿಕೆ, ಸೌಹಾರ್ದಗಳು ಬೆಳೆಯುವುವು.

ಪಂಚವಾರ್ಷಿಕ ಯೋಜನೆಗಳು ಪ್ರಾರಂಭವಾಗುವ ಮೊದಲು ಈ ಶಿಫಾರಸು ಗಳನ್ನು ಕಾರ್ಯರೂಪಕ್ಕಿಳಿಸಲು ವಿಶೇಷ ಪ್ರಯತ್ನವೇನೂ ನಡೆಯಲಿಲ್ಲ. ರಾಷ್ಟ್ರೀಯ ಮುಂದಾಳುಗಳಲ್ಲಿ, ಕಾರ್ಯಕರ್ತರಲ್ಲಿ ಹಾಗೂ ಅಧಿಕಾರಿಗಳಲ್ಲಿ ಈ ಕಾರ್ಯಕ್ರಮದ ಬಗ್ಗೆ ತಿಳಿವಳಿಕೆ, ವಿಶ್ವಾಸಗಳನ್ನು ಬೆಳೆಸುವ ಮಹತ್ವದ ಕಾರ್ಯವೂ ನಡೆಯಲಿಲ್ಲ.

ಪ್ರಥಮ ಪಂಚವಾರ್ಷಿಕ ಯೋಜನೆ

ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಸರಕಾರವು ಸಹಕಾರಿ ಬೇಸಾಯವನ್ನು ದೇಶದಲ್ಲಿ ಹಬ್ಬಿಸುವ ಧೋರಣೆಯನ್ನು ಅಂಗೀಕರಿಸಿತು. ಅಂದಿನಿಂದ ಸಹಕಾರಿ ಬೇಸಾಯಕ್ಕೆ ಸರಕಾರದಿಂದ ಪ್ರೋತ್ಸಾಹ ದೊರಕುತ್ತ ಬಂದಿದೆ. ಜನತಂತ್ರದಲ್ಲಿ ಸಹಕಾರಿ ಬೇಸಾಯ ಸಂಘಗಳು ಯೋಜನಾಬದ್ಧ ಆರ್ಥಿಕ ಕಾರ್ಯಕ್ರಮದ ಅನಿವಾರ್ಯ ಅಸ್ತ್ರಗಳು. ದೇಶದ ಅನೇಕ ಭಾಗಗಳಲ್ಲಿ ಲಾಭದಾಯಕ ಬೇಸಾಯವನ್ನು ಪ್ರೋತ್ಸಾಹಿ ಸಲು, ಸಾಗುವಳಿಯ ಹಿಡುವಳಿಗಳನ್ನು ವಿಸ್ತರಿಸಲು ಅನುರೋಧಿಸಲಾಯಿತು. ಸಹಕಾರಿ ಬೇಸಾಯದಲ್ಲಿ ಬೇಸಾಯಗಾರನ ಒಡೆತನದ ಮೋಹಕ್ಕೆ ಧಕ್ಕೆಹಚ್ಚದೆ ಹಾಗೂ ಅವನ ವೈಯಕ್ತಿಕ ಉತ್ತೇಜನವನ್ನೂ ಕಾಯ್ದಿಟ್ಟು ವಿಸ್ತೃತ ಬೇಸಾಯದ ಲಾಭಗಳನ್ನು ಪಡೆಯ ಬಹುದೆಂದು ಮನಗಾಣಲಾಯಿತು. ಚಿಕ್ಕ ಹಾಗೂ ಮಧ್ಯಮ ಬೇಸಾಯಗಾರರನ್ನು ಸ್ವಯಂಸ್ಫೂರ್ತಿಯಿಂದ ಸಹಕಾರಿ ಬೇಸಾಯ ಸಂಘಗಳನ್ನು ಸ್ಥಾಪಿಸಲು, ಪ್ರೋತ್ಸಾಹಿ ಸಲು ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಕೆಳಗಿನ ಮಹತ್ವದ ಸಲಹೆಗಳನ್ನು ಮಾಡಲಾಯಿತು:

(1) ಯಾವುದೊಂದು ಪ್ರದೇಶದಲ್ಲಿ ಅಲ್ಲಿಯ ಕನಿಷ್ಠ ಅರ್ಧದಷ್ಟು ಭೂಮಿಯ ಕ್ಷೇತ್ರದ ಬಹುಸಂಖ್ಯಾತ ಒಡೆಯರು ಒಂದು ಸಹಕಾರಿ ಬೇಸಾಯ ಸಂಘವನ್ನು ಸ್ಥಾಪಿಸ ಬಯಸಿದರೆ, ಅದನ್ನು ಸ್ಥಾಪಿಸಲು ಎಲ್ಲ ಅನುಕೂಲತೆಗಳನ್ನು ಒದಗಿಸಬೇಕು.

(2) ಸಹಕಾರಿ ಬೇಸಾಯ ಸಂಘದ ಭೂಮಿಯ ವಿಸ್ತಾರದ ಕನಿಷ್ಠ ಮಿತಿಯನ್ನು ನಿರ್ಧರಿಸುವುದು ಉಚಿತ; ಆದರೆ ಪರಮಾವಧಿ ಮಿತಿಯನ್ನು ಗೊತ್ತುಪಡಿಸುವುದು ಅಗತ್ಯವಿಲ್ಲ.

(3) ಭೂಮಿಯ ಕ್ರೋಢೀಕರಣದ ಕಾರ್ಯವು ಪ್ರಾರಂಭವಾದಾಗ ಸಹಕಾರಿ ಬೇಸಾಯ ಸಂಘಗಳಿದ್ದ ಗ್ರಾಮಗಳಿಗೆ ಪ್ರಾಧಾನ್ಯತೆ ಕೊಟ್ಟು ಅಲ್ಲಿ ಆ ಕಾರ್ಯವನ್ನು ಮಾಡಬೇಕು.

(4) ಸಹಕಾರಿ ಬೇಸಾಯ ಸಂಘಗಳಿಗೆ ಆದ್ಯತೆ ಕೊಟ್ಟು ಅವಕ್ಕೆ ಸರಕಾರಿ ಸಾಗುವಳಿಯ ಪಡಭೂಮಿಗಳನ್ನು ಮಂಜೂರು ಮಾಡಬೇಕು, ಆರ್ಥಿಕ ಸಹಾಯವನ್ನು, ತಾಂತ್ರಿಕ ಮಾರ್ಗದರ್ಶನವನ್ನು ಹಾಗೂ ಮಾರಾಟದ ಸವಲತ್ತುಗಳನ್ನು ಒದಗಿಸಬೇಕು.

(5) ಸಹಕಾರಿ ಬೇಸಾಯ ಸಂಘಗಳ ಸದಸ್ಯರು ಸ್ವಂತ ಸಾಗುವಳಿ ನಡೆಸದಿದ್ದರೂ ಈ ಬಗ್ಗೆ ಇರುವ ಭೂಸಾಗುವಳಿ ಕಾಯಿದೆಯ ನಿರ್ಬಂಧಗಳಿಂದ ಅವರಿಗೆ ವಿನಾಯಿತಿ ಕೊಡಬೇಕು.

ದ್ವಿತೀಯ ಪಂಚವಾರ್ಷಿಕ ಯೋಜನೆ

ದ್ವಿತೀಯ ಪಂಚವಾರ್ಷಿಕ ಯೋಜನೆಯ ಪ್ರಾರಂಭದಲ್ಲಿ ದೇಶದಲ್ಲಿ ಸುಮಾರು ಒಂದು ಸಾವಿರ ಬೇಸಾಯ ಸಂಘಗಳು ಅಸ್ತಿತ್ವದಲ್ಲಿದ್ದವು. ಈ ಯೋಜನೆಯಲ್ಲಿ ಸಾಮಾನ್ಯವಾಗಿ ಭಾರತದ ರಿಸರ್ವ್ ಬ್ಯಾಂಕಿನ ಗ್ರಾಮಾಂತರ ಪತ್ತಿನ ಸಮೀಕ್ಷೆಯ ಸಮಿತಿಯ ಶಿಫಾರಸುಗಳಿಗನುಸರಿಸಿ ಸಹಕಾರಿ ಅಭಿವೃದ್ಧಿಗಳ ಕಾರ್ಯಕ್ರಮಗಳನ್ನು ಕೈಕೊಳ್ಳಲಾಯಿತು. ಇದರಲ್ಲಿ ಸಹಕಾರಿ ಬೇಸಾಯದ ಕಾರ್ಯಕ್ರಮವನ್ನು ವಿವರವಾಗಿ ರೂಪಿಸಿರಲಿಲ್ಲ. ಭದ್ರವಾದ ಸಹಕಾರಿ ಅರ್ಥವ್ಯವಸ್ಥೆಯನ್ನು ಗ್ರಾಮಾಂತರದಲ್ಲಿ ಬೆಳಸಿ ಸಹಕಾರಿ ಬೇಸಾಯದ ಬೆಳವಣಿಗೆಗೆ ಅನುಕೂಲ ಪರಿಸ್ಥಿತಿಗಳನ್ನು ಬೆಳೆಸಬೇಕೆಂದು ಮಾತ್ರ ಅದರಲ್ಲಿ ಹೇಳಲಾಗಿತ್ತು. 10 ವರ್ಷಗಳಲ್ಲಿ ಸಾಕಷ್ಟು ಕೃಷಿ ಹಿಡುವಳಿಗಳನ್ನು ಸಹಕಾರಿ ಬೇಸಾಯದ ಆಳವಿನಲ್ಲಿ ತರುವ ಗುರಿಯನ್ನು ಮಾತ್ರ ಇಟ್ಟುಕೊಳ್ಳಲಾಗಿತ್ತು. ಕೃಷಿಉತ್ಪತ್ತಿಯ ಗುರಿಯೊಂದಿಗೆ ಹಾಗೂ ರಾಷ್ಟ್ರೀಯ ವಿಸ್ತರಣೆಯ ಹಾಗೂ ಸಾಮೂಹಿಕ ಅಭಿವೃದ್ಧಿಯ ಕಾರ್ಯಕ್ರಮಗಳ ಗುರಿಯೊಂದಿಗೆ ಸಹಕಾರಿ ಬೇಸಾಯದ ಗುರಿಯನ್ನು ಹೊಂದಿಸಬೇಕೆಂದು ಯೋಜನೆಯಲ್ಲಿ ವಿಧಿಸಲಾಗಿತ್ತು. ಸಹಕಾರಿ ಬೇಸಾಯವನ್ನು ಪ್ರೋತ್ಸಾಹಿಸಲು ಕೆಲವು ವಿಶಿಷ್ಟ ಪ್ರದೇಶಗಳನ್ನು ಸಹ ಯೋಜನಾ ಆಯೋಗವು ಸೂಚಿಸಿತು. ದ್ವಿತೀಯ ಪಂಚವಾರ್ಷಿಕ ಯೋಜನೆಯ ಕೆಲವು ಮಹತ್ವದ ಶಿಫಾರಸುಗಳನ್ನು ಈ ಮುಂದೆ ವಿವರಿಸಲಾಗಿದೆ :

(1) ಭೂಮಿಯ ಕ್ರೋಢೀಕರಣವಾದಲ್ಲಿ ಸಹಕಾರಿ ಬೇಸಾಯ ಸಂಘಗಳನ್ನು ಸ್ಥಾಪಿಸಬಯಸುವ ಬೇಸಾಯಗಾರರ ಹಿಡುವಳಿಗಳು ಒಂದೇ ವಿಶಾಲವಾದ ಖಂಡ

ವಾಗುವಂತೆ ವ್ಯವಸ್ಥೆ ಮಾಡಬೇಕು. ತೀರ ಚಿಕ್ಕ ಬೇಸಾಯಗಾರರ ಹಿಡುವಳಿಗಳನ್ನು ಬೇಸಾಯ ಸಂಘಗಳಿಗೆ ಹೊಂದಿಸಬೇಕು. ಅಂದರೆ ಮುಂದಾದರೂ ಅವರು ಸಹಕಾರಿ ಬೇಸಾಯದ ಪ್ರಯೋಜನಗಳನ್ನು ಕಣ್ಣಾರೆಕಂಡು ಬೇಸಾಯ ಸಂಘಗಳಲ್ಲಿ ಸೇರಲು ಅನುಕೂಲವಾಗಬೇಕು.

(2) ಮೂಲ ಹಿಡುವಳಿಗಿಂತ ಚಿಕ್ಕದಾದ ಹೊಲಗಳು ಗ್ರಾಮಾಂತರ ಪುನಃಸಂಘಟನೆಯ ಯಾವುದೇ ಯೋಜನೆಯ ಯಶಸ್ಸಿಗೆ ಬಾಧಕವಾಗುತ್ತವೆ. ಕೃಷಿ ಕಾರ್ಮಿಕರ ಪರಿಶೀಲನೆಯ ಸಮಿತಿಯ ವರದಿಯ ಪ್ರಕಾರ ಶೇಕಡಾ 148 ಬೇಸಾಯಗಾರರು 5 ಎಕರೆಗಿಂತ ಕಡಮೆ ಹಿಡುವಳಿಯುಳ್ಳವರಿದ್ದರು. ಸಹಕಾರಿ ಬೇಸಾಯದಿಂದ ಇವರಿಗೆ ವಿಸ್ತೃತ ಬೇಸಾಯದ ಪ್ರಯೋಜನಗಳು ದೊರಕಬಲ್ಲವು. ಆದ್ದರಿಂದ ಇವರ ಸಹಕಾರಿ ಬೇಸಾಯ ಸಂಘಗಳನ್ನು ಸಂಘಟಿಸಬೇಕು. ಅದರಂತೆ ಪರಮಾವಧಿ ಹಿಡುವಳಿಯ ಮಿತಿಯನ್ನು ಹೇರಿದ ಬಳಿಕ ಉಳಿಯುವ ಹೆಚ್ಚುವರಿ ಭೂಮಿಯ ಹಿಡುವಳಿಗಳನ್ನು ಸಹ ಸರಿಯಾಗಿ ಕ್ರೋಢೀಕರಿಸಿ ಅವುಗಳ ಸಹಕಾರಿ ಬೇಸಾಯ ಸಂಘಗಳನ್ನು ಸಂಘಟಿಸಬೇಕು.

(3) ಸ್ವಸಂತೋಷದಿಂದ ಬೇಸಾಯಗಾರರು ಬೇಸಾಯ ಸಂಘಗಳನ್ನು ಸಂಘಟಿಸಿದಲ್ಲಿ ಅಂಥ ಬೇಸಾಯ ಸಂಘಗಳಿಗೆ ಸರಕಾರವು ವಿಶೇಷ ಸಹಾಯವನ್ನು ಒದಗಿಸಬೇಕು. ಆದರೆ ಈಗ ಅನೇಕ ಕಡೆಗೆ ಆಗಿರುವಂತೆ ನಾಯಿಯು ಕೊಡೆಯಂತೆ ಸರಕಾರಿ ಸಹಾಯಕ್ಕಾಗಿ ಬೆಳೆಯುವ ಅತಾತ್ವಿಕ ಬೇಸಾಯ ಸಂಘಗಳಿಗೆ ಈ ಸಹಾಯವು ಒದಗದಂತೆ ಜಾಗರೂಕತೆ ವಹಿಸಬೇಕು.

(4) ಸಾಧ್ಯವಿದ್ದಷ್ಟು ಈಗಿರುವ ಬೇಸಾಯ ಸಂಘಗಳನ್ನು ಸರಿಯಾದ ತಾತ್ವಿಕ ತಳಹದಿಯ ಮೇಲೆ ಪುನಃಸಂಘಟಿಸಬೇಕು. ಅವುಗಳಿಂದ ಸ್ಫೂರ್ತಿ, ಮಾರ್ಗದರ್ಶನ ಪಡೆದು ಹೊಸ ನೈಜ ಬೇಸಾಯ ಸಂಘಗಳಾಗಬಹುದು.

(5) ಹಿಂದುಳಿದ ಜಾತಿಗಳ ಕೆಲವು ಪ್ರದೇಶಗಳಲ್ಲಿ ಈಗಲೂ ಭೂಮಿಯ ಸಾಮೂಹಿಕ ಒಡೆತನವಿದೆ; ಜನರಲ್ಲಿ ಸಾಮೂಹಿಕ ಭಾವನೆಯೂ ಇದೆ. ಅಂಥಲ್ಲಿ ಬೇಸಾಯದ ಪರಿಸ್ಥಿತಿಗಳನ್ನು ಸ್ಥಿರಪಡಿಸಿದಾಗ್ಗೆ ಸಹಕಾರದ ಬೇಸಾಯ ಸಂಘಗಳನ್ನು ವ್ಯಾಪಕವಾಗಿ ಸಂಘಟಿಸಬೇಕು. ಭಾರತದಲ್ಲಿ ಬಹಳ ಕಡೆಗೆ ಸಾಮೂಹಿಕ ಭಾವನೆಯ ಇಂಥ ಹಿಂದುಳಿದ ಜಾತಿಗಳು ಹಬ್ಬಿವೆ. ಇಂಥ ಅನೇಕ ಜನಾಂಗಗಳಲ್ಲಿ ಬೇಸಾಯದಲ್ಲಿ ಸ್ಥಿರವಾಗಿ ನೆಲೆಸುವ ಮನೋಭಾವವಿರದೆ ಅವರು ಗುಳೇ ಕಟ್ಟಿಕೊಂಡು ಅಲೆಯುತ್ತಿರುತ್ತಾರೆ. ಇಂಥ ಜನಾಂಗಗಳ ಕಲ್ಯಾಣವನ್ನು ಸಾಧಿಸುವ ಕ್ರಮಗಳಲ್ಲಿ ಅವರ ಸಹಕಾರಿ ಬೇಸಾಯ ಸಂಘಗಳನ್ನು ಸ್ಥಾಪಿಸಿ, ಆ ಜನರಲ್ಲಿ ಬೇಸಾಯದ ನಿಷ್ಠೆ ಬೆಳೆಸಿ, ಅವರನ್ನು ಬೇಸಾಯ ಸಂಘಗಳಲ್ಲಿ ಸ್ಥಿರವಾಗಿ ನೆಲಸುವಂತೆ ಯತ್ನಿಸಬೇಕು. ಇಂಥ ಕ್ಷೇತ್ರಗಳು ಸಹಕಾರಿ ಬೇಸಾಯಕ್ಕೆ ಅವಕಾಶ, ಆಹ್ವಾನ ಎರಡೂ ಆಗಿವೆ.

(6) ಗ್ರಾಮದಾನವಾದ ಗ್ರಾಮಗಳಲ್ಲಿ ಭೂಮಿಯು ಎಲ್ಲವೂ ಗ್ರಾಮದ ಒಡೆತನದ್ದಾಗಿರುತ್ತದೆ. ಅಲ್ಲಿ ಸಹಕಾರಿ ಬೇಸಾಯ ಸಂಘಗಳನ್ನು ಸಂಘಟಿಸಲು ಒಳ್ಳೇ ಅನುಕೂಲ ಕ್ಷೇತ್ರವಿರುತ್ತದೆ. ಈ ಪ್ರದೇಶಗಳಲ್ಲಿ ಹೆಚ್ಚಾಗಿ ಸಾಮೂಹಿಕ ಭಾವನೆಯ ಹಿಂದುಳಿದ ಜನಾಂಗಗಳೇ ಇರುತ್ತವೆ. ಅಲ್ಲಿ ಭೂಮಿಯ ಮೇಲೆ ಸಾಮಾಜಿಕ ಅಥವಾ ಕಾಯಿದೆಯ ಹೆಚ್ಚಿನ ಭಾರಗಳೂ ಇರುವುದಿಲ್ಲ.

(7) ಮೊದಲು ಪ್ರತಿ ಜಿಲ್ಲೆಯಲ್ಲಿ ಒಂದೊಂದು, ಮುಂದೆ ಪ್ರತಿಯೊಂದು ಅಭಿವೃದ್ಧಿ ಕ್ಷೇತ್ರದಲ್ಲಿ ಒಂದೊಂದು ಸಹಕಾರಿ ಬೇಸಾಯ ಸಂಘಗಳನ್ನು ಸಂಘಟಿಸಬೇಕು. ಇವು ಮಾದರಿ ಪ್ರಯೋಗ ಕ್ಷೇತ್ರಗಳೂ, ಪ್ರಾತ್ಯಕ್ಷಿಕೆಯ ಕ್ಷೇತ್ರಗಳೂ ಆಗಬೇಕು. ಇವುಗಳಲ್ಲಿ ಸಂಚಾಲನದ ಸೂಕ್ತ ವಿಧಾನಗಳ ಅನುಸಂಧಾನವಾಗಬೇಕಲ್ಲದೆ, ಎಲ್ಲ ವಿಸ್ತರಣಾ ಕ್ಷೇತ್ರಗಳಲ್ಲಿಯ ಅಧಿಕಾರಿಗಳಿಗೆ ಹಾಗೂ ಕಾರ್ಯಕರ್ತರಿಗೆ ಇವುಗಳಿಂದ ತರಬೇತು ಹಾಗೂ ಮಾರ್ಗದರ್ಶನ ದೊರಕಬೇಕು. 1957ರ ಜುಲೈನಲ್ಲಿ, ಮಸೂರಿಯಲ್ಲಿ ಜರುಗಿದ ಎಲ್ಲ ರಾಜ್ಯಗಳ ಸಹಕಾರ ಮಂತ್ರಿಗಳ ಸಮ್ಮೇಳನವು ಸಹ ಪ್ರತಿಯೊಂದು ಅಭಿವೃದ್ಧಿ ಕ್ಷೇತ್ರದಲ್ಲಿ ಕನಿಷ್ಠ ಒಂದು 'ಪರಿಪೂರ್ಣ ಮಾದರಿ ಬೇಸಾಯ ಸಂಘ'ವನ್ನು ಸ್ಥಾಪಿಸಲು ಸಲಹೆ ಮಾಡಿತ್ತು.

ಈ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರಲು ಸಹಕಾರಿ ಬೇಸಾಯ ಸಂಘಗಳಿಗೆ ಕೆಳಗೆ ಕಾಣಿಸಿದಂತೆ ಸವಲತ್ತುಗಳನ್ನು ಒದಗಿಸಲು ಮತ್ತು ಕ್ರಮಗಳನ್ನು ಕೈಕೊಳ್ಳಲು ದ್ವಿತೀಯ ಪಂಚವಾರ್ಷಿಕ ಯೋಜನೆಯು ಸೂಚಿಸಿತ್ತು :

(1) ಸಹಕಾರಿ ಬೇಸಾಯ ಸಂಘಗಳಲ್ಲಿದ್ದ ಭೂಮಿಗಳನ್ನು ಕ್ರೋಢೀಕರಿಸಬೇಕು.

(2) ಸರಕಾರದ ವಶದಲ್ಲಿರುವ ಹೊಸದಾಗಿ ಆಬಾದ ಮಾಡಲ್ಪಟ್ಟ ಭೂಮಿಗಳನ್ನು ಸರಕಾರಿ ಪಡಭೂಮಿಗಳನ್ನು ಮತ್ತು ಗ್ರಾಮ ಪಂಚಾಯಿತಿಗಳ ವಶದಲ್ಲಿರುವ ಭೂಮಿಗಳನ್ನು ಸಹಕಾರಿ ಬೇಸಾಯ ಸಂಘಗಳಿಗೆ ಮಂಜೂರುಮಾಡಿ ಅವಕ್ಕೆ ಪ್ರೋತ್ಸಾಹ ಕೊಡಬೇಕು.

(3) ರೈತಾಪಿ ಹಿಡುವಳಿಗಳ ಭೂಮಿಗಳ ಒಡೆಯರು ಸಹ ತಮ್ಮ ರೈತರನ್ನು ಒಪ್ಪಿಸಿ ಬೇಸಾಯ ಸಂಘಗಳಲ್ಲಿ ಸೇರಬಹುದು.

(4) ದೇಶದ ಎಲ್ಲ ಕಡೆಗೆ ಕಾರ್ಯಕರ್ತರಿಗೆ ಸಹಕಾರಿ ಬೇಸಾಯದ ತಾತ್ವಿಕ ಹಾಗೂ ಕ್ರಿಯಾತ್ಮಕ ತರಬೇತು ಕೊಡಲು ತರಬೇತು ಕೇಂದ್ರಗಳನ್ನು ಸ್ಥಾಪಿಸಬೇಕು.

(5) ತಾಂತ್ರಿಕ ಸಿಬ್ಬಂದಿಯವರು ಉತ್ಪಾದನೆಯ ಯೋಜನೆಗಳನ್ನು ತಯಾರಿಸುವಲ್ಲಿ, ಬೇಸಾಯದ ಕಾರ್ಯಗಳನ್ನು ಸಾಂಗವಾಗಿ ಸಾಗಿಸುವಲ್ಲಿ ಮತ್ತು ಉತ್ಪತ್ತಿಯ

ಮಾರಾಟದಲ್ಲಿ ಬೇಸಾಯ ಸಂಘಗಳಿಗೆ ಮಾರ್ಗದರ್ಶನ ಹಾಗೂ ನೆರವು ನೀಡಬೇಕು. ಪ್ರಾರಂಭದಲ್ಲಿ ಬೇಸಾಯ ಸಂಘಗಳಿಗೆ ಅವುಗಳ ಸಂಚಾಲನಕ್ಕೆ ನೆರವಾಗಲು ಸಿಬ್ಬಂದಿ ವೆಚ್ಚಕ್ಕಾಗಿ ಸಹಾಯ ಧನವನ್ನು ಕೊಡಬೇಕು.

(6) ಗುಡಿ ಕೈಗಾರಿಕೆಗಳನ್ನು, ಹೈನದ ಉದ್ಯೋಗ ಮತ್ತು ತೋಟಗಾರಿಕೆಯನ್ನು ಕೈಕೊಳ್ಳಲು ಬೇಸಾಯ ಸಂಘಗಳಿಗೆ ಆರ್ಥಿಕ ನೆರವು ಹಾಗೂ ತಾಂತ್ರಿಕ ಮಾರ್ಗದರ್ಶನ ನೀಡಬೇಕು. ಅದರಿಂದ ಸಂಘಗಳ ಸದಸ್ಯರಿಗೆ ಅವರ ಆಶ್ರಿತರಿಗೆ ಬೇಸಾಯದ ಕೆಲಸವಿಲ್ಲದಾಗ ಕೈತುಂಬ ಲಾಭದಾಯಕ ಉದ್ಯೋಗವನ್ನು ಒದಗಿಸಲಾಗುವುದು.

ನಿಷ್ಠೆಯಿಂದ ಈ ಶಿಫಾರಸುಗಳನ್ನೂ, ಸೂಚನೆಗಳನ್ನೂ ಅನುಷ್ಠಾನಕ್ಕೆ ತಂದಿದ್ದರೆ ಸಹಕಾರಿ ಬೇಸಾಯವು ಹೆಚ್ಚಿನ ಪ್ರಗತಿಯನ್ನು ಸಾಧಿಸಬಹುದಾಗಿತ್ತು. ಇವನ್ನು ಕಾರ್ಯಗತ ಮಾಡುವ ಸ್ಫೂರ್ತಿಯುಳ್ಳ ಕಾರ್ಯಕರ್ತರ ಹಾಗೂ ಸಂಸ್ಥೆಗಳ ಅಭಾವ ದಿಂದ ಶಿಫಾರಸುಗಳು ಕಾಗದದಲ್ಲಿಯೇ ಉಳಿದವು. ದೇಶದಲ್ಲಿ ಸಹಕಾರಿ ಬೇಸಾಯ ಕ್ಕನುಕೂಲವಾದ ವಾತಾವರಣವು ತಯಾರಾಗಲಿಲ್ಲ. ಆದ್ದರಿಂದ ನಿರೀಕ್ಷಿಸಿದಂತೆ ಸಹಕಾರಿ ಬೇಸಾಯದ ಪ್ರಗತಿಯು ಸಾಧಿಸಲ್ಪಡಲಿಲ್ಲ.

ತೃತೀಯ ಪಂಚವಾರ್ಷಿಕ ಯೋಜನೆ

ಮೂರನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಜಿಲ್ಲೆಗೆ ಒಂದರಂತೆ ರಾಷ್ಟ್ರದಲ್ಲಿ ಸಹಕಾರಿ ಬೇಸಾಯದ ಪ್ರಯೋಗ ಕ್ಷೇತ್ರಗಳನ್ನು ಸ್ಥಾಪಿಸಬೇಕೆಂದು ಗೊತ್ತಾಯಿತು. ಒಂದು ಪ್ರಯೋಗ ಕ್ಷೇತ್ರದಲ್ಲಿ 10 ಬೇಸಾಯ ಸಂಘಗಳನ್ನು ಸಂಘಟಿಸಲಾಯಿತು. ಸಹಕಾರಿ ಹಾಗೂ ಪಂಚಾಯಿತಿ ರಾಜ್ಯದ ವಿಕಾಸದಲ್ಲಿ ಮುಂದು ವರಿದ ಅಭಿವೃದ್ಧಿ ಕ್ಷೇತ್ರಗಳಲ್ಲಿ ಪ್ರಯೋಗ ಕ್ಷೇತ್ರಗಳನ್ನು ಆರಿಸಲಾಯಿತು. ಸಾಮಾನ್ಯ ವಾಗಿ ಒಂದು ಅಭಿವೃದ್ಧಿ ಕ್ಷೇತ್ರವನ್ನು ಪ್ರಯೋಗ ಕ್ಷೇತ್ರವನ್ನಾಗಿ ಆರಿಸಲಾಯಿತು. ಪ್ರಯೋಗ ಕ್ಷೇತ್ರಗಳ ಹೊರಗೂ ಬೇಸಾಯ ಸಂಘಗಳನ್ನು ಸಂಘಟಿಸಲಾಯಿತು. ಈ ಎಲ್ಲಕಾರ್ಯಕ್ರಮಕ್ಕೆ 11 ಕೋಟಿ ರೂಪಾಯಿಗಳ ಆರ್ಥಿಕ ವ್ಯವಸ್ಥೆ ಮಾಡ ಲಾಯಿತು.

ನಿರ್ದೇಶಕ ತತ್ವಗಳು

23 ಸೆಪ್ಟೆಂಬರ್ 1960ರ ಹಾಗೂ 5 ನವೆಂಬರ್ 1960ರ ಪರಿಪತ್ರಗಳಲ್ಲಿ ಭಾರತ ಸರಕಾರವು ಸಹಕಾರಿ ಬೇಸಾಯದ ಕಾರ್ಯಕ್ರಮದ ಬಗ್ಗೆ ನಿರ್ದೇಶಕ ತತ್ವ ಗಳನ್ನು ಎಲ್ಲ ರಾಜ್ಯಗಳಿಗೂ ತಿಳಿಸಿತು. ಅವುಗಳಲ್ಲಿ ಮುಖ್ಯವಾದವುಗಳನ್ನು ಈ ಮುಂದೆ ಕೊಡಲಾಗಿದೆ:

(1) ಸ್ವಯಂಸ್ಫೂರ್ತಿಯಿಂದ ಬೇಸಾಯ ಸಂಘವನ್ನು ಸಂಘಟಿಸಬೇಕು. ಯಾವುದೇ ಬಗೆಯ ಒತ್ತಾಯವಿರಕೂಡದು.

(2) ಬೇಸಾಯ ಸಂಘದ ಸದಸ್ಯರು ಹೆಚ್ಚಾಗಿ ಸಣ್ಣ ರೈತರು ಅಥವಾ ಭೂಹೀನ ಬೇಸಾಯಗಾರರು ಇರಬೇಕು.

(3) ಬೇಸಾಯ ಸಂಘದಲ್ಲಿ ಬೇಸಾಯ ಕೆಲಸವನ್ನಾಗಲಿ ಅಥವಾ ಸಹಾಯಕ ಉದ್ಯೋಗವನ್ನಾಗಲಿ ಮಾಡುವವರೇ ಸದಸ್ಯರಾಗಬೇಕು. ಸಾಮಾನ್ಯವಾಗಿ ಸ್ಥಳದಲ್ಲಿರದ, ದುಡಿಯುವ ಭೂಮಾಲಿಕರನ್ನು ಬೇಸಾಯ ಸಂಘದಲ್ಲಿ ಸೇರಿಸಬಾರದು. ಆದರೆ ದೈಹಿಕ ದುರ್ಬಲತೆಯಿಂದ, ಸರಕಾರಿ ನೌಕರಿಯ ಕಾರಣದಿಂದ ಅಥವಾ ಇಂಥ ಬೇರೆ ಅಸಹಾಯಕತೆಯಿಂದ ದುಡಿಯಲಾಗದವರನ್ನು ಬೇಸಾಯ ಸಂಘದಲ್ಲಿ ಸದಸ್ಯರನ್ನಾಗಿ ಮಾಡಿಕೊಳ್ಳಬಹುದು. ಆದರೆ ಇಂಥ ದುಡಿಯಲಾಗದ ಸದಸ್ಯರ ಸಂಖ್ಯೆ ಒಟ್ಟು ಸದಸ್ಯರ $\frac{1}{4}$ಕ್ಕಿಂತ ಹೆಚ್ಚಿಗೆ ಇರಕೂಡದು.

(4) ಬೇಸಾಯ ಸಂಘದಲ್ಲಿ ಭೂಮಿಯನ್ನು ಕನಿಷ್ಠ 5 ವರ್ಷಗಳವರೆಗೆ ಒಂದುಗೂಡಿಸಬೇಕು. ಸದಸ್ಯನು ಗ್ರಾಮವನ್ನು ಬಿಟ್ಟುಹೋದರೆ ಅಥವಾ ಆಕಸ್ಮಿಕ ಪರಿಸ್ಥಿತಿಯಲ್ಲಿ ಬಿಡುವ ಸದಸ್ಯನಿಗೆ ಭೂಮಿಯನ್ನು ವಾಪಸ್ಸು ಕೊಡಬಹುದು.

(5) ಹೆಚ್ಚು ದಕ್ಷ ಹಾಗೂ ತೀವ್ರಶ್ರಮದಿಂದ ಸಾಂದ್ರಬೇಸಾಯ ಕೈಕೊಳ್ಳುವುದೇ ಬೇಸಾಯ ಸಂಘದ ಮುಖ್ಯ ಚಟುವಟಿಕೆಯಾಗಿರಬೇಕು. ಜೊತೆಯಲ್ಲಿ ಕೋಳಿ ಸಾಕಾಣಿಕೆ, ಹೈನು ಉದ್ಯೋಗ, ಗುಡಿಕೈಗಾರಿಕೆ, ಮುಂತಾದುವನ್ನು ಬೆಳೆಸಬೇಕು. ಸ್ಥಳೀಯ ಸಾಧನಗಳ ಪೂರ್ಣ ಉಪಯೋಗವಾಗಬೇಕು.

(6) ದುಡಿಯಲು ಅನುಕೂಲ ಪರಿಸ್ಥಿತಿಗಳನ್ನುಂಟುಮಾಡಬೇಕು ಮತ್ತು ಪರಸ್ಪರ ಸೌಹಾರ್ದದ ಸಂಬಂಧಗಳನ್ನು ಸ್ಥಾಪಿಸಬೇಕು. ಆದರಿಂದ ಮತಭೇದಗಳು ಕಡಮೆಯಾಗಿ ಒಗ್ಗಟ್ಟಿನಿಂದ ದುಡಿಯಲು ಸಾಧ್ಯವಾಗುತ್ತದೆ.

(7) ಕೇವಲ ಆರ್ಥಿಕ ಸಹಾಯವನ್ನು ದೊರಕಿಸಲು ಸ್ಥಾಪಿಸಲ್ಪಟ್ಟ ಬೇಸಾಯ ಸಂಘಗಳಿಗೆ ಆರ್ಥಿಕ ಸಹಾಯ ಕೊಡಬಾರದು.

(8) ತುಂಡು ಭೂಮಿಗಳ ಕ್ರೋಢೀಕರಣದ ಕಾರ್ಯಕ್ರಮವನ್ನು ಸಹಕಾರಿ ಬೇಸಾಯದ ಕಾರ್ಯಕ್ರಮದೊಡನೆ ಹೊಂದಿಸಬೇಕು. ಸಾಧ್ಯವಾದಷ್ಟು ಕ್ರೋಢೀಕರಣದ ಕಾರ್ಯಕ್ರಮ ನಡೆದಲ್ಲೇ ಸಹಕಾರಿ ಬೇಸಾಯದ ಕಾರ್ಯಕ್ರಮ ಕೈಕೊಳ್ಳುವುದು ಒಳ್ಳೆಯದು. ಆದರೆ ಕ್ರೋಢೀಕರಣವಾದಲ್ಲೇ ಸಹಕಾರಿ ಬೇಸಾಯ ಕಾರ್ಯಗತ ಮಾಡಬೇಕೆಂಬ ನಿರ್ಬಂಧವಿರಕೂಡದು.

ಆರ್ಥಿಕ ಸಹಾಯ

ಪ್ರತಿಯೊಂದು ಬೇಸಾಯ ಸಂಘಕ್ಕೆ ಸರಕಾರದಿಂದ ನೇರವಾಗಿ 2,000 ರೂಪಾಯಿಗಳ ಷೇರುಧನದ ವಂತಿಗೆ, 4,000 ರೂಪಾಯಿ ದೀರ್ಘಾವಧಿ-ಮಧ್ಯಮಾವಧಿ ಸಾಲ,

ಉಗ್ರಾಣ ಕೊಟ್ಟಿಗೆಯ ಕಟ್ಟಡಕ್ಕೆ 5,000 ರೂಪಾಯಿ ಸಾಲದ ಸಹಾಯ, ಸಿಬ್ಬಂದಿ ವೆಚ್ಚಕ್ಕೆ 3 ವರ್ಷಗಳಲ್ಲಿ 1,200 ರೂಪಾಯಿ ಸಹಾಯಧನ, ಈ ರೀತಿಯಾಗಿ ಆರ್ಥಿಕ ಸಹಾಯವನ್ನು ಒದಗಿಸುವ ಯೋಜನೆಯಾಯಿತು. ಇದಲ್ಲದೆ ಬೇರೆ ಬೇರೆ ಯೋಜನೆಗಳಲ್ಲಿ ಬೇಸಾಯದ ಸುಧಾರಣೆಗಳಿಗಾಗಿ ಕೊಡುವ ಸಹಾಯ ಸವಲತ್ತುಗಳನ್ನು ಬೇಸಾಯ ಸಂಘಗಳಿಗೆ ಆದ್ಯತೆ ಕೊಟ್ಟು ಕೊಡಬೇಕೆಂದು ನಿರ್ಧಾರವಾಯಿತು.

ಬೆಳೆ ಉತ್ಪಾದನೆಗಾಗಿ ಕೇಂದ್ರ ಸಹಕಾರಿ ಬ್ಯಾಂಕುಗಳು ಸಹಕಾರಿ ಬೇಸಾಯ ಸಂಘಗಳಿಗೆ ಅಲ್ಪಾವಧಿ ಸಾಲ ಕೊಡಬೇಕೆಂದು ಗೊತ್ತಾಯಿತು. ಈ ಕಾರ್ಯದಲ್ಲಿ ಸಾಲ ವಸೂಲು ಆಗದೆ ಆದ ಹಾದಿಯನ್ನು ತುಂಬಲು ಇಂಥ ಸಾಲಗಳ ಶೇಕಡಾ 2ರಷ್ಟು ಸಹಾಯ ಧನವನ್ನು ಬ್ಯಾಂಕುಗಳಿಗೆ ಕೊಡಬೇಕೆಂದು ಗೊತ್ತಾಯಿತು.

ತಾಂತ್ರಿಕ ಹಾಗೂ ಆಡಳಿತದ ಮಾರ್ಗದರ್ಶನ

ಬೇಸಾಯ ಸಂಘಗಳಿಗೆ ತಾಂತ್ರಿಕ ಮಾರ್ಗದರ್ಶನ ನೀಡಲು ಅಭಿವೃದ್ಧಿ ಕ್ಷೇತ್ರಗಳ ಅಧಿಕಾರಿಗಳಿಗೆ ಸರಿಯಾದ ಆದೇಶಗಳನ್ನು ಕೊಡಲಾಯಿತು. ಸಹಕಾರಿ ಬೇಸಾಯ ಸಂಘಗಳ ಕ್ಷೇತ್ರಗಳನ್ನು 'ಅಭಿವೃದ್ಧಿಯ ಸಂಘಟನ ಕ್ಷೇತ್ರಗಳು' ಎಂದು ಎಣಿಸಲು ಆದೇಶ ಕೊಡಲಾಯಿತು. ಅದರ ಪರಿಣಾಮವಾಗಿ ಹಲವು ರಾಜ್ಯಗಳಲ್ಲಿ ಬೇಸಾಯ ಸಂಘಗಳಿಗೆ ಸಾಲಸೌಲಭ್ಯಗಳು ದೊರೆತವು.

ಈ ಕಾರ್ಯಕ್ರಮಕ್ಕೆ ವಿಶೇಷ ಮಾರ್ಗದರ್ಶನ ಕೊಡಲು ಸಾಮಾನ್ಯವಾಗಿ ಎಲ್ಲ ರಾಜ್ಯಗಳಲ್ಲಿ ರಾಜ್ಯ ಮಟ್ಟದಲ್ಲಿ ಸಹಕಾರಿ ಸಂಘಗಳ ಡೆಪ್ಯುಟಿ ರಿಜಿಸ್ಟ್ರಾರರನ್ನಾಗಲಿ, ಜಾಯಿಂಟ್ ರಿಜಿಸ್ಟ್ರಾರರನ್ನಾಗಲಿ, ವಿಶೇಷಾಧಿಕಾರಿಯನ್ನಾಗಿ ನೇಮಿಸಲಾಯಿತು. ಪ್ರಯೋಗ ಕ್ಷೇತ್ರಗಳಲ್ಲಿ ಸಹಕಾರಿ ಬೇಸಾಯದ ಸೀನಿಯರ್ ಇನ್ಸ್ಪೆಕ್ಟರರನ್ನು ವಿಶಿಷ್ಟ ವಿಸ್ತರಣಾಧಿಕಾರಿಗಳನ್ನಾಗಿ ನೇಮಿಸಲಾಯಿತು. ಗ್ರಾಮಸೇವಕರಿಗೆ ವಿಶೇಷ ತರಬೇತು ಕೊಟ್ಟು ಬೇಸಾಯ ಸಂಘಗಳಿಗೆ ಮಾರ್ಗದರ್ಶನ ಮಾಡಲು ಅವರನ್ನು ನೇಮಿಸಲಾಯಿತು.

ಈ ಕಾರ್ಯಕ್ರಮಕ್ಕೆ ತಕ್ಕ ಜನಸ್ಫೂರ್ತಿ ಹುಟ್ಟಿಸಲು ಹಾಗೂ ತಕ್ಕ ಮಾರ್ಗದರ್ಶನ ಮಾಡಲು ಅನೇಕ ರಾಜ್ಯಗಳಲ್ಲಿ ಸಹಕಾರಿ ಬೇಸಾಯದ ಸಲಹಾ ಮಂಡಲಿಗಳನ್ನು, ರಾಷ್ಟ್ರೀಯ ಸಲಹಾ ಮಂಡಲಿಯನ್ನೂ ಸ್ಥಾಪಿಸಲಾಯಿತು.

ತರಬೇತು ಹಾಗೂ ಶಿಕ್ಷಣ

ಸಲಹಾ ಮಂಡಲಿಗಳ ಶಿಫಾರಸುಗಳ ಪ್ರಕಾರ ಬೇಸಾಯ ಸಂಘಗಳ ಕಾರ್ಯದರ್ಶಿಗಳ ತರಬೇತಿಗಾಗಿ 13 ರಾಜ್ಯಗಳಲ್ಲಿ ಸಹಕಾರಿ ಬೇಸಾಯದ ತರಬೇತು ಕೇಂದ್ರಗಳನ್ನು ಸ್ಥಾಪಿಸಲಾಯಿತು. ಅವುಗಳಲ್ಲಿ ಸಹಕಾರಿ ಬೇಸಾಯದ ವಿಶೇಷ ಸಿಬ್ಬಂದಿ

ಯವರಿಗೆ, ವಿಸ್ತರಣಾಧಿಕಾರಿಗಳಿಗೆ, ಹೆಚ್ಚಿನ ವಿಚಾರ ಪರಿಷ್ಕರಣದ ತರಬೇತಿನ ವ್ಯವಸ್ಥೆ ಮಾಡಲಾಯಿತು. ಸಂಘಗಳ ಸದಸ್ಯರಿಗೆ ಸಹಕಾರಿ ಬೇಸಾಯದ ಬಗ್ಗೆ ತಿಳುವಳಿಕೆ ಕೊಡಲು ಅಲ್ಲಲ್ಲಿ ಗ್ರಾಮಶಿಕ್ಷಣ ಶಿಬಿರಗಳನ್ನು ನಡೆಸಲಾಯಿತು. ಸಂಘದ ಸದಸ್ಯರು ತಿರುಗಾಡಿ ಬೇಸಾಯ ಸಂಘಗಳ ಪ್ರಗತಿಯನ್ನು ಅಭ್ಯಸಿಸಿ ಮುಂದಿನ ವಿಕಾಸಕ್ಕೆ ಮಾರ್ಗದರ್ಶನ ಪಡೆದರು. ಕಾರ್ಯಕ್ರಮದ ಪ್ರಚಾರ ಮಾಡಲು ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳು ಪ್ರಚಾರ ಹೊತ್ತಗೆಗಳನ್ನು ಪ್ರಕಟಿಸಿದವು. ಕರ್ನಾಟಕ ರಾಜ್ಯವು ಇಂಥ 20 ಪ್ರಕಟಣೆಗಳನ್ನು ಹೊರಡಿಸಿತು. ಆಕಾಶವಾಣಿಯ ಕೃಷಿ ಕೇಂದ್ರ ಗಳಿಂದ ಸಹಕಾರಿ ಬೇಸಾಯದ ಪ್ರಚಾರ ಮಾಡಲಾಯಿತು. 'ಎಲ್ಲರೂ ಒಬ್ಬರಿಗಾಗಿ' ಎಂಬ ಒಂದು ಯಶಸ್ವಿ ಸಹಕಾರಿ ಬೇಸಾಯ ಸಂಘದ ಚಲನಚಿತ್ರವನ್ನು 14 ಭಾಷೆಗಳಲ್ಲಿ ತಯಾರಿಸಿ ಪ್ರಚಾರ ಮಾಡಲಾಯಿತು.

ಸಹಕಾರಿ ಬೇಸಾಯ ಹಬ್ಬಿಸಲು ವಿಸ್ತರಣಾ ಸಿಬ್ಬಂದಿಯ ಪಾತ್ರ

ಸಹಕಾರಿ ಬೇಸಾಯದ ಪ್ರಯೋಗ ಕ್ಷೇತ್ರಗಳ ಯಶಸ್ಸಿಗಾಗಿ ವಿಸ್ತರಣಾ ಸಿಬ್ಬಂದಿಯ ಪಾತ್ರವು ಬಹಳೇ ಮಹತ್ವದ್ದೆಂದು ಮನಗಂಡು ಅವರಿಗೆ ಕೆಳಗೆ ಕಾಣಿಸಿದ ಮಹತ್ವದ ಕರ್ತವ್ಯಗಳನ್ನು ಒಪ್ಪಿಸಲಾಯಿತು :

(1) ಅವರು ಬೇಸಾಯ ಸಂಘಗಳ ಬೇಸಾಯದ ಉತ್ಪಾದನೆಯ ಕಾರ್ಯ ಕ್ರಮಗಳನ್ನು ತಯಾರಿಸಬೇಕು. ಬೆಳೆಯ ಯೋಜನೆ ಭೂಸುಧಾರಣೆಯ ಕಾರ್ಯ ಕ್ರಮಗಳು, ಅಂದರೆ ಸಮಪಾತಳಿ ಒಡ್ಡು, ಗದ್ದೆ ತಯಾರಿಸುವುದು ಮುಂತಾದುವುಗಳು, ನೀರಾವರಿಯ ಕಾಲುವೆಗಳ ರಚನೆ, ಸ್ಥಳಿಕ ಸಾಮಗ್ರಿಗಳ ಪರಮಾವಧಿ ಉಪಯೋಗ ಮಾಡಿ ರಸಗೊಬ್ಬರದ ತಯಾರಿಕೆ. ಹಸುರೆಲೆ ಗೊಬ್ಬರದ ತಯಾರಿಕೆ ಇವೆಲ್ಲ ಕಾರ್ಯ ಗಳು ಬೇಸಾಯದ ಉತ್ಪಾದನೆಯ ಕಾರ್ಯಕ್ರಮಗಳಲ್ಲಿ ಸೇರುತ್ತವೆ.

(2) ಕೋಳಿಯ ಸಾಕಾಣಿಕೆ. ಹೈನದ ಉದ್ಯೋಗ, ಪಶುಸಂಗೋಪನ ಮುಂತಾದ ಯೋಜನೆಗಳನ್ನು ಅವರು ಬೇಸಾಯ ಸಂಘಗಳಿಗೆ ತಯಾರಿಸಿ ಕೊಡಬೇಕು.

(3) ಸ್ಥಳಿಕ ದಕ್ಷತೆ. ಸಾಧನಗಳನ್ನು ಹಾಗೂ ಸ್ಥಳಿಕ ಬೇಡಿಕೆಯನ್ನು ಲಕ್ಷದಲ್ಲಿರಿಸಿ ಗ್ರಾಮೋದ್ಯೋಗ ಹಾಗೂ ಗುಡಿಕೈಗಾರಿಕೆಗಳ ಯೋಜನೆಗಳನ್ನು ಅವರು ಬೇಸಾಯ ಸಂಘಗಳಿಗೆ ತಯಾರಿಸಿ ಕೊಡಬೇಕು.

(4) 'ಹೆಚ್ಚು ಆಹಾರ ಬೆಳೆಯಿರಿ' ಯೋಜನೆ ಸಾಮೂಹಿಕ ಅಭಿವೃದ್ಧಿಯ ಯೋಜನೆಗಳು, ಖಾದಿ ಕಮಿಶನ್ನಿನ ಯೋಜನೆ ಅವೆಲ್ಲವುಗಳ ಸಹಾಯ ಸವಲತ್ತುಗಳನ್ನು ಅವರು ಬೇಸಾಯ ಸಂಘಗಳಿಗೆ ದೊರಕಿಸಿ ಕೊಡಬೇಕು.

(5) ಪ್ರಯೋಗ ಕ್ಷೇತ್ರಗಳ ದೈನಂದಿನ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಅವರು ಸಹಕಾರಿ ಬೇಸಾಯದ ವಿಶೇಷ ಸಿಬ್ಬಂದಿಯವರಿಗೆ ನೆರವಾಗಬೇಕು.

(6) ಸಹಕಾರಿ ಬೇಸಾಯ ಸಂಘಗಳ ಸದಸ್ಯರೊಡನೆ ಹಾಗೂ ಮುಖಂಡರೊಡನೆ ಸೌಹಾರ್ದ ಸಂಬಂಧವನ್ನಿಟ್ಟುಕೊಂಡು ಅವುಗಳನ್ನು ಚೆನ್ನಾಗಿ ನಡೆಸಲು ವಿಸ್ತರಣಾ ಸಿಬ್ಬಂದಿಯವರು ಅವರಿಗೆ ಮಾರ್ಗದರ್ಶನ ಮಾಡುತ್ತಿರಬೇಕು.

ಚತುರ್ಥ ಪಂಚವಾರ್ಷಿಕ ಯೋಜನೆಯಲ್ಲಿ ಸಹಕಾರಿ ಬೇಸಾಯದ ಬಗ್ಗೆ ಧೋರಣೆ

ಈಗಾಗಲೇ ಹೇಳಿದಂತೆ ಗಾಡಗೀಳ ಸಮಿತಿಯ ಶಿಫಾರಸುಗಳ ಆಧಾರದ ಮೇಲೆ ಭಾರತ ಸರ್ಕಾರವು ಚತುರ್ಥ ಪಂಚವಾರ್ಷಿಕ ಯೋಜನೆಯಲ್ಲಿ ಸಹಕಾರಿ ಬೇಸಾಯದ ಬಗ್ಗೆ ಧೋರಣೆಯನ್ನು ರೂಪಿಸಿತು. ದಿನಾಂಕ 1–11–1966 ರಂದು ಒಂದು ಪರಿಪತ್ರದ ಮೂಲಕ ತನ್ನ ಸಲಹೆಗಳನ್ನು ರಾಜ್ಯ ಸರಕಾರಗಳಿಗೆ ಕಳಿಸಿತು. ಅದರ ಮುಖ್ಯ ಅಂಶಗಳನ್ನು ಕೆಳಗೆ ಕೊಡಲಾಗಿದೆ :

ಗ್ರಾಮಾಂತರದ ಅರ್ಥವ್ಯವಸ್ಥೆಯನ್ನು ಪುನರ್ಘಟಿಸುವಲ್ಲಿ ಸಹಕಾರಿ ಬೇಸಾಯದ ಮಹತ್ವದ ಪಾತ್ರವನ್ನು ಪಂಚವಾರ್ಷಿಕ ಯೋಜನೆಗಳಲ್ಲಿ ಒತ್ತಿ ಹೇಳಲಾಯಿತು. ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ದೇಶದಲ್ಲಿ 318 ಮಾದರಿ ಪ್ರಯೋಗ ಕ್ಷೇತ್ರಗಳನ್ನು ಸಂಘಟಿಸುವ ಯೋಜನೆಯಾಯಿತು. ಒಂದೊಂದು ಪ್ರಯೋಗ ಕ್ಷೇತ್ರದಲ್ಲಿ 10 ಬೇಸಾಯ ಸಂಘಗಳು ಇರಬೇಕಿತ್ತು. ತಮ್ಮ ಭೂಮಿ, ಶ್ರಮ, ಸಾಧನಗಳನ್ನು ಒಂದುಗೂಡಿಸಿ ಉಪಯೋಗಿಸುವುದರಿಂದ ತಮ್ಮ ಉತ್ಪತ್ತಿಯನ್ನು ಹೆಚ್ಚಿಸಬಲ್ಲರೆಂಬುದನ್ನು ಈ ಪ್ರಯೋಗ ಕ್ಷೇತ್ರಗಳಿಂದ ಪ್ರದರ್ಶಿಸುವ ಉದ್ದೇಶವಿತ್ತು. ಈ ಪ್ರಯೋಗ ಕ್ಷೇತ್ರಗಳನ್ನು ಆಯ್ದು ಸಾಮೂಹಿಕ ಅಭಿವೃದ್ಧಿ ಕ್ಷೇತ್ರಗಳಲ್ಲಿ ಸಂಘಟಿಸಲಾಯಿತು. ಪ್ರಯೋಗ ಕ್ಷೇತ್ರಗಳ ಹೊರಗೂ ಬೇಸಾಯ ಸಂಘಗಳನ್ನು ಸಂಘಟಿಸಿ ತಕ್ಕ ಸಹಾಯ, ಪ್ರೋತ್ಸಾಹ ಕೊಡುವುದಿತ್ತು. 1966ರ ಮಾರ್ಚ್ ಕೊನೆಯವರೆಗೆ ದೇಶದಲ್ಲಿ ಪ್ರಯೋಗ ಕ್ಷೇತ್ರಗಳಲ್ಲಿ 2.749 ಬೇಸಾಯ ಸಂಘಗಳಾಗಿದ್ದವು. ಅವುಗಳ ವಶದಲ್ಲಿ 2,77,482 ಎಕರೆ ಭೂಮಿ ಇತ್ತು. ಪ್ರಯೋಗ ಕ್ಷೇತ್ರಗಳ ಹೊರಗೆ 2,752 ಬೇಸಾಯ ಸಂಘಗಳಾಗಿದ್ದು, ಅವುಗಳ ವಶದಲ್ಲಿ 3.06,286 ಎಕರೆ ಭೂಮಿ ಇತ್ತು.

ಸಹಕಾರಿ ಬೇಸಾಯದ ಪ್ರಗತಿಯನ್ನು ಅಳೆದು, ಪ್ರಯೋಗ ಕ್ಷೇತ್ರಗಳಲ್ಲಿ ಬೇಸಾಯ ಸಂಘಗಳ ಕಾರ್ಯದ ಮೌಲ್ಯಮಾಪನ ಮಾಡಲು, ಜುಲೈ 1963ರಲ್ಲಿ ಪ್ರಾಧ್ಯಾಪಕ ಡಿ. ಆರ್. ಗಾಡಗೀಳರ ಅಧ್ಯಕ್ಷತೆಯಲ್ಲಿ ಭಾರತ ಸರಕಾರವು ಒಂದು ನಿರ್ದೇಶಕ ಸಮಿತಿಯನ್ನು ನೇಮಿಸಿತು. ಈ ಸಮಿತಿಯು ಸೆಪ್ಟೆಂಬರ್ 1965ರಲ್ಲಿ ತನ್ನ ವರದಿಯನ್ನು ಸರಕಾರಕ್ಕೆ ಸಲ್ಲಿಸಿತು. ವರದಿಯಲ್ಲಿ ಸಹಕಾರಿ ಬೇಸಾಯದ ಕಾರ್ಯಕ್ರಮವು ಇನ್ನೂ ಶೈಶವಾವಸ್ಥೆಯಲ್ಲಿದೆ ಎಂದು ವಿಮರ್ಶಿಸಲಾಗಿದೆ. ಸಮಸ್ತ ದೇಶದ ಮೇಲೆ ತನ್ನ ಮಹತ್ವದ ಪ್ರಭಾವ ಬೀರಲು ಸಹಕಾರಿ ಬೇಸಾಯಕ್ಕೆ ಇನ್ನೂ ಸಮಯ ಬೇಕು. ಆದರೂ ಪ್ರಯೋಗ ಕ್ಷೇತ್ರಗಳಿಂದ ಕೆಲವೊಂದು ಪ್ರದೇಶಗಳಲ್ಲಿ

ಸಹಕಾರಿ ಬೇಸಾಯದ ಆಶಾದಾಯಕ ಬೆಳವಣಿಗೆಯು ಸಾಧ್ಯವಾಗಿದೆ. ಅವುಗಳಿಂದ ಸಹಕಾರಿ ಬೇಸಾಯದಿಂದ ಉತ್ಪಾದನೆಯು ಹೆಚ್ಚುವುದಲ್ಲದೆ. ಭಾರೀ ಸಮೃದ್ಧಿಯೂ ಸಾಧ್ಯವೆಂದು ಸ್ಪಷ್ಟವಾಗಿದೆ. ಈ ಕಾರ್ಯಕ್ರಮಕ್ಕೆ ಪ್ರೋತ್ಸಾಹ ನೀಡಲು ಮಾರ್ಗದರ್ಶನ ಮಾಡಲು ಮತ್ತು ಅದರ ಸಾಧನೆಯನ್ನು ಸ್ಥಿರಗೊಳಿಸಲು ಇನ್ನೂ ಸಾಕಷ್ಟು ಪ್ರಯತ್ನಗಳಾಗಬೇಕಾಗಿದೆ. ಎಂಬುದನ್ನು ಸಮಿತಿಯ ಅಧ್ಯಯನವು ತೋರಿಸಿಕೊಟ್ಟಿದೆ. ಗುಂಪು ಗುಂಪಾಗಿ ಬೇಸಾಯ ಸಂಘಗಳಿರುವ ಪ್ರದೇಶಗಳಲ್ಲಿ ಬೇಸಾಯ ಸಂಘಗಳು ಹೆಚ್ಚಿನ ಅಭಿವೃದ್ಧಿ ಸಾಧಿಸುವಂತೆ ಪ್ರೋತ್ಸಾಹಿಸಬೇಕಾಗಿದೆ. ಬೇರೆ ಸ್ಥಳಗಳಲ್ಲಿ ಬೇಸಾಯ ಸಂಘಗಳನ್ನು ಸಂಘಟಿಸಲು ಅನುಕೂಲವಾದ ಪರಿಸ್ಥಿತಿಗಳನ್ನು ಉಂಟುಮಾಡಬೇಕು.

ಅಕ್ಟೋಬರ್–ನವೆಂಬರ್ 1965ರಲ್ಲಿ ಮುಂಬಯಿಯಲ್ಲಿ ಕೂಡಿದ ರಾಜ್ಯಗಳ ಸಹಕಾರ ಸಂಘಗಳ ರಿಜಿಸ್ಟ್ರಾರರ ಹಾಗೂ ಸಹಕಾರ ಸಚಿವರ ವಾರ್ಷಿಕ ಸಮ್ಮೇಳನವು ಸಹಕಾರಿ ಬೇಸಾಯದ ನಿರ್ದೇಶಕ ಸಮಿತಿಯು ಮಾಡಿದ ಶಿಫಾರಸುಗಳನ್ನು ವಿಚಾರಿಸಿ ಸಾಮಾನ್ಯವಾಗಿ ಸ್ವೀಕರಿಸಿತು. 24–9–1966ರಂದು ಕೂಡಿದ ಯೋಜನಾ ಆಯೋಗದ ಸಭೆಯು ಈ ಶಿಫಾರಸುಗಳನ್ನು ವಿಚಾರಿಸಿತು. ಈ ಪರಿಪತ್ರದಲ್ಲಿ ಚತುರ್ಥ ಪಂಚವಾರ್ಷಿಕ ಯೋಜನೆಯಲ್ಲಿ ಸಹಕಾರಿ ಬೇಸಾಯದ ಬೆಳವಣಿಗೆಯ ಬಗ್ಗೆ. ಮೂಲ ಭೂತ ತತ್ವಗಳು. ಕಾರ್ಯಕ್ರಮ ಹಾಗೂ ಸಂಪನ್ಮೂಲಗಳು ಮುಂತಾದ ಕೆಲವು ಮಹತ್ವದ ಸಂಗತಿಗಳನ್ನು ಸೂಚಿಸಲಾಗಿದೆ. ಇದರಿಂದ ರಾಜ್ಯಸರಕಾರಗಳು ಚತುರ್ಥ ಪಂಚವಾರ್ಷಿಕ ಯೋಜನೆಯಲ್ಲಿ ಸಹಕಾರಿ ಬೇಸಾಯವನ್ನು ಪ್ರೋತ್ಸಾಹಿಸಲು ಸ್ಪಷ್ಟವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಲು ನೆರವಾಗುವುದೆಂದು ಆಶಿಸಲಾಗಿತ್ತು. ಆದರೆ ವಿಶೇಷವಾದುದೇನೂ ಈ ದಿಶೆಯಲ್ಲಿ ಈ ಯೋಜನಾವಧಿಯಲ್ಲಿ ನಡೆಯಲಿಲ್ಲ.

ಮೂಲಭೂತ ದೃಷ್ಟಿಕೋನ

1966ರ ಮಾರ್ಚ್ ಕೊನೆಗೆ ದೇಶದಲ್ಲಿ ಒಟ್ಟು 5,500 ಸಹಕಾರಿ ಬೇಸಾಯ ಸಂಘಗಳಿದ್ದುವು; ಅವುಗಳ ವಶದಲ್ಲಿ ಸುಮಾರು 5 ಲಕ್ಷ ಎಕರೆ ಭೂಮಿ ಇತ್ತು. ಚತುರ್ಥ ಪಂಚವಾರ್ಷಿಕ ಯೋಜನೆಯಲ್ಲಿ ಇನ್ನೂ 10 ಲಕ್ಷ ಎಕರೆ ಭೂಮಿಯನ್ನು ಸಹಕಾರಿ ಬೇಸಾಯ ಸಂಘಗಳ ಅಳವಿನಲ್ಲಿ ತರುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಅಂದರೆ ಚತುರ್ಥ ಪಂಚವಾರ್ಷಿಕ ಯೋಜನೆಯ ಕೊನೆಗೆ ಈಗಿರುವ ಮತ್ತು ಹೊಸದಾಗಿ ಆಗುವ ಬೇಸಾಯ ಸಂಘಗಳೆಲ್ಲ ಸೇರಿ ಒಟ್ಟು 15 ಲಕ್ಷ ಎಕರೆ ಭೂಮಿಯನ್ನು ಸಾಮೂಹಿಕವಾಗಿ ಸಾಗುಮಾಡುವ ಗುರಿ ಇದೆ. ಆರ್ಥಿಕವಾಗಿ ಸ್ವಾವಲಂಬಿಯಾಗುವ ಬೇಸಾಯ ಸಂಘಗಳನ್ನು ಸ್ಥಾಪಿಸಲು ಆಗ್ರಹ ಮಾಡಲಾಗಿದೆ. ಸ್ಥಳಿಕ ಪರಿಸ್ಥಿತಿಗಳನ್ನು ಲಕ್ಷಿಸಿ ಈ ಉದ್ದೇಶದಿಂದ ರಾಜ್ಯಸರಕಾರಗಳು ಒಂದೊಂದು ಬೇಸಾಯ ಸಂಘದಲ್ಲಿರಬೇಕಾದ ಕನಿಷ್ಠ ಸದಸ್ಯರ ಸಂಖ್ಯೆ ಭೂಮಿಯ ವಿಸ್ತಾರಗಳ ಬಗ್ಗೆ ನಿರ್ಣಯ ಕೈಕೊಳ್ಳಬೇಕು. ಸದಸ್ಯರಲ್ಲಿ ವಿಶ್ವಾಸ. ಒಗ್ಗಟ್ಟು, ಬೆಳೆಯಬೇಕು. ಸ್ವಾವಲಂಬಿಯಾಗಿ

ಕಾರ್ಯಮಾಡಲು ಬೇಸಾಯ ಸಂಘದಲ್ಲಿ ಸಾಕಷ್ಟು ಸಾಧನಗಳಿರಬೇಕು. ಈ ಸಂಗತಿ ಗಳಿಗೆ ಮಹತ್ವ ಕೊಡುವುದಗತ್ಯ. ಈ ಬಗ್ಗೆ ನಿರ್ದಿಷ್ಟ ಸೂತ್ರಗಳನ್ನು ರಾಜ್ಯ ಸರಕಾರಗಳೇ ನಿರ್ಧರಿಸಬೇಕು.

ಚಿಕ್ಕ ಅನಾರ್ಥಿಕ ಹಿಡುವಳಿದಾರರು: ನಾಲ್ಕನೆ ಯೋಜನೆಯಲ್ಲಿ ಸಹಕಾರಿ ಬೇಸಾಯ ಸಂಘಗಳನ್ನು ಸ್ಥಾಪಿಸುವಾಗ, ಚಿಕ್ಕ ಅನಾರ್ಥಿಕ ಹಿಡುವಳಿದಾರರಿಗೆ ಸಹಾಯ ಒದಗಿಸುವುದಕ್ಕೆ ಸಾಧ್ಯವಾದಷ್ಟು ಹೆಚ್ಚಿನ ಮಹತ್ವ ಕೊಡಬೇಕು. ನಾಲ್ಕನೇ ಯೋಜನೆ ಯಲ್ಲಿ ಖಂಡಿತವಾಗಿಯೂ ಈ ವರ್ಗದ ಬೇಸಾಯಗಾರರ ಸಲುವಾಗಿಯೇ ಈ ಕಾರ್ಯಕ್ರಮದ ಪ್ರಯೋಜನವಾಗಬೇಕು. ಬೇರೆ ವರ್ಗಗಳ ಬೇಸಾಯಗಾರರು ಸಹಕಾರಿ ಬೇಸಾಯ ಸಂಘಗಳನ್ನು ಮುಖ್ಯವಾಗಿ ಭೂಕಾಯಿದೆಯ ಯಾವುದೊಂದು ನಿರ್ಬಂಧವನ್ನು ತಪ್ಪಿಸಲು ಅಥವಾ ಸರಕಾರದಿಂದ ದೊರಕುವ ಸಹಾಯ ಸವಲತ್ತು ಗಳನ್ನು ಪಡೆಯುವ ಉದ್ದೇಶದಿಂದ ಸ್ಥಾಪಿಸಿದ್ದು ಅನುಭವದಿಂದ ಕಂಡುಬಂದಿದೆ. ಆದ್ದರಿಂದ ಚತುರ್ಥ ಯೋಜನೆಯಲ್ಲಿ ಮುಖ್ಯವಾಗಿ ಈ ಕಾರ್ಯಕ್ರಮದ ಪ್ರಯೋಜನ ವನ್ನು ಚಿಕ್ಕ, ಅನಾರ್ಥಿಕ ಹಿಡುವಳಿದಾರರಿಗೆ ಮಾಡಿಕೊಟ್ಟು ಮೇಲಿನ ದೋಷಗಳನ್ನೆಲ್ಲ ದೂರಮಾಡಬೇಕು.

ಕೃಷಿ ಸಹಾಯಕ ಉದ್ಯೋಗಗಳು: ಭೂಸುಧಾರಣೆಯು, ನೀರಾವರಿಯು ಹಾಗೂ ಇನ್ನಿತರ ಸುಧಾರಣೆಗಳನ್ನು ಕೈಕೊಂಡು, ಜೊತೆಗೆ ಹೈನದ ಉದ್ದಿಮೆ, ಕುರಿ ಸಾಕಾಣಿಕೆ ಮುಂತಾದ ಸಹಾಯಕ ಉದ್ಯೋಗಗಳನ್ನು ಕೈಕೊಂಡಲ್ಲಿ ಸಹಕಾರಿ ಬೇಸಾಯ ಸಂಘಗಳಿಗೆ ಹೆಚ್ಚು ಉದ್ಯೋಗಾವಕಾಶವನ್ನು ಒದಗಿಸುವುದು ಸಾಧ್ಯವಾಗಿದ್ದನ್ನು ನಿರ್ದೇಶಕ ಸಮಿತಿಯು ಎತ್ತಿತೋರಿಸಿದೆ. ಬಹುಸಂಖ್ಯಾತ ಬೇಸಾಯ ಸಂಘಗಳು ಕಡಮೆ ಭೂಮಿಯ ವಿಸ್ತಾರದಿಂದ ಕಾರ್ಯ ಮಾಡಬೇಕಾದ್ದರಿಂದ ಈ ಸಂಗತಿಗೆ ವಿಶೇಷ ಮಹತ್ವವಿದೆ. ಆದ್ದರಿಂದ ಈ ಆಧಾರದ ಮೇಲೆ ಪ್ರತಿಯೊಂದು ಬೇಸಾಯ ಸಂಘಕ್ಕೂ ದೀರ್ಘಾವಧಿ ಅಭಿವೃದ್ಧಿಯ ಕಾರ್ಯಕ್ರಮಗಳಿಗಷ್ಟೇ ಅಲ್ಲದೆ ಸದಸ್ಯರ ಆಶ್ರಿತರಿಗೂ ಉದ್ಯೋಗವನ್ನು ಒದಗಿಸುವ ಕಾರ್ಯಕ್ರಮವನ್ನು ಹಾಕಬೇಕು.

ಸ್ವಸಂತೋಷದ ತತ್ವ: ಹಿಂದಿನ ಯೋಜನೆಯಂತೆ ಮುಂದೆಯೂ ಬೇಸಾಯ ಸಂಘದಲ್ಲಿ ಸೇರಲು ಯಾವುದೇ ಬಗೆಯ ಒತ್ತಾಯವಿರಕೂಡದು.

ಕಾರ್ಯಕ್ರಮ: ಅನುಕೂಲವಾದ ಪ್ರದೇಶಗಳಲ್ಲಿ ಸಹಕಾರಿ ಬೇಸಾಯ ಸಂಘ ಗಳನ್ನು ಸಂಘಟಿಸುವ ಕ್ಷೇತ್ರಗಳನ್ನು ನಿರ್ಧರಿಸುವುದು ಮಹತ್ವದ್ದು. ಅನುಕೂಲವಾದ ಪರಿಸ್ಥಿತಿಗಳಲ್ಲಿ ಕಾರ್ಯಕ್ರಮವು ಯಶಸ್ವಿಯಾದಲ್ಲಿ, ಸಾಧನೆಗಳನ್ನು ಕಾಯ್ದಿಡಲು ವಿಶೇಷ ಗಮನ ಕೊಡಬೇಕು; ಮುಂದಿನ ಹೆಚ್ಚಿನ ಪ್ರಗತಿಗೂ ಈ ಅನುಕೂಲ ವಾತಾ ವರಣವನ್ನು ಉಪಯೋಗಿಸಬೇಕು. ಕಾರ್ಯಕ್ರಮದ ಯಶಸ್ಸಿಗಾಗಿ ಅನುಕೂಲ ವಾತಾವರಣವಿದ್ದ ಬೇರೆ ಪ್ರದೇಶಗಳನ್ನು ಕಂಡುಹಿಡಿಯುವುದು ಸಾಧ್ಯ. ಸಾಮಾನ್ಯ

ವಾಗಿ ಇಂಥ ಪ್ರದೇಶಗಳೆಂದರೆ: (1) ಹೊಸದಾಗಿ ನೀರಾವರಿ ಬೇಸಾಯದ ಕ್ಷೇತ್ರದಲ್ಲಿ ಬಂದ ಪ್ರದೇಶಗಳು, (2) ವಿಶಾಲವಾಗಿ ಭೂಅಭಿವೃದ್ಧಿಯ ಕಾರ್ಯಕ್ರಮ ಕೈಗೊಂಡ ಪ್ರದೇಶಗಳು, (3) ಭೂರಹಿತ ಕಾರ್ಮಿಕರನ್ನು ರೈತರನ್ನು ಮತ್ತು ಚಿಕ್ಕ ಬೇಸಾಯ ಗಾರರನ್ನು ಸಂಘಟಿಸಿ ಹೊಸದಾಗಿ ನೆಲೆಸುವ ಪ್ರದೇಶಗಳು, (4) ಭೂಹಿಡುವಳಿಯ ಕಾಯಿದೆಗಳನ್ನು ಅನುಷ್ಠಾನಕ್ಕೆ ತಂದ ಬಳಿಕ ಸರಕಾರದ ವಶದಲ್ಲಿ ಬರುವ ವಿಶಾಲ ವಾದ ಕ್ಷೇತ್ರಗಳು, (5) ಭೂಮಿಯು ಪ್ರತಿ ಮನುಷ್ಯನಿಗೆ ಸಾಲದಷ್ಟು ಕಡಮೆ ಇದ್ದಲ್ಲಿ, ಚಿಕ್ಕ ಬೇಸಾಯಗಾರರು ಒಂದುಗೂಡಿದಾಗ್ಗೆ ಬೇಸಾಯದ ಶಾಸ್ತ್ರೀಯ, ತಾಂತ್ರಿಕ ಸುಧಾರಣೆಗಳು ಸಾಧ್ಯವಿದ್ದು, ಅವುಗಳ ಪ್ರಯೋಜನಗಳು ಚಿಕ್ಕ ಬೇಸಾಯ ಗಾರರಿಗೆ ಆಗುವ ಪ್ರದೇಶಗಳು, (6) ಭೂದಾನ, ಗ್ರಾಮದಾನಗಳಲ್ಲಿ ಕೊಟ್ಟ ಭೂಮಿ, (7) ಬಹಳ ದಟ್ಟಜನದಟ್ಟಣೆಯ ಪ್ರದೇಶಗಳು. ಇಲ್ಲಿಯ ಗ್ರಾಮೀಣ ಅರ್ಥ ವ್ಯವಸ್ಥೆಯು ಬಹಳ ದುರ್ಬಲವೂ, ನಾಜೂಕೂ ಆಗಿದ್ದು ಅವುಗಳ ಪುನಃಸಂಘಟನೆಗಾಗಿ ಮಾಡಲ್ಪಟ್ಟ ವ್ಯಾಪಕವಾದ ಯೋಜನೆಯಲ್ಲಿ ಸಹಕಾರಿ ಬೇಸಾಯವು ಅಂಗವಾಗಿದ್ದಲ್ಲಿ ಆ ಪ್ರದೇಶಗಳು ಸಹಕಾರಿ ಬೇಸಾಯಕ್ಕೆ ಅನುಕೂಲವಾದ ಪ್ರದೇಶಗಳು.

ರಾಜ್ಯ ಸರಕಾರಗಳು ಮೇಲ್ಕಾಣಿಸಿದ ವರ್ಗಗಳನ್ನು ಗಮನದಲ್ಲಿಟ್ಟು ಬೇಸಾಯ ಸಂಘಗಳನ್ನು ಸಂಘಟಿಸಲು ಸ್ಥಳಗಳನ್ನು ನಿರ್ಧರಿಸಬೇಕು. ಈಗಿದ್ದ ಬೇಸಾಯ ಸಂಘಗಳ ವಶದಲ್ಲಿರುವ 5 ಲಕ್ಷ ಎಕರೆ ಭೂಮಿಯಲ್ಲದೆ ನವೀನ ಬೇಸಾಯ ಸಂಘಗಳು ಮತ್ತೆ 10 ಲಕ್ಷ ಎಕರೆ ಭೂಮಿಯನ್ನು ಅಂದರೆ ಚತುರ್ಥ ಯೋಜನೆಯ ಕೊನೆಯವರೆಗೆ ಒಟ್ಟು 11 ಲಕ್ಷ ಎಕರೆ ಭೂಮಿಯನ್ನು ಸಾಮೂಹಿಕ ಕೃಷಿಯ ಅಳವಿನಲ್ಲಿ ತರಬೇಕಾಗಿತ್ತು.

ಪುನಃ ಸಂಘಟನೆ: ಸದ್ಯಕ್ಕೆ ದೇಶದಲ್ಲಿ ಸುಮಾರು 5,500 ಸಹಕಾರಿ ಬೇಸಾಯ ಸಂಘಗಳಿವೆ. ಇವುಗಳಲ್ಲಿ ಸುಮಾರು ಶೇಕಡಾ 40ರಷ್ಟು ಬೇಸಾಯ ಸಂಘಗಳು ಸರಿಯಾಗಿ ನಡೆದಿಲ್ಲ. ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಸಂಘಗಳನ್ನು ಪುನಃಸಂಘಟಿಸಿ ಜೀರ್ಣೋದ್ಧಾರ ಮಾಡುವುದು ಅತ್ಯಂತ ಮಹತ್ವದ ಕಾರ್ಯಕ್ರಮ. ರಾಜ್ಯ ಸರಕಾರಗಳು ಈ ಕಾರ್ಯಕ್ರಮಕ್ಕೆ ಅತಿ ಹೆಚ್ಚಿನ ಗಮನ ಕೊಡಬೇಕು. ಸದ್ಯಕ್ಕೆ ದೊರೆತ ಮಾಹಿತಿಯ ಆಧಾರದ ಮೇಲೆ ಇದ್ದ ಬೇಸಾಯ ಸಂಘಗಳ ಸಮೀಕ್ಷೆ ಮಾಡಿ ಪ್ರತಿಯೊಂದು ರಾಜ್ಯ ಸರಕಾರವೂ ವಿವರವಾಗಿ ಪುನಃಸಂಘಟನೆಯ ಕಾರ್ಯಕ್ರಮ ವನ್ನು ಹಾಕಬೇಕು. ತ್ವರಿತವಾಗಿ ಈ ಕಾರ್ಯವನ್ನು ಮಾಡಬೇಕು. ಬಹಳಷ್ಟು ನಿಷ್ಕ್ರಿಯ ಅಥವಾ ಸ್ಥಗಿತ ಬೇಸಾಯ ಸಂಘಗಳಿದ್ದ ಪ್ರದೇಶಗಳಲ್ಲಿ ಹೊಸ ಬೇಸಾಯ ಸಂಘಗಳನ್ನು ಸ್ಥಾಪಿಸುವ ಬದಲು ನಿಷ್ಕ್ರಿಯ ಸಂಘಗಳ ಜೀರ್ಣೋದ್ಧಾರದ ಕಾರ್ಯಕ್ಕೆ ಆದ್ಯತೆ ಕೊಡಬೇಕು.

ಕಾರ್ಯಕ್ರಮದ ಅನುಷ್ಠಾನ

ತಾಂತ್ರಿಕ ಮಾರ್ಗದರ್ಶನ: ಸಹಕಾರಿ ಬೇಸಾಯ ಸಂಘಗಳಿಗೆ ಸರಿಯಾಗಿ ಮಾರ್ಗದರ್ಶನ ಮಾಡಲು ರಾಜ್ಯ ಮಟ್ಟದಲ್ಲಿ ಸರ್ವ ಸಹಕಾರ ಸಂಘಗಳ ಜಾಯಿಂಟ್

ರಿಜಿಸ್ಟ್ರಾರರು ಅಥವಾ ಡೆಪ್ಯುಟಿ ರಿಜಿಸ್ಟ್ರಾರರು ಇರಬೇಕು. ಅವರ ನೆರವಿಗೆ ಒಬ್ಬ ವ್ಯವಸಾಯ ಇಲಾಖೆಯ ಅಧಿಕಾರಿಗಳೂ ಇರಬೇಕು. ಪ್ರಯೋಗ ಕ್ಷೇತ್ರದ ಮಟ್ಟದಲ್ಲಿ ಈ ಮೊದಲು ಸೂಚಿಸಿದಂತೆ 10 ಬೇಸಾಯ ಸಂಘಗಳಿಗೋಸ್ಕರ ಓರ್ವ ವಿಸ್ತರಣಾಧಿಕಾರಿಗಳು ಇರಬೇಕು; ಅವರು ಕೃಷಿ ಪದವೀಧರರಿದ್ದರೆ ಮೇಲು. ಅವರ ಜೊತೆಗೆ ಒಬ್ಬ ಗ್ರಾಮಸೇವಕನೂ ಇರಬೇಕು. ಜಿಲ್ಲೆಯ ವಿಸ್ತರಣಾ ಸಿಬ್ಬಂದಿಯವರೆಲ್ಲರೂ ಈ ಕಾರ್ಯಕ್ರಮದಲ್ಲಿ ಆಸ್ಥೆಯಿಂದ ಪಾಲುಗೊಳ್ಳುವಂತೆ ವ್ಯವಸ್ಥೆ ಮಾಡಬೇಕು. ವಿಸ್ತರಣೆಯ ಕಾರ್ಯವು ವೈಯಕ್ತಿಕ ಬೇಸಾಯಗಾರರ ಸಲುವಾಗಿ ನಡೆದದ್ದಕ್ಕಿಂತ ಹೆಚ್ಚು ತೀವ್ರತರವಾಗಿ ಬೇಸಾಯ ಸಂಘಗಳ ಸಲುವಾಗಿ ನಡೆಯಬೇಕು. ಏಕೆಂದರೆ ವಿಶೇಷವಾಗಿ ಪ್ರಾರಂಭದಲ್ಲಿ ಬೇಸಾಯ ಸಂಘಗಳು ತಮ್ಮ ಕಾರ್ಯಾಚರಣೆಯಲ್ಲಿ ಹೆಚ್ಚು ತೊಂದರೆಗಳನ್ನು ಎದುರಿಸುವ ಪರಿಸ್ಥಿತಿ ಇದೆ.

ವ್ಯವಸ್ಥಾಪನ: ಪ್ರತಿಯೊಂದು ಬೇಸಾಯ ಸಂಘದಲ್ಲಿ ದೈನಂದಿನ ಕಾರ್ಯದ ಮೇಲ್ವಿಚಾರಣೆ, ಮಾರ್ಗದರ್ಶನ ಮಾಡಲು ಒಬ್ಬ ದಕ್ಷ ಕಾರ್ಯಕರ್ತರನ್ನಿಡುವ ವ್ಯವಸ್ಥೆಯಾಗಬೇಕು. ಅವನು ಸಂಘದ ಬೇಸಾಯ ಕೆಲಸಗಳಲ್ಲಿ ದುಡಿಯುತ್ತಿದ್ದರೆ ಉತ್ತಮ. ಎಲ್ಲ ಕೆಲಸಗಳ ಕನಿಷ್ಠ ಪರಿಚಯ ಅವನಿಗಿರಬೇಕು.

ರಾಜ್ಯದ ಹಾಗೂ ಜಿಲ್ಲೆಯ ಸಂಯುಕ್ತ ಸಂಘಗಳು (ಫೆಡರೇಶನ್ನುಗಳು): ಜಿಲ್ಲೆಯಲ್ಲಿ ಬಹಳಷ್ಟು ಬೇಸಾಯ ಸಂಘಗಳಾದಲ್ಲಿ ಜಿಲ್ಲಾ ಫೆಡರೇಶನ್ನುಗಳ ಮುಖಾಂತರ ಅವಕ್ಕೆ ತಾಂತ್ರಿಕ ಮಾರ್ಗದರ್ಶನವನ್ನು ಒದಗಿಸಬೇಕು. ಜಿಲ್ಲಾ ಫೆಡರೇಶನ್ನುಗಳು, ಬೇಸಾಯ ಸಂಘಗಳು ರಾಜ್ಯ ಫೆಡರೇಶನ್ನಿನ ಸದಸ್ಯರಾಗಿರಬೇಕು. ಸಾಮಾನ್ಯವಾಗಿ ಯಾವುದೊಂದು ಜಿಲ್ಲೆಯಲ್ಲಿ ಕನಿಷ್ಠ 50 ಬೇಸಾಯ ಸಂಘಗಳಿದ್ದರೆ ಬೇಸಾಯ ಸಂಘಗಳ ಜಿಲ್ಲಾ ಫೆಡರೇಶನ್ನನ್ನು ಸ್ಥಾಪಿಸಬೇಕು. ಯಾವುದೊಂದು ರಾಜ್ಯದಲ್ಲಿ ಕನಿಷ್ಠ 250 ಬೇಸಾಯ ಸಂಘಗಳಿದ್ದರೆ ಅಲ್ಲಿ ಬೇಸಾಯ ಸಂಘಗಳ ರಾಜ್ಯ ಫೆಡರೇಶನ್ನನ್ನು ಸ್ಥಾಪಿಸಬೇಕು.

ಭೂಮಿಯ ಕ್ರೋಢೀಕರಣ: ಭೂಮಿಯ ಕ್ರೋಢೀಕರಣದ ಕಾರ್ಯಕ್ರಮವನ್ನು ಸಹಕಾರಿ ಬೇಸಾಯದ ಕಾರ್ಯಕ್ರಮಕ್ಕೆ ಮುಂಚಿತವಾಗಿ ಅಥವಾ ಜೊತೆಯಲ್ಲಿಯೇ ಕಾರ್ಯಗತ ಮಾಡಬೇಕೆಂಬ ಭಾರತ ಸರಕಾರದ ಧೋರಣವನ್ನು ಸಹಕಾರಿ ಬೇಸಾಯದ ನಿರ್ದೇಶಕ ಸಮಿತಿಯು ಪುಷ್ಟೀಕರಿಸಿದೆ. ಕ್ರೋಢೀಕರಣದ ಕಾರ್ಯದಲ್ಲಿ ಬೇಸಾಯ ಸಂಘಗಳನ್ನು ಏಕಘಟಕಗಳೆಂದು ಗಣಿಸಿ ಅಗತ್ಯವಿದ್ದಲ್ಲಿ ಈ ಉದ್ದೇಶಕ್ಕಾಗಿ ಸಂಬಂಧಿಸಿದ ಕಾಯಿದೆಗಳನ್ನು ಸೂಕ್ತವಾಗಿ ತಿದ್ದಬೇಕು. ಕ್ರೋಢೀಕರಣದ ಕಾಯಿದೆಯು ಕಾರ್ಯಗತವಾಗದೆ ಇದ್ದಲ್ಲಿ ಸಾಮೂಹಿಕ ಬೇಸಾಯವು ಲಾಭದಾಯಕವಾಗಿ ನಡೆಯುವಂತೆ ಅನುಕೂಲವಾಗಿರುವ ಸಘನ ಭೂಮಿಯ ಖಂಡಗಳನ್ನು ಒಂದುಗೂಡಿಸಬೇಕು.

ನಿಧಿಗಳು

ಆರ್ಥಿಕ ಸಹಾಯದ ಯೋಜನೆ: ಚತುರ್ಥ ಪಂಚವಾರ್ಷಿಕ ಯೋಜನೆಯಲ್ಲಿ ಅಗತ್ಯವಿದ್ದ ಹಣದ ಶೇಕಡಾ 75ರಷ್ಟು ಭಾಗವನ್ನು ಭಾರತ ಸರಕಾರವು ಯೋಜನೆಯ ಪರಿಮಿತಿಯ ಹೊರಗೆ ಒದಗಿಸುವುದು. ರಾಜ್ಯ ಸರಕಾರಗಳು ತಮ್ಮ ಯೋಜನೆಯ ಪರಿಮಿತಿಯಲ್ಲಿ ಬಾಕಿ ಶೇಕಡಾ 25ರಷ್ಟು ಹಣವನ್ನು ಒದಗಿಸಬೇಕು. ಸಾಲ, ಸಹಾಯ ಧನಗಳೆರಡರಲ್ಲೂ ಇದೇ ಪಾಲುಗಾರಿಕೆ ಇರುವುದು. ಚತುರ್ಥ ಪಂಚವಾರ್ಷಿಕ ಯೋಜನೆಯಲ್ಲಿ(ಕರಡಿನಲ್ಲಿ), ಕೇಂದ್ರ ಹಾಗೂ ರಾಜ್ಯಗಳ ಕ್ಷೇತ್ರಗಳೆರಡರಲ್ಲೂ ಒಟ್ಟು 18 ಕೋಟಿ ರೂಪಾಯಿಗಳ ಹಣದ ವ್ಯವಸ್ಥೆ ಇರುವುದು. ಚತುರ್ಥ ಯೋಜನೆಯಲ್ಲಿ ಬೇಸಾಯ ಸಂಘಗಳಿಗೆ ಹಾಗೂ ಫೆಡರೇಶನ್ನುಗಳಿಗೆ ಆರ್ಥಿಕ ಸಹಾಯದ ಯೋಜನೆಯು ಕೆಳಗಿನಂತಿರುವುದು (ಒಂದೊಂದು ಸಂಸ್ಥೆಗೆ).

ಅ.ಸಂ.	ವಿವರ	ಸಾಲ	ಸಹಾಯಧನ	ಒಟ್ಟು
1.	**ಶೇರುಧನಕ್ಕೆ ವಂತಿಗೆ** (ಸಂಯುಕ್ತ ಹಾಗೂ ಸಾಮುದಾಯಕ ಬೇಸಾಯ ಸಂಘಗಳಿಗೆ)	2,000	—	2,000
2.	**ಭೂ ಅಭಿವೃದ್ಧಿ**			
	(ಅ) ಸಂಯುಕ್ತ ಬೇಸಾಯ ಸಂಘಕ್ಕೆ ಪ್ರತಿ ಎಕರೆಗೆ 100 ರೂಪಾಯಿಯಂತೆ	20,000	—	20,000
	(ಬ) ಸಾಮುದಾಯಕ ಬೇಸಾಯ ಸಂಘಕ್ಕೆ ಎಕರೆಗೆ 150 ರೂಪಾಯಿಯಂತೆ	30,000	—	30,000
3.	**ಉಗ್ರಾಣ ಹಾಗೂ ದನದ ಕೊಟ್ಟಿಗೆಯ ಕಟ್ಟಡ**	3,750	1,250	5,000
4.	**ಸಿಬ್ಬಂದಿಯವೆಚ್ಚ**			
	(ಅ) ಸಂಯುಕ್ತ ಬೇಸಾಯ ಸಂಘ	—	1,200	1,200
	(ಬ) ಸಾಮುದಾಯಕ ಬೇಸಾಯಸಂಘ	—	2,100	2,100

5. ಬೇಸಾಯ ಸಂಘಗಳ ರಾಜ್ಯ ಫೆಡರೇಶನ್ನಿಗೆ, ಸಿಬ್ಬಂದಿ ವೆಚ್ಚ, ಪ್ರಚಾರ ಮುಂತಾದ ಕಾರ್ಯಗಳಿಗೆ	—	1,00,000	1,00,000
6. ಬೇಸಾಯ ಸಂಘಗಳ ಜಿಲ್ಲಾ ಫೆಡರೇಶನ್ನಿಗೆ ಸಿಬ್ಬಂದಿ ವೆಚ್ಚ ಪ್ರಚಾರ ಮುಂತಾದ ಕಾರ್ಯಗಳಿಗೆ	10,000 (ದುರಸ್ತಿಯ ಕಾರ್ಯಾಗಾರಕ್ಕಾಗಿ)	20,000	30,000

ಸಿಬ್ಬಂದಿ ಸಹಾಯದ ಅವಧಿ: ಈಗಿನಂತೆ ಸಿಬ್ಬಂದಿಯ ಸಹಾಯವನ್ನು ರಾಜ್ಯ ಸರಕಾರದ ನಿರ್ಣಯದ ಮೇರೆಗೆ 3ರಿಂದ 5 ವರ್ಷಗಳ ಅವಧಿಯಲ್ಲಿ ಕೊಡಬಹುದು. ರಾಜ್ಯದ ಹಾಗೂ ಜಿಲ್ಲಾ ಫೆಡರೇಶನ್ನುಗಳಿಗೆ 3 ವರ್ಷಗಳವರೆಗೆ ಮಾತ್ರ ಸಹಾಯವು ದೊರಕುವುದು. ಆ ಬಳಿಕ ಆ ಸಂಸ್ಥೆಗಳು ತಮ್ಮ ಸಂಪನ್ಮೂಲಗಳಿಂದಲೇ ತಮ್ಮ ಖರ್ಚನ್ನು ನಡೆಸಬೇಕು. ಈ ಬಗ್ಗೆ ಹೆಚ್ಚಿನ ಮಾರ್ಗದರ್ಶನವನ್ನು ಮುಂದೆ ಪರಿಪತ್ರದ ಮೂಲಕ ತಿಳಿಸಲಾಗುವುದು.

ನಿಧಿಗಳನ್ನು ಮೀಸಲಿರಿಸುವುದು: ಮೇಲಿನ ಆರ್ಥಿಕ ಸಹಾಯವು ಸಂಸ್ಥೆಗಳಿಗೆ ಪ್ರಾರಂಭಿಕ ಪ್ರೋತ್ಸಾಹಕ್ಕೆಂದು ಮೂಲಧನವಾಗಿ ದೊರಕುವುದು. ಬೇಸಾಯ ಸಂಘಗಳಿಗೆ ಹೆಚ್ಚಿನ ಹಣಕಾಸಿನ ಸಹಾಯವನ್ನೊದಗಿಸಲು ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ರಾಜ್ಯ ಸರಕಾರಗಳು ಎರಡು ಪದ್ಧತಿಗಳನ್ನು ಅನುಸರಿಸಿದವು. (1) ರಾಜ್ಯ ಸರಕಾರಗಳ ವಿಭಿನ್ನ ಅಭಿವೃದ್ಧಿ ಕಾರ್ಯಗಳ ನಿಧಿಗಳಿಂದ ಬೇಸಾಯ ಸಂಘಗಳಿಗೆ ಆದ್ಯತೆ ಕೊಟ್ಟು ಸಹಾಯವನ್ನೊದಗಿಸುವುದು, (2) ಬೇಸಾಯ ಸಂಘಗಳ ಸಲುವಾಗಿ ಪ್ರತ್ಯೇಕವಾಗಿ ಇಂಥ ನಿಧಿಗಳಲ್ಲಿ ಕೆಲವಂಶ ಹಣವನ್ನು ಮೀಸಲಾಗಿರಿಸುವುದು. ಮೊದಲನೇ ಪದ್ಧತಿಯು ತೃಪ್ತಿಕರವಾದ ಫಲಿತಾಂಶವನ್ನು ಕೊಟ್ಟಿಲ್ಲ. ಆದ್ದರಿಂದ ಚತುರ್ಥ ಪಂಚವಾರ್ಷಿಕ ಯೋಜನೆಯಲ್ಲಿ ಎರಡನೇ ಪದ್ಧತಿಯ ಪ್ರಕಾರ ಕೆಲವಂಶ ನಿಧಿಗಳನ್ನು ಮೀಸಲಾಗಿರಿಸುವುದು ಅಗತ್ಯ. ನೀರಾವರಿ, ಭೂಅಭಿವೃದ್ಧಿ, ಕೋಳಿಯ ಸಾಕಾಣಿಕೆ, ಹೈನುಗಾರಿಕೆ ಮುಂತಾದ ಕಾರ್ಯಗಳಿಗಾಗಿ ಸಹಕಾರಿ ಬೇಸಾಯ ಸಂಘಗಳಿಗೋಸುಗ ಅವುಗಳ ನಿಧಿಗಳಲ್ಲಿ ಕೆಲವಂಶವನ್ನು ಪ್ರತ್ಯೇಕವಾಗಿ ಮೀಸಲಾಗಿರಿಸಬೇಕು. ಅದರಿಂದ ಬೇಸಾಯ ಸಂಘಗಳಿಗೆ ಅವುಗಳ ಪ್ರಗತಿಗಾಗಿ ತಕ್ಕ ಸಹಾಯ ದೊರಕಿದಂತಾಗುವುದು.

ಸಹಕಾರಿ ಬ್ಯಾಂಕುಗಳಿಂದ ಹಣಕಾಸು

ಯೋಜನೆಯ ನಿಧಿಗಳಿಂದ, ಅಭಿವೃದ್ಧಿ ಇಲಾಖೆಗಳಿಂದ ಸಹಾಯವು ದೊರಕುವು

ದಲ್ಲದೆ ಪ್ರತಿವರ್ಷ ನಡೆಯುವ ಬೇಸಾಯದ ಆವಶ್ಯಕತೆಗಳಿಗಾಗಿ ಹಾಗೂ ಕೆಲವು ಸುಧಾರಣೆಯ ಕಾರ್ಯಗಳಿಗಾಗಿ ಸಹಕಾರಿ ಬೇಸಾಯ ಸಂಘಗಳಿಗೆ ಅಲ್ಪಾವಧಿ, ದೀರ್ಘಾವಧಿ ಸಾಲಗಳೂ ಬೇಕಾಗುತ್ತವೆ. ಸಹಕಾರಿ ದೀರ್ಘಾವಧಿ ಸಾಲದ ಬಗ್ಗೆ ಅಖಿಲ ಭಾರತದ ಕೇಂದ್ರ ಸಹಕಾರಿ ಅಭಿವೃದ್ಧಿ ಬ್ಯಾಂಕುಗಳ ಯೂನಿಯನ್ನು ಮಾರ್ಚ್ 1966ರಲ್ಲಿ ತನ್ನ ಸದಸ್ಯರಾದ ಕೇಂದ್ರ ಸಹಕಾರಿ ಅಭಿವೃದ್ಧಿ ಬ್ಯಾಂಕುಗಳಿಗೆ ಒಂದು ಪರಿಪತ್ರವನ್ನು ಹೊರಡಿಸಿತು. ಅದರಲ್ಲಿ ಆ ಬ್ಯಾಂಕುಗಳು ತಮ್ಮ ತಮ್ಮ ರಾಜ್ಯಗಳ ಸಹಕಾರ ಸಂಘಗಳ ರಿಜಿಸ್ಟ್ರಾರರೊಡನೆ ಪರಾಮರ್ಶಿಸಿ ಸಹಕಾರಿ ಬೇಸಾಯ ಸಂಘಗಳಿಗೆ ದೀರ್ಘಾವಧಿ ಸಾಲಗಳನ್ನೊದಗಿಸಲು ಸ್ಥಳಿಕ ಪರಿಸ್ಥಿತಿಗಳಿಗನುಸರಿಸಿ ಸೂಕ್ತ ವಿನಿಮಯಗಳನ್ನು ರಚಿಸಲು ವಿನಂತಿಸಲಾಗಿತ್ತು. ಈವರೆಗೆ ಎಲ್ಲ ಕೇಂದ್ರ ಸಹಕಾರಿ ಅಭಿವೃದ್ಧಿ ಬ್ಯಾಂಕುಗಳು ಈ ಪರಿಪತ್ರದ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರಲು ಸೂಕ್ತಕ್ರಮ ಕೈಕೊಂಡಿರುವುದಾಗಿ ಆಶಿಸಲಾಗುತ್ತದೆ. ಅಲ್ಪಾವಧಿ ಹಾಗೂ ಮಧ್ಯಮಾವಧಿ ಸಹಕಾರಿ ಸಾಲಗಳ ವಿಷಯವಾಗಿ ಮಾರ್ಚ್ 1966ರಲ್ಲಿ ಅಖಿಲ ಭಾರತದ ಸಹಕಾರಿ ಬ್ಯಾಂಕುಗಳ ಫೆಡರೇಶನ್ನು ಈ ಸಮಸ್ಯೆಯನ್ನು ವಿಚಾರಿಸಿತು. ಸಹಕಾರಿ ಬೇಸಾಯ ಸಂಘಗಳನ್ನು, ಸಹಕಾರಿ ಪತ್ತಿನ ಸಂಘಗಳ ಸಮಾನತೆಯ ಆಧಾರದ ಮೇಲೆ ವಿಚಾರಿಸಿ ಬೇಸಾಯ ಸಂಘಗಳಿಗೂ ಅಲ್ಪಾವಧಿ ಹಾಗೂ ಮಧ್ಯಮಾವಧಿ ಸಾಲಗಳನ್ನು ಒದಗಿಸಬೇಕೆಂದೂ ಮತ್ತು ಈ ಬಗ್ಗೆ ಸಹಕಾರಿ ರಾಜ್ಯಮಟ್ಟದ ಬ್ಯಾಂಕುಗಳು, ಬೇಸಾಯ ಸಂಘಗಳ ಎಲ್ಲ ಚಟುವಟಿಕೆಗಳನ್ನೂ ಪ್ರೋತ್ಸಾಹಿಸಲು ಅಗತ್ಯವಾದ ಕ್ರಮಗಳನ್ನು ಕೈಕೊಳ್ಳಬೇಕೆಂದೂ ಅಖಿಲ ಭಾರತ ಫೆಡರೇಶನ್ನು ನಿರ್ಣಯಿಸಿತು. ರಾಜ್ಯ ಸಹಕಾರಿ ಬ್ಯಾಂಕುಗಳು ಸೂಕ್ತ ಕ್ರಮಗಳನ್ನು ಈ ಬಗ್ಗೆ ಕೈಕೊಂಡಿವೆ.

1973 ಸಹಕಾರ ಸಚಿವರ ಸಮ್ಮೇಳನದ ಸಲಹೆಗಳು

ಚತುರ್ಥ ಪಂಚವಾರ್ಷಿಕ ಯೋಜನೆಯ ಘಟ್ಟದಲ್ಲಿ ಮುಂದೆ ಸಹಕಾರಿ ಬೇಸಾಯವನ್ನು ಪ್ರೋತ್ಸಾಹಿಸುವುದನ್ನು ಕುರಿತು 25–1–1973ರಂದು ಹೊಸದಿಲ್ಲಿಯಲ್ಲಿ ಕೂಡಿದ ರಾಜ್ಯ ಸಹಕಾರ ಸಚಿವರ ಸಮ್ಮೇಳನವು ಕೂಲಂಕಷವಾಗಿ ಚರ್ಚಿಸಿ ಕೆಳಗಿನ ಮಹತ್ವದ ಸಲಹೆಗಳನ್ನು ನೀಡಿತು.

(1) ಸದ್ಯಕ್ಕಿರುವ ಸಹಕಾರಿ ಬೇಸಾಯ ಸಂಘಗಳನ್ನು ಬಲಪಡಿಸಲು ಹಾಗೂ ಭದ್ರಪಡಿಸಲು ರಾಜ್ಯ ಸರಕಾರಗಳು ಸಾಕಷ್ಟು ಆರ್ಥಿಕ ಸಹಾಯದ ವ್ಯವಸ್ಥೆ ಮಾಡಬೇಕು.

(2) ಭೂ ಹಿಡುವಳಿಯ ಕಾಯಿದೆಗಳನ್ನು ಕಾರ್ಯಗತ ಮಾಡಿದ್ದರ ಪರಿಣಾಮವಾಗಿ ವಿಶಾಲವಾದ ಸಘನ ಭೂಮಿಯ ಖಂಡಗಳು ಸರಕಾರದ ವಶಕ್ಕೆ ಬಂದಲ್ಲಿ, ಸಹಕಾರಿ ಬೇಸಾಯದ ಯಶಸ್ಸಿಗಾಗಿ ಅನುಕೂಲವಾದ ಪರಿಸ್ಥಿತಿಗಳಿದ್ದಲ್ಲಿ, ಇಂಥ ಹೆಚ್ಚುವರಿ ಭೂಮಿಗಳನ್ನು ಭೂರಹಿತ ಕೃಷಿ ಕಾರ್ಮಿಕರಿಗೆ, ಹರಿಜನರಿಗೆ, ಆದಿವಾಸಿಗಳಿಗೆ

ಮಂಜೂರು ಮಾಡಬೇಕು. ಮತ್ತು ಅವರಿಗೆ ಸಹಕಾರಿ ಬೇಸಾಯ ಸಂಘಗಳನ್ನು ಸಂಘಟಿಸಲು ಪ್ರೋತ್ಸಾಹಿಸಬೇಕು. ಇಂಥ ಬೇಸಾಯ ಸಂಘಗಳಿಗೆ ಎಲ್ಲ ಬಗೆಯ ಸಹಕಾರಿ ಸಾಲಗಳನ್ನೂ, ಸಂಸ್ಥೆಗಳ ಸಾಲಗಳನ್ನೂ, ಕೃಷಿಯ ಸವಲತ್ತುಗಳನ್ನೂ, ನೀರಾವರಿಯ ಸವಲತ್ತುಗಳನ್ನೂ, ತಾಂತ್ರಿಕ ಮಾರ್ಗದರ್ಶನವನ್ನೂ ಮತ್ತು ಬೇರೆ ಎಲ್ಲ ಅಗತ್ಯ ಸಹಾಯ ಸೌಲಭ್ಯಗಳನ್ನೂ ಒದಗಿಸುವ ವ್ಯವಸ್ಥೆಯನ್ನು ರಾಜ್ಯ ಸರಕಾರ ಗಳು ಮಾಡಬೇಕು.

(3) ಏಪ್ರಿಲ್ 1972ರಲ್ಲಿ ನಡೆದ ಚಿಕ್ಕ ಬೇಸಾಯಗಾರರ ಅಭಿವೃದ್ಧಿಯ ಸಂಸ್ಥೆಗಳ, ಹಾಗೂ ಅನಾರ್ಥಿಕ ಬೇಸಾಯಗಾರರ ಮತ್ತು ಕೃಷಿ ಕಾರ್ಮಿಕರ ಅಭಿ ವೃದ್ಧಿಯ ಸಂಸ್ಥೆಗಳ ರಾಷ್ಟ್ರೀಯ ವಿಚಾರಗೋಷ್ಠಿಯ ಶಿಫಾರಸುಗಳ ಪ್ರಕಾರ, ಇಂಥ ಚಿಕ್ಕ ಬೇಸಾಯಗಾರರ ಅಭಿವೃದ್ಧಿಯ ಪ್ರಯೋಗ ಕ್ಷೇತ್ರಗಳಲ್ಲಿ ಭೂರಹಿತ ಕೃಷಿ ಕಾರ್ಮಿಕರ ಸಹಕಾರಿ ಬೇಸಾಯ ಸಂಘಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸಬೇಕು: ಮತ್ತು ಈ ಯೋಜನೆಗಳ ನಿಧಿಗಳಿಂದ ಇಂಥ ಬೇಸಾಯ ಸಂಘಗಳಿಗೆ ಸಹಾಯವನ್ನು ದೊರಕಿಸಬೇಕು. ಈ ಅಭಿವೃದ್ಧಿಯ ಸಂಸ್ಥೆಗಳು ಇಂಥ ಬೇಸಾಯ ಸಂಘಗಳ ಕಾರ್ಯ ಕ್ರಮಗಳಿಗೆ ಬೇಸಾಯದ ಸಲಕರಣೆಗಳನ್ನೂ, ಸಾಲಗಳನ್ನೂ ಒದಗಿಸಬೇಕು. ಈ ಬಗ್ಗೆ ವಿಸ್ತೃತವಾದ ಯೋಜನೆಗಳನ್ನು ತಯಾರಿಸಬೇಕು.

ರಾಜ್ಯ ಸರಕಾರಗಳು ಈ ಶಿಫಾರಸುಗಳನ್ನು ಕೂಲಂಕಷವಾಗಿ ವಿಚಾರಿಸಿರುವ ರೆಂದೂ, ಅವುಗಳನ್ನು ಕಾರ್ಯರೂಪಕ್ಕಿಳಿಸಲು ಸೂಕ್ತಕ್ರಮ ಕೈಕೊಂಡಿರುವರೆಂದೂ ಆಶಿಸಲಾಗುತ್ತದೆ. ಕೆಳಗೆ ವಿವರಿಸಿದ ವಿಶಿಷ್ಟ ಮಾಹಿತಿಯೊಡನೆ ರಾಜ್ಯ ಸರಕಾರಗಳು ಈ ಬಗ್ಗೆ ಕೈಕೊಂಡ ಕ್ರಮಗಳನ್ನು ಕೇಂದ್ರ ಸರಕಾರಕ್ಕೆ ತಿಳಿಸಲು ಪ್ರಾರ್ಥಿಸಲಾಗುತ್ತದೆ.

(1) ಪಂಚಮ ಪಂಚವಾರ್ಷಿಕ ಯೋಜನೆಯಲ್ಲಿ ಸಹಕಾರಿ ಬೇಸಾಯದ ಕಾರ್ಯ ಕ್ರಮದ ಸಲುವಾಗಿ ಮಾಡಲಾದ ಹಣವ್ಯವಸ್ಥೆ.

(2) ಶಿಫಾರಸುಗಳ ಪ್ರಕಾರ ಸಂಘಟಿಸಲ್ಪಟ್ಟ ಹಾಗೂ ಸಹಾಯ ಮಾಡಲ್ಪಟ್ಟ ಬೇಸಾಯ ಸಂಘಗಳ ಸಂಖ್ಯೆ ಮತ್ತು ಬೇರೆ ಬೇರೆ ಕಾರ್ಯಕ್ರಮಗಳ ಸಲುವಾಗಿ ಕೊಟ್ಟ ಆರ್ಥಿಕ ಸಹಾಯದ ವಿವರ.

ಅಧ್ಯಾಯ 6

ಪರಂಪರಾಗತ ಸಹಕಾರಿ ಬೇಸಾಯ

ಭಾರತದ ಪರಿಸ್ಥಿತಿಗಳಿಗೆ ಸಹಕಾರಿ ಬೇಸಾಯವು ಅನುಕೂಲವಾದದ್ದಲ್ಲ ವೆಂಬ ತಪ್ಪು ಗ್ರಹಿಕೆಯೊಂದು ಹಬ್ಬಿದೆ. ಭಾರತದ ಬೇಸಾಯಗಾರರು ಅದನ್ನು ಎಂದಿಗೂ ಸಂತೋಷದಿಂದ ಒಪ್ಪಲಾರರು ಎಂದು ಹೇಳಲಾಗುತ್ತದೆ. ಆದರೆ ಭಾರತದಲ್ಲಿ ಅನೇಕ ಪ್ರದೇಶಗಳಲ್ಲಿ ಪರಂಪರಾಗತವಾಗಿ ಬೇಸಾಯದ ಕೆಲಸಗಳಲ್ಲಿ ಪರಸ್ಪರ(ಮುಯ್ಯದ) ಸಹಾಯವನ್ನು ಮಾಡುತ್ತ ಬಂದಿದ್ದಾರೆ. ಅಲ್ಲದೆ ಸೊಂದಾಯಿಸದೇನೇ ಸಾಮೂಹಿಕ ಬೇಸಾಯವನ್ನೇ ನಡೆಸುತ್ತ ಬಂದಿರುವ ಕೆಲವು ಪದ್ಧತಿಗಳು ಇವೆ. ಅವನ್ನು ಕೆಳಗೆ ವಿವರಿಸಲಾಗಿದೆ:

ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆಯಲ್ಲಿ 'ಘಡ' ಪದ್ಧತಿ

'ಘಡ' ಎಂದರೆ ಗುಂಪು. 'ಘಡ ಪದ್ಧತಿಯ ಬೇಸಾಯ'ವೆಂದರೆ 'ಸಾಮೂಹಿಕ ಬೇಸಾಯ ಪದ್ಧತಿ'. 1850ರಲ್ಲಿ ಪ್ರಕಟಿತವಾದ ಮೇಜರ್ ಗ್ರಾಹಾಮರ ವರದಿಯಲ್ಲಿ ಈ ಪದ್ಧತಿಯ ಬಗ್ಗೆ ವಿವರಿಸಲಾಗಿದೆ. 100 ವರ್ಷಗಳಿಗಿಂತ ಹೆಚ್ಚು ಅವಧಿಯವರೆಗೆ ಈ ಪದ್ಧತಿಯು ಅಸ್ತಿತ್ವದಲ್ಲಿರುವುದು ಕಂಡುಬಂದಿದೆ. ಘಡಗಳ ಸಂಖ್ಯೆಯ ಬಗ್ಗೆ ಹಾಗೂ ಅವು ಸಾಗುಮಾಡಿದ ಕ್ಷೇತ್ರದ ಬಗ್ಗೆ ವಿವರಗಳು ಲಭ್ಯವಿಲ್ಲ. ಈ ಜಿಲ್ಲೆಯಲ್ಲಿರುವ ಕಬ್ಬಿನ ಸಾಗುವಳಿಯ ಕ್ಷೇತ್ರದಲ್ಲಿ $\frac{1}{3}$ರಷ್ಟು ಕ್ಷೇತ್ರವನ್ನು 1000 ಘಡುಗಳು ಸಾಗುಮಾಡಿದ್ದವೆಂದು ಅಂದಾಜು ಮಾಡಲಾಗಿತ್ತು. ರಾಜ್ಯದ ಪಶ್ಚಿಮ ಭಾಗದಲ್ಲಿ ಅಂದರೆ ರಾಧಾನಗರಿ, ಭುದರಗಡ ಮತ್ತು ಕಾಗಲ ತಾಲೂಕುಗಳಲ್ಲಿ ಘಡಸಾಗುವಳಿಯ ಶೇಕಡಾವಾರು ಕ್ಷೇತ್ರವು ಇನ್ನೂ ಹೆಚ್ಚಿಗೆ ಇತ್ತೆಂದು ಕಂಡುಬಂದಿದೆ. ಸಮೀಕ್ಷೆ ಮಾಡಿದ 19 ಗ್ರಾಮಗಳಲ್ಲಿ ಒಟ್ಟು ಕಬ್ಬಿನ ಸಾಗುವಳಿ ಕ್ಷೇತ್ರ 2,486 ಎಕರೆಗಳಲ್ಲಿ 2,343 ಎಕರೆಯ ಸಾಗುವಳಿ ಘಡಪದ್ಧತಿಯಿಂದ ಆಗಿತ್ತು. ಈ ಘಡಗಳಲ್ಲಿ ಪೂರ್ಣ ಸದಸ್ಯರ ಸಂಖ್ಯೆ 743 ಹಾಗೂ ಆಂಶಿಕ ಸದಸ್ಯರ ಸಂಖ್ಯೆ 641 ಇತ್ತು. ಈ ಘಡಗಳು 179 ನೀರಾವರಿಯ ಎಂಜಿನು ಪಂಪುಗಳನ್ನು ಉಪಯೋಗಿಸಿದವು. ಅವುಗಳ ಒಟ್ಟು ಅಶ್ವಶಕ್ತಿ 3,441 ಇತ್ತು.

ಕೊಲ್ಲಾಪುರ ಜಿಲ್ಲೆಯ ಪಶ್ಚಿಮ ಭಾಗಗಳಲ್ಲಿ ಅಲ್ಲಿ ಹರಿಯುತ್ತಿರುವ ನದಿಗಳೇ ನೀರಾವರಿಯ ಮುಖ್ಯ ಸಾಧನಗಳು. ಈ ಹೊಳೆಗಳು ಬಹಳ ಆಳವಾಗಿದೆ. 70–80 ಅಡಿ ಆಳದಿಂದ ನೀರೆತ್ತಿ ಹೊಲಗಳಿಗೆ ನೀರು ಹಾಯಿಸಬೇಕಾಗುತ್ತದೆ. ನೀರಾವರಿಯ ಎಂಜಿನ್ನು-ಪಂಪುಗಳನ್ನು ಬಳಸುವ ಪೂರ್ವದಲ್ಲಿ ಎತ್ತುಗಳಿಂದ ಜಗ್ಗಲ್ಪಟ್ಟ 'ಮೋಟು' (ಕಪ್ಪಲಿ)ಗಳಿಂದ ನೀರನ್ನು ಎತ್ತಲು ಉಪಯೋಗಿಸಲಾಗುತ್ತಿತ್ತು. ಒಂದೇ

ಜೊತೆ ಎತ್ತುಗಳಿಂದ ನೀರನ್ನು ಎತ್ತುವುದು ಸಾಧ್ಯವಿರುತ್ತಿರಲಿಲ್ಲ. ಯಾಕೆಂದರೆ ನೀರನ್ನು ಎತ್ತುವ ಎತ್ತರವು ಅಧಿಕವಾಗಿತ್ತು. ಆದ್ದರಿಂದ ಅಷ್ಟಷ್ಟೇ ಎತ್ತರದ ಪ್ರತ್ಯೇಕವಾಗಿ ಒಂದು ಮೋಟನ್ನು (ಕಪ್ಪಲಿ) ಉಪಯೋಗಿಸಿ. ಹೀಗೆ ಏಕಕಾಲಕ್ಕೆ ಅನೇಕ ಮೋಟುಗಳ ಸಹಾಯದಿಂದ ನೀರನ್ನು ಎತ್ತಿ ಹೊಲಗಳಿಗೆ ಉಪಯೋಗಿಸುವು ದೊಂದೇ ನೀರಾವರಿಯ ಮಾರ್ಗವಾಗಿತ್ತು. 3ರಿಂದ 5 ಮೋಟುಗಳನ್ನು ಸಾಮಾನ್ಯ ವಾಗಿ ಏಕಕಾಲಕ್ಕೆ ಉಪಯೋಗಿಸಲಾಗುತ್ತಿತ್ತು. ಒಬ್ಬ ಸಾಮಾನ್ಯವಾದ ಬೇಸಾಯು ಗಾರನು ಇಷ್ಟು ಮೋಟುಗಳಿಗೆ ಅಗತ್ಯವಿದ್ದ ಎತ್ತುಗಳನ್ನು ಇಡಲು ಅಸಮರ್ಥ ನಾಗಿದ್ದನು. ಆದ್ದರಿಂದ ಈ ಉದ್ದೇಶಕ್ಕಾಗಿ ಅನೇಕ ಬೇಸಾಯಗಾರರು ಒಂದುಗೂಡಿ ಒಂದು ಫಡವನ್ನು ಅಥವಾ ಗುಂಪನ್ನು ರಚಿಸುತ್ತಿದ್ದರು. ಇಂಥ ಬೇಸಾಯಗಾರರು ಕೇವಲ ನೀರಾವರಿಗಾಗಿ ಒಂದುಗೂಡಿ ಸಾಗುವಳಿಯನ್ನು ಪ್ರತ್ಯೇಕವಾಗಿ, ವೈಯಕ್ತಿಕ ವಾಗಿ ನಡೆಸಬಹುದಿತ್ತು. ಆದರೆ ಸರಾಸರಿ ಹಿಡುವಳಿಯು ಬಹಳೇ ಚಿಕ್ಕದಾಗಿರು ತ್ತಿತ್ತು, ಸರಾಸರಿ ಬೇಸಾಯಗಾರನ ವಶದಲ್ಲಿ ಕಬ್ಬಿನ ಸಾಗುವಳಿಯನ್ನು ಲಾಭದಾಯಕ ವಾಗಿ ನಡೆಸುವಷ್ಟು ದೊಡ್ಡ ಹಿಡುವಳಿಯು ಇರುತ್ತಿರಲಿಲ್ಲ. ಅಕ್ಕಪಕ್ಕದ ಇಂಥ ಚಿಕ್ಕ ಹಿಡುವಳಿಗಳನ್ನು ಒಂದುಗೂಡಿಸಿ. ಸಾಗುವಳಿಯನ್ನು ಲಾಭದಾಯಕವಾಗಿ ನಡೆಸಲು ಸಾಮೂಹಿಕ ಬೇಸಾಯವನ್ನು ನಡೆಸುವ ಫಡ ಪದ್ಧತಿಯನ್ನು ಶೋಧಿಸಿದರು.

ಕಬ್ಬಿನ ಸಾಗುವಳಿಗೆ ಸಾಮಾನ್ಯವಾಗಿ ವರ್ಷವೆಲ್ಲ ಬಹಳ ಶ್ರಮವು ಅಗತ್ಯ ವಾಗುತ್ತದೆ. ಪ್ರತಿಯೊಬ್ಬ ಬೇಸಾಯಗಾರನ ಕುಟುಂಬವು ಮೇಲ್ಕು ಕೂಲಿಯ ಆಳು ಗಳನ್ನು ಕೆಲಸಕ್ಕೆ ಹಚ್ಚಬೇಕಾಗುತ್ತದೆ: ಅದಕ್ಕೋಸುಗ ಹೇರಳವಾಗಿ ಬಂಡವಾಳನ್ನು ತೊಡಗಿಸಬೇಕಾಗುತ್ತದೆ ಮತ್ತು ದೈನಂದಿನ ವೆಚ್ಚವನ್ನು ಹೊರಬೇಕಾಗುತ್ತದೆ. ಇನ್ನೊಂದು ಕಡೆಗೆ ಬೇಸಾಯದ ಕೆಲಸಗಳಲ್ಲಿ ತೊಡಗಿರುವ ಎಲ್ಲ ಬೇಸಾಯಗಾರರೂ ಒಂದುಗೂಡಿ ಪ್ರತಿಯೊಂದು ಹೊಲದಲ್ಲಿ ದುಡಿದರೆ, ಬಹಳ ಕಡಮೆ ಹೊರಗಿನ ಆಳುಗಳನ್ನು ಉಪಯೋಗಿಸಿ. ತಮ್ಮದೇ ಶ್ರಮಶಕ್ತಿಯಿಂದ ಎಲ್ಲ ಹೊಲಗಳ ಕೆಲಸ ಗಳನ್ನು ಲಾಭದಾಯಕವಾಗಿ, ಸಕಾಲದಲ್ಲಿ ಮಾಡಿ ಮುಗಿಸಬಲ್ಲರು. ಹೀಗೆ ಕಬ್ಬಿನ ಸಾಗುವಳಿಯ ಫಡ ಪದ್ಧತಿಯ ಸಾಮೂಹಿಕ ಕೃಷಿಯ ವಿಕಾಸಕ್ಕೆ ಕೆಳಗೆ ಕಾಣಿಸಿದ ಮೂರು ಪರಿಸ್ಥಿತಿಗಳು ಸಹಾಯಕವಾದವು: (1) ಬಹಳಷ್ಟು ಎತ್ತಿನ ಶಕ್ತಿಯ ಅವಶ್ಯಕತೆ, (2) ಲಾಭದಾಯಕವಾದ ಕಬ್ಬಿನ ಸಾಗುವಳಿಗಾಗಿ ಸಾಕಷ್ಟು ದೊಡ್ಡ ಭೂಮಿಯ ಹಿಡುವಳಿಯ ಅವಶ್ಯಕತೆ. (3) ಅದಕ್ಕಾಗಿಯೇ ಸಾಕಷ್ಟು ಶ್ರಮಶಕ್ತಿಯ ಅವಶ್ಯಕತೆ. ಈ ಮೂರೂ ಪರಿಸ್ಥಿತಿಗಳನ್ನು ಒಂದುಗೂಡಿಸಿದಾಗ್ಯೂ ಕಬ್ಬಿನ ಸಾಮೂ ಹಿಕ ಸಾಗುವಳಿಯು ಸಾಧ್ಯವಾಗದೇ ಹೋಗಬಹುದಿತ್ತು. ಮತ್ತೊಂದು ಮಹತ್ವದ ಪರಿಸ್ಥಿತಿಯು ಕಬ್ಬಿನ ಸಾಗುವಳಿಗಾಗಿ ಹೇರಳವಾಗಿ ಹಣದ ಅವಶ್ಯಕತೆ ಇದ್ದುದು, ಈ ಹಣವನ್ನು ಕೊಲ್ಲಾಪುರದ ದಲಾಲರು ಒದಗಿಸುತ್ತಿದ್ದರು. ವೈಯಕ್ತಿಕವಾಗಿ ಚಿಕ್ಕ ಅಥವಾ ಮಧ್ಯಮ ತರಗತಿಯ ಬೇಸಾಯಗಾರರು ದಲಾಲರ ಬಳಿ ಹೋಗುವುದು ಸಾಧ್ಯವಿರಲಿಲ್ಲ. ಫಡ ಪದ್ಧತಿಯಾದ ಬಳಿಕ ಸಾಕಷ್ಟು ಪತ್ತು ಉಳ್ಳ ಫಡದ ನಾಯಕ

ನಿಗೆ ದಲಾಲನು ಸಾಲವನ್ನು ಕೊಡುತ್ತಿದ್ದನು. ಫಡಕ್ಕೆ ಸೇರಿದ ಎಲ್ಲ ಸಾಲಗಳಿಗೂ ನಾಯಕನೇ ಹೊಣೆಗಾರನಾಗಿರುತ್ತಿದ್ದನು.

ಕಳೆದ ಕೆಲವು ವರ್ಷಗಳಲ್ಲಿ ಕಬ್ಬಿನ ಸಾಗುವಳಿಯಲ್ಲಿ ಈ ಪ್ರದೇಶದಲ್ಲಿ ಸಾಕಷ್ಟು ಪರಿವರ್ತನಗಳಾಗಿವೆ. ಎತ್ತುಗಳಿಂದ ಜಗ್ಗಲ್ಪಟ್ಟ ಮೋಟುಗಳ ಸ್ಥಳದಲ್ಲಿ ಈಗ ನೀರೆತ್ತಲು ನೀರಾವರಿಯ ಎಂಜಿನ್ನು ಪಂಪುಗಳ ಪ್ರಯೋಗ ನಡೆದಿದೆ. ಬೆಲ್ಲವನ್ನು ತಯಾರಿಸುವ ಕ್ರಿಯೆಯಲ್ಲೂ ಸಾಕಷ್ಟು ಸುಧಾರಣೆ ಆಗಿದೆ. ಹಳೆಯ ಕಬ್ಬಿನ ಬೀಜದ ಬದಲು ಕಿ.ಓ. 419ರಂಥ ಹೊಸ ಜಾತಿಯ ಕಬ್ಬಿನ ಬೀಜವನ್ನು ಉಪಯೋಗಿಸುವುದು ಸಾಧ್ಯವಾಗಿದೆ. ಇಷ್ಟಾದರೂ ಫಡ ಪದ್ಧತಿಯು ಮುಂದುವರಿದಿದೆ.

ಫಡದ ಕಾರ್ಯಪದ್ಧತಿ

(i) ಶ್ರಮಶಕ್ತಿಯನ್ನು ಒಂದುಗೂಡಿಸುವುದು ಹಾಗೂ ಸದಸ್ಯತ್ವ: ಫಡದಲ್ಲಿ ಒಂದುಗೂಡುವ ಪ್ರತಿಯೊಬ್ಬ ಸದಸ್ಯನೂ ಅಗತ್ಯವಿದ್ದಷ್ಟು ಶ್ರಮಶಕ್ತಿಯನ್ನು, ಎತ್ತುಗಳನ್ನು ಒದಗಿಸಬೇಕಾಗುತ್ತದೆ. ಇದೊಂದು ಅವನ ಮಹತ್ವದ ಹೊಣೆಗಾರಿಕೆ. ಅವನು ಭೂಮಿಯನ್ನು ಫಡದಲ್ಲಿ ಸೇರಿಸುವ ಕಡ್ಡಾಯವಿಲ್ಲ, ಶೇರುಧನವನ್ನು ಅವನು ಕೊಡುವುದು ಅಗತ್ಯವಿಲ್ಲ. ಕೆಲವು ಸಂದರ್ಭಗಳಲ್ಲಿ ಫಡದ ಬಳಿ ಸಾಮಾನ್ಯ ನಿಧಿಗಳ ಸಂಗ್ರಹವಿರುತ್ತದೆ. ಅದರಿಂದ ದೈನಂದಿನ ವೆಚ್ಚಗಳನ್ನು ವಹಿಸಲಾಗುತ್ತದೆ. ಇಂಥ ನಿಧಿ ಸಂಗ್ರಹಕ್ಕೆ ಮಾತ್ರ ಪ್ರತಿಯೊಬ್ಬ ಸದಸ್ಯನೂ ಸಮನಾಗಿ ತನ್ನ ವಂತಿಗೆಯನ್ನು ಸಲ್ಲಿಸಬೇಕಾಗುತ್ತದೆ.

ಸಾಮಾನ್ಯವಾಗಿ ಫಡ ಸಾಗುಮಾಡುತ್ತಿರುವ ಭೂಮಿಯಲ್ಲಿ ಸದಸ್ಯನು ತಾನೇ ದುಡಿಯಬೇಕಾಗುತ್ತದೆ. ಕೆಲಸಕ್ಕೆ ಹೆಚ್ಚು ದುಡಿಮೆಗಾರರು ಅಗತ್ಯಬಿದ್ದಲ್ಲಿ ತನ್ನ ಪರಿವಾರದ ಇನ್ನೊಬ್ಬ ಸದಸ್ಯನನ್ನಾಗಲಿ ಅಥವಾ ಹೊರಗಿನ ಕೂಲಿಯ ಆಳನ್ನಾಗಲಿ ಅವನು ಕೆಲಸಕ್ಕೆ ಹಚ್ಚಬಹುದು. ಕರಾರಿನ ಪ್ರಕಾರ ಅಗತ್ಯ ಬಿದ್ದಾಗ ಸದಸ್ಯರು ಎತ್ತುಗಳನ್ನು ಒದಗಿಸುತ್ತಾರೆ. ಕೆಲವು ಕೆಲಸಗಳಿಗೆ, ಕಳೆ, ಕಸ, ಮುಂತಾದುವುಗಳಿಗೆ, ಬಹಳ ಶ್ರಮ ಹಿಡಿಯುತ್ತದೆ. ಆಗ ಫಡ ಸಾಮಾನ್ಯ ನಿಧಿಯಿಂದ ಕೂಲಿ ಕೊಟ್ಟು ಹೊರಗಿನ ಕೂಲಿಯ ಆಳುಗಳನ್ನು ಕೆಲಸಕ್ಕೆ ಹಚ್ಚುತ್ತದೆ.

ಫಡದಲ್ಲಿ ಆಂಶಿಕ ಸದಸ್ಯರನ್ನೂ ಸೇರಿಸಿಕೊಳ್ಳಲಾಗುತ್ತದೆ. ½ದ ಸದಸ್ಯ, ¼ದ ಸದಸ್ಯ ಈ ರೀತಿಯಾಗಿ ಸದಸ್ಯರನ್ನು ಸೇರಿಸಿಕೊಳ್ಳಲಾಗುತ್ತದೆ. ನಾಲ್ವರು ¼ ಸದಸ್ಯರು ಸೇರಿ ಒಂದು ಸದಸ್ಯತ್ವ ಪಡೆಯುತ್ತಾರೆ. ಇಂಥ ಸಂದರ್ಭದಲ್ಲಿ ಪ್ರತಿಯೊಬ್ಬ ಆಂಶಿಕ ಸದಸ್ಯನೂ ಒಬ್ಬ ಪೂರ್ಣ ಸದಸ್ಯನು ಕೊಟ್ಟ ಶ್ರಮಶಕ್ತಿ, ಹಾಗೂ ಎತ್ತಿನ ಶಕ್ತಿಯ ¼ ಭಾಗವನ್ನು ಕೊಡಬೇಕಾಗುತ್ತದೆ. ನಿವ್ವಳ ಉತ್ಪತ್ತಿಯನ್ನು ಆಯಾ ಸದಸ್ಯರು ಹಾಕಿದ ಶ್ರಮಶಕ್ತಿಯ ಪ್ರಕಾರ ಹಂಚಲಾಗುತ್ತದೆ.

(ii) **ಭೂಮಿ:** ವಾಡಿಕೆಯಾಗಿ ಒಂದುಗೂಡುವ ಸದಸ್ಯರು ಕೆಲವು ಭೂಮಿಯನ್ನು ಒಂದುಗೂಡಿಸುತ್ತಾರೆ. ಉಳಿದ ಭೂಮಿಯನ್ನು ಬಿನ್ ಸದಸ್ಯರಿಂದ ಲಾವಣಿ(ಗುತ್ತಿಗೆ)ಯ ಕರಾರಿನ ಮೇಲೆ ತೆಗೆದುಕೊಳ್ಳಲಾಗುತ್ತದೆ. ಎಲ್ಲ ಭೂಮಿಯನ್ನೂ ಬಿನ್ ಸದಸ್ಯರಿಂದ ಲಾವಣಿಯ ಮೇಲೆ ತೆಗೆದುಕೊಂಡು ಸಾಮೂಹಿಕವಾಗಿ ಸಾಗುಮಾಡುತ್ತಿರುವ ಫಡಗಳಿವೆ. ಯಾವಾಗಲೂ ಫಡದ ಹಿಡುವಳಿಯೆಲ್ಲ ಒಂದೇ ಖಂಡದಲ್ಲಿರುವುದಿಲ್ಲ, ಅದು 3–4 ಖಂಡಗಳಲ್ಲಿರುತ್ತದೆ. ಹೀಗೆ ಲಾವಣಿಯಿಂದ ತೆಗೆದುಕೊಂಡ ಭೂಮಿಗಳ ಸಲುವಾಗಿ ಒಟ್ಟು ಉತ್ಪತ್ತಿಯ $\frac{1}{4}$ ಅಥವಾ $\frac{1}{5}$ರಷ್ಟು ಭಾಗವನ್ನು ಲಾವಣಿಯಾಗಿ ಭೂಮಾಲಿಕರಿಗೆ ಕೊಡಲಾಗುತ್ತದೆ. ಬೆಲ್ಲವನ್ನು ತಯಾರಿಸುವಾಗ ಬೇರೆ ಬೇರೆ ಹೊಲಗಳ ಕಬ್ಬನ್ನು ಪ್ರತ್ಯೇಕವಾಗಿ ಗಾಣ ಆಡಿಸಲಾಗುತ್ತದೆ, ಅದರಿಂದ ಆಯಾ ಭೂಮಿಗಳ ಒಡೆಯರಿಗೆ ಅವರ ಭೂಮಿಯ ಲಾವಣಿಯನ್ನು ಕೊಡಲು ಅನುಕೂಲವಾಗುತ್ತದೆ. ಗ್ರಾಮದ ಹಕ್ಕುಬಾಧ್ಯತೆಗಳ ರಿಜಿಸ್ಟರುಗಳಲ್ಲಿ ಫಡದ ನಾಯಕನ ಹೆಸರಿನಲ್ಲಿಯೇ ಲಾವಣಿಯಾಗಿ ಪಡೆದ ಭೂಮಿಗಳನ್ನು ದಾಖಲು ಮಾಡಿಕೊಳ್ಳಬೇಕಾಗುತ್ತದೆ.

(iii) **ಎಂಜಿನ್ನು:** ನೀರನ್ನೆತ್ತುವ ಎಂಜಿನ್ನುಪಂಪುಗಳನ್ನು ಫಡ ಸ್ವಂತದ್ದನ್ನಾಗಿ ಪಡೆದಿರಬಹುದು ಅಥವಾ ಪಡೆದಿರಲಿಕ್ಕಿಲ್ಲ. ಕೆಲವು ಸಂದರ್ಭಗಳಲ್ಲಿ ಎಂಜಿನ್ನು-ಪಂಪನ್ನೂ ಫಡ ಲಾವಣಿಯಾಗಿ ತೆಗೆದುಕೊಳ್ಳಬಹುದು. ಮತ್ತು ಆಗ ಒಟ್ಟು ಉತ್ಪತ್ತಿಯ $\frac{1}{5}$ ಭಾಗವನ್ನು ಎಂಜಿನ್ನಿನ ಪ್ರತಿಫಲವಾಗಿ ಅದರ ಒಡೆಯನಿಗೆ ಕೊಡಬಹುದು.

(iv) **ಫಡದ ನಾಯಕ:** ಫಡದ ನಾಯಕನು ಪ್ರಗತಿಶೀಲ ಬೇಸಾಯಗಾರನಾಗಿರುತ್ತಾನೆ ಅಥವಾ ದಲಾಲರೊಡನೆ ಒಳ್ಳೇ ಸಂಪರ್ಕ ಇಟ್ಟುಕೊಂಡಿರುತ್ತಾನೆ. ಅವನು ಕೇವಲ 'ಸಂಪರ್ಕದ ನಾಯಕ'ನಾಗಿದ್ದರೆ ದೈನಂದಿನದ ಬೇಸಾಯದ ಕೆಲಸಗಳ ಮೇಲ್ವಿಚಾರಣೆ ಮಾಡಲು ಮತ್ತೊಬ್ಬ ಸದಸ್ಯನಿರುತ್ತಾನೆ. ಇಂಥ ನಾಯಕನ ಮುಖ್ಯ ಕರ್ತವ್ಯಗಳು ಕೆಳಗಿನಂತಿವೆ :

(ಅ) ಭೂಮಿಯನ್ನು ದೊರಕಿಸುವ ವ್ಯವಸ್ಥೆ.
(ಆ) ದಲಾಲರಿಂದ ಸಕಾಲದಲ್ಲಿ ಸಾಕಷ್ಟು ಹಣ ದೊರಕಿಸುವುದು.
(ಇ) ದಲಾಲರಿಂದ ಪೂರ್ಣ ಹಣದ ನೆರವು ಸಿಗದಿದ್ದರೆ ಬೇರೆ ಮೂಲಗಳಿಂದ ಹಣವನ್ನು ದೊರಕಿಸುವುದು.
(ಈ) ಸಾಲ, ವೆಚ್ಚಗಳ ಲೆಕ್ಕವನ್ನಿಡುವುದು.
(ಉ) ಸದಸ್ಯರಲ್ಲಿ ಒಗ್ಗಟ್ಟು, ತೃಪ್ತಿಯನ್ನು ಬೆಳೆಸುವುದು.

ಈ ಸಂಸ್ಥೆಯಲ್ಲಿ ಯಾವುದೇ ಕಾಯಿದೆಯ ಸ್ವರೂಪವಿರದಿದ್ದರೂ, ಅನೌಪಚಾರಿಕವಾಗಿ ನಾಯಕನ ಹಾಗೂ ಸದಸ್ಯರ ನಡುವಿನ ಸಂಬಂಧಗಳನ್ನು ನಿರ್ಧರಿಸಲಾಗುತ್ತದೆ.

ನಾಯಕನಲ್ಲಿ ಸದಸ್ಯರ ವಿಶ್ವಾಸವಿದ್ದರೆ ಅನೇಕ ವರ್ಷಗಳವರೆಗೆ ಫಡದ ಅಸ್ತಿತ್ವ ಉಳಿಯುತ್ತದೆ.

ಫಡದ ನಾಯಕನಿಗೆ ಯಾವುದೇ ಬಗೆಯ ವಿಶೇಷ ಪ್ರತಿಫಲವಾಗಲೀ, ಲಾಭದ ಪಾಲಾಗಲೀ ದೊರಕುವುದಿಲ್ಲ. ಅವನು ಎಲ್ಲ ಸದಸ್ಯರೊಡನೆ ಸರಿಸಮಾನನು. ಅವನು ಬೇರೆ ವ್ಯವಸ್ಥೆ ಅಥವಾ ಬೇರೆ ಮಹತ್ವದ ಕೆಲಸದಲ್ಲಿ ತೊಡಗಿರದಿದ್ದರೆ, ಅವನು ಬೇರೆ ಸದಸ್ಯರೊಡನೆ ಬೇಸಾಯ ಕೆಲಸಗಳಲ್ಲಿ ಸಮನಾಗಿ ಭಾಗವಹಿಸಬೇಕಾಗುತ್ತದೆ.

(v) **ಹಣಕಾಸು:** ಫಡದ ನಾಯಕನು ಆಸ್ತಿಪಾಸ್ತಿಗಳಾಗುವಂಥ ಸುಧಾರಣೆಗಳಿಗಾಗಿ ಅಥವಾ ದೈನಂದಿನ ಬೇಸಾಯದ ವೆಚ್ಚಕ್ಕಾಗಿ ದಲಾಲರಿಂದ ಹಣವನ್ನು ತರುತ್ತಾನೆ. ಕೆಲವು ಸಂದರ್ಭಗಳಲ್ಲಿ ಸದಸ್ಯರ ವೈಯಕ್ತಿಕ ಮನೆತನದ ಅವಶ್ಯಕತೆಗಳಿಗಾಗಿ ಸಹ ಅವನು ದಲಾಲರಿಂದ ಹಣವನ್ನು ತಂದು ಒದಗಿಸುತ್ತಾನೆ.

ವಿಶೇಷ ಕಾರಣ ಅಥವಾ ಆಧಾರವಿಲ್ಲದೆ ಫಡಕ್ಕೆ ಹಣವನ್ನೆಲ್ಲ ಕೊಡಲಾಗುತ್ತದೆ. ಫಡ ತನ್ನ ಮಾಲನ್ನೆಲ್ಲ ಸಾಲಕೊಟ್ಟ ದಲಾಲನಿಗೇ ಮಾರಬೇಕೆಂದು ಮಾತ್ರ ಕರಾರು ಇರುತ್ತದೆ.

(vi) **ಲಾಭವಿತರಣೆ:** ಮಾಲನ್ನು ಮಾರಾಟ ಮಾಡಿಬಂದ ಹಣದಲ್ಲಿ ದಲಾಲನು ತನ್ನ ಸಾಲದ ರಕಮನ್ನು, ಬಡ್ಡಿಯನ್ನು, ದಲಾಲಿಯನ್ನು, ತೆರಿಗೆ ಮುಂತಾದುವನ್ನು ಮುರಿದುಕೊಂಡು ಉಳಿದ ರಕಮನ್ನು ಫಡದ ನಾಯಕನಿಗೆ ಕೊಡುತ್ತಾನೆ. ನಾಯಕನು ಅದರಲ್ಲಿ ಲಾವಣಿ, ಕರ, ಕಂದಾಯ ಹಾಗೂ ಬೇರೆ ವೆಚ್ಚಗಳನ್ನು ವಜಾ ತೆಗೆದು ಉಳಿದ ನಿವ್ವಳ ಆದಾಯವನ್ನು ಸಮನಾಗಿ ಸದಸ್ಯರಲ್ಲಿ ಹಂಚುತ್ತಾನೆ. ಯಾವುದೇ ವರ್ಷದಲ್ಲಿ ಸಾಕಷ್ಟು ಆದಾಯ ಬರದಿದ್ದರೆ ಸಾಗುವಳಿಯ ವೆಚ್ಚಕ್ಕಾಗಿ ಫಡ ದಲಾಲರಿಂದ ಮತ್ತೆ ಸಾಲವನ್ನು ತರುತ್ತದೆ. ಆದಾಯವು ಸಾಕಷ್ಟಿದ್ದರೆ ಸಾಗುವಳಿ ವೆಚ್ಚಕ್ಕಾಗಿ ಕೆಲವಂಶ ಬಂಡವಾಳನ್ನು ಸದಸ್ಯರೇ ಕೊಡುತ್ತಾರೆ. ಅಷ್ಟು ಹಣವನ್ನು ದಲಾಲರಿಂದ ತರುವುದು ತಪ್ಪುತ್ತದೆ. ಸುಧಾರಣೆಗಳಿಗಾಗಿ ಸಹಸದಸ್ಯರು ಹಣದ ವಂತಿಗೆ ಕೊಡುತ್ತಾರೆ. ಕೆಲವು ಸಂದರ್ಭಗಳಲ್ಲಿ ವಂತಿಗೆಯಿಂದ ಬಂಡವಾಳದ ಸಂಗ್ರಹ ಮಾಡಲಾಗುತ್ತದೆ.

(vii) **ಫಡದಿಂದ ಹೊರಬೀಳುವುದು:** ಫಡದಲ್ಲಿ ಸದಸ್ಯನು ಕೇವಲ ತನ್ನ ಶ್ರಮವನ್ನು ಹಾಗೂ ಎತ್ತಿನ ಶಕ್ತಿಯನ್ನು ಕೂಡಿಸುತ್ತಾನೆ. ಆದ್ದರಿಂದ ಫಡದ ಸದಸ್ಯತ್ವದ ತ್ಯಾಗವು ತುಲನಾತ್ಮಕವಾಗಿ ಸುಲಭ. ಬೇಕಾದಾಗ್ಗೆ ಸದಸ್ಯನು ಫಡವನ್ನು ಬಿಡಬಹುದು. ಆದರೆ ವಾಡಿಕೆಯಾಗಿ ಅವನು ವರ್ಷದ ಮಧ್ಯದಲ್ಲಿಯೇ ಹಾಗೆ ಮಾಡದೆ ಸುಗ್ಗಿಯ ನಂತರ ಅದನ್ನು ಬಿಡುತ್ತಾನೆ. ಏಕೆಂದರೆ ಸುಗ್ಗಿ ಮುಗಿದ ಬಳಿಕವೇ ಎಲ್ಲ ಕೊಡಕೊಳ್ಳುವಿಕೆಗಳ ಲೆಕ್ಕಗಳನ್ನು ಮುಗಿಸಬೇಕಾಗುತ್ತದೆ. ಸದಸ್ಯತ್ವದ

ತ್ಯಾಗದ ಸಮಯದಲ್ಲಿ ಫಡದಲ್ಲಿ ಸಂಗ್ರಹಿತವಾದ ಎಂಜಿನ್ನು, ಪಂಪು, ಗಾಣ ಮುಂತಾದ ಆಸ್ತಿಗಳಲ್ಲಿ ನ್ಯಾಯವಾಗಿ ಇರುವ ಅವನ ಪಾಲನ್ನು ಅವನಿಗೆ ಕೊಡಲಾಗುತ್ತದೆ. ಸಾಲಗಳಿದ್ದರೆ ಸದಸ್ಯನು ಅವುಗಳ ನ್ಯಾಯವಾದ ಪಾಲನ್ನೂ ವಹಿಸಿಕೊಳ್ಳುತ್ತಾನೆ. ಲಿಖಿತ ಕರಾರುಪತ್ರಗಳಿರದಿದ್ದರೂ, ಪ್ರಚಲಿತ ರೂಢಿಗಳ ಆಧಾರದ ಮೇಲೆ ಮತ್ತು ನೈತಿಕ ಬೆಂಬಲದಿಂದ ಮೇಲ್ಕಾಣಿಸಿದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆ. ಅವಕ್ಕೆ ಕಾಯಿದೆಯ ಬೆಂಬಲವಿರುವುದಿಲ್ಲ.

ಹೀಗೆ ಫಡ ಪದ್ಧತಿಯು ವಾಸ್ತವಿಕ ಸಹಕಾರಿ ಸಾಮೂಹಿಕ ಕೃಷಿ ಪದ್ಧತಿಯಾಗಿದೆ. ಹಲವು ಫಡುಗಳಲ್ಲಿ ದಲಾಲರು ಸೇರಿದ ಬಳಿಕ ಅಥವಾ ಫಡದ ನಾಯಕರೇ. ತಮ್ಮವೇ ದಲಾಲಿ ಅಂಗಡಿಗಳನ್ನು ಪ್ರಾರಂಭಿಸಿದ ಬಳಿಕ, ಅವರು 'ಪಾಲುಗೊಳ್ಳದ ಪಾಲುಗಾರರು' (ಸ್ಲೀಪಿಂಗ್ ಪಾರ್ಟ್‌ನರ್ಸ್). ಆದ್ದರಿಂದ ಇಂಥ ಫಡಗಳಲ್ಲಿ ಅವಾಂಛನೀಯ ಸಂಗತಿಗಳು ಬೆಳೆದಿವೆ. ಕೆಲವರು ಎಂಜಿನ್ ಮಾಲಿಕರು ಫಡಗಳ ನಾಯಕರಾಗಿದ್ದಾರೆ. ಇಂಥ ಫಡುಗಳಲ್ಲಿ ಸದಸ್ಯರು ತಮಗೆ ನ್ಯಾಯವಾದ ಪಾಲು ದೊರಕುತ್ತಿಲ್ಲವೆಂದೂ, ದಲಾಲರು ಅವರನ್ನು ಸರಿಯಾಗಿ ನಡೆಸಿಕೊಳ್ಳುತ್ತಿಲ್ಲವೆಂದೂ ದೂರು ಇದೆ.

ಫಡುಗಳು ವಾಸ್ತವಿಕ ಸಹಕಾರಿ ಬೇಸಾಯ ಸಂಸ್ಥೆಗಳಾಗಿದ್ದರೂ. ಅವು ತಮ್ಮ ಸ್ವಂತ ಭೂಮಿಯ ಆಧಾರ ಅಥವಾ ಕಾರಣ ಕೊಡುವ ಸ್ಥಿತಿಯಲ್ಲಿರಲಿಲ್ಲವಾದ್ದರಿಂದ. ಅವಕ್ಕೆ 1951ರವರೆಗೆ ಸಹಕಾರಿ ಬ್ಯಾಂಕುಗಳು ಸಾಲವನ್ನು ಕೊಡುತ್ತಿರಲಿಲ್ಲ. ಕೊಲ್ಲಾಪುರ ಸಂಸ್ಥಾನವು ಮುಂಬಯಿ ರಾಜ್ಯದಲ್ಲಿ ವಿಲೀನವಾದ ಬಳಿಕ ರಾಜ್ಯಮಟ್ಟದ ಸಹಕಾರಿ ಬ್ಯಾಂಕು ಫಡುಗಳಿಗೆ ಸಾಲಗಳನ್ನು ಒದಗಿಸುವ ಧೋರಣೆಯನ್ನು ಕೈಕೊಂಡಿತು. 1952–53ರಲ್ಲಿ 1.5 ಲಕ್ಷ ರೂಪಾಯಿಯಿಂದ ಅದರ ಸಾಲಗಳು 1956–57ರಲ್ಲಿ 14 ಲಕ್ಷ ರೂಪಾಯಿಗಳವರೆಗೆ ಏರಿದವು.

ಆಂಧ್ರಪ್ರದೇಶದಲ್ಲಿ ಪರಂಪರಾಗತ ಸಾಮೂಹಿಕ ಬೇಸಾಯ ಪದ್ಧತಿಗಳು

1. ಗೂಟಿ ತಾಲೂಕಿನಲ್ಲಿ ಪುಡ್ಡವಾಡೂರ ಗ್ರಾಮದಲ್ಲಿ ದಿಗುವ ನಾಲೆಯಲ್ಲಿ 'ಗೊಂತಿ' ಕಾರ್ಯ

ಈ ನಾಲೆಯ ಕೆಳಗೆ ಇರುವ 35 ಎಕರೆ ಭೂಮಿಯಲ್ಲಿ 'ಗೊಂತಿ' ಬೇಸಾಯವು (ಸಾಮೂಹಿಕ ಬೇಸಾಯವು) ನಡೆಯುತ್ತ ಬಂದಿದೆ. ದಿಗುವ ನಾಲೆಯು(ಕಾಲುವೆ) ಸರಕಾರಿ ನೀರಾವರಿಯ ಒಂದು ಚಿಕ್ಕ ಕಾಲುವೆ. ಅದರ ಕಾರ್ಯಕ್ಷೇತ್ರ ಗೂಟಿಯ ಕೆರೆಯ ವಿಸ್ತೃತ ಅಂಗಳದಲ್ಲಿ ಇದೆ. ಈ ಗೊಂತಿಯ ಅಳವಿನಲ್ಲಿರುವ ಭೂಮಿಯೆಲ್ಲವೂ ಒಂದೇ ಹಾಸಿನಲ್ಲಿದೆ. ಹೊಲಗಳನ್ನು ಬೇರ್ಪಡಿಸುವ ಒಡ್ಡುಗಳು ಅದರಲ್ಲಿಲ್ಲ. ಕೆಲವು

ಸಂದರ್ಭಗಳಲ್ಲಿ ಅಳತೆಯ ಕಲ್ಲುಗಳು ಸಾಗಾದ ಭೂಮಿಯ ಮಧ್ಯದಲ್ಲಿಯೇ ಇವೆ. ಸಾಗುವಳಿಗೆ, ಬಿತ್ತನೆಗೆ, ನೀರಾವರಿಗೆ ಅನುಕೂಲವಾಗುವ ರೀತಿಯಲ್ಲಿ ಇಡಿಯ ಭೂಮಿಯ ಭಾಗಗಳನ್ನು ಮಾಡಲಾಗಿದೆ. ಉಳುಮೆ, ಗೊಬ್ಬರ ಹಾಕುವುದು, ಬಿತ್ತನೆ, ಕಳೆ, ರಾಶಿ ಮುಂತಾದ ಎಲ್ಲ ಬೇಸಾಯದ ಕೆಲಸಗಳಿಗೋಸುಗ 35 ಎಕರೆ 10 ಗುಂಟೆಯ ಇಡಿಯ ಭೂಮಿಯನ್ನು ಒಂದೇ ಹೊಲವೆಂದು ಎಣಿಸಲಾಗುತ್ತದೆ.

'ಗೊಂತಿಕಾಡು' ಎಂಬ ಗ್ರಾಮದ ಗೊಂತಿಯ ನಾಯಕನು ಗೊಂತಿಯ ಸಾಮೂಹಿಕ ಬೇಸಾಯದ ಮೇಲ್ವಿಚಾರಣೆ ಮಾಡುತ್ತಾನೆ. ಸಂಘದ ಸಾಮೂಹಿಕ ಬೇಸಾಯಗಾರನು ಸುಧಾರಣೆಯ ಕೆಲಸಕ್ಕೆ ಅಥವಾ ಬೇಸಾಯದ ಕೆಲಸಕ್ಕೆ ಬರಲು ತಪ್ಪಿಸಿದಲ್ಲಿ ಗೊಂತಿಕಾಡು ತಪ್ಪಿತಸ್ಥ ಬೇಸಾಯಗಾರನ ಮೇಲೆ 'ಕುಂಟುಸ' ಎಂದರೆ ದಂಡವನ್ನು ಹಾಕುತ್ತಾನೆ. ಒಂದು ದಿವಸದ ಪೂರ್ಣ ಗೈರು ಹಾಜರಿಯ ಸಲುವಾಗಿ ದಿನಾಲು 2 ರೂಪಾಯಿಯ ದಂಡವನ್ನು ಹಾಕಲಾಗುತ್ತದೆ. ಗೈರುಹಾಜರಿಯು ಹೆಚ್ಚುಕಡಮೆ ಆದಂತೆ ದಂಡವು ಸಹ ಹೆಚ್ಚುಕಡಮೆ ಆಗುತ್ತದೆ. ಈ ದಂಡವನ್ನು ಕೂಡಲೇ ಕೊಡಬೇಕಾಗುತ್ತದೆ. ತಪ್ಪಿದರೆ ಸುಗ್ಗಿಯ ಕಾಲಕ್ಕೆ ಅಥವಾ ಕಾಳನ್ನು ಹಂಚುವಾಗ ಅದನ್ನು ವಸೂಲು ಮಾಡಲಾಗುತ್ತದೆ.

35 ಎಕರೆ ಕ್ಷೇತ್ರವನ್ನು 44 ಪಾಲುಗಳಲ್ಲಿ ಹಂಚಲಾಗಿದೆ; ಒಂದು ಪಾಲು ಎಂದರೆ ಒಬ್ಬ ದುಡಿಯುವ ಆಳು ಹಾಗೂ ಒಂದು ಕೋಣದ ಸರಿಸಮಾನ. ಒಬ್ಬ ಸದಸ್ಯನು ಒಂದು ಕೋಣದೊಡನೆ 8 ದಿವಸ ದುಡಿದರೆ ಅವನಿಗೆ ಒಂದು ಪಾಲು ದೊರಕುತ್ತದೆ. ಅವನು ನಾಲ್ಕೇ ದಿವಸ ದುಡಿದರೆ 'ಅರಪಾಲು' ಎಂದೂ, ಎರಡೇ ದಿವಸ ದುಡಿದರೆ 'ಗಿರಪಾಲು' ಎಂದೂ ಎಣಿಸಲಾಗುತ್ತದೆ. ಅರಪಾಲು ಎಂದರೆ $\frac{1}{2}$ ಭಾಗ, ಗಿರಪಾಲು ಎಂದರೆ $\frac{1}{4}$ ಭಾಗ. ಗೊಂತಿಯಲ್ಲಿ ಇಡಿಯ ಸಾಮೂಹಿಕ ಬೇಸಾಯದ ಅವಧಿಯಲ್ಲಿ 80 ಜನರು ಇರುತ್ತಾರೆ. ಇವರಲ್ಲಿ ಯಾರೂ ಗಿರಪಾಲು ($\frac{1}{4}$ ಭಾಗ) ಇರುವುದಿಲ್ಲ. ಎಲ್ಲ ಸದಸ್ಯರೂ ಒಂದಕ್ಕಿಂತ ಹೆಚ್ಚು ಪಾಲು ಉಳ್ಳವರೇ ಇರುತ್ತಾರೆ; ಒಂದು ಪಾಲು ಒಂದರ ಮೇಲೆ ಅರಪಾಲು ಉಳ್ಳವರೂ, ಗಿರಪಾಲು ಉಳ್ಳವರೂ ಇರುತ್ತಾರೆ.

ಪ್ರತಿಯೊಂದು ಪಾಲಿಗೂ 8 ಗಾಡಿ ಗೊಬ್ಬರವನ್ನು ಹಾಕಬೇಕಾಗುತ್ತದೆ. ಯಾವನೊಬ್ಬ ಸದಸ್ಯನಿಗೆ ಒಂದಕ್ಕಿಂತ ಹೆಚ್ಚಾಗಲೀ, ಕಡಮೆಯಾಗಲೀ ಪಾಲು ಇದ್ದರೆ ಆ ಪ್ರಮಾಣದಲ್ಲಿ ಅವನು ಹೆಚ್ಚು ಅಥವಾ ಕಡಮೆ ಗೊಬ್ಬರ ಕೊಡಬೇಕಾಗುತ್ತದೆ. ರಾಸಾಯನಿಕ ಗೊಬ್ಬರಗಳನ್ನು ಕೊಂಡು ಹಾಕಿದಲ್ಲಿ ಅದರ ವೆಚ್ಚವನ್ನು ಇದೇ ರೀತಿಯಾಗಿ ಹಂಚಿಕೊಳ್ಳಬೇಕಾಗುತ್ತದೆ.

ಕಳೆ ಕೊಯ್ಯುವುದು, ರಾಶಿ ಮಾಡುವುದು, ಮುಂತಾದ ಕೆಲಸಗಳ ವೆಚ್ಚವನ್ನು ಪ್ರತಿಯೊಬ್ಬ ಸದಸ್ಯನೂ ಸಮನಾಗಿ ತಮ್ಮ ಷೇರುಗಳ ಪ್ರಕಾರ ಕೊಡಬೇಕಾಗುತ್ತದೆ,

ರಾಶಿಯ ಕಾಲಕ್ಕೆ ಕಣದಲ್ಲಿ ಎಲ್ಲ ಹುಟ್ಟುವಳಿಯನ್ನೂ ಒಂದುಗೂಡಿಸಲಾಗುತ್ತದೆ ಮತ್ತು ಅದನ್ನು 44 ಪಾಲುಗಳಲ್ಲಿ ಅಥವಾ ಅರಪಾಲುಗಳಲ್ಲಿ ಅಥವಾ ಗಿರಪಾಲುಗಳಲ್ಲಿ ಸರಿಯಾಗಿ ಹಂಚಲಾಗುತ್ತದೆ. ಬೀಜಕ್ಕೆ ಅಗತ್ಯಬಿದ್ದ ಕಾಳನ್ನು ಒಟ್ಟಿನ ರಾಶಿಯಿಂದಲೇ ತೆಗೆದುಕೊಳ್ಳಲಾಗುತ್ತದೆ ಮತ್ತು ಅದನ್ನು ಸಾಮೂಹಿಕ ಕಣಜದಲ್ಲಿ ಕಾದಿಡಲಾಗುತ್ತದೆ. ಉಳಿದ ಉತ್ಪತ್ತಿಯನ್ನು 44 ಪಾಲುಗಳಲ್ಲಿ ಹಂಚಲಾಗುತ್ತದೆ.

ಎಲ್ಲ 44 ಸದಸ್ಯರೂ, 44 ಕೋಣಗಳೂ ಉಳುಮೆಮಾಡುವುದು, ರಾಶಿ ಮಾಡುವುದು ಮುಂತಾದ ಬೇಸಾಯ ಕೆಲಸಗಳಲ್ಲಿ ಒಟ್ಟಾಗಿ ದುಡಿಯುತ್ತಾರೆ.

ಸುಗ್ಗಿಯ ಕಾಲಕ್ಕೆ ಕಣಜದಲ್ಲಿಯೇ ಗೊಂತಿದಾರನು ಎಲ್ಲರಿಂದಲೂ ಅವರವರ ಪಾಲಿನ ಕಂದಾಯದ ಹಣವನ್ನು ವಸೂಲು ಮಾಡಿಕೊಳ್ಳುತ್ತಾನೆ ಮತ್ತು ಎಲ್ಲರ ಪರವಾಗಿ ಸರಕಾರಕ್ಕೆ ಅದನ್ನು ಮುಟ್ಟಿಸುತ್ತಾನೆ.

ಈ ಕಾಲುವೆಯ ಕೆಳಗೆ ಒಂದೇ ಭತ್ತದ ಬೆಳೆಯನ್ನು ಬೆಳೆಯಲಾಗುತ್ತದೆ. ಸವಳು ಭೂಮಿ ಇರುವುದರಿಂದ ಎರಡನೆಯ ಬೆಳೆಯನ್ನು ಬೆಳೆಯುವುದು ಲಾಭದಾಯಕವಾಗುವುದಿಲ್ಲ.

ಪ್ರತಿಯೊಬ್ಬ ಸಾಮೂಹಿಕ ಬೇಸಾಯಗಾರನೂ ತನ್ನ ಪಾಲಿನ ಧಾನ್ಯವನ್ನು ಬೇರೆಯವರಿಗೆ ಮಾರಬಹುದು. ಖರೀದಿ ಪತ್ರದಲ್ಲಿ ಗೊಂತಿಯಲ್ಲಿ ಇದ್ದ ಅವನ ಪಾಲನ್ನು ಮಾತ್ರ ಕಾಣಿಸಬೇಕು.

ಈ ಸಾಮೂಹಿಕ ಬೇಸಾಯದ ಪದ್ಧತಿಯು ಬಹಳ ಕಾಲದಿಂದ ಅಸ್ತಿತ್ವದಲ್ಲಿದೆ.

2. ಕರೀಮನಗರ ಜಿಲ್ಲೆಯಲ್ಲಿ ಅಲಗನೂರ ಗ್ರಾಮದಲ್ಲಿ ಪರಂಪರಾಗತ ಸಾಮೂಹಿಕ ಬೇಸಾಯ

ಇಲ್ಲಿ 82 ಜನ ಸಂರಕ್ಷಿತ ರೈತರ ವಶದಲ್ಲಿ 2 ಭೂಮಿಯ ಖಂಡಗಳು ಇವೆ; 60 ಎಕರೆ ಒಣ ಭೂಮಿಯದೊಂದು ಖಂಡ, 85 ಎಕರೆಯ ನೀರಾವರಿ ಭೂಮಿಯದೊಂದು ಖಂಡ ಒಟ್ಟು 145 ಎಕರೆಯ ಕ್ಷೇತ್ರವಾಗುತ್ತದೆ. ಈ ಸಂಸ್ಥೆಗೆ ಪ್ರತಿವರ್ಷ ಆಯ್ಕೆಯಾಗುವ ಓರ್ವ ಅಧ್ಯಕ್ಷ ಹಾಗೂ ಒಬ್ಬ ಉಪಾಧ್ಯಕ್ಷ ಇರುತ್ತಾರೆ. ಅಲ್ಲದೆ ವ್ಯವಸ್ಥಾಪಕರಲ್ಲಿ (ತಿಂಗಳಿಗೊಮ್ಮೆ) ಆಯ್ಕೆಯಾಗುವ 5 ಹೀರಾಡಿಗಳಿರುತ್ತಾರೆ. ಸರ್ವಸಾಧಾರಣ ಸಭೆಯಲ್ಲಿ ಪ್ರತಿವರ್ಷ ಉತ್ಪಾದನೆಯ ಯೋಜನೆಯನ್ನು ನಿರ್ಧರಿಸಲಾಗುತ್ತದೆ. ಮೇಲ್ವಿಚಾರಣೆಯ ಕೆಲಸವನ್ನೆಲ್ಲ ಅಧ್ಯಕ್ಷರೇ ನೋಡಿಕೊಳ್ಳುತ್ತಾರೆ. ಉಳುಮೆಮಾಡುವುದು, ರಾಶಿ ಮಾಡುವುದು ಮುಂತಾದ ಕೆಲಸಗಳ ಮೇಲ್ವಿಚಾರಣೆಯನ್ನು, ಹಾಗೂ ನಿಯಂತ್ರಣವನ್ನು ಉಪಾಧ್ಯಕ್ಷರು ವಹಿಸಿಕೊಳ್ಳುತ್ತಾರೆ. ಐವರು

ಹೀರಾಡಿಗಳು ನೀರು ಹಾಯಿಸುವುದು, ಕಳೆ ತೆಗೆಸುವುದು, ರಾಶಿ ಮಾಡುವುದು ಮತ್ತು ಸಾಮಾನ್ಯವಾಗಿ ಮಹಿಳೆಯರು ಮಾಡುವ ಎಲ್ಲ ಕೆಲಸಗಳ ಮೇಲ್ವಿಚಾರಣೆ ಮಾಡುತ್ತಾರೆ. 82 ಜನರಲ್ಲಿ ಪ್ರತಿಯೊಬ್ಬರೂ ಒಂದು ಜೊತೆ ಎತ್ತುಗಳನ್ನೂ ಹಾಗೂ ಗಳೆಗಳನ್ನೂ ಸಾಮೂಹಿಕ ಬೇಸಾಯಕ್ಕಾಗಿ ಕೊಡುತ್ತಾರೆ. ಸಾಗುವಳಿಯು ಸಾಮೂಹಿಕವಾಗಿಯೇ ನಡೆಯುತ್ತದೆ. ಯಾವುದೇ ಬೇಸಾಯ ಕೆಲಸಕ್ಕೆ ಹೆಚ್ಚು ಆಳು ಬೇಕಾಗುತ್ತಿದ್ದರೆ ಅವರಿಗೆ ಪ್ರಚಲಿತ ದರದಿಂದ ಕೂಲಿಯನ್ನು ಕೊಡಲಾಗುತ್ತದೆ. ಭತ್ತದ ರಾಶಿಯನ್ನು ಮಾಡಲು ಪ್ರತಿಯೊಬ್ಬ ದುಡಿಯುವ ಮಹಿಳೆಗೆ 2 ಸೇರು ಧಾನ್ಯವನ್ನು ಪ್ರತಿ ದಿವಸ ಕೊಡಲಾಗುತ್ತದೆ; ಏಕೆಂದರೆ ಸಾಮಾನ್ಯವಾಗಿ ಅವರು 5 ತಾಸು ಮಾತ್ರ ದಿವಸದಲ್ಲಿ ದುಡಿಯುತ್ತಾರೆ; ಇಡಿಯ ದಿವಸ ದುಡಿಯುವ ಗಂಡಾಳಿಗೆ ದಿವಸಕ್ಕೆ 5 ಸೇರು ಧಾನ್ಯವನ್ನು ಕೊಡಲಾಗುತ್ತದೆ. ಶೇಂಗಾದ ರಾಶಿಮಾಡಲು ದಿವಸಕ್ಕೆ 6 ಆಣೆ (37 ಪೈಸೆ) ಕೂಲಿಯನ್ನೂ, 2 ಬೊಗಸೆ ಶೇಂಗಾವನ್ನೂ ಬೇಸಾಯದ ಪ್ರತಿಯೊಬ್ಬ ಕೂಲಿಕಾರರಿಗೆ ಕೊಡಲಾಗುತ್ತದೆ. 12 ವರ್ಷಕ್ಕಿಂತ ಮೇಲ್ಪಟ್ಟ ಹುಡುಗರಿಗೆ ಪ್ರೌಢರಷ್ಟೇ ದಿನಗೂಲಿಯು ದೊರಕುತ್ತದೆ. ಭತ್ತದ ಗದ್ದೆಯಲ್ಲಿ ಕಳೆ ತೆಗೆಯಲು ಕೂಲಿ 6 ಆಣೆ ಇದ್ದರೆ, ಸೇಂಗಾದ ಹೊಲದಲ್ಲಿ ಅದೇ ಕೆಲಸದ ಕೂಲಿ 8 ಆಣೆ (50 ಪೈಸೆ) ಮಗುವಿಗೆ ಮೊಲೆ ಉಣ್ಣಿಸುವ ತಾಯಿಯು ಮಗುವನ್ನು ತನ್ನ ಅಕ್ಕನ ಬಳಿ ಅಥವಾ ಅಣ್ಣನ ಬಳಿ ಬಿಟ್ಟು ಕೆಲಸಕ್ಕೆ ಹೋಗುತ್ತಿದ್ದರೆ ಅವಳಿಗೆ ದ್ವಿಗುಣ ಕೂಲಿಯು ದೊರಕುತ್ತದೆ. ಅದರಂತೆ ಇಬ್ಬರು ಸರಾಸರಿಗಿಂತ ಹೆಚ್ಚು ಪರಿಶ್ರಮ ಮಾಡುವ ಸುಧೃಢ ಮಹಿಳೆಯರಿಗೆ* ಇಬ್ಬರ ನಡುವೆ 3 ಆಳಿನ ಕೂಲಿಯು ದೊರಕುತ್ತದೆ. ದಿನದ ಕೆಲಸ ಮಾಡುವಾಗ ತಡವಾಗಿ ಕೆಲಸಕ್ಕೆ ಬಂದರೆ ಒಂದು ತಾಸಿಗೆ 2 ಆಣೆ (13 ಪೈಸೆ), 2 ತಾಸಿಗೆ ನಾಲ್ಕು ಆಣೆ (25 ಪೈಸೆ) ಹೀಗೆ ತಡವಾಗಿ ಬಂದ ದುಡಿಮೆಗಾರನ ಮೇಲೆ ದಂಡ ಹಾಕಲಾಗುತ್ತದೆ. 2 ತಾಸಿಗಿಂತ ಹೆಚ್ಚು ವಿಲಂಬವಾದರೆ, ಅರ್ಧ ಆಳು ವಜಾಮಾಡುವುದಲ್ಲದೆ 10 ಆಣೆ (62 ಪೈಸೆ) ದಂಡವನ್ನೂ ಕಟ್ಟಲಾಗುತ್ತದೆ. ಯಾವುದೇ ಸದಸ್ಯನು ರಾಶಿಯನ್ನು ಮಾಡುವಾಗ ತನ್ನ ಪತ್ನಿಯನ್ನು ಅಥವಾ ಹೆಣ್ಣಾಳನ್ನು ಸಹಾಯಕ್ಕೆ ಕಳಿಸದಿದ್ದರೆ ಅವನು 1 ಆಣೆ (6 ಪೈಸೆ) ದಂಡವನ್ನು ತೆತ್ತ ಬೇಕಾಗುತ್ತದೆ. ಸದಸ್ಯನೇ ಬಾರದಿದ್ದರೆ 4 ಆಣೆ (25 ಪೈಸೆ) ದಂಡ ತೆರುವುದಲ್ಲದೆ ಒಟ್ಟು ಪಗಾರದಲ್ಲಿ 1 ರೂಪಾಯಿ ವಜಾ ಮಾಡಲಾಗುತ್ತದೆ. ಸದಸ್ಯನ ಗೈರುಹಾಜರಿ ಯಾವದೊಂದು ಕಾರಣದಿಂದ ಅನಿವಾರ್ಯವಾಗಿದ್ದರೆ ಅವನಿಗೆ ರಜೆ ಕೊಡಲಾಗುವುದು, ದಂಡವನ್ನು ಹೇರಲಾಗುವುದಿಲ್ಲ. ವಜಾ ಮಾಡಿದ ಹಣವನ್ನೂ, ದಂಡದ ಹಣವನ್ನೂ ಕೂಡಿಸಿ ಹಬ್ಬದ ದಿವಸ ಸಾಮೂಹಿಕ ಭೋಜನಕ್ಕಾಗಿ ವೆಚ್ಚಮಾಡಲಾಗುತ್ತದೆ. ಒಬ್ಬ ಸದಸ್ಯನು ಪ್ರತಿಯೊಂದು ಕೆಲಸದ ಲೆಕ್ಕವನ್ನು ಇಡುತ್ತಾನೆ; ಅವನಿಗೆ ವಿಶೇಷ ಸಂಭಾವನೆ ಅಥವಾ ವೇತನ ಇರುವುದಿಲ್ಲ. ಅದರಂತೆ ಇನ್ನೊಬ್ಬ ಸದಸ್ಯನು ಪ್ರತಿ 3 ತಿಂಗಳಿಗೊಮ್ಮೆ ಸಾಮೂಹಿಕ ವೆಚ್ಚಗಳ ಲೆಕ್ಕಗಳನ್ನು ಬರೆಯುತ್ತಾನೆ, ಅವನಿಗೂ ಯಾವ ಪ್ರತಿಫಲವೂ ದೊರಕುವುದಿಲ್ಲ. ಲೆಕ್ಕ ಬರೆಯುವವರು ಬೇರೆಯವರು ಆದರೂ ಲೆಕ್ಕದ ಪುಸ್ತಕಗಳು ಅಧ್ಯಕ್ಷರ ವಶದಲ್ಲಿಯೇ ಇರುತ್ತವೆ. ಅದರಂತೆ ಲೇಖಪಾಲರ ಬಳಿ ರೋಖ ಹಣವೂ ಇರುವುದಿಲ್ಲ.

6 ತಿಂಗಳಿಗೊಮ್ಮೆ ಹೀರಾಡಿಗಳನ್ನು ಬದಲಾಯಿಸಲಾಗುತ್ತದೆ. ಆದರಿಂದ ಅವರು ಸೋಮಾರಿಗಳೂ, ವೈಗಳ್ಳರೂ, ಸ್ವಾರ್ಥಿಗಳೂ ಆಗಲಾರರೆಂದು ವಿಶ್ವಾಸ ಹೀರಾಡಿಗಳು, ಅಧ್ಯಕ್ಷರು, ಉಪಾಧ್ಯಕ್ಷರು ಎತ್ತುಗಳನ್ನು ಕೊಡಬೇಕಾಗುವುದಿಲ್ಲ; ಅವರಿಗೆ ಸರಿಸಮಾನ ಪಾಲು ಮಾತ್ರ ದೊರಕುತ್ತವೆ. ದೈನಂದಿನ ಬೇಸಾಯದ ಕೆಲಸ ಗಳೆಲ್ಲ ಹೀರಾಡಿಗಳ ಮೇಲ್ವಿಚಾರಣೆಯಿಂದಲೇ ಚೆನ್ನಾಗಿ ನಡೆಯಬಲ್ಲವು. ಆದ್ದರಿಂದ ಅವರನ್ನು 6 ತಿಂಗಳಿಗೊಮ್ಮೆ ಗುಪ್ತ ಮತದಾನದಿಂದ ಆರಿಸಲಾಗುತ್ತದೆ. ಹೀರಾಡಿ ಪದಕ್ಕೆ ಆಯ್ಕೆಯಾಗಬಯಸುವ ಹುರಿಯಾಳುಗಳ ಕಣ್ಣಿಗೆ ಪಟ್ಟಿಕಟ್ಟಲಾಗುತ್ತದೆ. ಅವರನ್ನು ಕಾಯಲು ಇನ್ನಿಬ್ಬರನ್ನು ಜೊತೆಗೆ ಇಟ್ಟು ಮತದಾರ ಸದಸ್ಯರಿಂದ ದೂರ ನಿಲ್ಲಿಸಲಾಗುತ್ತದೆ. ಹುರಿಯಾಳುಗಳ ಹಿಂದೆ ಎರಡು ಪೆಟ್ಟಿಗೆಗಳನ್ನು ನೆಲದ ಮೇಲೆ ಇಟ್ಟು ಅವುಗಳಲ್ಲಿ ಮತದಾರರು ಎಲೆಗಳನ್ನು ಹಾಕುತ್ತಾರೆ. ಹೆಚ್ಚಿಗೆ ಎಲೆಗಳ ಮತ ಗಳನ್ನು ಪಡೆದವರು ಹೀರಾಡಿಗಳಾಗಿ ಆಯ್ಕೆಯಾಗುತ್ತಾರೆ.

ಈ ಭೂಮಿಗಳ ಒಡೆಯನು ಕಳೆದ 9 ವರ್ಷಗಳಿಂದ ಈ ಹೀರಾಡಿಗಳನ್ನು ಕಾಡುತ್ತಿದ್ದಾನೆ, ಒಂದೇಸಮನೆ ಕಚೇರಿಗಳಲ್ಲಿ ಅವರ ವಿರುದ್ಧ ಮೊಕದ್ದಮೆ ನಡೆಸುತ್ತ ಅವರನ್ನು ಓಡಾಡಿಸುತ್ತಿದ್ದಾನೆ. ಅವರನ್ನು ಓಡಿಸಿ ಈ ಸಂಸ್ಥೆಯನ್ನು ಹಾಳು ಮಾಡುವುದೇ ಅವನ ಉದ್ದೇಶ. ಮೊಕದ್ದಮೆಯ ನಿರ್ಣಯವನ್ನು ಪುನರ್ವಿಚಾರಿಸಲು ಸಹ ಅವನು ಒಂದು ಅರ್ಜಿ ಹಾಕಿದ್ದು, ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಅದರ ವಿಚಾರಣೆ ಆಗಲಿದೆ. ರೈತ ಸದಸ್ಯರಲ್ಲಿ ಒಬ್ಬನು ಮೊಕದ್ದಮೆಯ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಾನೆ. ಅವನ ಖರ್ಚನ್ನೆಲ್ಲ ಸಾಮೂಹಿಕ ನಿಧಿಯಿಂದ ಕೊಡಲಾಗುತ್ತದೆ.

ಅಲಗಾನೂರದ ಬಳಿ ಇನ್ನೊಂದು ಗ್ರಾಮದಲ್ಲಿ ಇದೇ ರೀತಿಯಿಂದ ಭೂಮಿಯ ಎರಡು ಖಂಡಗಳಲ್ಲಿ ಸಾಮೂಹಿಕ ಬೇಸಾಯವನ್ನು ನಡೆಸಲಾಗುತ್ತಿದೆ. ಒಂದು ಖಂಡ ದಲ್ಲಿ 60 ಎಕರೆ, ಇನ್ನೊಂದರಲ್ಲಿ 80 ಎಕರೆ ಭೂಮಿ ಇದೆ. ಮನೇರಲಾದಿಂದ ಬರುವ ತೆರೆದ ಕಾಲುವೆಗಳಿಂದಲೇ ಈ ಗದ್ದೆಯ ಭೂಮಿಗಳಿಗೆ ನೀರು ಹಾಯುತ್ತದೆ. ಮುಖ್ಯವಾಗಿ ಬೇಸಿಗೆಯಲ್ಲಿ ಈ ಕಾಲುವೆಗಳಲ್ಲಿ ಹೂಳು ತುಂಬಿ ಬಿಡುತ್ತದೆ. ಅದನ್ನು ತೆಗೆದುಹಾಕುವ ಪರಿಶ್ರಮದ ಕೆಲಸವನ್ನು ಸದಸ್ಯರು ಸರತಿಯಿಂದ ಮಾಡುತ್ತಾರೆ. ರಾಶಿಯನಂತರ ಒಡೆಯನ ಲಾವಣೆಯನ್ನು ತೆಗೆದು ಉಳಿದ ಉತ್ಪತ್ತಿಯನ್ನು ಎಲ್ಲ ಸದಸ್ಯರು ಸಮನಾಗಿ ಹಂಚಿಕೊಳ್ಳುತ್ತಾರೆ.

ಖಾತೆದಾರರು ಆದ ಬಳಿಕ ಸಹ ಈ ಭೂಮಿಗಳನ್ನು ಸಾಮೂಹಿಕವಾಗಿಯೇ ನಡೆಸಬೇಕೆಂದು ಈ ಜನರು ನಿರ್ಧರಿಸಿದ್ದಾರೆ. ಕೆಲವು ಬೇಸಾಯಗಾರರ ಸ್ವಂತ ಭೂಮಿಗಳೂ ಇವೆ. ಅವನ್ನು ಅವರು ವೈಯಕ್ತಿಕವಾಗಿ ಪ್ರತ್ಯೇಕವಾಗಿ ಸಾಗುಮಾಡು ತ್ತಿದ್ದಾರೆ. ಸಾಮೂಹಿಕವಾಗಿ ಸಾಗುಮಾಡುತ್ತಿರುವ ಭೂಮಿಗಳನ್ನು ಬೇಸಾಯ ಗಾರರು ತಮ್ಮೊಳಗೇ ಅದಲುಬದಲು ಮಾಡಿಕೊಂಡು ಅವುಗಳ ಕ್ರೋಢೀಕರಣ ಮಾಡಲು ಯತ್ನಿಸುತ್ತಿದ್ದಾರೆ.

ಈ ಬಹುಹಿಂದಿನ ಪ್ರಯೋಗಗಳು ಭಾರತದ ಬೇಸಾಯಗಾರರು ಸ್ವಭಾವದಿಂದ ಸಾಮೂಹಿಕ ಅಥವಾ ಸಹಕಾರಿ ಬೇಸಾಯಕ್ಕೆ ವಿರುದ್ಧವಿಲ್ಲವೆಂದು ಸಿದ್ಧಪಡಿಸುತ್ತವೆ.

ಅಧ್ಯಾಯ 7

ಸಹಕಾರಿ ಬೇಸಾಯ ಸಂಘದ ಪ್ರಕಾರಗಳು ಹಾಗೂ ಮೂಲಭೂತ ತತ್ವಗಳು

ಸಹಕಾರಿ ಬೇಸಾಯ ಸಂಘವು ಒಡೆಯ ಅಥವಾ ರೈತ ಬೇಸಾಯಗಾರರು ಸ್ವಯಂ ಸ್ಫೂರ್ತಿಯಿಂದ ರಚಿಸಿಕೊಂಡ ಒಂದು ಸಂಸ್ಥೆ. ಇಂತಹ ಸಂಸ್ಥೆಯಲ್ಲಿ ಅವರು ತಮ್ಮ ಭೂಮಿಗಳನ್ನೂ ಹಾಗೂ ಬೇಸಾಯದ ಸಲಕರಣೆಗಳನ್ನೂ ಒಂದುಗೂಡಿಸಿ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕಾಗಿ ಸಾಮೂಹಿಕ ಬೇಸಾಯ ಮಾಡುತ್ತಾರೆ. ಒಂದು ಬಗೆಯಿಂದ ಸಹಕಾರಿ ಬೇಸಾಯವು ಬೇಸಾಯದ ಕ್ಷೇತ್ರದಲ್ಲಿ ಸಂಯುಕ್ತ ಪರಿವಾರದ ಭಾವದ ವಿಸ್ತಾರವೆಂದು ಹೇಳಬಹುದು. ಆದರೆ ಬೇಸಾಯವನ್ನು ಕೂಡಿ ಮಾಡಿದರೂ ಸದಸ್ಯರಿಗೆ ತಮ್ಮ ಕುಟುಂಬವನ್ನು ಹಾಗೂ ಪಾಠಶಾಲೆಗಳನ್ನು ಸ್ವತಂತ್ರವಾಗಿಟ್ಟುಕೊಳ್ಳುವ ಅಧಿಕಾರವಿದೆ. ಸ್ವಸಂತೋಷ, ಸ್ವಾವಲಂಬನ ಹಾಗೂ ಪರಸ್ಪರ ಸಹಾಯ ಇವು ಸಹಕಾರಿ ಬೇಸಾಯಕ್ಕೆ ಆಧಾರವಾಗಿರುವ ಆದರ್ಶಗಳು.

ಶ್ರಮಸಾಧನಗಳನ್ನೆಲ್ಲ ಒಂದುಗೂಡಿಸಿ, ಅವುಗಳನ್ನು ಯೋಜನಾಬದ್ಧವಾಗಿ ಉಪಯೋಗಿಸಿ, ಬೇಸಾಯವನ್ನು ವೈಜ್ಞಾನಿಕ ರೀತಿಯಿಂದ ಸುಧಾರಿಸಿ, ಬೇಸಾಯದ ಉತ್ಪತ್ತಿಯನ್ನು ಹೆಚ್ಚಿಸುವುದು, ಒಂದುಗೂಡುವ ಸದಸ್ಯರ ಉದ್ಯೋಗ ಹೆಚ್ಚಿಸುವುದು, ಅವರ ಆದಾಯವನ್ನು ಹೆಚ್ಚಿಸಿ, ಅದನ್ನು ನ್ಯಾಯವಾಗಿ ಹಂಚಿ, ಅವರ ಜೀವನಮಟ್ಟವನ್ನು ಸುಧಾರಿಸುವುದು, ಇವು ಸಹಕಾರಿ ಬೇಸಾಯದ ಮುಖ್ಯ ಉದ್ದೇಶಗಳು. ಇದರಿಂದ ಒಗ್ಗಟ್ಟು ಮತ್ತು ಸೋದರ ಭಾವಗಳ ಸಮಾಜವನ್ನು ಕಟ್ಟುವುದು ಸಾಧ್ಯವಾಗುತ್ತದೆ.

ಸಹಕಾರಿ ಬೇಸಾಯ ಸಂಘಗಳ ಪ್ರಕಾರಗಳು

ತೃತೀಯ ಪಂಚವಾರ್ಷಿಕ ಯೋಜನೆಯ ಪ್ರಾರಂಭದವರೆಗೆ ಗ್ರಾಮಾಂತರ ಪತ್ತಿನ ಸಮೀಕ್ಷೆಯ ಸಮಿತಿಯ ಶಿಫಾರಸಿನ ಮೇರೆಗೆ ನಾಲ್ಕು ಪ್ರಕಾರದ ಸಹಕಾರಿ ಬೇಸಾಯ ಸಂಘಗಳನ್ನು ಸಂಘಟಿಸಲಾಗುತ್ತಿತ್ತು. ಅವುಗಳನ್ನು ಈ ಮುಂದೆ ವಿವರಿಸಲಾಗಿದೆ :

1. ಸಹಕಾರಿ ಉತ್ತಮ ಬೇಸಾಯ ಸಂಘ (ಕೋ-ಆಪರೇಟಿವ್ ಬೆಟರ್ ಫಾರ್ಮಿಂಗ್ ಸೊಸೈಟಿ)

ಈ ಸಂಘದಲ್ಲಿ ಪರಂಪರಾಗತ ಬೇಸಾಯಗಾರರು ಷೇರುಧನವನ್ನು ಸಂಗ್ರಹಿಸಿ, ತಮ್ಮ ಒಟ್ಟು ಪತ್ತಿನ ಮೇಲೆ ಸರಕಾರದಿಂದ, ಸಹಕಾರಿ ಬ್ಯಾಂಕುಗಳಿಂದ ಸಾಲವನ್ನು

ಪಡೆಯುತ್ತಿದ್ದರು. ತಮ್ಮ ತಮ್ಮ ಭೂಮಿಗಳಲ್ಲಿ ವೈಯಕ್ತಿಕವಾಗಿಯೇ ಸಾಗುವಳಿಯನ್ನು ನಡೆಸುತ್ತಿದ್ದರೂ, ಸಂಯೋಜಿತ ಯೋಜನೆಯಿಂದ ಮತ್ತು ಸಹಕಾರದಿಂದ ಅವರು ತಮ್ಮ ಒಟ್ಟು ಸಾಧನಗಳಿಂದ ಒಡ್ಡು, ಕಾಲುವೆ, ನಟ್ಟುಕಡಿಸುವುದು ಮುಂತಾದ ಸುಧಾರಣೆಗಳನ್ನು ಎಲ್ಲರ ಹೊಲಗಳಲ್ಲಿ ಸಂಘದ ಮುಖಾಂತರ ಮಾಡಿಸುತ್ತಿದ್ದರು. ಆದರ ಖರ್ಚುಗಳನ್ನೆಲ್ಲ ವೈಯಕ್ತಿಕವಾಗಿ ಆಯಾ ಸದಸ್ಯರ ಮೇಲೆ ಹಾಕಲಾಗುತ್ತಿತ್ತು. ಎಲ್ಲ ಸದಸ್ಯರ ಬೇಸಾಯದ ಪದ್ಧತಿಗಳನ್ನು ಸುಧಾರಿಸಿ, ಉತ್ಪತ್ತಿಯನ್ನು ಹೆಚ್ಚಿಸಲು ಸಂಘವು ನೆರವಾಗುತ್ತಿತ್ತು. ಅದಕ್ಕಾಗಿ ಸುಧಾರಿಸಿದ ಬೇಸಾಯ ಪದ್ಧತಿಗಳ ಬೀಜ, ಗೊಬ್ಬರ, ಕ್ರಿಮಿನಾಶಕಗಳ ಪ್ರಚಾರ ಮಾಡುವುದಲ್ಲದೆ, ಅಗತ್ಯವಿದ್ದ ಸಲಕರಣೆಗಳನ್ನೂ ಸಂಘವು ಸದಸ್ಯರಿಗೆ ಯೋಗ್ಯ ಬೆಲೆಗೆ ಒದಗಿಸುತ್ತಿತ್ತು. ಅಗತ್ಯವಿದ್ದಲ್ಲಿ ಕೃಷಿ ಯಂತ್ರಗಳನ್ನು ಸಹ ಸಹಕಾರ ಸಂಘವು ಕೊಂಡು ಇಟ್ಟು ಎಲ್ಲ ಸದಸ್ಯರಿಗೆ ತಮ್ಮ ಹೊಲಗಳಲ್ಲಿ ಉಪಯೋಗಿಸಲು ಯೋಗ್ಯದರದಿಂದ ಬಾಡಿಗೆ ಕೊಡುತ್ತಿತ್ತು. ದೇಶದ ತುಂಬ ಉತ್ತಮ ಬೇಸಾಯ ಸಂಘಗಳು ರೈತರಲ್ಲಿ ಸುಧಾರಿಸಿದ ಬೇಸಾಯದ ಪ್ರಚಾರ ಮಾಡಿ ಹಬ್ಬಿಸಲು ಬಹಳಷ್ಟು ನೆರವಾದವು. ಈ ಸಂಘಗಳ ಎಲ್ಲ ಕೆಲಸಗಳನ್ನಲ್ಲದಿದ್ದರೂ, ಬಹಳಷ್ಟು ಸೇವೆಯ ಮತ್ತು ಪೂರೈಕೆಯ ಕೆಲಸಗಳನ್ನು ಸೇವಾ ಸಹಕಾರಿ ಸಂಘಗಳು ಈಗ ಮಾಡುತ್ತಿವೆ.

2. ಸಹಕಾರಿ ರೈತ ಪದ್ಧತಿಯ ಬೇಸಾಯಸಂಘ (ಕೋ-ಆಪರೇಟಿವ್ ಟೆನೆಂಟ್ ಫಾರ್ಮಿಂಗ್ ಸೊಸೈಟಿ)

ಭೂರಹಿತ ಕೃಷಿ ಕಾರ್ಮಿಕರನ್ನು ಬೇಸಾಯದಲ್ಲಿ ನೆಲೆಸಲು ಈ ಸಹಕಾರ ಸಂಘಗಳನ್ನು ಸಂಘಟಿಸಲಾಗುತ್ತಿತ್ತು. ಇಂಥ ಸಹಕಾರ ಸಂಘವು ಸರಕಾರದಿಂದಾಗಲಿ, ದೊಡ್ಡ ಜಮೀನುದಾರರಿಂದಾಗಲಿ ದೀರ್ಘಾವಧಿಯವರೆಗೆ ಭೂಮಿಯನ್ನು ಲಾವಣಿಯ (ಗುತ್ತಿಗೆಯ) ಕರಾರಿನಿಂದ ಪಡೆಯುತ್ತಿತ್ತು. ಕೆಲವು ಸಂದರ್ಭಗಳಲ್ಲಿ ಸರಕಾರವು ಕಾಯಂ ರೀತಿಯಿಂದ ಇಂಥ ಸಂಘಗಳಿಗೆ ಸಹಕಾರಿ ಫಡಭೂಮಿಗಳನ್ನು ಮಂಜೂರು ಮಾಡುತ್ತಿತ್ತು. ಸಹಕಾರ ಸಂಘವು ಸರಿಯಾಗಿ ಇಡಿಯ ಭೂಮಿಯ ಖಂಡಗಳನ್ನು ರಚಿಸಿ, ಒಂದೊಂದು ಖಂಡವನ್ನು ಒಬ್ಬೊಬ್ಬ ರೈತ ಸದಸ್ಯನಿಗೆ ವೈಯಕ್ತಿಕವಾಗಿ ಸಾಗುವಳಿ ಮಾಡಲು ಕೊಡುತ್ತಿತ್ತು. ಅದಕ್ಕೆ ಪ್ರತಿಯಾಗಿ ಸದಸ್ಯನು ಸಂಘಕ್ಕೆ ಪ್ರತಿ ವರ್ಷ ನಿರ್ದಿಷ್ಟ ಲಾವಣಿ(ಗುತ್ತಿಗೆ)ಯನ್ನು ಕೊಡಬೇಕಾಗುತ್ತಿತ್ತು. ಸಾಗುವಳಿಯು ವೈಯಕ್ತಿಕವಾಗಿ ನಡೆಯುತ್ತಿದ್ದರೂ ಸಂಘವೇ ಎಲ್ಲ ಹೊಲಗಳಿಗೋಸುಗ ಸಮಂಜಸವಾಗಿ ಅಭಿವೃದ್ಧಿಮಾಡಲು ಮತ್ತು ಬೆಳೆ ಉತ್ಪಾದಿಸಲು ಯೋಜನೆಯನ್ನು ತಯಾರಿಸುತ್ತಿತ್ತು. ಸದಸ್ಯರೆಲ್ಲರೂ ಈ ಯೋಜನೆಯ ಪ್ರಕಾರವೇ ತಮ್ಮ ಹೊಲಗಳಲ್ಲಿ ಸುಧಾರಣೆಯ ಕೆಲಸಗಳನ್ನು, ಬೆಳೆ ಉತ್ಪಾದಿಸುವ ಕಾರ್ಯಗಳನ್ನು ಮಾಡುತ್ತಿದ್ದರು. ಈ ಎಲ್ಲ ಸುಧಾರಣೆಗಳಿಗಾಗಿ ಮತ್ತು ಬೆಳೆಯ ಉತ್ಪಾದನೆಗಾಗಿ ಅಗತ್ಯಬಿದ್ದ ಬಂಡವಾಳವನ್ನು, ಕೃಷಿ ಯಂತ್ರಗಳ ಸೇವೆಯನ್ನು, ಬೀಜ, ಗೊಬ್ಬರ, ಕ್ರಿಮಿನಾಶಕ ಮುಂತಾದ ಸಲಕರಣೆಗಳನ್ನೂ ತನ್ನ ಒಟ್ಟು ಪತ್ತಿನ ಮೇಲೆ ಸಂಘವೇ ದೊರಕಿಸಿ ಸದಸ್ಯರಿಗೆ

ಒದಗಿಸುತ್ತಿತ್ತು. ಅಗತ್ಯವಿದ್ದಲ್ಲಿ ಸಂಘವು ಟ್ರಾಕ್ಟರ್ ಮುಂತಾದ ಕೃಷಿ ಯಂತ್ರಗಳನ್ನು ಕೊಂಡು ಉಪಯೋಗಿಸುತ್ತಿತ್ತು. ಸಾಲ, ಯಂತ್ರಗಳನ್ನು ಸರಕಾರದಿಂದಾಗಲಿ, ಸಹಕಾರಿ ಸಂಸ್ಥೆಗಳಿಂದಾಗಲಿ ಸಂಘವು ದೊರಕಿಸುತ್ತಿತ್ತು.

ದೇಶದ ಎಲ್ಲ ರಾಜ್ಯಗಳಲ್ಲಿ ಹರಿಜನರನ್ನು, ಗಿರಿಜನರನ್ನು ಮತ್ತು ಬೇರೆ ವರ್ಗಗಳ ಭೂರಹಿತ ಕೃಷಿ ಕಾರ್ಮಿಕರನ್ನು ಬೇಸಾಯದಲ್ಲಿ ನೆಲೆಸಲು ಸಹಕಾರಿ ರೈತಪದ್ಧತಿಯ ಬೇಸಾಯ ಸಂಘಗಳನ್ನು ಸಂಘಟಿಸಲಾಯಿತು. ಅವುಗಳಿಂದ ಲಕ್ಷಗಟ್ಲೆ ನಿರಾಶ್ರಿತ ಕೃಷಿ ಕಾರ್ಮಿಕರು ಬೇಸಾಯದಲ್ಲಿ ನೆಲೆಸಿ ಮಾನವ ಬಾಳನ್ನು ನಡೆಸುವುದು ಸಾಧ್ಯ ವಾಯಿತು. ಈಗ ಎಲ್ಲೆಡೆ ಹಬ್ಬಿರುವ ಸೇವಾ ಸಹಕಾರಿ ಸಂಘಗಳು ಸಹಕಾರಿ ರೈತ ಪದ್ಧತಿಯ ಬೇಸಾಯ ಸಂಘಗಳು ಮಾಡುತ್ತಿದ್ದ ಅನೇಕ ಸೇವಾ ಕಾರ್ಯಗಳನ್ನು ಮಾಡುತ್ತಿವೆ.

3. **ಸಹಕಾರಿ ಸಂಯುಕ್ತ ಬೇಸಾಯ ಸಂಘ** (ಕೋ-ಆಪರೇಟಿವ್ ಜಾಯಿಂಟ್ ಫಾರ್ಮಿಂಗ್ ಸೊಸೈಟಿ)

ಪರಂಪರಾಗತ ಬೇಸಾಯಗಾರರು, ರೈತರೇ ಆಗಲಿ ಅಥವಾ ಒಡೆಯರೇ ಆಗಲಿ ತಮ್ಮ ಹಿಡುವಳಿಗಳನ್ನು ಒಂದುಗೂಡಿಸಿ, ತಮ್ಮ ಭೂಮಿಗಳಲ್ಲಿ ಸಾಮೂಹಿಕ ಬೇಸಾಯ ನಡೆಸಲು ಬೇಸಾಯ ಸಂಘ ಸ್ಥಾಪಿಸಿದರೆ ಅಂಥ ಬೇಸಾಯ ಸಂಘಕ್ಕೆ ಸಹಕಾರಿ ಸಂಯುಕ್ತ ಬೇಸಾಯ ಸಂಘವೆಂದು ಕರೆಯುವುದುಂಟು. ಇಂಥ ಸಂಘದಲ್ಲಿ ಭೂಮಿಯಲ್ಲಿಯ ಸದಸ್ಯರ ಹಕ್ಕುಗಳು ಅಬಾಧಿತವಾಗಿರುತ್ತವೆ. ಕೆಲವು ಅವಧಿಯ ವರೆಗೆ ಸಾಗುವಳಿಗಾಗಿ ಮಾತ್ರ ಭೂಮಿಯ ಹಿಡುವಳಿಗಳನ್ನು ಇಂಥ ಸಂಘದಲ್ಲಿ ಒಂದುಗೂಡಿಸಲಾಗುತ್ತದೆ. ಅಂತೆಯೇ ಉತ್ಪತ್ತಿಯ ಒಂದಂಶವನ್ನು ಭೂಮಿಯ ಪ್ರತಿಫಲವೆಂದು ಇಂಥ ಸಂಘದಲ್ಲಿ ಹಂಚುವ ವ್ಯವಸ್ಥೆ ಇರುತ್ತದೆ.

4. **ಸಹಕಾರಿ ಸಾಮುದಾಯಿಕ ಬೇಸಾಯ ಸಂಘ** (ಕೋ-ಆಪರೇಟಿವ್ ಕಲೆಕ್ಟೀವ್ ಫಾರ್ಮಿಂಗ್ ಸೊಸೈಟಿ)

ಭೂರಹಿತ ಕೃಷಿ ಕಾರ್ಮಿಕರು ಸಾಮೂಹಿಕವಾಗಿಯೇ ಸರಕಾರದಿಂದಾಗಲೀ ಅಥವಾ ಬೇರೆ ಜಮೀನುದಾರರಿಂದಾಗಲೀ, ಕಾಯಂ ಗ್ರಾಂಟಿನಿಂದಾಗಲೀ ಅಥವಾ ಲಾವಣಿಯ ಕರಾರಿನಿಂದಾಗಲೀ ಪಡೆದು ಅವುಗಳ ಸಾಮೂಹಿಕ ಸಾಗುವಳಿ ಮಾಡಲು ಸ್ಥಾಪಿಸಿಕೊಂಡ ಬೇಸಾಯ ಸಂಘಕ್ಕೆ ಸಹಕಾರಿ ಸಾಮುದಾಯಿಕ ಬೇಸಾಯ ಸಂಘವೆಂದು ಹೆಸರು. ಇಂಥ ಸಂಘದಲ್ಲಿ ಭೂಮಿಯ ಒಡೆತನ ಅಥವಾ ಬೇರೆ ಹಕ್ಕು ವೈಯಕ್ತಿಕ ಸದಸ್ಯರ ಹೆಸರಿನಲ್ಲಿರದೆ ಸಾಮೂಹಿಕವಾಗಿ ಸಂಘದ ಹೆಸರಿನಲ್ಲಿಯೇ ಇರುತ್ತದೆ. ಆದ್ದರಿಂದ ಇಂಥ ಬೇಸಾಯ ಸಂಘದಲ್ಲಿ ಭೂಮಿಗೋಸುಗ ಯಾವ ಪ್ರತಿಫಲವೂ ಸಿಗುವುದಿಲ್ಲ. ಹಂಚುವ ಉತ್ಪನ್ನವೆಲ್ಲ ದುಡಿತದ ಮೇಲೆಯೇ ಹಂಚಲಾಗುತ್ತದೆ.

ಸ್ವಂತ ಭೂಮಿ ಇದ್ದ ಹಿಡುವಳಿದಾರರೂ ಹಲವರು ಗ್ರಾಮದಾನ ಅಥವಾ ಭೂದಾನ ತತ್ವದ ಪ್ರಕಾರ ಸ್ವಸಂತೋಷದಿಂದಲೇ ತಮ್ಮ ಭೂಮಿಯಲ್ಲಿಯ ಹಕ್ಕುಗಳನ್ನು ಸಂಘಕ್ಕೆ ಒಪ್ಪಿಸಿ ಅಥವಾ ಇನ್ನೂ ಕೆಲವು ಸಂದರ್ಭಗಳಲ್ಲಿ ಭೂಮಿಯ ಪ್ರತಿಫಲವನ್ನು ತ್ಯಜಿಸಿ, ಬೇಸಾಯ ಸಂಘವನ್ನು ಸ್ಥಾಪಿಸಿದ್ದರೆ ಅದು ಒಂದು ಪ್ರಕಾರದ ಸಾಮುದಾಯಕ ಬೇಸಾಯ ಸಂಘ.

ಭೂಮಿಯ ಹಕ್ಕನ್ನು ಕಾಯ್ದಿಡುವುದು ಮತ್ತು ಭೂಮಿಯ ಪ್ರತಿಫಲವನ್ನು ಹಂಚುವುದನ್ನು ಬಿಟ್ಟರೆ ಸಂಯುಕ್ತ ಹಾಗೂ ಸಾಮುದಾಯಕ ಬೇಸಾಯ ಸಂಘಗಳಲ್ಲಿ ಮತ್ತಾವ ವ್ಯತ್ಯಾಸವೂ ಇಲ್ಲ. ಸಾಮೂಹಿಕ ಸಾಗುವಳಿ, ಶ್ರಮಸಂಘಟನ ಮುಂತಾದುವೆಲ್ಲ ಎರಡು ಪ್ರಕಾರದ ಬೇಸಾಯ ಸಂಘಗಳಲ್ಲಿ ಒಂದೇ ರೀತಿಯಾಗಿರುತ್ತವೆ.

ಸಂಯುಕ್ತ ಬೇಸಾಯ ಸಂಘದಲ್ಲಿಯ ಹಾಗೂ ಸಾಮುದಾಯಕ ಬೇಸಾಯ ಸಂಘದಲ್ಲಿಯ ಸಾಮೂಹಿಕ ಸಾಗುವಳಿಯು ಕಷ್ಟಸಾಧ್ಯವೆಂದು, ಸಾಗುವಳಿ ಪದ್ಧತಿಯನ್ನು ವೈಯಕ್ತಿಕ ಸ್ವರೂಪದ್ದನ್ನಾಗಿಯೇ ಇಟ್ಟು ಅದನ್ನು ಸುಧಾರಿಸಿ ಉತ್ಪತ್ತಿ ಹೆಚ್ಚಿಸಲು ಅಗತ್ಯವಿದ್ದ ಎಲ್ಲ ಸೇವೆ ಸಲಕರಣೆಗಳನ್ನು ಸೇವಾ ಸಹಕಾರಿ ಸಂಘಗಳ ಮುಖಾಂತರ ಬೇಸಾಯಗಾರರಿಗೆ ಒದಗಿಸಬೇಕೆಂದು ಅನೇಕರ ಅಭಿಪ್ರಾಯ. ಕೆಲವೊಂದು ವಿಶಿಷ್ಟ ಅಭಿವೃದ್ಧಿಯ ಕೆಲಸಗಳನ್ನೂ, ಬೇಸಾಯ ಸಂಘಗಳನ್ನೂ ಸುಧಾರಣೆಗಳನ್ನೂ ಸದಸ್ಯರೆಲ್ಲರೂ ಒಂದುಗೂಡಿಕೊಂಡು ಪರಸ್ಪರ ತಿಳುವಳಿಕೆಯಿಂದ ಒಂದು ಯೋಜನೆಯ ಪ್ರಕಾರ ಸಾಮೂಹಿಕವಾಗಿ ಮಾಡಬಹುದು. ಜರ್ಮನಿಯ ಬೇಸಾಯ ತಜ್ಞರಾದ ಡಾ॥ ಆಟೋಶಿಲರ್‌ರವರು ಹಾಗೂ ಶ್ರೀಮತಿ ಮಾರ್ಗರೆಟ್ ಡಿಗ್ಬಿ ಮೊದಲಾದವರು ಇದೇ ವಿಚಾರವನ್ನು ಪ್ರತಿಪಾದಿಸಿದ್ದಾರೆ.

ಜನತೆಯ ಸಹಕಾರಿ ಜಾಗೃತಿಯ ಸಂಕ್ರಮಣ ಕಾಲದಲ್ಲಿ ಬೇಸಾಯದಲ್ಲಿ ಇಂಥ ಸಾಂಕ್ರಾಮಿಕ ಸಹಕಾರ ಪದ್ಧತಿಗಳು ಸಹಾಯಕವಾದರೂ. ಬೇಸಾಯದಲ್ಲಿ ಶ್ರಮ ಸಾಧನಗಳನ್ನೆಲ್ಲ ಒಂದುಗೂಡಿಸಿ ಯೋಜನಾಬದ್ಧವಾಗಿ ಉಪಯೋಗಿಸುವ ಸಾಮೂಹಿಕ ಸಾಗುವಳಿಯನ್ನು ನಡೆಸದೆ ಸಹಕಾರಿ ಬೇಸಾಯದ ಪೂರ್ಣ ಪ್ರಯೋಜನಗಳು ದೊರಕಲಾರವೆಂದು ಎಲ್ಲ ತಜ್ಞಸಮಿತಿಗಳೂ, ರಾಷ್ಟ್ರದ ನಾಯಕರೂ ಏಕಸ್ವರದಿಂದ ಅಭಿಪ್ರಾಯಪಟ್ಟಿದ್ದಾರೆ. ಸೇವೆ, ಸಲಕರಣೆಗಳನ್ನು ವಿಶೇಷವಾಗಿ ಒದಗಿಸುವ ಉತ್ತಮ ಹಾಗೂ ರೈತಪದ್ಧತಿಯ ಬೇಸಾಯ ಸಂಘಗಳು ವಿಶಿಷ್ಟ ಪ್ರಕಾರದ ಸೇವಾ ಸಹಕಾರಿ ಸಂಘಗಳು ಮಾತ್ರ. ಅವು ಸಹಕಾರಿ ಬೇಸಾಯ ಸಂಘಗಳು ಆಗಲಾರವು. ಎಲ್ಲ ಉತ್ಪಾದನೆಯ ಕಾರ್ಯಗಳಲ್ಲಿ ಸದಸ್ಯರು ಸಾಮೂಹಿಕ ಸಹಕಾರ ನಡೆಸುತ್ತಿದ್ದರೆ ಮಾತ್ರ ಅವು ಸಹಕಾರಿ ಬೇಸಾಯ ಸಂಘಗಳು. ಈ ಪರಿಭಾಷೆಯನ್ನೇ ಮೊದಲಿನ ಎರಡು ಪಂಚವಾರ್ಷಿಕ ಯೋಜನೆಗಳಲ್ಲಿ ಒಪ್ಪಿಕೊಳ್ಳಲಾಯಿತು. ಸಹಕಾರಿ ಬೇಸಾಯದ ಕಾರ್ಯಸಮಿತಿಯು (1959) ಸಾಮೂಹಿಕ ಸಾಗುವಳಿಯನ್ನು ಸಹಕಾರಿ ಬೇಸಾಯದ ಕಡ್ಡಾಯ ತತ್ವವನ್ನಾಗಿ ಶಿಫಾರಸು ಮಾಡಿತು. ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಭಾರತ

(6) **ಆದಾಯದ ವಿತರಣೆ:** ಬೇಸಾಯ ಸಂಘದ ಒಟ್ಟು ಆದಾಯದಲ್ಲಿ ಮೊದಲು ಸಾಗುವಳಿ ವೆಚ್ಚ ಮತ್ತು ಬೇರೆ ಖರ್ಚುಗಳನ್ನು ವಜಾ ತೆಗೆಯಲಾಗುತ್ತದೆ. ಉಳಿದದ್ದು ಬೇಸಾಯ ಸಂಘದ ಬೇಸಾಯ ಉತ್ಪನ್ನ. ಇದರಲ್ಲಿ ಮೊದಲೇ ದುಡಿಮೆಗಾರರಿಗೆ ಮಜೂರಿ ಕೊಟ್ಟಿರದಿದ್ದರೆ ಕೆಲವು ಭಾಗವನ್ನು ದುಡಿತದ ಪ್ರತಿಫಲವೆಂದು ಹಂಚಬೇಕಾಗುತ್ತದೆ. ಅದರಂತೆ ಭೂಮಿಯ ಲಾವಣಿ (ಗುತ್ತಿಗೆ) ಮೊದಲೇ ಕೊಟ್ಟಿರದಿದ್ದರೆ ಕೆಲವು ಭಾಗವನ್ನು ಭೂಮಿಯ ಪ್ರತಿಫಲವೆಂದು ತೆಗೆಯಬಹುದು. ಉಳಿದದ್ದು ಬೇಸಾಯ ಸಂಘದ ನಿವ್ವಳ ಲಾಭವಲ್ಲಿ ರಕ್ಷಿತ ನಿಧಿ ಮತ್ತು ಬೇರೆ ನಿಧಿಗಳನ್ನು ಪೋಟನಿಯಮದ ಪ್ರಕಾರ ತೆಗೆದಿಟ್ಟು ಉಳಿದದ್ದನ್ನು ಸಂಘದ ನಿರ್ಣಯದ ಪ್ರಕಾರ ದುಡಿತದ ಹೆಚ್ಚಿನ ಲಾಭ (ಬೋನಸ್ಸು) ಎಂದೂ. ಭೂಮಿಯ ಲಾಭವೆಂದೂ ಹಂಚಬಹುದು. ಭೂಮಿಯ ಪ್ರತಿಫಲವನ್ನು ಹಾಗೂ ಲಾಭವನ್ನು ಭೂಮಿಗೆ ತಕ್ಕಂತೆಯೂ, ದುಡಿತದ ಪ್ರತಿಫಲ ಹಾಗೂ ಲಾಭವನ್ನು ದುಡಿತಕ್ಕೆ ತಕ್ಕಂತೆಯೂ ಹಂಚಬೇಕಾಗುತ್ತದೆ.

(7) **ಜನತಾಂತ್ರಿಕ ಆಡಳಿತ:** ಬೇಸಾಯ ಸಂಘವನ್ನು ಸರಕಾರದ ಅಧಿಕಾರಿಗಳು ನಡೆಸುತ್ತಾರೆಂದೂ ಸಹಕಾರಿ ಬೇಸಾಯಗಾರರು ಕೇವಲ ಕೂಲಿಯವರಾಗುತ್ತರೆಂದೂ ಒಂದು ಸಾಮಾನ್ಯವಾದ ತಪ್ಪು ತಿಳವಳಿಕೆ; ಅದು ಸರಿಯಲ್ಲ. ಬೇಸಾಯ ಸಂಘವು ಬೇಸಾಯಗಾರರದೇ ಸ್ವಂತ ಸಂಸ್ಥೆ. ಅದರ ಯೋಜನೆ ಮಾಡುವವರು, ಅದನ್ನು ಕಾರ್ಯಗತ ಮಾಡುವವರು, ಅದರ ಆದಾಯ ಹಂಚಿಕೊಳ್ಳುವವರು, ಎಲ್ಲರೂ ಬೇಸಾಯ ಸಂಘದ ಸದಸ್ಯರೇ. ಎಲ್ಲರೂ ಕೂಡಿಕೊಂಡೇ, ಜನತಾಂತ್ರಿಕವಾಗಿ ಚರ್ಚಿಸಿ ನಿರ್ಣಯಗಳನ್ನು ಕೈಕೊಂಡು ಸಂಘವನ್ನು ನಡೆಸಬೇಕಾಗುತ್ತದೆ.

ಅಧ್ಯಾಯ 8

ಸಹಕಾರಿ ಬೇಸಾಯ ಸಂಘದ ಸಂಘಟನೆ

ಭಾರತದಲ್ಲಿ ವಿಭಿನ್ನ ಪ್ರದೇಶಗಳಲ್ಲಿ ಭೂಮಿ, ಮಳೆ, ಬೆಳೆ ಮುಂತಾದವುಗಳ ವಿಭಿನ್ನ ಪರಿಸ್ಥಿತಿಗಳಿವೆ. ಆದ್ದರಿಂದ ಸಮಸ್ತ ದೇಶಕ್ಕೆ ಬೇಸಾಯ ಸಂಘಗಳ ಒಂದೇ ಪ್ರಕಾರದ ಮಾದರಿಯನ್ನು ಹಾಕಲಿಕ್ಕಾಗದು. ಪರಿಸ್ಥಿತಿಗಳಿಗನುಸರಿಸಿ ಅವುಗಳಲ್ಲಿ ವ್ಯತ್ಯಾಸವಾಗುವುದು ಸ್ವಾಭಾವಿಕ. ಕೆಲವು ಸರ್ವಸಾಮಾನ್ಯ ತತ್ವ ಹಾಗೂ ನಿಯಮಗಳನ್ನು ಮಾತ್ರ ಬೇಸಾಯ ಸಂಘಗಳ ಸಂಘಟನೆಯಲ್ಲಿ ಗಮನಿಸುವುದು ಅಗತ್ಯ.

ಆರಂಭದ ಸಿದ್ಧತೆ : ಮೊಟ್ಟ ಮೊದಲು ಬೇಸಾಯ ಸಂಘದಲ್ಲಿ ಒಂದುಗೂಡುವ ಸದಸ್ಯರಲ್ಲಿ ಸಾಮೂಹಿಕ ಬೇಸಾಯದಿಂದ ತಮಗಾಗಬಹುದಾದ ಲಾಭಗಳ ಸ್ಪಷ್ಟ ಅರಿವು ಆಗುವುದು ಅತ್ಯಗತ್ಯ. ತಮ್ಮ ಶ್ರಮ, ಶಕ್ತಿಗಳನ್ನೆಲ್ಲ ಒಂದುಗೂಡಿಸಲು ಅಗತ್ಯವಾದ ಪರಸ್ಪರ ವಿಶ್ವಾಸವೂ ಅವರಲ್ಲಿ ಬೆಳೆದಿರಬೇಕು. ಮುಖ್ಯವಾಗಿ ಅವರಿಗೆ ಕೆಲವು ವಿಷಯಗಳ ಬಗ್ಗೆ ಸ್ಪಷ್ಟ ತಿಳಿವಳಿಕೆ ಮಾಡಿಕೊಡಬೇಕು : (1) ಸಾಮೂಹಿಕ ಬೇಸಾಯದಿಂದ ಉತ್ಪತ್ತಿಯನ್ನು, ಉದ್ಯೋಗವನ್ನು ಹಾಗೂ ಆದಾಯವನ್ನು ಎಷ್ಟರ ಮಟ್ಟಿಗೆ ಹೆಚ್ಚಿಸಬಹುದು (2) ಉತ್ಪಾದನೆ ಹೆಚ್ಚಿಸಲು ಕೂಡಲೇ ಕೈಕೊಳ್ಳಬೇಕಾದ ಹಾಗೂ ಭವಿಷ್ಯದಲ್ಲಿ ಕೈಕೊಳ್ಳಬೇಕಾದ ನಿಶ್ಚಿತವಾದ ಕಾರ್ಯಗಳು (3) ಈ ಕಾರ್ಯಗಳಿಗೆ ಅಗತ್ಯವಾದ ಆರ್ಥಿಕ ಹಾಗೂ ತಾಂತ್ರಿಕ ಸಹಾಯ ಸೌಕರ್ಯಗಳನ್ನು ಹೇಗೆ ದೊರಕಿಸುವುದು (4) ಇವುಗಳಲ್ಲಿ ಸದಸ್ಯರ ಹೊಣೆಗಳು (5) ಸಂಘದ ಆಡಳಿತದ ಸ್ವರೂಪ ಮತ್ತು (6) ಸಂಘವನ್ನು ಸುಗಮವಾಗಿ ನಡೆಸಲು ಬೇಕಾದ ನಿಯಮ ಹಾಗೂ ವಿಧಾನಗಳು.

ಸಹಕಾರಿ ಬೇಸಾಯವೆಂದರೆ ಸರಕಾರಿ ಬೇಸಾಯವಲ್ಲ; ಅದು ಬೇಸಾಯಗಾರರು ತಮ್ಮವೇ ಶ್ರಮ, ಸಾಧನಗಳನ್ನು ಒಂದುಗೂಡಿಸಿ ನಡೆಸಬೇಕಾದ ಅವರದೇ ಸಂಸ್ಥೆ ಎಂಬುದನ್ನು ಸದಸ್ಯರಿಗೆ ಮನದಟ್ಟು ಮಾಡಿಕೊಡಬೇಕು. ಸಾಮೂಹಿಕ ಬೇಸಾಯದಲ್ಲಿ ಬರುವ ತೊಡಕು ತೊಂದರೆಗಳ ಪೂರ್ಣ ಅರಿವನ್ನು ಅವರಿಗೆ ಮಾಡಿಕೊಡಬೇಕು. ಸರಕಾರದ ಸಹಾಯದ ಜಪವನ್ನೇ ಅವರು ಮಾಡುತ್ತ ಕೂಡಬಾರದು. ತಮ್ಮ ತ್ಯಾಗ, ಶ್ರಮಗಳಿಂದ ಸಂಘವನ್ನು ನಡೆಸುವ ಆತ್ಮವಿಶ್ವಾಸ ಅವರಲ್ಲಿ ಬೆಳೆಯಬೇಕು. ಸಾಮೂಹಿಕ ಬೇಸಾಯದ ಬಗ್ಗೆ ಅವರಲ್ಲಿ ದೃಢವಾದ ನಂಬಿಕೆ ಹುಟ್ಟಿಸಿರಬೇಕು. ಈ ರೀತಿಯಿಂದ ಸದಸ್ಯರಲ್ಲಿ ಸರಿಯಾದ ತಿಳಿವಳಿಕೆ ಹಾಗೂ ನಂಬಿಕೆಗಳನ್ನು ಬೆಳೆಸಿದ ನಂತರವೇ ಸಹಕಾರಿ ಬೇಸಾಯ ಸಂಘವನ್ನು ಕಟ್ಟಿ ಅದರ ನೋಂದಣಿ ಮಾಡಿಸಬೇಕು.

ದುಂಟು. ಇಂಥ ಕಾರ್ಯಕರ್ತರ ಅಭಾವದಲ್ಲಿ ಅನೇಕ ಸಂದರ್ಭಗಳಲ್ಲಿ ಬೇಸಾಯ ಸಂಘಗಳಿಗೆ ಅಗತ್ಯವಾದ ಮುಂದಾಳುಗಳೇ ದೊರಕುವುದಿಲ್ಲ. ಆದ್ದರಿಂದ ಇಂಥ ಕಾರ್ಯಕರ್ತರನ್ನು ಬೇಸಾಯ ಸಂಘದಲ್ಲಿ ಸದಸ್ಯರನ್ನಾಗಿ ಮಾಡಿಕೊಳ್ಳಲು ಅವಕಾಶ ವಿದೆ. ಆದರೆ ಇಂಥ ದುಡಿಯದ ಹಾಗೂ ಸ್ಥಳದಲ್ಲಿ ವಾಸಿಸದ ಸದಸ್ಯರ ಸಂಖ್ಯೆ, ಒಟ್ಟು ಸದಸ್ಯರ ಸಂಖ್ಯೆಯ $\frac{1}{4}$ಕ್ಕಿಂತ ಹೆಚ್ಚಿಗೆ ಇರಕೂಡದೆಂಬ ನಿರ್ಬಂಧವಿದೆ.

ಬೇಸಾಯ ಸಂಘದಲ್ಲಿ ದುಡಿಯುವುದೆಂದರೆ ಗುದ್ದಲಿಯಿಂದ ನೆಲ ಅಗಿಯುವು ದೊಂದೇ ಕೆಲಸವೆಂದು ಅರ್ಥವಲ್ಲ. ಬೇಸಾಯ ಸಂಘದಲ್ಲಿ ಕೆಲವು ಕಠಿಣ ಪರಿಶ್ರಮದ ಕೆಲಸಗಳಿದ್ದರೆ, ಕೆಲವು ಹಗುರ ಶ್ರಮದ ಕೆಲಸಗಳೂ ಇರುತ್ತವೆ. ತಮ್ಮ ತಮ್ಮ ಶಕ್ತಿ, ಕುಶಲತೆಗಳ ಪ್ರಕಾರ ಸದಸ್ಯರು ವಿಭಿನ್ನ ಕೆಲಸಗಳನ್ನು ಮಾಡಬಹುದು. ಆದರೆ ಇಂಥ ಕೆಲಸಗಳು ಬೇಸಾಯ ಸಂಘದ ಉತ್ಪಾದನೆ, ಆದಾಯಗಳನ್ನು ಹೆಚ್ಚಿಸುವಂತಹವಿರ ಬೇಕು. ಹೈನು ಉದ್ಯೋಗ, ಕೋಳಿಯ ಸಾಕಾಣಿಕೆ, ಕಾವಲು, ಬೇರೆ ಸಹಾಯಕ ಉದ್ಯೋಗಗಳು, ಇವೆಲ್ಲ ಬೇಸಾಯ ಸಂಘದ ಕೆಲಸಗಳೇ. ಮುದುಕರು, ದುರ್ಬಲರು, ಮಹಿಳೆಯರು, ಮಕ್ಕಳು ಇಂಥ ಕೆಲಸಗಳನ್ನು ಸುಗಮವಾಗಿ ಮಾಡಬಹುದು. ಈಚೆಗೆ ಬೇಸಾಯದಲ್ಲಿ ಬಹಳ ಶಾಸ್ತ್ರೀಯ ಸುಧಾರಣೆಗಳಾಗಿವೆ. ಸುಧಾರಿಸಿದ ಯಾಂತ್ರಿಕ ಸಲಕರಣೆಗಳೂ ಬಳಕೆಯಲ್ಲಿ ಬಂದಿವೆ. ಅವುಗಳ ಸಹಾಯದಿಂದ ವಿದ್ಯಾವಂತರು ಸಹ ಹೆಚ್ಚಿನ ದೈಹಿಕ ಪ್ರಯಾಸವಿಲ್ಲದೆ ಬುದ್ಧಿಯ ಉಪಯೋಗಮಾಡಿ ಉತ್ಪಾದನೆ ಹೆಚ್ಚಿ ಸುವಲ್ಲಿ ಶ್ರಮ ಸಲ್ಲಿಸಬಹುದು. ವಿದ್ಯಾವಂತ ಸದಸ್ಯನು ಮಟ್ಟಿ ಅಥವಾ ಕಪಲಿಯನ್ನು ಹೊಡೆಯದಿರಬಹುದು. ಆದರೆ ನೀರಾವರಿ ಪಂಪು, ಟ್ರಾಕ್ಟರು ಮುಂತಾದುವನ್ನು ಅವನು ಸುಲಭವಾಗಿ ನಡೆಸಬಹುದು. ಅಲ್ಲದೆ ಶಕ್ತಿಮಾನ ಬೆಳೆಗಳನ್ನು ಬೆಳೆಯುವಲ್ಲಿ ಅತ್ಯಗತ್ಯವಾದ ಬೌದ್ಧಿಕ, ತಾಂತ್ರಿಕ ಕುಶಲತೆಗಳ ಕೆಲಸಗಳನ್ನು ಅವನು ಮಾಡಬಹುದು. ಇಂಥ ಕೆಲಸಗಳ ಮಹತ್ವ ಬೇಸಾಯ ಸಂಘಕ್ಕೆ ಹೇಳತೀರದು.

ವಿದ್ಯಾವಂತ ಸದಸ್ಯರು, ವಿಶೇಷವಾಗಿ ಅಧ್ಯಕ್ಷರು, ಕಾಯದರ್ಶಿಗಳು, ದೈಹಿಕ ವಾಗಿ ಸದಸ್ಯರೊಡನೆ ಬೇಸಾಯ ಕೆಲಸಗಳಲ್ಲಿ ಭಾಗವಹಿಸಿದರೆ, ಸದಸ್ಯರಲ್ಲಿ ಅವರ ಬಗ್ಗೆ ಹೆಚ್ಚು ಆತ್ಮೀಯತೆ, ವಿಶ್ವಾಸಗಳು ಬೆಳೆಯುವುವು. ಅದರಿಂದ ವಿದ್ಯಾವಂತರು ತಮ್ಮ ಹೆಚ್ಚಿನ ಪ್ರಭಾವದಿಂದ ಸದಸ್ಯರಿಂದ ಕೆಲಸ ಮಾಡಿಸಬಲ್ಲರು. ವಿದ್ಯಾವಂತ ಸದಸ್ಯರಿಗೆ ಬೇಸಾಯ ಕೆಲಸಗಳ ಅನುಭವವು ಹೆಚ್ಚಿಗೆ ಆಗಿ ಆ ಕೆಲಸಗಳನ್ನು ಹೆಚ್ಚು ದಕ್ಷತೆಯಿಂದ ಅವರು ಮಾಡಲು ಸಮರ್ಥರಾಗುವರು. ಹೀಗೆ ಬೇಸಾಯ ಸಂಘದಲ್ಲಿ ಪ್ರತ್ಯಕ್ಷವಾಗಿ ದುಡಿಯುವುದು ಅದರ ಯಶಸ್ಸಿಗೆ ಅತ್ಯಂತ ಮಹತ್ವದ್ದಾಗಿದೆ.

ತುಂಡು ಭೂಮಿಗಳನ್ನು ಒಂದುಗೂಡಿಸುವುದು : ಬಡ ಬೇಸಾಯಗಾರರು ಬೇಸಾಯ ಸಂಘಗಳನ್ನು ಸ್ಥಾಪಿಸುವುದಾದರೆ ಅವರು ತುಂಡು ಭೂಮಿಗಳನ್ನೇ ಒಂದು ಗೂಡಿಸಬೇಕಾಗುವುದು. ಇಂಥ ತುಂಡು ಭೂಮಿಗಳು ಒಂದೇ ಕಡೆಗೆ ಇರುವುದಿಲ್ಲ. ಆದ್ದರಿಂದ ರಾಜ್ಯದ ಹಿಡವಳಿಗಳ ಕ್ರೋಢೀಕರಣದ ಕಾಯಿದೆಯನ್ನು ಉಪಯೋಗಿಸಿ

ಬೇಸಾಯ ಸಂಘಗಳಲ್ಲಿ ಸೇರುವ ಚಿಕ್ಕ ಬೇಸಾಯಗಾರರ ಹಿಡುವಳಿಗಳನ್ನು ಒಂದು ಗೂಡಿಸಬೇಕೆಂದು ಸರಕಾರದ ಧೋರಣವಿದೆ. ಹೀಗೆ ಮಾಡುವಲ್ಲಿ ಸಹ ಅನೇಕ ತೊಂದರೆಗಳು ಬರುತ್ತವೆ. ಆದ್ದರಿಂದ ಕ್ರೋಢೀಕರಣವಿಲ್ಲದೆ ಬೇಸಾಯ ಸಂಘವನ್ನು ಸ್ಥಾಪಿಸಬಾರದೆಂಬ ನಿರ್ಬಂಧವೇನೂ ಇಲ್ಲ.

ಕ್ರೋಢೀಕರಣವಿಲ್ಲದೆ ಬೇಸಾಯ ಸಂಘವನ್ನು ಸ್ಥಾಪಿಸಿದಲ್ಲಿ, ಕ್ರೋಢೀಕರಣದ ಪರಮಾವಧಿ ಪ್ರಯೋಜನ ದೊರಕದಿದ್ದರೂ ಒಂದುಗೂಡಿಸಿದ ಹಿಡುವಳಿಗಳ ತುಂಡು ಗಳು ಕಡಮೆ ಆಗುತ್ತವೆ. ಒಂದುಗೂಡಿಸುವ ಪೂರ್ವದಲ್ಲಿ 50–60 ತುಂಡುಗಳಿದ್ದರೆ, ಒಂದುಗೂಡಿಸಿದನಂತರ ಹತ್ತಿರ ಹತ್ತಿರ, ಇದ್ದ ಹಿಡುವಳಿಗಳನ್ನು ಕೂಡಿಸಿದಾಗ ಅವು 4–6 ತುಂಡುಗಳಾಗಬಹುದು. ಅಲ್ಲದೆ ಪರಸ್ಪರ ಒಡಂಬಡಿಕೆಯಿಂದ ಬೇಸಾಯಗಾರ ರೊಡನೆ ಹಿಡುವಳಿಗಳನ್ನು ಬದಲಿಸಿಕೊಂಡು ಸಹ ಕೆಲಮಟ್ಟಿಗೆ ತುಂಡುಗಳನ್ನು ಒಂದು ಗೂಡಿಸಿಕೊಳ್ಳಬಹುದು.

ಸಹಕಾರಿ ಬೇಸಾಯದಲ್ಲಿ ಭೂಮಿಯನ್ನು ಒಂದುಗೂಡಿಸುವುದರ ಜೊತೆಗೆ ಸಾಧನಗಳೂ ಒಂದುಗೂಡುತ್ತವೆ. ಅದರಿಂದ ಮುಂದೆ ವಿವರಿಸಿದಂತೆ ಅನೇಕ ಲಾಭ ಗಳಾಗುತ್ತವೆ.

ಒಂದುಗೂಡಿದ ಹಿಡುವಳಿಗಳು ಕಡ್ಡಾಯವಾಗಿ ಒಂದೇ ಹೊಲವಾಗದೆ ನಾಲ್ಕಾರು ಭಾಗಗಳಾದಲ್ಲಿ ಅವುಗಳ ಸಮರ್ಪಕವಾದ ಸಾಗುವಳಿಯು ಸಾಧ್ಯವಿದೆ. ಒಂದು ಉದ್ಯೋಗ ಸಂಸ್ಥೆಯು ಹಲವಾರು ಕಾರಖಾನೆಗಳನ್ನು ನಡೆಸುವುದುಂಟು. ಗಾಡಗೀಳ ಸಮಿತಿಯು ಎತ್ತಿ ತೋರಿಸಿದಂತೆ ಬೇಸಾಯ ಸಂಘವು ಇಂಥ ಉದ್ಯೋಗಸಂಸ್ಥೆ. ಅದು ಸರಿಯಾದ ಪರಿಣಾಮಕಾರಿಯಾದ ರೀತಿಯಲ್ಲಿ ಹಲವೆಡೆ ಇರುವ ಭೂಮಿಗಳ ಸಾಗುವಳಿಯ ವ್ಯವಸ್ಥೆ ಮಾಡಬೇಕು. ಸಂಚಾಲನೆಯ ಲಾಭಹಾನಿಗಳ ಹೊಣೆ ಮಾತ್ರ ಸಾಮೂಹಿಕ ವಾಗಿ ಸಂಸ್ಥೆಯ ಮೇಲೆ ಇರುತ್ತದೆಂಬುದನ್ನು ಮರೆಯಕೂಡದು.

ವೈಯಕ್ತಿಕ ಬೇಸಾಯಗಾರರು ತಮ್ಮ ಹಲವೆಡೆಯ ಹಿಡುವಳಿಗಳನ್ನು ಸಾಗು ಮಾಡಿಯೇ ಮಾಡುತ್ತಾರೆ. ಬೇಸಾಯ ಸಂಘವು ತನ್ನ ಒಂದುಗೂಡಿದ ಸಾಧನಗಳಿಂದ ಯೋಜನಾಬದ್ಧವಾಗಿ, ಹೆಚ್ಚು ಯಶಸ್ವಿಯಾಗಿ ಇಂಥ ಹಿಡುವಳಿಗಳನ್ನು ಸಾಗುಮಾಡ ಬಹುದು. ಕಾವಲಿನ ಪೇಚಾಟದ ಬಗ್ಗೆ ಹೇಳಲಾಗುತ್ತದೆ. ಎಲ್ಲ ಕಡೆಗೂ ಹರಡಿರುವ ಒಣ ಬೇಸಾಯದ ಬೆಳೆಗಳನ್ನು ಬೇಸಾಯಗಾರರು ಎಂದಿಗೂ ಕಾಯುವುದಿಲ್ಲ. ಬೇಸಾಯ ಸಂಘವು ಸಹಗ್ರಾಮದ ರೈತರೊಡನೆ ಸಹಕಾರ, ಸೌಹಾರ್ದಗಳಿಂದಲೇ ಇಂಥ ಬೆಳೆಗಳ ಸಂರಕ್ಷಣೆ ಮಾಡಿಕೊಳ್ಳಬಹುದು. ವಿಶಿಷ್ಟ ಬೆಳೆಗಳ, ನೀರಾವರಿ ಬೆಳೆಗಳ ಮತ್ತು ತೋಟದ ಬೆಳೆಗಳ ರಕ್ಷಣೆಯನ್ನು ರೈತರು ಸ್ಥಳದಲ್ಲೇ ಒಬ್ಬರು ಇದ್ದು ಮಾಡುತ್ತಾರೆ. ಬೇಸಾಯ ಸಂಘವು ತನ್ನ ಹೆಚ್ಚಿನ ಜನಶಕ್ತಿಯಿಂದ ಇಂಥ ಬೆಳೆಗಳ ರಕ್ಷಣೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಬಲ್ಲದು.

ಭೂಮಿಯ ವಿಸ್ತಾರ ಹೆಚ್ಚಾಗುತ್ತದೆ. ಮಳೆಯ ಅಥವಾ ನೀರಾವರಿಯ ಅನುಕೂಲತೆ ಹೆಚ್ಚಿಗೆ ಇದ್ದ ಪ್ರದೇಶದಲ್ಲಿ ಈ ವಿಸ್ತಾರವು ಕಡಮೆ ಆಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಭೂಸುಧಾರಣೆಯ ಕಾಯಿದೆಯ ಪ್ರಕಾರ ಈ ಕನಿಷ್ಠ ಮಿತಿಯನ್ನು 55 ಎಕರೆ ಇಡಲಾಗಿದೆ.

ಬೇಸಾಯ ಸಂಘದಲ್ಲಿ ಉತ್ತಮ ಭೂಮಿಯನ್ನೇ ಕೂಡಿಸಬೇಕೆಂದು ಒಂದು ಮೂಢನಂಬಿಕೆ. ಬಡವ ಹಾಗೂ ಚಿಕ್ಕ ಬೇಸಾಯಗಾರರ ಸಲುವಾಗಿಯೇ ಈ ಕಾರ್ಯಕ್ರಮವಿದೆ ಎಂದಬಳಿಕ ಅವರ ಭೂಮಿಯನ್ನೇ ಬೇಸಾಯ ಸಂಘದಲ್ಲಿ ಸೇರಿಸ ಬೇಕಾಗುತ್ತದೆ; ಅನುಕೂಲಸ್ಥರ ಭೂಮಿಯನ್ನು ಅದರಲ್ಲಿ ಸೇರಿಸಲಾಗುವುದಿಲ್ಲ. ಬಡ ವರ ಭೂಮಿಯಲ್ಲಿ ಸುಧಾರಿಸಿ ಉತ್ಪತ್ತಿ ಹೆಚ್ಚಿಸುವ ಸಾಧ್ಯತೆ ಇರುತ್ತದೆ. ಆದರೆ ಅದು ವೈಯಕ್ತಿಕವಾಗಿ ಸಾಧ್ಯವಾಗದು; ಒಟ್ಟುಗೂಡಿಕೊಂಡು ಇಂಥ ಅಭಿವೃದ್ಧಿಯನ್ನು ಸುಲಭವಾಗಿ ಸಾಧಿಸಬಹುದು. ಅನುಕೂಲಸ್ಥರ ಭೂಮಿಯಲ್ಲಿ ಅಭಿವೃದ್ಧಿ ಇದ್ದೇ ಇರುತ್ತದೆ. ಇರದಿದ್ದರೂ ವೈಯಕ್ತಿಕವಾಗಿಯೇ ಅಂಥ ಸುಧಾರಣೆಯನ್ನು ಅವರು ಮಾಡಿಕೊಳ್ಳಬಹುದು. ಆದ್ದರಿಂದ ಸರಿಯಾದ ಪ್ರಚಾರ, ತಿಳಿವಳಿಕೆ ಹಬ್ಬಿದರೆ ಬಡ ಬೇಸಾಯಗಾರರ ಭೂಮಿಯೇ ಬೇಸಾಯ ಸಂಘದಲ್ಲಿ ಹೆಚ್ಚು ಸೇರುತ್ತದೆ; ಅನುಕೂ ಲಸ್ಥರ ಉತ್ತಮ ಭೂಮಿ ಏನೂ ಸೇರುವುದಿಲ್ಲ. ಇಂಥ ಬಡಕಲು ಭೂಮಿಯನ್ನು ಸುಧಾರಿಸಿ ಉತ್ಪತ್ತಿ ಹೆಚ್ಚಿಸುವುದು ಸಹಕಾರಿ ಬೇಸಾಯದ ಒಂದು ಮಹತ್ವದ ಉದ್ದೇಶ. ಅಭಿವೃದ್ಧಿ. ನೀರಾವರಿಯ ಅನುಕೂಲತೆ ಹೆಚ್ಚಿಸಿದ ಬಳಿಕ ಇಂಥ ಭೂಮಿಯು ಲಾಭ ದಾಯಕವೂ ಆಗುತ್ತದೆ. ಹೆಚ್ಚಿಗೆ ಲಾಭದಾಯಕವಾಗಲು ಬೇಸಾಯದ ಜೊತೆಗೆ ಸಹಾಯಕ ಉದ್ಯೋಗಗಳನ್ನೂ ಜೋಡಿಸಿಕೊಳ್ಳಬೇಕು. ಈ ಎಲ್ಲ ಸಂಗತಿಗಳನ್ನು ಲಕ್ಷಿಸಿ ಬೇಸಾಯ ಸಂಘವನ್ನು ಕಟ್ಟುವಲ್ಲಿ ಅದಕ್ಕೆ ಅಗತ್ಯವಿದ್ದ ವಿಸ್ತಾರವನ್ನು ನಿಶ್ಚಯಿಸಬೇಕು.

ಸಾಮೂಹಿಕ ಬೇಸಾಯದಲ್ಲಿ ಭೂಮಿಯ ಫಲವತ್ತತೆ, ನೀರಾವರಿ ಮುಂತಾದ ನೈಸರ್ಗಿಕ ಅನುಕೂಲತೆಗಳು ಮಹತ್ವದವೇನೋ ನಿಜ. ಆದರೆ ಇವು ನಿರ್ಜೀವ ಶಕ್ತಿ ಗಳು. ಇವು ಸ್ವಲ್ಪ ಹೆಚ್ಚು ಕಡಮೆ ಇದ್ದರೆ ಸುಧಾರಿಸಿಕೊಳ್ಳಬಹುದು. ಬೇಸಾಯ ಸಂಘ ದಲ್ಲಿ ಜನಶಕ್ತಿಯ ದುಡಿತ, ಒಗ್ಗಟ್ಟು ಹೆಚ್ಚು ಮಹತ್ವದವು. ಈ ಸಜೀವ ಶಕ್ತಿ ಹೆಚ್ಚು ಅನುಕೂಲವಾಗಿದ್ದರೆ ಸ್ವಲ್ಪ ಅಭಿವೃದ್ಧಿ ಇಲ್ಲದ ಭೂಮಿಯನ್ನೂ ಅಭಿವೃದ್ಧಿಮಾಡಿ ಕೊಂಡು ಉನ್ನತಿ ಸಾಧಿಸಬಹುದು. ಜನಶಕ್ತಿಯು ಅನುಕೂಲವಾಗಿರದೆ, ಭೂಮಿಯು ಬೇಕಾದಷ್ಟು ಫಲವತ್ತಾಗಿದ್ದು, ಹಣ ಬೇಕಾದಷ್ಟು ಸುರಿದರೂ ಅಂಥ ಬೇಸಾಯ ಸಂಘವು ಯಶಸ್ವಿಯಾಗಿ ನಡೆಯದು.

ಬೇಸಾಯ ಸಂಘದಲ್ಲಿ ಸೇರುವ ಭೂಮಿ ಖಾಸಗಿಯಾಗಿರಬಹುದು ಅಥವಾ ಸರಕಾರಿ ಭೂಮಿ ಇರಬಹುದು. ಸಂಯುಕ್ತ ಬೇಸಾಯ ಸಂಘದಲ್ಲಿ ಚಿಕ್ಕ ಬೇಸಾಯ ಗಾರರು ತಮ್ಮ ಇದ್ದ ಹಿಡುವಳಿಗಳನ್ನೇ ಒಂದುಗೂಡಿಸುತ್ತಾರೆ. ಇಂಥ ಭೂಮಿಯು ಸಾಮಾನ್ಯವಾಗಿ ಸಾಗುವಳಿಯಲ್ಲಿದ್ದರೂ, ಯಾವುದೇ ಬಗೆಯ ಅಭಿವೃದ್ಧಿ ಇಲ್ಲದೇ

ಇರುತ್ತದೆ. ಸಾಮೂಹಿಕ ಶ್ರಮ ಸಾಧನಗಳಿಂದ ಇವರಲ್ಲಿ ಸಾಕಷ್ಟು ಅಭಿವೃದ್ಧಿ ಹಾಗೂ ನೀರಾವರಿಯ ಸೌಕರ್ಯಗಳು ಆಗಬಲ್ಲವು.

ಸರಕಾರಿ ಭೂಮಿಯು ಸಾಮಾನ್ಯವಾಗಿ ಪಡಭೂಮಿ ಅಥವಾ ಕಾಡುಭೂಮಿ ಇರುತ್ತದೆ. ಇಂಥ ಭೂಮಿಯನ್ನು ಆಬಾದ ಮಾಡಿ ಸಾಗುವಳಿಯಲ್ಲಿ ತರುವುದು ಬಹಳ ಕಷ್ಟದ ಕೆಲಸ. ಇದಕ್ಕೆ ಬಹಳ ಬಂಡವಲು ಬೇಕಾಗುತ್ತದೆ. ಆದರೆ ಸಾಮೂಹಿಕ ಶ್ರಮ, ಸಾಧನಗಳಿಂದ ಇಂಥ ಭೂಮಿಯನ್ನು ತ್ವರಿತವಾಗಿ ಆಬಾದು ಮಾಡಬಹುದು. ಅನುಕೂಲವಾದ ಹಂತಗಳಲ್ಲಿ ಬೇಸಾಯ ಸಂಘದ ಭೂಮಿಯು ಅಭಿವೃದ್ಧಿಯನ್ನು ಕೈಕೊಂಡು ಸಾಂದ್ರಬೇಸಾಯದಿಂದ ಅದರಲ್ಲಿ ಉತ್ಪತ್ತಿಯನ್ನು ಹೆಚ್ಚಿಸಬೇಕು.

ಭೂಮಿಯನ್ನು ಒಂದುಗೂಡಿಸುವುದು : ಸಹಕಾರಿ ಬೇಸಾಯವು ಶೇಕಡಾ 60ರಷ್ಟಿರುವ ಚಿಕ್ಕ ಬೇಸಾಯಗಾರರ ಸಲುವಾಗಿ ಇದೆ ಎಂದ ಬಳಿಕ ಇಂಥ ಬೇಸಾಯಗಾರರು ತಮ್ಮ ಹಿಡುವಳಿಗಳನ್ನು ಸಾಮೂಹಿಕ ಬೇಸಾಯಕ್ಕಾಗಿ ಕನಿಷ್ಠ 5 ವರ್ಷಗಳವರೆಗೆ ಒಂದುಗೂಡಿಸಬೇಕಾಗುತ್ತದೆ. ಇದಕ್ಕಿಂತ ಕಡಮ ಅವಧಿಯಲ್ಲಿ ಸಾಮೂಹಿಕ ಬೇಸಾಯದ ಲಾಭ, ಹಾನಿಗಳು ಗೊತ್ತಾಗಲಾರವು; ಅಭಿವೃದ್ಧಿಯ ಕೆಲಸಗಳೂ ಪೂರ್ಣವಾಗಲಾರವು. ಸಹಕಾರಿ ಬೇಸಾಯದ ಪ್ರಯೋಜನದ ಮನವರಿಕೆಯಾಗಿ ತಮ್ಮ ಸಂತೋಷದಿಂದ ಬೇಸಾಯ ಸಂಘದ ಸದಸ್ಯರು 5 ವರ್ಷಕ್ಕಿಂತ ಹೆಚ್ಚಿನ ಅವಧಿಯವರೆಗೆ ಭೂಮಿಗಳನ್ನು ಒಂದುಗೂಡಿಸಬಹುದು.

ಏನಾದರೂ ಹೆಚ್ಚಿನ ಅನಾನುಕೂಲತೆಯಿಂದ ಬೇಸಾಯ ಸಂಘದ ಯಾವನೊಬ್ಬ ಸದಸ್ಯನು ಸಂಘದಿಂದ ಹೊರಬೀಳಬಯಸಿದರೆ ತನ್ನ ಶೇರನ್ನೂ, ಭೂಮಿಯನ್ನೂ ಬೇರೆ ಸದಸ್ಯರ ಹೆಸರಿನಲ್ಲಿ ಬದಲಾಯಿಸಿ ತನ್ನ ಸಂಘದ ಸದಸ್ಯತ್ವವನ್ನು ತ್ಯಜಿಸಬಹುದು ಅಥವಾ ಅಂಥ ಸದಸ್ಯನು ಊರನ್ನೇ ಬಿಟ್ಟು ಹೊರಗೆ ಹೋಗುತ್ತಿದ್ದರೆ ಅವನು ತನ್ನ ಭೂಮಿಯನ್ನು ಗುತ್ತಿಗೆಯಾಗಿ (ಲಾವಣಿಯಾಗಿ) ಸಂಘಕ್ಕೆ ಕೊಡಬಹುದು.

ಭೂಮಿಯನ್ನು ಬೇಸಾಯ ಸಂಘದಲ್ಲಿ ಒಂದುಗೂಡಿಸುವಾಗ್ಗೆ ಸದಸ್ಯನು ಒಂದು ಒಡಂಬಡಿಕೆಯ ಪತ್ರವನ್ನು ಬರೆದು ಕೊಡಬೇಕಾಗುತ್ತದೆ. ಇಂಥ ದಸ್ತಾವೇಜನ್ನು ಸಬ್ ರಿಜಿಸ್ಟ್ರಾರರ ಆಫೀಸಿನಲ್ಲಿ ನೊಂದಾಯಿಸಲೂ ಬೇಕು. ಇದರಿಂದ ಅವನ ಒಡೆತನಕ್ಕೆ ಧಕ್ಕೆಯೂ ಹತ್ತುವುದಿಲ್ಲ. ಅವನು ಕೇವಲ ತನ್ನ ಸಾಗುವಳಿಯ ಹಕ್ಕನ್ನು ಮಾತ್ರ ಸಂಘಕ್ಕೆ ಒಪ್ಪಿಸುತ್ತಾನೆ. ಆದರೆ ಸಂಘದ ಮುಖಾಂತರ ಸುಧಾರಣೆಗಳನ್ನು ಕೈಕೊಳ್ಳಲು ಅಗತ್ಯವಾದ ಸಾಲಗಳನ್ನು ಪಡೆಯಲು ತನ್ನ ಭೂಮಿಯನ್ನು ಆಧಾರ ಮಾಡಿಕೊಡಲು ಒಪ್ಪಿಗೆ ಕೊಡಬೇಕಾಗುತ್ತದೆ. ಈ ದಸ್ತಾವೇಜಿನ ಮುಖ್ಯ ಕರಾರುಗಳು ಮುಂದಿನ ಪುಟದಲ್ಲಿನಂತಿವೆ:-

ಸೋಮಾರಿಗಳಾಗಬಹುದು. ಅಲ್ಲದೆ ಸ್ಥಳದಲ್ಲಿರದ, ದುಡಿಯದ ದೊಡ್ಡ ಭೂಮಾಲಿಕರೇ ತಮ್ಮ ಒಳಗದವರನ್ನು ಸೇರಿಸಿಕೊಂಡು ಅಥವಾ ಸಂಬಳದ ಆಳುಗಳನ್ನು ಸೇರಿಸಿಕೊಂಡು ತಮ್ಮದೇ ಪ್ರಭುತ್ವವಿರುವ ತತ್ವರಹಿತ ಬೇಸಾಯ ಸಂಘಗಳನ್ನು ಹೆಚ್ಚಿಚ್ಚು ಸ್ಥಾಪಿಸಲು ಅವಕಾಶವಾಗುತ್ತದೆ. ಇದಾಗದಂತೆ ವ್ಯವಸ್ಥೆ ಮಾಡಲು ಭೂಮಿಯ ಪ್ರತಿಫಲವನ್ನು ಪ್ರಚಲಿತ ಭೂಮಿಯ ಕಾಯಿದೆಯಲ್ಲಿ ಕಾಣಿಸದ ಮಿತಿಯೊಳಗೆ ನಿರ್ಧರಿಸಬೇಕು.

ಈ ವ್ಯವಸ್ಥೆಯಿಂದ ದುಡಿತಕ್ಕೆ ಸಾಕಷ್ಟು ಪ್ರತಿಫಲ, ಉತ್ತೇಜನ ಕೊಡಲಾಗುವುದು. ಇದರಿಂದ ಭೂಮಿಗೆ ಸಾಕಷ್ಟು ಲಾಭ ದೊರಕುವುದಿಲ್ಲೆಂಬ ಅಸಮಾಧಾನವೂ ಇರಕೂಡದು. ಏಕೆಂದರೆ ಎಲ್ಲ ಖರ್ಚು, ನಿಧಿಗಳನ್ನು ವಜಾ ತೆಗೆದ ಬಳಿಕ ಉಳಿಯುವ ಹೆಚ್ಚಿನ ಲಾಭದಲ್ಲಿ ಸಂಘವು ಗೊತ್ತುಪಡಿಸಿದ ಅಂಶವನ್ನು ಭೂಮಿಯ ಹೆಚ್ಚಿನ ಲಾಭ (ಲ್ಯಾಂಡ್ ಡಿವಿಡೆಂಡ್)ವೆಂದು ಹಂಚಬಹುದು.

ಭೂಮಿಯ ಪ್ರತಿಫಲವನ್ನು ಎಲ್ಲ ಭೂಮಿಗಳ ಮೇಲೆ ಸರಿಸಮಾನವಾಗಿ ಹಂಚಲಾಗುತ್ತದೆಂಬ ತಪ್ಪು ತಿಳಿವಳಿಕೆ ಬೇಸಾಯಗಾರರಲ್ಲಿ ಸಹಕಾರಿ ಬೇಸಾಯದ ಬಗ್ಗೆ ಜಿಗುಪ್ಸೆ ಹುಟ್ಟಿಸುತ್ತದೆ. ಭೂಮಿಗೆ ತಕ್ಕಂತೆ ಭೂಮಿಯ ಪ್ರತಿಫಲ ಹಂಚಲಾಗುತ್ತದೆಂಬ ಬಗ್ಗೆ ಬೇಸಾಯಗಾರರಿಗೆ ಚೆನ್ನಾಗಿ ಮನವರಿಕೆ ಮಾಡಬೇಕು. ಆರಂಭದಲ್ಲೇ ಭೂಮಿಗಳನ್ನು ಒಂದುಗೂಡಿಸಿದಾಕ್ಷಣವೇ ಅವುಗಳ ಫಲವತ್ತತೆ, ಉತ್ಪತ್ತಿ, ವಿಸ್ತಾರಗಳನ್ನು ಲಕ್ಷಿಸಿ ಅವುಗಳ ಬೆಲೆ ನಿರ್ಧರಿಸಬೇಕು. ಈ ಬೆಲೆಯ ಆಧಾರದ ಮೇಲೆ ಭೂಮಿಯ ಪ್ರತಿಫಲವನ್ನು ಹಾಗೂ ಭೂಮಿಯ ಹೆಚ್ಚಿನ ಲಾಭವನ್ನು ಹಂಚಬೇಕು. ಉದಾಹರಣೆಗೆ ಒಂದು ಬೇಸಾಯ ಸಂಘದಲ್ಲಿ ಒಂದುಗೂಡಿಸಿದ ಒಟ್ಟು ಭೂಮಿಗಳ ಬೆಲೆ 1,00,000 ರೂಪಾಯಿ ಇದೆ ಎಂದು ತಿಳಿಯುವಾ. ಇದರಲ್ಲಿ 'ಅ' ನ ಭೂಮಿಯಬೆಲೆ 10,000 ರೂಪಾಯಿ ಇದೆ. 'ಆ' ನ ಭೂಮಿಯ ಬೆಲೆ 20,000 ರೂಪಾಯಿ ಇದೆ ಎನ್ನೋಣ. ಬೇಸಾಯ ಸಂಘವು ಭೂಮಿಯ ಬೆಲೆ 10,000 ರೂಪಾಯಿ ಇದೆ. ಹಂಚಬೇಕಾದ ಭೂಮಿಯ ಪ್ರತಿಫಲ 5,000 ರೂಪಾಯಿ ಇದೆ ಎನ್ನೋಣ. ಈ ಸಂದರ್ಭದಲ್ಲಿ 'ಅ' ನಿಗೆ ಭೂಮಿಯ ಮೇಲೆ 15,000 ರೂಪಾಯಿ ಆದಾಯ ಬಂದರೆ, 'ಆ' ನಿಗೆ 3,000 ರೂಪಾಯಿ ದೊರಕುವುದು.

ಒಂದುಗೂಡಿಸಿದ ಭೂಮಿಗಳನ್ನೆಲ್ಲ ಪ್ರಮಾಣಿಕ ಎಕರೆಗಳಲ್ಲಿ (ಸ್ಟಾಂಡರ್ಡ್ ಎಕರೆಗಳು) ಪರಿವರ್ತಿಸಿ ಅದರ ಮೇಲೂ ಭೂಮಿಯ ಆದಾಯವನ್ನು ಹಂಚಬಹುದು. ಹಳ್ಳಿಯಲ್ಲಿ ಪ್ರಚಲಿತವಾಗಿರುವ ಗುತ್ತಿಗೆ ಅಥವಾ ಲಾವಣಿಯನ್ನು ಸಹ ಭೂಮಿಯ ಪ್ರತಿಫಲವೆಂದು ಗೊತ್ತುಪಡಿಸಬಹುದು. ಆದರೆ ಅದು ಭೂಕಾಯಿದೆಯ ಮಿತಿಯನ್ನು ಮೀರಕೂಡದು. ಈ ಬಗ್ಗೆ ಸ್ಪಷ್ಟ ತಿಳಿವಳಿಕೆಯನ್ನು ಒಂದುಗೂಡುವ ಬೇಸಾಯಗಾರರಲ್ಲಿ ತುಂಬುವುದಲ್ಲದೆ, ಸಂಘವು ಗೊತ್ತುವಳಿಯನ್ನೂ ಪಾಸುಮಾಡಿರಬೇಕು.

ಭೂಮಿಯ ಪರಿಹಾರದ ಸಮಸ್ಯೆ : ಬೇಸಾಯಸಂಘದಲ್ಲಿ ಒಂದುಗೂಡುವ ಬೇಸಾಯಗಾರರಿಗೆ ಚೆನ್ನಾಗಿ ತಿಳಿಸಿಕೊಡಬೇಕಾದ ಇನ್ನೊಂದು ಮಹತ್ವದ ತತ್ವ ಭೂಮಿಯ ಪರಿಹಾರದ ತತ್ವ. ಈ ಬಗ್ಗೆ ಸರಿಯಾಗಿ ತಿಳಿದುಕೊಳ್ಳದೆ ಮುಂದೆ ಸದಸ್ಯರಲ್ಲಿ ಒಡಕುಂಟಾಗಿ ಬೇಸಾಯಸಂಘವು ಛಿನ್ನ ಭಿನ್ನವಾಗಬಹುದು ಅಥವಾ ಅವಿಶ್ವಾಸ, ಮತ ಭೇದಗಳಿಂದ ಸಂಘದ ಭೂಮಿಯಲ್ಲಿ ಆಗಬೇಕಾದ ಸುಧಾರಣೆಗಳೇ ಆಗದೆ ಸಂಘದ ಆರ್ಥಿಕ ಉನ್ನತಿ ನಿಂತುಹೋಗಬಹುದು. ಅದರಿಂದ ಬೇಸಾಯಸಂಘದ ಮೂಲ ಉದ್ದೇಶವೇ ವಿಫಲವಾಗುವುದು.

ಬೇಸಾಯಸಂಘದಲ್ಲಿ ಸೇರಿದ ಓರ್ವ ಸದಸ್ಯನು ಒಂದುಗೂಡಿಸಿದ 4 ಎಕರೆ ಬಂಜರು ಭೂಮಿ ಇದೆ ಎಂದು ತಿಳಿಯೋಣ. ಅದರ ಸದ್ಯದ ಬೆಲೆ 400 ರೂಪಾಯಿ ಮಾತ್ರ ಇದೆ ಎನ್ನೋಣ. ಆ ಭೂಮಿಯಲ್ಲಿ ಸಂಘವು ಒಡ್ಡು ಹಾಕಿಸಿ, ಬಾವಿಯನ್ನು ತೋಡಿಸಿ, ತೋಟ ಮಾಡಿತೆಂದು ತಿಳಿಯೋಣ. ಇಂಥ ಭೂಮಿಯ ಬೆಲೆ ಸಹಜವಾಗಿ 12,000 ರೂಪಾಯಿ ಆಗಬಹುದು. ಅದರ ವಾರ್ಷಿಕ ಆದಾಯ ಕೂಡ ನಾಲ್ಕರಷ್ಟು, ಐದರಷ್ಟು ಹೆಚ್ಚಾಗಬಹುದು. ಇದೆಲ್ಲ ಆ ಭೂಮಿಯ ಒಡೆಯನ ಒಬ್ಬನ ಶ್ರಮ ಅಥವಾ ಬಂಡವಲಿನಿಂದ ಆಗುವುದಿಲ್ಲ. ಸಂಘದಲ್ಲಿ ಸೇರಿದ ಎಲ್ಲ ಸದಸ್ಯರ ಸಾಮೂಹಿಕ ಶ್ರಮ ಹಾಗೂ ಬಂಡವಲಿನಿಂದ ಆಗುತ್ತದೆ. 5 ವರ್ಷಗಳ ಮೇಲೆ ಭೂಮಾಲಿಕನು ಭೂಮಿಯನ್ನು ಉಚಿತವಾಗಿ ಪಡೆಯುವುದು ನ್ಯಾಯವಾಗದು. ಅದಕ್ಕೆ ತಕ್ಕ ಪರಿಹಾರವನ್ನು ಗೊತ್ತುಪಡಿಸುವ ವಿಧಾನವನ್ನು ಹಾಕಿಕೊಳ್ಳಬೇಕು. ಅಂದರೆ ಎಲ್ಲ ಸದಸ್ಯರೂ ಉತ್ಸಾಹದಿಂದ, ಒಗ್ಗಟ್ಟಿನಿಂದ ಇಂಥ ಸುಧಾರಣೆಯ ಕೆಲಸಗಳಲ್ಲಿ ತೊಡಗುವರು. ಸದಸ್ಯರ ವಿಶ್ವಾಸ, ಒಗ್ಗಟ್ಟುಗಳೇ ಬೇಸಾಯ ಸಂಘವನ್ನು ಭದ್ರಪಡಿಸುವ ಶಕ್ತಿ.

ಭೂಮಿಯ ಸುಧಾರಣೆಯ ಪರಿಹಾರ ಎಲ್ಲ ಭೂಮಿಗಳಿಗೂ, ಎಲ್ಲ ಸುಧಾರಣೆಗಳಿಗೂ ಒಂದೇ ಆಗಲಾರದು. ಉದಾಹರಣೆಗೆ ಟ್ರಾಕ್ಟರು ಉಳುಮೆಯ ಒಂದು ಸುಧಾರಣೆ ಮಾಡಿದ್ದರೆ 4–5 ವರ್ಷಗಳಲ್ಲೇ ಸಂಘವು ಸಾಕಷ್ಟು ಅದರಿಂದ ಲಾಭ ಪಡೆದಿರಬಹುದು. 5 ವರ್ಷಗಳ ನಂತರ ಭೂಮಿಯನ್ನು ವಾಪಸ್ಸು ಬಿಡುವಾಗ ಸಂಘವು ನಾಮಮಾತ್ರದ ಪರಿಹಾರ ತೆಗೆದುಕೊಂಡು ಭೂಮಿಯನ್ನು ವಾಪಸ್ಸು ಬಿಡಬಹುದು. ಅದೇ ಸಂಘವು ಭೂಮಿಯಲ್ಲಿ ಹೊಸದಾಗಿ ತೆಂಗಿನ ತೋಟವನ್ನು ಬೆಳೆಸಿದ್ದರೆ 870 ವರ್ಷದ ಮೊದಲು ಆ ತೋಟದಿಂದ ಸಾಮಾನ್ಯವಾಗಿ ಉತ್ಪನ್ನವೇ ಬರುವುದಿಲ್ಲ. ಮುಂದೆ 10 ವರ್ಷಗಳಲ್ಲಿ ಅದರ ಪೂರ್ಣಲಾಭವು ದೊರಕಬಹುದು. 5 ವರ್ಷಗಳ ನಂತರವೇ ಅಂಥ ಭೂಮಿಯನ್ನು ವಾಪಸ್ಸು ಬಿಡುವುದಾದರೆ ಬೇಸಾಯಸಂಘವು ಭೂಮಿಯ ಹೆಚ್ಚಿನ ಬೆಲೆಯನ್ನು ಲಕ್ಷಿಸಿ, ಬೆಲೆಯ ಕೆಲವು ಭಾಗವನ್ನು ಕೊಡತಕ್ಕ ಪರಿಹಾರವೆಂದು ಗೊತ್ತುಮಾಡಬಹುದು; ಅಂಥ ಪರಿಹಾರವನ್ನು ಪಡೆದು ಭೂಮಿಯನ್ನು ವಾಪಸ್ಸು ಬಿಡಬಹುದು. ಇಂಥ ಪರಿಹಾರವನ್ನು ಸಂಘದ ಆಡಳಿತದವರು ಸದಸ್ಯರೊಡನೆ ಹಾಗೂ ಸ್ಥಳಿಕ ಅನುಭವಿಕರೊಡನೆ ಪರಾಮರ್ಶಿಸಿ ನಿರ್ಧರಿಸಬೇಕು. ಸುಧಾರಣೆಗಳನ್ನು ಮಾಡುವ

ಕಾಲಕ್ಕೆ ಈ ಪರಿಹಾರದ ನಿರ್ದಿಷ್ಟ ವಿಧಾನವನ್ನು ಗೊತ್ತು ಮಾಡಬೇಕು. ಅಂದರೆ ಸದಸ್ಯರು ಹುಮ್ಮಸ್ಸಿನಿಂದ, ಭರವಸೆಯಿಂದ ಈ ಸುಧಾರಣೆಗಳಲ್ಲಿ ತೊಡಗುತ್ತಾರೆ.

ಬೇಸಾಯ ಸಾಧನಗಳನ್ನು ಒಂದುಗೂಡಿಸುವುದು : ಸಹಕಾರಿ ಬೇಸಾಯಕ್ಕೆ ಭೂಮಿಯ ಹೊರತಾಗಿ ಹೂಡುವ ಎತ್ತು, ನೇಗಿಲು ಮುಂತಾದ ಬೇಸಾಯದ ಸಲಕರಣೆಗಳೂ ಬೇಕಾಗುತ್ತವೆ. ಈ ಸಲಕರಣೆಗಳೆಲ್ಲವೂ ಸಂಘದ ಸಾಮಾಜಿಕ ಒಡೆತನಕ್ಕೆ ಸೇರುವಂತಾಗಬೇಕು. ಅದು ಒಮ್ಮೆಲೇ ಆಗಲಾರದು. ಕ್ರಮೇಣವಾಗಿ ಸದಸ್ಯರನ್ನು ಮನವೊಲಿಸಿ ಆ ಮಟ್ಟಕ್ಕೆ ಅವರನ್ನು ತರಬೇಕು. ಸದಸ್ಯರು ಒಮ್ಮೆಲೇ ಸಿದ್ಧರಾಗದಿದ್ದಲ್ಲಿ ಇಂಥ ಸಾಧನಗಳನ್ನು ವೈಯಕ್ತಿಕ ಒಡೆತನದಲ್ಲಿಯೇ ಇಟ್ಟು ಅವನ್ನು ಸಾಮೂಹಿಕ ನಿಯಂತ್ರಣದಲ್ಲಿ ತೆಗೆದುಕೊಂಡು ಸಂಘದ ಕಾರ್ಯಕ್ಕೆ ಸಾಮೂಹಿಕವಾಗಿ ಉಪಯೋಗಿಸಬೇಕು. ಇಂಥ ಉಪಯೋಗಕ್ಕಾಗಿ ಅವುಗಳ ಒಡೆಯರಿಗೆ ಯೋಗ್ಯ ಬಾಡಿಗೆ ಅಥವಾ ಪ್ರತಿಫಲವನ್ನು ಕೊಡಬಹುದು. ಸಂಘದ ಕೆಲಸಕ್ಕೆ ಬಾಧೆ ತಟ್ಟದಂತೆ ತಕ್ಕ ವ್ಯವಸ್ಥೆ ಮಾಡಿಕೊಳ್ಳಬೇಕು.

ಆರಂಭದ ಸ್ಥಿತಿಯಲ್ಲಿ ಬೇಸಾಯ ಸಲಕರಣೆಗಳನ್ನು ಕೊಳ್ಳಲು ಸಂಘದ ಬಳಿ ಹಣ ಹೆಚ್ಚಿಗೆ ಇರುವುದಿಲ್ಲ. ಆಗ ಅವನ್ನು ಕೊಂಡದ್ದೇ ಆದರೆ ಸಂಘದ ಮೇಲೆ ಹೆಚ್ಚಿಗೆ ಹೊರೆಯಾಗಿ ಸುಧಾರಣೆಯ ಹಾಗೂ ಉತ್ಪಾದನೆಯ ಕೆಲಸಗಳು ತಡೆಯುವುವು. ಇದರಿಂದ ಉತ್ಪತ್ತಿ, ಆದಾಯಗಳು ಸಾಕಷ್ಟು ಹೆಚ್ಚದೆ ಸದಸ್ಯರಲ್ಲಿ ಅವಿಶ್ವಾಸ, ಅಸಂತೋಷ ಬೆಳೆಯಬಹುದು. ಆದ್ದರಿಂದ ಬೇಸಾಯಸಂಘವು ಆರ್ಥಿಕ ರೀತಿಯಿಂದ ಭದ್ರವಾದ ಬಳಿಕ ಯೋಗ್ಯ ಬೆಲೆ ಅಥವಾ ಪರಿಹಾರ ಕೊಟ್ಟು ಇಂಥ ಸಲಕರಣೆಗಳನ್ನೆಲ್ಲ ಸಾಮೂಹಿಕ ಒಡೆತನದಲ್ಲಿ ತೆಗೆದುಕೊಳ್ಳಬೇಕು.

ಇನ್ನೊಂದು ಒಳ್ಳೇ ಉಪಾಯವೆಂದರೆ ಎತ್ತು, ಸಲಕರಣೆಗಳನ್ನು, ಶೇರು ಅಥವಾ ಠೇವಣಿ ರೂಪದಲ್ಲಿ ಒಂದುಗೂಡಿಸಲು ಸದಸ್ಯರಿಗೆ ಮನವೊಲಿಸಬೇಕು. ಅಂದರೆ ಅವುಗಳ ಯೋಗ್ಯ ಕಿಮ್ಮತ್ತು ನಿರ್ಧರಿಸಿ ಆ ಬೆಲೆಯ ರಕಮನ್ನು ಸದಸ್ಯರ ಒಪ್ಪಿಗೆಯ ಪ್ರಕಾರ ಅವರ ಹೆಸರಿನಲ್ಲಿ ಶೇರುಬಂಡವಲು ಅಥವಾ ಠೇವಣಿ ಎಂದು ಜಮಾ ಹಿಡಿಯಬೇಕು. ಅದು ಬೇಸಾಯಗಾರರ ತಮ್ಮದೇ ಸಾಧನಗಳಿಂದ ಅದನ್ನು ನಡೆಸತಕ್ಕದ್ದು ಎಂಬ ದೃಢವಾದ ವಿಶ್ವಾಸ ಸದಸ್ಯರಲ್ಲಿ ಬೆಳೆಯಬೇಕು. ಅದಾದರೆ ಸದಸ್ಯರು ತಮ್ಮದೇ ಸಾಮೂಹಿಕ ಬೇಸಾಯಕ್ಕೆ ತಮ್ಮ ಎತ್ತು, ನೇಗಿಲು ಮುಂತಾದ ಸಲಕರಣೆಗಳನ್ನು ಸಂತೋಷದಿಂದ ಒಂದುಗೂಡಿಸುವರು. ಇದರಿಂದ ಮತ್ತೆ ಹೊರಗಿನಿಂದ ಎತ್ತು, ನೇಗಿಲು ಮುಂತಾದವನ್ನು ಸಂಘಕ್ಕೆ ಕೊಳ್ಳಬೇಕಾಗುವುದಿಲ್ಲ. ಅಲ್ಲದೆ ಸಂಘದ ಸ್ವಂತದ ಬಂಡವಲು ಬೆಳೆದು ಹೊರಗಿನಿಂದ ಸಾಲ, ಸೌಲಭ್ಯಗಳನ್ನು ದೊರಕಿಸುವ ಸಂಘದ ಪತ್ತು ಸಹ ಹೆಚ್ಚುವುದು. ಇದರ ಮಹತ್ವವನ್ನು ಸಂಘದ ಸದಸ್ಯರಿಗೆ ಬಿಂಬಿಸಬೇಕು.

ಒಂದೇ ಗ್ರಾಮದಲ್ಲಿ ಹಲವು ಬೇಸಾಯಸಂಘಗಳು : ಬೇಸಾಯ ಸಂಘದಲ್ಲಿ ಅದರ ಅನುಕೂಲತೆಯ ಪ್ರಕಾರ ಸದಸ್ಯರ ಒಪ್ಪಿಗೆಯಿಂದಲೇ ಕೆಲವೇ

ಸದಸ್ಯರು ಸೇರಬಹುದೆಂದ ಬಳಿಕ ಗ್ರಾಮದಲ್ಲಿಯ ಬೇರೆ ಬೇಸಾಯಗಾರರು ಸಾಮೂಹಿಕ ಬೇಸಾಯಕ್ಕೆ ಒಲಿದರೆ ಏನು ಮಾಡಬೇಕು ? ತಮ್ಮ ಸಲಿಗೆ, ವಿಶ್ವಾಸದವರನ್ನು ಕೂಡಿಕೊಂಡು ಅವರು ಇನ್ನೊಂದು ಬೇಸಾಯಸಂಘವನ್ನು ಸ್ಥಾಪಿಸಬಹುದು. ಒಂದೇ ಗ್ರಾಮದಲ್ಲಿ ಇಂಥ ಬೇಸಾಯಸಂಘಗಳನ್ನು ಒಂದಕ್ಕಿತ ಹೆಚ್ಚು ಸ್ಥಾಪಿಸಬಹುದು. ಇಂಥ ಸಂಘಗಳ ಸದಸ್ಯರು ಪರಸ್ಪರ ವಿಶ್ವಾಸ, ಒಗ್ಗಟ್ಟುಗಳಿಂದ ಹೆಚ್ಚು ಭದ್ರವಾಗಿ ಹಾಗೂ ಯಶಸ್ವಿಯಾಗಿ ನಡೆಯಬಲ್ಲವು. ಅಲ್ಲದೆ ವಿಧಾಯಕ ಪೋಲಾಟದಿಂದ ಒಂದನ್ನೊಂದು ನೋಡಿ ಹೆಚ್ಚು ಒಳ್ಳೇ ಕೆಲಸಗಳನ್ನೂ ಮಾಡಬಲ್ಲವು. ಅದಕ್ಕೆ ಸರಿಯಾದ ಮುಂದಾಳುತನ ಮಾತ್ರ ಇರಬೇಕು. ಇಂಥ ಸಂಘಗಳು ರಚನಾತ್ಮಕ ಸ್ಪರ್ಧೆಯಿಂದ ಗ್ರಾಮದ ಉನ್ನತಿಯಲ್ಲಿ ಮಹತ್ವದ ಪಾತ್ರವಹಿಸಬಲ್ಲವು. ಮುಂದೆ ಸರಿಯಾದ ವಾತಾವರಣ, ತಿಳಿವಳಿಕೆ ಉಂಟಾದಾಗ ಅಂಥ ಎಲ್ಲ ಸಂಘಗಳೂ ಒಂದುಗೂಡಿ ಒಂದೇ ಸಂಘವೂ ಆಗಬಹುದು.

ಬೇಸಾಯಸಂಘವನ್ನು ನೊಂದಾಯಿಸುವ ವಿಧಾನ : ಬೇಸಾಯ ಸಂಘವನ್ನು ಸ್ಥಾಪಿಸ ಬಯಸುವ ಬೇಸಾಯಗಾರರಿಗೆ ಮೇಲ್ಕಾಣಿಸಿದ ಮೂಲಭೂತ ತತ್ವಗಳನ್ನು ಸರಿಯಾಗಿ ತಿಳಿಸಿದ ಬಳಿಕ ಅವರು ಒಂದುಗೂಡಿ ತಮ್ಮ ಬೇಸಾಯಸಂಘವನ್ನು ಸ್ಥಾಪಿಸಲು ನಿರ್ಧಾರ ಕೈಕೊಳ್ಳಬೇಕು. ಸಂಘವನ್ನು ನೊಂದಾಯಿಸಲು ಸೂಕ್ತ ಕ್ರಮ ಕೈಕೊಳ್ಳಲು ಓರ್ವ ಮುಖ್ಯ ಸಂಸ್ಥಾಪಕನನ್ನು ತಮ್ಮೊಳಗೇ ಆರಿಸಿಕೊಳ್ಳಬೇಕು.

ಶೇರುಬಂಡವಲು : ಬೇಸಾಯಸಂಘದ ನೊಂದಾಣಿಯ ಪ್ರಸ್ತಾಪ ಕಳಿಸಲು ಸಂಸ್ಥಾಪಕರು ಆರಂಭದಲ್ಲೇ ಕನಿಷ್ಠ 1,000 ರೂಪಾಯಿಗಳ ಶೇರುಧನವನ್ನು ಕೂಡಿಸಬೇಕು. ಇದನ್ನು ಕೆಲವುಭಾಗ ರೋಖ ಹಣದ ರೂಪದಲ್ಲೂ, ಕೆಲವು ಭಾಗ ಎತ್ತು, ನೇಗಿಲು ಮುಂತಾದ ಸಾಮಾನುಗಳ ರೂಪದಲ್ಲೂ ಕೂಡಿಸಬಹುದು. ತಮ್ಮವೇ ಎತ್ತು, ನೇಗಿಲು ಮುಂತಾದ ಸಾಧನಗಳನ್ನು ಶೇರಿನ ರೂಪದಲ್ಲಿ ಕೂಡಿಸಲು ಸರಿಯಾದ ತಿಳಿವಳಿಕೆ ಕೊಟ್ಟಲ್ಲಿ, ಬೇಸಾಯಗಾರರು ಸಂತೋಷದಿಂದ ಅದಕ್ಕೆ ಒಪ್ಪುತ್ತಾರೆ. ರೋಖ ಹಣವನ್ನು ಕೂಡಿಸಿದ್ದನ್ನು ಹತ್ತಿರದ ಸಹಕಾರಿ ಬ್ಯಾಂಕಿನಲ್ಲಿ ನಿಯೋಜಿತ ಸಂಘದ ಹೆಸರಿನಲ್ಲಿ ಠೇವಣಿಯಾಗಿ ಜಮಾ ಮಾಡಿ ಅದರ ಚಲನ್ನನ್ನು ನೊಂದಣಿಯ ಪ್ರಸ್ತಾಪದ ಜೊತೆಗಿಡಬೇಕು. ಸಾಮಾನುಗಳನ್ನು ಶೇರಿನ ರೂಪದಲ್ಲಿ ಒಂದಗೂಡಿಸಿದ ಬಗ್ಗೆ ಒಂದು ಒಡಂಬಡಿಕೆಯ ಪತ್ರವನ್ನು ಒಂದುಗೂಡುವ ಸದಸ್ಯರು ಬರೆದು ಕೊಡಬೇಕು. ಇಂಥ ಒಡಂಬಡಿಕೆಯ ಪತ್ರಗಳನ್ನು ಪ್ರಸ್ತಾಪದ ಜೊತೆಗಿಡಬೇಕು.

ಒಡಂಬಡಿಕೆಯ ನಮೂನೆ ಕೆಳಗಿನಂತಿದೆ:

ಸಾಧನಗಳನ್ನು ಒಂದುಗೂಡಿಸುವ ಕರಾರು ಪತ್ರ

'ನಿಯೋಜಿತ........................ಸಹಕಾರಿ ಬೇಸಾಯ ಸಂಘದ ಮುಖ್ಯ ಸಂಸ್ಥಾಪಕರಿಗೆ—

ನಾನು, (ಹೆಸರು)............(ತಂದೆ)............(ಅಡ್ಡ ಹೆಸರು)............ ನನ್ನ ಸಂತೋಷದಿಂದ ಬರೆದು ಕೊಡುವ ಒಪ್ಪಿಗೆ ಪತ್ರವೇನೆಂದರೆ–ನಾನು ಸದರಿ ನಿಯೋಜಿತ ಬೇಸಾಯಸಂಘದ ಸಂಸ್ಥಾಪಕನಿದ್ದು, ಕೆಳಗೆ ವಿವರಿಸಿದ ನನ್ನ ಎತ್ತು, ನೇಗಿಲು ಮುಂತಾದ ಸಾಮಾನುಗಳನ್ನು ಸಂಘದ ವಶಕ್ಕೆ ಒಪ್ಪಿಸುತ್ತೇನೆ. ಸಂಘವು ಗೊತ್ತುಮಾಡಿದ ಅದರ ಬೆಲೆಗೂ ನನ್ನ ಒಪ್ಪಿಗೆ ಇದೆ. ಆ ಬೆಲೆಯಲ್ಲಿ............ ರೂಪಾಯಿಗಳ ರಕಮನ್ನು ನನ್ನ ಹೆಸರಿನಲ್ಲಿ ಶೇರುಧನವನ್ನಾಗಿಯೂ,............... ರೂಪಾಯಿಗಳ ಹಣವನ್ನು ಠೇವಣಿಯನ್ನಾಗಿಯೂ ಜಮಾ ಹಿಡಿಯಬೇಕಾಗಿ ಪ್ರಾರ್ಥನೆ.'

ಸ್ಥಳ....................

ತಾರೀಖು............... ಸಹಿ................................

ಸಂಘವನ್ನು ನೊಂದಾಯಿಸಲಿಕ್ಕೆ ಅಗತ್ಯವಿದ್ದ 1.000 ರೂಪಾಯಿ ಶೇರುಧನಕ್ಕೇ ಅದನ್ನು ಸೀಮಿತಗೊಳಿಸಬಾರದು. ಮುಂದೆ ಸರಕಾರದಿಂದ ಶೇರುಧನಕ್ಕೆ ಸಹಾಯ ಹಾಗೂ ಸಾಲಗಳನ್ನು ಪಡೆಯಲು ಶೇರುಧನವನ್ನು ಕನಿಷ್ಠ 2,000 ರೂಪಾಯಿಗೆ ಏರಿಸಬೇಕಾಗುವುದು. ಅಲ್ಲದೆ ಮೊದಲೇ ಹೇಳಿದಂತೆ ಸಹಕಾರಿಬೇಸಾಯವು ಬೇಸಾಯಗಾರರದೇ ಸ್ವಂತ ಬೇಸಾಯ. ಅದಕ್ಕೆ ತಮ್ಮ ಸಾಧನಗಳನ್ನು ಅದಷ್ಟು ಹೆಚ್ಚು ಶೇರು ಹಣದ ರೂಪದಲ್ಲಿ ಕೂಡಿಸಬೇಕು.

ಬೇಸಾಯಸಂಘಕ್ಕೆ ಸಾಮಾನ್ಯವಾಗಿ ಮೂರು ಪ್ರಕಾರದ ಬಂಡವಲು ಬೇಕಾಗುತ್ತದೆ. ಅವುಗಳೆಂದರೆ (1) ಬೀಜ, ಗೊಬ್ಬರ, ಮೇವು ಮೊದಲಾದ ಬೇಸಾಯದ ಚಾಲೂ ಆವಶ್ಯಕತೆಗಳಿಗಾಗಿ ತಗಲುವ ಖರ್ಚು (2) ಎತ್ತು, ನೇಗಿಲು ಮೊದಲಾದ ಬೇಸಾಯ ಸಲಕರಣೆಗಳ ಖರ್ಚು (3) ಒಡ್ಡು, ಬಾವಿ ಮುಂತಾದ ಸ್ಥಾಯಿ ಸುಧಾರಣೆಗಳಿಗೆ ಹತ್ತುವ ಖರ್ಚು. ಮೊದಲನೇ ಪ್ರಕಾರದ ಬಂಡವಲವನ್ನು ಮುಖ್ಯವಾಗಿ ಸದಸ್ಯರೇ ತಮ್ಮ ಶೇರುವಂತಿಗೆಯ ರೂಪದಲ್ಲಿ ಕೂಡಿಸಬೇಕು. ಕಡಮೆ ಬಿದ್ದರೆ ಸದಸ್ಯರು ಯೋಗ್ಯತೆಗನುಸರಿಸಿ ಠೇವಣಿ ಕೂಡಿಸಿಕೊಳ್ಳಬೇಕು. ಎರಡನೇ ತರಹದ ಬಂಡವಲಿಗೂ ಸದಸ್ಯರು ಶೇರು, ಠೇವಣಿ ಕೂಡಿಸಬೇಕು. ಇವೆಲ್ಲ ಸಾಲದೇ ಇದ್ದಲ್ಲಿ ಯೋಜನೆ ಹಾಕಿಕೊಂಡು ಹೊರಗಿನ ಸಾಲ, ಸಹಾಯಗಳನ್ನು ದೊರಕಿಸಬೇಕು. ತಮ್ಮ ಶ್ರಮ ಸಾಧನಗಳನ್ನು ಕೂಡಿಸಿ, ಅವುಗಳ ಶಕ್ತಿ ಹೆಚ್ಚಿಸಿ, ಯೋಜನೆಯ ಪ್ರಕಾರ ಅವನ್ನು ಉಪಯೋಗಿಸುವುದೇ ಸಹಕಾರಿ ಬೇಸಾಯದ ಮೂಲ ಮಂತ್ರ. ಸರಕಾರದ ಸಹಾಯ ಜನಶಕ್ತಿಗೆ ಪೂರಕವಾಗಿರಬೇಕಷ್ಟೇ. ಸಿಕ್ಕಷ್ಟು, ಹೆಚ್ಚು ಹೊರಗಿನ ಸಾಲ ದೊರಕಿಸಬೇಕೆಂಬುದು ಸರಿಯಾದ ಧೋರಣೆಯಲ್ಲ. ಅಂಥ ಧೋರಣೆಯಿಂದ ಬೇಸಾಯ ಸಂಘವು ಆರ್ಥಿಕ ಪೇಚಾಟದಲ್ಲಿಯೇ ಬೀಳುತ್ತದೆ. ಸರಕಾರಿ ಸಹಾಯಕ್ಕೆಂದೇ ಬೇಸಾಯಸಂಘವನ್ನು ಸ್ಥಾಪಿಸುವುದು ತೀರ ತಪ್ಪು.

ಬೇಸಾಯಸಂಘದ ನಿಯಮಗಳು : ಬೇಸಾಯಸಂಘವನ್ನು ನೊಂದಾಯಿಸಲು 6 ಮಾದರಿ ಪೋಟನಿಯಮಗಳನ್ನು ಸರಿಯಾಗಿ ತುಂಬಿ ಸಹಕಾರ ಇಲಾಖೆಯ ಸಂಬಂಧಿಸಿದ ಅಧಿಕಾರಿಗಳಿಗೆ ಕಳಿಸಬೇಕು. ಈ ನಿಯಮಗಳನ್ನು ಸಂಸ್ಥಾಪಕರು ಸರಿಯಾಗಿ ತಿಳಿದುಕೊಂಡು ಅವಕ್ಕೆ ಸಹಿ ಹಾಕಬೇಕು. ಸ್ಥಳೀಕ ಪರಿಸ್ಥಿತಿಗನುಸರಿಸಿ ಅವುಗಳಲ್ಲಿ ಚಿಕ್ಕಪುಟ್ಟ ಬದಲಾವಣೆಗಳನ್ನು ಸಂಸ್ಥಾಪಕರು ಮಾಡಬಹುದು. ಆದರೆ ಅಂಥ ಬದಲಾವಣೆಗಳು ಮೂಲಭೂತ ತತ್ವಗಳಿಗೆ ಧಕ್ಕೆ ಹಚ್ಚಕೂಡದು.

ಸದಸ್ಯರ ಭೂಮಿಯ ಮಾಹಿತಿ : ಪೋಟನಿಯಮಗಳ ಜೊತೆಗೆ ನಿರ್ದಿಷ್ಟ ಪತ್ರಿಕೆಗಳಲ್ಲಿ ಬೇಸಾಯಸಂಘದಲ್ಲಿ ಸೇರಬಯಸುವ ಸದಸ್ಯರ ಬಗ್ಗೆ ಹಾಗೂ ಒಂದುಗೂಡಿಸುವ ಭೂಮಿಗಳ ಬಗ್ಗೆ ವಿವರ ಕೊಡಬೇಕು. ಸದಸ್ಯರು ಎಷ್ಟು ಪ್ರತ್ಯೇಕ ಪರಿವಾರಗಳನ್ನು ಪ್ರತಿನಿಧಿಸುತ್ತಾರೆ. ಅವರಲ್ಲಿ ಭೂಮಾಲಿಕರೆಷ್ಟು, ಭೂಹೀನರೆಷ್ಟು, ದುಡಿಯುವವರೆಷ್ಟು, ದುಡಿಯದವರೆಷ್ಟು. ಅವರ ಭೂಮಿ ಎಷ್ಟೆಷ್ಟು. ಅವರು ಕೂಡಿಸಿದ ಶೇರುಧನ, ಠೇವು ಎಷ್ಟೆಷ್ಟು ಮುಂತಾದ ವಿವರಗಳನ್ನು ಸದಸ್ಯರ ಬಗ್ಗೆ ಕೊಡಬೇಕು. ಒಂದುಗೂಡಿಸಿದ ಖಾಸಗಿ ಭೂಮಿ ಎಷ್ಟು, ದೊರಕಿರುವ ಸರಾಸರಿ ಭೂಮಿ ಎಷ್ಟು, ಅದರ ಫಲವತ್ತತೆ, ನೀರಾವರಿಯ ಸೌಕರ್ಯ ಮುಂತಾದ ವಿವರಗಳನ್ನು ಹಾಗೂ ಭೂಮಿಯ ನಕಾಶೆಯನ್ನೂ ಕೊಡಬೇಕು. ಈ ಬಗ್ಗೆ ಸಂಬಂಧಿಸಿದ ಗ್ರಾಮಸ್ಥರಿಂದ ಪ್ರಮಾಣ ಪತ್ರಗಳನ್ನೂ ದೊರಕಿಸಬೇಕು. ಸರಕಾರಿ ಭೂಮಿ ಇದ್ದರೆ ಸಂಬಂಧಿಸಿದ ಅಧಿಕಾರಿಗಳಿಂದ ಅದು ದೊರಕುವ ಭರವಸೆ ದೊರಕಿರಬೇಕು. ಒಂದುಗೂಡಿಸುವ ಬಂಡವಲಿನ ವಿವರವನ್ನೂ ದೊರಕಿಸಿರಬೇಕು. ನೊಂದಾಯಿಸುವ ಅರ್ಜಿಯ ಜೊತೆಗೆ ಮಾಹಿತಿ ಕೊಡಬೇಕು,

ಸುಧಾರಣೆಯ ಹಾಗೂ ಉತ್ಪಾದನೆಯ ಯೋಜನೆಗಳು : ಚಿಕ್ಕ ಬೇಸಾಯಗಾರರು ಬೇಸಾಯಸಂಘವನ್ನು ಸ್ಥಾಪಿಸುವುದು ತಮ್ಮ ಬೇಸಾಯದ ಉತ್ಪತ್ತಿ, ಆದಾಯಗಳನ್ನು ಹೆಚ್ಚಿಸುವುದಕ್ಕಾಗಿ: ಅದಕ್ಕಾಗಿ ಅಗತ್ಯವಿದ್ದ ಸುಧಾರಣೆಯ ಹಾಗೂ ಉತ್ಪಾದನೆಯ ನಿಶ್ಚಿತ ಕಾರ್ಯಕ್ರಮಗಳನ್ನು ಸಂಸ್ಥಾಪಕರು ತಯಾರಿಸಿ, ನೊಂದಾಯಿಸುವ ಅರ್ಜಿಯ ಜೊತೆಗೆ ಜೋಡಿಸಬೇಕು. ಇಂಥ ಕಾರ್ಯಕ್ರಮಗಳು ಗಾಳಿಯ ಗೋಪುರಗಳಾಗಬಾರದು. ಇದ್ದ ಅಥವಾ ದೊರಕಬಹುದಾದ ಸಾಧನಗಳಿಂದ ಅವು ಕಾರ್ಯಗತವಾಗುವಂತಿರಬೇಕು. ಅವುಗಳಿಂದ ಕೂಡಲೇ ಉತ್ಪತ್ತಿ ಹೆಚ್ಚಿ ಸದಸ್ಯರಲ್ಲಿ ಬೇಸಾಯಸಂಘದ ಬಗ್ಗೆ ನಿಷ್ಠೆ ಬೆಳೆಸಬೇಕು. ಈ ಯೋಜನೆಯಲ್ಲಿ ಈಗಿದ್ದ ಸ್ಥಿತಿಯನ್ನು ಸ್ಪಷ್ಟವಾಗಿ ವಿವರಿಸಿ ಮುಂದೆ ಸಾಧಿಸಬೇಕಾದ ಪ್ರಗತಿಯನ್ನು ಚಿತ್ರಿಸಬೇಕು. ಅದರಿಂದ ಸದಸ್ಯರಲ್ಲಿ ತಮ್ಮ ಉನ್ನತಿಯ ಬಗ್ಗೆ ಭರವಸೆ ಬೆಳೆಯಬೇಕು. ಈ ಯೋಜನೆಯನ್ನು ತಯಾರಿಸುವಲ್ಲಿ ಬೇಸಾಯಾಧಿಕಾರಿಗಳ ಮಾರ್ಗದರ್ಶನ ಪಡೆಯಬೇಕು ಮತ್ತು ಅವರಿಂದ ಯೋಜನೆಯು ಕಾರ್ಯಗತವಾಗುವ ಬಗ್ಗೆ ಪ್ರಮಾಣಪತ್ರ ದೊರಕಬೇಕು. ಬೇಸಾಯಾಧಿಕಾರಿಗಳ ತಾಂತ್ರಿಕ ಪರಿಶೀಲನೆಯ ಹಾಗೂ ಶಿಫಾರಸಿನ ಮೇಲೆ ಆ ಭಾಗದ ಅಸಿಸ್ಟೆಂಟ್ ರಿಜಿಸ್ಟ್ರಾರರು ಬೇಸಾಯಸಂಘವನ್ನು ನೊಂದಾಯಿಸುತ್ತಾರೆ.

ಅಧ್ಯಾಯ 9

ಬೇಸಾಯಸಂಘದಲ್ಲಿ ಸಂಚಾಲನೆಯ ಹಾಗೂ ಆಡಳಿತದ ಸಮಸ್ಯೆಗಳು

ಜನತಾಂತ್ರಿಕ ಆಡಳಿತ

ಸಹಕಾರಿಬೇಸಾಯವು ಯಶಸ್ವಿಯಾಗಬೇಕಾದರೆ ಬೇಸಾಯಸಂಘದಲ್ಲಿ ಜನತಾಂತ್ರಿಕ ಆಡಳಿತವು ಅತ್ಯಗತ್ಯ. ಬೇಸಾಯಸಂಘದ ಎಲ್ಲ ವ್ಯವಹಾರಗಳೂ ಸಂಘದ ಸದಸ್ಯರಿಗೆ ತಿಳಿದು ಅವು ತಮಗೆ ಲಾಭದಾಯಕವಾಗಿದೆಯೆಂದು ಮನವರಿಕೆಯಾದಾಗ ಸಂಘದಲ್ಲಿ ಅವರ ದೃಢವಾದ ವಿಶ್ವಾಸವು ಬೆಳೆಯುವುದು, ಅವರ ಉತ್ಸಾಹವು ಉತ್ತರೋತ್ತರವಾಗಿ ಹೆಚ್ಚುವುದು. ಇಂಥ ಉತ್ಸಾಹವಿಲ್ಲದೆ ಬೇಸಾಯಸಂಘವು ಎಂದಿಗೂ ಯಶಸ್ವಿಯಾಗದು. ಅಂತೆಯೇ ಎಲ್ಲ ವ್ಯವಹಾರಗಳ ಜನತಾಂತ್ರಿಕಚರ್ಚೆಯಾಗುವುದು ಅಗತ್ಯ. ಸಂಚಾಲಕರು ತಮ್ಮ ವಿಚಾರಗಳನ್ನು ಸದಸ್ಯರ ಮೇಲೆ ಹೇರಲು ಹೋಗಬಾರದು ಚರ್ಚೆಯಿಂದ ತಿಳಿಸಿ, ಮನವೊಲಿಸಿ ಸದಸ್ಯರ ತಪ್ಪು ತಿಳಿವಳಿಕೆಗಳನ್ನು ದೂರಮಾಡಬೇಕು. ಏಕೆಂದರೆ ಸದಸ್ಯರ ಸ್ಫೂರ್ತಿ. ಉತ್ಸಾಹಗಳಿಂದಲೇ ಸಂಘವನ್ನು ಕಟ್ಟಬೇಕಾಗುತ್ತದೆ.

ಅನೇಕ ಕಡೆಗಳಲ್ಲಿ ಬೇಸಾಯಸಂಘಗಳಲ್ಲಿ ಜನತಾಂತ್ರಿಕ ಆಡಳಿತವಿಲ್ಲ. ಕೆಲವೆಡೆ ಸರಕಾರಿ ಅಧಿಕಾರಿಗಳನ್ನು ಬೇಸಾಯಸಂಘಗಳ ಅಧ್ಯಕ್ಷರನ್ನಾಗಿಯೂ, ಉಪಾಧ್ಯಕ್ಷರನ್ನಾಗಿಯೂ ಮಾಡಲಾಗಿರುತ್ತದೆ. ಅಧಿಕಾರಿಗಳು ತಮ್ಮ ನೂರೆಂಟು ಕೆಲಸಗಳಲ್ಲಿ ತೊಡಗಿರುವುದರಿಂದ ಅವರು ಬೇಸಾಯಸಂಘಗಳ ಕಾರ್ಯಗಳತ್ತ ಲಕ್ಷ್ಯ ಹಾಕುವುದಿಲ್ಲ. ಎಷ್ಟೋ ತಿಂಗಳುಗಳವರೆಗೆ, ಏಕೆ ಎಷ್ಟೋ ವರ್ಷಗಳವರೆಗೆ ಇಂಥ ಸಂಘಗಳ ಸಂಚಾಲಕ ಸಮಿತಿಗಳ ಸಭೆ ಆಗಿರುವುದಿಲ್ಲ. ಸಂಘದ ದೈನಂದಿನ ಆರ್ಥಿಕ ಅಥವಾ ಉತ್ಪಾದನೆಯ ವ್ಯವಹಾರ ನಡೆಯುವುದರಲ್ಲೂ ಅನೇಕ ಅಡೆತಡೆಗಳು ಬರುತ್ತವೆ. ಇದರಿದ ಸದಸ್ಯರಲ್ಲಿ ನಿರುತ್ಸಾಹ ಬೆಳೆದು ಇಂಥ ಬೇಸಾಯಸಂಘಗಳು ಅಯಶಸ್ವಿಯಾಗಿ, ಸಹಕಾರಿಬೇಸಾಯವೇ ಯಶಸ್ವಿಯಾಗದೆಂಬ ನಿರಾಶೆ ಹಬ್ಬುತ್ತದೆ.

ಇನ್ನೂ ಕೆಲವು ಬೇಸಾಯಸಂಘಗಳಲ್ಲಿ ಹೆಸರಿಗೆ ಜನತಾಂತ್ರಿಕ-ಸಂಚಾಲಕ ಸಮಿತಿಯಿದ್ದರೂ ಅವು ನಿರ್ಜೀವವಾಗಿರುತ್ತವೆ. ಸಂಘದ ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಅಧ್ಯಕ್ಷನೊಬ್ಬನೇ ಸರ್ವಾಧಿಕಾರಿಯಾಗಿರುತ್ತಾನೆ. ಸಾಮಾನ್ಯ ಸದಸ್ಯರಲ್ಲಿ ಜಾಗೃತಿ ಇರುವುದಿಲ್ಲ. ಬೇಸಾಯಸಂಘದ ಮಹತ್ವ, ಮಾಹಿತಿ, ಲೆಕ್ಕಪತ್ರ ಯಾವುದರ ಅರಿವೂ ಅವರಿಗಿರುವುದಿಲ್ಲ. ಅವರಲ್ಲಿ ಇಂಥ ಸರಿಯಾದ ಜ್ಞಾನವನ್ನು ಬೆಳೆಸುವ ಪ್ರಯತ್ನವನ್ನೂ ಮಾಡುವುದಿಲ್ಲ. ಸಂಘವು ಓರ್ವ ಸರ್ವಾಧಿಕಾರಿಯ ಪ್ರದರ್ಶನ

ವಾದಂತಾಗುತ್ತದೆ. ಈ ವ್ಯವಸ್ಥೆಯಿಂದಲೂ ಜನರಲ್ಲಿ ಉತ್ಸಾಹ, ಸ್ಫೂರ್ತಿ ಬೆಳೆಯುವು ದಿಲ್ಲ. ಅಲ್ಲದೆ ಯಾವನೇ ಒಬ್ಬ ಜಮೀನುದಾರನ ಸಲುವಾಗಿ ಅಥವಾ ಸಾಹುಕಾರನ ಸಲುವಾಗಿ ದುಡಿಯುತ್ತಿರುವ ಕೂಲಿಕಾರರು ತಾವೆಂಬ ಭಾವನೆ ಸದಸ್ಯರಲ್ಲಿ ಬೆಳೆಯು ತ್ತದೆ. ಬೇಸಾಯಸಂಘವು ಸದಸ್ಯರ ತಲೆಯಮೇಲೆ ಹೊರಿಸಿದ ಒಂದು ಭಾರವಾಗಿ ಬಿಡುತ್ತದೆ. 'ಈ ಸಂಘವು ನಮ್ಮದು: ಇದರ ಉನ್ನತಿಯಲ್ಲಿಯೇ ನಮ್ಮ ಭವಿತವ್ಯವಿದೆ' ಎಂಬ ವಿಶ್ವಾಸ ಅವರಲ್ಲಿರುವುದಿಲ್ಲ. ಹೀಗಾಗಿ ಇಂಥ ಸಂಘಗಳು ಯಶಸ್ವಿಯಾಗಿ ನಡೆಯುವುದಿಲ್ಲ.

ಆದ್ದರಿಂದ ಬೇಸಾಯ ಸಂಘವನ್ನು ಯಶಸ್ವಿಯಾಗಿ ನಡೆಸಲು ಮೇಲಿನ ದೋಷ ಗಳನ್ನು ದೂರಮಾಡಿ ಸಂಘದ ಎಲ್ಲ ಮಹತ್ವದ ನಿರ್ಣಯಗಳೂ ಸದಸ್ಯರೆಲ್ಲರ ಜನ ತಾಂತ್ರಿಕ ಒಪ್ಪಿಗೆಯಿಂದ ನಡೆಯುವ ಏರ್ಪಾಡಾಗಬೇಕು.

ಸಾಧಾರಣ ಸಭೆ

ಎಲ್ಲ ಸದಸ್ಯರೂ ಸೇರಿದ ಸಾಧಾರಣ ಸಭೆಯು ಬೇಸಾಯ ಸಂಘದ ಸರ್ವೋಚ್ಚ ಸಮಿತಿ. ಎಲ್ಲ ಸದಸ್ಯರೂ ಇದರ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದರಿಂದಲೇ ಸಂಘದ ಜನತಾಂತ್ರಿಕ ಸ್ವರೂಪವು ಬಲಿಯುತ್ತದೆ.

ಸಾಧಾರಣ ಸಭೆಯು ಸಾಮಾನ್ಯವಾಗಿ ವರ್ಷಕ್ಕೊಮ್ಮೆ ಸೇರುತ್ತದೆ. ಅಗತ್ಯ ವಿದ್ದಾಗ್ಗೆ ವಿಶೇಷ ಸಾಧಾರಣ ಸಭೆಯೂ ಕೂಡಬಹುದು. ಅದು ಈ ಮುಖ್ಯ ಕಾರ್ಯಗಳ ಹೊಣೆ ಹೊರುತ್ತದೆ: (1) ಉತ್ಪಾದನೆ (2) ಎಲ್ಲರಿಗೂ ಉದ್ಯೋ ಗದ ಯೋಜನೆ (3) ಬೆಳೆಯ ಯೋಜನೆ (4) ಸಹಾಯಕ ಉದ್ಯೋಗಗಳ ಯೋಜನೆ (5) ಸದಸ್ಯರ ಕಲ್ಯಾಣದ ಯೋಜನೆ. ಭೂಮಿಯ ಪ್ರತಿಫಲ, ದುಡಿತದ ಪ್ರತಿಫಲ, ಅಭಿವೃದ್ಧಿಯ ಪರಿಹಾರ ಇಂಥ ಮಹತ್ವದ ವಿಷಯಗಳನ್ನೂ ಸಾಧಾರಣ ಸಭೆಯೇ ನಿರ್ಣಯಿಸುತ್ತದೆ.

ನಿಜವೆಂದರೆ ಬೇಸಾಯಸಂಘವು ಬೇರೆ ಸಹಕಾರಿ ಸಂಘಗಳಂತಲ್ಲ. ಬೇರೆ ಸಹ ಕಾರಿ ಸಂಘದ ನೂರಾರು ಅಥವಾ ಸಾವಿರಾರು ಸದಸ್ಯರು ಬೇರೆ, ಬೇರೆ ದೂರದ ಸ್ಥಳಗಳಲ್ಲಿ ಹರಡಿರುತ್ತಾರೆ. ಬೇಸಾಯ ಸಂಘದ ಹತ್ತಿಪ್ಪತ್ತು ಸದಸ್ಯರು ಸಾಮಾನ್ಯ ವಾಗಿ ಒಂದೇ ಸ್ಥಳದಲ್ಲಿದ್ದು ಪ್ರತಿದಿವಸ ಅನೌಪಚಾರಿಕವಾಗಿ ಸಭೆ ಸೇರುತ್ತಾರೆ, ಒಟ್ಟಾಗಿ ದುಡಿಯುತ್ತಾರೆ ಹಾಗೂ ಬೆಳೆಯುತ್ತಾರೆ. ಆಗ್ಗೆ ಅವರು ತಮ್ಮ ಸಂಘದ ದಿನದ ಕೆಲ ಸದ ವಿಮರ್ಶೆ ಮಾಡಬಹುದು ಹಾಗೂ ಮರುದಿವಸದ ಕಾರ್ಯಕ್ರಮಗಳನ್ನು ಗೊತ್ತು ಮಾಡಿಕೊಳ್ಳಬಹುದು. ಮಹತ್ವದ ಸಂಗತಿಗಳಿದ್ದರೆ, ಔಪಚಾರಿಕ ಸಭೆಯನ್ನೇ ಕರೆದು ಅಂಥ ವಿಷಯಗಳ ಬಗ್ಗೆ ನಿರ್ಣಯ ಮಾಡಿಕೊಳ್ಳುವುದು ಉಚಿತ. ಹೀಗೆ ಮಾಡುವುದ ರಿಂದ ಸದಸ್ಯರಲ್ಲಿ ಪರಸ್ಪರ ವಿಶ್ವಾಸ, ಕಾರ್ಯಶಕ್ತಿ, ಹೊಣೆಗಾರಿಕೆ ಹಾಗೂ ಮುಂದಾಳು ತನ ಬೆಳೆಯುತ್ತವೆ. ಇದರಿಂದ ಬೇಸಾಯ ಸಂಘದ ಉನ್ನತಿಗೆ ಸಹಾಯವಾಗುವುದು.

ಉಚ್ಚ ಸಮಿತಿಗಳನ್ನು ಆರಿಸುವ ಹಾಗೂ ಮಹತ್ವದ ಅಧಿಕಾರಿಗಳನ್ನು ನೇಮಿಸುವ ಜವಾಬ್ದಾರಿ ಸಹ ಸಾಧಾರಣ ಸಭೆಯದೇ.

ವ್ಯವಸ್ಥಾಪಕ ಸಮಿತಿ

ದೈನಂದಿನ ಕಾರ್ಯದ ಮೇಲ್ವಿಚಾರಣೆಯನ್ನು ಸಾಧಾರಣ ಸಭೆ ಮಾಡಲಾರದು. ಅದಕ್ಕಾಗಿ ಸಾಧಾರಣ ಸಭೆಯು ಒಂದು ವ್ಯವಸ್ಥಾಪಕ ಸಮಿತಿಯನ್ನು ಆರಿಸುತ್ತದೆ. ಅದರಲ್ಲಿ ಸಂಘದ ವಿಸ್ತಾರಕ್ಕನುಸರಿಸಿ ಆಯ್ಕೆ ಹೊಂದಿದ ಸದಸ್ಯರು ಇರುತ್ತಾರೆ. ಅವರೆಲ್ಲರೂ ನಿಷ್ಠಾವಂತ ಹಾಗೂ ಸಕ್ರಿಯ ಸದಸ್ಯರಿರುವುದು ಒಳ್ಳೆಯದು. ಅವರು ಸಂಘದ ಸಾಮಾಜಿಕ ಹಿತ ಸಾಧಿಸುವವರಿರಬೇಕು.

ವ್ಯವಸ್ಥಾಪಕಸಮಿತಿಯು ದೈನಂದಿನ ಕಾರ್ಯದ ಯೋಜನೆಗಳನ್ನು ತಯಾರಿಸುತ್ತದೆ. ಯೋಜನೆಗಳನ್ನು ಕಾರ್ಯಗತ ಮಾಡುವ ಹೊಣೆಯೂ ಅದರದೇ. ಕೆಲಸದ ಮೇಲ್ವಿಚಾರಣೆ, ಲೆಕ್ಕಪತ್ರ, ಮುಂತಾದ ಮಹತ್ವದ ಕಾರ್ಯಗಳನ್ನು ಅದೇ ನೋಡಿಕೊಳ್ಳುತ್ತದೆ. ವ್ಯವಸ್ಥಾಪಕಸಮಿತಿಯು ಅಗತ್ಯವಿದ್ದಷ್ಟು ಸಲ ಸಭೆ ಸೇರಬಹುದು. ಸಾಧಾರಣ ಸಭೆಯು ವಿಷಯದಲ್ಲಿ ಮಾಡಿದ ಸಲಹೆ ವ್ಯವಸ್ಥಾಪಕಸಮಿತಿಗೂ ಅನ್ವಯಿಸುತ್ತದೆ. ಸಾಮಾನ್ಯವಾಗಿ ಆಯಾ ಸ್ಥಳಗಳಲ್ಲಿ ವಾಸಿಸುವ ಹಾಗೂ ದುಡಿಯುವ ಸದಸ್ಯರೆಲ್ಲರೂ ಆಮಂತ್ರಿತರಾಗಿ ವ್ಯವಸ್ಥಾಪಕಸಮಿತಿಯ ಸಭೆಯಲ್ಲಿ ಭಾಗವಹಿಸಿ ಸಂಘವನ್ನು ಯಶಸ್ವಿಗೊಳಿಸಲು ಹೆಣಗಬೇಕು.

ವ್ಯವಸ್ಥಾಪಕಸಮಿತಿಯ ಸಭೆಯಲ್ಲಿ ಮುಖ್ಯವಾಗಿ ಆದ ಕೆಲಸದ ಪ್ರಗತಿಯು ಖರ್ಚಿನ ಬಾಬ್ತುಗಳ ಸಮೀಕ್ಷೆ ಮಾಡಿ, ಯೋಗ್ಯ ನಿರ್ಣಯ ಕೈಕೊಂಡು ಕೆಲಸಗಳನ್ನು ನಡೆಸಬೇಕು. ಅವುಗಳ ಮೇಲ್ವಿಚಾರಣೆ ಮಾಡುವ ಹೊಣೆಯನ್ನೂ ನೀಗಿಸಬೇಕು. ವ್ಯವಸ್ಥಾಪಕ ಸಮಿತಿಯ ನಿರ್ಣಯಗಳು ಸಾಮಾನ್ಯವಾಗಿ ಸರ್ವಸಮ್ಮತಿಯಿಂದ ಆಗಬೇಕು. ಅಂದರೆ ಎಲ್ಲರಲ್ಲೂ ಅದರಿಂದ ವಿಶ್ವಾಸ ಬೆಳೆಯುವುದು. ಈ ಚರ್ಚೆಗಳು ಹಾಗೂ ನಿರ್ಣಯಗಳೂ ಸದಸ್ಯರಿಗೆಲ್ಲ ಸಹಕಾರಿ ಕಾರ್ಯದ ತರಬೇತು ಕೊಡುವ ಸಾಧನವಾಗಬೇಕು. ಇಂಥ ಸಭೆಗಳಲ್ಲಿ ಸದಸ್ಯರ ಮಹತ್ವದ ಸಮಸ್ಯೆಗಳನ್ನು ಸಹ ಚರ್ಚಿಸಿ ಅವುಗಳನ್ನು ನಿವಾರಿಸಬೇಕು. ಈ ರೀತಿಯ ಜನತಾಂತ್ರಿಕ ಸಂಚಾಲನದಿಂದ ಅವುಗಳನ್ನು ನಿವಾರಿಸಬೇಕು. ಈ ರೀತಿಯ ಜನತಾಂತ್ರಿಕ ಸಂಚಾಲನದಿಂದ ಸದಸ್ಯರಲ್ಲಿ ಬೇಸಾಯಸಂಘದ ಬಗ್ಗೆ ಆತ್ಮೀಯತೆ ಬೆಳೆದು ಅವುಗಳ ವ್ಯವಹಾರಗಳನ್ನು ಆಸ್ಥೆವಹಿಸಿ, ಉತ್ಸಾಹದಿಂದ ನಡೆಸುತ್ತಾರೆ.

ವ್ಯವಸ್ಥಾಪಕಸಮಿತಿಯು ಒಬ್ಬಿಬ್ಬ ಪ್ರಮುಖ ಸದಸ್ಯರ ಕೈಬೊಂಬೆ ಆಗಕೂಡದು. ಅದರ ಸಾಮೂಹಿಕ ಜವಾಬ್ದಾರಿಯನ್ನು ಎಲ್ಲ ಸದಸ್ಯರೂ ಮನದಟ್ಟು ಮಾಡಿಕೊಳ್ಳಬೇಕು. ಒಬ್ಬಿಬ್ಬ ವ್ಯಕ್ತಿಗಳ ಸರ್ವಾಧಿಕಾರವೇ ನಡೆಯ ಹತ್ತಿದರೆ, ಅಂಥ ವ್ಯಕ್ತಿಗಳು ಎಷ್ಟೇ ಒಳ್ಳೆಯವರಿರಲಿ, ಅದರಿಂದ ಸದಸ್ಯರಲ್ಲಿ ತಪ್ಪುತಿಳಿವಳಿಕೆ.

ಅಸಂತೋಷ ಹೆಚ್ಚುವುದು. ಪರಸ್ಪರ ವಿಶ್ವಾಸ, ಒಗ್ಗಟ್ಟುಗಳೇ ಬೇಸಾಯ ಸಂಘದ ನಿಜವಾದ ಶಕ್ತಿ. ಈ ಶಕ್ತಿ ಉತ್ತರೋತ್ತರವಾಗಿ ಹೆಚ್ಚುತ್ತ ನಡೆದರೆ ಬೇಸಾಯ ಸಂಘವು ಹೆಚ್ಚೆಚ್ಚು ಪ್ರಗತಿಯನ್ನು ಸಾಧಿಸುವುದು. ಅದಕ್ಕೆ ಪ್ರತಿಯಾಗಿ ಪರಸ್ಪರ ಅವಿಶ್ವಾಸ, ಅಸಂತೋಷಗಳಿಂದ ಈ ಶಕ್ತಿ ಕ್ಷೀಣವಾಗುತ್ತ ನಡೆದರೆ ಬೇಸಾಯಸಂಘದ ಅವನತಿಯು ಕಟ್ಟಿಟ್ಟದ್ದು. ಬೇಸಾಯಸಂಘದಲ್ಲಿ ಒಗ್ಗಟ್ಟಿನ ಶಕ್ತಿಯು ಬೆಳೆಯ ಬೇಕಾದರೆ ಸಾಮೂಹಿಕ ಮುಂದಾಳುತನ ಹಾಗೂ ಎಲ್ಲ ಸದಸ್ಯರಲ್ಲಿ ನಾಯಕತ್ವದ ಜಾಗೃತಿಯು ಬೆಳೆಯುವುದು ಅತ್ಯಗತ್ಯ.

ಬೇಸಾಯಸಂಘದ ಕಾರ್ಯ ಸಮಿತಿಗಳ ಮುಂದಾಳುಗಳು ಸಮಿತಿಯಲ್ಲಿಯ ತಮ್ಮ ಜೊತೆಗಾರರಿಗೆ ಮನವರಿಕೆ ಮಾಡಿಯೇ ಮಹತ್ವದ ಕಾರ್ಯ, ವೆಚ್ಚ ನಡೆಸಬೇಕು. ಹಾಗೆ ಒಮ್ಮತವಾಗದೆ ಅಸಂತೋಷ ಬೆಳೆಯುವ ಪರಿಸ್ಥಿತಿಯಲ್ಲಿ ಒಳ್ಳೇ ಕಾರ್ಯಕ್ರಮವಿದ್ದರೂ ಅದನ್ನು ಬೇರೆ ಜವಾಬ್ದಾರ ಸದಸ್ಯರಿಗೆ ತಿಳಿಸಿ ಮನವರಿಕೆ ಮಾಡುವವರೆಗೆ ಮುಂದಕ್ಕೆ ಹಾಕುವುದು ಉತ್ತಮ. ಅಲ್ಲದೆ ಹೆಚ್ಚು ಸದಸ್ಯರಿಗೆ ಹೊಣೆ ಹೊರಿಸಲು ಹಾಗೂ ಆ ಬಗ್ಗೆ ಅವರಿಗೆ ಸಂತೋಷ ಕೊಡಲು ಬೇರೆ ಬೇರೆ ಮಹತ್ವದ ಕಾರ್ಯಗಳಿಗೋಸ್ಕರ ಚಿಕ್ಕ ಚಿಕ್ಕ ಬೇರೆ ಸಮಿತಿಗಳನ್ನು ರಚಿಸಬೇಕು ಅಥವಾ ಬೇಸಾಯ ಸಂಘವು ತೀರ ಚಿಕ್ಕದಾಗಿದ್ದರೆ ಇಂಥ ಸಮಿತಿಯನ್ನು ರಚಿಸುವ ಬದಲು ವ್ಯವಸ್ಥಾಪಕ ಸಮಿತಿಯು ವಿಭಿನ್ನ ಸದಸ್ಯರಿಗೇನೇ ವಿಭಿನ್ನ ಕೆಲಸದ ಜವಾಬ್ದಾರಿ ಹೊರಿಸಬಹುದು.

ಮೌಲ್ಯಮಾಪಕ ಸಮಿತಿ

ಸಹಕಾರಿ ಬೇಸಾಯದ ಕಾರ್ಯ ಸಮಿತಿಯು ಮೌಲ್ಯಮಾಪಕಸಮಿತಿಯೊಂದನ್ನು ಇಂಥ ಬೇಸಾಯಸಂಘಗಳಲ್ಲಿ ರಚಿಸಲು ಮಹತ್ವದ ಶಿಫಾರಸು ಮಾಡಿದೆ. ವ್ಯವಸ್ಥಾಪಕಸಮಿತಿಯ ಕಾರ್ಯದ ಮೇಲ್ವಿಚಾರಣೆ ಮಾಡುವುದೇ ಈ ಸಮಿತಿಯ ಮುಖ್ಯ ಕೆಲಸ. ಈ ಸಮಿತಿಯು ಆದಷ್ಟು ಚಿಕ್ಕದಾದದ್ದು ಹಾಗೂ ವ್ಯವಸ್ಥಾಪಕ ಸಮಿತಿಯಿಂದ ಸ್ವತಂತ್ರವಾಗಿರಬೇಕು. ಈ ಸಮಿತಿಯು ಆಗಾಗ್ಗೆ ವ್ಯವಸ್ಥಾಪಕಸಮಿತಿಯ ಕಾರ್ಯದ, ಲೆಕ್ಕಪತ್ರಗಳ ಚೌಕಸಿ ಮಾಡಿ ಅವುಗಳ ದೋಷಗಳನ್ನು ನಿವಾರಿಸಬೇಕು. ಆಸ್ತಿ ಪಾಸ್ತಿಗಳ ತಕ್ಕ ಸಂರಕ್ಷಣೆಯ ವ್ಯವಸ್ಥೆಯನ್ನು ಅದು ಮಾಡಬೇಕು. ಮಹತ್ವದ ಕಾರ್ಯದ ಬಗ್ಗೆಯೂ ಅದು ವ್ಯವಸ್ಥಾಪಕಸಮಿತಿಗೆ ತಕ್ಕ ಸಲಹೆ ಕೊಡಬೇಕು.

ಪರಸ್ಪರ ಆಂತರಿಕ ನಿಯಂತ್ರಣಕ್ಕಾಗಿ ಸಂಚಾಲನೆಯ ಅಧಿಕಾರಗಳನ್ನು ವಿಂಗಡಿಸುವುದೂ ವಿಹಿತ. ಬೇಸಾಯಸಂಘದ ಸರ್ವಸಾಮಾನ್ಯ ಆಡಳಿತ, ನಿಯಂತ್ರಣ, ಮಾರ್ಗದರ್ಶನದ ಹೊಣೆವಹಿಸಬೇಕು. ಉಪಾಧ್ಯಕ್ಷರು ಅಧ್ಯಕ್ಷರ ಜವಾಬ್ದಾರಿಗಳಲ್ಲಿ ಸಹಾಯಕರಾಗಿರಬೇಕು. ಕೋಶಾಧ್ಯಕ್ಷರು ಸಂಘದ ಹಣವನ್ನು ಜೋಪಾನವಾಗಿಟ್ಟುಕೊಂಡು ಅದನ್ನು ಸಂಘದ ನಿರ್ಣಯದ ಪ್ರಕಾರ ವೆಚ್ಚ ಮಾಡುವ ಹೊಣೆವಹಿಸಬೇಕು. ಸಂಘದ ಕಾರ್ಯದರ್ಶಿಗಳು ಅಥವಾ ವ್ಯವಸ್ಥಾಪಕರು ಲೆಕ್ಕಪತ್ರಗಳನ್ನು ಸರಿಯಾಗಿಡುವ ಜವಾಬ್ದಾರಿಯನ್ನು ನಡೆಸಬೇಕು.

ಸಂಚಾಲಕರು

ಬೇಸಾಯಸಂಘದ ಸಂಚಾಲಕರಲ್ಲಿ ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಅಥವಾ ವ್ಯವಸ್ಥಾಪಕರು ಪ್ರಮುಖರು. ಅಧ್ಯಕ್ಷರು ಅಥವಾ ವ್ಯವಸ್ಥಾಪಕ ಸಮಿತಿಯ ಸದಸ್ಯರು ಸಂಘದ ಸದಸ್ಯರ ಮೇಲೆ ಪ್ರಭಾವ ಬೀರಬಲ್ಲ ನಾಯಕರು. ಅವರು ಇಡಿಯ ಸಂಘದ ಹಿತವನ್ನು ಲಕ್ಷಿಸಬೇಕು; ಸದಸ್ಯರಲ್ಲಿ ಬೆರೆತು ದುಡಿದು ಅವರ ವಿಶ್ವಾಸ ಸಂಪಾದಿಸಬೇಕು. ಅಂದರೆ ಅವರು ತಮ್ಮ ಪರಿಣಾಮಕಾರಿ ಮುಂದಾಳುತನದಿಂದ ಸಂಘವನ್ನು ಯಶಸ್ವಿಯಾಗಿ ನಡೆಸಬಹುದು.

ಕಾರ್ಯದರ್ಶಿ ಅಥವಾ ವ್ಯವಸ್ಥಾಪಕರು ಬೇಸಾಯಸಂಘದ ಲೆಕ್ಕಪತ್ರಗಳನ್ನು ಬರೆಯುತ್ತಾರೆ. ಉತ್ಪಾದನೆಯ ಕಾರ್ಯವನ್ನು ನೇರವಾಗಿ ಮೇಲ್ವಿಚಾರಿಸಿ ಅವರು ನಡೆಸುತ್ತಾರೆ. ಎಲ್ಲ ದುಡಿಯುವ ಸದಸ್ಯರನ್ನೂ ಸರಿಯಾಗಿ ಸಂಘಟಿಸಿ, ಅವರಿಗೆ ಮಾರ್ಗದರ್ಶನ ಮಾಡಿ ಉತ್ಪಾದನೆಯ ಎಲ್ಲ ಕೆಲಸಗಳನ್ನೂ ಸರಿಯಾಗಿ ಮಾಡಿಸುವ ಮಹತ್ವದ ಹೊಣೆ ಕಾರ್ಯದರ್ಶಿಗಳ ಮೇಲೆಯೇ ಇರುತ್ತದೆ. ಅಂತೆಯೇ 'ಬೇಸಾಯ ಸಂಘದ ಕಾರ್ಯದರ್ಶಿಗಳು ಯೋಗ್ಯರಾಗಿದ್ದರೆ ಅದನ್ನು ಬೆಳೆಸಬಲ್ಲರು; ಇಲ್ಲದಿದ್ದರೆ ಅದನ್ನು ಅಳಿಸಬಲ್ಲ'ರೆಂದು ಹೇಳುವುದು ನಿಜ. ಅವರು ಕೇವಲ ಲೆಕ್ಕ ಬರೆಯುವ ಕಾರಕೂನರಾದರೆ ಸಾಲದು. ಅವರ ಪಾತ್ರದಿಂದ ಸಂಘದ ಉತ್ಪಾದನೆ, ಆದಾಯಗಳು ಹೆಚ್ಚಬೇಕು; ಸದಸ್ಯರಲ್ಲಿ ಸಾಮೂಹಿಕ ದುಡಿತದ ಒಗ್ಗಟ್ಟು ಹೆಚ್ಚಬೇಕು.

ಇಂಥ ಮಹತ್ವದ ಪಾತ್ರವನ್ನು ಬೇಸಾಯಸಂಘದ ಕಾರ್ಯದರ್ಶಿಗಳು ನಿರ್ವಹಿಸಬೇಕಾದರೆ ಅವರು ತಾನು ಒಬ್ಬ 'ಬಡಾಸಾಹೇಬ' ನೆಂಬ ಮನೋಭಾವನೆಯಿಂದ ಸದಸ್ಯರಿಗೆ 'ಹುಕುಂ' ಕೊಡುತ್ತ ಹೋದರೆ ಆಗದು. ಅದರಿಂದ ಅವರು ಬೇಗ ಸದಸ್ಯರ ಅಪ್ರೀತಿ, ರೋಷಗಳಿಗೆ ಪಾತ್ರವಾಗಬಹುದು. ಅದರಿಂದ ಸಂಘದ ಯಾವ ಪ್ರಗತಿಯೂ ಸಾಧಿಸದಂತಾಗುವುದು. ಅವರು ಮೊಟ್ಟ ಮೊದಲು ಪ್ರೀತಿ, ವಿಶ್ವಾಸಗಳನ್ನು ಸಂಪಾದಿಸಿಕೊಂಡು ಅವರೊಡನೆ ಒಂದಾಗಬೇಕು. ಅದಕ್ಕಾಗಿ ಅವರು ಆದಷ್ಟು ಸ್ಥಳಿಕರಾಗಿರಬೇಕು. ಬೇಸಾಯಸಂಘದಲ್ಲಿ ಹೊಲವನ್ನು ಸೇರಿಸಿ ಕಾರ್ಯದರ್ಶಿಗಳು ಸದಸ್ಯರಾಗಿದ್ದರೆ ಅಥವಾ ಅಂಥ ಸದಸ್ಯರೊಡನೆ ಅವರ ಸಂಬಂಧವಿದ್ದರೆ ಇನ್ನೂ ಉತ್ತಮ. ಏಕೆಂದರೆ ಅಂತಹವರಿಗೆ ಬೇಸಾಯಸಂಘದ ಏಳಿಗೆಯಲ್ಲಿ ನೈಜ ಆಸ್ಥೆ ಇರುವುದು. ಅವರು ತಮ್ಮ ಕೆಲಸವನ್ನು ಕೇವಲ ಪಗಾರದ ನೌಕರಿ ಎಂದು ಭಾವಿಸರು. ಅಂಥ ಸ್ಥಳಿಕ ಕಾರ್ಯದರ್ಶಿಗಳು ಬೇಸಾಯಸಂಘಕ್ಕೆ ದೊರೆಯದಿದ್ದರೆ ಅಕ್ಕ ಪಕ್ಕದ ಹಳ್ಳಿ ಅಥವಾ ಪಟ್ಟಣದ ಯುವಕರನ್ನು ಕಾರ್ಯದರ್ಶಿಗಳನ್ನಾಗಿ ಬೇಸಾಯ ಸಂಘವು ನೇಮಿಸಿ ಕೊಳ್ಳಬಹುದು; ಆದರೆ ಅಂಥ ತರುಣರು ಬೇಸಾಯ ಸಂಘದಲ್ಲಿ ಸ್ಥಿರವಾಗಿ ನೆಲಸಿ, ಸಂಘದವರೇ ಒಬ್ಬರಾಗಬೇಕು.

ಶ್ರಮ ನಿಷ್ಠೆ ಹಾಗೂ ಬೇಸಾಯ ನಿಷ್ಠೆ ಕಾರ್ಯದರ್ಶಿಗಳಲ್ಲಿರಬೇಕಾದ ಇನ್ನೊಂದು ಮಹತ್ವದ ಗುಣ. ಈ ಗುಣದಿಂದ ಅವರು ಬೇಸಾಯದ ಕಾರ್ಯದಲ್ಲಿ ಸದಸ್ಯ

ರೊಡನೆ ಪ್ರತ್ಯಕ್ಷ ಭಾಗವಹಿಸಿ ಅವರ ಪ್ರೀತಿ, ವಿಶ್ವಾಸಗಳಿಗೆ ಬೇಗ ಪಾತ್ರರಾಗಬಲ್ಲರು. ಅವರಿಗೆ ಬೇಸಾಯದ ಕೆಲಸಗಳ ನೇರ ಅನುಭವವಾಗಿ ಸದಸ್ಯರಿಂದ ಅವನ್ನು ಅಚ್ಚು ಕಟ್ಟಾಗಿ ನಡೆಸಲು ಸಮರ್ಥರಾಗುವರು. ಬೇಸಾಯದ ಶಾಸ್ತ್ರೀಯ ಸುಧಾರಣೆ ಗಳನ್ನು ಅವರು ವ್ಯವಹಾರಿಕ ಅನುಭವದಿಂದ ಕಲಿತು, ತಾವೇ ಮಾಡಿ ತೋರಿಸಿ, ಸದಸ್ಯರಿಂದಲೂ ಮಾಡಿಸಿ ಬೇಸಾಯಸಂಘದಲ್ಲಿ ಸಾಂದ್ರಬೇಸಾಯವನ್ನು ಬೆಳೆಸಲು ಸಮರ್ಥರಾಗುತ್ತಾರೆ.

ಬೇಸಾಯಸಂಘದ ನಿತ್ಯದ ಕಾರ್ಯಕ್ರಮದಲ್ಲಿ ಸಹ ಕಾರ್ಯದರ್ಶಿಗಳಲ್ಲಿ ಶ್ರಮ ನಿಷ್ಠೆ ಹಾಗೂ ಜನರೊಡನೆ ತಾದಾತ್ಮ್ಯ ಬೆಳೆಯುವ ವ್ಯವಸ್ಥೆ ಮಾಡಬೇಕು. ಅವರು ಅಗತ್ಯವಾದ ಮಾಡಬೇಕಾದ ಲೆಕ್ಕ ಪತ್ರಗಳ ಕೆಲಸ. ಮೇಲ್ವಿಚಾರಣೆಯ ಕೆಲಸ ದಿವಸ ದಲ್ಲಿ 2-3 ಗಂಟೆ ಆಗಬಹುದು. ಉಳಿದ ಸಮಯದಲ್ಲಿ ಕಾರ್ಯದರ್ಶಿಗಳು ದುಡಿ ಯುವ ಸದಸ್ಯರೊಡನೆ ಬೆರೆತು, ಅವರ ಮುಂದಾಳು ಆಗಿ ಒಂದಿಲ್ಲೊಂದು ಬೇಸಾಯದ ಕೆಲಸ ಮಾಡಬೇಕು. ಇದರಿಂದ ಅವರಿಗೆ ಬೇಸಾಯದ ವ್ಯಾವಹಾರಿಕ ಅನುಭವವಾಗು ವುದಲ್ಲದೆ ಸದಸ್ಯರ ಮೇಲೆ ಅವರ ನೈತಿಕ ವರ್ಚಸ್ಸು ಬಿದ್ದು. ಮೇಲ್ವಿಚಾರಣೆಯ ಕೆಲಸ ಸಹ ಹೆಚ್ಚು ಪರಿಣಾಮಕಾರಿಯಾಗುತ್ತದೆ.

ಬೇಸಾಯಸಂಘದ ಕಾರ್ಯದರ್ಶಿಗಳಿಂದ ಶಿಕ್ಷಿತ ತರುಣರು ಇಂಥ ವಿಶಿಷ್ಟ ಮನೋಭಾವನೆಯಿಂದ ಬೇಸಾಯಸಂಘದಲ್ಲಿ ಕೆಲಸ ಮಾಡಬೇಕಾದರೆ, ಅವರ ವಿಶಿಷ್ಟ ಆಯ್ಕೆ, ವಿಶಿಷ್ಟ ತರಬೇತು ಆಗಬೇಕಲ್ಲದೆ ಅವರಿಗೆ ವಿಶೇಷ ಪ್ರೋತ್ಸಾಹವೂ ದೊರಕ ಬೇಕು. ಬೇಸಾಯಸಂಘದಲ್ಲಿ ಅವರ ಹಾಗೂ ಅವರ ಪರಿವಾರದ ಭವಿಷ್ಯದ ಭದ್ರತೆ ಆಗಬೇಕು. ಇದಾಗಬೇಕಾದರೆ ಅವರು ಬೇಸಾಯಸಂಘವಲ್ಲಿ, ಅವರು ಸದಸ್ಯರಿರ ದಿದ್ದರೆ, ಸದಸ್ಯರಾಗಿ ಸೇರಿಕೊಳ್ಳುವುದು ಉತ್ತಮ. ಅವರಿಗೆ ಭೂಮಿ ಇರದಿದ್ದರೆ ಅವ ರಿಗೂ ಸ್ವಲ್ಪ ಭೂಮಿಯನ್ನು ದೊರಕಿಸಿ ಕೊಡುವ ವ್ಯವಸ್ಥೆ ಮಾಡಬಹುದು. ಅವರಿಗೆ ಹಣದ ವೇತನ ತಕ್ಕಮಟ್ಟಿಗೆ ಕೊಟ್ಟು ಅವರ ಉತ್ಪಾದಕ ಶ್ರಮದ ಮೇಲೆ ಬೇರೆ ಪ್ರತಿ ಫಲವನ್ನೂ ಅವರಿಗೆ ಬೇರೆ ಸದಸ್ಯರಿಗೆ ಕೊಟ್ಟಂತೆ ಕೊಡಬೇಕು. ಇದರಿಂದ ಉತ್ಪಾ ದಕ ಶ್ರಮದಲ್ಲಿ ಹಾಗೂ ಸಂಘದ ಉತ್ಪತ್ತಿಯನ್ನು ಹೆಚ್ಚಿಸುವಲ್ಲಿ ಅವರಿಗೆ ಆಸ್ಥೆ ಬೆಳೆಯುತ್ತದೆ. ಹೆಚ್ಚಿನ ಅರ್ಹತೆ, ಬೇಸಾಯಸಂಘದ ಯಶಸ್ಸುಗಳನ್ನು, ತಮ್ಮ ಇಂಥ ದುಡಿತದಿಂದ ಸಾಧಿಸಿದ ಕಾರ್ಯದರ್ಶಿಗಳಿಗೆ ವಿಶೇಷ ಪ್ರಶಸ್ತಿ, ಬಹುಮಾನ ಗಳನ್ನು ಸಹ ಕೊಡುವ ಏರ್ಪಾಡು ಮಾಡಬೇಕು.

ನಿರ್ದಿಷ್ಟ ಅರ್ಹತೆಗಳ ಕರಾರು ಹಾಕಿ ಇಂಥ ಕಾರ್ಯದರ್ಶಿಗಳ ಆಯ್ಕೆಮಾಡಿ ಒಳ್ಳೇ ಬೇಸಾಯಸಂಘದಲ್ಲಿ ಕನಿಷ್ಠ 6 ತಿಂಗಳುಗಳವರೆಗೆ ಉತ್ಪಾದಕ ಶ್ರಮ ಮಾಡಿಸಿ ತರಬೇತು ಕೊಟ್ಟು ಅವರನ್ನು ತಯಾರಿಸಬೇಕು. ಇದ್ದ ಬೇಸಾಯಸಂಘಗಳ ಸದ್ಯದ ಕಾರ್ಯದರ್ಶಿಗಳಿಗೆ ಇಂಥ ಆಯ್ಕೆಯಲ್ಲಿ ಆದ್ಯತೆ ಕೊಡಬೇಕು.

ಬೇಸಾಯಸಂಘಗಳ ಸಾಧನ ಸಂಪತ್ತು

ಬೇಸಾಯಸಂಘದ ಉತ್ಪಾದನೆಯ ಕಾರ್ಯವು ಯಶಸ್ವಿಯಾಗಬೇಕಾದರೆ ಅದಕ್ಕೆ ಸಾಲುವಷ್ಟು ಸಾಧನಗಳು ಬೇಕು. ಬೇಸಾಯಸಂಘವು ಸಾಮಾನ್ಯವಾಗಿ ಭೂರಹಿತರ ಅಥವಾ ನಿರ್ಗತಿಕ ಚಿಕ್ಕ ಬೇಸಾಯಗಾರರ ಸಂಸ್ಥೆ. ಇಂಥ ಸಂಸ್ಥೆಯು ಬೇಸಾಯವನ್ನು ಸುಧಾರಿಸಲು ಸಾಕಷ್ಟು ಸಾಧನಗಳು ಒದಗಬೇಕೆಂದೇ ಸಹಕಾರಿಬೇಸಾಯಕ್ಕೆ ತಕ್ಕ ಪ್ರೋತ್ಸಾಹ ಕೊಡಲು ಈ ಹಿಂದೆ ವಿವರಿಸಿದಂತೆ ಸರಕಾರವು ಪ್ರತಿಯೊಂದು ಬೇಸಾಯ ಸಂಘಕ್ಕೆ ಆರ್ಥಿಕ ಸಹಾಯವನ್ನು ಒದಗಿಸುವ ವ್ಯವಸ್ಥೆ ಮಾಡಿದೆ.

ಈ ಸಹಾಯವು ನೇರವಾಗಿ ಸಹಕಾರ ಇಲಾಖೆಯಿಂದ ದೊರಕುತ್ತದೆ. ಸರಕಾದ ಸದ್ಯದ ಧೋರಣೆಯ ಪ್ರಕಾರ ವಿಭಿನ್ನ ಇಲಾಖೆಗಳಿಂದ ಅವುಗಳ ಯೋಜನೆಗಳ ಪ್ರಕಾರ ಬೇಸಾಯಸಂಘಗಳ ಬೇಸಾಯವನ್ನು ಸುಧಾರಿಸಲು ಅಥವಾ ಅವುಗಳ ಸಹಾಯಕ ಉದ್ಯೋಗಗಳನ್ನು ಬೆಳೆಸಲು ಆದ್ಯತೆ ಕೊಟ್ಟು ಸಹಾಯವನ್ನು ಕೊಡುವ ವ್ಯವಸ್ಥೆ ಇದೆ. ಉತ್ಪಾದನೆಯ ಕಾರ್ಯಗಳಿಗೆ ಸಹಕಾರಿ ಬ್ಯಾಂಕುಗಳಿಂದಲೂ, ರಾಷ್ಟ್ರೀಕೃತ ಬ್ಯಾಂಕುಗಳಿಂದಲೂ ಬೇಸಾಯಸಂಘಗಳಿಗೆ ಸಾಲಗಳನ್ನು ಒದಗಿಸುವ ಧೋರಣೆಯಿದೆ.

ಜನರ ಸಾಧನಗಳು

ಬೇಸಾಯಸಂಘಗಳಿಗೆ ದೊರಕುವ ಸರಕಾರಿ ಸಹಾಯಕ್ಕೆ ಪ್ರಾಧಾನ್ಯತೆ ಕೊಟ್ಟು ಅದಕ್ಕಾಗಿಯೇ ಬೇಸಾಯಸಂಘಗಳನ್ನು ಸ್ಥಾಪಿಸುವ ಅಥವಾ ಬೇಸಾಯಸಂಘಗಳು ಸರಕಾರಿ ಸಹಾಯವನ್ನೇ ಅವಲಂಬಿಸುವ ತಪ್ಪು ಪ್ರವೃತ್ತಿ ಬೆಳೆದಿದೆ. ಇದರಿಂದ ಸಹ ಕಾರಿ ಬೇಸಾಯಸಂಘಗಳ ಸರಿಯಾದ ಪ್ರಗತಿ ಕುಂಠಿತವಾಗುತ್ತದೆ.

ಚಿಕ್ಕ ಬೇಸಾಯಗಾರರು ತಮ್ಮ ಸಾಧನಗಳನ್ನು ಒಂದುಗೂಡಿಸಿಕೊಂಡು, ಯೋಜ ನೆಯ ಪ್ರಕಾರ ಅವನ್ನು ಉಪಯೋಗಿಸಿಕೊಂಡು, ಅವುಗಳ ಶಕ್ತಿಯನ್ನು ಹೆಚ್ಚಿಸಿಕೊಂಡು, ಅವುಗಳ ಹೆಚ್ಚಿನ ಪ್ರಯೋಜನ ಪಡೆಯುವುದೇ ಸಹಕಾರಿ ಬೇಸಾಯದ ಮುಖ್ಯತತ್ವ. ಈ ತತ್ವವನ್ನು ಬೇಸಾಯಸಂಘದ ಸದಸ್ಯರು ಸರಿಯಾಗಿ ತಿಳಿದುಕೊಂಡು ಅದರಂತೆ ನಡೆದರೆ ಹೊರಗಿನ ಸಹಾಯವಿಲ್ಲದೆ ಅನೇಕ ಸುಧಾರಣೆಗಳನ್ನು ಬೇಸಾಯಸಂಘವು ಕೈಗೊಳ್ಳಬಹುದು. ಹೊರಗಿನ ಸಹಾಯ ಪಡೆದರೂ ಅದರ ಅನೇಕ ಪಟ್ಟು ಬೆಲೆಯ ಸುಧಾರಣೆಗಳನ್ನು ಅದು ಮಾಡಬಹುದು. ಇದಕ್ಕೆ ವಿಪರೀತವಾಗಿ ಹೊರಗಿನ ಸಹಾಯದ ಜಪವನ್ನೇ ಬೇಸಾಯಸಂಘವು ಮಾಡುತ್ತ ಇದ್ದರೆ ಇಂಥ ಸಹಾಯವು ದೊರೆತರೂ, ಅದನ್ನು ಒಂದಿಲ್ಲೊಂದು ರೂಪದಲ್ಲಿ, ಕೂಲಿ, ಭೂಮಿಯ ಪ್ರತಿಫಲ, ಎತ್ತಿನ ಬೆಲೆ ಮುಂತಾದ ರೂಪದಲ್ಲಿ ಸದಸ್ಯರೇ ಹಂಚಿಕೊಂಡು ಸಾಕಷ್ಟು ಸುಧಾರಣೆಯ ಕೆಲಸವು ಆ ಹಣದಿಂದ ಆಗುವುದಿಲ್ಲ. ಆದ್ದರಿಂದ ಬೇಸಾಯ ಸಂಘದ ಸದಸ್ಯರಿಗೆ ಅದು ತಮ್ಮದೇ ಸಂಘ, ತಮ್ಮ ದುಡಿತ, ಸಾಧನಗಳಿಂದಲೇ ಅದನ್ನು ಬೆಳೆಸುವುದಿದೆ ಎಂದು ಸರಿಯಾದ ತಿಳಿವಳಿಕೆಯನ್ನು ತುಂಬಿ ಅದರಿಂದ ಸಾಧ್ಯವಿದ್ದಷ್ಟು ಹೆಚ್ಚು ಸಾಧನಗಳನ್ನು ಕೂಡಿಸ

ಹಚ್ಚಬೇಕು. ತೋರಿಕೆಯ ಸಾಮೂಹಿಕಬೇಸಾಯದಿಂದ ಇದು ಸುಲಭ ಸಾಧ್ಯವಲ್ಲ. ಜನರು ಸರಿಯಾದ ತಿಳಿವಳಿಕೆಯಿಂದ ನೈಜ ಸಾಮೂಹಿಕಬೇಸಾಯ ಮಾಡುವುದರಿಂದಲೇ ಇದು ಸಾಧಿಸುವುದು.

ಒಂದುಗೂಡಿಸಿದ ಭೂಮಿ ಅಲ್ಲದೆ ಹೂಡುವ ಎತ್ತುಗಳು, ಬೇಸಾಯದ ಸಲಕರಣೆಗಳು, ಹಣ ಇವೆಲ್ಲವೂ ಬೇಸಾಯ ಸಂಘದ ಸದಸ್ಯರು ಒಂದುಗೂಡಿಸಬೇಕಾದ ಸಾಧನಗಳು. ಅವರ ಬಳಿ ಇರುವ ಈ ಸಾಧನಗಳನ್ನು ಅವರು ಒಂದುಗೂಡಿಸಿ ಉಪಯೋಗಿಸಿದರೆ ಅವುಗಳಿಂದ ಮೊದಲಿಗಿಂತ ಹೆಚ್ಚು ಭೂಮಿಯ ಸಾಗುವಳಿ ಆಗಬಲ್ಲದು ಮತ್ತು ಅವುಗಳ ಉಳಿತಾಯ ಸಹ ಆಗಬಲ್ಲದು. ಉದಾಹರಣೆಗೆ ಒಂದು ಬೇಸಾಯ ಸಂಘದಲ್ಲಿ 20 ಸದಸ್ಯರು 60 ಎಕರೆ ಭೂಮಿಯನ್ನು ಸಾಮೂಹಿಕಬೇಸಾಯಕ್ಕೆ ಒಂದುಗೂಡಿಸಿದ್ದಾರೆಂದು ತಿಳಿಯೋಣ. 10 ಸದಸ್ಯರಬಳಿ 10 ಜೊತೆ ಎತ್ತುಗಳಿವೆ ಎಂದು ತಿಳಿಯೋಣ. ವೈಯಕ್ತಿಕ ಬೇಸಾಯವಿದ್ದಾಗ 10 ರೈತರು ಸಾಕಷ್ಟು ಎತ್ತುಗಳಿಲ್ಲದ್ದಕ್ಕೆ ತಮ್ಮ ಭೂಮಿಯ ಸರಿಯಾದ ಸಾಗುವಳಿಯನ್ನೇ ಮಾಡಲು ಆಗುತ್ತಿರಲಿಲ್ಲ; ಹೀಗೆ ಅವರ ಭೂಮಿಯ ಶಕ್ತಿಯು ಹಾಳಾಗುತ್ತಿತ್ತು. ಮತ್ತೊಂದು ಕಡೆ 10 ಬೇಸಾಯಗಾರರ ಬಳಿ ಇರುವ 10 ಜೊತೆ ಒಳ್ಳೆಯ ಎತ್ತುಗಳಿಗೆ ಸಾಕಷ್ಟು ಭೂಮಿ ಇರದೆ ಎತ್ತುಗಳ ಶಕ್ತಿಯೂ ಹಾಳಾಗುತ್ತಿತ್ತೆಂದು ಹೇಳಬಹುದು. ಇಂಥ ಬೇಸಾಯಗಾರರು 60 ಎಕರೆಯ ಸಾಮೂಹಿಕ ಬೇಸಾಯಕ್ಕಾಗಿ ತಮ್ಮ 10 ಜೊತೆ ಎತ್ತುಗಳನ್ನು ಒಂದುಗೂಡಿಸಿದಾಗ 60 ಎಕರೆ ಭೂಮಿಯನ್ನು ಅಚ್ಚುಕಟ್ಟಾಗಿ ಸಾಗುಮಾಡಲು ಕೇವಲ 6ಜೊತೆ ಎತ್ತುಗಳೇ ಸಾಕಾಗಬಹುದು; 4 ಜೊತೆ ಎತ್ತುಗಳ ಉಳಿತಾಯವೂ ಆದೀತು. ಈ ಹೆಚ್ಚಿನ ಎತ್ತುಗಳನ್ನು ಮಾರಿ ಅವುಗಳ ಬಂಡವಲಿನಿಂದ ಬೇರೆ ಹೆಚ್ಚಿನ ಸುಧಾರಣೆಗಳನ್ನು ಬೇಸಾಯಸಂಘವು ಕೈಕೊಳ್ಳಬಹುದು. ಇದೇ ಪ್ರಕಾರ ಬೇರೆ ಒಂದುಗೂಡಿಸಿದ ಸಲಕರಣೆಗಳ ಉಳಿತಾಯವೂ ಆಗಿ ಅವುಗಳಿಂದಲೂ ಹೆಚ್ಚಿನ ಸುಧಾರಣೆಯ ಕೆಲಸವಾದೀತು.

ಇಂಥ ಸಾಧನ ಸಲಕರಣೆಗಳ ಯೋಗ್ಯ ಬೆಲೆ ಕಟ್ಟಿ ಶೇರಿನ ರೂಪದಲ್ಲಿ ಅಥವಾ ಠೇವಣಿ ರೂಪದಲ್ಲಿ ಒಂದುಗೂಡಿಸುವ ಪದ್ಧತಿಯನ್ನು ಮೊದಲೇ ತಿಳಿಸಲಾಗಿದೆ. ಇಂಥ ಸಾಧನಗಳನ್ನು ಆದಷ್ಟು ಹೆಚ್ಚು ಶೇರುಧನದ ರೂಪದಲ್ಲಿ ಒಂದುಗೂಡಿಸಿದರೆ ಬೇಸಾಯಸಂಘದ ಪತ್ತು ಎಂದರೆ ಹೊರಗಿನಿಂದ ಹಣ ಪಡೆಯುವ ಶಕ್ತಿ ಹೆಚ್ಚುತ್ತದೆ.

ಬೇಸಾಯಸಂಘದ ಸದಸ್ಯರ ಶ್ರಮಶಕ್ತಿ ಎಲ್ಲಕ್ಕೂ ಮಹತ್ವದ ಬೇಸಾಯ ಸಂಘದ ದೇವದತ್ತಸಾಧನ. ನೈಜ ಸಾಮೂಹಿಕ ಬೇಸಾಯದಲ್ಲಿ ಸದಸ್ಯರ ಸಾಮೂಹಿಕ ಶ್ರಮವೇ ಒಂದು ಹೆಚ್ಚಿನ ಬಂಡವಲು ಆಗುತ್ತದೆ. ಒಂದು ಕುಟುಂಬದಲ್ಲಿ ಇಬ್ಬರು ದುಡಿಯುವ ಸದಸ್ಯರಿದ್ದರೆ 20 ಕುಟುಂಬಗಳ 40 ಜನ ದುಡಿಯುವವರಾದರು. ಅವರು ಪ್ರತಿದಿವಸ ತಪ್ಪದೇ ದುಡಿದರೆ ಒಂದು ತಿಂಗಳಲ್ಲಿ 1,200 ಆಳಿನ ಕೆಲಸವಾದೀತು. ಒಂದು ಆಳಿನ ಸರಾಸರಿ ಬೆಲೆ 5 ರೂಪಾಯಿ ಹಿಡಿದರೆ ತಿಂಗಳಿಗೆ 6,000 ರೂಪಾಯಿಗಳು ಸದಸ್ಯರ ಶ್ರಮದ ಬಂಡವಲು ಆಯಿತು. ಸದಸ್ಯರು ಶ್ರಮದಾನ ಮಾಡಿದರೆ

ಅಥವಾ ತಮ್ಮದೇ ಕೆಲಸವೆಂದು ಭಾವಿಸಿ ಮುಂದೆ ದುಡಿತದ ಪ್ರತಿಫಲ ತೆಗೆದುಕೊಂಡರೂ ಹೊರಗಿನ ಬಂಡವಲು ಇಲ್ಲದೆ ಇಷ್ಟು ಬಂಡವಲಿನ ಬೆಲೆಯ ಸುಧಾರಣೆಯ ಕಾರ್ಯವನ್ನು ಪ್ರತಿ ತಿಂಗಳು ಬೇಸಾಯಸಂಘವು ಮಾಡಲು ಸಾಧ್ಯವಾದೀತು. ಹೀಗೆ ಬಹಳ ಕಡಮೆ ಹೂರಗಿನ ಸಹಾಯದಿಂದ ಅದರ 4–6 ಪಟ್ಟು ಹೆಚ್ಚು ಬೆಲೆಯ ಸುಧಾರಣೆಯ ಕೆಲಸ ಸಹಕಾರಿಬೇಸಾಯದಿಂದ ಆಗುವುದು ಸಾಧ್ಯವಿದೆ.

ಸದಸ್ಯರ ಪತ್ತು ಅಥವಾ ಹಣದೊರಕಿಸುವ ಅರ್ಹತೆ ಬೇಸಾಯಸಂಘದಲ್ಲಿ ಒಂದು ಮಹತ್ವದ ಜನರ ಸಾಧನ. ಬೇಸಾಯಸಂಘ ತಮ್ಮದು, ಇದರ ಬೇಸಾಯವನ್ನು ತಮ್ಮ ತ್ಯಾಗ, ದುಡಿತಗಳಿಂದಲೇ ತಾವೇ ಸುಧಾರಿಸಬೇಕಾಗಿದೆ ಎಂಬ ಅರಿವು ಬೇಸಾಯಸಂಘದ ಸದಸ್ಯರಲ್ಲಿ ಬೆಳೆದರೆ ಅದರಿಂದ ಅವರು ತಮ್ಮ ಪತ್ತು ಅಥವಾ ಅರ್ಹತೆಗನುಸರಿಸಿ ಹೊರಗಿನಿಂದ ಬಂಡವಲನ್ನೂ ಸಂಗ್ರಹಿಸಲು ಸಾಧ್ಯವಿದೆ. ಓರ್ವ ಶ್ರೀಮಂತನಿಗೆ 10,000 ರೂಪಾಯಿಗಳ ಪತ್ತು ಇದ್ದರೆ, ಓರ್ವ ದುಡಿಯುವ ಬಡವನಿಗೆ 400–500 ರೂಪಾಯಿ ಆದರೂ ಪತ್ತು ಇರಬಹುದು. ಕೆಲವೊಂದು ಒಳ್ಳೇ ಬೇಸಾಯಸಂಘಗಳಲ್ಲಿ ತಮ್ಮ ಮಕ್ಕಳನ್ನು ಬೇರೆಯವರ ಮನೆಯಲ್ಲಿ ಜೀತದಾಳಾಗಿ ಇಟ್ಟು ಸಹ ತಮ್ಮ ಬೇಸಾಯಸಂಘಕ್ಕೆ ಹಣಕೂಡಿಸಿದ ಅನುಭವವಿದೆ.

ಸುಧಾರಿಸಿದ ಸಾಂದ್ರಬೇಸಾಯದಿಂದ ಚಿಕ್ಕ ಬೇಸಾಯಗಾರರ ಉತ್ಪಾದನೆಯನ್ನೂ, ಆದಾಯವನ್ನೂ ಹೆಚ್ಚಿಸುವುದೇ ಸಹಕಾರಿ ಬೇಸಾಯದ ಮುಖ್ಯ ಉದ್ದೇಶ. ಯೋಜನೆಯ ಪ್ರಕಾರ ಸರಿಯಾಗಿ ಬೇಸಾಯಸಂಘ ಕೆಲಸ ಮಾಡಿದರೆ ಈ ಉದ್ದೇಶ ಸಾಧಿಸಿಯೇ ತೀರುವುದು. ಈ ಹೆಚ್ಚಿದ ಆದಾಯವನ್ನೆಲ್ಲ ಒಂದಿಲ್ಲೊಂದು ರೂಪದಲ್ಲಿ ಸದಸ್ಯರು ತಾವೇ ಹಂಚಿಕೊಂಡು ಉಪಯೋಗಿಸುವುದು ಸರಿಯಲ್ಲ. ಆದಾಯದ ಕೆಲವು ಭಾಗವನ್ನು ಅವರ ಜೀವನ ಸ್ಥಿತಿಯನ್ನು ಸುಧಾರಿಸಲು ಉಪಯೋಗಿಸುವುದು ಯೋಗ್ಯ. ಅದರಿಂದ ಸದಸ್ಯರಲ್ಲಿ ಉತ್ಸಾಹ ಬೆಳೆದು ಹೆಚ್ಚು ಹುಮ್ಮಸ್ಸಿನಿಂದ ಅವರು ದುಡಿದರೆ ಸಂಘದ ಅಭಿವೃದ್ಧಿ, ಇನ್ನೂ ಹೆಚ್ಚಬಹುದು. ಆದರೆ ಸಹಕಾರಿ ಬೇಸಾಯ ಸಂಘವು ತನ್ನ ಶಕ್ತಿಸಾಧನಗಳನ್ನು ಹೆಚ್ಚಿಸಿಕೊಂಡು ಬೇಸಾಯಗಾರರಿಗೆ ಸ್ವಾವಲಂಬನದ ದಾರಿ ತೋರುವ ಸಜೀವ ಸಂಸ್ಥೆ ಎಂಬುದನ್ನು ಮರೆಯಕೂಡದು. ಅದು ತನ್ನ ಬೆಳವಣಿಗೆಗೆ ಬಹುಕಾಲ ಹೊರಗಿನ ಸಹಾಯದ ಮೇಲೆ ಕೈಊರಿರಕೂಡದು.

ಮೇಲಿನ ತತ್ವವನ್ನು ಲಕ್ಷದಲ್ಲಿರಿಸಿ ಬೇಸಾಯಸಂಘದ ಆದಾಯದಲ್ಲಿ ಮಹತ್ವದ ಭಾಗವನ್ನು ಅದರ ಭಾವಿ ಬೆಳವಣಿಗೆಗಾಗಿ ಉಪಯೋಗಿಸಲು, ಅದರ ಸ್ವಂತದ ಬಂಡವಲನ್ನು ಹೆಚ್ಚಿಸಲು ಉಪಯೋಗಿಸಬೇಕು. ಪ್ರತಿವರ್ಷ ಸಂಘದ ಶೇರು ಬಂಡವಲನ್ನು, ರಕ್ಷಿತನಿಧಿಯನ್ನು, ಅಭಿವೃದ್ಧಿನಿಧಿಯನ್ನು, ಕಲ್ಯಾಣನಿಧಿಯನ್ನು, ಇನ್ನೂ ಅಗತ್ಯವಿದ್ದ ನಿಧಿಗಳನ್ನು ಸಂಘದ ಲಾಭದಿಂದ ಹೆಚ್ಚಿಸಬೇಕು. ಈ ಧೋರಣೆಯಿಂದ ಅದು ಬೇಗ ಸ್ವಾವಲಂಬಿಯಾಗುತ್ತದೆ. ಅಲ್ಲದೆ ಅದರಿಂದ ಕ್ರಮೇಣವಾಗಿ ಸದಸ್ಯರ ಆದಾಯ ಹೆಚ್ಚುತ್ತ ಹೋಗುತ್ತದೆ.

ಆದಾಯದ ವಿತರಣೆ

ಬೇಸಾಯಸಂಘದಲ್ಲಿ ಆದಾಯದ ವಿತರಣೆಯು ಬಹಳ ಮಹತ್ವದ ಸಂಗತಿ. ಅದರಲ್ಲಿ ಒಂದುಗೂಡುವ ಚಿಕ್ಕ ಬೇಸಾಯಗಾರರು ಸಹಕಾರಿ ಬೇಸಾಯದಿಂದ ತಮಗೆ ಹೆಚ್ಚು ಆದಾಯ ದೊರಕುವುದೆಂಬ ನಂಬಿಕೆಯಿಂದಲೇ ಅದರಲ್ಲಿ ಸೇರುತ್ತಾರೆ. ವಿಶ್ವಾಸ ಒಗ್ಗಟ್ಟುಗಳೇ ಬೇಸಾಯ ಸಂಘದ ಬಲ; ಸರಕಾರದ ಹಣವಲ್ಲ. ಅವರ ಆದಾಯ ಹೆಚ್ಚುವ ನಂಬಿಕೆಯನ್ನು ಆರಂಭದಿಂದಲೇ ಬೆಳೆಸುತ್ತ ಹೋದರೆ ಸದಸ್ಯರ ವಿಶ್ವಾಸ, ಒಗ್ಗಟ್ಟುಗಳು ಬೆಳೆಯುತ್ತ ಹೋಗುತ್ತವೆ. ಅದಕ್ಕಾಗಿ ಪ್ರಾರಂಭದಲ್ಲೇ ಬೇಸಾಯ ಸಂಘದ ಆದಾಯವನ್ನು ಹಂಚುವ ವಿಧಾನವನ್ನು ಸ್ಪಷ್ಟವಾಗಿ ನಿರ್ಧರಿಸಿ ಸದಸ್ಯರಿಗೆಲ್ಲ ತಿಳಿಸಿ ಮನವರಿಕೆ ಮಾಡಬೇಕು. ಅದರಿಂದ ಅವರು ಹುಮ್ಮಸ್ಸಿನಿಂದ ದುಡಿಯುತ್ತಾರೆ. ಇಲ್ಲದಿದ್ದರೆ ಸಂಶಯ, ಹೊಯ್ದಾಟಗಳಿಂದ ಅವರ ದುಡಿತವು ಕುಗ್ಗಿ ಸಂಘದ ಪ್ರಗತಿಗೆ ಧಕ್ಕೆ ಹತ್ತುವುದು ಖಂಡಿತ.

ಬೇಸಾಯಸಂಘದ ಆದಾಯವನ್ನು ಹಂಚುವ ನ್ಯಾಯವಾದ ತತ್ವಗಳನ್ನು ಸದಸ್ಯರು ಮನದಟ್ಟು ಮಾಡಿಕೊಳ್ಳಬೇಕು. ಬೇಸಾಯದ ಒಟ್ಟು ಆದಾಯದಲ್ಲಿ ಬೀಜ, ಗೊಬ್ಬರ, ಬೇಸಾಯದ ಶ್ರಮ, ಲಾವಣೀ ಗುತ್ತಿಗೆ, ಸಾಲ, ಬಡ್ಡಿ ಮುಂತಾದ ಖರ್ಚುಗಳನ್ನು ವಜಾ ತೆಗೆಯಬೇಕು; ಆಗ ಉಳಿಯುವ ಆದಾಯ ಬೇಸಾಯದ ಉತ್ಪತ್ತಿಯ ಆದಾಯ. ಇದರಲ್ಲಿ ತತ್ವದ ಪ್ರಕಾರ ಹಾಗೂ ನಿಯಮದ ಪ್ರಕಾರ ಭೂಮಿಯ ಪ್ರತಿಫಲವನ್ನೂ, ಶ್ರಮದ ಪ್ರತಿಫಲವನ್ನೂ ಹಾಗೂ ನಿಧಿಗಳನ್ನೂ, ವಜಾ ತೆಗೆಯಬೇಕು. ಲಾವಣಿ ಗೊತ್ತುಮಾಡದೆ ಇದ್ದ ಭೂಮಿಗಳಿಗೆ ಭೂಕಾಯಿದೆಯ ಮಿತಿಯನ್ನು ಮೀರದಂತೆ ಉತ್ಪನ್ನದ ಭಾಗವನ್ನು ಭೂಮಿಯ ಪ್ರತಿಫಲವನ್ನಾಗಿ ಹಂಚಬಹುದು. ಇಂಥ ಭೂಮಿಯ ಪ್ರತಿಫಲವನ್ನು ಪ್ರತಿಯೊಂದು ಭೂಮಿಯ ಪ್ರಾರಂಭದ ಬೆಲೆಗನುಸರಿಸಿ ಆಥವಾ ಅದರ ಫಲವತ್ತತೆಯ ಶಕ್ತಿಗನುಸರಿಸಿ ಹಂಚಬೇಕು. ಉದಾಹರಣೆಗೆ 10,000 ರೂಪಾಯಿಯ ಭೂಮಿಯ ಪ್ರತಿಫಲವನ್ನು 100 ಎಕರೆಯ ಮೇಲೆ ಹಂಚಬೇಕಾಗಿದೆ ಎಂದು ತಿಳಿಯೋಣ; ಒಂದು 10 ಎಕರೆಯ ಪ್ರಾರಂಭದ ಬೆಲೆ 20,000 ರೂಪಾಯಿ, ಇನ್ನೊಂದು 10 ಎಕರೆಯ ಬೆಲೆ 10,000 ರೂಪಾಯಿ ಹೀಗೆ 100 ಎಕರೆಯ ಒಟ್ಟು ಬೆಲೆ 1 ಲಕ್ಷ ರೂಪಾಯಿ ಇದೆ ಎನ್ನಿರಿ. 1 ಲಕ್ಷ ರೂಪಾಯಿಯ ಬೆಲೆಯ ಮೇಲೆ 10,000 ರೂಪಾಯಿಯ ಭೂಆದಾಯವನ್ನು ಬೇರೆ ಬೇರೆ ಭೂಮಿಯ ಬೆಲೆಯ ಪ್ರಕಾರ ಹಂಚಬೇಕು. ಇಂಥ ಆದಾಯವನ್ನು ಹಂಚಲು ಪ್ರಾರಂಭದ ಭೂಮಿಯ ಬೆಲೆಯನ್ನೇ ಹಿಡಿಯಬೇಕು. ಏಕೆಂದರೆ ಮುಂದೆ ಸಂಘವು ತನ್ನ ಸಾಮೂಹಿಕ ಶಕ್ತಿಸಾಧನಗಳಿಂದ ಆ ಭೂಮಿಯ ಬೆಲೆ ಹೆಚ್ಚಿಸಿದ್ದರೆ ಅದರ ಪ್ರತಿಫಲವು ಇಡಿಯ ಸಂಘಕ್ಕೆ ಸಲ್ಲಬೇಕು. ಅದರಲ್ಲಿ ಸಂಬಂಧಿಸಿದ ಭೂಮಿಯ ಒಡೆಯ ಸದಸ್ಯನಿಗೂ ಪಾಲು ಇದ್ದೇಇರುತ್ತದೆ.

ಇದೇ ರೀತಿಯಾಗಿ ಶ್ರಮದ ಪ್ರತಿಫಲವನ್ನೂ ಸದಸ್ಯರಿಗೆ, ಆದಾಯದ ಒಂದು ಭಾಗವನ್ನು ತೆಗೆದು, ಅದನ್ನು ದುಡಿತದ ದಿವಸಗಳ ಮೇಲೆ ಹಂಚಬೇಕು. ದುಡಿತಕ್ಕೆ ಮೊದಲೇ ಕೂಲಿಯನ್ನು ಕೊಟ್ಟಿದ್ದರೆ ಈ ಪ್ರತಿಫಲವನ್ನು ಹಂಚುವುದು ಅಗತ್ಯವಿಲ್ಲ.

ಇದೆಲ್ಲ ಹಂಚಿ ಆದ ಬಳಿಕ ಉಳಿಯುವ ಹೆಚ್ಚಿನ ಲಾಭ ಸಹಕಾರಿ ಬೇಸಾಯ ದಿಂದ ಭೂ ಕಾಯಿದೆಯ ಪ್ರಕಾರ ಪ್ರತಿಫಲವಷ್ಟೇ ದೊರಕುತ್ತದೆ; ಉಳಿದ ಲಾಭವೆಲ್ಲೋ ಯಾರಿಗೋ ಹೋಗುತ್ತದೆ, ಎಂಬ ಸಂದೇಹ ಸದಸ್ಯರಿಗೆ ಆಗಕೂಡದು. ಹೆಚ್ಚಿನ ಲಾಭ ಸಹ ಮತ್ತೆ ಸದಸ್ಯರಲ್ಲೇ ಹಂಚಲ್ಪಡುತ್ತದೆ. ಅದರ ಹೆಚ್ಚಿನ ಭಾಗ ಸದಸ್ಯರಿಗೆ ಅವರ ದುಡಿತದ ಮೇಲೆ ದುಡಿತದ ಹೆಚ್ಚಿನ ಲಾಭವೆಂದು (ಲೇಬರ್ ಬೋನಸ್) ಹಂಚಲ್ಪಡುತ್ತದೆ. ಅದರ ಕೆಲವು ಭಾಗವನ್ನು ಭೂಮಿಯ ಮೇಲೆ ಭೂಮಿಯ ಹೆಚ್ಚಿನ ಲಾಭವೆಂದು (ಲೇಬರ್ ಡಿವಿಡೆಂಡ್) ಹಂಚಬಹುದು. ಹೀಗೆ ಭೂಮಿಯ ಪ್ರತಿ ಫಲ, ದುಡಿತದ ಪ್ರತಿಫಲ, ಭೂಮಿಯ ಹೆಚ್ಚಿನ ಲಾಭ ಹಾಗೂ ದುಡಿತದ ಹೆಚ್ಚಿನ ಲಾಭ, ಹೀಗೆ ಬೇರೆ ಬೇರೆ ರೂಪದಲ್ಲಿ ಬೇಸಾಯಸಂಘದ ಆದಾಯವು ಹಂಚಲ್ಪಡು ತ್ತದೆ. ಈ ಪ್ರಯೋಜನವಲ್ಲದೆ ಯೋಜನಾಬದ್ಧವಾಗಿ ಸಾಮೂಹಿಕ ಸಾಧನ, ಸಹಾಯಗಳನ್ನು ಉಪಯೋಗಿಸುವುದರಿಂದ ಸದಸ್ಯರ ಭೂಮಿಯ ಉತ್ಪಾದಕ ಶಕ್ತಿ ಮತ್ತು ಬೆಲೆ ಹೆಚ್ಚುತ್ತವೆ. ವೈಯಕ್ತಿಕಬೇಸಾಯಕ್ಕಿಂತ ಸಾಮೂಹಿಕಬೇಸಾಯವು ಅನೇಕ ಪಟ್ಟು ಹೆಚ್ಚಿನ ಲಾಭಗಳನ್ನು ಹಾಗೂ ಅನುಕೂಲತೆಗಳನ್ನು ಒಂದುಗೂಡುವ ಬೇಸಾಯಗಾರರಿಗೆ ಒದಗಿಸುತ್ತದೆಂದು ಚಿಕ್ಕ ಬೇಸಾಯಗಾರರಾದ ಸದಸ್ಯರಿಗೆ ಮನ ದಟ್ಟು ಮಾಡಿಕೊಡಬೇಕು. ಹೀಗೆ ಮಾಡುವಲ್ಲಿ ಸಾಧಿಸಿದ ಅಂಕಿ, ಸಂಖ್ಯೆಗಳನ್ನು ಉಪ ಯೋಗಿಸಬೇಕು. ಅದರಿಂದ ಸಾಮೂಹಿಕ ಬೇಸಾಯದಲ್ಲಿ ಸದಸ್ಯರ ನಿಷ್ಠೆಯು ಭದ್ರವಾಗಿ ಸಾಮೂಹಿಕಬೇಸಾಯವನ್ನು ಯಶಸ್ವಿಗೊಳಿಸುತ್ತದೆ.

ನಿಧಿಗಳು

ಆದಾಯದಲ್ಲಿ ಖರ್ಚಿನ ಮೇಲಿನ ಬಾಬುಗಳನ್ನು ವಜಾತೆಗೆದ ಬಳಿಕ ಉಳಿಯುವ ಭಾಗ ನಿವ್ವಳಲಾಭವೆಂದು ಹೇಳಲಾಗಿದೆ. ಹೆಚ್ಚಿನ ಲಾಭವನ್ನು ಹಂಚುವ ಮೊದಲು ಬೇಸಾಯಸಂಘದ ನಿಯಮಗಳ ಪ್ರಕಾರ ನಿಧಿಗಳನ್ನು ತೆಗೆಯಬೇಕೆಂದು ಹೇಳಲಾಗಿದೆ ಯಷ್ಟೇ. ಬೇಸಾಯಸಂಘವನ್ನು ಭದ್ರಪಡಿಸಲು ಹಾಗೂ ಅದರ ಹೆಚ್ಚೆಚ್ಚು ಉನ್ನತಿ ಯನ್ನು ಸಾಧಿಸಲು ಈ ನಿಧಿಗಳ ಮಹತ್ವವು ಹೆಚ್ಚಿನದು. ಈ ನಿಧಿಗಳಲ್ಲಿ ಕೆಳಗಿನವು ಮುಖ್ಯವಾಗಿವೆ:

(1) **ರಕ್ಷಿತ ನಿಧಿ :** ಕರ್ನಾಟಕ ರಾಜ್ಯದಲ್ಲಿ ನಿವ್ವಳಲಾಭದಲ್ಲಿ ಶೇಕಡಾ 25 ರಷ್ಟು ಲಾಭಾಂಶವನ್ನು ರಕ್ಷಿತನಿಧಿಯಾಗಿ ತೆಗೆಯಲಾಗುತ್ತದೆ. ಅನಿರೀಕ್ಷಿತ ನಷ್ಟ ಅಥವಾ ವಿಪತ್ತುಗಳನ್ನು ಎದುರಿಸಲು ಸಹಕಾರ ಸಂಘಗಳ ರಿಜಿಸ್ಟ್ರಾರರ ಅನುಮತಿ ಯಿಂದ ಇದನ್ನು ಉಪಯೋಗಿಸಬಹುದು. ಅದುವರೆಗೆ ಈ ನಿಧಿಯನ್ನು ಭದ್ರವಾಗಿ ಕಾಯ್ದಿರಿಸಬೇಕು.

(2) **ಅಭಿವೃದ್ಧಿ ನಿಧಿ :** ನಿವ್ವಳಲಾಭದಲ್ಲಿ ಶೇಕಡಾ 15 ರಷ್ಟನ್ನು ಈ ನಿಧಿಯನ್ನಾಗಿ ತೆಗೆಯಬಹುದು. ಇದರಿಂದ ಸತತವಾಗಿ ಸಂಘವು ಉತ್ಪಾದನೆಯನ್ನು ಹೆಚ್ಚಿಸುವ ಹೊಸ ಹೊಸ ಸುಧಾರಣೆಗಳನ್ನು ಮಾಡುವುದು ಸಾಧ್ಯವಾಗುವುದು. ಅದರಿಂದ ಸದಸ್ಯರ ಆದಾಯವೂ ಹೆಚ್ಚಿ, ಸಹಕಾರಿ ಬೇಸಾಯದಲ್ಲಿ ಅವರ ವಿಶ್ವಾಸವೂ ಬೆಳೆದು ದೃಢಗೊಳ್ಳುವುದು. ಅದರಿಂದ ಸಂಘದ ಸಂಪತ್ತು ಸಹ ಹೆಚ್ಚಿ ಅದರ ಅಭಿವೃದ್ಧಿಗಾಗಿ ಹೊರಗಿನಿಂದ ಹೆಚ್ಚೆಚ್ಚು ಹಣ ದೊರಕಿಸಲೂ ಸಾಧ್ಯವಾಗುವುದು. ಸಂಘದ ಅಭಿವೃದ್ಧಿ ಹೆಚ್ಚಿತೆಂದರೆ ಅದರಿಂದ ಸಂಘದ ಭವ್ಯ ಭವಿಷ್ಯದ ವಿಮೆ ಇಳಿಸಿದಂತೆಯೂ ಆಗುತ್ತದೆ.

ಕೆಲಮಟ್ಟಿಗಾದರೂ ಬೇಸಾಯಸಂಘದ ಸದಸ್ಯರು, ತಮ್ಮ ಶ್ರಮದಾನದಿಂದಲೂ ಈ ಅಭಿವೃದ್ಧಿ ನಿಧಿಯನ್ನು ಹೆಚ್ಚಿಸಬಹುದು.

(3) **ಸಾಮೂಹಿಕ ಕಲ್ಯಾಣನಿಧಿ :** ನಿವ್ವಳಲಾಭದ ಶೇಕಡಾ 10ರಷ್ಟನ್ನಾದರೂ, ಈ ನಿಧಿಗಾಗಿ ತೆಗೆಯಬಹುದು. ಇದರಿಂದ ಸದಸ್ಯರಿಗೆ ಹೆಚ್ಚಿನ ಶಿಕ್ಷಣಕ್ಕಾಗಿ, ಮದುವೆಮುಂಜಿಗಾಗಿ, ಚಿಕಿತ್ಸೆಗಾಗಿ ಸದಸ್ಯರಿಗೆ ಸಹಾಯವನ್ನು ಒದಗಿಸಬಹುದು. ಅನುಕೂಲವಾದಲ್ಲಿ ಸಾಮೂಹಿಕ ವಾಗಿಯೇ ಉಚಿತವಾಗಿಯೇ ಈ ಸೌಕರ್ಯಗಳನ್ನು ಸದಸ್ಯರಿಗೆ ಒದಗಿಸಬಹುದು. ಅದರಿಂದ ಸದಸ್ಯರಿಗೆ ತಮ್ಮ ಬೇಸಾಯ ಸಂಘವು ಕಾಮಧೇನುವಾಗಿ ತೋರಬಹುದು. ಮಾನವ ಜೀವನದ ಎಲ್ಲ ಸೌಕರ್ಯಗಳೂ ದೊರಕಿ ಸದಸ್ಯರ ಸರ್ವಾಂಗೀಣ ಉನ್ನತಿಗಾಗಿ ಬೇಸಾಯ ಸಂಘವು ಒಂದು ಸಾಧನವಾಗುವುದು.

ಆದಷ್ಟು ಸದಸ್ಯರಿಗೆ ಭಾರವಾಗದಂತೆ, ಜನರ ಸೌಕರ್ಯವನ್ನು ಹೆಚ್ಚಿಸುವಂತೆ ನಿಧಿಗಳ ಏರ್ಪಾಡನ್ನು ಬೇಸಾಯ ಸಂಘವು ಮಾಡಬೇಕು.

ಅಧ್ಯಾಯ 10

ಸಹಕಾರಿ ಬೇಸಾಯಸಂಘದಲ್ಲಿ ಕಾರ್ಯಪದ್ಧತಿ

ಶ್ರಮಸಂಘಟನೆ

ಬೇಸಾಯಸಂಘದಲ್ಲಿ ಉಳುಮೆ, ಹರತಿ, ಬಿತ್ತನೆ, ಎಡೆ, ಕಳೆ, ಕೊಯ್ಲು, ಬರಾವರಿ ಮುಂತಾದುವು ಬೇಸಾಯದ ಮಹತ್ವದ ಕಾರ್ಯಗಳು. ಇವೆಲ್ಲ ಸಕಾಲದಲ್ಲಿ ಅಚ್ಚುಕಟ್ಟಾಗಿ ಆದರೇನೇ ಫಸಲುಗಳು ಚೆನ್ನಾಗಿ ಬೆಳೆದು, ಉತ್ಪತ್ತಿ, ಆದಾಯಗಳು ಹೆಚ್ಚಿ ಬೇಸಾಯಸಂಘವು ಉನ್ನತಿ ಸಾಧಿಸಬಲ್ಲದು. ಇದಾಗಬೇಕಾದರೆ ಅನುಭವ, ಯೋಗ್ಯತೆಗಳಿಗನುಸರಿಸಿ ಸದಸ್ಯರು ಪೂರ್ಣ ದುಡಿಯುವಂತೆ ಸದಸ್ಯರ ಸರಿಯಾದ ಶ್ರಮದ ಸಂಘಟನೆ ಮಾಡಬೇಕು.

ಸಾಮೂಹಿಕ ಬೇಸಾಯದಲ್ಲಿ ಸಾಧನಗಳನ್ನು ಭೂಮಿಯನ್ನಷ್ಟೇ ಅಲ್ಲ, ದುಡಿಯುವ ಸದಸ್ಯರ ಶ್ರಮವನ್ನೂ ಯೋಜನಾಬದ್ಧವಾಗಿ ಸಾಮೂಹಿಕವಾಗಿ ಉಪಯೋಗಿಸುವುದರ ಮಹತ್ವವನ್ನು ಬೇರೆ ಹೇಳಬೇಕಾಗಿಲ್ಲ. ಇದಾದರೇನೇ ಶ್ರಮದ ಪೂರ್ಣ ಉಪಯೋಗವಾಗಿ ಅದರಿಂದ ಉತ್ಪಾದನೆಯೂ ಪರಮಾವಧಿ ಹೆಚ್ಚಬಲ್ಲದು. ಸಾಮೂಹಿಕವಾಗಿ ದುಡಿಯುವುದರಿಂದ ಸದಸ್ಯರಲ್ಲಿ ಒಗ್ಗಟ್ಟು, ಆತ್ಮೀಯತೆ ಬೆಳೆದು, ಅವರ ಬುದ್ಧಿ, ಹೃದಯ, ಅನುಭವಗಳನ್ನು ಒಂದುಗೂಡಿಸುವ ಮಹತ್ವದ ಕಾರ್ಯವು ಸಾಧಿಸುತ್ತದೆ. ಬೇಸಾಯ ಸಂಘವು ಚಿಕ್ಕದಿದ್ದಲ್ಲಿ ಎಲ್ಲ ಬೇಸಾಯದ ಕೆಲಸಗಳನ್ನೂ ಹೀಗೆಯೇ ಒಟ್ಟಾಗಿ ಸಾಮೂಹಿಕವಾಗಿ ಮಾಡುವುದು ಸೂಕ್ತ. ಆದರೆ ಬೇಸಾಯಸಂಘವು ತೀರ ದೊಡ್ಡದಾದಲ್ಲಿ ಹೀಗೆ ಒಟ್ಟಾಗಿ ಎಲ್ಲ ಸದಸ್ಯರೂ ದುಡಿಯುವುದು ಸುಲಭವಲ್ಲ. ಒತ್ತಾಯದಿಂದ ಹಾಗೆ ಮಾಡಿದ್ದಾದರೆ ಸದಸ್ಯರಲ್ಲಿ ಮೇಳವಿಲ್ಲದೆ, ತಿಕ್ಕಾಟ ನಿರುತ್ಸಾಹಗಳಿಂದ ಕೆಲಸವು ಶಿಥಿಲವಾಗಿ ಕೆಡಬಹುದು. ಅಂಥ ಸಂದರ್ಭದಲ್ಲಿ ಸದಸ್ಯರನ್ನು ಅನುಕೂಲವಾದ ದಳಗಳಲ್ಲಿ ಸಂಘಟಿಸಿ, ದಳಗಳಿಗೆ ಭೂಮಿಯ ಭಾಗಗಳನ್ನು, ಬೇಸಾಯ ಸಲಕರಣೆಗಳನ್ನು ಹಂಚುವುದು ಸೂಕ್ತ. ಬೇಸಾಯ ಸಂಘದ ವ್ಯವಸ್ಥಾಪಕ ಮಂಡಲಿಯೇ ಎಲ್ಲ ದಳಗಳ ಸಲುವಾಗಿ ವ್ಯಾಪಕವಾದ ಸುಧಾರಣೆಗಳ ಹಾಗೂ ಉತ್ಪಾದನೆಯ ಯೋಜನೆಯನ್ನು ತಯಾರಿಸಿಕೊಡಬಹುದು. ದಳಗಳು ಯೋಜನೆಗನುಸರಿಸಿ ಪ್ರತ್ಯೇಕವಾಗಿ ಬೇಸಾಯದ ಕಾರ್ಯವನ್ನು ಸಾಗಿಸಿ ಯಶಸ್ವಿಮಾಡಬೇಕು. ಉತ್ಪತ್ತಿಯ ಕೆಲವು ಭಾಗವನ್ನು ಅಥವಾ ಆದಾಯದ ಕೆಲಸವನ್ನು ಉತ್ತೇಜನೆಗೆಂದು ದಳಕ್ಕೇ ಕೊಡಬಹುದು. ಉಳಿದ ಹೆಚ್ಚಿನ ಭಾಗದ ಆದಾಯವನ್ನೆಲ್ಲ ಸಂಘವು ಒಂದುಗೂಡಿಸಬೇಕು. ಅದನ್ನು ಸಂಘದ ನಿಯಮಗಳ ಪ್ರಕಾರ ಹಂಚಬೇಕು.

ಹೀಗೆ ದಳಗಳನ್ನು ವಿಂಗಡಿಸಿ ಭೂಮಿಯನ್ನು ಹಂಚುವಲ್ಲಿ ಪ್ರತ್ಯೇಕತೆಯ ಭಾವನೆಯು ಬೆಳೆಯುವ ಸಂಭವವಿದೆ. ಅಲ್ಲದೆ ದಳಗಳು ಹಂಚಿದ ಭೂಮಿಯ ಭಾಗವನು

ಕಾಯಂ ಆಗಿ ತಮ್ಮದೇ ಸ್ಥಿರಆಸ್ತಿಯನ್ನಾಗಿ ಮಾಡಿಕೊಳ್ಳುವ ಪ್ರವೃತ್ತಿಯೂ ಬೆಳೆಯ ಬಹದು. ಮುಂದೆ ದಳಗಳಲ್ಲಿಯ ವ್ಯಕ್ತಿಗಳು ಸಹ ವೈಯಕ್ತಿಕವಾಗಿ ಭೂಮಿಯನ್ನು ಹಂಚಿಕೊಂಡು ಸಾಮೂಹಿಕ ಬೇಸಾಯವೇ ಕೊನೆಗಾಣಬಹುದು. ಅದಾಗದಂತೆ ಎಚ್ಚರಿಕೆ ವಹಿಸಬೇಕು. ದಳಗಳನ್ನು ಮೇಲಿಂದ ಮೇಲೆ ಪುನಃ ಸಂಘಟಿಸುವುದು ಮತ್ತು ಭೂಮಿಯ ಭಾಗಗಳನ್ನು ಸಹ ಬದಲಾಯಿಸುವುದು ಪ್ರತ್ಯೇಕತೆಯನ್ನು ತಪ್ಪಿಸಲು ಒಂದು ಒಳ್ಳೆಯ ಉಪಾಯ.

ದೈಹಿಕ ಶ್ರಮದ ಮಹತ್ವ

ಬೇಸಾಯಸಂಘದಲ್ಲಿ ಸದಸ್ಯರು ಉತ್ಪಾದಕ ಶ್ರಮದಲ್ಲಿ ದೈಹಿಕವಾಗಿ ಭಾಗ ವಹಿಸುವುದು ಬಹಳ ಮಹತ್ವದ್ದು. ಹಲವಾರು ಸಂಘಗಳಲ್ಲಿ ಸದಸ್ಯರು, ಮುಖ್ಯವಾಗಿ ಅವರ ಮುಂದಾಳುಗಳು, ಹೀಗೆ ದೈಹಿಕ ಶ್ರಮ ಮಾಡದೆ ಕೇವಲ ಮೇಲ್ವಿಚಾರಣೆಯ, ಮುಂದಾಳುತನದ, ಲೆಕ್ಕಪತ್ರದ ಕೆಲಸ ಮಾಡುವುದುಂಟು. ಕೆಲವು ಸಂಘಗಳಲ್ಲಿ ಇಂಥ ಸದ್ಯಸರ ಸಂಖ್ಯೆಯೇ ಹೆಚ್ಚಾಗಿರುವುದುಂಟು. ಅದರಿಂದ ದುಡಿಯುವ ಸದಸ್ಯರಲ್ಲಿ ಅಸಂತೋಷ ಬೆಳೆಯುವುದು. ಉತ್ಸಾಹ ಕುಗ್ಗಿ ಅವರ ದುಡಿತವೂ ಕುಗ್ಗುವುದು. ಸೋಮಾರಿ ಕಾರಭಾರಿಗಳ ಸಲುವಾಗಿ ತಾವು ಕಷ್ಟಪಟ್ಟು ದುಡಿಯುತ್ತಿರುವೆವೆಂಬ ತಾತ್ಸಾರ ಅವರಲ್ಲಿ ಬೆಳೆಯುವುದು.

ಮೇಲಾಗಿ, ದುಡಿಯುವ ಸದಸ್ಯರ ಪ್ರಭಾವ ಬೆಳೆದರೆ ಪ್ರತ್ಯಕ್ಷ ದುಡಿಯದೆ ಕೇವಲ ಮೇಲ್ವಿಚಾರಣೆಗಾಗಿ ಅಥವಾ ಒಡೆತನಕ್ಕಾಗಿ ಆದಾಯದ ಹೆಚ್ಚಿನ ಭಾಗವನ್ನು ತೆಗೆದು ಕೊಳ್ಳುವ ಪ್ರವೃತ್ತಿಯೂ ಬೆಳೆಯುವುದು. ಇದರಿಂದ ಬೇಸಾಯಸಂಘವು ಛಿನ್ನಭಿನ್ನ ವಾಗಿ ಹೋಗುವ ಸಂಭವವಿದೆ. ಆದರ ನೈಜಸ್ವರೂಪವೂ ಉಳಿಯದಂತಾಗುತ್ತದೆ.

ಆದ್ದರಿಂದ ಬೇಸಾಯಸಂಘದ ಸದಸ್ಯರು ಸಂಘದ ಬೇಸಾಯದ ಅಥವಾ ಸಹಾ ಯಕ ಉದ್ಯೋಗಗಳಲ್ಲಿ ಒಂದಿಲ್ಲೊಂದು ರೀತಿಯಿಂದ ಕೆಲವೊಂದು ನಿರ್ದಿಷ್ಟ ಅವಧಿಯ ವರೆಗೆ ದೈಹಿಕವಾಗಿ ದುಡಿಯಲೇಬೇಕೆಂಬ ಕಡ್ಡಾಯವಿರಬೇಕು. ಸಂಚಾಲಕರು, ಮುಂದಾಳುಗಳು ಸಹ ಕೆಲಕಾಲ ತಮ್ಮ ಶಕ್ತಿಗನುಸರಿಸಿ ಉತ್ಪಾದಕ ಶ್ರಮದಲ್ಲಿ ದೈಹಿಕ ವಾಗಿ ಭಾಗವಹಿಸಬೇಕು. ಅದರಿಂದ ಸಾಮಾನ್ಯ ಸದಸ್ಯರ ಮೇಲೆ ಅವರ ನೈತಿಕ ವರ್ಚಸ್ಸು ಬೆಳೆಯುವುದಲ್ಲದೆ, ಪ್ರತಿಯೊಂದು ಕೆಲಸದ ಪ್ರತ್ಯಕ್ಷಅನುಭವ ಅವರಿಗಾಗಿ ಕೆಲಸಗಳನ್ನೂ ಹೆಚ್ಚು ಅಚ್ಚುಕಟ್ಟಾಗಿ ಮಾಡಿಸಲು ಅವರು ಸಮರ್ಥರಾಗುತ್ತಾರೆ.

ಉತ್ಪಾದಕಶ್ರಮವೆಂದರೆ ನೆಲ ಅಗಿಯುವಂಥ ಕಷ್ಟದ ಕಾರ್ಯಗಳೇ ಅಲ್ಲ, ಎಲ್ಲರ ಶಕ್ತಿಗೆ ನಿಲುಕುವಂಥ ಹಗುರಾದ, ಬುದ್ಧಿಯಿಂದ ಮಾಡಬೇಕಾದ ಅನೇಕ ಯಾಂತ್ರಿಕ ಕೆಲಸಗಳೂ ಬೇಸಾಯ ಸಂಘದಲ್ಲಿ ಇರುತ್ತವೆ. ಬುದ್ಧಿಜೀವಿಗಳು. ಸಂಚಾ ಲಕರು ಇಂಥ ಕೆಲಸಗಳನ್ನು ಸುಲಭವಾಗಿ ಮಾಡಬಲ್ಲರು. ಉತ್ಪಾದಕ ಶ್ರಮದಲ್ಲಿ

ತಾವೂ ಪಾಲುಗೊಳ್ಳಬೇಕೆಂಬ ಭಾವನೆ ಅವರಲ್ಲಿ ಬೆಳೆಯುವುದು ಬೇಸಾಯಸಂಘದ ಯಶಸ್ಸಿಗೆ ಮಹತ್ವದ್ದಾಗಿದೆ.

ಉತ್ಪಾದಕ ಶ್ರಮದಲ್ಲಿ ಭಾಗವಹಿಸಲು ಹೆಚ್ಚೆಚ್ಚು ಪ್ರೋತ್ಸಾಹ ದೊರಕುವಂತಹ ವಿಧಾನಗಳನ್ನು ಏರ್ಪಡಿಸಬೇಕು. ಆದಾಯದ ಬಹುಭಾಗವು, ಭೂಮಿ ಮೇಲ್ವಿಚಾರಣೆ ಅಥವಾ ಬಂಡವಲಿಗೆ ಹೋಗದೆ, ಬೋನಸ್ಸಿನ ರೂಪದಲ್ಲಿ ದುಡಿತಕ್ಕೇ ಸಲ್ಲುವ ವ್ಯವಸ್ಥೆ ಮಾಡಬೇಕು. ಸಂಚಾಲಕ ವರ್ಗದವರಿಗೆ ಸಹ ಕೆಲವೊಂದು ಭಾಗ ನಿಶ್ಚಿತ ಸಂಬಳ ಏರ್ಪಡಿಸಿ, ಕೆಲವೊಂದು ಭಾಗ ಉತ್ಪಾದಕಶ್ರಮದ ಪ್ರತಿಫಲ ಹಾಗೂ ಬೋನಸು ಕೊಡುವ ವ್ಯವಸ್ಥೆ ಮಾಡಬೇಕು. ಅದರಿಂದ ಬುದ್ಧಿಜೀವಿ ಸಂಚಾಲಕ ವರ್ಗದವರು ಸಹ ಉತ್ಪಾದಕ ಶ್ರಮದಲ್ಲಿ ಭಾಗವಹಿಸಲು ಅಣಿಯಾಗುವರು. ಭಾವೀಪೀಳಿಗೆಯ ಕಲ್ಯಾಣಕ್ಕಾಗಿ ಅವರ ಮನೋಭಾವನೆ ಬದಲಾಗುತ್ತ ಹೋಗುವುದು. ಉತ್ಪಾದಕ ಶ್ರಮದಲ್ಲಿ ಭಾಗವಹಿಸಲು ಉತ್ತೇಜನಕೊಡಲು ಕೆಲವು ಮೇಲಾಟ, ಪ್ರಮಾಣ ಪತ್ರ ಹಾಗೂ ಬಹುಮಾನಗಳ ಏರ್ಪಾಡು ಸಹ ಮಾಡಬಹುದು.

ದುಡಿತಕ್ಕೆ ತಕ್ಕ ಉತ್ತೇಜನ

ಸಾಮೂಹಿಕ ದುಡಿತದಲ್ಲಿ ಸೋವಾರಿತನ, ಹೊಣೆಗೇಡಿತನಗಳು ಬೆಳೆಯುವ ಸಂಭವವಿದೆ. ಈ ಪ್ರವೃತ್ತಿಬೆಳೆದರೆ ಸಾಮೂಹಿಕ ಬೇಸಾಯವು ವಿಫಲವಾದಂತೆಯೇ. ಈ ಪ್ರವೃತ್ತಿಯು ಬೆಳೆಯದೆ ಸಾಮೂಹಿಕ ದುಡಿತದಲ್ಲಿ ಹೆಚ್ಚೆಚ್ಚು ಉತ್ಸಾಹದಿಂದ ದುಡಿಯಲು ಉತ್ತೇಜನ ದೊರಕುವ ವ್ಯವಸ್ಥೆ ಆಗಲೇಬೇಕು. ಇದಕ್ಕಾಗಿ ಬೇಸಾಯ ಸಂಘವು ದುಡಿತಕ್ಕೆ ತಕ್ಕ ಪ್ರತಿಫಲಕೊಡುವ ತತ್ವವನ್ನು ಅನುಷ್ಠಾನಕ್ಕೆ ತರಲೇಬೇಕು. ಪರಿಸ್ಥಿತಿಗನುಸರಿಸಿ ಈ ತತ್ವದ ವಿಧಾನಗಳನ್ನು ಬೇರೆ ಬೇರೆಯಾಗಿ ಮಾರ್ಪಡಿಸಬಹುದು.

ದುಡಿತಕ್ಕೆ ಪ್ರತಿಫಲವೆಂದರೆ ವೈಯಕ್ತಿಕವಾಗಿ ಪ್ರತಿಯೊಬ್ಬ ಸದಸ್ಯನು ಮಾಡಿದ ಕೆಲಸದ ಪ್ರಮಾಣ ಹಾಗೂ ಪ್ರಕಾರ ಲಕ್ಷಿಸಿ ಅವನಿಗೆ ಪ್ರತಿಫಲ ದೊರೆಯಬೇಕು. ಈ ವಿಧಾನವು ಹಳ್ಳಿಗಳಲ್ಲಿ ಒಂದಿಲ್ಲೊಂದು ಬಗೆಯಿಂದ ಇದ್ದೇಇರುತ್ತದೆ. ನಟ್ಟು ಕಡಿಯುವುದಕ್ಕೆ ಕಳೆತೆಗೆಯುವುದಕ್ಕಿಂತ ಹೆಚ್ಚಿನ ಕೂಲಿ ಕೊಟ್ಟೇಕೊಡುತ್ತಾರೆ. 8 ಗಂಟೆ ದುಡಿಯುವನಿಗೂ 4 ಗಂಟೆ ದುಡಿದವನಿಗೂ ಯಾರೂ ಸಮನಾಗಿ ಕೂಲಿ ಕೊಡುವುದಿಲ್ಲ. ಕೂಲಿಮಾಡುವವರು ಸಹ ಹಳ್ಳಿಗಳಲ್ಲಿ ಸಾಮಾನ್ಯವಾಗಿ ತಂಡ ಕಟ್ಟಿಕೊಂಡು ಒಡ್ಡುಹಾಕುವುದು, ಕೊಯ್ಲು ಮುಂತಾದ ಕೆಲಸಗಳನ್ನು ಗುತ್ತಿಗೆಯಿಂದ ಮಾಡುತ್ತಾರೆ. ದೊರಕಿದ ಒಟ್ಟು ಪ್ರತಿಫಲವನ್ನು ಆಳುಗಳ ಪ್ರಕಾರ ಅಥವಾ ಕೆಲಸದ ಅಳತೆಯ ಪ್ರಕಾರ ತಂಡದ ಸದಸ್ಯರೆಲ್ಲರು ತಮ್ಮೊಳಗೇ ಹಂಚಿಕೊಳ್ಳುತ್ತಾರೆ. ಇದೇ ಬಗೆಯ ವಿಧಾನಗಳನ್ನು ಸಾಮೂಹಿಕ ಬೇಸಾಯದಲ್ಲಿ ಸಹ ಪರಿಸ್ಥಿತಿಗಳಿಗನುಸರಿಸಿ ಅನುಕರಿಸಬೇಕು.

ಕೆಲವೊಂದು ಪರದೇಶಗಳಲ್ಲಿ ರೂಢಿಯಲ್ಲಿರುವಂತೆ ನಮ್ಮ ದೇಶದಲ್ಲೂ ಕೆಲವು ಬೇಸಾಯಸಂಘಗಳು ಕೆಲಸದ ಏಕಮಾನಗಳನ್ನು ಗೊತ್ತುಮಾಡಿ ಅದಕ್ಕೆ ತಕ್ಕ ಪ್ರತಿಫಲ ಗೊತ್ತುಮಾಡಿದ್ದವು. ಉದಾಹರಣೆಗೆ ಕಳೆತೆಗೆಯುವುದಕ್ಕೆ 5 ರೂ, ಉಳುಮೆಗೆ 10 ರೂ, ಬಿತ್ತನೆಗೆ 15 ರೂ. ಹೀಗೆ ಏಕಮಾನಗಳನ್ನು ನಿರ್ಧರಿಸಲಾಗಿತ್ತು. ಈ ರೀತಿಯಾಗಿ ಪ್ರತಿಯೊಬ್ಬ ಸದಸ್ಯನು ಗಳಿಸಿದ ಏಕಮಾನಗಳನ್ವಯ ಆದಾಯವನ್ನು ಹಂಚಲಾಗುತ್ತಿತ್ತು. ರಷ್ಯಾ ದೇಶದಲ್ಲಿ ಗಡಸು, ಹಗುರು ಕೆಲಸಗಳನ್ನು ಲಕ್ಷಿಸಿ ಕೆಲಸಗಳ 7 ತರಗತಿಗಳನ್ನು ರಚಿಸಲಾಗಿದೆ. ಸ್ಥಳಿಕ ಪರಿಸ್ಥಿತಿ, ಸದಸ್ಯರ ಒಪ್ಪು, ಒಲವು ವಿಚಾರಿಸಿ ಇಂಥ ದುಡಿತದ ಪ್ರತಿಫಲದ ವಿಧಾನಗಳನ್ನು ನಿರ್ಮಿಸಬೇಕು.

ಇನ್ನೊಂದು ಮಹತ್ವದ ವಿಚಾರ, ಕೂಲಿ ಹಂಚುವುದಕ್ಕಿಂತ ವರ್ಷದ ಕೊನೆಯಲ್ಲಿ ಒಟ್ಟುಮಾಡಿದ ಕೆಲಸಕ್ಕೆ ತಕ್ಕಂತೆ ಹಾಗೂ ಉತ್ಪತ್ತಿಯ ಆದಾಯವನ್ನು ಹಂಚುವುದು ಮೇಲು. ಈ ವಿಧಾನದಿಂದ ಪ್ರತಿಯೊಬ್ಬ ಸದಸ್ಯನೂ ತಾನು ಹೆಚ್ಚೆಚ್ಚು ದುಡಿಯ ಬೇಕೆಂಬ ಹವ್ಯಾಸ ಬೆಳೆಯುವುದಲ್ಲದೆ, ಉತ್ಪತ್ತಿ ಹೆಚ್ಚಿದಂತೆ ತನ್ನ ಆದಾಯ ಹೆಚ್ಚುವುದ ರಿಂದ ಸಂಘದ ಉತ್ಪತ್ತಿಯನ್ನು ಹೆಚ್ಚಿಸಲು ಹವಣಿಸುವನು.

ದುಡಿತಕ್ಕೆ ಉತ್ತೇಜನಕೊಡಲು ಬೇರೆ ಬೇರೆ ಕೆಲಸಗಳಲ್ಲಿ, ಉತ್ಪಾದನೆಯಲ್ಲಿ ಮೇಲಾಟಗಳನ್ನು ಏರ್ಪಡಿಸಬಹುದು. ಈ ಮೇಲಾಟಗಳಲ್ಲಿ ಪ್ರಮಾಣ ಪತ್ರಗಳನ್ನೂ, ಬಹುಮಾನಗಳನ್ನೂ ಕೊಡುವುದರಿಂದ ಆರ್ಥಿಕ ಉತ್ತೇಜನವಷ್ಟೇ ಅಲ್ಲ, ಸಾಮಾಜಿಕ ಪ್ರಶಂಸೆಯ ಉತ್ತೇಜನವನ್ನೂ ದುಡಿತಕ್ಕೆ ಕೊಟ್ಟಂತಾಗುವುದು. ಸಾಮಾಜಿಕ ಪ್ರಶಂಸೆಗೂ ಮಹತ್ವದ ಸ್ಥಾನವಿದೆ. ಈ ಮೇಲಾಟ, ಪ್ರಶಂಸೆ, ಬಹುಮಾನಗಳನ್ನು ವ್ಯೆಯಕ್ತಿಕ ಸದಸ್ಯರಿಗಷ್ಟೇ ಅಲ್ಲ, ದುಡಿಯುವ ದಳಗಳಿಗೆ ಸಹ ಏರ್ಪಡಿಸಬಹುದು. ಇದರಿಂದ ಸಹಸದಸ್ಯರಲ್ಲಿ ದಳನಿಷ್ಠೆ ಬೆಳೆದು ಸಾಮೂಹಿಕ ದುಡಿತಕ್ಕೆ ಹೆಚ್ಚು ಪುಟ ದೊರಕುತ್ತದೆ.

ಸರ್ವಸಾಮಾನ್ಯವಾಗಿ ಮನುಷ್ಯರು ಆರ್ಥಿಕ ಹಾಗೂ ವ್ಯೆಯಕ್ತಿಕ ಉತ್ತೇಜನ ಗಳಿಂದ ದುಡಿಯುತ್ತಿದ್ದರೂ, ಸಾಮಾಜಿಕ ಭಾವನೆ, ನಿಷ್ಠೆಗಳು ಮನುಷ್ಯರಲ್ಲಿ ಬೆಳೆವಂತೆ ಸಾಮಾಜಿಕ, ರಾಷ್ಟ್ರೀಯ ಹಾಗೂ ನೈತಿಕ ಉತ್ತೇಜನಗಳಿಗೆ ಮನುಷ್ಯನು ಹೆಚ್ಚೆಚ್ಚು ಮಹತ್ವ ಕೊಡುತ್ತಾನೆ. ಯಾವಾಗಲೂ ತನ್ನ ಸ್ವಾರ್ಥವನ್ನೇ ನೋಡುತ್ತಿದ್ದರೆ ಮನು ಷ್ಯನು ಸಾಮಾಜಿಕ ಪ್ರಾಣಿಗಳಲ್ಲಿ ಶ್ರೇಷ್ಠನಾಗುತ್ತಲೇ ಇರಲಿಲ್ಲ. ಅವನ ಸಾಮಾಜಿಕ ಭಾವನೆಯ ಬೆಳವಣಿಗೆಯಿಂದಲೇ ಸಮಾಜದ ಪ್ರಗತಿಯಾಗಿದೆ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಸಾಮೂಹಿಕ ಬೇಸಾಯವು ಇಂಥ ಸಾಮಾಜಿಕ ಭಾವನೆಯನ್ನು ಸಾಮಾನ್ಯ ಬೇಸಾಯಗಾರರಲ್ಲಿ ಹೆಚ್ಚೆಚ್ಚು ಬೆಳೆಸುವ ಸಾಧನವಾಗಬೇಕು. ಬೇಸಾಯ ಸಂಘಗಳಲ್ಲಿ ಆರ್ಥಿಕ, ವ್ಯೆಯಕ್ತಿಕ ಉತ್ತೇಜನಗಳ ಜೊತೆಗೆನ ಸಾಮಾಜಿಕ ಭಾವನೆಯನ್ನು ಬೆಳೆಸುವ ಶಿಕ್ಷಣ, ತರಬೇತುಗಳು ನಡೆಯುತ್ತಿರಬೇಕು. ಅಂಥ ಮಹಾಪುರುಷರ, ಸಾಮಾಜಿಕ ಪ್ರಯೋಗಗಳ ಜ್ಞಾನ, ಬೇಸಾಯ ಸಂಘಗಳ ಸದಸ್ಯರಿಗೆ ಸತತವಾಗಿ ಮಾಡಿಕೊಡಬೇಕು.

ಇಸ್ರೇಲ್‌ದೇಶದಲ್ಲಿ ಸುಮಾರು 50-60 ವರ್ಷಗಳಿಂದ ನಡೆದು ಬಂದಿರುವ 'ಕಿಬ್ಬುಜು' (ಸಾಮೂಹಿಕ ಜೀವನದ ಹಳ್ಳಿಗಳು ಅಥವಾ ಕೌಟುಂಬಿಕ ಗ್ರಾಮಗಳು) ಇಂಥ ಮಹತ್ವದ ಸಾಮಾಜಿಕ ಪ್ರಯೋಗಗಳಾಗಿವೆ. ಇಂಥ ಸುಮಾರು 240 ಕೌಟುಂಬಿಕ ಗ್ರಾಮಗಳಲ್ಲಿ 40.000 ಕ್ಕೂ ಮೇಲ್ಪಟ್ಟು ಜನರು ಸಾಮೂಹಿಕ ದುಡಿತವನ್ನಷ್ಟೇ ಅಲ್ಲ, ಸಾಮೂಹಿಕ ಜೀವನವನ್ನೂ ನಡೆಸಿದ್ದಾರೆ. ಈ ಕಿಬ್ಬುಜುಗಳಲ್ಲಿ ಕೆಲಸಕ್ಕೆ ತಕ್ಕ ಕೂಲಿ, ಗಳಿಕೆ ಏನೂ ಇಲ್ಲ; ವೈಯಕ್ತಿಕ ಆರ್ಥಿಕಪ್ರತಿಫಲದ ಉತ್ತೇಜನವೇ ಇಲ್ಲ. ಆದರೂ ಕಿಬ್ಬುಜುಗಳ ಸದಸ್ಯರು ಸಮಾಜನಿಷ್ಠೆಯಿಂದ ಉತ್ಪಾದನೆಯಲ್ಲಿ ಮಿಗಿಲಾದ ಉತ್ಸಾಹದಿಂದ ದುಡಿಯುತ್ತಾರೆ. ಅವರ ಉತ್ಪಾದಕಶಕ್ತಿ. ಅವರ ಆಡಳಿತವ್ಯವಸ್ಥೆ ಶ್ರೇಷ್ಠವಾಗಿದೆ ಹಾಗೂ ಸಮಸ್ತ ಮಾನವ ಸಮಾಜಕ್ಕೆ ಸಾಮಾಜಿಕ, ಆರ್ಥಿಕ ಹಾಗೂ ನೈತಿಕ ಆಹ್ವಾನವಾಗಿದೆ. ಅಲ್ಲಿ ಸರ್ವೋದಯದ ಆದರ್ಶವನ್ನು ಇಸ್ರೇಲ್‌ದೇಶವು ತನ್ನದೇ ರೀತಿಯಲ್ಲಿ ಸಾಧಿಸಿದೆ.

ಇನ್ನೊಂದು ಬಗೆಯ ಉತ್ತೇಜನದಿಂದ ಬೇಸಾಯ ಸಂಘದ ಸದಸ್ಯರು ಬೇಸಾಯ ಕಾರ್ಯಗಳಲ್ಲಿ ಹೆಚ್ಚಿನ ಆಸ್ಥೆಯಿಂದ ದುಡಿಯಬಲ್ಲರು. ಅವರ ವೈಯಕ್ತಿಕ ಆದಾಯ ಹಾಗೂ ಜೀವನದ ಸೌಕರ್ಯಗಳು ಬೇಸಾಯ ಸಂಘದಿಂದಲೇ ಮೊದಲಿಗಿಂತ ಹೆಚ್ಚು ಸುಧಾರಿಸಿದವೆಂದು ಅಂಕಿಸಂಖ್ಯೆಗಳಿಂದ ಅವರು ಮನಗಂಡರೆ ಖಂಡಿತವಾಗಿಯೂ ಅವರಿಗೆ ಬೇಸಾಯಸಂಘದಲ್ಲಿ ಸಾಮೂಹಿಕವಾಗಿ ದುಡಿಯಲು ಅದೊಂದು ದೊಡ್ಡ ಉತ್ತೇಜನವಾಗುವುದು. ಅಲ್ಲದೆ ಬೇಸಾಯ ಸಂಘವು ಬೆಳೆಯುತ್ತಿರುವ ತನ್ನ ಸಾಮೂಹಿಕ ನಿಧಿಗಳಿಂದ ಸಾಮೂಹಿಕವಾಗಿ ಆ ಸದಸ್ಯರಿಗೆ ಅನೇಕ ಸೌಕರ್ಯಗಳನ್ನು ಒದಗಿಸಬಲ್ಲದು. ಉದಾಹರಣೆಗೆ ಅದು ಮಿತವ್ಯಯದಿಂದ, ಹೆಚ್ಚು ಸಂಭ್ರಮದಿಂದ ಸಾಮೂಹಿಕ ವಿವಾಹಗಳನ್ನೇರ್ಪಡಿಸಬಹುದು. ಅದು ಔಷಧ, ಚಿಕಿತ್ಸೆ, ಆಟ, ಮನರಂಜನೆ, ಭಜನೆಮಂಡಳಿ, ಶಾಲೆ ಮುಂತಾದವುಗಳ ವ್ಯವಸ್ಥೆ ಮಾಡಬಹುದು. ಅದು ಸದಸ್ಯರಿಗೆ ಒಳ್ಳೇ ಮನೆಗಳನ್ನು ಕಟ್ಟಿಕೊಡಬಹುದು. ಮಕ್ಕಳಶಿಕ್ಷಣದಲ್ಲಿ ಅದು ಸಹಾಯ ಮಾಡಬಹುದು. ಈ ಎಲ್ಲ ಸೌಕರ್ಯಗಳು ಸದಸ್ಯರ ದುಡಿತಕ್ಕೆ ಪರೋಕ್ಷಉತ್ತೇಜನಗಳಾಗುತ್ತವೆ.

ದುಡಿತದ ಶಿಸ್ತು

ಸಾಮೂಹಿಕ ದುಡಿತದಲ್ಲಿ ಹೊಣೆಗೇಡಿತನ, ಅಶಿಸ್ತು ಬೆಳೆಯುವುದೆಂದು ಒಂದು ಅನುಮಾನ. ಒಬ್ಬನು ಬೆಳಗ್ಗೆ 6 ಗಂಟೆಗೆ ದುಡಿಯಲು ಬಂದರೆ ಇನ್ನೊಬ್ಬನು 9 ಗಂಟೆಗೆ ದುಡಿಯಲು ಬರಬಹುದು. ಒಳ್ಳೇ ಹಂಗಾಮಿನಲ್ಲಿ ಕೆಲವೊಂದು ಸದಸ್ಯರು ಗೈರುಹಾಜರಿಯಾದರೂ ಚಿಂತೆ ಇಲ್ಲ ಎಂದು ಕೆಲಸ ಮಾಡುವುದನ್ನು ತಪ್ಪಿಸಬಹುದು. ಕೆಲವರು ಕೆಲಸದಲ್ಲಿ ಮೈಗಳ್ಳತನ ಮಾಡಬಹುದು. ದುಡಿತದ ಶಿಸ್ತನ್ನು ಏರ್ಪಡಿಸಿ ಈ ಅವ್ಯವಸ್ಥೆಯನ್ನು ತಡೆಯದಿದ್ದರೆ ಸಾಮೂಹಿಕ ಬೇಸಾಯವು ಯಶಸ್ವಿಯಾಗಲಾರದು. ಇಂಥ ದುಡಿತದ ಶಿಸ್ತಿನ ಅಭಾವದಿಂದಲೇ ಅನೇಕ ಬೇಸಾಯಸಂಘಗಳು ವಿಫಲವಾಗಿರುವುದುಂಟು.

ಸಾಮೂಹಿಕ ದುಡಿತದಲ್ಲಿ ದುಡಿತದ ಕಟ್ಟುಪಾಡು ಇರುವುದಿಲ್ಲೆಂಬುದು ತಪ್ಪು ಗ್ರಹಿಕೆ. ಸಾಮಾನ್ಯವಾಗಿ ಅನೇಕ ಬೇಸಾಯ ಕೆಲಸಗಳಲ್ಲಿ ಹಳ್ಳಿಗರು, ಮಹಿಳೆಯರು ಸಹ, ತಂಡಗಳನ್ನು ಕಟ್ಟಿಕೊಂಡು ಸಾಮೂಹಿಕವಾಗಿಯೇ ದುಡಿಯುತ್ತಾರೆ. ಸಾಮೂಹಿಕವಾಗಿ ಬಾವಿ ತೋಡುವುದರಲ್ಲಿ, ಸಾಮೂಹಿಕವಾಗಿ ಒಡ್ಡು ಹಾಕುವುದರಲ್ಲಿ, ಸಾಮೂಹಿಕವಾಗಿ ಕೊಯ್ಲು, ಕಳೆ ಮುಂತಾದ ಕೆಲಸಗಳನ್ನು ಮಾಡುವಲ್ಲಿ ದುಡಿತದ ಕಟ್ಟುಪಾಡು ಇರಬೇಕು. ಇಲ್ಲದಿದ್ದರೆ ವೈಯಕ್ತಿಕ ಕೂಲಿಕಾರ, ಸ್ವೇಚ್ಛಾಚಾರದಿಂದ, ಸೋಮಾರಿತನದಿಂದ ಕೆಲಸ ಮಾಡುಬಹುದು. ತಂಡದಲ್ಲಿ ದುಡಿಯುವವ, ದಳದ ಬಿಗುವಿನಿಂದಲೂ, ಮೇಲಾಟದ ಭಾವನೆಯಿಂದಲೂ, ಹೆಚ್ಚು ದುಡಿಯುತ್ತಾನೆ. ಅದರಲ್ಲೂ ಸೋಮಾರಿತನ, ಸ್ವೇಚ್ಛಾಚಾರ ನಡೆದರೆ ತಂಡದ ಸದಸ್ಯರು ಸುಮ್ಮನೇ ನೋಡುವರು. ಸೋಮಾರಿಗೆ ಕಡಮೆ ಕೂಲಿಕೊಟ್ಟು, ಅವನನ್ನು ತಿದ್ದುತ್ತಾರೆ. ಅದಕ್ಕೂ ಬಗ್ಗದಿದ್ದರೆ ಅವನನ್ನು ಅವರು ತಂಡದಿಂದಲೇ ಹೊರತಳ್ಳಿಯೂ ಬಿಡಬಹುದು.

ಹಾಗೆಯೇ ಸಾಮೂಹಿಕ ಬೇಸಾಯವೆಂದರೆ ಸ್ವೇಚ್ಛಾಚಾರವಲ್ಲ. ಕೆಲಸದ ಸರಿಯಾದ ನಿಯಮ, ಸಮಯ ಗೊತ್ತುಪಡಿಸಿ, ಅದನ್ನು ಪಾಲಿಸಲು ಸದಸ್ಯರಿಗೆ ಕಡ್ಡಾಯ ಮಾಡಲೇಬೇಕು. ಶಿಸ್ತಿನ ಉಲ್ಲಂಘನೆ ಆದಲ್ಲಿ ಅದಕ್ಕೆ, ಸಂಘದ ವ್ಯವಸ್ಥಾಪಕ ಮಂಡಳಿಯು ನಿರ್ಣಯಿಸಿದಂತೆ ಕ್ರಮ ತೆಗೆದುಕೊಳ್ಳಬೇಕು. ದಂಡಕಟ್ಟುವುದು, ಹಾಜರಿಕಡಮೆ ಮಾಡುವುದು, ಕೊನೆಗೆ ಸಂಘದಿಂದ ಹೊರತಳ್ಳುವುದು, ಮುಂತಾದವು ಶಿಸ್ತಿನ ಕ್ರಮಗಳಾಗಬಲ್ಲವು.

ಯೋಜನೆ

ಬೇಸಾಯ ಸಂಘದಲ್ಲಿ ಯೋಜನೆಗೆ ಬಹಳ ಮಹತ್ವದ ಸ್ಥಾನವಿದೆ. ಸಾಮಾನ್ಯವಾಗಿ ಯೋಜನೆ ಇಲ್ಲದೆಯೇ ಬೇಸಾಯಗಾರರು ಬೇಸಾಯ ಮಾಡುತ್ತಾರೆ. ಅದರಿಂದ ಅವರು ನಿಸರ್ಗದ ಧಕ್ಕೆಗಳಿಗೆ ಗುರಿಯಾಗುತ್ತಾರೆ. ತಮ್ಮ ಸಾಧನಸಲಕರಣೆ ನೋಡದೆಯೇ ಬೆಳೆ ಮಾಡುತ್ತಾರೆ. ಸಕಾಲದಲ್ಲಿ ಆಗಬೇಕಾದ ಕೆಲಸಗಳು ಆಗುವುದಿಲ್ಲ. ಉತ್ಪತ್ತಿಯ ಬೇಡಿಕೆ, ಧಾರಣೆಗಳನ್ನು ವಿಚಾರಿಸುವುದಿಲ್ಲ. ಹೀಗಾಗಿ ಅವರು ಕಷ್ಟಪಟ್ಟು ದುಡಿದದ್ದು, ಹಾಕಿದ ಬಂಡವಲು ಸಾಮಾನ್ಯವಾಗಿ ವ್ಯರ್ಥವಾಗಿ ಹಾಳಾಗುತ್ತದೆ. ಇಲ್ಲವೇ ಅದಕ್ಕೆ ತಕ್ಕ ಪ್ರತಿಫಲ ದೊರಕದೇ ಬೇಸಾಯಗಾರರು ಆರ್ಥಿಕ ಪೇಚಾಟದಲ್ಲಿ ಬೀಳುತ್ತಾರೆ. ಸಹಕಾರಿ ಬೇಸಾಯಸಂಘಗಳ ಸ್ಥಿತಿಯೂ ಸಾಮಾನ್ಯವಾಗಿ ಹೀಗೆಯೇ ಇರುತ್ತದೆ. ಈ ತೊಂದರೆಗಳನ್ನು ತಪ್ಪಿಸಿ ಸಹಕಾರಿ ಬೇಸಾಯದಿಂದ ಸಮೃದ್ಧಿ ಸಾಧಿಸಿ ತೋರಿಸಬೇಕಾದರೆ ಬೇಸಾಯಸಂಘಗಳು ದಕ್ಷತೆಯಿಂದ ಯೋಜನೆಗಳನ್ನು ತಯಾರಿಸಿ ಅಭಿವೃದ್ಧಿಯ ಹಾಗೂ ಉತ್ಪಾದನೆಯ ಕೆಲಸಗಳನ್ನು ಕೈಕೊಳ್ಳಬೇಕು.

ಸಹಕಾರಿ ಬೇಸಾಯಸಂಘಗಳು ಕೈಕೊಳ್ಳಬೇಕಾದ ಯೋಜನೆಗಳನ್ನು (i) ಅಲ್ಪಾವಧಿ ಯೋಜನೆಗಳು (ii) ದೀರ್ಘಾವಧಿ ಯೋಜನೆಗಳು, ಎಂದು ಎರಡು ತೆರವಾಗಿ ವಿಂಗಡಿಸಬಹುವುದು. ಅಲ್ಪಾವಧಿ ಯೋಜನೆಯಲ್ಲಿ ಇದ್ದ ಸಾಧನಗಳಿಂದ ಸುಧಾರಣೆ

ಹಾಗೂ ಬೆಳೆಯ ಯೋಜನೆಗಳನ್ನು ಕಾರ್ಯಗತ ಮಾಡಿ ತ್ವರಿತವಾಗಿ ಆದಾಯವನ್ನು ಹೆಚ್ಚಿಸಲಾಗುತ್ತದೆ. ಫಲವತ್ತಾದ ಭೂಮಿಗೆ ಒಡ್ಡು ಹಾಕುವುದು, ಕಪ್ಪು ಕಾವಲಿ ಗಳನ್ನು ತೆಗಯುವುದು, ತ್ವರಿತವಾಗಿ ನೀರಾವರಿಯ ಅನುಕೂಲತೆ ಮಾಡಿಕೊಳ್ಳುವುದೂ, ಸುಧಾರಿಸಿದ ಮತ್ತು ಹೆಚ್ಚು ಇಳುವರಿಯ ಬೆಳೆಬೆಳೆಸುವುದು ಇವೆಲ್ಲವನ್ನೂ ಅಲ್ಪಾವಧಿ ಅಭಿವೃದ್ಧಿಯ ಯೋಜನೆಗಳೆಂದು ಹೇಳಬಹುದು. ವಶದಲ್ಲಿದ್ದ ಎಲ್ಲ ಭೂಮಿಯನ್ನು ಅಭಿವೃದ್ಧಿಗೊಳಿಸುವುದು, ಎಲ್ಲ ಭೂಮಿಗೆ ಸಮಪಾತಳಿಯ ಒಡ್ಡನ್ನು ಹಾಕಿಸುವುದು, ದೊಡ್ಡ ನೀರಾವರಿಯೋಜನೆ ಕೈಕೊಳ್ಳುವುದು, ತೆಂಗು, ಅಡಿಕೆ, ಹಣ್ಣುಗಳ ತೋಟ ಬೆಳೆಸುವುದು ಇವೆಲ್ಲವೂ ದೀರ್ಘಾವಧಿಯ ಯೋಜನೆಗಳೆನಿಸುತ್ತವೆ.

ಬೇಸಾಯಸಂಘದಲ್ಲಿಯ ಸದಸ್ಯರು ನಿರ್ಗತಿಕರು, ಸಹಕಾರಿಬೇಸಾಯದಿಂದ ತಮ್ಮ ಬೇಸಾಯದ ಉತ್ಪತ್ತಿಯು ಹೆಚ್ಚಿ ತಮ್ಮ ಆದಾಯ ಹೆಚ್ಚಿ, ತಮ್ಮ ಜೀವನ ಸ್ಥಿತಿ ಉತ್ತಮಗೊಳ್ಳುವುದೆಂಬ ನಂಬಿಕೆಯಿಂದ ಅವರು ಬೇಸಾಯಸಂಘದಲ್ಲಿ ಸೇರು ತ್ತಾರೆ ಮತ್ತು ತಮ್ಮ ಭೂಮಿಗಳನ್ನು ಅದರಲ್ಲಿ ಒಂದುಗೂಡಿಸುತ್ತಾರೆ. ಅವರ ಈ ಬಯಕೆ ಕೂಡಲೇ, ಮೊದಲ ವರ್ಷದಲ್ಲಿ ಈಡೇರದಿದ್ದರೆ ಅವರಿಗೆ ಸಹಕಾರಿ ಬೇಸಾ ಯದ ಪ್ರಯೋಜನದ ಬಗ್ಗೆ ಭ್ರಮನಿರಸನವಾಗುತ್ತದೆ. ಅವರ ಆಶೋತ್ತರಗಳು ಈಡೇರಿದರೆ ಸಾಮೂಹಿಕ ಬೇಸಾಯದಲ್ಲಿ ಅವರ ವಿಶ್ವಾಸವು ದೃಢಗೊಳ್ಳುತ್ತದೆ.

ದೀರ್ಘಾವಧಿ ಯೋಜನೆಗಳಿಂದ ಮುಂದೆ ದೂರ ಭವಿಷ್ಯದಲ್ಲಿ 8–10 ವರ್ಷಗಳ ನಂತರ, ಚೆನ್ನಾದ ಆದಾಯ, ಬೇಸಾಯಸಂಘಕ್ಕೂ, ಅದರ ಸದಸ್ಯರಿಗೂ ದೊರಕ ಬಹುದು. ಆದರೆ ಅದರಿಂದ ಈಗ ಉಪವಾಸ ಬೀಳುವುದಾದರೆ ಅಂಥ ದೀರ್ಘ ಯೋಜನೆಯಿಂದ ಬೇಸಾಯಸಂಘದ ಸದಸ್ಯರಿಗೆ ಸಮಾಧಾನವಾಗದು. ಪ್ರಾರಂಭ ದಲ್ಲಿ ಅಲ್ಪಾವಧಿ ಯೋಜನೆಗಳನ್ನು ಯಶಸ್ವಿಯಾಗಿ ಕಾರ್ಯಗತ ಗೊಳಿಸಿ, ಶೀಘ್ರದಲ್ಲಿ ಆದಾಯವನ್ನು ಹೆಚ್ಚಿಸಿ ಬೇಸಾಯಗಾರರ ಅತ್ಯಗತ್ಯ ಅನುಕೂಲತೆಗಳನ್ನು ಒದಗಿಸಿ ಅವರಿಗೆ ಸಮಾಧಾನಮಾಡುವುದು ಅವಶ್ಯ.

ಅಲ್ಪಾವಧಿಯ ಯೋಜನೆಯಿಂದ ಬೇಸಾಯಸಂಘದ ಆದಾಯ, ಸಹ ಪ್ರತಿವರ್ಷ ಹೆಚ್ಚುತ್ತ, ಅದು ಸುಲಭವಾಗಿ ತನ್ನ ಸ್ವಂತದ ಬಂಡವಲನ್ನೂ ಹೆಚ್ಚಿಸಿ ಸ್ವಾವಲಂಬನೆ ಯತ್ತ ಮುನ್ನಡೆಯುವುದು. ಅದರ ಪತ್ತು ಹೆಚ್ಚುತ್ತ ಅದು ಹೆಚ್ಚಿನ ಅಭಿವೃದ್ಧಿಗೆ ಸುಲಭವಾಗಿ ಬಂಡವಲನ್ನು ಪಡೆಯುವುದು. ತನ್ನ ಕೊಡುಕೊಳ್ಳುಗಳನ್ನೆಲ್ಲ ತೊಡಕಿಲ್ಲದೆ ತೀರಿಸುತ್ತ ಹೋಗುವುದು. ಹೀಗೆ ಬೇಸಾಯಸಂಘವು ಎಲ್ಲರೀತಿಯಿಂದ ಭದ್ರವಾ ಗುತ್ತ ಹೋಗುವುದು.

ಬೇಸಾಯಸಂಘದಲ್ಲಿ ದೀರ್ಘಾವಧಿಯ ಸುಧಾರಣೆಗಳ ಯೋಜನೆಗಳಿಗೂ ತಕ್ಕ ಮಹತ್ವ ಇದ್ದೇ ಇದೆ. ಅವು ಬೇಸಾಯ ಸಂಘದ ಭದ್ರ ಹಾಗೂ ಉನ್ನತಿಯ ಭವಿಷ್ಯದ ವಿಮೆಗಳಿದ್ದಂತೆ. ಸಂಘದ ಸದಸ್ಯರೂ ಸಹ ತಮ್ಮ ವೈಯಕ್ತಿಕ ಹಾಗೂ ಸಾಮೂಹಿಕ

ಉನ್ನತಿ. ಭದ್ರತೆಗಳಿಗಾಗಿ ಅವುಗಳಿಂದ ಧರವಸೆ ಪಡೆಯುತ್ತಾರೆ. ಒಮ್ಮೆ ಕಷ್ಟಪಟ್ಟು ಬೇಸಾಯಸಂಘವು ಒಂದು ದೊಡ್ಡ ನೀರಾವರಿಯ ಯೋಜನೆಯನ್ನು ಕಾರ್ಯಗತ ಮಾಡಿದರೆ ಅಥವಾ ಒಂದು ತೆಂಗಿನ ಅಥವಾ ಹಣ್ಣಿನ ತೋಟ ಬೆಳೆಸಿದರೆ ಅವರ ಆದಾಯ ಎಷ್ಟೋಪಟ್ಟು ಹೆಚ್ಚುತ್ತದೆ.

ಸುವರ್ಣ ಮಾಧ್ಯಮವಾಗಿ ಬೇಸಾಯಸಂಘವು ಅಲ್ಪಾವಧಿಯ ಹಾಗೂ ದೀರ್ಘಾವಧಿಯ ಯೋಜನೆಗಳನ್ನು ಸರಿಯಾಗಿ ಹೊಂದಿಸಬೇಕು. ಅಲ್ಪಾವಧಿಯ ಉತ್ಪತ್ತಿ ಹೆಚ್ಚಿಸುವ ಯೋಜನೆಗೆ ಪ್ರಾಮುಖ್ಯತೆ ಕೊಟ್ಟು, ಬೇಸಾಯಸಂಘವು ದೀರ್ಘಾವಧಿಯ ಯೋಜನೆಗಳನ್ನು ತನ್ನ ಶಕ್ತಿ ಸಾಧನಗಳಿಗನುಸರಿಸಿ ಕೈಕೊಳ್ಳುತ್ತ ಹೋಗಬೇಕು. ಶ್ರಮಸಾಧನಗಳ ಸ್ವಾವಲಂಬನದ ಬಗ್ಗೆ ಈಗಾಗಲೇ ಸಾಕಷ್ಟು ಹೇಳಲಾಗಿದೆ. ಅಲ್ಪಾವಧಿಯ ಯೋಜನೆಗಳನ್ನಾಗಲೀ, ದೀರ್ಘಾವಧಿಯ ಯೋಜನೆಗಳನ್ನಾಗಲೀ, ಹೆಚ್ಚಾಗಿ ಅನಿಶ್ಚಿತವಾದ ಹೊರಗಿನ ಬಂಡವಲಿನ ಮೇಲೆ ತಯಾರಿಸಿ ಆರಂಭಿಸುವುದು ಗಂಡಾಂತರದ್ದು. ಹೊರಗಿನ ಸಹಾಯ ಅಥವಾ ಬಂಡವಲು ಸಾಕಷ್ಟು ಸಕಾಲದಲ್ಲಿ ದೊರಕಲಿಕ್ಕಿಲ್ಲ. ಅಂಥ ಪರಿಸ್ಥಿತಿಯಲ್ಲಿ ಯೋಜನೆಯು ಅಪೂರ್ಣವಾಗಿ ಬೇಸಾಯ ಸಂಘಕ್ಕೆ ಅಪಾರ ನಷ್ಟವಾಗಬಹುದು. ಆದ್ದರಿಂದ ಸದಸ್ಯರಿಗೆ ನಿರಾಶೆಯ ಆಘಾತವಾಗಬಹುದು. ಆದ್ದರಿಂದ ಬೇಸಾಯ ಸಂಘವು ತನ್ನ ಯೋಜನೆಗಳನ್ನು, ಅದರಲ್ಲೂ ಅಲ್ಪಾವಧಿಯ ಯೋಜನೆಗಳನ್ನು ತನ್ನವೇ ಶ್ರಮ ಹಾಗೂ ನಿಶ್ಚಿತ ಸಾಧನಗಳ ಆಧಾರದ ಮೇಲೆ ತಯಾರಿಸಬೇಕು. ಹೊರಗಿನ ಬಂಡವಲಿನ ನಿರೀಕ್ಷೆ ಇದ್ದರೆ, ಅದಕ್ಕಾಗಿ ಸರಿಯಾಗಿ ಯತ್ನಿಸಿ, ಅದು ಸಕಾಲದಲ್ಲಿ ಸಿಕ್ಕ ಬಳಿಕವೇ ಅದನ್ನು ತನ್ನ ಯೋಜನೆಗಳಿಗಾಗಿ ಉಪಯೋಗಿಸುವ ಯೋಜನೆ ಮಾಡಬಹುದು.

ಯೋಜನೆಗಳು ಎಲ್ಲವೂ ಒಮ್ಮೆಲೇ ಕಾರ್ಯಗತವಾಗುವಂಥವಿರಲಿಕ್ಕಿಲ್ಲ. ಅವಕ್ಕೆ ಅಗತ್ಯವಿದ್ದ ಬಂಡವಲು, ಸಂಚಾಲನ, ದಕ್ಷತೆ ಹಾಗೂ ಬೇರೆ ಅನುಕೂಲತೆಗಳಿರಲಿಕ್ಕಿಲ್ಲ. ಈ ಎಲ್ಲ ಸಂಗತಿಗಳನ್ನು ಲಕ್ಷಿಸಿ, ಯೋಜನೆಗಳನ್ನು ಕಾರ್ಯಗತಗೊಳಿಸಲು ಅನುಕೂಲವಾದ ಹಂತಗಳನ್ನು ಮಾಡಿಕೊಳ್ಳಬಹುದು. ದಕ್ಷತೆಯಿಂದ ಪ್ರತಿಯೊಂದು ಹಂತವನ್ನು ಲಾಭದಾಯಕವಾಗಿ ಕಾರ್ಯಗತ ಮಾಡಬೇಕು. ಕನಿಷ್ಠ ವರ್ಷಕ್ಕೊಮ್ಮೆಯಾದರೂ ಅದು ಯೋಜನೆಯ ಪ್ರಗತಿಯನ್ನು ಅಳೆದು, ಮೌಲ್ಯಮಾಪನ ಮಾಡುತ್ತ ಹೋಗಬೇಕು.

ಸಾಂದ್ರ ಬೇಸಾಯ

ಬೇಸಾಯಸಂಘದ ಪ್ರಗತಿ ಸಾಧಿಸಲು ಸರಿಯಾದ ಯೋಜನೆಯಂತೆ ಸರಿಯಾದ ಬೇಸಾಯದ ಪದ್ಧತಿಗೂ ಬಹಳ ಮಹತ್ವವಿದೆ. ಭಾರತದಲ್ಲಿ ಬೇಸಾಯಗಾರರಿಗೆ ಸಾಮಾನ್ಯವಾಗಿ ವಿಸ್ತಾರವಾದ ಬೇಸಾಯದ ಹುಚ್ಚು ಬಹಳ. ತಮ್ಮ ಭೂಮಿಯ ಕೆಲಭಾಗದಲ್ಲಿ ಬೆಳೆ ಇಟ್ಟಿರದಿದ್ದರೂ ಚಿಂತೆ ಇಲ್ಲ, ತಮ್ಮ ಪಕ್ಕದ ಒಂದಿಷ್ಟು ಭೂಮಿಯನ್ನು ಒತ್ತಿಕೊಂಡು, ಅದರಲ್ಲಿ ಬೆಳೆ ಹೆಚ್ಚಿಸಲು ಬೇಸಾಯಗಾರರು ಹವಣಿಸುತ್ತಾರೆ.

ಅವರಿಂದ ಅವರು ಕಲಸಗಳಲ್ಲಿಯೇ ಹಾಳಾಗುತ್ತಾರೆ. ತಮ್ಮಲ್ಲಿ 2 ಎಕರೆಗೆ ಸಾಲು ವಷ್ಟು ಗೊಬ್ಬರವಿರದಿದ್ದರೂ, 20 ಎಕರೆಯ ತುಂಬ ಅದನ್ನು ಭಸ್ಮದಂತೆ ಚೆಲ್ಲಲು ಯತ್ನಿಸುತ್ತಾರೆ. ಸಕಾಲದಲ್ಲಿ ಮಳೆ ಆಗದಿದ್ದರೆ. ಬಂಡವಲಿನ ಅಥವಾ ದುಡಿಯು ವವರ ಕೊರತೆಯಿಂದ ಸಕಾಲದಲ್ಲಿ ಎಲ್ಲ ಕಳೆ, ಕಸ ಮುಂತಾದ ಕೆಲಸಗಳಾಗದೆ ಬೆಳೆಯು ಕಮರಿ ಹೋಗಿಬಿಡಬಹುದು. ಇಂಥ ಸ್ಥಿತಿಯಲ್ಲಿ ಹಾಕಿದ ಬಂಡವಲು ಹಾಳಾಗಿ ತಕ್ಕ ಪ್ರತಿಫಲ ಬಾರದೆ ಬೇಸಾಯಗಾರರು ಅಪಾರ ನಷ್ಟಕ್ಕೀಡಾಗಿ ಪೇಚಾಟದಲ್ಲಿ ಬೀಳುತ್ತಾರೆ.

ಸಾಮಾನ್ಯವಾಗಿ ಬೇಸಾಯಸಂಘಗಳ ಮನೋವೃತ್ತಿಯೂ, ಧೋರಣವೂ ಸಾಮಾನ್ಯ ಬೇಸಾಯಗಾರರಂತೆಯೇ ಇರುತ್ತದೆ. ಬಹುಸಂಖ್ಯಾತ ಬೇಸಾಯ ಸಂಘ ಗಳು ವಿಸ್ತಾರವಾದ ಬೇಸಾಯದ ಬೆನ್ನುಹತ್ತಿ. ಪೇಚಾಟದಲ್ಲಿ ತೊಳಲುತ್ತವೆ. ಇದನ್ನು ತಪ್ಪಿಸಲು ಸಾಂದ್ರಬೇಸಾಯವೊಂದೇ ಉಪಾಯ. ಸಾಂದ್ರಬೇಸಾಯವು ಸಹಕಾರಿ ಬೇಸಾಯದ ಸಫಲತೆಯ ಗುಟ್ಟು ಎಂದರೂ ತಪ್ಪಾಗಲಾರದು. ಸಾಂದ್ರಬೇಸಾಯ ದಿಂದ ಒಂದುಗೂಡಿಸಿದ ಬೇಸಾಯಗಾರರ ಬೇಸಾಯವು ಸುಧಾರಿಸಿ. ಉತ್ಪತ್ತಿಯು ತ್ವರಿತವಾಗಿ ಇಮ್ಮಡಿ, ಮುಮ್ಮಡಿ ಆಗುವುದು. ಇದರಿಂದ ಬೇಸಾಯಸಂಘದ ಸದಸ್ಯರ ಆದಾಯವು ಹೆಚ್ಚಿ. ಅವರ ಜೀವನ ಸ್ಥಿತಿಯು ಸುಧಾರಿಸಿ. ಸಹಕಾರಿ ಬೇಸಾಯದಲ್ಲಿ ಅವರ ವಿಶ್ವಾಸವು ಭದ್ರಗೊಳ್ಳುವುದು. ಅವರು ಹೆಚ್ಚೆಚ್ಚು ಉತ್ಸಾಹದಿಂದ ದುಡಿದು ಸಂಘದ ಉನ್ನತಿಗೆ ಹೆಣಗುವರು. ಬೇಸಾಯಸಂಘವು ತನ್ನ ಪತ್ತನ್ನು ಹೆಚ್ಚಿಸಿಕೊಳ್ಳು ವುದು. ಇದರಿಂದ ಮುಂದಿನ ಹೆಚ್ಚಿನ ಸುಧಾರಣೆಗಳಿಗೂ ಅನುಕೂಲವಾಗುವುದು.

ಸಾಂದ್ರಬೇಸಾಯ ಕೈಗೊಳ್ಳುವಲ್ಲಿ ಬೇಸಾಯಸಂಘಗಳು ಕೆಲವು ಮುಖ್ಯ ಸಂಗತಿಗಳನ್ನು ಗಮನಿಸಬೇಕು. ಸಾಧ್ಯವಿದ್ದ ಸಾಧನದಿಂದ, ಹೊಳೆಯಿಂದ, ಕೆರೆಯಿಂದ, ಬಾವಿಯಿಂದ ಯಾತದಿಂದಾದರೂ ನೀರಾವರಿಯ ಅನುಕೂಲತೆ ಮಾಡಿಕೊಳ್ಳಬೇಕು. ನೀರಾವರಿ ಇಲ್ಲದೆ ಸಾಂದ್ರಬೇಸಾಯವು ಯಶಸ್ವಿಯಾಗುವ ಭರವಸೆ ಇಲ್ಲ. ಮಳೆಯ ಮೇಲೆ ಕೈಯೂರುವ ಬೇಸಾಯ ನಿಸರ್ಗದೊಡನೆ ಜೂಜಾಟವಿದ್ದಂತೆ. ಇದ್ದ ಸಾಧನ ಗಳಿಂದ. ಸುಧಾರಿಸಿದ ಬೇಸಾಯ ಪದ್ಧತಿಗಳಿಂದ ಸ್ವಲ್ಪ ಭೂಮಿಯಲ್ಲಿ ಕಡಮೆ ಬಂಡ ವಲನ್ನು ತೊಡಗಿಸಿ ಪರಮಾವಧಿ ಉತ್ಪತ್ತಿ ತೆಗೆಯುವುದೇ ಸಾಂದ್ರಬೇಸಾಯದ ಪದ್ಧತಿ. ಇಂಥ ಬೇಸಾಯಕ್ಕೆ ನೀರಾವರಿಯ ಅನುಕೂಲತೆ ಅತ್ಯಂತ ಮಹತ್ವದ್ದು. ಹೆಚ್ಚು ಇಳುವರಿ ನೀಡುವ ಅನೇಕ ತಳಿಗಳು ಇಂದು ಬಳಕೆಯಲ್ಲಿವೆ. ಈ ಹೊಸ ತಳಿಗಳಿಂದ ಎರಡು ಮೂರು ಪಟ್ಟು ಹೆಚ್ಚು ಉತ್ಪತ್ತಿ ಬರುತ್ತಿದೆ. ಇವು ಅಲ್ಪಾ ವಧಿಯ ಬೆಳೆಗಳು. ಬಹುಬೆಳೆಯೋಜನೆಯ ಅನುಷ್ಠಾನಕ್ಕೂ ಇವುಗಳ ಪ್ರಯೋಜನ ಹೆಚ್ಚು.

ಸಾಂದ್ರಬೇಸಾಯದಲ್ಲಿ ಅಧಿಕ ಗೊಬ್ಬರ ಬಳಕೆಗೆ ಮಹತ್ವದ ಸ್ಥಾನವಿದೆ. ಗೊಬ್ಬರವೆಂದರೆ ಬೆಳೆಗಳ ಆಹಾರ. ಅದನ್ನು ಸಾಕಷ್ಟು ಸರಿಯಾದ ಪ್ರಮಾಣದಲ್ಲಿ

ಒದಗಿಸದಿದ್ದರೆ ಪರಮಾವಧಿ ಉತ್ಪತ್ತಿ ಬೆಳೆಯದು. ಕೇವಲ ರಾಸಾಯನಿಕ ಗೊಬ್ಬರಗಳನ್ನೇ ಹಾಕಿದರೆ ಆಗದು. ಭೂಮಿಯ ಫಲವತ್ತತೆಯನ್ನು ಕಡಮೆ ಆಗಗೊಡದೆ ಅದನ್ನು ಕಾಯ್ದಿಡಲು ಮತ್ತು ಹೆಚ್ಚಿಸಲು ಕಾಂಪೋಸ್ಟ್‌ಗೊಬ್ಬರ, ಕಕ್ಕಸಗೊಬ್ಬರ, ಹಸುರುಗೊಬ್ಬರ ಮುಂತಾದ ಸೇಂದ್ರಿಯಗೊಬ್ಬರಗಳ ಅಗತ್ಯವೂ ಬಹಳವಿದೆ. ಈ ಗೊಬ್ಬರಗಳು ಸಾಕಷ್ಟು ದೊರಕುವುದಿಲ್ಲ ಹೊರಗಿನಿಂದ ಅವನ್ನು ಸಾಕಷ್ಟು ಪ್ರಮಾಣದಲ್ಲಿ ದೊರಕಿಸುವುದೂ ದುಸ್ತರ. ಸ್ಥಳಿಕ ಸಾಧನಗಳಿಂದ ಈ ಗೊಬ್ಬರಗಳ ಸಂಗ್ರಹ ಹೆಚ್ಚಿಸಲು ಬೇಸಾಯಸಂಘಗಳು ತಮ್ಮ ಸಾಮೂಹಿಕ ಶ್ರಮ-ಶಕ್ತಿಗಳಿಂದ ಸತತವಾಗಿ ಯತ್ನಿಸಬೇಕು. ಕಸಕಡ್ಡಿಗಳಿಂದ ಕಂಪೋಸ್ಟ್ ಗೊಬ್ಬರ ತಯಾರಿಸಬೇಕು. ಸುಲಭ ಕಕ್ಕಸಗಳಿಂದ ಕಕ್ಕಸ ಗೊಬ್ಬರವನ್ನು ತಯಾರಿಸಬೇಕು. ಗ್ಲಿರಿಸಿಡಿಯಾ ಗಿಡಗಳನ್ನು ಬೆಳಸಿ ಅದರ ಎಲೆಗಳನ್ನು ಭೂಮಿಗೆ ಸೇರಿಸಬಹುದು ಇಲ್ಲವೆ ಕಂಪೋಸ್ಟ್ ಮಾಡಬಹುದು. ರಾಸಾಯನಿಕ ಗೊಬ್ಬರಗಳನ್ನು ಶಿಫಾರಸು ಮಾಡಿದ ಪರಿಮಾಣದಲ್ಲಿ ಆಯಾ ಬೆಳೆಗಳಿಗೆ ಹಾಕಬೇಕು.

ಸಾಂದ್ರಬೇಸಾಯದಲ್ಲಿ ಸುಧಾರಿಸಿದ ಬೆಳೆಯ ಯೋಜನೆ ಅಥವಾ ಕಾರ್ಯಕ್ರಮವು ಅತಿ ಮಹತ್ವದ್ದು. ಬಿತ್ತಿಗೆಯ ಹಂಗಾಮಿನ ಪೂರ್ವದಲ್ಲಿಯೇ ವ್ಯವಸಾಯ ತಜ್ಞರ ಸಲಹೆ ಪಡೆದು ಬೇಸಾಯಸಂಘವು ಉತ್ಪಾದನೆಯ ಕಾರ್ಯಕ್ರಮವನ್ನು ತಯಾರಿಸಿಕೊಳ್ಳಬೇಕು.

ಬೇಕಾದಷ್ಟು ಚೆನ್ನಾಗಿ ಬೆಳೆ ಬಂದರೂ ಬೆಳೆಗಳಿಗೆ ರೋಗ ರುಜಿನಗಳು ಹತ್ತಿದರೆ ಕೈಗೆ ಬಂದ ತುತ್ತು ಬಾಯಿಗೆ ಬರದಂತೆ ಆಗುತ್ತದೆ. ಇದರಿಂದ ಬೇಸಾಯಸಂಘಕ್ಕೆ ತುಂಬಲಾಗದ ಹಾನಿಯಾದೀತು. ಆದ್ದರಿಂದ ಸಕಾಲದಲ್ಲಿ ರೋಗಗಳಿಂದ ಬೆಳೆಗಳ ಸಂರಕ್ಷಣೆಯು ಸಾಂದ್ರ ಬೇಸಾಯದ ಮಹತ್ವದ ಅಂಗ. ರೋಗಗಳನ್ನು ತಡೆಗಟ್ಟಲು ಅಗತ್ಯವಿದ್ದ ಔಷಧಿ ಹಾಗೂ ಸ್ಪ್ರೇಪಂಪು. ಡಸ್ಟರು ಮುಂತಾದ ಸಲಕರಣೆಗಳನ್ನು ಮೊದಲೇ ಕೊಂಡು ತಯಾರಿಟ್ಟಿರಬೇಕು.

ಸಹಾಯಕ ಉದ್ಯೋಗಗಳ ಮಹತ್ವ

ಸಹಕಾರಿ ಬೇಸಾಯಸಂಘಗಳಲ್ಲಿ ಸಾಮಾನ್ಯವಾಗಿ ಬಡಕಲು ಭೂಮಿಯ ನಿರ್ಗತಿಕ ಬೇಸಾಯಗಾರರೇ ಹೆಚ್ಚಾಗಿ ಇರುತ್ತಾರೆ. ತಮ್ಮ ಭೂಮಿಯನ್ನು ಒಂದುಗೂಡಿಸಿ ಸಾಮೂಹಿಕ ಬೇಸಾಯ ಆರಂಭಿಸಿದಾಕ್ಷಣವೇ ಅವರಿಗೆ ಎಲ್ಲರಿಗೂ ಜೀವನಕ್ಕೆ ಸಾಲುವಷ್ಟು ಉತ್ಪನ್ನ ದೊರಕಲಾರದು. ಈ ಸ್ಥಿತಿಯಲ್ಲಿ ಅವರಲ್ಲಿ ನಿರಾಶೆ ಬೆಳೆಸದಂತೆ ಅವರಿಗೆ ಕೈತುಂಬ ಉದ್ಯೋಗ ಹಾಗೂ ಹೊಟ್ಟೆತುಂಬ ಅನ್ನ ದೊರಕಿಸಲು ಸಹಾಯಕ ಉದ್ಯೋಗಗಳನ್ನು ಕೈಗೊಳ್ಳುವುದು ಬಹಳ ಅಗತ್ಯ. ಇಂಥ ಉದ್ಯೋಗಗಳು ಬೇಸಾಯಸಂಘದ ಮುಖ್ಯ ಚಟುವಟಿಕೆಯಾದ ಬೇಸಾಯಕ್ಕೆ ಬಾಧಕವಾಗದೆ ಪೂರಕವೂ, ಸಹಾಯಕವೂ ಆಗಿರಬೇಕು. ಇಂಥ ಉದ್ಯೋಗಗಳ ಕಾರ್ಯಕ್ರಮವನ್ನು ಬೇಸಾಯಸಂಘದ ಬೇಸಾಯಯೋಜನೆಯ ಅಭಿನ್ನ ಅಂಗವನ್ನಾಗಿ ಯೋಜಿಸಿ ಕೊಳ್ಳ

ಬೇಕು ಮತ್ತು ಅವನ್ನು ಕಾರ್ಯಗತ ಮಾಡಬೇಕು. ಸಹಾಯಕ ಉದ್ಯೋಗಗಳು ಸ್ಥಳಿಕ ಪರಿಸ್ಥಿತಿ ಹಾಗೂ ಬೇಡಿಕೆಗಳಿಗೆ ಅನುಗುಣವಾಗಿರಬೇಕು. ಅವು ಆರಂಭದಿಂದಲೇ ಲಾಭದಾಯಕವಾಗಿ ನಡೆಯಬೇಕು. ಇದನ್ನು ಸಾಧಿಸಬೇಕಾದರೆ ಉದ್ಯೋಗಕ್ಕೆ ಬೇಕಾಗುವ ಕಚ್ಚಾ ಸಾಮಗ್ರಿ, ಕೆಲಸಗಾರರು, ಸಂಚಾಲನೆಯ ಕುಶಲತೆ, ಮಾರುಕಟ್ಟೆ ಇವೆಲ್ಲ ಸುಲಭವಾಗಿ ಲಭ್ಯವಿರಬೇಕು. ಹೈನದ ಉದ್ಯೋಗ, ದನ, ಕುರಿ ಹಾಗೂ ಕೋಳಿ ಇಂಥ ಕೆಲವು ಉದ್ಯೋಗಗಳು ಸಹಾಯಕ ಉದ್ಯೋಗಗಳಲ್ಲಿ ಮಹತ್ವದವು. ಈ ಉದ್ಯೋಗಗಳಿಂದ ಬೇಸಾಯ ಸಂಘಕ್ಕೆ ಹಾಗೂ ಅದರ ಸದಸ್ಯರಿಗೆ ಹೆಚ್ಚಿನ ಆದಾಯವು ದೊರಕುವುದಲ್ಲದೆ, ಅದಕ್ಕೆ ಒಳ್ಳೇ ಹೂಡುವ ಎತ್ತುಗಳು, ಹೆಚ್ಚು ಗೊಬ್ಬರ ಮತ್ತು ಮಕ್ಕಳಿಗೆ ಹಾಲು ದೊರಕುತ್ತವೆ. ಒಳ್ಳೇ ತಳಿಯ ದನಗಳಿಂದ ಈ ಉದ್ಯೋಗಗಳನ್ನು ಆರಂಭಿಸಬೇಕು. ದನಗಳನ್ನು ಚೆನ್ನಾಗಿ ಮೇಯಿಸಲು ಕೆಲವೊಂದು ಕ್ಷೇತ್ರದಲ್ಲಿ ಉತ್ತಮವಾದ ಸುಧಾರಿಸಿದ ಹುಲ್ಲನ್ನು ಬೆಳೆಸಬೇಕು. ದನಗಳ ಸಗಣಿ ಹಾಗೂ ಮೂತ್ರಗಳನ್ನು ಹಾಳಾಗಗೊಡದಂತೆ ಕಂಪೋಸ್ಟ್ ಕುಣಿಗಳಲ್ಲಿ ಹಾಕಿ ಗೊಬ್ಬರವನ್ನು ಸಂಗ್ರಹಿಸಬೇಕು. ಉರುಸುವುದಕ್ಕೆ ಬೇಕಾದ ಅನಿಲಕ್ಕಾಗಿ ಗೋಬರ್ ಗ್ಯಾಸು ಪ್ಲಾಂಟು ರಚಿಸಿಕೊಳ್ಳಬೇಕು. ಅದರಿಂದ ಒಳ್ಳೇಗೊಬ್ಬರದ ಸಂಗ್ರಹವೂ ಹೆಚ್ಚುವುದು. ದನಗಳನ್ನು ಸಾಮೂಹಿಕವಾಗಿ ಒಂದೇ ಕೊಟ್ಟಿಗೆಯಲ್ಲಿ ಕಟ್ಟುವುದೇ ಉತ್ತಮ. ಆದರಿಂದ ಅವುಗಳ ಜೋಪಾನವನ್ನು ಶಾಸ್ತ್ರೀಯವಾಗಿ ಮಾಡಬಹುದು.

ಕುರಿಸಾಕಣೆಗೆ ಅಡವಿಯ ಅನುಕೂಲತೆ ಅವಶ್ಯ. ಕೋಳಿಯ ಸಾಕಣಿಕೆಯೂ ಲಾಭದಾಯಕವಾದ ವ್ಯವಸಾಯಕ್ಕೆ ಸಹಾಯಕವಾದ ಉದ್ಯೋಗವಾದರೂ ಇದನ್ನು ನಡೆಸುವಲ್ಲಿ ಅನೇಕ ತೊಂದರೆಗಳಿವೆ. ಕೋಳಿಗಳನ್ನು ಚೆನ್ನಾಗಿ ಜೋಪಾನ ಮಾಡಲು, ಮೇಯಿಸಲು ತರಬೇತಿಪಡೆದ ವ್ಯವಸ್ಥಾಪಕರಿರಬೇಕು. ಅಗತ್ಯವಿದ್ದ ಮೇವು ಸುಲಭವಾಗಿ ದೊರಕುತ್ತಿರಬೇಕು. ರೋಗರುಜಿನಗಳಿಂದ ಸಂರಕ್ಷಿಸಲು ಅಗತ್ಯವಿದ್ದ ಔಷಧಿಗಳೂ ಸುಲಭವಾಗಿ ದೊರಕುತ್ತಿರಬೇಕು. ಈ ಎಲ್ಲ ವ್ಯವಸ್ಥೆ ಸರಿಯಾಗಿ ಮಾಡಿಕೊಂಡು ಕೋಳಿಯ ಸಾಕಾಣಿಕೆಯನ್ನು ನಡೆಸಿದರೆ ಅದು ಲಾಭದಾಯಕವಾಗುತ್ತದೆ. ಸ್ವಲ್ಪ ಬಂಡವಲಿನಲ್ಲಿ ಬೇಸಾಯಸಂಘಕ್ಕೆ ಹೆಚ್ಚಿನ ಆದಾಯ ದೊರಕುವಂತೆ ಮಾಡುವ ಸಹಾಯಕ ಉದ್ಯೋಗವಿದು.

ಬೇಸಾಯಸಂಘದ ಸದಸ್ಯರಿಗೆ ಹೆಚ್ಚು ಉದ್ಯೋಗ, ಆದಾಯ ಒದಗಿಸಲು ಬೇಸಾಯಸಂಘವು ಕೆಲವು ಗುಡಿಕೈಗಾರಿಕೆಗಳನ್ನೂ ಕೈಗೊಳ್ಳಬಹುದು. ಆದರೆ ಬೇಸಾಯಕ್ಕೆ ದುಡಿಯುವ ಜನರು ಸಾಲದೇ ಇರುವಲ್ಲಿ ಇಂಥ ಉದ್ಯೋಗ ಕೈಗೊಳ್ಳುವುದು ಜಾಣತನವಲ್ಲ. ಅದರಿಂದ ಸಂಘದ ಬೇಸಾಯದ ಪ್ರಗತಿಗೆ ಧಕ್ಕೆ ತಗುಲುವುದು. ಬೇಸಾಯದಲ್ಲಿ ಜನರಿಗೆ ಕೈತುಂಬ ಉದ್ಯೋಗವಿರದಿದ್ದರೆ, ವಿಶೇಷವಾಗಿ ಹೆಣ್ಣುಮಕ್ಕಳ ಸಲುವಾಗಿ ಉದ್ಯೋಗ ಒದಗಿಸಲು ಕೆಲವು ಗುಡಿಕೈಗಾರಿಕೆಗಳನ್ನು ಕೈಕೊಳ್ಳಬಹುದು. ಇಂಥ ಗುಡಿಕೈಗಾರಿಕೆ ಕೈಕೊಳ್ಳುವಲ್ಲಿ ಅವುಗಳಿಗೆ ಅಗತ್ಯವಿದ್ದ ಕಚ್ಚಾಮಾಲು, ಸಲಕರಣೆಗಳು ಸ್ಥಳದಲ್ಲಿ ದೊರಕುವಂತಿರಬೇಕು. ಹೆಚ್ಚಾಗಿ ಬೇಸಾಯದ ಉತ್ಪತ್ತಿಯನ್ನೇ

ರೂಪಾಂತರ ಮಾಡುವ ಅಥವಾ ಬೇಸಾಯದ ಉತ್ಪತ್ತಿಯಿಂದಲೇ ನಡೆಸಬಹುದಾದ ಕೈಗಾರಿಕೆಗಳನ್ನು ನಡೆಸುವುದು ಲಾಭದಾಯಕವಾದದ್ದು. ತಯಾರಾದ ಮಾಲನ್ನು ಮಾರುವ ವ್ಯವಸ್ಥೆಯೂ ಅಗತ್ಯ. ಇಂಥ ಮಾಲಿಗೆ ಬೇಡಿಕೆ ಇರಬೇಕು. ಹೆಚ್ಚಾಗಿ ಸದಸ್ಯರಿಗೆ ಅಗತ್ಯವಿದ್ದ ಸಾಮಾನುಗಳನ್ನು ತಯಾರಿಸುವ ಕೈಗಾರಿಕೆ ಇದ್ದರೆ ಉತ್ತಮ. ಇದರಿಂದ ಬೇಸಾಯಸಂಘ ಹಾಗೂ ಅದರ ಸದಸ್ಯರು ಸ್ವಾವಲಂಬಿಯಾಗುವರಲ್ಲದೆ, ಅವರಿಗೆ ಇಂಥ ಕೈಗಾರಿಕೆಯಿಂದ ತಯಾರಾದ ಸಾಮಾನುಗಳು ಸುಲಭ ಬೆಲೆಗೂ ದೊರಕುವುವು. ಅಂಬರಚರಖಾದಿಂದ ನೂಲುವುದು, ಉಣ್ಣೆನೂಲುವುದು, ನೇಯುವುದು ಹಾಗೂ ಹೆಣೆಯುವುದು, ಗಾಣದ ಎಣ್ಣೆ ತಯಾರಿಸುವುದು ಈ ಕೆಲವು ಅನುಕೂಲವಾದ ಗುಡಿಕೈಗಾರಿಕೆಯ ಉದ್ಯೋಗಗಳಾಗಿವೆ.

ಅಧ್ಯಾಯ 11

ಸಹಕಾರಿ ಬೇಸಾಯಸಂಘದ ಲೆಕ್ಕಪತ್ರಗಳು

ಸರಿಯಾದ ಹಾಗೂ ದೈನಂದಿನ ಲೆಕ್ಕಪತ್ರಗಳನ್ನಿಡುವುದು ಸಹಕಾರಿ ಬೇಸಾಯ ಸಂಘದ ಸಫಲತೆಗೆ ಅತ್ಯಂತ ಮಹತ್ವದ್ದು. ಅದರಿಂದ ಬೇರೆ ಬೇರೆ ವ್ಯಕ್ತಿಗಳೊಡನೆ ಹಾಗೂ ಸಂಸ್ಥೆಗಳೊಡನೆ ಬೇಸಾಯಸಂಘದ ಆರ್ಥಿಕ ವ್ಯವಹಾರಗಳು ಹೇಗಿವೆ ಎಂಬುದು ಸರಿಯಾಗಿ ಗೊತ್ತಾಗುತ್ತದೆ. ಸಾಮೂಹಿಕ ಬೇಸಾಯದಿಂದ ಸಾಧಿಸಿದ ಲಾಭ ಅಥವಾ ಹಾನಿಯು ಗೊತ್ತಾಗುತ್ತದೆ. ಸಾಧಿಸಿದ ಉತ್ಪಾದನೆಯ ಪ್ರಗತಿಯ ಆಧಾರದ ಮೇಲೆ ಸರಿಯಾದ ರೀತಿಯಲ್ಲಿ ಆದಾಯವನ್ನು ಹಂಚುವುದೂ ಅದರಿಂದ ಸಾಧ್ಯವಾಗುತ್ತದೆ. ಲೆಕ್ಕ ಪತ್ರಗಳ ಅಭಾವದಿಂದ ಬೇಸಾಯಸಂಘದ ಕಾರ್ಯಗಳಲ್ಲಿ ಸದಸ್ಯರ ವಿಶ್ವಾಸವು ಕಡಮೆಯಾಗಿ ಸಂಘವು ಛಿನ್ನಭಿನ್ನವಾಗುತ್ತದೆ.

ಬೇಸಾಯಸಂಘದಲ್ಲಿ ಸೇರುವ ಸದಸ್ಯರು ಸಾಮಾನ್ಯವಾಗಿ ನಿರಕ್ಷರರು. ಏನೋ ಓರ್ವ ಮುಂದಾಳುವಿನ ವಿಶ್ವಾಸದಿಂದ, ಬೇಸಾಯಸಂಘದಲ್ಲಿ ಒಂದುಗೂಡಿ ದುಡಿಯುವುದರಿಂದ ತಮ್ಮ ಆದಾಯ ಹೆಚ್ಚಿ, ತಮ್ಮ ಉನ್ನತಿ ಹೆಚ್ಚುವುದೆಂಬ ನಂಬಿಕೆ ಅವರಿಗೆ. ಈ ನಂಬಿಕೆ ದೃಢವಾದರೆ ಅವರು ಹೆಚ್ಚಿಚ್ಚು ಉತ್ಸಾಹದಿಂದ ಬೇಸಾಯ ಸಂಘದಲ್ಲಿ ದುಡಿಯುತ್ತಾರೆ. ಅದರಿಂದ ಬೇಸಾಯಸಂಘದ ಉನ್ನತಿಯೂ ಉತ್ತರೋತ್ತರವಾಗಿ ಸಾಧಿಸುತ್ತದೆ. ಪರಸ್ಪರ ವಿಶ್ವಾಸ, ಒಗ್ಗಟ್ಟುಗಳೇ ಬೇಸಾಯ ಸಂಘದ ನಿಜವಾದ ಬಲ; ಕೇವಲ ಹೊರಗಿನಿಂದ ಬಂದ ಸಹಾಯವಲ್ಲ. ಪರಸ್ಪರವಿಶ್ವಾಸ, ಒಗ್ಗಟ್ಟುಗಳು ಬೆಳೆಯುತ್ತ ಹೋದರೆ ಹೊರಗಿನ ಸಹಾಯದ ಅನೇಕ ಪಟ್ಟು ಆದಾಯವನ್ನು ಬೇಸಾಯಸಂಘವು ಹೆಚ್ಚಿಸಬಹುದು. ಇಂಥ ವಿಶ್ವಾಸ, ಒಗ್ಗಟ್ಟುಗಳನ್ನು ಬೆಳೆಸಲು ಸದಸ್ಯರಲ್ಲಿ ಸಂಘದ ವ್ಯವಹಾರಗಳು ಪ್ರಾಮಾಣಿಕವಾಗಿ, ಲಾಭದಾಯಕವಾಗಿ ನಡೆದಿವೆಯೆಂಬ ವಿಶ್ವಾಸವನ್ನು ಬೆಳೆಸುವುದು ಅಗತ್ಯ. ಇದಕ್ಕಾಗಿಯೇ ಸರಿಯಾದ ಲೆಕ್ಕಪತ್ರಗಳನ್ನು ಇಡುವುದು ಅಗತ್ಯ. ಲೆಕ್ಕಪತ್ರಗಳ ಅಭಾವದಲ್ಲಿ, ಮೊದಲೇ ತಿಳಿವಳಿಕೆ ಇಲ್ಲದ ಬೇಸಾಯಗಾರರು ಸಂಘದ ವ್ಯವಹಾರಗಳ ಬಗ್ಗೆ ಏನೇನೋ ಅನುಮಾನ ಬೆಳೆಸಿಕೊಂಡು ನಿರುತ್ಸಾಹರಾಗುತ್ತಾರೆ. ಅವರಲ್ಲಿ ಮತಭೇದಗಳು, ಜಗಳಗಳು ಬೆಳೆಯುತ್ತವೆ. ಅನುಮಾನ, ಅವಿಶ್ವಾಸವೆಂದರೆ ಭೂತ. ಅದು ಬೇಸಾಯಸಂಘವನ್ನು ಒಡೆದು ಚೂರುಚೂರುಮಾಡುತ್ತದೆ.

ಅಧಿಕಾರಿಗಳ ಕಿರಿಕಿರಿಗಾಗಿ, ಅವರನ್ನು ಸಮಾಧಾನ ಪಡಿಸಲು ಲೆಕ್ಕಪತ್ರಗಳನ್ನು ಬರೆಯಬೇಕಾಗುತ್ತದೆಂಬುದು ಒಂದು ಮೂಢ ತಿಳುವಳಿಕೆ. ಈ ಭಾವನೆಯಿಂದ, ಕಾಡುವ ದೇವರ ಕಾಟ ತಪ್ಪಿಸಲು ಹೇಗೆ ಹೇಗೋ ಲೆಕ್ಕಗಳನ್ನು ಬರೆಯಲಾಗುತ್ತದೆ.

ಅಥವಾ ಲೆಕ್ಕಗಳನ್ನು ಬರೆಯುವುದೇ ಇಲ್ಲ. ಈ ತಪ್ಪುತಿಳಿವಳಿಕೆಯನ್ನು ಹೋಗಲಾಡಿಸದೆ ಬೇಸಾಯಸಂಘವನ್ನು ಅಭಿವೃದ್ಧಿಗೊಳಿಸುವುದು ಸಾಧ್ಯವಿಲ್ಲ. ಲೆಕ್ಕಗಳಿಲ್ಲದೆ ಬೇಸಾಯಸಂಘಕ್ಕೆ ಅಪಾರ ಹಾನಿ ತಟ್ಟಿದರೆ ಅಥವಾ ಅದು ಹಾಳಾದರೆ ಅದರಿಂದ ಯಾವ ಅಧಿಕಾರಿಗೂ ಹಾನಿಯಿಲ್ಲ; ಅವರಿಂದ ಬೇಸಾಯಸಂಘದ ಸದಸ್ಯರಿಗೆ ಹಾನಿ ತಟ್ಟುತ್ತದೆ. ಇದಕ್ಕಾಗಿ ಲೆಕ್ಕಪತ್ರಗಳು ಬೇಸಾಯಸಂಘದ ಸದಸ್ಯರಿಗೆ ಅತ್ಯಗತ್ಯ. ಅವು ಕೇವಲ ಅಧಿಕಾರಿಗಳಿಗೆ ಅಥವಾ ವ್ಯವಸ್ಥಾಪಕರಿಗಷ್ಟೇ ಗೊತ್ತಿದ್ದರೆ ಸಾಲದು.

ಲೆಕ್ಕಪತ್ರ ಸದಸ್ಯರ ಶಿಕ್ಷಣದ ಸಾಧನ

ಸಹಕಾರಿ ಬೇಸಾಯಗಾರರಲ್ಲಿ ಸಾಮೂಹಿಕ ಬೇಸಾಯದ ಬಗ್ಗೆ ಹೆಚ್ಚೆಚ್ಚು ತಿಳಿವಳಿಕೆ ಬೆಳೆದಂತೆ, ಬೇಸಾಯಸಂಘದ ಹೆಚ್ಚೆಚ್ಚು ಉನ್ನತಿ ಆಗುತ್ತದೆ. ಸರಿಯಾದ ಲೆಕ್ಕಪತ್ರಗಳ ಮಾಹಿತಿಯಿಂದ ಬೇಸಾಯ ಸಂಘದ ಸದಸ್ಯರಲ್ಲಿ ಸಾಮೂಹಿಕ ಬೇಸಾಯದ ತಿಳಿವಳಿಕೆಯನ್ನು ಬೆಳೆಸಬಹುದು. ಸಾಮೂಹಿಕ ಬೇಸಾಯದಿಂದ ಹೇಗೆ ಅವರ ಹೊಲದಲ್ಲಿ ಹೆಚ್ಚು ಉತ್ಪತ್ತಿಯಾಯಿತು, ಹೆಚ್ಚು ಆದಾಯ ಅವರಿಗೆ ಹೇಗೆ ದೊರಕಿತು ಎಂಬುದನ್ನು ಸದಸ್ಯರಿಗೆ ಮನವರಿಕೆ ಮಾಡಲು ಲೆಕ್ಕಪತ್ರಗಳನ್ನು ಸರಿಯಾಗಿ ಇಡುವುದಷ್ಟೇ ಅಲ್ಲ, ಅವನ್ನು ನಿಯಮಿತವಾಗಿ ಸದಸ್ಯರಿಗೆ ತಿಳಿಸುತ್ತಲೂ ಹೋಗಬೇಕು.

ಸದಸ್ಯರಿಗೆ ವೈಯಕ್ತಿವಾಗಿ ಸಂಬಂಧಿಸಿದ ಕೊಡಕೊಳ್ಳುಗಳ ಲೆಕ್ಕಗಳನ್ನು ಅವರಿಗೆ ವೈಯಕ್ತಿಕವಾಗಿ ತಿಳಿಸಿ ಹೇಳಬೇಕು. ಅಲ್ಲದೆ ಅವುಗಳ ದಾಖಲೆ ಮಾಡಿದ ಪಾಸು ಬುಕ್ಕುಗಳನ್ನು ಅವರ ಕಡೆಗೆ ಕೊಟ್ಟಿರಬೇಕು. ದಿನದ ಲೆಕ್ಕ ಪತ್ರಗಳನ್ನು ದಿನಾಲೂ ಬರೆದು ತಿಳಿಸಬೇಕು. ವಾರಕೊಮ್ಮೆ ದಿನದ ಲೆಕ್ಕಗಳ ಉಜವಣಿ ಮಾಡಿ ತಿಳಿಸುವುದಲ್ಲದೆ ವಾರದ ಲೆಕ್ಕಗಳನ್ನು ತಿಳಿಸಿ ಹೇಳಬೇಕು. ತಿಂಗಳ ಲೆಕ್ಕಗಳನ್ನು ತಿಂಗಳಿಗೊಮ್ಮೆ, ವರ್ಷದ ಲೆಕ್ಕ ವರ್ಷಾಂತ್ಯದಲ್ಲಿ ತಿಳಿಸಿ ಹೇಳಬೇಕು. ಬೇಸಾಯಗಾರರ ನೆನಪು ಬಹಳ ಕಡಮೆ. ಹೀಗೆ ಆಗಿಂದಾಗ್ಗೆ ಅವರ ಕೊಡಕೊಳ್ಳಿನ, ಹಾಜರಿಯ ಲೆಕ್ಕ ತಿಳಿಸುತ್ತ ಹೋದರೆ ಮಾತ್ರ ಅವರಲ್ಲಿ ವಿಶ್ವಾಸ, ಉತ್ಸಾಹ ಬೆಳೆಯುತ್ತ ಹೋಗುತ್ತದೆ.

ಸಂಘದ ವ್ಯವಹಾರಗಳ ಬಗ್ಗೆಯೂ ಅವುಗಳ ಲೆಕ್ಕಗಳಿಂದ ಬೇಸಾಯ ಸಂಘದ ಸದಸ್ಯರಲ್ಲಿ ತಿಳಿವಳಿಕೆ ಹೆಚ್ಚುತ್ತ ಹೋಗಬೇಕು. ಸಂಘದ ವ್ಯವಹಾರಗಳು ಮುಚ್ಚುಮರೆ ಇಲ್ಲದೆ ಪ್ರಾಮಾಣಿಕವಾಗಿ ಹಾಗೂ ಲಾಭದಾಯಕವಾಗಿ ನಡೆದಿವೆ ಎಂದು ಬೇಸಾಯಸಂಘದ ಸದ್ಯರಿಗೆ ಮನವರಿಕೆ ಮಾಡಲು ಆಗಿಂದಾಗ್ಗೆ ಸಂಘದ ಒಟ್ಟು ಲೆಕ್ಕಗಳನ್ನೂ ಸಹ ಸದಸ್ಯರಿಗೆ ಬಿಚ್ಚಿ ತಿಳಿಸುತ್ತ ಹೋಗಬೇಕು. ಬೇಸಾಯಸಂಘದ ಸದಸ್ಯರೆಲ್ಲ ಸಾಮಾನ್ಯವಾಗಿ ಒಂದೆಡೆಯೇ ಇದ್ದು ದುಡಿಯುತ್ತಾರೆ. ದಿನಾಲು ಸಾಯಂಕಾಲ ಅವರು ಒಂದೆಡೆ ಕೂಡುತ್ತಾರೆ. ಆಗ್ಗೆ ಅವರು ತಮ್ಮ ಕಾರ್ಯದ ಪ್ರಗತಿ ಮುಂದಿನ ಕಾರ್ಯಕ್ರಮಗಳ ಜೊತೆಗೆ ತಮ್ಮ ಲೆಕ್ಕಪತ್ರಗಳನ್ನೂ ಚರ್ಚಿಸಿ ತಿಳಿದುಕೊಳ್ಳಬೇಕು. ಅದರಂತೆ ತಿಂಗಳ, ವಾರ್ಷಿಕ, ಸಂಘದ ಲೆಕ್ಕಗಳನ್ನು ಆಗಾಗ್ಗೆ ತಿಳಿದುಕೊಳ್ಳಬೇಕು. ಅದರಂತೆ ಇದೆಲ್ಲ ಮಾಡದೆ ವರ್ಷಕ್ಕೊಮ್ಮೆಯೇ ವಾರ್ಷಿಕ ಸಭೆಯಲ್ಲಿ

ರೂಢಿಯಂತೆ ಉದ್ದಾದ ಒಂದು ಜಮಾಖರ್ಚಿನ, ಲಾಭಹಾನಿಯ ಪಟ್ಟಿಯನ್ನು ಓದಿ ಹೇಳುವುದರಿಂದ ಸಹಕಾರಿ ಬೇಸಾಯಗಾರರು ತಿಳಿದುಕೊಳ್ಳಲಾರರು. ಅವರಿಗೆ ಅಷ್ಟು ಬುದ್ಧಿಶಕ್ತಿ ಇರದು. ಅದರಿಂದ ಒಮ್ಮೆಯೇ ಅಷ್ಟು ದೊಡ್ಡ ಹಾನಿಯ ಅಥವಾ ಸಾಲದ ಅಂಕಿಗಳನ್ನು ಕೇಳಿ ಗಾಬರಿಯಾಗುವ ಸಂಭವವೇ ಹೆಚ್ಚು. ಆಗಿಂದಾಗ್ಗೆ ಲೆಕ್ಕ ಪತ್ರಗಳನ್ನು ತಿಳಿಸಿ ಹೇಳುವುದರಿಂದ ಅವು ಸಾಮೂಹಿಕ ಬೇಸಾಯಗಾರರಿಗೆ ಸಾಮೂಹಿಕ ಉನ್ನತಿಯ ಲಾಭಗಳನ್ನು ಅಂಕಿಸಂಖ್ಯೆಗಳಿಂದ ಮನದಟ್ಟು ಮಾಡಿಕೊಡುವ ಪುಸ್ತಕವಾಗುತ್ತದೆ.

ಬೇಸಾಯಗಾರನು ವಾಸ್ತವವಾದಿ. ಸಾಮೂಹಿಕ ಬೇಸಾಯದ ಶ್ರೇಷ್ಠತೆಯನ್ನು ಅವನು ವ್ಯಾಖ್ಯಾನಗಳಿಂದಾಗಲಿ, ಪುಸ್ತಕಗಳಿಂದಾಗಲಿ ಕಲಿಯಲಾರ. ತನ್ನ ತುಲನಾತ್ಮಕ ಅನುಭವದಿಂದಲೇ ಅವನು ಕಲಿಯುತ್ತಾನೆ. ಸರಿಯಾದ ಲೆಕ್ಕಪತ್ರಗಳಿಂದ, ತುಲನಾತ್ಮಕ ಅಂಕಿ-ಸಂಖ್ಯೆಗಳ ಸಹಾಯದಿಂದ ಅವನು ಇಂಥ ತುಲನಾತ್ಮಕ ಅನುಭವ ಪಡೆಯಬಲ್ಲ. ಸಾಮಾನ್ಯವಾಗಿ ಎಲ್ಲ ಮಾನವರಲ್ಲಿರುವಂತೆ ಬೇಸಾಯಗಾರನಲ್ಲಿಯೂ ವ್ಯಕ್ತಿವಾದಿ ಭಾವನೆ ಇರುತ್ತದೇನೋ ನಿಜ. ಆದರೆ ತನ್ನ ಉನ್ನತಿಯನ್ನು ಸಾಮೂಹಿಕವಾಗಿಯೇ ಹೆಚ್ಚು ಸಾಧಿಸುತ್ತಿರುವೆನೆಂದು ಅವನಿಗೆ ಮನವರಿಕೆಯಾದರೆ ಅವನಲ್ಲಿ ಸಾಮೂಹಿಕವಾದಿ ಭಾವನೆ ಖಂಡಿತವಾಗಿ ಬೆಳೆಯುತ್ತದೆ. ಆದರೆ ಸಾಮಾನ್ಯವಾಗಿ ಬೇಸಾಯ ಸಂಘಗಳು ಅಂಥ ಮನವರಿಕೆಯನ್ನು ಅವನಿಗೆ ಮಾಡಿಕೊಡುತ್ತಿಲ್ಲ. ಚೆನ್ನಾಗಿ ನಡೆದ ಬೇಸಾಯಸಂಘಗಳಲ್ಲಿ ಸಹ ಸಾಮಾನ್ಯ ಸದಸ್ಯನು 'ಸಾಮೂಹಿಕ ದುಡಿತದಲ್ಲಿ ನನಗೇನು ಲಾಭ ? ಬೇರೆಯವರಿಗಾಗಿ ನಾನೇಕೆ ದುಡಿಯಬೇಕು ?' ಎಂಬ ಭಾವನೆಯಿಂದ ಹೊಯ್ದಾಡುತ್ತಿರುತ್ತಾನೆ. ಅವನಿಗೆ ಬೇಸಾಯಸಂಘದಿಂದ ಅಥವಾ ಸಾಮೂಹಿಕ ದುಡಿತದಿಂದ ಆಗಿರುವ ಲಾಭವೇ ಅರ್ಥವಾಗದು. ಆದರೆ ಅಂಕಿಸಂಖ್ಯೆಗಳಿಂದ ಅವನಿಗೆ ಆ ಲಾಭಗಳನ್ನು ತಿಳಿಸಿಕೊಟ್ಟಲ್ಲಿ ಈ ಹೊಯ್ದಾಟ ದೂರಾಗಿ ಸಾಮೂಹಿಕ ಬೇಸಾಯದಲ್ಲಿ ಅವನ ವಿಶ್ವಾಸವು ಭದ್ರಗೂಳ್ಳುತ್ತದೆ.

ಲೆಕ್ಕಗಳು ಸುಲಭವಾಗಿರಬೇಕು

ಸಾಮಾನ್ಯವಾಗಿ ಅಧಿಕಾರಿಗಳು ಬೇಸಾಯಸಂಘಗಳ ಸಲುವಾಗಿ ಯಾವುದೇ ದೊಡ್ಡ ಉದ್ಯೋಗಸಂಸ್ಥೆ ಅಥವಾ ಕಾರಖಾನೆಯಲ್ಲಿಡುವಂತೆ ಜಟಿಲ ಲೆಕ್ಕಗಳನ್ನು ಇಡಲು ಹೇಳುತ್ತಾರೆ. ಪ್ರತಿಯೊಂದು ಬೆಳೆಯ ಆದಾಯವೆಚ್ಚಗಳ ಲೆಕ್ಕವನ್ನು ಅವರು ನಿರೀಕ್ಷಣೆ ಮಾಡುತ್ತಾರೆ.' ಇದಕ್ಕೋಸುಗ ಎಲ್ಲ ಕಡೆಗೂ ಒಂದೇ ಬಗೆಯ ಲೆಕ್ಕಗಳಿರಬೇಕೆಂದು ನಿರ್ದಿಷ್ಟ ನಮೂನೆಯ ಲೆಕ್ಕಪತ್ರಗಳನ್ನುತಯಾರಿಸಿ ಇಡಲಾಗುತ್ತದೆ. ಈ ಎಲ್ಲ ಲೆಕ್ಕಗಳನ್ನು ಬೇಸಾಯಸಂಘ ಇಡದಿದ್ದರೆ ಅದು ಚೆನ್ನಾಗಿ ಉತ್ಪಾದಕ ಅಭಿವೃದ್ಧಿಯನ್ನು ಸಾಧಿಸಿದ್ದರೂ ಅದರ ಲೆಕ್ಕತಪಾಸಣೆಯಲ್ಲಿ ಆಕ್ಷೇಪಗಳನ್ನು ಎತ್ತಲಾಗುತ್ತದೆ ಮತ್ತು ಅಂಥ ಸಂಘವನ್ನು ಲೆಕ್ಕತಪಾಸಣೆಯಲ್ಲಿ ಕೆಳಗಿನ 'ಬ' ಅಥವಾ 'ಕ' ವರ್ಗದಲ್ಲಿ ಇರಿಸಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಪ್ರತಿಯೊಂದು ಹೊಲದ ಆದಾಯ ವೆಚ್ಚಗಳ ಲೆಕ್ಕ ಇಡಲು ಲೆಕ್ಕತಪಾಸಕರು ಆಗ್ರಹಪಡಿಸುವುದುಂಟು.

ಲೆಕ್ಕಪತ್ರಗಳ ಜಟಿಲತೆಯಿಂದ ವೆದೆಗುಂದಿ ಅನೇಕ ಸಂದರ್ಭಗಳಲ್ಲಿ ಚಿಕ್ಕಬೇಸಾಯುಗಾರರು ಬೇಸಾಯುಸಂಘವನ್ನು ಸ್ಥಾಪಿಸುವುದನ್ನೇ ಬಿಟ್ಟಿದ್ದುಂಟು. ಅಥವಾ ಸ್ಥಾಪಿಸಿದ ಬಳಿಕ ಸಹ ಮುರಿದುಬಿಟ್ಟಿದ್ದುಂಟು. ಹೆಚ್ಚಾಗಿ ಜಟಿಲಲೆಕ್ಕದ ನಮೂನೆಯ ಪತ್ರಿಕೆಗಳು ಬರೆಯಲ್ಪಡದೆ ಖಾಲಿ ಉಳಿದಿರುತ್ತದೆ. ಈ ಎಲ್ಲ ಜಟಿಲಲೆಕ್ಕಗಳನ್ನು ಸರಿಯಾಗಿ ಬರೆಯಬೇಕಾದರೆ ಒಬ್ಬ ಸಾಧಾರಣ ವಿದ್ಯಾವಂತ ಹಳ್ಳಿಯ ತರುಣನಿಂದ ಈ ಕೆಲಸ ಸಾಧ್ಯವಾಗದು. ಹೆಚ್ಚು ವಿದ್ಯಾವಂತ ಲೆಕ್ಕ ಬರೆಯುವವರು ಹಳ್ಳಿಯಲ್ಲಿ ಸಿಕ್ಕುವುದಿಲ್ಲ. ದೊರಕಿದರೂ ಅವರು ನಿರೀಕ್ಷಿಸುವ ಹೆಚ್ಚು ಸಂಬಳ ಅವರಿಗೆ ಕೊಡಬೇಕಾಗುತ್ತದೆ. ಬೇಸಾಯುಸಂಘಗಳು ಆರ್ಥಿಕ ಪೇಚಾಟದಲ್ಲಿರುವಾಗ ಅವಕ್ಕೆ ಇವೊಂದು ಹೊರಲಾರದ ಹೊರೆಯಾಗಿ ಬಿಡುತ್ತದೆ. ಆರಂಭದಲ್ಲಿ ಆ ಸಂಬಳಕ್ಕೆ ತಕ್ಕಷ್ಟು ಹೆಚ್ಚು ಕೆಲಸವೂ ಇರುವುದಿಲ್ಲ. ಇಂಥ ವಿದ್ಯಾವಂತ ತರುಣರು ಹಳ್ಳಿಯ ವಾತಾವರಣದಲ್ಲಿ ಹೊಂದಿಕೊಂಡು ಸ್ಥಿರವಾಗಿ ನಿಲ್ಲುವವರೂ ಆಗಿರುವುದಿಲ್ಲ. ಬೇರೆ ನೌಕರಿ ಇಲ್ಲವಾಗ ತಾತ್ಪೂರ್ತಿಕವಾಗಿ ಇಂಥ ನೌಕರಿಗೆ ಅವರು ಸಾಮಾನ್ಯವಾಗಿ ಬರುತ್ತಾರೆ.

ಇಂಥ ಜಟಿಲಲೆಕ್ಕಪತ್ರಗಳನ್ನು ಬರೆದದ್ದೇ ಆದರೆ ಅವು ವ್ಯವಸ್ಥಾಪಕರ ಸಲುವಾಗಿ ಮತ್ತು ಅಧಿಕಾರಿಗಳ ಸಲುವಾಗಿ ಆಗುತ್ತವೆ. ಬೇಸಾಯುಸಂಘದ ಸದಸ್ಯರ ಸಲುವಾಗಿ ಆಗಲಾರವು. ಬೇಸಾಯುಸಂಘದ ಲೆಕ್ಕಪತ್ರಗಳು ಸಂಘದ ಸಾಮಾನ್ಯ ಸದಸ್ಯರಿಗೆ ಅರ್ಥವಾಗಿ, ಅದರ ವ್ಯವಹಾರಗಳ ಬಗ್ಗೆ ಅವರ ವಿಶ್ವಾಸ, ತಿಳಿವಳಿಕೆ ಬೆಳೆಯಬೇಕೆಂಬುದೇ ಬೇಸಾಯುಸಂಘದ ಲೆಕ್ಕಪತ್ರಗಳ ಮುಖ್ಯ ಉದ್ದೇಶ. ಅವನ್ನು ಜಟಿಲ ಮಾಡಿಟ್ಟರೆ ಈ ಮುಖ್ಯ ಉದ್ದೇಶವೇ ವಿಫಲವಾಗುತ್ತದೆ. ಸದಸ್ಯರೇ ಲೆಕ್ಕಪತ್ರಗಳ ಮುಖ್ಯ ಉದ್ದೇಶ. ಅವನ್ನು ಜಟಿಲಮಾಡಿಟ್ಟರೆ ಈ ಮುಖ್ಯ ಉದ್ದೇಶವೇ ವಿಫಲವಾಗುತ್ತದೆ. ಸದಸ್ಯರು ಲೆಕ್ಕಪತ್ರಗಳನ್ನು ತಿಳಿದುಕೊಳ್ಳದೆ ನಿಷ್ಕ್ರಿಯ ಗೊಂಬೆಗಳಂತೆ, ವ್ಯವಸ್ಥಾಪಕನ, ಅಧಿಕಾರಿಗಳ ಮೇಲೆ ಕುರುಡುನಂಬಿಕೆ ಇಟ್ಟು ಎಲ್ಲ ವ್ಯವಹಾರ ನಡೆಸಬೇಕಾಗುತ್ತದೆ. ಅದರಲ್ಲಿ ಸದಸ್ಯರಲ್ಲಿ ವಿಶ್ವಾಸ, ಉತ್ಸಾಹ ಬೆಳೆಯವು. ಸಕ್ರಿಯವಾಗಿ ಅವರು ಸಂಘದ ಉನ್ನತಿಗಾಗಿ ಹೆಣಗರು. ಅದರಿಂದ ಲೆಕ್ಕಪತ್ರಗಳು ಎಷ್ಟೇ ಅಂದವಾಗಿದ್ದರೂ ಅಭಿವೃದ್ಧಿ, ಉತ್ಪಾದನೆಗಳಲ್ಲಿ ಬೇಸಾಯುಸಂಘವು ಶಿಥಿಲವಾಗುತ್ತ ನಡೆಯುತ್ತದೆ. ಆದ್ದರಿಂದ ಬೇಸಾಯುಸಂಘದ ಲೆಕ್ಕಗಳು ಸಂಘದ ಸದಸ್ಯರ ತಿಳಿವಳಿಕೆಗೆ ನಿಲುಕುವಷ್ಟು ಸುಲಭವಾಗಿರಬೇಕು. ಇದು ಮಹತ್ವದ ವಿಚಾರ. ಕ್ರಮೇಣವಾಗಿ ಬೇಸಾಯುಸಂಘದ ಸದಸ್ಯರ ಜಾಗೃತಿ ಬೆಳೆದಂತೆ, ವ್ಯವಹಾರಗಳೂ ಹೆಚ್ಚಿದಂತೆ, ಸಂಘದ ಆರ್ಥಿಕಸ್ಥಿತಿಯೂ ಸುಧಾರಿಸಿದಂತೆ, ಅಗತ್ಯವಾದ ಹೆಚ್ಚು ಜಟಿಲವಾದ ಲೆಕ್ಕಗಳನ್ನು ಇಡಬಹುದು. ಅದಕ್ಕೆ ಅಗತ್ಯವಿದ್ದ ಗುಮಾಸ್ತರನ್ನೂ ಬೇಸಾಯುಸಂಘವು ನೇಮಿಸಿಕೊಳ್ಳಬಹುದು.

ಪ್ರಾರಂಭದಲ್ಲೇ ಹೆಚ್ಚು ಜಟಿಲವಾದ ಲೆಕ್ಕಪತ್ರಗಳನ್ನು ಇಡುವುದರಲ್ಲಿ ಬೇಸಾಯುಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು ಅಥವಾ ಬೇರೆ ಪದಾಧಿಕಾರಿಗಳು ಹೆಚ್ಚು ಕಾಲಕಳೆಯುತ್ತ ನಡೆಯುವುದರಿಂದ ಇನ್ನೂ ಒಂದು ತೊಂದರೆಯಾಗುತ್ತದೆ.

ಅವರೆಲ್ಲರೂ ಬೇಸಾಯಸಂಘದ ಮುಖ್ಯ ಚಟುವಟಿಕೆಯಾದ ಬೇಸಾಯದ ಅಭಿವೃದ್ಧಿಯ ಕಡೆಗೆ ಉದಾಸೀನರಾಗುತ್ತ ನಡೆಯುತ್ತಾರೆ. ಇದರಿಂದ ಬೇಸಾಯಸಂಘದ ಉನ್ನತಿಗೆ ಭಾರೀ ಧಕ್ಕೆ ತಗಲುವುದಲ್ಲದೆ ಮುಂದಾಳುಗಳಲ್ಲಿ ಹಾಗೂ ಸದಸ್ಯರಲ್ಲಿ ತಿಕ್ಕಾಟಗಳು ಬೆಳೆಯುತ್ತವೆ. ಸುಲಭವಾದ ಲೆಕ್ಕಪತ್ರಗಳಲ್ಲಿ ಸ್ವಲ್ಪ ಕಾಲಕಳೆದು ಉಳಿದ ಸಮಯದಲ್ಲಿ ಸಂಘದ ಪದಾಧಿಕಾರಿಗಳು ಬೇಸಾಯದ ಅಭಿವೃದ್ಧಿ ಬಗ್ಗೆ ಹೆಚ್ಚು ಲಕ್ಷ್ಯ ಹಾಕುತ್ತ ನಡೆದರೆ ಅದರಿಂದ ಬೇಸಾಯಸಂಘದ ಆರ್ಥಿಕಉನ್ನತಿ ಆಗುವುದಲ್ಲದೆ ಪದಾಧಿಕಾರಿಗಳು ಮತ್ತು ಸದಸ್ಯರಲ್ಲಿ ಹೆಚ್ಚೆಚ್ಚು ಅನ್ಯೋನ್ಯತೆ ಬೆಳೆಯುತ್ತದೆ.

ಬೇಸಾಯಸಂಘಕ್ಕೆ ಅಗತ್ಯವಾಗಿರುವ ಲೆಕ್ಕಪತ್ರಗಳು

ಸಾಮೂಹಿಕ ಬೇಸಾಯದಿಂದ ಅವರ ಬೇಸಾಯದ ಅಭಿವೃದ್ಧಿ ಎಷ್ಟರ ಮಟ್ಟಿಗೆ ಆಯಿತು, ಅವರಿಗೆ ಅದರಿಂದ ಆದಾಯ ಎಷ್ಟು ಹೆಚ್ಚಿತು ಎಂಬುದು ಸಾಮೂಹಿಕ ಬೇಸಾಯಗಾರರಿಗೆ ಗೊತ್ತಾಗುವುದು ಮಹತ್ವದ್ದು. ಅಂದರೆ ಅಭಿವೃದ್ಧಿಯ ಒಟ್ಟು ವೆಚ್ಚ, ಒಟ್ಟು ಉತ್ಪತ್ತಿಯ ಹೆಚ್ಚಳ, ಒಟ್ಟು ಆದಾಯದ ಹೆಚ್ಚಳ, ವೈಯಕ್ತಿಕ ಪ್ರತಿಫಲದ ಹೆಚ್ಚಳ ಇವನ್ನು ತೋರಿಸಲು ಅಗತ್ಯವಿದ್ದ ಲೆಕ್ಕಗಳನ್ನು ಬೇಸಾಯ ಸಂಘವು ನಿಯಮಿತವಾಗಿ ಇಡಬೇಕು. ಒಟ್ಟು ವೆಚ್ಚಗಳ ಲೆಕ್ಕಕ್ಕಾಗಿ ಹಾಗೂ ಕೆಲವೊಂದು ವೈಯಕ್ತಿಕ ಲೆಕ್ಕಗಳ ಸಲುವಾಗಿ ಕೆಲವೇ ಸುಲಭವಾದ ಲೆಕ್ಕದ ಪುಸ್ತಕಗಳನ್ನಿಟ್ಟರೆ ಸಾಕು.

ಬೆಳೆಯ ಉತ್ಪಾದನೆಯ ರಿಜಿಸ್ಟರನ್ನು ಸುಲಭವಾಗಿ ಬರೆದಿಟ್ಟು ಎಲ್ಲ ಬೆಳೆಗಳಿಗೆ ಒಟ್ಟು ಬೀಜ, ಗೊಬ್ಬರ, ಮುಂತಾದವು ಎಷ್ಟು ಹತ್ತಿದವು, ಒಟ್ಟು ಬೆಳೆಯ ಉತ್ಪತ್ತಿ ಎಷ್ಟಾಯಿತು ಎಂದು ತೋರಿಸಿದರೆ ಸಂಘದ ಉತ್ಪಾದಕ ಪ್ರಗತಿಯು ಸ್ಪಷ್ಟವಾಗುತ್ತದೆ. ಅಭಿವೃದ್ಧಿಯ ರಿಜಿಸ್ಟರಿನಲ್ಲಿ ಪ್ರತಿಯೊಬ್ಬನು ಒಂದುಗೂಡಿಸಿದ ಭೂಮಿಯಲ್ಲಿ ಎಷ್ಟು ರಕಮಿನ ಅಭಿವೃದ್ಧಿಯಾಯಿತು ಎಂಬುದನ್ನು ತೋರಿಸಬೇಕಾಗುತ್ತದೆ. ಅದರಿಂದಲೇ ಭೂಮಿಯನ್ನು ವಾಪಸು ಬಿಡುವಾಗ ಎಷ್ಟು ಪರಿಹಾರಧನವನ್ನು ಪಡೆಯಬೇಕೆಂಬು ದನ್ನು ಸುಲಭವಾಗಿ ನಿರ್ಧರಿಸಬಹುದು. ದುಡಿಯುವ ಹಾಜರಿ. ದುಡಿತದ ಪ್ರತಿಫಲ ಇವನ್ನು ಪ್ರತಿಯೊಬ್ಬಸದಸ್ಯನಿಗೂ ತೋರಿಸಬೇಕು. ಆದರೆ ಪ್ರತಿಯೊಂದು, ಬೆಳೆ ಅಥವಾ ಕೆಲಸದಲೆಕ್ಕ ಪ್ರತ್ಯೇಕಲೆಕ್ಕ ತೋರಿಸದೆ ಒಟ್ಟಿನಲೆಕ್ಕ ತೋರಿಸಬೇಕು.

ದುಡಿತದ ಹಾಜರಿ, ದುಡಿತದ ಪ್ರತಿಫಲ ಮುಂತಾದ ವೈಯಕ್ತಿಕ ಲೆಕ್ಕಗಳನ್ನು ಸದಸ್ಯರು ಸಾಯಂಕಾಲ ಒಂದುಗೂಡಿದ್ದಾಗ್ಗ ಅವರ ಎದುರಿನಲ್ಲೇ ಅವರಿಗೆ ತಿಳಿಸಿ ಹೇಳಿ ಹಚ್ಚಬೇಕು. ಈ ಲೆಕ್ಕಗಳ ಬಗ್ಗೆ ಪಾಸುಬುಕ್ಕುಗಳನ್ನೂ ಸಹ ಕೊಡಬೇಕು. ಅದ ರಿಂದ ಅಪನಂಬಿಕೆಗೆ ಅವಕಾಶವಿಲ್ಲದಂತಾಗುತ್ತದೆ. ದೈನಿಕವಾಗಿ ಬರೆಯುವ ಲೆಕ್ಕಗಳನ್ನು ನಿಯಮಿತವಾಗಿ ನಿತ್ಯವೂ ಬರೆದು ತಿಳಿಸುತ್ತಿರಬೇಕು. ಉಳಿದ ಲೆಕ್ಕಗಳನ್ನು ದೈನಿಕ ಲೆಕ್ಕಗಳ ಸಹಾಯದಿಂದ ನಂತರ ಬರೆದುಕೊಳ್ಳಬಹುದು. ಹಣಕೊಟ್ಟ ಅಥವಾ ಪಡೆ ದಿದ್ದರ ಬಗ್ಗೆ ಆಗಿಂದಾಗ್ಗ ಸರಿಯಾಗಿ ಪಾವತಿಗಳನ್ನು ಸಂಬಂಧಿಸಿದವರಿಂದ ಮಾಡಿಸ ಬೇಕು. ಈ ಬಗ್ಗೆ ಮುಂದೆ ಅನುಮಾನಕ್ಕೆ ಅವಕಾಶವಿರಲೇ ಕೂಡದು.

ಲೆಕ್ಕದ ಮಾಹಿತಿಯನ್ನು ಆಗಿಂದಾಗ್ಗೆ ಎಲ್ಲ ಸದಸ್ಯರಿಗೆ, ಅವರಲ್ಲೂ ವಿದ್ಯಾವಂತ ಸದಸ್ಯರಿಗೆ ಮಾಡಿಕೊಡುತ್ತಿದ್ದರೆ ಅದರಿಂದ ಲೆಕ್ಕ ಬರೆಯುವ ಹಾಗೂ ತಿಳಿಯುವ ಯೋಗ್ಯತೆ ಸಹ ಹೆಚ್ಚುಚ್ಚು ಸದಸ್ಯರಿಗೆ ಆಗುತ್ತದೆ. ಅದರಿಂದ ಅವ್ಯವಹಾರ ಅಥವಾ ಮೋಸಗಾರಿಕೆಗೆ ಅವಕಾಶವಿಲ್ಲದಂತಾಗುವುದು. ಲೆಕ್ಕ ಪತ್ರದ ಜವಾಬ್ದಾರಿ ಒಬ್ಬರದೇ ಅಥವಾ ಇಬ್ಬರದೇ ಗುತ್ತಿಗೆಯಾದಾಗ ಸಾಮಾನ್ಯವಾಗಿ ಅವ್ಯವಹಾರ ಹಾಗೂ ವಂಚನೆಗೆ ಅವಕಾಶವಾಗುವುದುಂಟು. ಕ್ರಮೇಣವಾಗಿ ಲೆಕ್ಕದ ಅನುಭವ ಹೆಚ್ಚುಚ್ಚು ಸದಸ್ಯರಿಗೆ ಆದಂತೆ ಆಗಾಗ್ಗೆ ಲೆಕ್ಕ ಬರೆಯುವವರನ್ನೂ ಸಹ ಬದಲಿಸಬಹುದು. ಇದರಿಂದ ಹೆಚ್ಚು ಸರಿಯಾದ ಹಾಗೂ ಪ್ರಾಮಾಣಿಕ ಲೆಕ್ಕಗಳನ್ನು ಬರೆಯಲು ಸಾಧ್ಯವಾದೀತು. ಲೆಕ್ಕಬರೆಯುವ ಹಾಗೂ ದುಡಿಯುವ ಸದಸ್ಯರ ಭೇದವೂ ಅದರಿಂದ ಕಡಮೆಯಾಗುವುದು.

ಲೆಕ್ಕಪತ್ರಗಳ ಮುಖ್ಯ ರಿಜಿಸ್ಟರುಗಳ ಫಾರ್ಮ್‌ಗಳ ವಿವರಗಳನ್ನು ಮುಂದೆ ಕೊಡಲಾಗಿದೆ. ಅವನ್ನು ಸರಿಯಾಗಿ ತಿಳಿದುಕೊಂಡು ಪರಿಸ್ಥಿತಿ. ಅನುಕೂಲತೆಗನುಸರಿಸಿ ಬದಲಾವಣೆಯನ್ನು ಮಾಡಿಕೊಂಡು ಲೆಕ್ಕಪತ್ರ ಬರೆಯಬೇಕು. ಸ್ಥಳಿಕ ಪರಿಸ್ಥಿತಿ, ಅವಶ್ಯಕತೆ ಕಡೆಗಣಿಸಿ ಒಂದೇ ನಮೂನೆಯ ಲೆಕ್ಕ ಬರೆಯಲು ಆಗ್ರಹಿಸುವುದು ಸರಿಯಲ್ಲ.

ಲೆಕ್ಕಪತ್ರಗಳ ರಿಜಿಸ್ಟರುಗಳು ಹಾಗೂ ಪತ್ರಿಕೆಗಳು

(1) ರೋಜಕಿರ್ದಿ (ಕ್ಯಾಶ್ ಬುಕ್ಕು)

ದಿನಾಂಕ............

ಜಮಾ			ಖರ್ಚು		
ಖಾತೆ ಪಾನು	ತಪಶೀಲು	ರಕಮು	ಖಾತೆಪಾನು	ತಪಶೀಲು	ರಕಮು

ವಿವರಣೆ: ಇದೊಂದು ಬಹಳ ಸುಲಭವಾದ ಆದರೆ ಅತ್ಯಂತ ಮಹತ್ವದ ರಿಜಿಸ್ಟರ್. ಇದರಲ್ಲಿ ಬೇಸಾಯ ಸಂಘದ ಹಣದ ಎಲ್ಲ ವ್ಯವಹಾರಗಳನ್ನೂ ಬರೆದಿಡಲಾಗುತ್ತದೆ. ಇದನ್ನು ನಿಯಮಿತವಾಗಿ ನಿತ್ಯವೂ ತಪ್ಪದೇ ಬರೆಯಬೇಕು. ಕಿರ್ದಿಯಲ್ಲಿ ಬರೆದ ಜಮಾಖರ್ಚುಗಳಿಗೆ ಸರಿಯಾಗಿ ಪಾವತಿಗಳಿರಬೇಕು. ಎಲ್ಲ ವ್ಯವಹಾರಗಳನ್ನೂ ಕಿರ್ದಿಯಲ್ಲಿ ಬರೆದಂತೆ ಖಾತೆ ಪುಸ್ತಕದಲ್ಲೂ ಬರೆದಿಡಬೇಕು. ಮಾಲಿನ ರಿಜಿಸ್ಟರು, ಗಳೇದ ರಿಜಿಸ್ಟರ್, ಮುಂತಾದ ಸಹಾಯಕ ರಿಜಿಸ್ಟರ್‌ಗಳನ್ನು ಕಿರ್ದಿಯಿಂದಲೇ ಬರೆಯಬೇಕು. ಕಿರ್ದಿಯಲ್ಲಿಯ ದಾಖಲೆಗಳನ್ನು ಆಗಿಂದಾಗ ಖಾತೆ ಪುಸ್ತಕದಲ್ಲಿ ಮತ್ತು ಬೇರೆ ಸಹಾಯಕ ಪುಸ್ತಕಗಳಲ್ಲಿ ಬರೆಯಬೇಕು. ತಿಂಗಳದ ಕೊನೆಯಲ್ಲಿ ವ್ಯವಹಾರದ ಅವಗಾಹನೆಗೆ ಜಮಾಖರ್ಚಿನ ಪತ್ರಿಕೆ ಮತ್ತು ತಾತ್ಕಾಲಿಕ ಆಢಾವೆ ಪತ್ರಿಕೆ

(ಬ್ಯಾಲೆನ್ಸ್‌ಶೀಟ್) ಕಿರ್ದಿ, ಖಾತೆಪುಸ್ತಕಗಳ ಆಧಾರದ ಮೇಲೆ ಮಾಡಿಡಬೇಕು. ಇದರಿಂದ ಸಂಘದ ಸರಿಯಾದ ಆರ್ಥಿಕಸ್ಥಿತಿಗತಿ ಬೇಕಾದಾಗ ಗೊತ್ತಾಗುತ್ತದೆ.

(2) ಸ್ಟಾಕ್ ಬುಕ್ಕು

ಮಾಲಿನ ಹೆಸರು ಖಾತೆ ನಂ.

ತಾರೀಖು	ಖಾತೆ ಪಾನು	ಜಮಾ ಅಥವಾ ಖರ್ಚಿನ ವಿವರ	ಬಂದ ಪ್ರಮಾಣ	ಕೊಟ್ಟ ಪ್ರಮಾಣ	ಪ್ರತಿಯೊಂದು ವ್ಯವಹಾರದ ನಂತರ ಬಾಕಿ

ವಿವರಣೆ : ವಿಭಿನ್ನ ಬಾಬುಗಳಿಗೆ ಕೆಳಗಿನಂತೆ ಬೇರೆಬೇರೆ ಭಾಗಗಳನ್ನು ಏರ್ಪಡಿಸಬೇಕು :

(i) ಬೇಸಾಯಕ್ಕೆ ಸದ್ಯಕ್ಕೆ ಬೇಕಾದ ಸಾಮಾನುಗಳು (ಬೀಜ, ಗೊಬ್ಬರ, ಕ್ರಿಮಿನಾಶಕಗಳು, ರಾಸಾಯನಿಕ ಗೊಬ್ಬರಗಳು, ಎಂಜಿನ್, ಎಣ್ಣೆ ಮುಂತಾದವು.)

(ii) ವಿಭಿನ್ನ ಫಸಲುಗಳ ಉತ್ಪತ್ತಿ

(iii) ವಿಭಿನ್ನ ಪ್ರಕಾರದ ಬಳಕೆಯ ವಸ್ತುಗಳು

(iv) ದನಕರುಗಳು. ಯಂತ್ರೋಪಕರಣಗಳು, ಬೇಸಾಯದ ಸಲಕರಣೆಗಳು, ಡೆಡ್‌ಸ್ಟಾಕ್ ಮುಂತಾದವು.

ಈ ರಿಜಿಸ್ಟರನ್ನು ಸಹ ನಿತ್ಯನಿಯಮಿತವಾಗಿ ಬರೆಯಬೇಕು. ಏಕೆಂದರೆ ಇದರಿಂದಲೇ ಸಂಘದ ಚರಆಸ್ತಿಯ ಸ್ಥಿತಿ ಗೊತ್ತಾಗುತ್ತದೆ.

(i) ಬೀಜ, ಗೊಬ್ಬರ ಮುಂತಾದ ಬೇಸಾಯ ಸಲಕರಣೆಗಳನ್ನು, ಕೆಲವನ್ನು ಪೇಟೆಯಲ್ಲಿ ಕೊಳ್ಳಬೇಕಾಗುತ್ತದೆ ; ಕೆಲವನ್ನು ಬೇಸಾಯದ ಉತ್ಪತ್ತಿಯಲ್ಲೇ ತೆಗೆದುಕೊಳ್ಳಬೇಕಾಗುತ್ತದೆ. ಈ ಲೆಕ್ಕವನ್ನು ಬೇರೆಯಾಗಿ ಇಟ್ಟರೆ ಉತ್ಪಾದನೆಯ ಮೌಲ್ಯದ ಸ್ಪಷ್ಟಚಿತ್ರವು ಗೊತ್ತಾಗುತ್ತದೆ.

(ii) ಬೆಳೆಯ ರಾಶಿ ಆದಂತೆ ವಿಭಿನ್ನ ಬೆಳೆಗಳ ಉತ್ಪತ್ತಿ ಬರುತ್ತದೆ. ರಾಶಿ ಆದಂತೆ, ಉತ್ಪತ್ತಿಯ ಧಾನ್ಯ ಬಂದಂತೆ, ಹಚ್ಚಿದ ದಾಖಲೆಗಳನ್ನು ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ಸಮಿತಿಯವರು ನೋಡಬೇಕು. ವಿಭಿನ್ನ ಬೆಳೆಗಳಿಗೆ ಪ್ರತ್ಯೇಕವಾದ ಪುಟಗಳನ್ನು ಕೊಡಬೇಕು. ಉತ್ಪತ್ತಿಯ ಮಾಲನ್ನು ಕೆಲವುಭಾಗ ಮಾರಲಾಗುತ್ತದೆ, ಕೆಲವು ಭಾಗವನ್ನು ಸದಸ್ಯರು ಬಳಸುತ್ತಾರೆ. ಹಂಚಿದ ಅಥವಾ ಮಾರಿದ ಮಾಲಿನ ವ್ಯವಹಾರಗಳು ಕಿರ್ದಿಯಲ್ಲಿ ಹಚ್ಚಿದ ವ್ಯವಹಾರಗಳಿಗೆ ಸರಿಹೊಂದಬೇಕು. ಮುಂಗಡವಾಗಿ ಸದಸ್ಯರಿಗೆ ಏನಾದರೂ ಕೊಟ್ಟಿದ್ದರೆ ಮುಂಗಡ ರಿಜಿಸ್ಟರದಲ್ಲಿಯೇ ಲೆಕ್ಕಗಳಿಗೆ ಅವು ಸರಿಹೊಂದಬೇಕು.

(iii) ಒಟ್ಟಾಗಿ ಕೊಂಡು ಬಳಕೆಯ ಸಾಮಾನುಗಳನ್ನು ಬೇಸಾಯಸಂಘವು ತನ್ನ ಸದಸ್ಯರಿಗೆ ಒದಗಿಸಬಹುದು. ಬೇರೆ ಭಾಗದಲ್ಲಿ ಈ ವ್ಯವಹಾರಗಳನ್ನು ಹಚ್ಚ ಬೇಕು. ಪ್ರಾರಂಭದಲ್ಲಿ ಬೇಸಾಯಸಂಘವು ನಿಯಮಿತವಾಗಿ ಬಳಕೆದಾರರ ಸಂಘ ದಂತೆ ಈ ವ್ಯವಹಾರವನ್ನು ಕೈಗೊಳ್ಳುವುದು ವಿಹಿತವಲ್ಲ. ಅವರೆ ಸದಸ್ಯರ ಅನು ಕೂಲತೆಗಾಗಿ ಮತ್ತು ಅವರ ಓಡಾಟ ಕಡಮೆ ಮಾಡಿ ಅವರಿಂದ ಹೆಚ್ಚು ಉತ್ಪಾದನೆ ಕೆಲಸ ಮಾಡಿಸಲು ಅವರ ಬೇಡಿಕೆಯ ಆಧಾರದ ಮೇಲೆ ಸದಸ್ಯರಿಗೆ ಅಗತ್ಯವಿದ್ದ ಬಳಕೆಯಸಾಮಾನುಗಳನ್ನು ಒಟ್ಟಾಗಿ ಕೊಂಡು ಸಂಘವು ಒದಗಿಸಬಹುದು.

(iv) ದನಕರು, ಬೇಸಾಯದಸಲಕರಣೆ, ಯಂತ್ರೋಪಕರಣ ಮುಂತಾದವು ಗಳನ್ನು ಸಂಘವು ಸದಸ್ಯರಿಂದ ನೇರವಾಗಿ ಕೊಂಡುಕೊಳ್ಳಬಹುದು ಅಥವಾ ಅವುಗಳ ಯೋಗ್ಯಬೆಲೆಕಟ್ಟಿ ಶೇರು ಅಥವಾ ಠೇವಣಿಗಳ ರೂಪದಲ್ಲಿ ಸದಸ್ಯರು ಅವನ್ನು ಒಂದುಗೂಡಿಸಬಹುದು. ಯಾವುದೇಸಂದರ್ಭದಲ್ಲಿ ಈ ಮಾಲಿನಲೆಕ್ಕವನ್ನು ಪುಸ್ತಕದ ಬೇರೆ ಭಾಗದಲ್ಲಿ ತೋರಿಸಬೇಕು. ಕೊಂಡ ತಾರೀಖು, ಬೆಲೆಗಳನ್ನೂ ಈ ರಿಜಿಸ್ಟರಲ್ಲಿ ತೋರಿಸಬೇಕು. ದನ, ಸಲಕರಣೆಗಳನ್ನು ಬೇರೆ ಬೇರೆ ಪುಟಗಳಲ್ಲಿ ಹಚ್ಚಬೇಕು. ಅದರಿಂದ ಅವುಗಳ ಸರಿಯಾದ ಒಟ್ಟು ಬೆಲೆಯನ್ನು ಗೊತ್ತು ಮಾಡಬಹುದು. ಆಗಾಗ್ಗೆ ತಯಾರಿಸುವ ಅಢಾವೆ ಪತ್ರಿಕೆಯಲ್ಲಿರುವ ಅಂಕಿಗಳಿಗೆ ಈ ರಿಜಿಸ್ಟರಲ್ಲಿರುವ ದಾಖಲೆಗಳು ಹೊಂದುತ್ತಿರಬೇಕು.

ಉತ್ಪತ್ತಿಯ ಮಾಲಿನ ಬೆಲೆಯನ್ನು ರಾಶಿಯ ಕಾಲಕ್ಕೆ ಆಗಿದ್ದ ದರಗಳ ಪ್ರಕಾರ ಕಟ್ಟಬೇಕು. ವರ್ಷದ ಕೊನೆಯಲ್ಲಿ ಅಢಾವೆ ಪತ್ರಿಕೆಯನ್ನು ತಯಾರಿಸಿದಾಗ ಅದೇ ಬೆಲೆಯನ ಲೆಕ್ಕಕ್ಕೆ ಹಿಡಿಯಬೇಕು.

(3) ಕೆಲಸದ ರಿಜಿಸ್ಟರ್

ತಿಂಗಳು........................ ವರ್ಷ.....................

ಕ್ರಮ ಸಂ.	ಸದಸ್ಯರ ಹೆಸರು ಅಥವಾ ದುಡಿಯುವವರ ಹೆಸರು	ತಿಂಗಳಿನ ತಾರೀಕುಗಳು		ಒಟ್ಟು ಕೆಲಸದ ದಿವಸಗಳು

ವಿವರಣೆ

(i) ಸದಸ್ಯರಿಗೋಸುಗ, ಬಿನ್ ಸದಸ್ಯರಿಗೋಸುಗ ಬೇರೆಬೇರೆಯಾಗಿ ಪುಸ್ತಕದ ಭಾಗಗಳನ್ನು ಮಾಡಬೇಕು.

(ii) ಬೇರೆಬೇರೆ ಗುಂಪುಗಳನ್ನಾಗಿ ಮಾಡಿದ್ದರೆ ಅವಕ್ಕೂ ಬೇರೆಬೇರೆ ಭಾಗ ಗಳನ್ನು ಮಾಡಬೇಕು.

(iii) ಪುರುಷರನ್ನು, ಸ್ತ್ರೀಯರನ್ನು ಹುಡುಗರನ್ನು ಪ್ರತ್ಯೇಕವಾಗಿ ಕಾಣಿಸಬೇಕು.

(vi) ಎತ್ತು, ಗಳಿ, ಸಾಮಾನುಗಳನ್ನು ಬಾಡಿಗೆ ತೆಗೆದುಕೊಳ್ಳುವ ಪದ್ಧತಿ ಇದ್ದರೆ ಅವರ ಲೆಕ್ಕ ಬೇರೆಯಾಗಿ ಕಾಣಿಸಬೇಕು.

ಬೇಸಾಯಸಂಘದಲ್ಲಿ ಇದೊಂದು ಅತ್ಯಂತ ಮಹತ್ವದ ಲೆಕ್ಕದಪುಸ್ತಕ. ಈ ರಿಜಿಸ್ಟರನ್ನು ಸರಿಯಾಗಿ, ನಿಯಮಿತವಾಗಿ ಬರೆಯದಿದ್ದರೆ ಬೇಸಾಯಸಂಘದಲ್ಲಿ ಇದೊಂದು ಅತ್ಯಂತಮಹತ್ವದ ಲೆಕ್ಕದ ಪುಸ್ತಕ. ಈ ರಿಜಿಸ್ಟರನ್ನು ಸರಿಯಾಗಿ, ನಿಯಮಿತವಾಗಿ ಬರೆಯದಿದ್ದರೆ ಬೇಸಾಯಸಂಘದಲ್ಲಿ ಸದಸ್ಯರ ವಿಶ್ವಾಸವು ಕಡಮೆ ಯಾಗುವುದು ಮತ್ತು ಅದರಿಂದ ಬೇಸಾಯಸಂಘವು ಛಿನ್ನಭಿನ್ನವಾಗುತ್ತದೆ. ಈ ರಿಜಿಸ್ಟರನ್ನು ದಿನಾಲು ದುಡಿಯುವ ಸದಸ್ಯರ ಎದುರಿನಲ್ಲೇ ಬರೆಯಬೇಕು. ಅವರ ದುಡಿತದ ಸರಿಯಾದ ಲೆಕ್ಕವನ್ನು ಹಚ್ಚಲಾಗುತ್ತಿದೆ ಎಂಬ ಭರವಸೆ ಸದಸ್ಯರಿಗಾಗ ಬೇಕು. ಆಗಾಗ್ಗೆ ಅವರ ದುಡಿತವ ದಿವಸಗಳ ಬೇರೀಜನ್ನೂ ಸಹ ತಿಳಿಸಬೇಕು.

ಬೇಸಾಯಸಂಘದಲ್ಲಿ ಸದಸ್ಯರಿಗೆ ದುಡಿತದ ಪ್ರತಿಫಲ ಕೊಡುವ ವಿಭಿನ್ನ ವಿಧಾನಗಳುಂಟು: (ಅ) ಕೆಲಸದ ರಿಜಿಸ್ಟರಲ್ಲಿ ಕೇವಲ 'ಹಾಜರಿ' ಅಥವಾ 'ಗೈರು ಹಾಜರಿ' ಹಾಕಿ ಸದಸ್ಯರ ದುಡಿತದ ದಿವಸ ಹಚ್ಚಬಹುದು. ಅಥವಾ (ಆ) 'ದುಡಿತದ ಅಳತೆ'ಗಳನ್ನು ಸದಸ್ಯರ ದುಡಿತಕ್ಕೆ ಗೊತ್ತುಪಡಿಸಿದ್ದರೆ ಪ್ರತಿಯೊಬ್ಬನ ಹೆಸರಿನೆದುರು ದಿನಾಲು ಅವನ 'ದುಡಿತದ ಅಳತೆ'ಗಳನ್ನು ಹಚ್ಚಬೇಕು. ನಿತ್ಯವೂ ಕಾರ್ಯದರ್ಶಿ ಅಥವಾ ವ್ಯವಸ್ಥಾಪಕನು ದಿವಸದ ಒಟ್ಟು ದುಡಿತದ ದಿವಸ ಅಳತೆಗಳ ಬೇರೀಜು ಮಾಡಿ ಕೆಳಗೆ ತನ್ನ ಸಹಿ ಹಾಕಬೇಕು. ತಿಂಗಳಿನ ಕೊನೆಗೆ ಪ್ರತಿಯೊಬ್ಬ ಸದಸ್ಯನ ದುಡಿತದ ದಿವಸಗಳ ಅಥವಾ ನಂಬರುಗಳ ಬೇರೀಜು ಮಾಡಿ ಹಚ್ಚಬೇಕು.

ದುಡಿತದ ಪ್ರತಿಫಲ ಕೊಡುವ ಪದ್ಧತಿಗಳೂ ಬೇರೆ ಬೇರೆ ಇವೆ. (ಅ) ರೂಢಿಯಂತೆ ನಡೆದ ಸ್ಥಳಿಕ ದರಗಳ ಪ್ರಕಾರ ಕೂಲಿಯನ್ನು ಕೊಡಬಹುದು. ವರ್ಷದ ಕೊನೆಯಲ್ಲಿ ಕೆಲವು ಭಾಗ ಲಾಭಾಂಶವನ್ನು ಹೆಚ್ಚಿನ ಲಾಭ (ಬೋನಸ್) ಎಂದು ಹಂಚಬಹುದು. (ಆ) ವಿಭಿನ್ನ ದಕ್ಷತೆಯ ವಿಭಿನ್ನ ಕೆಲಸಗಳಿಗೆ ವಿಭಿನ್ನ ಕೂಲಿ ಅಥವಾ ವೇತನ ಗೊತ್ತುಪಡಿಸಬಹುದು. (ಇ) ಇದರಲ್ಲಿ ವರ್ಷದ ಕೊನೆಗೆ ಪ್ರತಿಯೊಬ್ಬ ಸದಸ್ಯನ ದುಡಿತದ ದಿವಸಗಳನ್ನು ಒಟ್ಟುಗೂಡಿಸಿ ಒಟ್ಟು ಆದಾಯದ ಅಥವಾ ಬೇಸಾಯದ ಆದಾಯದ ಕೆಲವಂಶವನ್ನು ತೆಗೆದು ದುಡಿತದ ದಿವಸಗಳ ಆಧಾರದ ಮೇಲೆ ಹಂಚಬಹುದು. ಇದೇ ಪ್ರಕಾರ ನಿವ್ವಳ ಲಾಭವನ್ನು ಬೇರೆಬೇರೆ ಬಾಬುಗಳಿಗೆ ಹಂಚಿ ಉಳಿದ ಕೆಲವು ಭಾಗ ನಿವ್ವಳ ಲಾಭವನ್ನು ದುಡಿತದ ಹೆಚ್ಚಿನ ಲಾಭವನ್ನಾಗಿ ಹಂಚಬಹುದು.

ದೇಶದ ವಿಭಿನ್ನಭಾಗಗಳಲ್ಲಿ ಬೇರೆಬೇರೆ ಬೇಸಾಯಸಂಘಗಳಲ್ಲಿ ವಿಭಿನ್ನ ಪರಿಸ್ಥಿತಿಗಳಿರುವುದುಂಟು. ತಮ್ಮ ಪರಿಸ್ಥಿತಿ, ಅನುಕೂಲತೆಗಳ ಪ್ರಕಾರ ಬೇಸಾಯ

ಸಂಘಗಳು 'ದುಡಿತದ ಆಳತೆ', 'ದುಡಿತದ ಪ್ರತಿಫಲ'ದ ವಿಧಾನಗಳನ್ನು ಹಾಕಿ ಕೊಳ್ಳಲು ಅವಕಾಶವಿರಬೇಕೆಂದು ಸಹಕಾರಿ ಬೇಸಾಯದ ಕಾರ್ಯಸಮಿತಿಯು ಶಿಫಾರಸು ಮಾಡಿದೆ. ಕ್ರಮವಾಗಿ ಒತ್ತಾಯದಿಂದ ಒಂದೇಬಗೆಯ ಶ್ರಮಸಂಘಟನವ ಹಾಗೂ ಶ್ರಮಪ್ರತಿಫಲದ ವಿಧಾನಗಳನ್ನು ಬೇಸಾಯಸಂಘಗಳ ಮೇಲೆ ಹೇರುವುದ ರಿಂದ ಅವುಗಳ ಶ್ರಮ ಸ್ಫೂರ್ತಿ ಕುಗ್ಗುವುದೆಂದು ಅನುಭವದಿಂದ ಕಂಡು ಬಂದಿದೆ. ಸಂಬಂಧಿಸಿದ ಅಧಿಕಾರಿಗಳು ಹಾಗೂ ಕಾರ್ಯಕರ್ತರು ಸರಿಯಾದ ವಿಧಾನಗಳನ್ನು ತಿಳಿಸಿಹೇಳಿ ಅವುಗಳನ್ನು ಅನುಸರಿಸುವಲ್ಲಿ ಬೇಸಾಯಸಂಘಗಳಿಗೆ ಸೂಕ್ತ ಮಾರ್ಗ ದರ್ಶನ ಮಾಡಬಹುದು.

ಬೇಸಾಯಸಂಘದಲ್ಲಿ ಹಲವೆಡೆ ಬೇಸಾಯದ ಎತ್ತುಗಳನ್ನು ಒಂದುಗೂಡಿಸ ಬಹುದು. ಇನ್ನು ಕೆಲವೆಡೆ ಅವನ್ನು ಸದಸ್ಯರು ತಮ್ಮ ವಶದಲ್ಲಿಯೇ ಇಟ್ಟುಕೊಳ್ಳ ಬಹುದು. ಎತ್ತುಗಳನ್ನು ಒಂದುಗೂಡಿಸದೆ ಬಾಡಿಗೆಯಿಂದ ಸಾಮೂಹಿಕಬೇಸಾಯಕ್ಕೆ ಉಪಯೋಗಿಸುತ್ತಿದ್ದರೆ ಎತ್ತುಗಳ ಬಾಡಿಗೆಯ ಕೆಲಸ ತೋರಿಸಲು ಬೇರೆ ಭಾಗ ಮಾಡಬೇಕು. ಅದರಲ್ಲಿ ಸಂಬಂಧಿಸಿದ ಸದಸ್ಯನ ಹೆಸರಿನೆದುರು ಬಾಡಿಗೆಯ ಲೆಕ್ಕವನ್ನು ಹಚ್ಚಬಹುದು. ಈ ರೀತಿ ಸಂಕೋಚವಿಲ್ಲದೆ ಸದಸ್ಯರು ತಮ್ಮಲ್ಲಿ ಎತ್ತುಗಳನ್ನು ಬಾಡಿಗೆಯಾಗಿ ಕೊಡಬಹುದು. ಈ ಪ್ರತ್ಯೇಕ ಲೆಕ್ಕದ ವ್ಯವಸ್ಥೆಯಿಂದ ಉತ್ಪಾದನೆಯ ವೆಚ್ಚ ಕಂಡುಹಿಡಿಯುವುದು ಸುಲಭವಾಗುವುದು. ಸದಸ್ಯರ ಅನುಕೂಲತೆ ಹಾಗೂ ಒಪ್ಪಿಗೆಯ ಪ್ರಕಾರ ಎತ್ತುಗಳನ್ನು ಒಂದುಗೂಡಿಸುವುದಾಗಲೀ ಅಥವಾ ಅವನ್ನು ಬಾಡಿಗೆಯಿಂದ ತೆಗೆದುಕೊಳ್ಳುವುದಾಗಲೀ ಬೇಸಾಯಸಂಘದಿಂದ ನಿರ್ಧರಿಸಲ್ಪಡಬೇಕು.

ತಿಂಗಳ ಕೊನೆಗೆ ಅಧ್ಯಕ್ಷರು ಎಲ್ಲ ಲೆಕ್ಕಗಳನ್ನು ಸರಿಯಾಗಿ ಹೊಂದಿಸಿ ನೋಡ ಬೇಕು ಮತ್ತು ಅವುಗಳ ಮೇಲೆ ಸಹಿಹಾಕಬೇಕು. ಪ್ರತಿಯೊಂದು ತಿಂಗಳ ಸಭೆಯಲ್ಲಿ ವ್ಯವಸ್ಥಾಪಕ ಸಮಿತಿಯವರು ಈ ಎಲ್ಲ ಲೆಕ್ಕಗಳನ್ನು ಸ್ಪಷ್ಟವಾಗಿ ತಿಳಿಸಿ ಹೇಳಬೇಕು ಮತ್ತು ಅವರ ಮನ್ನಣೆ ಪಡೆಯಬೇಕು. ಸಾಮಾನ್ಯ ಸದಸ್ಯರಿಗೆ ಸಹ ಅವರಿಗೆ ಸಂಬಂ ಧಿಸಿದ ವ್ಯವಹಾರಗಳನ್ನು ಸಮಾಧಾನಕರವಾಗಿ ತಿಳಿಸಿ ಹೇಳಬೇಕು.

(4) ಮುಂಗಡ ರಿಜಿಸ್ಟರ್

ಅ. ಸಂ.	ಸದಸ್ಯನ ಅಥವಾ ದುಡಿಯುವವನ ಹೆಸರು	ಮುಂಗಡ ಕೊಟ್ಟ ತಾರೀಖು	ಒಟ್ಟು ಕೊಟ್ಟ ರಕಮು	ತಿಂಗಳಲ್ಲಿ ಮುಂಗಡ ಕೊಟ್ಟ ಮಾಲು

ವಿವರಣೆ

(1) ಕಾಳಿನ ರೂಪದಲ್ಲಿ ಕೊಟ್ಟ ಮುಂಗಡದ ಲೆಕ್ಕವನ್ನು ಬೇರೆಯಾಗಿ ಇಡಬೇಕು.

(2) ಆದರೆ ಕಾಳಿನ ಮುಂಗಡದ ಬೆಲೆ ಕಟ್ಟಿ ಹಣದ ಕೊಡಕೊಳ್ಳಿನ ರೂಪ ದಲ್ಲಿ ಲೆಕ್ಕ ಹಚ್ಚುತ್ತಿದ್ದರೆ ಕಾಳಿನ ಮುಂಗಡದ ಬೇರೆ ಲೆಕ್ಕ ಅಗತ್ಯವಿಲ್ಲ.

(3) ತಿಗಂಳ ಕೊನೆಗೆ ಒಟ್ಟು ದುಡಿತದ ದಿವಸಗಳ ಮುಂಗಡ ಕೊಟ್ಟಹಣ, ಕಾಳುಗಳ ಮೇಲಿನ ಲೆಕ್ಕದ ಬೇರೀಜು ಮಾಡಿಡಬೇಕು. ಅದರಿಂದ ವರ್ಷದ ಕೊನೆಯಲ್ಲಿ ಲೆಕ್ಕ ಮಾಡುವುದು ಸುಲಭವಾಗುವುದು. ತಿಂಗಳಿಗೊಮ್ಮೆ ಬೇರೆ ಪುಟದಲ್ಲಿಯೇ ಒಟ್ಟು ಲೆಕ್ಕ ತೋರಿಸುವುದು ಉತ್ತಮ.

ಬೇಸಾಯಸಂಘದ ಸದಸ್ಯರಿಗೆ ಜೀವನನಿರ್ವಾಹಕ್ಕೆ ಕೆಲವುಸಾಮಾನುಗಳು ಬೇಕಾಗುತ್ತವೆ. ನಿಯಮಿತವಾಗಿ ಅವರಿಗೆ ಸಂಬಳ ಕೊಟ್ಟರೆ ಅವರು ಅಗತ್ಯವಿದ್ದ ಸಾಮಾನುಗಳನ್ನು ಹೊರಗಿನಿಂದಾಗಲೀ, ಸಹಕಾರ ಸಂಘದಿಂದಾಗಲೀ ಕೊಂಡುಕೊಳ್ಳಬಹುದು. ಹೀಗೆ ನಿಯಮಿತವಾಗಿ ಸಂಬಳ ಕೊಡುತ್ತಿರದಿದ್ದರೆ ಸದಸ್ಯರು ದುಡಿದ ದಿವಸಗಳ ಲೆಕ್ಕದ ಪ್ರಕಾರ ಅವರಿಗೆ ಮುಂಗಡ ಕೊಡಬಹುದು. ಲೆಕ್ಕವನ್ನು ಸುಲಭ ಮಾಡುವುದಕ್ಕೋಸ್ಕರ ಕಾಳಿನ ಮುಂಗಡವನ್ನು ಸಹ ಇದ್ದ ಬೆಲೆ ಹಿಡಿದು ಹಣದ ಮುಂಗಡವಲ್ಲಿ ಪರಿವರ್ತಿಸುವುದು ಉತ್ತಮ.

ಹಣದ ಕೂಲಿ ಕೊಡದೆ ಮುಂಗಡ ಕೊಡುವ ಪದ್ಧತಿಯನ್ನೇ ಅನುಸರಿಸಿದಲ್ಲಿ ವರ್ಷದ ಕೊನೆಗೆ ಒಟ್ಟು ಆದಾಯದ ಒಂದು ಭಾಗವನ್ನು ಶ್ರಮದ ಪ್ರತಿಫಲ ಕೊಡಲು ತೆಗೆದಿಡಬಹುದು. ಅದನ್ನು ಶ್ರಮದಿವಸಗಳ ಪ್ರಕಾರ ಸದಸ್ಯರಿಗೆ ಹಂಚಬಹುದು. ಅದರಲ್ಲಿ ಮುಂಗಡ ಕೊಟ್ಟದ್ದನ್ನು ವಜಾಮಾಡಿ ಸರಿಪಡಿಸಬಹುದು. ಈ ಪದ್ಧತಿಯಲ್ಲಿ ಒಂದು ಅನುಕೂಲತೆ ಇದೆ. ಹೆಚ್ಚು ದುಡಿದವನಿಗೆ ಹೆಚ್ಚು ಪ್ರತಿಫಲ ದೊರಕುತ್ತದೆ ಅಥವಾ ಅವನ ಹೆಸರಿನಲ್ಲಿ ಠೇವಣಿಯಾಗಿ ಜಮಾ ಇರಿಸಲಾಗುತ್ತದೆ.

ಸದಸ್ಯರ ಅನುಕೂಲತೆಯ ಪ್ರಕಾರ ಬೇಸಾಯ ಸಂಘವು ಹಣದ ಕೂಲಿ ಕೊಡುವ ಅಥವಾ ಮುಂಗಡ ಕೊಡುವ ಪದ್ಧತಿ ಅನುಸರಿಸಲು ಅವಕಾಶವಿರಬೇಕು. ಮುಂಗಡ ಪದ್ಧತಿಯಲ್ಲಿ ದುಡಿತ ಪ್ರತಿಫಲದ ನಡುವೆ ನೇರಸಂಬಂಧವಿರುವುದಷ್ಟೇ ಅಲ್ಲ ಸಂಘದ ಉತ್ಪಾದನೆ ಹಾಗೂ ಪ್ರತಿಫಲದ ನಡುವೆಯೂ ನೇರಸಂಬಂಧವಿರುತ್ತದೆ. ಸಂಘದ ಉತ್ಪತ್ತಿ, ಆದಾಯಗಳು ಹೆಚ್ಚಿದಂತೆ ಸದಸ್ಯರ ವೈಯಕ್ತಿಕ ಆದಾಯವೂ ಹೆಚ್ಚುತ್ತದೆ. ಆಗ ಸದಸ್ಯರಿಗೆ ಸಂಘದ ಉತ್ಪಾದನೆಯಲ್ಲಿ ನೇರ ಆಸ್ಥೆ ಇರುತ್ತದೆ. ಅದನ್ನು ಪರಮಾವಧಿ ಹೆಚ್ಚಿಸಲು ಅವರು ಹೆಚ್ಚೆಚ್ಚು ದುಡಿಯುತ್ತಾರೆ. ಇದಕ್ಕೆ ವಿಪರೀತವಾಗಿ ಕೂಲಿಯ ಪದ್ಧತಿಯಲ್ಲಿ ಕೂಲಿಯವನು ತಕ್ಷಣ ತನಗೆ ಬರುವ ಕೂಲಿಯಲ್ಲಿ ಮಾತ್ರ ಆಸ್ಥೆಯುಳ್ಳವ ಮತ್ತು ಸಂಘದ ಒಟ್ಟು ಉತ್ಪತ್ತಿಯಬಗ್ಗೆ ಸಾಮಾನ್ಯವಾಗಿ ಉದಾಸೀನ. ಇಷ್ಟಾದರೂ ಕೆಲವು ಸಂಘಗಳಲ್ಲಿ ಸದಸ್ಯರು ಪರಂಪರಾಗತವಾಗಿ ಕೂಲಿಯವರೇ ಇರುತ್ತಾರೆ. ಅವರು ನಿರ್ಗತಿಕರಾಗಿದ್ದು ಕೂಲಿಇಲ್ಲದೆ ದಿನದ ಚರಿತಾರ್ಥವೇ ನಡೆಯುವುದಿಲ್ಲ. ಇಂಥ ಪರಿಸ್ಥಿತಿಗಳಲ್ಲಿ ಸದಸ್ಯರಿಗೆ ತಿಳಿಸಿ, ಮನವರಿಕೆ ಮಾಡದೆ, ಅನುಕೂಲತೆಯನ್ನು ಮಾಡಿಕೊಡದೆ ಒತ್ತಾಯದಿಂದ ಮುಂಗಡ ಪದ್ಧತಿಯನ್ನು ಹೇರಿದರೆ ಅದರಿಂದ ಅವರು ನಿರುತ್ಸಾಹರಾಗುತ್ತಾರೆ. ಇದರಿಂದ ಉತ್ಪಾದನೆಯ ಪ್ರಗತಿಗೆ ಧಕ್ಕೆ ತಟ್ಟುತ್ತದೆ.

(5) ಖಾತೆ ಪುಸ್ತಕ

ಖಾತೆ ನಂ............ ಖಾತೆಯ ಹೆಸರು...................

ತಾರೀಖು	ಕಿರ್ದಿಪಾನು	ಜಮಾ ರಕಮು	ಖರ್ಚಿನ ರಕಮು	ಪ್ರತಿ ವ್ಯವಹಾರದ ನಂತರ ಬಾಕಿ

ವಿವರಣೆ

ಈ ರಿಜಿಸ್ಟರಲ್ಲಿ ಬೇರೆಬೇರೆ ಖಾತೆಗಳ ವ್ಯವಹಾರದ ಒಟ್ಟು ಬಾಕಿಗಳು ಇರುತ್ತವೆ. ಕಿರ್ದಿಯಲ್ಲಿ ಜಮಾ ಅಥವಾ ಖರ್ಚುಬಿದ್ದ ಪ್ರತಿಯೊಂದು ವ್ಯವಹಾರವನ್ನು ಖಾತೆ ಪುಸ್ತಕದಲ್ಲಿ ಆಗಾಗ್ಗೆ ಸರಿಯಾಗಿ ಹಚ್ಚಬೇಕು. ಬೇರೆಬೇರೆ ಖಾತೆಗಳಿಗೆ ಬೇರೆ ಬೇರೆ ಪುಟಗಳ ವ್ಯವಸ್ಥೆ ಇರಬೇಕು. ದೊಡ್ಡ ಖಾತೆಗಳಿದ್ದರೆ ಅದರ ಉಪಖಾತೆಗಳನ್ನಾಗಿ ವಿಂಗಡಿಸಬಹುದು.

ತಿಂಗಳ ಕೊನೆಯಲ್ಲಿ ಪ್ರತಿಯೊಂದು ಖಾತೆಯ ಬೇರೀಜು ಮಾಡಿ ಬಾಕಿ ಸರಿಪಡಿಸಬೇಕು. ತಾತ್ಪೂರ್ತಿಕವಾಗಿ ಖಾತೆಯ ಆಧಾರದ ಮೇಲೆ ಜಮಾ ಖರ್ಚಿನ, ಲಾಭಹಾನಿಯ ಹಾಗೂ ಅಢಾವೆಯ ಪತ್ರಿಕೆಗಳನ್ನು ಹಾಕಿಸಬೇಕು.

ಸರಿಯಾಗಿ ಯೋಚಿಸಿ ಖಾತೆಗಳನ್ನು ನಿರ್ಧರಿಸಬೇಕು. ಆಗಾಗ ಭ್ರಮೆಯಿಂದ ಆದಾಯ ವೆಚ್ಚಗಳಲ್ಲಿ ಬರುವ ಲೆಕ್ಕಗಳನ್ನು ಬಂಡವಾಳಿನಲ್ಲಿ ಸೇರುವ ಲೆಕ್ಕಗಳಲ್ಲಿ ಸೇರಿಸಲಾಗುತ್ತದೆ. ಅದರಿಂದ ಬೇಸಾಯಸಂಘದ ಆರ್ಥಿಕ ಸ್ಥಿತಿಯನ್ನು ತಪ್ಪಾಗಿ ತೋರಿಸಲಾಗುತ್ತದೆ. ಉದಾಹರಣೆಗೆ ದುಡಿವ ಸದಸ್ಯರ ಹಾಗೂ ಸದಸ್ಯೇತರರ ಎಲ್ಲ ಕೂಲಿಯನ್ನೂ ಒಂದೇ ಬಗೆಯ ವೆಚ್ಚವೆಂದು ಗಣಿಸಲಾಗುತ್ತದೆ; ಇದು ತಪ್ಪು ಲೆಕ್ಕ. ಬೇಸಾಯದ ಕೆಲಸಗಳಿಗಾಗಿ ಆದ ವೆಚ್ಚ, ಉತ್ಪಾದನೆಯವೆಚ್ಚಗಳನ್ನು ಆದಾಯವೆಚ್ಚಗಳ ಪತ್ರಿಕೆಯಲ್ಲಿ ಸೇರಿಸಬೇಕು. ಆದರೆ ಒಡ್ಡು, ಬಾವಿ ಮುಂತಾದ ಸುಧಾರಣೆಗಳ ಕೆಲಸಗಳಲ್ಲಿ ಆದ ಕೂಲಿಯ ವೆಚ್ಚವನ್ನು ಆಸ್ತಿಯನ್ನಾಗಿ ತೋರಿಸಬೇಕು. ಅದರಂತೆ ಚಾಲೂ ವರ್ಷದ ಬೇಸಾಯಕ್ಕೆ ಬೇಕಾಗುವ ಬೀಜ, ಗೊಬ್ಬರ, ಕ್ರಿಮಿನಾಶಕ ಮುಂತಾದವುಗಳ ವೆಚ್ಚ ಆದಾಯ–ವೆಚ್ಚಗಳ ಪತ್ರಿಕೆಯಲ್ಲಿ ಸೇರುತ್ತದೆ. ಆದರೆ ಇವೇ ಬಾಬುಗಳ ವೆಚ್ಚಗಳು ಮುಂದಿನ ವರ್ಷದ ಬಾಬುಗಳಿಗಾಗಿದ್ದರೆ ಅವನ್ನು ಆದಾಯ-ವೆಚ್ಚಗಳ ಪತ್ರಿಕೆಯಲ್ಲಿ ಸೇರಿಸದೆ, ಅವು ಮುಂದಿನ ಬೆಳೆಯಲ್ಲಿ ತೊಡಗಿದ ಬಂಡವಲು ಎಂದು ಗಣಿಸಿ, ಆಸ್ತಿ–ಪತ್ರಿಕೆಯಲ್ಲಿ ಸೇರಿಸಬೇಕು. ಸಾಮಾನ್ಯವಾಗಿ ತಪ್ಪು ತಿಳಿವಳಿಕೆಯಿಂದ ಒಕ್ಕಲುತನದ ಎಲ್ಲ ವೆಚ್ಚಗಳನ್ನು ಹಾನಿಯೆಂದು ಗಣಿಸಲಾಗುತ್ತದೆ. ಸರಿಯಾದುದೆಂದರೆ ವರ್ಷದ ಕೊನೆಯಲ್ಲಿ ಎಲ್ಲ ಬೆಳೆಗಳ ಒಕ್ಕಣೆ ಅದಬಳಿಕ ಆ ಆದಾಯವನ್ನು ಜಮಾಹಿಡಿದು, ವೆಚ್ಚಗಳನ್ನು ಖರ್ಚುಹಾಕಿ, ಕೊರತೆಯನ್ನು ಹಾನಿಯೆಂದು ಹಿಡಿಯಬಹುದು. ಈ ರೀತಿ ಲೆಕ್ಕ ಮಾಡುವುದರಿಂದ ಬೇಸಾಯಸಂಘದ ಸರಿಯಾದ ಆರ್ಥಿಕಸ್ಥಿತಿಯು ಗೊತ್ತಾಗುತ್ತದೆ. ಅದರಲ್ಲಿ ತಪ್ಪಾಗಿ ಹಾನಿಯನ್ನು ಹೆಚ್ಚುಕಡಮೆ ಮಾಡಲಾಗುವುದಿಲ್ಲ.

(6) ಸದಸ್ಯರ ರಿಜಿಸ್ಟರ್

(ಅ) ರಿಜಿಸ್ಟರ್

ಅ. ಸಂ.	ಪ್ರವೇಶದ ತಾರೀಖು	ಸದಸ್ಯರ ಹೆಸರು	ವಯಸ್ಸು	ವಾಸಸ್ಥಳ	ಉದ್ಯೋಗ	ವಾರಸುದಾರರ ಹೆಸರು	ಸದಸ್ಯರ ಸಹಿ	ಸದಸ್ಯತ್ವದ ಮುಕ್ತಾಯ	
								ತಾರೀಖು	ಕಾರಣ

(ಆ) ರಿಜಿಸ್ಟರ್

ತಾರೀಖು	ತೆಗದುಕೊಂಡ ಶೇರುಗಳ ಸಂಖ್ಯೆ	ಪಡೆದ ಹಣ	ವಾಪಸು ಕೊಟ್ಟ ಹಣ	ಹಂಚಿದ ಲಾಭ

ವಿವರಣೆ

ಭೂಮಿಯನ್ನು ಒಂದುಗೂಡಿಸಿದ ಸದಸ್ಯರಿಗೋಸುಗ ಹಾಗೂ ಭೂರಹಿತ ಕೂಲಿಕಾರರಿಗೋಸುಗ ಮತ್ತು ಕೈಗಾರಿಕೆಯುವರಿಗೋಸಗ ಪ್ರತ್ಯೇಕಭಾಗಗಳನ್ನು ಮಾಡಬೇಕು.

ಈ ರಿಜಿಸ್ಟರು ಸಾಮಾನ್ಯವಾಗಿ ಹಳ್ಳಿಯಲ್ಲಿಯ ಬೇರೆ ಸೇವಾ ಸಹಕಾರಿಸಂಘಗಳಲ್ಲಿ ಇದ್ದಂತೆಯೇ ಇರುತ್ತದೆ. ಬೇಸಾಯಸಂಘದಲ್ಲಿ (1) ಭೂಮಿಯನ್ನು ಕೂಡಿಸಿದ ಸದಸ್ಯರು ಮತ್ತು (2) ಭೂಮಿ ಇಲ್ಲದ ಕೂಲಿಕಾರರು ಮತ್ತು ಕೈಗಾರಿಕೆಯುವರು ಹೀಗೆ ಎರಡು ವಿಧದ ಸದಸ್ಯರಿರುತ್ತಾರೆ. ಈ ಇಬ್ಬರೂ ಸದಸ್ಯರ ಹಕ್ಕುಬಾಧ್ಯತೆಗಳು ಸಮನಾಗಿದ್ದರೂ. ಅವರ ಸಾಲಸೋಲಗಳು ಮತ್ತು ಆಸ್ತಿ-ಪಾಸ್ತಿಗಳು ಭಿನ್ನವಾಗಿರುತ್ತವೆ. ಭೂಮಿಯನ್ನು. ಬೇರೆ ಸಾಧನಗಳನ್ನು ಒಂದುಗೂಡಿಸುವ ಸದಸ್ಯನಿಗೆ ಸಂಘದ ಭಾರ ಹಾಗೂ ಲಾಭದ ಪಾಲು ಹೆಚ್ಚಿಗೆ ಇರುತ್ತದೆ. ಇಂಥ ಒಂದುಗೂಡಿಸಿದ ಆಸ್ತಿಗೆ ಪ್ರತಿಯಾಗಿ ಯೋಗ್ಯಪ್ರತಿಫಲವೂ ಅವನಿಗೆ ದೊರಕುವುದು. ಭೂಮಿಹೀನ ಕೂಲಿಕಾರ ಅಥವಾ ಕೈಗಾರಿಕೆಯ ಸದಸ್ಯನಿಗೆ ಇಂಥ ಆಸ್ತಿ ಇರುವುದಿಲ್ಲ. ಆದ್ದರಿಂದ ಆಸ್ತಿಯ ಪ್ರತಿಫಲವೂ ಅವನಿಗೆ ದೊರಕದು.

ಮೇಲೆ ಹೇಳಿದಂತೆ ಸದಸ್ಯರ ವಿಂಗಡಣೆ ಇದೇ ಕಾರಣದಿಂದ ಮಾಡಬೇಕು. ಈ ವಿಂಗಡಣೆಯಿಂದ ಬೇಸಾಯಸಂಘದ ಆರ್ಥಿಕ, ಸಾಮಾಜಿಕ ಭದ್ರತೆ ಅಥವಾ ದುರ್ಬಲತೆಯೂ ಸ್ಪಷ್ಟವಾಗುವುದು. ಒಂದುಗೂಡಿಸಿದ ಸಾಧನಗಳು ಹೆಚ್ಚಿಗೆ ಇದ್ದಷ್ಟು ಸಂಘದ ಆರ್ಥಿಕ ದೃಢತೆ ಹೆಚ್ಚಾಗುವುದು. ಅದರಂತೆ ಭೂಹೀನ ಸದಸ್ಯರು, ಭೂಮಿಯುಳ್ಳ ಸದಸ್ಯರು ಇವರು ತುಲನಾತ್ಮಕ ಸಂಖ್ಯೆ ಹಾಗೂ ಇವರ ಆಸ್ತಿಗಳ ತುಲನಾತ್ಮಕ

ಪ್ರಮಾಣಗಳಿಂದ ಅವರವರ ಪರಸ್ಪರ ಸಂಬಂಧ ಹಾಗೂ ಸಂಘದ ಸಾಮಾಜಿಕ ಐಕ್ಯಗಳು ಸಹ ವ್ಯಕ್ತವಾಗುತ್ತವೆ. ಈ ಸಂಬಂಧಗಳಲ್ಲಿ ಕಡಮೆ ವ್ಯತ್ಯಾಸವಿದ್ದಷ್ಟೂ ಸಂಘದ ಒಗ್ಗಟ್ಟು, ಸ್ಥಿರತೆಗಳು ಸಾಧಿಸುತ್ತವೆ.

(7) ಭೂಮಿ ಮತ್ತು ಹೈಸಿಯತ್ ರಿಜಿಸ್ಟರ್ ಒಂದುಗೂಡಿಸುವ ಸಾಧನಗಳು

ಸದಸ್ಯನ ಹೆಸರು:—

(ಅ) ಭೂಮಿ

ಗ್ರಾಮ	ಸರ್ವೇ ನಂ.	ಕ್ಷೇತ್ರ ಎ.ಗು	ಕಂದಾಯ	ಒಂದುಗೂಡಿಸಿದ ತಾರೀಖು	ಒಂದುಗೂಡಿಸಿದ ಅವಧಿ	ಒಂದುಗೂಡಿಸುವಾಗ್ಗೆ ಬೆಲೆ	ಮಾಡಿದ ಸುಧಾರಣೆ		ಹೆಚ್ಚಿದ ಭೂಮಿಯ ಬೆಲೆ	ಒಡೆತನದ ಪ್ರತಿಫಲ	ಶರಾ
							ಪ್ರಕಾರ	ಬೆಲೆ			

(ಆ) ಬೇರೆ ಸಾಧನಗಳು

ಎತ್ತುಗಳು		ಬೇರೆ ದನಗಳು		ವ್ಯವಸಾಯದ ಸಲಕರಣೆಗಳು		ಬಾಡಿಗೆಯ ಪ್ರತಿಫಲ
ಸಂಖ್ಯೆ	ಬೆಲೆ	ಸಂಖ್ಯೆ	ಬೆಲೆ	ಪ್ರಕಾರ	ಬೆಲೆ	

(ಇ) ಒಂದುಗೂಡಿಸಿದ ಆಸ್ತಿಗಳು

ಗ್ರಾಮ	ಕ್ಷೇತ್ರ	ಭೂಮಿ		ಇತರ ಸಾಧನಗಳು					
	ಎ.ಗು	ಕಂದಾಯ	ಬೆಲೆ	ಎತ್ತುಗಳು		ಬೇರೆ ದನಗಳು		ಸಲಕರಣೆಗಳು	
				ಸಂಖ್ಯೆ	ಬೆಲೆ	ಸಂಖ್ಯೆ	ಬೆಲೆ	ಪ್ರಕಾರ	ಬೆಲೆ

ವಿವರಣೆ

ಸರಕಾರದಿಂದ ಅಥವಾ ಬೇರೆಯವರಿಂದ ಲಾವಣಿ ತೆಗೆಕೊಂಡ ಭೂಮಿಗಳಿಗೆ

ಮತ್ತು ಸದಸ್ಯರಿಂದ ಒಂದುಗೂಡಿಸಲ್ಪಟ್ಟ ಭೂಮಿಗಳಿಗೆ ಬೇರೆ ಭಾಗಗಳನ್ನು ಮಾಡಬೇಕು.

ಇದೊಂದು ಬಹಳ ಮಹತ್ವದ ರಿಜಿಸ್ಟರು. ಇದನ್ನು ಆಗಾಗ್ಗೆ ನಿಯಮಿತವಾಗಿ ಬರೆಯಬೇಕು. ಇದರಲ್ಲಿ ಸರಕಾರದಿಂದ ಅಥವಾ ಬೇರೆಯವರಿಂದ ಲಾವಣಿ ಪಡೆದ ಭೂಮಿಗಳ ವಿವರ ಮತ್ತು ಸದಸ್ಯರು ಒಂದುಗೂಡಿಸಿದ ಭೂಮಿಗಳ ವಿವರಗಳು ಇರುತ್ತವೆ. ಲಾವಣಿ ತೆಗೆದುಕೊಂಡ ಭೂಮಿ ಇದ್ದರೆ ಅದರಲ್ಲಿ ಭೂಮಿಯ ಲಾವಣಿ ಕೊಟ್ಟಿದ್ದನ್ನು ಕಾಣಿಸಬೇಕು. ಈ ಲಾವಣಿಯ ಹಣ ಪ್ರಚಲಿತ ಭೂಕಾಯಿದೆಯಲ್ಲಿಯ ಲಾವಣಿಯ ಮಿತಿಗಿಂತ ಹೆಚ್ಚಿಗೆ ಇರಕೂಡದು. ಲಾವಣಿಯ ಭೂಮಿ ಹಾಗೂ ಒಂದುಗೂಡಿಸಿದ ಭೂಮಿಗಳ ಪ್ರಮಾಣವೂ ಸರಿಯಾಗಿರಬೇಕು. ಅಂದರೆ ಮಾತ್ರ ಬೇಸಾಯಸಂಘವು ತಾತ್ವಿಕವಾಗಿ ನಡೆಯುತ್ತದೆ. ಇಲ್ಲದಿದ್ದರೆ ದೊಡ್ಡದೊಡ್ಡ ಭೂ ಮಾಲಿಕರು ಅದರ ಶೋಷಣೆ ಮಾಡುವ ಸಂಭವ ಹೆಚ್ಚು. ಒಂದುಗೂಡಿಸಿದ ಭೂಮಿ ಇದ್ದಲ್ಲಿ ಸಹ ದೊಡ್ಡ ಭೂ ಒಡೆಯರು, ಚಿಕ್ಕ ಒಡೆಯರು ಹಾಗೂ ಭೂಹೀನರು ಇವರ ವಿವರಗಳಿಂದ ಅವರ ಅನುಪಾತವು ಸ್ಪಷ್ಟವಾಗಬೇಕು. ಸಂಘದ ಆಡಳಿತದ ಮೇಲೆ ಒಬ್ಬಿಬ್ಬ ದೊಡ್ಡ ಭೂ ಮಾಲಿಕರ ಪ್ರಭುತ್ವವಿರದೆ ಚಿಕ್ಕ ಭೂಒಡೆಯರ ಗುಂಪಿನ ಪ್ರಭುತ್ವ ಇದ್ದರೆ ಸಂಘದಿಂದ ಚಿಕ್ಕ ಬೇಸಾಯಗಾರರಿಗೆ, ನಿಜವಾದ ಭೂಉಳುಮೆ ಗಾರರಿಗೆ ಲಾಭ ಮುಟ್ಟುತ್ತವೆ. ಅದರಂತೆ ಭೂಮಿಯ ಪ್ರತಿಫಲ, ಭೂಮಿಯ ಹೆಚ್ಚಿನ ಲಾಭಗಳು, ಶ್ರಮದ ಪ್ರತಿಫಲ, ಶ್ರಮದ ಲಾಭಗಳಿಗಿಂತ ಬಹು ಹೆಚ್ಚಿಗಿದ್ದರೆ ಶ್ರಮಕ್ಕೆ ಪ್ರೋತ್ಸಾಹ ದೊರಕದು. ಈ ವಿತರಣೆಯಿಂದ ದುಡಿಮೆಗಾರರ ಶ್ರಮಕ್ಕೆ ಪ್ರೋತ್ಸಾಹ ದೊರಕಲೇ ಬೇಕು. ಅದರಿಂದ ಅವರ ಉತ್ಸಾಹವು ಹೆಚ್ಚುತ್ತದೆ. ಆದ್ದ ರಿಂದ ಭೂಮಿಯ ಪ್ರತಿಫಲವು ಭೂಕಾಯಿದೆಯ ಮಿತಿಯನ್ನು ಮೀರದಂತೆ ನೋಡಿ ಕೊಳ್ಳಬೇಕು.

ಹೈಸಿಯತ್ ರಿಜಿಸ್ಟರಲ್ಲಿ ಎತ್ತು, ದನಗಳೇ ಮೊದಲಾದ ಬೇರೆ ಒಂದುಗೂಡಿಸಿದ ಸಾಧನಗಳ ವಿವರಸಿಗುತ್ತವೆ. ಈ ಸಾಧನಗಳನ್ನು ಸರಿಯಾಗಿ ಬೆಲೆಕಟ್ಟಿ ನೇರವಾಗಿ ಸಂಘವು ಕೊಂಡುಕೊಂಡರೆ, ಈ ಭಾಗವು ಅನಗತ್ಯವಾಗುತ್ತದೆ. ಇಲ್ಲದಿದ್ದರೆ ಈ ಸಾಧನಗಳನ್ನು ಯೋಗ್ಯದರದಿಂದ ಬಾಡಿಗೆಯಾಗಿ ತೆಗೆಕೊಂಡು ಉಪಯೋಗಿಸಬಹುದು. ಈ ಭಾಗದಲ್ಲಿಯ ವಿವಿರಗಳಿಂದ ಬಾಡಿಗೆಯ ದರ ಉಚಿತವಾಗಿದೆಯೋ ಇಲ್ಲವೇ ಎಂಬುದು ಗೊತ್ತಾಗುತ್ತದೆ. ಕೆಲವೊಂದು ಜನರು ಅಥವಾ ಸದಸ್ಯರು ಅನುಚಿತ ಬಾಡಿಗೆ ತೆಗೆದುಕೊಂಡು ಸಂಘದ ಶೋಷಣೆ ಮಾಡದಂತೆ ದಕ್ಷತೆ ವಹಿಸಬೇಕು. ಈ ರಿಜಿ ಸ್ಟರದಿಂದ ಸದಸ್ಯರು ತಮ್ಮ ಸಾಧನಗಳನ್ನು ಒಂದುಗೂಡಿಸುವುದು ಲಾಭದಾಯಕವೋ ಅಥವಾ ಬಾಡಿಗೆಯಾಗಿ ಕೊಡುವುದು ಲಾಭದಾಯಕವೋ ಎಂಬುದು ಸ್ಪಷ್ಟವಾಗುತ್ತದೆ. ಸದಸ್ಯರು ತಮ್ಮವೇ ಸಾಧನಗಳನ್ನು ಕೂಡಿಸುವುದರಿಂದ ಅವರ ಬಂಡವಾಲಿನ ಶಕ್ತಿಯು ಉಳಿತಾಯವಾಗುತ್ತದೆ. ಹೊರಗಿನಿಂದ ಬೇಕಾಗುವ ಸಾಲದ ಅವಶ್ಯಕತೆಯೂ ಕಡಮೆ ಯಾಗುತ್ತದೆ. ಈ ರಿಜಿಸ್ಟರದಿಂದ ಬೇಸಾಯಸಂಘಕ್ಕೆ ಬಂಡವಾಲಿನ ಅಗತ್ಯ ಎಷ್ಟು ಎಂಬುದೂ ಸ್ಪಷ್ಟವಾಗುತ್ತದೆ.

ಸದಸ್ಯರು ತಾವು ಒಂದುಗೂಡಿಸದೇ ಇಟ್ಟ ಸಾಧನಗಳ ಚಿತ್ರವು ಇದಕ್ಕಾಗಿ ಇಟ್ಟ ರಿಜಿಸ್ಟರ್‌ನಿಂದ ತೋರಿಬರುತ್ತದೆ. ಒಂದುಗೂಡಿಸದ ಸಾಧನಗಳು ಒಂದುಗೂಡಿಸಿದ ಸಾಧನಗಳಿಗಿಂತ ಅತಿ ಹೆಚ್ಚಾಗಿದ್ದರೆ ಬೇಸಾಯಸಂಘವನ್ನು ಮಳಲಿನ ತಳಹದಿಯ ಮೇಲೆ ಕಟ್ಟಿದೆ ಎಂದು ಹೇಳಬಹುದು. ಸದಸ್ಯರ ಶ್ರಮಸಾಧನಗಳನ್ನೆಲ್ಲ ಒಂದುಗೂಡಿಸಿ ಅವುಗಳ ಶಕ್ತಿಯನ್ನು ಹೆಚ್ಚಿಸುವುದೇ ಸಹಕಾರಿ ಬೇಸಾಯದ ಮುಖ್ಯತತ್ವ. ಸಂಘದ ಸದಸ್ಯರು ತಮ್ಮ ಸಾಧನಗಳನ್ನು ಒಂದುಗೂಡಿಸದೆ ಹೊರಗಿನ ಸಾಲ ಸಹಾಯಗಳ ಮೇಲೆ ಕೈಯೂರಿದರೆ ಸಂಘವು ಆರ್ಥಿಕ ತೊಂದರೆಗಳನ್ನು ಎದುರಿಸಿ ಬಿಕ್ಕಟ್ಟಿಗೀಡಾಗಬಹುದು. ಅದರಂತೆ ಸದಸ್ಯರು ತಮ್ಮ ಹೆಚ್ಚಿನ ಭಾಗ ಹಾಗೂ ಫಲವತ್ತಾದ ಭೂಮಿಯನ್ನು ಹೊರಗೆ ಇಟ್ಟುಕೊಂಡರೆ ಅವರ ಆಸ್ಥೆಯೆಲ್ಲ ಹೊರಗೇ ಇರುತ್ತದೆ. ಅದರಿಂದ ಸಂಘದ ಹಿತಕ್ಕೆ ಧಕ್ಕೆ ತಗುಲುವುದು. ಈ ರಿಜಿಸ್ಟರದ ಮಾಹಿತಿಯಿಂದ ಸದಸ್ಯರು ತಮ್ಮ ಸಾಧನಗಳನ್ನು ಒಂದುಗೂಡಿಸದಿದ್ದರೆ ಎಷ್ಟು ಅನುಕೂಲವಾಗುತ್ತದೆಂಬುದು ಸ್ಪಷ್ಟವಾಗುತ್ತದೆ ಮತ್ತು ಅಂಥ ಸಾಧನಗಳನ್ನು ಒಂದುಗೂಡಿಸಲು ಸದಸ್ಯರಿಗೆ ಇದು ಮನವೊಲಿಸುತ್ತದೆ.

(8) ಸಭೆಯ ಕಾರ್ಯಕಲಾಪಗಳ ಪುಸ್ತಕ

ಸಭೆಯ ತಾರೀಖು ಸ್ಥಳ :

ಹಾಜರಿದ್ದ ಸದಸ್ಯರು

1........................

2........................

3 ....

ಪಾಸಾದ ಗೊತ್ತುವಳಿಗಳು

ಅ. ಸಂಖ್ಯೆ	ಗೊತ್ತುವಳಿಯ ವಿಷಯ	ಗೊತ್ತುವಳಿಯ ವಿವರ ಅಧ್ಯಕ್ಷರ ಹಾಗೂ ಸದಸ್ಯರ ಸಹಿಗಳು	ಅಗತ್ಯಬಿದ್ದ ಕೈಕೊಂಡಕ್ರಮ

ವಿವರಣೆ: ವ್ಯವಸ್ಥಾಪಕ ಸಮಿತಿಯ ಸಭೆಗಳಿಗೆ ಹಾಗೂ ಸಾಧಾರಣ ಸಭೆಗಳಿಗೆ ಬೇರೆ ಭಾಗಗಳನ್ನು ಅಥವಾ ರಿಜಿಸ್ಟರುಗಳನ್ನು ಇಡಬೇಕು. ಸಭೆಯು ನಡೆದ ಕಾಲಕ್ಕೆ ಸದಸ್ಯರ ಸಮ್ಮುಖದಲ್ಲಿಯೇ ಸಭೆಯ ಕಾರ್ಯಕಲಾಪಗಳನ್ನು ಸಮರ್ಪಕವಾಗಿ ಬರೆಯಬೇಕು. ಬರೆದ ಕಾರ್ಯಕಲಾಪಗಳನ್ನು ಓದಿ, ಸಭಾಧ್ಯಕ್ಷರ ಹಾಗೂ ಸದಸ್ಯರ ಸಹಿ ಹಾಕಿಸಬೇಕು. ಸದಸ್ಯರ ಗೈರುಹಾಜರಿಯಲ್ಲಿ ಕಾರ್ಯಕಲಾಪಗಳನ್ನು ಬರೆದು

ಅಜ್ಞಾ ಸದಸ್ಯರ ಸಹಿಗಳನ್ನು ಹಿಂದಿನಿಂದ ಹಾಕಿಸಿಕೊಳ್ಳುವುದು ಸರಿಯಲ್ಲ. ಸಂಘದ ಹಿತಕ್ಕೆ ಅದರಿಂದ ಧಕ್ಕೆ ಉಂಟು. ಬೇಸಾಯಸಂಘದ ಸಭೆಗಳ ಕಾರ್ಯಕಲಾಪಗಳು ಸಂಘದ ಸದಸ್ಯರಲ್ಲಿ ಸಂಘದ ಬಗ್ಗೆ ಹೆಚ್ಚು ತಿಳಿವಳಿಕೆ ತುಂಬುವ ಹಾಗೂ ಅದರ ಬಗ್ಗೆ ಅವರಲ್ಲಿ ನಿಷ್ಠೆ ಬೆಳೆಸುವ ಸಾಧನ. ಪ್ರತಿಯೊಂದು ಸಭೆಯಲ್ಲಿ ಹಿಂದಿನ ಸಭೆಯ ಕಾರ್ಯಕಲಾಪಗಳ ಮೇಲೆ ಕೈಕೊಂಡ ಕ್ರಮಗಳನ್ನು ವಿಚಾರಿಸಬೇಕು. ಇದರಿಂದ ಸದಸ್ಯರಲ್ಲಿ ಹೆಚ್ಚೆಚ್ಚು ಸಹಕಾರಿ ಜಾಗೃತಿ, ಒಗಟ್ಟು. ಉತ್ಸಾಹ ಹೆಚ್ಚಿ ಸಂಘದ ಎಲ್ಲ ಕೆಲಸಗಳು ಪ್ರಗತಿ ಶೀಲವಾಗಿ ನಡೆಯುತ್ತವೆ.

(9) ಸುಧಾರಣೆಗಳ ರಿಜಿಸ್ಟರ್

ರೆ.ಸ.ನಂ.................. ಕ್ಷೇತ್ರ....................

ಒಡೆಯರಾದ ಸದಸ್ಯರ ಹೆಸರು

ಅ. ಸಂ.	ವಿವರಗಳು	ಅಳತೆ ಅಥವಾ ವಿಸ್ತೀರ್ಣ	ಸುಧಾರಣೆಯ ಬೆಲೆ	ಸುಧಾರಣೆಯಿಂದ ಹೆಚ್ಚಾದ ಭೂಮಿಯ ಬೆಲೆ

ವಿವರಣೆ : ಯಾವುದೇ ಬೇಸಾಯಸಂಘದಲ್ಲಿಪಡ ಭೂಮಿಯ ಸುಧಾರಣೆ ಅಥವಾ ಬೆಳೆಯ ಸುಧಾರಣೆಗೆ ಆದ ವೆಚ್ಚಗಳಿಂದ ಭೂಮಿಯ ಬೆಲೆಯೂ ಹೆಚ್ಚುತ್ತ ದೆಂಬುದನ್ನು ಗಮನಿಸಬೇಕು. ಇಂಥ ವೆಚ್ಚಗಳನ್ನು 'ಆದಾಯ ವೆಚ್ಚದ. ಪತ್ರಿಕೆ' ಯಲ್ಲಿ ಸೇರಿಸಕೂಡದು. ಅವುಗಳನ್ನು ಭೂ ಅಭಿವೃದ್ಧಿ ನಿಧಿ ಹೆಚ್ಚಿಸಲು ಉಪಯೋಗಿಸ ಬೇಕು. ಇಂಥ ವೆಚ್ಚಗಳನ್ನು ಬಂಡವಲನ್ನಾಗಿ ಗಣಿಸಬೇಕು. ಅಭಿವೃದ್ಧಿ ರಿಜಿಸ್ಟರಲ್ಲಿ ವೈಯಕ್ತಿಕ ಸದಸ್ಯರ ಹೆಸರಿನಲ್ಲಿ ಅವರಿಗೆ ಸಂಬಂಧಿಸಿದ ಭೂಮಿಯ ಸುಧಾರಣೆಯ ಬಂಡವಲನ್ನು ತೋರಿಸಬೇಕು.

ಮೇಲಿನ ಮುಖ್ಯ ರಿಜಿಸ್ಟರುಗಳಲ್ಲದೆ ಕ್ರಮೇಣವಾಗಿ ಸಂಘದ ವ್ಯವಹಾರಗಳು ಬೆಳೆದಂತೆ ಇನ್ನೂ ಕೆಲವು ಮಹತ್ವದ ರಿಜಿಸ್ಟರುಗಳನ್ನು ಬೇಸಾಯಸಂಘವು ಇಡ ಬಹುದು. ಅವುಗಳಲ್ಲಿ ಮುಖ್ಯವಾದ ಬೆಳೆ ಉತ್ಪಾದನೆಯ ರಿಜಿಸ್ಟರಿನ ನಮೂನೆಯನ್ನು ಮುಂದೆ ಕೊಡಲಾಗಿದೆ.

ಈ ರಿಜಿಸ್ಟರಲ್ಲಿ ಪರಿಸ್ಥಿತಿಗನುಸರಿಸಿ, ಅವಶ್ಯಕತೆಗನುಸರಿಸಿ, ಬದಲಾವಣೆಗಳನ್ನು ಸುಲಭವಾಗಿ ಮಾಡಬಹುದು.

(10) ಬೆಳೆ ಉತ್ಪಾದನೆಯ ರಿಜಿಸ್ಟರ್

(ಸಾಮೂಹಿಕ ಹಾಗೂ ಸಾಮುದಾಯಕ ಸಂಘಗಳಿಗಾಗಿ ಮಾತ್ರ)

ಬೆಳೆಯ ಹೆಸರು — ಮುಂಗಾರು ಬಣ/ಮುಂಗಾರಿ ತರಿ/ಹಿಂಗಾರಿ ಬಣ/ಹಿಂಗಾರಿ ತರಿ/ವಾರ್ಷಿಕ

(ಅ) ಸಂಕ್ಷಿಪ್ತ ವರ್ಣನೆ

ರೆ.ಸ.ನಂ.	ಬಿತ್ತಿದ ಕ್ಷೇತ್ರ		ಬಿತ್ತಿದ ಬೀಜ			ಹಾಕಿದ ಗೊಬ್ಬರ		
	ಎಕರೆ	ಗುಂಠೆ	ವಿವರ	ಪ್ರಮಾಣ	ಬೆಲೆ	ವಿವರ	ಪ್ರಮಾಣ	ಬೆಲೆ
ಒಟ್ಟು								

(ಅ) ಉತ್ಪಾದನೆಯ ಕಾರ್ಯಗಳ ವಿವರ

ತಾರೀಖು	ರೆ.ಸ.ನಂ. ಬ್ಲಾಕ್ ನಂ.	ಹೊಲದಲ್ಲಿ ಆದ ಕೆಲಸದ ವಿವರ	ಕೆಲಸದ ಆಳತೆಗಳು	ವೇತನ ಅಥವಾ ಬಾಡಿಗೆ	ಕೆಲಸ ಮಾಡಿದ ಕ್ಷೇತ್ರ	ಹಾಕಿದ ಬೀಜ, ಗೊಬ್ಬರ ಅಥವಾ ಬಿತ್ತಿದ ಬೆಳೆ	ಬೆಳೆಯ ಸ್ಥಿತಿ	ವ್ಯವಸ್ಥಾಪಕನ ಚಿಕ್ಕ ಸಹಿ
ವರ್ಷದ ಕೊನೆಗೆ ಬೇರೀಜು								

ವ್ಯವಸ್ಥಾಪಕನ ಸಹಿ.................. ದಿನಾಂಕ.................. ಅಧ್ಯಕ್ಷರ ಸಹಿ............

ಸೂಚನೆಗಳು

(i) ಇದು ಸಾಮೂಹಿಕ ಬೇಸಾಯುಸಂಘದ ಅತ್ಯಂತ ಮಹತ್ವದ ರಿಜಿಸ್ಟರು. ಆದ್ದರಿಂದ ದೈನಿಕ ಶ್ರಮ ಪತ್ರಿಕೆಯ ರಿಜಿಸ್ಟರ್, ಯಂತ್ರಗಳ ದೈನಿಕ ಕೆಲಸಗಳ ರಿಜಿಸ್ಟರ್, ಬೀಜ, ಗೊಬ್ಬರಗಳ ಸ್ಟಾಕ್ ರಿಜಿಸ್ಟರುಗಳ ಆಧಾರದ ಮೇಲೆ ಈ ರಿಜಿಸ್ಟರನ್ನು ನಿತ್ಯವೂ ಬರೆಯುಬೇಕು,

(ii) ಬೆಳೆಗಳ ಭಾಗಗಳನ್ನು ಅಥವಾ ಬ್ಲಾಕುಗಳನ್ನು ಬಿತ್ತನೆ ಆದ ಬಳಿಕವೇ ನಿರ್ಮಿಸಲಾಗುತ್ತದೆ. ಆಗ ಶ್ರಮ ಹಾಗೂ ಕೆಲಸಗಳನ್ನು ನಿಯಮಿತವಾಗಿ ದಾಖಲೆ ಮಾಡಲಾಗುತ್ತದೆ, ಆದ್ದರಿಂದ ಭಿನ್ನಭಿನ್ನ ಹೊಲಗಳಲ್ಲಿ ರಂಟೆ, ಕುಂಟೆ ಮುಂತಾದ ಆರಂಭದ ಬೇಸಾಯುದ ಕೆಲಸಗಳ ಶ್ರಮ ಹಾಗೂ ವೆಚ್ಚಗಳನ್ನು ಕ್ಷೇತ್ರದ ಪ್ರಕಾರ ಹಂಚಿ ಪ್ರತಿಯೊಂದು ಬೆಳೆಗೂ ಬರೆದುಕೊಳ್ಳಬೇಕು.

(iii) ಅಧ್ಯಕ್ಷರ ಮೇಲ್ವಿಚಾರಣೆಯ ಕೆಲಸ ಮುಂತಾದ ಕೆಲವು ಸಾಮಾನ್ಯ ತರಹದ ಶ್ರಮ ಹಾಗೂ ಅವುಗಳ ವೆಚ್ಚ ಯಾವುದೇ ಒಂದು ಬೆಳೆಯುದೆಂದು ಬರೆಯು ಲಾಗುವುದಿಲ್ಲ. ಅಂಥವುಗಳನ್ನು ಒಟ್ಟಿನಲ್ಲಿ ಸಾವಿರಾರು ಖರ್ಚುಗಳಲ್ಲಿ ಸೇರಿಸಬೇಕು ಅಥವಾ ಬೆಳೆಯ ಕ್ಷೇತ್ರದ ಪ್ರಕಾರ ಹಂಚಬೇಕು.

(iv) ವರ್ಷದ ಕೊನೆಗೆ ಅಥವಾ ಫಸಲಿನ ಉತ್ಪಾದನೆಯ ಕೊನೆಗೆ, ಅಂತಿಮ ಲೆಕ್ಕಪತ್ರ ಮುಗಿಸಿ ಕೆಳಗಿನ ಪತ್ರಿಕೆಯಲ್ಲಿ ಬೆಳೆಯ ಸಾರಾಂಶವನ್ನು ಕೊಡಬೇಕು:

(ಇ) ಬೆಳೆಯ ಸಾರಾಂಶ

(1) ಉತ್ಪಾದನೆಯ ವೆಚ್ಚ

ಅ.ಸಂ.	ವೆಚ್ಚದ ವಿವರ	ರಕಮು	ಬಿತ್ತಿದ ಕ್ಷೇತ್ರ ಎಕರೆ ಗುಂಟೆ	ಪ್ರತಿ ಎಕರೆಯ ವೆಚ್ಚ
1.	ಸಾಗುವಳಿಯ ವೆಚ್ಚ			
	(i) ಆರಂಭದ ಬೇಸಾಯದ ಕೆಲಸ			
	(ii) ಬಿತ್ತನೆ			
	(iii) ಎಡೆ			
	(iv) ಕಳೆ-ಕಸ			
	(v) ಕೊಯ್ಯಲು			
	(vi) ಒಕ್ಕಣೆ			
2.	ಗೊಬ್ಬರ			
3.	ಬೀಜ			
4.	ನೀರಾವರಿ			
5.	ಮೇಲ್ವಿಚಾರಣೆ			
6.	ಕಾಯುವುದು ಹಾಗೂ ಸಂಗ್ರಹ			
7.	ಮಾರಾಟ-ಖರೀದಿ			
8.	ಲಾವಣಿ ಅಥವಾ ಡಿವಿಡೆಂಡ್			
9.	ಕರ ಕಂದಾಯ			
	ಒಟ್ಟು ಉತ್ಪಾದನೆಯ ವೆಚ್ಚ			

(2) ಬೆಳೆಯ ಉತ್ಪನ್ನ

ಅ.ನಂ.	ಬೆಳೆಯ ಉತ್ಪತ್ತಿಯ ವಿವರ	ಪ್ರಮಾಣ ಕ್ವಿ. ಕೆ.ಜಿ	ಒಟ್ಟು ಬೆಲೆ	ಬಿತ್ತಿದ ಕ್ಷೇತ್ರ ಎ. ಗುಂ.	ಪ್ರತಿ ಎಕರೆಯ ಉತ್ಪತ್ತಿ	ಪ್ರತಿ ಎಕರೆಯ ಆದಾಯ

(3) ನಿವ್ವಳ ಪರಿಣಾಮ

ಒಟ್ಟು ಆದಾಯ	ಒಟ್ಟು ಉತ್ಪಾದನೆಯ ವೆಚ್ಚ	ನಿವ್ವಳ ಉಳಿತಾಯ	ನಿವ್ವಳ ಹಾನಿ	ಪ್ರತಿ ಎಕರೆಯ ನಿವ್ವಳ - ಲಾಭ	ಪ್ರತಿ ಎಕರೆಯ ನಿವ್ವಳ ಹಾನಿ	ಶರಾ

ವ್ಯವಸ್ಥಾಪಕನ ಸಹಿ............... ದಿನಾಂಕ......... ಅಧ್ಯಕ್ಷರ ಸಹಿ.........

ಹೀಗೆ ಪ್ರಗತಿಶೀಲ ಬೇಸಾಯಸಂಘಗಳು ತಾವು ಉತ್ಪಾದಿಸಿದ ಬೆಳೆಗಳ ಸರಿಯಾದ ಲೆಕ್ಕಗಳನ್ನಿಟ್ಟು ಅವುಗಳ ಆರ್ಥಿಕ ಪರಿಣಾಮಗಳನ್ನು ಲೆಕ್ಕದ ಪುಸ್ತಕಗಳಲ್ಲಿ ಹಚ್ಚಿ ಇಡಬೇಕು. ಅದರಿಂದ ಅವುಗಳ ಪ್ರಗತಿಯಬಗ್ಗೆ ಅಥವಾ ವಿಫಲತೆಯ ಬಗ್ಗೆ ಮತ್ತು ಇಂಥ ಪ್ರಗತಿ ಅಥವಾ ವಿಫಲತೆಯ ಕಾರಣಗಳ ಬಗ್ಗೆ ಅವುಗಳಿಗೆ ಸರಿಯಾದ ತಿಳಿವಳಿಕೆಯಾಗುತ್ತದೆ ಮತ್ತು ಮುಂದೆ ಅವು ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಅನುಕೂಲವಾಗುತ್ತದೆ.

ಅಧ್ಯಾಯ 12

ಕರ್ನಾಟಕದಲ್ಲಿ ಸಹಕಾರಿಬೇಸಾಯದ ಪ್ರಗತಿ

ದೇಶದಲ್ಲಿ ಮೊದಲಿನ ಎರಡು ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ನಾಲ್ಕು ಪ್ರಕಾರದ ಬೇಸಾಯುಸಂಘಗಳನ್ನು ಸಂಘಟಿಸಲಾಗಿತ್ತು. ಅವುಗಳೆಂದರೆ: (i) ಸಹಕಾರಿ ಉತ್ತಮ ಬೇಸಾಯಸಂಘಗಳು (ii) ಸಹಕಾರಿ ರೈತಪದ್ಧತಿಯ ಬೇಸಾಯ ಸಂಘಗಳು (iii) ಸಹಕಾರಿ ಸಂಯುಕ್ತ ಬೇಸಾಯಸಂಘಗಳು (iv) ಸಹಕಾರಿ ಸಾಮುದಾಯಕ ಬೇಸಾಯಸಂಘಗಳು. ಕರ್ನಾಟಕದಲ್ಲಿ 74 ಉತ್ತಮ ಹಾಗೂ ರೈತ ಪದ್ಧತಿಯ ಬೇಸಾಯಸಂಘಗಳು, 70 ಸಂಯುಕ್ತ ಹಾಗೂ ಸಾಮುದಾಯಕ ಬೇಸಾಯ ಸಂಘಗಳೂ ಇದ್ದವು. ಈ ಸಂಘಗಳಿಂದ ಸಹಕಾರಿ ಬೇಸಾಯದ ಬಗ್ಗೆ ಜನರಲ್ಲಿ ಆರಂಭದ ತಿಳಿವಳಿಕೆ ಹಾಗೂ ಕೆಲಮಟ್ಟಿಗೆ ಅನುಕೂಲವಾದ ವಾತಾವರಣವು ಹರಡಿತ್ತು. ಹೆಚ್ಚಾಗಿ ಈ ಬೇಸಾಯಸಂಘಗಳು ಸರಕಾರಿ ಫಡ (ಬೀಳು) ಭೂಮಿಗಳಲ್ಲಿ ಸ್ಥಾಪಿಸಲ್ಪಟ್ಟಿದ್ದವು. ಇವುಗಳ ಸದಸ್ಯರಲ್ಲಿ ಹಿಂದುಳಿದ ಜಾತಿಗಳ ಭೂರಹಿತ ಬೇಸಾಯಗಾರರೇ ಹೆಚ್ಚಾಗಿದ್ದರು. ಇಂಥ ಬೇಸಾಯಸಂಘಗಳಿಂದ ನಿರೀಕ್ಷಿಸಿದಷ್ಟು ಪರಮಾವಧಿ ಅಭಿವೃದ್ಧಿ ಹಾಗೂ ಉತ್ಪತ್ತಿಯ ಹೆಚ್ಚಳ ಆಗಿರಲಿಕ್ಕಿಲ್ಲ. ಆದರೆ ಅವುಗಳಿಗೆ ಕೊಟ್ಟ ಆರ್ಥಿಕ ಸಹಾಯದ ಮಾನದಿಂದ ನೋಡಿದರೆ ಸಾಧಿಸಿದ ಪ್ರಗತಿಯು ಗಣನೀಯವೇ ಸರಿ. ಈ ಸಂಘಗಳು 17580 ಎಕರೆ ಫಡಭೂಮಿಯನ್ನು ಸಾಗುವಳಿಗೆ ತಂದಿದ್ದವು. ಈ ಸಂಘಗಳು ಪ್ರತಿವರ್ಷ ಸುಮಾರು 4.000 ಟನ್ ಆಹಾರಧಾನ್ಯದ ಉತ್ಪತ್ತಿ ಮಾಡುತ್ತಿದ್ದವು. ಈ ಉತ್ಪತ್ತಿಯ ಬೆಲೆ ಅಂದಾಜು 12ಲಕ್ಷ ರೂಪಾಯಿಗಳಷ್ಟಿತ್ತು. ಇವುಗಳಿಂದ ಸುಮಾರು 4,000 ಬಡ ಕುಟುಂಬಗಳಿಗೆ ಉದ್ಯೋಗ ಹಾಗೂ ಉಪಜೀವನ ದೊರಕಿತ್ತು. ಈ ಸಂಘಗಳಿಗೆ ಸಾಲ ಹಾಗೂ ಸಹಾಯ ಧನಗಳ ರೂಪದಲ್ಲಿ ಒಟ್ಟು 9,94,000 ರೂಪಾಯಿಗಳ ಆರ್ಥಿಕ ಸಹಾಯ ಸರಕಾರದಿಂದ ದೊರಕಿತ್ತು. ಈ ಈ ಸಹಾಯ ಪ್ರತಿ ಎಕರೆಗೆ 57 ರೂಪಾಯಿಗಳಷ್ಟಿತ್ತು. ಹೊಸಭೂಮಿಯನ್ನು ಅಭಿವೃದ್ಧಿಪಡಿಸುವುದಕ್ಕೆ ಕನಿಷ್ಠ ಪ್ರತಿಎಕರೆಗೆ 57 ರೂಪಾಯಿಗಳಷ್ಟಿತ್ತು. ಹೊಸ ಭೂಮಿಯನ್ನು ಅಭಿವೃದ್ಧಿಪಡಿಸುವುದಕ್ಕೆ ಕನಿಷ್ಠ ಪ್ರತಿಎಕರೆಗೆ 100 ರೂಪಾಯಿಗಳು ಆಗಬೇಕಾಗುತ್ತಿತ್ತು; ಅಂದರೆ ಪ್ರತಿ ಎಕರೆಗೆ 43 ರೂಪಾಯಿಗಳಂತೆ ಒಟ್ಟು 7,31,000 ರೂಪಾಯಿಗಳ ಬಂಡವಲನ್ನು ಬೇಸಾಯಸಂಘಗಳ ಬಡಸದಸ್ಯರು ತಮ್ಮ ಶ್ರಮದ ರೂಪದಲ್ಲಿ ಅಭಿವೃದ್ಧಿಯಲ್ಲೂ ಹಾಗೂ ಪ್ರತಿ ಎಕರೆಗೆ 100 ರೂಪಾಯಿಯಂತೆ 17,05000 ರೂಪಾಯಿಯ ಬಂಡವಲನ್ನು ಎತ್ತು, ಗಾಡಿ, ನೇಗಿಲು ಮುಂತಾದ ಸಲಕರಣೆಗಳ ರೂಪದಲ್ಲೂ ಹಾಕಿದ್ದವು. ಅದರಂತೆ ಸಾಗುವಳಿ ವೆಚ್ಚದಲ್ಲಿಯೂ ಸಹ ಅವರು ಅಷ್ಟೇ ಬಂಡವಲನ್ನು ತೊಡಗಿಸಿದ್ದರು. ಆದಾಯವು ಸಹ ಎಕರೆಗೆ 68 ರೂಪಾಯಿಗಳಂತೆ 11,95,000 ರೂಪಾಯಿಗಳಷ್ಟು ಆ ಭೂಮಿಗಳಲ್ಲಿ ಹೆಚ್ಚಿತ್ತು.

ಇದರಿಂದ ಸಹಕಾರಿಬೇಸಾಯಸಂಘಗಳಿಗೆ ಸರಕಾರವು ನೀಡಿದ್ದ ಆರ್ಥಿಕ ಸಹಾಯವು ಸಾಕಷ್ಟು ಫಲಿತಾಂಶವನ್ನು ದೊರಕಿಸಿಕೊಟ್ಟಿತ್ತು.

ಮೂರನೆಯ ಯೋಜನೆಯಲ್ಲಿ ಹೊಸಧೋರಣೆ ಹಾಗೂ ಕಾರ್ಯಕ್ರಮ

ಈ ಮೊದಲು ಹೇಳಿದಂತೆ 1959 ರಲ್ಲಿ ಶ್ರೀ ಎಸ್. ನಿಜಲಿಂಗಪ್ಪನವರ ನೇತೃತ್ವದಲ್ಲಿ ಸಹಕಾರಿಬೇಸಾಯದಕಾರ್ಯಸಮಿತಿಯನ್ನು ಸರಕಾರವು ರಚಿಸಿತ್ತು. ಈ ಸಮಿತಿಯು ನೀಡಿದ ಮಹತ್ವದ ಶಿಫಾರಸುಗಳನ್ನು ಸರಕಾರವು ಅಂಗೀಕರಿಸಿ ಸಹಕಾರಿ ಬೇಸಾಯದ ಕಾರ್ಯಕ್ರಮವನ್ನು ದೇಶದಲ್ಲೆಲ್ಲ ಅನುಸರಣೆಯಲ್ಲಿ ತಂದಂತೆ ಕರ್ನಾಟಕದಲ್ಲೂ ಕಾರ್ಯಗತ ಮಾಡಲಾಯಿತು. ಈ ಕಾರ್ಯಕ್ರಮದ ಪ್ರಕಾರ ಸಾಮಾನ್ಯವಾಗಿ ಪ್ರತಿಯೊಂದು ಜಿಲ್ಲೆಯಲ್ಲೂ ಒಂದೊಂದು ಪ್ರಯೋಗಕ್ಷೇತ್ರವನ್ನು ಪ್ರಾರಂಭಿಸಿ ಅದರಲ್ಲಿ ಕನಿಷ್ಠ 10 ಬೇಸಾಯಸಂಘಗಳನ್ನು ಸ್ಥಾಪಿಸಲು ಅವಕಾಶವಿತ್ತು.

ಕರ್ನಾಟಕ ರಾಜ್ಯದಲ್ಲಿ ಪ್ರಯೋಗ ಕ್ಷೇತ್ರಗಳ ಕಾರ್ಯಕ್ರಮ

ಮೇಲಿನ ಯೋಜನೆಯ ಪ್ರಕಾರ ಕರ್ನಾಟಕದಲ್ಲಿ 19 ಪ್ರಯೋಗಕ್ಷೇತ್ರಗಳನ್ನು ಸ್ಥಾಪಿಸಿ 190 ಪ್ರಾಯೋಗಿಕಬೇಸಾಯಸಂಘಗಳನ್ನು ಸಂಘಟಿಸಬೇಕಾಗಿತ್ತು. 1961-62ರಲ್ಲಿ 5, 1962-63ರಲ್ಲಿ 6 ಮತ್ತು 1963-64ರಲ್ಲಿ 8 ಹೀಗೆ ಒಟ್ಟು 19 ಪ್ರಯೋಗಕ್ಷೇತ್ರಗಳನ್ನು ರಾಜ್ಯದಲ್ಲಿ ಸ್ಥಾಪಿಸಲಾಯಿತು. ಅನೇಕ ಅಡೆತಡೆಗಳಿದ್ದರೂ ಕರ್ನಾಟಕದಲ್ಲಿ ಸಹಕಾರಿಬೇಸಾಯದ ಸಮಾಧಾನಕರವಾದ ಪ್ರಗತಿಯಾಯಿತು. 30-6 1972ರ ವರೆಗೆ ಕರ್ನಾಟಕದಲ್ಲಿ ಒಟ್ಟು 596 ಬೇಸಾಯಸಂಘಗಳಿದ್ದವು. ಅವುಗಳಲ್ಲಿ 15,798 ಸದಸ್ಯರಿದ್ದರು. ಅವುಗಳ ವಶದಲ್ಲಿ ಒಟ್ಟು 69,459 ಎಕರೆ ಭೂಮಿಇತ್ತು. ಅದರಲ್ಲಿ 44,926 ಎಕರೆ ಭೂಮಿಯನ್ನು ಸಾಗುವಳಿಯಲ್ಲಿ ತರಲಾಗಿತ್ತು. ಈ ಬೇಸಾಯಸಂಘಗಳಲ್ಲಿ 186 ಸಂಘಗಳನ್ನು ಸಮಾಜದಲ್ಲಿಯ ನಿರ್ಗತಿಕ ವರ್ಗದವರ ಸಲುವಾಗಿ ಅಂದರೆ ಹರಿಜನರ, ಗಿರಿಜನರ ಸಲುವಾಗಿ ಸಂಘಟಿಸಲಾಗಿತ್ತು. ಎಲ್ಲ ಬೇಸಾಯಸಂಘಗಳಿಗೆ 31–3–1973ರ ವರೆಗೆ ಸಾಲ, ಸಹಾಯಧನಗಳ ರೂಪದಲ್ಲಿ ಒಟ್ಟು 121.10 ಲಕ್ಷ ರೂಪಾಯಿಗಳ ಆರ್ಥಿಕಸಹಾಯವನ್ನು ಸರಕಾರವು ಒದಗಿಸಿತ್ತು. ಇದರಲ್ಲಿ 7 ಭೂದಾನ ಬೇಸಾಯದಸಂಘಗಳಿಗೆ, 1,08,000 ರೂಪಾಯಿಗಳ ಸಾಲವನ್ನೂ, 29,500 ರೂಪಾಯಿಗಳ ಸಹಾಯಧನವನ್ನೂ ಒದಗಿಸಲಾಗಿತ್ತು.

ತುಂಗಭದ್ರಾ ನೀರಾವರಿಯ ಕ್ಷೇತ್ರದಲ್ಲಿ ಸಹಕಾರಿ ಬೇಸಾಯದಿಂದ ಭೂಹೀನ ಕೃಷಿ ಕಾರ್ಮಿಕರನ್ನು ನೆಲೆಸುವ ಒಂದು ಯೋಜನೆಯನ್ನು ಕೈಕೊಳ್ಳಲಾಗಿದ್ದು ಅದಕ್ಕೆ 10ಲಕ್ಷ ರೂಪಾಯಿಗಳ ಸಹಾಯವನ್ನು ಸರಕಾರದಿಂದ ಒದಗಿಸಲಾಯಿತು. ಅದರಲ್ಲಿ 30-6 1972ರ ವರೆಗೆ 630 ಎಕರೆ ಭೂಮಿಯನ್ನು ಸಾಗುವಳಿಯಲ್ಲಿ ತರಲಾಗಿತ್ತು.

ಈ ಬೇಸಾಯಸಂಘಗಳಲ್ಲಿ ಸಹಾಯಕ ಉದ್ಯೋಗಗಳನ್ನು ಕೈಕೊಳ್ಳಲು ಹಾಗೂ ಸುಧಾರಿಸಿದ ಬೇಸಾಯವನ್ನು ಬೆಳೆಸಲು ವಿಭಿನ್ನ ಸರಕಾರಿಇಲಾಖೆಗಳಿಂದ 23.06

ಲಕ್ಷ ರೂಪಾಯಿಗಳ ಆರ್ಥಿಕ ಸಹಾಯವು ದೊರಕಿತು. ಜಿಲ್ಲಾ ಸಹಕಾರಿಬ್ಯಾಂಕು ಗಳು, 76 ಬೇಸಾಯಸಂಘಗಳ ಉತ್ಪಾದನೆಯ ಯೋಜನೆಗಳಿಗೆ 4.03 ಲಕ್ಷರೂಪಾಯಿ ಗಳ ಅಲ್ಪಾವಧಿ ಉತ್ಪಾದನೆಯ ಸಾಲವನ್ನು ಒದಗಿಸಿದ್ದವು. ಸಹಕಾರಿ ಭೂಅಭಿವೃದ್ಧಿ ಬ್ಯಾಂಕುಗಳು 5 ಬೇಸಾಯಸಂಘಗಳಿಗೆ ಮಾತ್ರ 54,750 ರೂಪಾಯಿಗಳ ದೀರ್ಘಾ ವಧಿ ಸಾಲವನ್ನು ಬೇಸಾಯಸಂಘಗಳ ಅಭಿವೃದ್ಧಿಯ ಕಾರ್ಯಗಳಿಗೆ ಒದಗಿಸಿದ್ದವು.

ತುಂಗಭದ್ರಾ ನೀರಾವರಿ ಕ್ಷೇತ್ರದ ಅಧಿಕಾರಿಗಳಿಂದ ಬೇಸಾಯಸಂಘಗಳಿಗೆ ಬಾಡಿಗೆ ಖರೀದಿಯ ಕರಾರಿನಿಂದ ಟ್ರಾಕ್ಟರುಗಳು ದೊರೆತವು. 4 ಬೇಸಾಯಸಂಘಗಳು ಸರ ಕಾರದಿಂದ ನೇರವಾಗಿ ಟ್ರಾಕ್ಟರುಗಳನ್ನು ದೊರಕಿಸಿದವು.

ಧಾರವಾಡದಲ್ಲಿ ಗ್ರಾಮೀಣ ಅಭಿವೃದ್ಧಿಯ ತರಬೇತಿ ಕೇಂದ್ರದಲ್ಲಿ ಸಹಕಾರಿ ಬೇಸಾಯದ ತರಬೇತಿಯ ವ್ಯವಸ್ಥೆಗೆ ಆಗಲೇ ಏರ್ಪಾಡಾದುದು. ಅದು ಇಂದಿಗೂ ಮುಂದುವರೆದಿದೆ. ಅದರಲ್ಲಿ ಸಹಕಾರಿಬೇಸಾಯಸಂಘಗಳ ಕಾರ್ಯದರ್ಶಿಗಳಿಗೆ ಹಾಗೂ ವಿಸ್ತರಣಾಧಿಕಾರಿಗಳಿಗೆ ತರಬೇತಿ ನೀಡುವ ವ್ಯವಸ್ಥೆಯಿದೆ. ಅಲ್ಲದೆ ಅದರಲ್ಲಿ ಹಲವಾರು ವಿಸ್ತರಣಾಧಿಕಾರಿಗಳು ಪುನರ್‌ಚೇತನ ತರಬೇತಿಯನ್ನು ಪಡೆದರು. ಗ್ರಾಮಾಂ ತರದಲ್ಲಿ ಸಹಕಾರಿಬೇಸಾಯಕ್ಕೆ ಅನುಕೂಲ ವಾತಾವರಣವನ್ನು ನಿರ್ಮಿಸಲು 48 ಸಹಕಾರಿ ಬೇಸಾಯದ ವಿಚಾರಗೋಷ್ಠಿಗಳು ನಡೆದವು. ರಾಜ್ಯಮಟ್ಟದ 4 ವಿಚಾರ 1960 ರಿಂದ 1973ರ ವರೆಗಿನ ಅವಧಿಯಲ್ಲಿ ನಡೆದವು.

ಸಹಕಾರಿಬೇಸಾಯದ ಕಾರ್ಯಕ್ರಮದ ಸರಿಯಾದ ಪ್ರಗತಿಗಾಗಿ ಸರಕಾರಕ್ಕೆ ತಕ್ಕ ಸಲಹೆ ಕೊಡಲು ಮತ್ತು ಕಾರ್ಯಕ್ರಮದ ಯಶಸ್ಸಿಗಾಗಿ ಅಗತ್ಯವಾದ ಪ್ರಚಾರ ಮಾಡಲು ರಾಜ್ಯಮಟ್ಟದ ಸಹಕಾರಿಬೇಸಾಯದ ಸಲಹಾಮಂಡಲಿಯನ್ನು ಸ್ಥಾಪಿಸ ಲಾಗಿತ್ತು. ಅದರಲ್ಲಿ ಉಚ್ಚಅಧಿಕಾರಿಗಳೂ, ಅಧಿಕಾರೇತರರೂ ಸದಸ್ಯರಾಗಿದ್ದರು; ಸಹಕಾರ ಸಚಿವರೇ ಅದರ ಅಧ್ಯಕ್ಷರಾಗಿದ್ದರು. ತೃತೀಯ ಯೋಜನೆಯಲ್ಲಿ ಸಹಕಾರಿ ಬೇಸಾಯವನ್ನು ಹಬ್ಬಿಸಲು ಈ ಸಲಹಾಮಂಡಲಿಯು ತಕ್ಕಸೇವೆ ಸಲ್ಲಿಸಿತು.

ಸಹಕಾರಿ ಬೇಸಾಯಸಂಘಗಳ ಸಂಯುಕ್ತಸಂಘಗಳು (ಫೆಡರೇಶನ್ಸ್)

ಸಹಕಾರಿ ಬೇಸಾಯಸಂಘಗಳಲ್ಲಿ ಸರಿಯಾದ ಮುಂದಾಳುತನವನ್ನು ಬೆಳೆಸಲು, ಬೇಸಾಯಸಂಘಗಳಿಗೆ ಅವುಗಳ ಪ್ರಗತಿಗೆ ಸಹಾಯವಾಗುವಂತೆ ಆಡಳಿತತದ ಬಗೆಗೆ ಹಾಗೂ ತಾಂತ್ರಿಕ ಮಾರ್ಗದರ್ಶನ ನೀಡಲು ಮತ್ತು ಅವುಗಳಿಗೆ ಅಗತ್ಯವಿದ್ದ ಬೇಸಾಯ ಯಂತ್ರಗಳನ್ನು ಒದಗಿಸಿ ಅವುಗಳ ಅಭಿವೃದ್ಧಿಗೆ ನೆರವಾಗಲು, ಬೇಸಾಯಸಂಘಗಳ ಜಿಲ್ಲಾಮಟ್ಟದ ಹಾಗೂ ರಾಜ್ಯ ಮಟ್ಟದ ಸಂಯುಕ್ತಸಂಘಗಳನ್ನು ಸಂಘಟಿಸಬೇಕೆಂದು ಗಾಡಗೀಳ ಸಮಿತಿಯು ಮಹತ್ವದ ಶಿಫಾರಸು ಮಾಡಿತು. ಅದರ ಪ್ರಕಾರ ಬೇಸಾಯ ಸಂಘಗಳ ರಾಜ್ಯ ಫೆಡರೇಶನ್ನನ್ನು ಸ್ಥಾಪಿಸುವಲ್ಲಿ ಕರ್ನಾಟಕರಾಜ್ಯವು ಅಗ್ರಗಾಮಿ

ಯಾಗಿದೆ. ಬೇಸಾಯಸಂಘಗಳಿಗೆ ಶಿಕ್ಷಣ, ಮಾರ್ಗದರ್ಶನ ಮಾಡಿದ್ದಲ್ಲದೆ ರಾಜ್ಯದ ಸಹಕಾರಸಂಘಗಳ ರಿಜಿಸ್ಟ್ರಾರರ ಮಾರ್ಗದರ್ಶನದಲ್ಲಿ ಯಾಂತ್ರಿಕ ಬೇಸಾಯ ಘಟಕಗಳ ಯೋಜನೆಯೊಂದನ್ನು ರಾಜ್ಯಫೆಡರೇಶನ್ನು ಕೈಕೊಂಡಿತು. ಅದರಿಂದ ಬೇಸಾಯ ಸಂಘಗಳ ಭೂಮಿಯನ್ನು ಸುಧಾರಿಸುವಲ್ಲಿ. ಅವುಗಳ ಭೂಮಿಗಳನ್ನು ಅಳವಡಿಸುವಲ್ಲಿ ರಾಜ್ಯಫೆಡರೇಶನ್ನು ಮಹತ್ವದ ಸೇವೆ ಸಲ್ಲಿಸಿತು. ಈ ಯೋಜನೆಯಿಂದ ರಾಜ್ಯ ಫೆಡರೇಶನ್ನು ಕರ್ನಾಟಕ ರಾಜ್ಯದ ಕೃಷಿ ಕೈಗಾರಿಕೆಯ ಮಹಾಮಂಡಳದಿಂದ 106.115 ರೂಪಾಯಿ ಬೆಲೆಬಾಳುವ ಟ್ರೇಲರು ಸಹಿತ 2 ಟ್ರಾಕ್ಟರುಗಳನ್ನು, 2 ಗಾರ್ಲಿಕ್ ಬೋರಿಂಗ್ ಯಂತ್ರಗಳನ್ನು ರಾಜ್ಯ ಫೆಡರೇಶನ್ನು ಕೊಂಡು ವಿಜಾಪುರದ ಹಾಗೂ ಧಾರವಾಡಜಿಲ್ಲಾ ಬೇಸಾಯಸಂಘಗಳ ಫೆಡರೇಶನ್ನುಗಳಿಗೆ ನಡೆಸಲು ಕೊಟ್ಟಿತು.

ವಿಜಾಪುರ, ಧಾರವಾಡ. ರಾಯಚೂರು, ಶಿವಮೊಗ್ಗ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಸಹಕಾರಿಬೇಸಾಯದ ಪ್ರಚಾರಕ್ಕಾಗಿ. ಬೇಸಾಯಸಂಘಗಳ ಜಿಲ್ಲಾ ಫೆಡರೇಶನ್ನುಗಳನ್ನು ಸ್ಥಾಪಿಸಲಾಗಿದೆ.

ಈ ಎಲ್ಲ ಅವಿರತ ಪ್ರಯತ್ನಗಳಿಂದ ಕರ್ನಾಟಕದಲ್ಲಿ ಸಹಕಾರಿ ಬೇಸಾಯವು ಕ್ರಮೇಣವಾಗಿ ತೃಪ್ತಿಕರ ಪ್ರಗತಿಯನ್ನು ಸಾಧಿಸಿ ಇಡಿಯ ದೇಶದಲ್ಲಿ ಕರ್ನಾಟಕವು ಈ ಕಾರ್ಯಕ್ರಮದಲ್ಲಿ ಮಹತ್ವದ ಸ್ಥಾನವನ್ನು ಪಡೆದಿದೆ.

ಭಾರತ ಹಾಗೂ ಕರ್ನಾಟಕಗಳ ತುಲನಾತ್ಮಕ ಪ್ರಗತಿ ನೋಟ

31–3–1966ನೇ ದಿನ ಸಮಸ್ತದೇಶದಲ್ಲಿ 5,501 ಬೇಸಾಯಸಂಘಗಳಿದ್ದವು. ಅವುಗಳಲ್ಲಿ ಒಟ್ಟು 1,18,800 ಸದಸ್ಯರು ಇದ್ದರು ಮತ್ತು 5,83.800 ಎಕರೆ ಭೂಮಿ ಅವುಗಳ ವಶದಲ್ಲಿತ್ತು. ಅಂದರೆ ದೇಶದಲ್ಲಿ ಪ್ರತಿ 10ಲಕ್ಷ ಜನಸಂಖ್ಯೆಗೆ 12 ಬೇಸಾಯ ಸಂಘಗಳೂ ಹಾಗೂ 271 ಸದಸ್ಯರು ಇದ್ದರು. ಅದೇ ಕಾಲಕ್ಕೆ ಕರ್ನಾಟಕದಲ್ಲಿ 438 ಬೇಸಾಯಸಂಘಗಳಿದ್ದವು. ಅವುಗಳಲ್ಲಿ 9.900 ಸದಸ್ಯರಿದ್ದರು ಹಾಗೂ ಅವುಗಳ ವಶದಲ್ಲಿ 4,482 ಎಕರೆ ಭೂಮಿ ಇತ್ತು. ಅಂದರೆ ಪ್ರತಿ 10ಲಕ್ಷಜನಸಂಖ್ಯೆಗೆ ಕರ್ನಾಟಕದಲ್ಲಿ 18 ಬೇಸಾಯ ಸಂಘಗಳಿದ್ದವು ಹಾಗೂ ಅವುಗಳಲ್ಲಿ 420 ಸದಸ್ಯರಿದ್ದರು. ಜನಸಂಖ್ಯೆಯನ್ನು ಲಕ್ಷಿಸಿದರೆ ಇಡಿಯ ದೇಶದಲ್ಲಿ ಕರ್ನಾಟಕದ ಸ್ಥಾನವು ಸದಸ್ಯರಲ್ಲಿ ಎರಡನೆಯದು, ಸಂಘಗಳ ಸಂಖ್ಯೆಯಲ್ಲಿ ಮೊದಲನೆಯದು ಆಗಿತ್ತು.

ಪ್ರಗತಿಯ ಅಳತೆ

'ಸಹಕಾರಿ ಬೇಸಾಯ ಒಂದು ವ್ಯರ್ಥವಾದ ಕಾರ್ಯಕ್ರಮ: ಅದರಲ್ಲಿ ತೊಡಗಿಸಿರುವ ಸಾರ್ವಜನಿಕ ಹಣವು ಒಂದು ಅಪಾರ ಹಾನಿ' ಎಂದು ಸಾಮಾನ್ಯವಾದ ತಪ್ಪು ತಿಳಿವಳಿಕೆ ಅನೇಕರಲ್ಲಿದೆ. ಸಹಕಾರಿ ಬೇಸಾಯದ ಪ್ರಗತಿಯನ್ನು ಕೇವಲ ವ್ಯಾಪಾರಿ ದೃಷ್ಟಿಯಿಂದ ಅವರಲ್ಲಿ ತೊಡಗಿಸಿದ ಬಂಡವಲಿನಿಂದ ಎಷ್ಟು ಬಡ್ಡಿ ಬಂತು, ಎಷ್ಟು

ಲಾಭ ದೊರಕಿತು ಎಂಬ ವಿಚಾರದಿಂದ ಅಳೆಯಲಿಕ್ಕಾಗದು. ಸಹಕಾರಿಬೇಸಾಯವು ಮುಖ್ಯವಾಗಿ ಅಭಿವೃದ್ಧಿಯ ಹಾಗೂ ನಿರ್ಗತಿಕರನ್ನು ನೆಲೆಸುವ ಕಾರ್ಯಕ್ರಮವೆಂದು ಗಣಿಸಬೇಕು. ಈ ದೃಷ್ಟಿಯಿಂದ ಈ ಕಾರ್ಯಕ್ರಮ ಸಾಧಿಸಿದ ಪ್ರಗತಿಯು ಅದರಲ್ಲಿ ತೊಡಗಿಸಿದ ಹಣಕ್ಕಿಂತ ಹೆಚ್ಚಿಗೆಯೇ ಇದೆ ಎಂದು ಹೇಳಬಹುದು. ಕೆಳಗಿನ ಕೆಲವು ಅಂಕಿ-ಸಂಖ್ಯೆಗಳು ಈ ಸತ್ಯವನ್ನು ವಿಶದಪಡಿಸುತ್ತವೆ. ಕರ್ನಾಟಕದಲ್ಲಿ ಸಹಕಾರಿ ಬೇಸಾಯಸಂಘಗಳು ಕೈಕೊಂಡ ವೆಚ್ಚಗಳು ಈ ಕೆಳಗಿನಂತಿವೆ:

(30–6–1972ರ ಅಂಕಿಗಳ ಆಧಾರದ ಮೇಲೆ)

(i) ಸರಕಾರಿ ಪಡಭೂಮಿಯನ್ನು ಅಥವಾ ಕಾಡುಭೂಮಿಯನ್ನು ಅಭಿವೃದ್ಧಿಗೊಳಿಸಿ ಸಾಗುವಳಿಗೆ ತಕ್ಕದ್ದನ್ನಾಗಿ ಮಾಡಿದ ಸರಾಸರಿ ಖರ್ಚು ಎಕರೆಗೆ 300 ರೂಪಾಯಿಯಂತೆ 13.900 ಎಕರೆಗಳಿಗೆ ...	41–70 ಲಕ್ಷ ರೂ.
(ii) ಉಳಿದ ಸಾಗಾದ ಕ್ಷೇತ್ರದ ಆರಂಭದ ಸುಧಾರಣೆ ಸರಾಸರಿ ಖರ್ಚು ಎಕರೆಗೆ 100 ರೂಪಾಯಿಗಳಂತೆ 31,000 ಎಕರೆಗಳಿಗೆ ...	31–00 ಲಕ್ಷ ರೂ.
(iii) ಎತ್ತು, ನೇಗಿಲು. ಗಾಡಿ ಮುಂತಾದವು ಸರಾಸರಿ ಖರ್ಚು ಎಕರೆಗೆ 200 ರೂಪಾಯಿಗಳಂತೆ 4,500 ಎಕರೆಗೆ ...	90–00 ಲಕ್ಷ ರೂ.
(iv) ಬೇಸಾಯದ ಬೀಜ, ಗೊಬ್ಬರ. ಸಾಗುವಳಿ ಇತ್ಯಾದಿಗಳ ಸರಾಸರಿ ಖರ್ಚು ಎಕರೆಗೆ 200ರೂಪಾಯಿಗಳಂತೆ 4,500 ಎಕರೆಗಳಿಗೆ ...	90–00 ಲಕ್ಷ ರೂ.
(v) ನೀರಾವರಿ ಭೂಮಿಗಳ ಸರಾಸರಿ ಖರ್ಚು ಒಂದು ಬಾವಿಗೆ 5.000 ರೂಪಾಯಿಗಳಂತೆ 420 ಬಾವಿಗಳಿಗೆ ...	21–00 ಲಕ್ಷ ರೂ.
(vi) ನೀರಾವರಿ ಪಂಪುಸೆಟ್ಟುಗಳ ಸರಾಸರಿ ಖರ್ಚು ಒಂದಕ್ಕೆ 3.000 ರೂಪಾಯಿಗಳಂತೆ 200 ಪಂಪುಸೆಟ್ಟುಗಳಿಗೆ ...	6–00 ಲಕ್ಷ ರೂ.
ಒಟ್ಟು ...	279–70 ಲಕ್ಷ ರೂ.

ಕರ್ನಾಟಕದಲ್ಲಿ ಸಹಕಾರಿಸಂಘಗಳಿಗೆ ದೊರೆತ ಸಹಾಯಧನ, ಸಾಧನ ಸಂಪತ್ತಿನ ಹಾಗೂ ಉತ್ಪತ್ತಿ ಮೌಲ್ಯ :

(i) ಸರಕಾರದಿಂದ ದೊರೆತ ಒಟ್ಟು ಆರ್ಥಿಕ ಸಹಾಯ... 149–62 ಲಕ್ಷ ರೂ.

(ii) ಶ್ರಮ ಹಾಗೂ ಚಿಕ್ಕಪುಟ್ಟ ಸಾಮಾನುಗಳ ರೂಪದಲ್ಲಿ ಜನರ ಸಾಧನ ಸಂಪತ್ತು ... 130–08 ಲಕ್ಷ ರೂ.

(iii) ಈ ಸುಧಾರಣೆಗಳಿಂದ ಹೆಚ್ಚಿದ ವಾರ್ಷಿಕ ಸರಾಸರಿ ಉತ್ಪತ್ತಿ ಎಕರೆಗೆ 3 ಕ್ವಿಂಟಾಲುಗಳಂತೆ 4,500 ಎಕರೆಗಳಿಗೆ ... 1,–35,000

(iv) ಹೆಚ್ಚಿನ ಉತ್ಪತ್ತಿಯ ಬೆಲೆ ... 94–50 ಲಕ್ಷ ರೂ.

ಮೇಲಿನ ಅಂಕಿ-ಸಂಖ್ಯೆಗಳಿಂದ ಸ್ಪಷ್ಟವಾಗುವುದೇನೆಂದರೆ ಸರಕಾರದ ಸಹಾಯವಲ್ಲದೆ 130 ಲಕ್ಷ ರೂಪಾಯಿಗಳ ಬೆಲೆಯ ತಮ್ಮವೇ ಶ್ರಮಸಾಧನಗಳನ್ನು 15,000 ಬಡಬೇಸಾಯಗಾರರು ಒಂದುಗೂಡಿಸಿ ಉಪಯೋಗಿಸಲು ಈ ಕಾರ್ಯಕ್ರಮದಿಂದ ಪ್ರೋತ್ಸಾಹ ದೊರೆಯಿತು. ಅದರಿಂದ ಆ ಬೇಸಾಯಗಾರರ ವಾರ್ಷಿಕ ಆದಾಯವೂ ಸಹ 94.50 ಲಕ್ಷ ರೂಪಾಯಿಗಳಷ್ಟು ಹೆಚ್ಚಿತು ಮತ್ತು ಅವರಿಗೆ ಹೆಚ್ಚು ಉದ್ಯೋಗವೂ ಆದಾಯವೂ ದೊರಕಿತು.

ಸರಕಾರದ ಸಹಾಯವು ಪ್ರತಿ ಎಕರೆಗೆ 332 ರೂಪಾಯಿ ಮಾತ್ರ ದೊರಕಿದಂತಾಯಿತು. ಒಂದುಗೂಡಿದ ಬಡಬೇಸಾಯಗಾರರು ಪ್ರತಿ ಎಕರೆಗೆ 288 ರೂಪಾಯಿಗಳಷ್ಟು ತಮ್ಮ ಶ್ರಮಸಾಧನಗಳನ್ನು ಒಂದುಗೂಡಿಸಿ ಉಪಯೋಗಿಸಿದರು. ಪ್ರತಿ ಎಕರೆಗೆ ಪ್ರತಿ ವರ್ಷ 210 ರೂ. ಬೆಲೆಯ ಬೇಸಾಯದ ಆದಾಯವು ಹೆಚ್ಚಿದಂತಾಯಿತು.

ಹೀಗೆ ರಾಷ್ಟ್ರೀಯ ಅಭಿವೃದ್ಧಿಯ ದೃಷ್ಟಿಯಿಂದ ಮತ್ತು ಬಡಬೇಸಾಯಗಾರರ ಸಾಮಾಜಿಕ, ಆರ್ಥಿಕಉನ್ನತಿಯ ದೃಷ್ಟಿಯಿಂದ ಸಹಕಾರಿ ಬೇಸಾಯದಿಂದ ಸಾಕಷ್ಟು ಪ್ರಯೋಜನ ದೊರಕಿದಂತಾಯಿತು.

ಆದರೆ ಸಾಮೂಹಿಕಬೇಸಾಯವು ನಿರೀಕ್ಷಿಸಿದಷ್ಟು ಪ್ರಗತಿ ಸಾಧಿಸಲಿಲ್ಲವೆಂಬುದು ನಿಜ. ಬಹುಸಂಖ್ಯಾತಬೇಸಾಯಸಂಘಗಳು 2–3 ವರ್ಷ ಮಾತ್ರ ಸಾಮೂಹಿಕ ಬೇಸಾಯವನ್ನು ನಡೆಸಿ ಮುಂದೆ ವ್ಯಯಕ್ತಿಕಬೇಸಾಯವನ್ನು ನಡೆಸಹತ್ತಿದವು. ಸಾಮೂಹಿಕಬೇಸಾಯವನ್ನೇ ಅವು ಮುಂದುವರಿಸಿಕೊಂಡು ಹೋಗಿದ್ದರೆ ಅಭಿವೃದ್ಧಿ ಉತ್ಪಾದನೆಗಳಲ್ಲಿ ಅವು ಇನ್ನೂ ಹೆಚ್ಚಿನ ಉನ್ನತಿಯನ್ನು ಸಾಧಿಸಬಹುದಿತ್ತು. ಆದರೆ

ಈ ಮೊದಲು ಹೇಳಿದಂತೆ ಸಹಕಾರಿಬೇಸಾಯಗಾರರಲ್ಲಿ ಸಾಮೂಹಿಕಬೇಸಾಯದ ಬಗ್ಗೆ ಸಾಕಷ್ಟು ಜಾಗೃತಿ ಹೆಚ್ಚಿಸುವ ಪ್ರಯತ್ನ ಆಗದ್ದರಿಂದ ಮತ್ತು ಸಾಮೂಹಿಕ ಬೇಸಾಯದಲ್ಲಿ ಹೆಜ್ಜೆಹೆಜ್ಜೆಗೂ ಅವರು ಎದುರಿಸುತ್ತಿದ್ದ ಜಟಿಲ ಕಾರ್ಯ ಸಂಚಾಲನೆಯ ಸಮಸ್ಯೆಗಳನ್ನು ಪರಿಹರಿಸುವ ಸಮರ್ಥ ಮುಂದಾಳುತನ ಅವರಿಗೆ ದೊರಕದ್ದರಿಂದ ಅವರು ನಿರುತ್ಸಾಹರಾಗಿ ಸಾಮೂಹಿಕ ಬೇಸಾಯವನ್ನು ಕೈಬಿಟ್ಟರು.

ಅಲ್ಲಲ್ಲಿ ಸಮರ್ಥ ಹಾಗೂ ಧ್ಯೇಯನಿಷ್ಠ ಸ್ಥಳಿಕ ಮುಂದಾಳುಗಳು ದೊರಕಿ ಸಾಮೂಹಿಕಬೇಸಾಯಸಂಘಗಳ ಮೇಲಿನ ಸಮಸ್ಯೆಗಳನ್ನು ಪರಿಹರಿಸಿದಲ್ಲಿ ಹಲವು ಬೇಸಾಯಸಂಘಗಳು ಸಾಮೂಹಿಕ ಬೇಸಾಯವನ್ನು ಮುಂದುವರೆಸಿಕೊಂಡು ಹೋದುವು. ಅವು ಅಭಿವೃದ್ಧಿ, ಉತ್ಪಾದನೆಗಳಲ್ಲಿ ಅದ್ಭುತ ಉನ್ನತಿಯನ್ನು ಸಾಧಿಸಿ, ಸಾಮೂಹಿಕ ಬೇಸಾಯದ ಪ್ರಯೋಜನಗಳ ಪ್ರಾತ್ಯಕ್ಷಿಕೆಯ ಕಾರ್ಯಮಾಡಿದವು. ಇದರಿಂದ ಸಹಕಾರಿ ಬೇಸಾಯದ ಕಾರ್ಯಕ್ರಮದ ಸಾರ್ಥಕತೆಯು ಸಿದ್ಧವಾಗುವುದಲ್ಲದೆ, ಸಂಸ್ಥೆಗಳಿಂದ ಸರಕಾರದಿಂದ ಹಾಗೂ ಜನನಾಯಕರಿಂದ ಇನ್ನೂ ಹೆಚ್ಚು ತೀವ್ರ ಪ್ರಯತ್ನಗಳಿಂದ ಸಹಕಾರಿಬೇಸಾಯದ ಪ್ರಚಾರವಾದಲ್ಲಿ. ಅದರ ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸುವ ನಿರೀಕ್ಷೆ ಇದೆ. ಈಗಿನ ಪ್ರಗತಿಯಿಂದ ಸಹ ಸರಕಾರದ ಸಹಾಯವು ವ್ಯರ್ಥವಾಗಿ. ಹಾಳಾಗಿಲ್ಲವೆಂಬುದು ಸ್ಪಷ್ಟವಿದೆ. ಪ್ರಯತ್ನಕ್ಕೆ ತಕ್ಕ ಪ್ರತಿಫಲವು ದೊರಕಿದೆ. ಇನ್ನು ತೀವ್ರ ಪ್ರಯತ್ನಗಳಿಂದ ಹೆಚ್ಚಿನ ಉನ್ನತಿಯನ್ನು ಸಾಧಿಸಬಹುದು.

ಸಹಾಯಕಉದ್ಯೋಗಗಳು

ಚಿಕ್ಕಬೇಸಾಯಗಾರರ ಬೇಸಾಯಸಂಘಗಳಿಗೆ ಸಹಾಯಕಉದ್ಯೋಗಗಳು ವಿಶೇಷ ಮಹತ್ವದವು. ಇಂಥ ಉದ್ಯೋಗಗಳಿಂದ ಅವುಗಳ ಸದಸ್ಯರಿಗೆ ಕೈತುಂಬ ಉದ್ಯೋಗ ಹಾಗೂ ಹೊಟ್ಟೆ ತುಂಬುವಷ್ಟು ಆದಾಯ ಕೊಡಲು ಸಾಧ್ಯವಾಗುತ್ತದೆ. ಬೇಸಾಯಸಂಘದ ಆರ್ಥಿಕ ಉನ್ನತಿಯೂ ಹೆಚ್ಚುತ್ತದೆ. ಸರಕಾರದ ಧೋರಣೆಯ ಪ್ರಕಾರ ಇಂಥ ಉದ್ಯೋಗಗಳನ್ನು ಕೈಕೊಳ್ಳಲು. ಸಂಬಂಧಿಸಿದ ವಿಭಿನ್ನ ಇಲಾಖೆಗಳಿಂದ ಸಾಕಷ್ಟು ಆರ್ಥಿಕ ಸಹಾಯ ಹಾಗೂ ತಾಂತ್ರಿಕ ಮಾರ್ಗದರ್ಶನ ದೊರಕಬೇಕು. ಆದರೆ ಈ ಕಾರ್ಯಕ್ರಮದ ಮಹತ್ವದ ಬಗ್ಗೆ ಇನ್ನೂ ಸಾಕಷ್ಟು ತಿಳಿವಳಿಕೆ ಬೆಳೆದಿಲ್ಲವಾದ್ದರಿಂದ ಸಹಾಯಕಉದ್ಯೋಗಗಳಿಗಾಗಿ ಬೇಸಾಯಸಂಘಗಳಿಗೆ ಸಾಕಷ್ಟು ಸಹಾಯ ಇನ್ನೂ ದೊರಕುತ್ತಿಲ್ಲ. ಹೀಗಿದ್ದರೂ ಪ್ರಯಾಸದಿಂದ ಮತ್ತು ದೊರಕಿದ ಅಲ್ಪ ಸಹಾಯದಿಂದ ಕೆಲವು ಬೇಸಾಯಸಂಘಗಳು ಸಹಾಯಕ ಉದ್ಯೋಗಗಳನ್ನು ಕೈಕೊಂಡವು. 14ಬೇಸಾಯ ಸಂಘಗಳು ಕೋಳಿಯ ಸಾಕಣೆಯನ್ನು ಕೈಕೊಂಡಿದ್ದವು. ಆದರೆ ಅವಕ್ಕೆ ಸಾಕಷ್ಟು ಈ ಉದ್ಯೋಗದ ಬಗ್ಗೆ ತಾಂತ್ರಿಕ ಅನುಭವ ಇಲ್ಲದ್ದರಿಂದ ಅವು ನಿರೀಕ್ಷಿಸಿದ ಸಫಲತೆಯನ್ನು ಪಡೆಯದೆ ಅದನ್ನು ಬಿಟ್ಟುಕೊಟ್ಟವು. 32 ಬೇಸಾಯಸಂಘಗಳು ಕುರಿಗಳನ್ನು ಸಾಕಿದವು. ಈ ಉದ್ಯೋಗದ ಪ್ರಯೋಜನವನ್ನು ಮನಗಂಡು ಆ ಸಂಘಗಳು ಕುರಿ ಸಾಕಣಿಕೆಯನ್ನು ಯಶಸ್ವಿಯಾಗಿ ಬೆಳೆಸಿವೆ. 15 ಬೇಸಾಯಸಂಘಗಳು ಹಿಂಡುವ

ದನಗಳನ್ನಿಟ್ಟು ಹೈನದ ಉದ್ಯೋಗವನ್ನು ಲಾಭದಾಯಕವಾಗಿ ನಡೆಸಿದವು. 20 ಸಂಘ ಗಳು ತೋಟಗಾರಿಕೆಯನ್ನು ಚೆನ್ನಾಗಿ ಬೆಳೆಸಿದವು.

ವಿವಿಧ ಇಲಾಖೆಗಳಿಂದ ಆರ್ಥಿಕ ಸಹಾಯ

ಸತತ ಪ್ರಯತ್ನ ಮಾಡಿದ್ದರಿಂದ ವಿವಿಧ ಇಲಾಖೆಗಳ ಅಧಿಕಾರಿಗಳಲ್ಲಿ ಸಹಕಾರಿ ಬೇಸಾಯದ ಬಗ್ಗೆ ಕ್ರಮೇಣವಾಗಿ ಸಹಾನುಭೂತಿ ಹುಟ್ಟಿತು. ಅದರಿಂದ ಸರಕಾರದ ಧೋರಣೆಯ ಪ್ರಕಾರ ಕ್ರಮೇಣವಾಗಿ ಬೇರೆ ಬೇರೆ ಇಲಾಖೆಗಳಿಂದ ಬೇಸಾಯಸಂಘ ಗಳಿಗೆ ಕೆಲಮಟ್ಟಿಗೆ ಆರ್ಥಿಕಸಹಾಯವು ದೊರಕಿತು. ಅಭಿವೃದ್ಧಿ ಇಲಾಖೆಯಿಂದ 46 ಬೇಸಾಯಸಂಘಗಳಿಗೆ ವಿಭಿನ್ನ ಅಭಿವೃದ್ಧಿಯ ಕಾರ್ಯಗಳಿಗಾಗಿ 1,13,000 ರೂಪಾಯಿಗಳ ಸಹಾಯ ದೊರಕಿತು. ತುಂಗಭದ್ರಾ ಅಭಿವೃದ್ಧಿ ಕ್ಷೇತ್ರದಿಂದ ಟ್ರಾಕ್ಟರು ಗಳಿಗಾಗಿ 9 ಬೇಸಾಯಸಂಘಗಳಿಗೆ 2,09,000 ರೂಪಾಯಿಗಳ ಸಾಲ ದೊರಕಿತು. ಸಮಾಜ ಕಲ್ಯಾಣದ ಇಲಾಖೆಯಿಂದ 112 ಹರಿಜನರ-ಗಿರಿಜನರ ಬೇಸಾಯಸಂಘಗಳಿಗೆ, ಅವುಗಳ ಅಭಿವೃದ್ಧಿಗಾಗಿ 9,95,850 ರೂಪಾಯಿಗಳ ಸಹಾಯ ದೊರಕಿತು. ಪಶು ಪಾಲನೆಯ ಇಲಾಖೆಯಿಂದ ಕೋಳಿಯಸಾಕಾಣಿಕೆ, ಹೈನದ ಉದ್ಯೋಗಗಳಿಗಾಗಿ 82 ಬೇಸಾಯಸಂಘಗಳಿಗೆ 4,54,000 ರೂಪಾಯಿಗಳ ಸಹಾಯ ದೊರಕಿತು. ಕೃಷಿ ಇಲಾಖೆಯಿಂದ ಟ್ರಾಕ್ಟರುಗಳಿಗಾಗಿ ನೇರವಾಗಿ 11 ಬೇಸಾಯ ಸಂಘಗಳಿಗೆ 1,47,000 ರೂಪಾಯಿಗಳ ಸಾಲವೂ ದೊರಕಿತು. ಬಿಡಿ ಕೈಗಾರಿಕೆಗಳ ವಿಕಾಸಕ್ಕಾಗಿ ರಾಜ್ಯದ ಖಾದಿ ಮತ್ತು ಗ್ರಾಮೋದ್ಯೋಗಗಳ ಮಂಡಲಿಯಿಂದ 25 ಬೇಸಾಯಸಂಘಗಳಿಗೆ 3,76,000 ರೂಪಾಯಿಗಳ ಆರ್ಥಿಕ ಸಹಾಯ ದೊರಕಿತು. ಜಿಲ್ಲಾ ಸಹಕಾರಿ ಬ್ಯಾಂಕು ಗಳು 76 ಸಂಘಗಳಿಗೆ ಮಾತ್ರ 4,03,000 ರೂಪಾಯಿಗಳ ಅಲ್ಪಾವಧಿಯ ಬೆಳೆ ಸಾಲವನ್ನು ಕೊಟ್ಟಿದ್ದವು. ಕೇಂದ್ರ ಅಭಿವೃದ್ಧಿಯ ಸಹಕಾರಿ ಬ್ಯಾಂಕು ಕೇವಲ 6 ಬೇಸಾಯ ಸಂಘಗಳಿಗೆ 1,43,500 ರೂಪಾಯಿಗಳ ದೀರ್ಘಾವಧಿಯ ಸಾಲವನ್ನು ಒದಗಿಸಿತ್ತು.

ಸಿಬ್ಬಂದಿಯ ವ್ಯವಸ್ಥೆ

ಸಹಕಾರಿ ಬೇಸಾಯದ ಕಾರ್ಯಕ್ರಮವನ್ನು ಯಶಸ್ವಿಯಾಗಿ ಹಬ್ಬಿಸಲು ರಾಜ್ಯ ಮಟ್ಟದಲ್ಲಿ ಕರ್ನಾಟಕಸರಕಾರವು ಸಹಕಾರಿಬೇಸಾಯದ ಕಾರ್ಯಸಮಿತಿಯ ಶಿಫಾರಸಿನ ಪ್ರಕಾರ, ರಾಷ್ಟ್ರೀಯ ಸ್ವಾತಂತ್ರ್ಯ ಸಮರದಲ್ಲಿ ಜೀವನವನ್ನು ಸವೆಸಿ, ಸಹಕಾರಿಬೇಸಾಯದ ರಚನಾತ್ಮಕ ಕಾರ್ಯದಲ್ಲಿ ತೊಡಗಿ, ಕೆಲವು ಬೇಸಾಯಸಂಘ ಗಳನ್ನು ಸಂಘಟಿಸಿ ನಡೆಸುವಲ್ಲಿ ಹಲವಾರು ವರ್ಷ ಕಳೆದು, ಸಹಕಾರಿಬೇಸಾಯದ ರಚನಾತ್ಮಕ ಕಾರ್ಯಕ್ಕಾಗಿ ಜೀವನವನ್ನು ಮೀಸಲಾಗಿರಿಸಿದ ಓರ್ವ ರಚನಾತ್ಮಕ ಕಾರ್ಯಕರ್ತರನ್ನು ಸಹಕಾರಿ ಬೇಸಾಯದ ವಿಶೇಷಾಧಿಕಾರಿಯನ್ನಾಗಿ ನೇಮಿಸಿತ್ತು. ಒಬ್ಬ ಜಾಯಿಂಟ್ ರಿಜಿಸ್ಟ್ರಾರರನ್ನು ಸಹ ರಾಜ್ಯಮಟ್ಟದಲ್ಲಿ ನೇಮಿಸಲಾಗಿತ್ತು. ಜಿಲ್ಲಾ ಮಟ್ಟದಲ್ಲಿ ಮತ್ತು ಪ್ರಯೋಗಕ್ಷೇತ್ರದ ಮಟ್ಟದಲ್ಲಿ ಈ ಕಾರ್ಯಕ್ರಮದ ಪ್ರಗತಿಗಾಗಿ ಸಹಕಾರ ಇಲಾಖೆಯ ಒಬ್ಬ ಸೀನಿಯರ್ ಇನ್‌ಸ್ಪೆಕ್ಟರರನ್ನು ಹಾಗೂ ಒಬ್ಬ

ವಿಸ್ತರಣಾಧಿಕಾರಿಗಳನ್ನು ನೇಮಿಸಲಾಗಿತ್ತು. ಈ ವಿಶೇಷವ್ಯವಸ್ಥೆಯಿಂದ ಸಹಕಾರಿ ಬೇಸಾಯದ ಪ್ರಚಾರ, ಶಿಕ್ಷಣ, ಮುಂತಾದ ಕಾರ್ಯಚಟುವಟಿಕೆಗಳು ಕರ್ನಾಟಕದಲ್ಲಿ ಯಶಸ್ವಿಯಾಗಿ ನಡೆದವು ಮತ್ತು ಅದರಿಂದ ಬೇಸಾಯಸಂಘಗಳಿಗೆ ಅಗತ್ಯವಾದ ಮಾರ್ಗದರ್ಶನ ದೊರಕಿತು. ಸಹಕಾರ ಇಲಾಖೆಯ ಬೇರೆ ಅಧಿಕಾರಿಗಳು ಈ ವಿಶೇಷ ಸಿಬ್ಬಂದಿಯವರಿಗೆ ಸಹಕಾರಿಬೇಸಾಯದ ಪ್ರಸಾರದಲ್ಲಿ ನೆರವಾದರು.

ಪ್ರಚಾರ ಕಾರ್ಯ

ಪ್ರೊಜೆಕ್ಟರ ಸಹಾಯದಿಂದ ಸಹಕಾರಿಬೇಸಾಯದ ಬಗ್ಗೆ ಹಾಗೂ ಪ್ರಗತಿಶೀಲ ಬೇಸಾಯದ ಬಗ್ಗೆ ಇರುವ ಚಲನಚಿತ್ರಗಳಿಂದ ಸಹಕಾರಿಬೇಸಾಯದ ಬಗ್ಗೆ ಜನಜಾಗೃತಿ ಬೆಳೆಸಲು ಪ್ರಯತ್ನ ಮಾಡಲಾಯಿತು. ಸಹಕಾರಿಬೇಸಾಯದ ಬಗ್ಗೆ ಸಾಕಷ್ಟು ಜನ ಸಾಹಿತ್ಯವನ್ನು ಪ್ರಕಟಿಸಿ ಹಂಚಲಾಯಿತು. ಕನ್ನಡ, ಇಂಗ್ಲಿಷ್ ಎರಡು ಭಾಷೆಗಳಲ್ಲಿ ಸೇರಿ 20 ಪುಸ್ತಕಗಳನ್ನು ಪ್ರಕಟಿಸಿ ಹಂಚಲಾಯಿತು. ಈ ಕಾರ್ಯದಲ್ಲಿ ಕರ್ನಾಟಕವು ದೇಶದಲ್ಲೇ ಅಗ್ರಗಾಮಿ ರಾಜ್ಯವಾಗಿತ್ತು. ಇಂಥಪುಸ್ತಕಗಳಲ್ಲಿ (i) ಸಹಕಾರಿ ಬೇಸಾಯದ ದರ್ಶನ (ii) ಯಶಸ್ವಿ ಬೇಸಾಯಸಂಘಗಳು (iii) ಚಿತ್ರಗಳಲ್ಲಿ ಸಹಕಾರಿಬೇಸಾಯ ಮುಖ್ಯವಾದವುಗಳು.

ಪ್ರತಿವರ್ಷ ಒಂದು ಯಶಸ್ವಿ ಬೇಸಾಯಸಂಘದಲ್ಲಿ ರಾಜ್ಯಮಟ್ಟದ ಸಹಕಾರಿ ಬೇಸಾಯದ ವಿಚಾರ ಗೋಷ್ಠಿಯನ್ನು ನಡೆಸಲಾಯಿತು. 1960ರಿಂದ 1973ರವರೆಗೆ ಇಂಥ 4 ವಿಚಾರಗೋಷ್ಠಿಗಳನ್ನು ನಡೆಸಲಾಯಿತು. ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ 48 ವಿಚಾರಗೋಷ್ಠಿಗಳನ್ನು ಏರ್ಪಡಿಸಿ ಬೇಸಾಯಸಂಘಗಳ ಕಾರ್ಯ ಕರ್ತರಿಗೆ ಹಾಗೂ ಸದಸ್ಯರಿಗೆ ಮತ್ತು ಗ್ರಾಮದ ಮುಂದಾಳುಗಳಿಗೆ ಸಹಕಾರಿ ಬೇಸಾಯದ ಪ್ರಯೋಜನ ಹಾಗೂ ಸರಿಯಾದ ಕಾರ್ಯಪದ್ಧತಿಗಳ ಬಗ್ಗೆ ತಿಳಿವಳಿಕೆ ಯನ್ನು ಕೊಡಲಾಯಿತು.

ದೇಶದಲ್ಲಿ ವಿಭಿನ್ನ ರಾಜ್ಯಗಳಲ್ಲಿಯ ಬೇಸಾಯಸಂಘಗಳ ಸಂಚಾಲನೆಯನ್ನು ಪ್ರತ್ಯಕ್ಷ ನೋಡಿ ಅನುಭವ ಪಡೆಯಲು ಬೇಸಾಯಸಂಘಗಳ ಪ್ರತಿನಿಧಿಗಳ 5 ತಂಡ ಗಳನ್ನು ಭಾರತದರ್ಶನ ಯಾತ್ರೆಗೆ ಕಳಿಸಲಾಗಿತ್ತು.

ತರಬೇತಿ

ಈ ಉದ್ದೇಶವನ್ನು ಈಡೇರಿಸಲು ಧಾರವಾಡದಲ್ಲಿಯ ಗ್ರಾಮೀಣ ಅಭಿವೃದ್ಧಿಯ ತರಬೇತಿ ಕೇಂದ್ರದಲ್ಲಿನ ಸಹಕಾರಿ ಬೇಸಾಯದ ತರಬೇತಿಯ ವಿಭಾಗದಲ್ಲಿ 30-6-1972 ರವರೆಗೆ 628 ವಿದ್ಯಾರ್ಥಿಗಳೂ 253 ವಿಸ್ತರಣಾಧಿಕಾರಿಗಳೂ ತರಬೇತಿ ಪಡೆದರು.

ಸಹಕಾರಿ ಬೇಸಾಯದ ಶಿಕ್ಷಣದ ಕಾರ್ಯಕ್ರಮವನ್ನು ಪ್ರಾರಂಭಿಸುವ ಪೂರ್ವದಲ್ಲಿ 1960ರಲ್ಲಿ ಹೈದರಾಬಾದಿನಲ್ಲಿ ರಾಜ್ಯಮಟ್ಟದಅಧಿಕಾರಿಗಳ ಹಾಗೂ ಪ್ರಮುಖ

ಕಾರ್ಯಕರ್ತರ ಅಖಿಲ ಭಾರತದ ವಿಚಾರಗೋಷ್ಠಿಯೊಂದನ್ನು ಭಾರತಸರಕಾರವು ನಡೆಸಿತು. ಅದರಂತೆ ಅದೇ ಕಾಲಕ್ಕೆ ಪುಣೆ ಜಿಲ್ಲೆಯಲ್ಲಿ ಮಾಂಜರಿಯಲ್ಲಿ ಒಂದು ಯಶಸ್ವಿ ಬೇಸಾಯಸಂಘವಾದ ಸುಭಾಷ್ ಸಹಕಾರಿಬೇಸಾಯಸಂಘದಲ್ಲಿ ಕರ್ನಾಟಕ, ಮಹಾರಾಷ್ಟ್ರ, ಗುಜರಾಥಗಳ ಪ್ರಮುಖ ಅಧಿಕಾರಿಗಳಿಗೆ ಹಾಗೂ ಕಾರ್ಯಕರ್ತರಿಗೆ ಈ ಕಾರ್ಯಕ್ರಮದ ಬಗ್ಗೆ ತರಬೇತಿ ಕೊಡಲಾಯಿತು.

1966ನೇ ವರ್ಷದ ಮೇ ತಿಂಗಳಿನ ದಿಲ್ಲಿಯಲ್ಲಿ ಯುಕ್ತರಾಷ್ಟ್ರಸಂಘದ ಆಹಾರ ಮತ್ತು ಬೇಸಾಯ ಸಂಘಟನೆಯ ಆಶ್ರಯದಲ್ಲಿ 2 ವಾರ ಜರುಗಿದ ಅಂತರ ರಾಷ್ಟ್ರೀಯ ಸಹಕಾರಿಬೇಸಾಯದ ವಿಚಾರಗೋಷ್ಠಿಯಲ್ಲಿ ರಾಜ್ಯದ ಸಹಕಾರಿ ಬೇಸಾಯದ ಓರ್ವ ವಿಶೇಷಾಧಿಕಾರಿಗಳು ಭಾರತದ ಪ್ರತಿನಿಧಿಗಳಾಗಿ ಆರಿಸಲ್ಪಟ್ಟು ಅದರಲ್ಲಿ ಯಶಸ್ವಿಯಾಗಿ ಭಾಗವಹಿಸಿದರು.

ಸಹಕಾರಿ ಬೇಸಾಯದ ಬಗ್ಗೆ ಜನಜಾಗ್ರತಿಯನ್ನು ಬೆಳೆಸಲು ಸಹಕಾರಿಬೇಸಾಯ ಸಂಘಗಳ ರಾಜ್ಯ ಫೆಡರೇಶನ್ನು ಪ್ರತಿವರ್ಷ ಒಂದಿಲ್ಲೊಂದು ಯಶಸ್ವಿ ಬೇಸಾಯ ಸಂಘದಲ್ಲಿ ರಾಜ್ಯಮಟ್ಟದ ವಿಚಾರಗೋಷ್ಠಿಯನ್ನು ಏರ್ಪಡಿಸುತ್ತ ಬಂದಿದೆ. 1970ರಲ್ಲಿ ಚಿಕ್ಕಮಂಗಳೂರ ಜಿಲ್ಲೆಯಲ್ಲಿ ತ್ಯಾಗದಬಾಗಿಯ ಶ್ರೀ ಸಿದ್ಧೇಶ್ವರ ಸಹಕಾರಿ ಬೇಸಾಯ ಸಂಘದಲ್ಲಿ 1972ರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಗುಡೇಕೋಟೆಯ ಸರ್ವೋದಯ ಸಹಕಾರಿ ಬೇಸಾಯಸಂಘದಲ್ಲಿ, 1973ರಲ್ಲಿ ಥಾಣಕ ಶಿರೂರ ಸಹಕಾರಿ ಬೇಸಾಯಸಂಘದಲ್ಲಿ ಇಂಥ ರಾಜ್ಯದ ಸಹಕಾರಿ ಬೇಸಾಯದ ವಿಚಾರಗೋಷ್ಠಿಗಳನ್ನು ರಾಜ್ಯ ಫೆಡರೇಶನ್ನು ನಡೆಸಿತು.

ಯಶಸ್ವಿ ಸಹಕಾರಿಬೇಸಾಯದ ಪ್ರಾತ್ಯಕ್ಷಿಕೆಗಳು

ಸಹಕಾರಿಬೇಸಾಯವನ್ನು ಸಾಮಾನ್ಯಬೇಸಾಯಗಾರರಲ್ಲಿ ಪರಿಣಾಮಕಾರಿ ಯಾಗಿ ಹಬ್ಬಿಸಬೇಕಾದರೆ ಪುಸ್ತಕದ ಪ್ರಚಾರಕ್ಕಿಂತ ಯಶಸ್ವಿಯಾಗಿ ನಡೆದ ಬೇಸಾಯ ಸಂಘದ ಪ್ರಾತ್ಯಕ್ಷಿಕೆಗಳು ವಿಶೇಷ ಮಹತ್ವದವು. ಇಂಥ ಬೇಸಾಯಸಂಘಗಳು ಸಾಧಿಸಿದ ಸಫಲತೆಯು ಸಹಕಾರಿಬೇಸಾಯದ ಬಗ್ಗೆ ಇರುವ ನಿರಾಧಾರ ಸಂದೇಹ ಗಳನ್ನು ದೂರ ಮಾಡುವುದಲ್ಲದೆ, ಬೇಸಾಯಗಾರರಲ್ಲಿ ಸಹಕಾರಿ ಬೇಸಾಯದ ಬಗ್ಗೆ ನಿಷ್ಠೆಯನ್ನು ಬೆಳೆಸುತ್ತದೆ. ಇಂಥ ಸಂಘಗಳು ಎದುರಿಸಿರುವ ತೊಡಕು, ತೊಂದರೆಗಳು, ಅವುಗಳ ಕಾರ್ಯಪದ್ಧತಿ ಸುಧಾರಿಸಿದ ಬೇಸಾಯ ಮುಂತಾದವುಗಳಿಂದ ಉಳಿದ ಬೇಸಾಯಸಂಘಗಳಿಗೆ ಸಕ್ರಿಯ ಹಾಗೂ ಉಪಯುಕ್ತವಾದ ಮಾರ್ಗದರ್ಶನ ದೊರಕು ತ್ತದೆ. ಜಾಗ್ರತಿ ಹಾಗೂ ಯೋಗ್ಯ ಮುಂದಾಳುತನದ ಅಭಾವದಿಂದಲೇ ಸಹಕಾರಿ ಬೇಸಾಯದ ಪ್ರಗತಿಯು ಮಂದವಾಗಿ ನಡೆದಿದೆ. ಯಶಸ್ವಿ ಬೇಸಾಯಸಂಘಗಳ ಪ್ರಾತ್ಯಕ್ಷಿಕೆಗಳು ಜನಜಾಗ್ರತಿ ಹಾಗೂ ಮುಂದಾಳುತನವನ್ನು ಬೆಳೆಸಿ ಸಹಕಾರಿ ಬೇಸಾಯದ ಪ್ರಗತಿಯನ್ನು ತೀವ್ರಗೊಳಿಸುತ್ತವೆ. ಅಂಥ ಕೆಲವು ಯಶಸ್ವೀ ಬೇಸಾಯ ಸಂಘಗಳು ಸಾಧಿಸಿದ ಪ್ರಗತಿಯನ್ನು ಇಲ್ಲಿ ಸಂಕ್ಷೇಪದಲ್ಲಿ ಸಮೀಕ್ಷಿಸಲಾಗಿದೆ.

ಕರ್ನಾಟಕದಲ್ಲಿಯ ಕೆಲವು ಯಶಸ್ವೀ ಬೇಸಾಯಸಂಘಗಳ ಸಫಲ ಸುಧಾರಣೆಗಳ ಪ್ರಗತಿ ನೋಟ

(30–6–1972)

ಅ.ಸಂ.	ಬೇಸಾಯಸಂಘದ ಹೆಸರು	ವಶದಲ್ಲಿಯ ಭೂಮಿ (ಎಕರೆಗಳಲ್ಲಿ)	ಸಾಗಾದ ಭೂಮಿ (ಎಕರೆಗಳಲ್ಲಿ)	ವಿಶಿಷ್ಟ ಸುಧಾರಣೆಗಳ ವಿವರ	ಹೆಚ್ಚಿದ ವಾರ್ಷಿಕ ಉತ್ಪತ್ತಿಯ ಬೆಲೆ		ಭೂಮಿಯ ಹೆಚ್ಚಿದ ಬೆಲೆ	
					ಸಾಮೂಹಿಕ ಬೇಸಾಯದ ಮೊದಲು	ಸಾಮೂಹಿಕ ಬೇಸಾಯದ ನಂತರ	ಸಾಮೂಹಿಕ ಬೇಸಾಯದ ಮೊದಲು	ಸಾಮೂಹಿಕ ಬೇಸಾಯದ ನಂತರ
1	2	3	4	5	6	7	8	9
					ರೂ.	ರೂ.	ರೂ.	ರೂ.
1.	ಹಬ್ಬನಗಟ್ಟಾ ಸಹಕಾರಿ ಸಾಮುದಾಯಕಬೇಸಾಯಸಂಘ ಹಾಸನ ಜಿಲ್ಲೆ	150	115	4 ಬಾವಿಗಳ ಮತ್ತು 33 ಎಕರೆ ತೆಂಗಿನ ತೋಟ	ಏನೂ ಇಲ್ಲ	35.000	30,000	2,28,000
2.	ಸರ್ವೋದಯ ಸಹಕಾರಿ ಸಾಮುದಾಯಕಬೇಸಾಯಸಂಘ ಗುಡೇ ಕೋಟಾ ಬಳ್ಳಾರಿ ಜಿಲ್ಲೆ	100	60	4 ಬಾವಿಗಳು, 1 ಕೆರೆ, 14 ವಾಸದ ಮನೆಗಳು	ಏನೂ ಇಲ್ಲ	28.500	2,000	1,19,000
3.	ಧಾಣಕ ಶಿರೂರ ಸಹಕಾರಿ ಸಂಯುಕ್ತ ಬೇಸಾಯಸಂಘ ವಿಜಾಪುರ ಜಿಲ್ಲೆ	41	33	ಹೊಳೆಗೆ 5 ಕಲ್ಲೊಡುಗಳು ಹೊಳೆಗೆ 25 ಹಾ.ಪಾ.ನ. ಪಂಪು ಸೆಟ್ಟುಗಳು	2,000	45,000	4,000	1,21,000

4.	ತ್ಯಾಗದ ಬಾಗಿ ಸಿದ್ದೇಶ್ವರ ಸಾಮುದಾಯಕ ಬೇಸಾಯ ಸಂಘ ಚಿಕ್ಕಮಂಗಳೂರು ಜಿಲ್ಲೆ	346	250	ಕಾಡುಭೂಮಿಯ ಸುಧಾರಣೆ	ಏನೂ ಇಲ್ಲ	50,000	34,000	3,96,000
5.	ಮಹಮ್ಮದ ನಗರ ಸಾಮುದಾಯಕ ಬೇಸಾಯಸಂಘ ಶಿವಪುರ ರಾಯಚೂರು	75	70	ತುಂಗಭದ್ರಾ ಹೊಳೆಗೆ 25 ಹಾ.ಪಾ.ನ. ಪಂಪುಸೆಟ್ಟು 45 ಎಕರೆ ನಿರಾವರಿ	2,000	55,000	75,000	3,50,000
6.	ಕಾರದಗಾ ಸಂಯುಕ್ತ ಬೇಸಾಯಸಂಘ ಬೆಳಗಾವಿ ಜಿಲ್ಲೆ	53	25	10 ಹಾ.ಪಾನ ನೀರಾವರಿ ಪಂಪು ಸೆಟ್ಟು	1,000	32,000	21,000	92,000
7.	ಸಾರಥಿ ಕಿಸಾನ ಸಂಯುಕ್ತ ಬೇಸಾಯ ಸಂಘ ಶಿವಮೊಗ್ಗೆ ಜಿಲ್ಲೆ	68	64	5 ಹಾ.ಪಾ.ನ ನೀರಾವರಿ ಪಂಪು 15 ಎಕರೆ ನೀರಾವರಿ	1.000	35,000	7,000	2,00,00

ರಾಜ್ಯದ ಸಹಕಾರಿ ಬೇಸಾಯದ ಸಲಹಾ ಮಂಡಳಿ

ರಾಜ್ಯದಲ್ಲಿ ಸಹಕಾರಿ ಬೇಸಾಯವನ್ನು ಹಬ್ಬಿಸಲು ಅದರ ಆರ್ಥಿಕ ಹಾಗೂ ಆಡಳಿತ ಸಂಬಂಧದ ಸಮಸ್ಯೆಗಳನ್ನು ಚರ್ಚಿಸಿ, ಅವುಗಳನ್ನು ಪರಿಹರಿಸಲು ಈ ಕಾರ್ಯಕ್ರಮದ ಪ್ರಗತಿಗಾಗಿ ತಕ್ಕ ಕ್ರಮ ಕೈಕೊಳ್ಳಲು ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ರಾಜ್ಯದ ಸಹಕಾರಿಬೇಸಾಯದ ಸಲಹಾ ಮಂಡಳಿಯನ್ನು ಸ್ಥಾಪಿಸಲಾಗಿತ್ತು. ಸಹಕಾರ ಸಚಿವರೇ ಅದರ ಅಧ್ಯಕ್ಷರಾಗಿದ್ದರು. ಸಹಕಾರಿಬೇಸಾಯದ ವಿಶೇಷಾಧಿಕಾರಿಗಳು ಅದರ ಕಾರ್ಯದರ್ಶಿಗಳು ಆಗಿದ್ದರು. ಮಂಡಳದಲ್ಲಿ ವಿಭಿನ್ನ ಮಹತ್ವದ ಅಭಿವೃದ್ಧಿ ಇಲಾಖೆಗಳ ಪ್ರಮುಖ ಅಧಿಕಾರಿಗಳು, ಸಹಕಾರಿಬೇಸಾಯದಲ್ಲಿ ಆಸ್ಥೆಯುಳ್ಳ ಸಾಮಾಜಿಕ ಕಾರ್ಯಕರ್ತರು ಮತ್ತು ಬೇಸಾಯಸಂಘಗಳ ಪ್ರತಿನಿಧಿಗಳು ಮಂಡಳದ ಸದಸ್ಯರಾಗಿದ್ದರು. ಬೇಸಾಯಸಂಘಗಳ ಜಿಲ್ಲಾಫೆಡರೇಶನ್ನುಗಳ ಅಧ್ಯಕ್ಷರೂ ಮಂಡಳದ ಸದಸ್ಯರಾಗಿದ್ದರು. ತೃತೀಯ ಯೋಜನೆಯಲ್ಲಿ ಸಹಕಾರಿ ಬೇಸಾಯವನ್ನು ಹಬ್ಬಿಸುವಲ್ಲಿ ಮಂಡಳಿಯು ಬಹಳಷ್ಟು ನೆರವಾಯಿತು.

ಅಧ್ಯಾಯ 13

ಪರದೇಶಗಳಲ್ಲಿ ಸಹಕಾರಿಬೇಸಾಯ

ಭಾರತದ ಹೊರಗೂ ಅನೇಕ ದೇಶಗಳಲ್ಲಿ ಸಹಕಾರಿಬೇಸಾಯದ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ. ಸಹಕಾರಿಬೇಸಾಯದ ಪ್ರಯೋಗದಲ್ಲಿ ಈ ದೇಶಗಳ ಕೆಲವು ಮಹತ್ವದ ಅನುಭವಗಳು ಭಾರತಕ್ಕೂ ಬಹಳ ಉಪಯುಕ್ತವಾಗಿವೆ.

(1) ಸೋವಿಯತ್ ರಶಿಯಾದಲ್ಲಿ ಸಹಕಾರಿಬೇಸಾಯ

ಝಾರನ ಆಡಳಿತದಲ್ಲಿ ರಶಿಯಾ ದೇಶವು ಜಗತ್ತಿನಲ್ಲಿಯೇ ಎಲ್ಲಕ್ಕೂ ಹಿಂದುಳಿದ ಒಕ್ಕಲುತನದ ದೇಶವಾಗಿತ್ತು. ಅಲ್ಲಿಯೂ ಭಾರತದಲ್ಲಿಯಂತೆ ಕಟ್ಟಿಗೆಯ ರಂಟೆ, ಕುಂಟೆ ಮೊದಲಾದ ಹಿಂದಿನ ಕಾಲದ ಉಪಕರಣಗಳನ್ನೇ ಬೇಸಾಯಗಾರರು ಉಪಯೋಗಿಸುತ್ತಿದ್ದರು. ಜಾಗೀರದಾರಿ ಪದ್ಧತಿಯ ಶೋಷಣೆ ಜೋರಾಗಿ ಇತ್ತು. ಶಾಸ್ತ್ರೀಯ ಬೇಸಾಯದ ಸುಳಿವೇ ಇರಲಿಲ್ಲ. 20 ಕೋಟಿ 50 ಲಕ್ಷ ಎಕರೆ ಭೂಮಿಯಲ್ಲಿ 1 ಕೋಟಿ 5 ಲಕ್ಷ ಎಕರೆಯಷ್ಟು ಭೂಮಿಯ ಚಿಕ್ಕಚಿಕ್ಕ ಹೊಲದ ತುಂಡುಗಳನ್ನು ಬಡಬೇಸಾಯಗಾರರು ಒದ್ದಾಡುತ್ತ ಸಾಗುವಮಾಡುತ್ತಿದ್ದರು. ಜಾಗೀರದಾರರ ವಶದಲ್ಲಿ ಸರಾಸರಿಯಾಗಿ ಒಂದು ಕುಟುಂಬಕ್ಕೆ 6,750 ಎಕರೆಯಂತೆ 19,32,50,000 ಎಕರೆ ಫಲವತ್ತಾದ ಉತ್ತಮ ಭೂಮಿ ಇದ್ದವು. ಈ ಪರಿಸ್ಥಿತಿಗಳಲ್ಲಿ ಬಡಬೇಸಾಯಗಾರರು ಬರ, ಬೇನೆ, ಬಡತನಗಳಲ್ಲಿ ನಿರಂತರವಾಗಿ ಬಳಲುತ್ತಿದ್ದರು.

1917ರಲ್ಲಿ ಅಕ್ಟೋಬರ್‌ನಲ್ಲಿ ಸಾಮ್ಯವಾದಿ ಕ್ರಾಂತಿಯ ಪರಿಣಾಮವಾಗಿ ಮಹಾನಾಯಕರಾದ ಲೆನಿನ್ನರ ನೇತೃತ್ವದಲ್ಲಿ 'ಬೋಲಶೆವಿಕ್' ಸರಕಾರದ ಸ್ಥಾಪನೆಯಾಯಿತು. ಕೂಡಲೇ 'ಬೋಲ್‌ಶೆವಿಕ್' ಸರಕಾರವು 'ಭೂಆಜ್ಞೆ'ಯನ್ನು ಕಟ್ಟುನಿಟ್ಟಾಗಿ ಕಾರ್ಯಗತ ಮಾಡಿ ಜಾಗೀರದಾರಿ ಪದ್ಧತಿಯನ್ನು ಯಾವುದೇ ಪರಿಹಾರವಿಲ್ಲದೆ ರದ್ದುಗೊಳಿಸಿತು. 38,12,50,000 ಎಕರೆ ಭೂಮಿಯನ್ನು ಯಾವುದೇ ಪರಿಹಾರ ಅಥವಾ ಬೆಲೆ ಇಲ್ಲದೆಯೇ ಬಡಬೇಸಾಯಗಾರರಲ್ಲಿ ಹಂಚಲಾಯಿತು. ಅವರು ಪ್ರತಿವರ್ಷ ಜಾಗೀರದಾರರಿಗೆ ಮುಟ್ಟಿಸಬೇಕಾದ 50 ಕೋಟಿ ರೂಬಲ್ ಲಾವಣಿಯಿಂದಲೂ, ಮತ್ತು ಭೂಬ್ಯಾಂಕಿಗೆ ತೆತ್ತಬೇಕಾದ 132 ಕೋಟಿ 60 ಲಕ್ಷ ರೂಬಲ್ಲುಗಳ ಸಾಲದಿಂದಲೂ ಮುಕ್ತಾಯಗೊಳಿಸಲ್ಪಟ್ಟರು. ಬೇಸಾಯಗಾರರ ಕುಟುಂಬದಲ್ಲಿದ್ದ ದುಡಿಯುವವರ ಅಥವಾ ಉಣ್ಣುವವರ ಸಂಖ್ಯೆಯ ಮೇರೆಗೆ ಭೂಮಿಯನ್ನು ಹಂಚಲಾಯಿತು. ಭೂಮಿಯನ್ನು ಲಾವಣಿ ಹಚ್ಚದೆ ತಮ್ಮ ಪರಿವಾರದ ಶ್ರಮದಿಂದಲೇ ಸಾಗುಮಾಡುವ ಕಡ್ಡಾಯವಿತ್ತು. ಭೂಮಿಯ ಸಾಗುವಳಿಯನ್ನು ವೈಯಕ್ತಿಕವಾಗಿಯೇ ಸಾಗಿಸುವ ಸಂಪೂರ್ಣ ಸ್ವಾತಂತ್ರ್ಯವಿತ್ತು.

ಭೂಮಿಯ ವೈಯಕ್ತಿಕ ಹಂಚಿಕೆಯಿಂದ ಸಾಮಾಜಿಕ, ಆರ್ಥಿಕ ವಿಷಮತೆ ಅಳಿಯದು. ಸಾಧನಸಲಕರಣೆಗಳ ವಿಷಮತೆಯಿಂದ ಶ್ರೀಮಂತ ಬೇಸಾಯಗಾರರು ತಮ್ಮ ಉತ್ಪತ್ತಿ ಹೆಚ್ಚಿಸಿ, ಉಳಿತಾಯದಿಂದ ಅಸಹಾಯಕರಾದ ಬಡಬೇಸಾಯ ಗಾರರನ್ನು ಮತ್ತೆ ತಮ್ಮ ದಾಸರನ್ನಾಗಿ ಮಾಡುವುದು ನಡೆಯಿತು. ಆದ್ದರಿಂದ ತಮ್ಮ ಆರ್ಥಿಕ, ಸಾಮಾಜಿಕ ಉದ್ಧಾರಕ್ಕಾಗಿಯೇ ಸಾಮೂಹಿಕಬೇಸಾಯವನ್ನು ಕೈಕೊಳ್ಳಲು ಚಿಕ್ಕಬೇಸಾಯಗಾರರಿಗೆ ಸಾಮ್ಯವಾದಿಗಳು ಮನವೊಲಿಸುತ್ತಿದ್ದರು.

ವೈಯಕ್ತಿಕ ಬೇಸಾಯದಲ್ಲಿ ಸಾಮ್ಯವಾದಿಗಳಿಗೆ ವಿಶ್ವಾಸವಿರದಿದ್ದರೂ ಬಲಾತ್ಕಾರ ದಿಂದ ಬೇಸಾಯಗಾರರ ಮೇಲೆ ಸಾಮೂಹಿಕ ಬೇಸಾಯವನ್ನು ಹೇರಿದರೆ, ಬೇಸಾಯ ಗಾರರ ವಿಶ್ವಾಸ, ಒಗ್ಗಟ್ಟುಗಳು ಒಡೆದುಹೋಗುವವೆಂಬುದು ಅವರಿಗೆ ಚೆನ್ನಾಗಿ ಗೊತ್ತಿತ್ತು. ಭೂಸುಧಾರಣೆಗಳ ಪ್ರಾಮಾಣಿಕ ಕಾರ್ಯಾಚರಣೆಯಿಂದ ಸಾಮ್ಯವಾದಿ ಸರಕಾರದಲ್ಲಿ ಬೇಸಾಯಗಾರ ಜನತೆಯ ಅಪಾರ ವಿಶ್ವಾಸವು ಬೆಳೆದಿತ್ತು. ಆ ಜನತೆಯ ವಿಶ್ವಾಸ, ಉತ್ಸಾಹಗಳನ್ನು ಭದ್ರಪಡಿಸ್ಸಿ, ಅವುಗಳ ಬಲದಿಂದಲೇ ಸಾಮೂಹಿಕ ಬೇಸಾಯವನ್ನು ಜನಪ್ರಿಯ ಮಾಡುವುದು ಸಾಮ್ಯವಾದಿಗಳ ಧೋರಣೆಯಾಗಿತ್ತು. ಆದ್ದರಿಂದ ವೈಯಕ್ತಿಕ ಬೇಸಾಯದಲ್ಲಿ ತಮ್ಮ ಏಳುಬೀಳುಗಳಿಂದಲೇ, ಜವಣೆಗಳ ಅನುಭವದಿಂದಲೇ ಸಾಮೂಹಿಕ ಬೇಸಾಯದ ಪ್ರಯೋಜನವನ್ನು ಮನಗಾಣಲು ಸಾಮ್ಯವಾದಿ ಸರಕಾರವು ಬೇಸಾಯಗಾರರಿಗೆ ಅವಕಾಶ ಕೊಟ್ಟಿತು. ಆದರೆ ಹೆಜ್ಜೆ ಹೆಜ್ಜೆಗೂ ಬೇಸಾಯಗಾರ ಜನತೆಯಲ್ಲಿ ಸಾಮೂಹಿಕಬೇಸಾಯದ ಬಗ್ಗೆ ಸಾಮೂಹಿಕ ಜಾಗೃತಿಯನ್ನು ಬೆಳೆಸಲು ಸಾರ್ವತ್ರಿಕಪ್ರಯತ್ನಗಳು ಸರಕಾರದಿಂದ ಹಾಗೂ ಸಾಮ್ಯವಾದಿ ಪಕ್ಷದ ಕಾರ್ಯಕರ್ತರಿಂದ ನಡದೇ ಇದ್ದವು.

ಸಾಮ್ಯವಾದಿ ಸರಕಾರವು ಬಡಬೇಸಾಯಗಾರರಿಗೆ ಭೂಮಿಯನ್ನಷ್ಟೇ ಹಂಚಲಿಲ್ಲ. ಅವರ ಬೇಸಾಯವನ್ನು ಸುಧಾರಿಸಲು, ಅಗ್ಗಬಡ್ಡಿಯ ಸಾಲ, ಉಪಕರಣ, ತಜ್ಞರ ತಾಂತ್ರಿಕ ಸೇವೆ ಮೊದಲಾದ ಸಹಾಯವನ್ನೂ ಅದು ಬೇಸಾಯಗಾರರಿಗೆ ಒದಗಿಸಿತು. ಇಷ್ಟೆಲ್ಲ ಸಹಾಯ ಸವಲತ್ತುಗಳನ್ನು ಒದಗಿಸಿದರೂ, ಸಾಮ್ಯವಾದಿ ಸರಕಾರದ ಸ್ಥಾಪನೆಯ 10 ವರ್ಷಗಳ ನಂತರವೂ ಬೇಸಾಯದ ಉತ್ಪಾದನೆಯು ಕೆಳಮಟ್ಟ ದಲ್ಲಿಯೇ ಉಳಿಯಿತು. ಬೇಸಾಯದ ಉತ್ಪತ್ತಿಯು 1913 ಕ್ಕಿಂತ ಕೆಳಕ್ಕಿಳಿಯಿತು. ಶ್ರೀಮಂತ ಬೇಸಾಯಗಾರರು ಬಡಬೇಸಾಯಗಾರರ ಆರ್ಥಿಕ ಅಸಹಾಯತನವನ್ನು ಶೋಷಿಸಿ ಅವರನ್ನು' ನುಂಗಿಬಲಿಯಹತ್ತಿದರು. ಚಿಕ್ಕಬೇಸಾಯಗಾರರು ಕಾಗದದಲ್ಲಿ, ಕಾಯಿದೆಯಲ್ಲಿ ಸ್ವಂತ ಬೇಸಾಯಗಾರರಾಗಿದ್ದರೂ, ತಮ್ಮ ಅಸಹಾಯತನದಿಂದ, ಕಂಗಾಲತನದಿಂದ ತಮ್ಮ 'ತುಂಡುಕಮತ'ಗಳನ್ನು ಖಾಸಗಿಯಾಗಿ ಹೊಟ್ಟೆಯ ಪಾಡಿಗಾಗಿ ಶ್ರೀಮಂತ ಬೇಸಾಯಗಾರರಿಗೆ (ಕುಲಕರಿಗೆ) ಮಾರಿಕೊಂಡರು. 1928ರಲ್ಲಿ ಒಡಕಮತ ಗಳ ಸಂಖ್ಯೆ ಮೊದಲು 2.50 ಕೋಟಿ ಇದ್ದದ್ದು 82.50 ಲಕ್ಷಕ್ಕೆ ಇಳಿಯಿತು. ಅಂದರೆ ಕಂಗಾಲತನದಲ್ಲಿ ಮುಳುಗಿದ ಚಿಕ್ಕಬೇಸಾಯಗಾರರೆಲ್ಲರೂ ಮಕ್ತೆ ಶ್ರೀಮಂತ ಬೇಸಾಯ ಗಾರರ (ಕುಲಕರ) ಜೀತಾಳುಗಳು ಅಥವಾ ಕೂಲಿಯಾಳು ಆಗಿಬಿಟ್ಟರು. 10.50 ಲಕ್ಷ

ಶ್ರೀಮಂತ ಕಮತ (ಕುಲಕ)ಗಳು ಇಂಥ ಕೂಲಿಯಾಳುಗಳಿಂದಲೇ ನಡೆದಿದ್ದವು. ಇಂಥ ಕಂಗಾಲತನದಲ್ಲಿ ಮುಳುಗಿದ ಬಡಬೇಸಾಯಗಾರರಿಗೆ ಸಾಮೂಹಿಕ ಬೇಸಾಯವೊಂದೇ ಉದ್ಧಾರದ ದಾರಿಯೆಂದು ಸಾಮ್ಯವಾದಿ ಸರಕಾರವೂ, ಸಾಮ್ಯವಾದಿ ನಾಯಕರೂ, ಕಾರ್ಯಕರ್ತರೂ ಅವಿರತವಾಗಿ ಜನತೆಗೆ ಬೋಧಿಸುತ್ತಿದ್ದರು.

ಸಾಮೂಹಿಕ ಬೇಸಾಯದಿಂದ ಮಾತ್ರ ಬೇಸಾಯದ ಯಂತ್ರಗಳನ್ನೂ, ಆಧುನಿಕ ಶಾಸ್ತ್ರೀಯ ಸುಧಾರಣೆಗಳನ್ನೂ, ಬಳಕೆಯಲ್ಲಿ ತಂದು ತಮ್ಮ ಬೇಸಾಯದ ಉತ್ಪತ್ತಿಯನ್ನು ಬಡಬೇಸಾಯಗಾರರು ಹೆಚ್ಚಿಸುವುದು ಸಾಧ್ಯವಿತ್ತು. ಅದರಿಂದ ತಮ್ಮ ಜೀವನ ಸ್ಥಿತಿಯನ್ನು ಅವರು ಸುಧಾರಿಸುವುದಲ್ಲದೆ ಪ್ರಥಮ ಸಾಮ್ಯವಾದಿ ರಾಷ್ಟ್ರದ ಸಮೃದ್ಧಿಯನ್ನು ಹೆಚ್ಚಿಸಿ ಅದನ್ನು ಭದ್ರಪಡಿಸುವುದು ಸಾಧ್ಯವೆಂಬುದನ್ನು ತಮ್ಮ ಅನುಭವದಿಂದಲೂ, ಸಾಮ್ಯವಾದಿ ನಾಯಕರೂ. ಕಾರ್ಯಕರ್ತರೂ ಕೊಟ್ಟ ಶಿಕ್ಷಣದಿಂದಲೂ ಬಡಬೇಸಾಯಗಾರರು ಮನಗಂಡರು.

ರಶಿಯಾದಲ್ಲಿ ಸಾಮೂಹಿಕ ಬೇಸಾಯವನ್ನು ಪಸ್ಸಿಸುವಲ್ಲಿ ಸೋವಿಯತ್ ಮುಖಂಡರು ಆಗ ಕೆಳಗಿನ ತತ್ವಗಳನ್ನು ಪಾಲಿಸಿದರು.

(1) ಒತ್ತಾಯದಿಂದ ಸಾಮೂಹಿಕ ಬೇಸಾಯವನ್ನು ಚಿಕ್ಕಬೇಸಾಯಗಾರರ ಮೇಲೆ ಹೇರಕೂಡದು. ವೈಯಕ್ತಿಕ ಬೇಸಾಯಕ್ಕಿಂತ ಸಾಮೂಹಿಕ ಬೇಸಾಯವು ಅವರ ಹಿತಕ್ಕೋಸುಗ ಹಾಗೂ ದೇಶದ ಉನ್ನತಿಗೋಸುಗ ಶ್ರೇಯಸ್ಕರವೆಂಬುದನ್ನು ಅವರಿಗೆ ಮನಗಾಣಿಸಿ. ಸ್ವಸಂತೋಷದಿಂದ ಸಾಮೂಹಿಕ ಬೇಸಾಯವನ್ನು ಚಿಕ್ಕ ಬೇಸಾಯಗಾರರಿಗೆ ಬೋಧಿಸಬೇಕು ಮತ್ತು ಅವರ ಮನವೊಲಿಸಬೇಕು.

(2) ಪ್ರಾತ್ಯಕ್ಷಿಕೆಗಳಿಂದ ಸಾಮೂಹಿಕ ಬೇಸಾಯದ ಪ್ರಯೋಜನಗಳ ಬಗ್ಗೆ ಚಿಕ್ಕಬೇಸಾಯಗಾರರಲ್ಲಿ ವಿಶ್ವಾಸ ಬೆಳೆಸಿ. ಸಾಮೂಹಿಕ ಬೇಸಾಯಸಂಘಗಳನ್ನು ಹೆಚ್ಚಿಸಬೇಕು.

(3) ಆದ್ಯತೆಕೊಟ್ಟು, ಆಸ್ಥೆವಹಿಸಿ, ಸರಕಾರ ಹಾಗೂ ಪಕ್ಷದ ನಾಯಕರು ಹಾಗೂ ಕಾರ್ಯಕರ್ತರು ಸಾಮೂಹಿಕ ಬೇಸಾಯಸಂಘಗಳಿಗೆ ಸೋವಿಸಾಲ, ಬೇಸಾಯ ಯಂತ್ರ, ಸಲಕರಣೆ, ತಾಂತ್ರಿಕಮಾರ್ಗದರ್ಶನ ಎಲ್ಲವನ್ನೂ ಒದಗಿಸಿ ಅವುಗಳನ್ನು ಯಶಸ್ವಿಗೊಳಿಸಿ ಸಾಮೂಹಿಕ ಬೇಸಾಯದ ಅಥವಾ ಸಮಾಜವಾದಿ ಬೇಸಾಯದ ಶ್ರೇಷ್ಠತೆಯನ್ನು ಜನರಲ್ಲಿ ಬೆಳೆಸಬೇಕು.

(4) ಕ್ರಮೇಣವಾಗಿ, ಬೇಸಾಯಗಾರರ ಜಾಗೃತಿ ಬೆಳೆದಂತೆ, ವೈಯಕ್ತಿಕ ಕಮತಗಳನ್ನು, ಸಾಮೂಹಿಕ ಬೇಸಾಯಸಂಘಗಳನ್ನಾಗಿ ಸಂಘಟಿಸಬೇಕು. ಸಂಕ್ರಮಣ ಕಾಲದಲ್ಲಿ ಬೇಸಾಯದ ಸೋಪಾನಗಳಂತಿರುವ ಸಾಂಕ್ರಾಮಿಕ ಅರ್ಧಮರ್ಧ ಸಹಕಾರಿ ಬೇಸಾಯದ ಪದ್ಧತಿಗಳನ್ನು, ಸಹಾಯಕೊಟ್ಟು ಪ್ರೋತ್ಸಾಹಿಸಬೇಕು.

ಈ ಧೋರಣೆಯಿಂದ ಎಲ್ಲ ಆರ್ಥಿಕಕ್ಷೇತ್ರಗಳಲ್ಲೂ ಸಹಕಾರಿಸಂಘಗಳನ್ನು ಹೆಚ್ಚಿಸಲಾಯಿತು. ಬಳಕೆಯ ಸಹಕಾರ ಸಂಘಗಳು, ಹೈನಗಾರಿಕೆಯ ಸಹಕಾರಿ ಸಂಘಗಳು ದೇಶದ ತುಂಬ ಹಬ್ಬಿದವು. ಇವುಗಳಿಂದ ಸಹಕಾರಿ ಜಾಗೃತಿಯನ್ನು ಜನರಲ್ಲಿ ಬೆಳೆಸಲಾಯಿತು. ಆದರಿಂದ ಕ್ರಮಶಃ ಸಾಮೂಹಿಕವಾಗಿ ಭೂಮಿಯನ್ನು ಸುಧಾರಿಸುವ, ಉಳುವ ಸಹಕಾರಿ ಸಂಘಗಳಾದವು. ಮುಂದೆ ಇವೇ ಸಾಮೂಹಿಕ ಬೇಸಾಯಸಂಘಗಳಾಗಿ ಪರಿವರ್ತನೆ ಹೊಂದಿದವು. ಒಗ್ಗಟ್ಟಿನ ಶ್ರಮಸಾಧನಗಳ ಬಳಕೆ, ಯೋಜನೆಗಳಿಂದ ಹಳೆಯ ಉಪಕರಣಗಳಿಂದಲೇ ಸಾಮೂಹಿಕ ಬೇಸಾಯದಲ್ಲಿ ಬೇಸಾಯದ ಹೆಚ್ಚು ಕೆಲಸವಾಗುವುದನ್ನು ಪ್ರಾತ್ಯಕ್ಷಿಕೆಯಿಂದ ಬೇಸಾಯಗಾರರಿಗೆ ಮನದಟ್ಟು ಮಾಡಿಕೊಡಲಾಯಿತು. ತತ್ವನಿಷ್ಠ ಹಾಗೂ ದಕ್ಷ ಸಾಮ್ಯವಾದಿಕಾರ್ಯಕರ್ತರು ಅನೇಕರು ಮುಂದಾಗಿ ತಮ್ಮ ಕಠೋರ ದುಡಿತದಿಂದ ಹಾಗೂ ನಿಷ್ಠೆ, ಜಾಣತನಗಳಿಂದ, ಜನಸಂಪರ್ಕದಿಂದ ಇಂಥ ಪ್ರಾತ್ಯಕ್ಷಿಕೆಯ ಬೇಸಾಯಸಂಘಗಳನ್ನು ಸ್ಥಾಪಿಸಿ ಯಶಸ್ವಿಯಾಗಿ ನಡೆಸಿದರು.

ರಶಿಯಾದಲ್ಲಿ ಸಹಕಾರಿ ಸಾಮೂಹಿಕ ಬೇಸಾಯಸಂಘಗಳಿಗೆ 'ಕೋಲಖೋಜ' ಎನ್ನುತ್ತಾರೆ. ಸರಕಾರವೇ ಅಧಿಕಾರಿಗಳನ್ನಿಟ್ಟು ನಡೆಸುವ 'ಸರಕಾರಿ ಹೊಲ'ಗಳಿಗೆ 'ಸೋವಖೋಜ' ಎನ್ನುತ್ತಾರೆ.

1918ರಲ್ಲಿ ವೈಯಕ್ತಿಕ ಹೊಲಗಳ ಅಪಾರಸಮುದ್ರದಲ್ಲಿ ಸಾಮೂಹಿಕ ಬೇಸಾಯಸಂಘಗಳು ದ್ವೀಪಗಳಂತಿದ್ದವು. ಅವುಗಳಲ್ಲಿ ಕೇವಲ 16,000 ಬೇಸಾಯಗಾರರ ಪರಿವಾರಗಳು ಅಂದರೆ ಶೇಕಡಾ 0.1ರಷ್ಟು ಮಾತ್ರ ಇದ್ದವು. 1929ರಿಂದ 32ರ ಅವಧಿಯಲ್ಲಿ ಸಾಮೂಹಿಕ ಬೇಸಾಯಸಂಘಗಳು ವೇಗದಿಂದ ಬೆಳೆದವು. ಅವುಗಳಲ್ಲಿ 1.50 ಕೋಟಿ ಅಂದರೆ ಶೇಕಡಾ 61.5ರಷ್ಟು ಬೇಸಾಯಗಾರರ ಪರಿವಾರಗಳು ಸೇರಿದವು. 1933–40ರಲ್ಲಿ ಅವು ಹೆಚ್ಚಿ 1.93 ಕೋಟಿ ಅಂದರೆ ಶೇಕಡಾ 99ರಷ್ಟು ಆದವು.

ಸಾಮೂಹಿಕಬೇಸಾಯದ ಹೊಲಗಳು ಬಹಳ ವಿಶಾಲವಾಗಿರುತ್ತವೆ. ಒಂದೊಂದು ಸಂಘದಲ್ಲಿ ಸರಾಸರಿಯಾಗಿ 1250 ಎಕರೆಯಿಂದ 5000 ಎಕರೆಯವರೆಗೆ ಭೂಮಿ ಇರುತ್ತದೆ; 82 ಬೇಸಾಯಪರಿವಾರಗಳೂ, 65 ದನಗಳೂ, 113 ಕುರಿ ಆಡುಗಳೂ, 56 ಕುದುರೆಗಳೂ, 35 ಟ್ರಾಕ್ಟರುಗಳೂ ಇರುತ್ತವೆ.

ಸಾಮೂಹಿಕ ಬೇಸಾಯವು ರಷಿಯಾದೇಶದ ಹಳ್ಳಿಯ ರೂಪವನ್ನೇ ಹೇಳದಷ್ಟು ಬದಲಿಸಿದೆ. ಹಳ್ಳಿಯಲ್ಲಿ ಕಾಲಿಡುತ್ತಲೇ ಎತ್ತರದ ಗೋಪುರಗಳ ಹಸುರು ಮೇವು ಕಾಯ್ದಿಟ್ಟ ಸಂಗ್ರಹಾಲಯ (ಸೈಲೇಜಿಸ್)ಗಳೂ, ಸಾಮೂಹಿಕ ಹೈನದ ಉದ್ಯೋಗದ ವಿಶಾಲವಾದ ಮತ್ತು ಅಚ್ಚುಕಟ್ಟಾದ ಕೊಟ್ಟಿಗೆಗಳೂ, ಕಣಜಗಳು, ಯಂತ್ರೋಪಕರಣಗಳವಖಾರಗಳೂ, ಗಿರಣಿ, ಗಿಣ್ಣದ ಕಾರಖಾನೆ, ಜೇನುತುಪ್ಪದ ಕಾರಖಾನೆ ಮೊದಲಾದ ಸಾಮೂಹಿಕ

ಕಟ್ಟಡಗಳೂ ಸಹಾಯಕ ಉದ್ಯೋಗಗಳೂ ಕಣ್ಣಿಗೆ ಬಿದ್ದು ಉತ್ಸಾಹವನ್ನು ತುಂಬುತ್ತವೆ. ಹಳ್ಳಿಯ ನಟ್ಟನಡುವೆ ಆಟ-ಕೂಟ, ನಾಟ್ಯಶಾಲೆ, ದವಾಖಾನೆ, ಹೆರಿಗೆಯಮನೆ, ಮಕ್ಕಳ ಮನೆ, ಶಿಶುಶಾಲೆ, ಬಾಲವಿದ್ಯಾಲಯ ಮೊದಲಾದ ವಿಶಾಲವಾದ, ಅಂದವಾದ ಸಾರ್ವಜನಿಕ ಕಟ್ಟಡಗಳು ಎದ್ದುಕಾಣುತ್ತವೆ.

ಹಳೆಯ ಹಳ್ಳಿಗಾಡಿನ 250 ಕೋಟಿ ಬಡ ಹಾಗೂ ನಡುತರಗತಿಯ ವೈಯಕ್ತಿಕ ಕಮತಗಳ ಬದಲು ಈಗ 2,36,000 ಸಾಮೂಹಿಕಬೇಸಾಯದ ಹೊಲಗಳು ರಚಿಯಾದಲ್ಲಿವೆ. ಹುಟ್ಟುವಳಿಯ ಸಾಧನಗಳ ಸಾಮಾಜಿಕ ಸೊತ್ತಿನ ತಳಹದಿಯ ಮೇಲೆಯೇ ಇವು ನೆಲೆಗೊಂಡಿವೆ. ಇವುಗಳಲ್ಲಿ ಬಡವಬಲ್ಲಿದರ, ದುಡಿಯುವವರ ಮತ್ತು ಸುಲಿಯುವವರ ಭೇದಗಳು ಸಂಪೂರ್ಣವಾಗಿ ಅಳಿದುಹೋಗಿವೆ. ಇವುಗಳಲ್ಲಿ ಸಾಮೂಹಿಕ ಬೇಸಾಯಗಾರರೇ ಒಟ್ಟಾಗಿ ಎಲ್ಲ ಹುಟ್ಟುವಳಿಗಳ ಸಾಧನಗಳ ಒಡೆಯರು. ಅವರಲ್ಲಿ ಪ್ರತಿಯೊಬ್ಬನೂ ತನ್ನ ದುಡಿಮೆಯ ಅಳತೆ, ಅಚ್ಚುಕಟ್ಟಿನ ಮೇಲೆ ಸಾಮಾನ್ಯ ಕಾಳಿನ ಕಣಜದಿಂದ ತನ್ನ ಗಳಿಕೆಯ ಯೋಗ್ಯಭಾಗವನ್ನು ಪಡೆದುಕೊಳ್ಳುತ್ತಾನೆ. ಸಾಮೂಹಿಕ ನ್ಯಾಯ ಪಡೆಯುವ ಬೇಸಾಯಗಾರರ ಹಿಂದಿನ ಆಶೆ ಸಾಮೂಹಿಕ ಬೇಸಾಯದಲ್ಲಿ ಪೂರ್ಣವಾದಂತಾಗಿದೆ. ಇದರಿಂದ ಪ್ರತಿಯೊಬ್ಬ ಸೋವಿಯತ್ ಬೇಸಾಯಗಾರನಿಗೆ ನಿಶ್ಚಿತ ನೆಚ್ಚಿಗೆಯ ಬಾಳು. ಹೊಸಯುಗದ ಬೆಳಕು ಒದಗಿದೆ.

ಸಾಮೂಹಿಕ ಬೇಸಾಯಸಂಘದ ಆಡಳಿತ ಹಾಗೂ ಕಾರ್ಯಪದ್ಧತಿ

ಭೂಮಿ ಹಾಗೂ ಸಾಧನಗಳು : ಬೇಸಾಯಗಾರರ ಉತ್ಪತ್ತಿಯನ್ನು ಹೆಚ್ಚಿಸಿ, ಅವರ ಬಡತನ, ಕಂಗಾಲತನ, ಅಜ್ಞಾನಗಳನ್ನು ದೂರಮಾಡಿ ಅವರ ಆರ್ಥಿಕ, ಬೌದ್ಧಿಕ ಉನ್ನತಿಯನ್ನು ಸಾಧಿಸಲು ಬಡಬೇಸಾಯಗಾರರು ತಮ್ಮ ಸಾಧನಗಳನ್ನು ಒಂದುಗೂಡಿಸಿ, ಸಂಯುಕ್ತ ಸಾಗುವಳಿ ನಡೆಸಲು ಸಾಮೂಹಿಕ ಬೇಸಾಯಸಂಘವನ್ನು ಸ್ಥಾಪಿಸಿಕೊಳ್ಳುತ್ತಾರೆ. ಸಾಮೂಹಿಕಬೇಸಾಯಸಂಘಕ್ಕೆ ಇದಕ್ಕಾಗಿ ಅನಿರ್ಬಂಧವಾಗಿ ಕೊನೆತನಕ ಹೊಲವು ದೊರಕುತ್ತದೆ. ಬೇಸಾಯಸಂಘವು ಭೂಮಿಯನ್ನು ಮಾರಲಾರದು ಅಥವಾ ಲಾವಣಿ ಕೊಡಲಾರದು. ವೈಯಕ್ತಿಕ ಬೇಸಾಯಗಾರರ ಹಿಡುವಳಿಗಳ ಬೇಲಿ, ಬೀದಿ, ಬದುಗಳನ್ನು ಕಿತ್ತುಹಾಕಿ ಸಾಮೂಹಿಕ ಬೇಸಾಯಕ್ಕೆ ಅನುಕೂಲವಾಗುವಂತೆ ವಿಶಾಲವಾದ ಒಂದೇ ಹೊಲವನ್ನು ಮಾಡಲಾಗುತ್ತದೆ.

ದುಡಿಯುವದನಗಳು, ಬೇಸಾಯಸಲಕರಣೆಗಳು, ಕೃಷಿಯಂತ್ರಗಳು, ಸಾಮೂಹಿಕ ಕಟ್ಟಡ ಮೊದಲಾದವುಗಳು ಬೇಸಾಯಸಂಘದ ಸಾಮಾಜಿಕ ಸೊತ್ತುಗಳು.

ಸಾಮೂಹಿಕಬೇಸಾಯಸಂಘದಿಂದ ಯಾವನೊಬ್ಬ ಸದಸ್ಯನು ಹೊರಬಿದ್ದರೆ ಅವನು ಒಂದುಗೂಡಿಸಿದ ಇಂಥ ಸಲಕರಣೆಗಳನ್ನು ವಾಪಸು ಪಡೆಯಲಾರ: ಆದರೆ ಅದರ ಬೆಲೆಯ ಹಣವನ್ನು ಅವನು ಪಡೆಯುವನು. ಅವನು ಒಂದುಗೂಡಿಸಿದ ಹೊಲದ ಬದಲು ಅವನಿಗೆ ಹೊರಗೆ ಬೇರೆ ಹೊಲ ದೊರಕಬಹುದು.

ಸಾಮೂಹಿಕ ಹೊಲವನ್ನು ಒದಲಿಸಿ ಬಿತ್ತುವ ಬೇರೆಬೇರೆ ಪೀಕಿನ ಪ್ಲಾಟುಗಳನ್ನು ಸರತಿಯ ಮೇಲೆ ಹಂಚಿ ಒಂದೊಂದು ಪೀಕಿನ ತಂಡ (ಬ್ರಿಗೇಡ್)ಕ್ಕೆ ಕೊಡಲಾಗುತ್ತದೆ. ಒಂದು ಪೀಕಿನ ಅವಧಿಯಲ್ಲಿ ಆ ಪ್ಲಾಟು ಆ ಗುಂಪಿನ ವಶದಲ್ಲಿಯೇ ಇರುತ್ತದೆ.

ಬೇಸಾಯುಗಾರನ ವೈಯಕ್ತಿಕ ಸೊತ್ತು : ಸಾಮೂಹಿಕ ಬೇಸಾಯದಲ್ಲಿ ತೊಡಗಿದ ರೈತರು ವೈಯಕ್ತಿಕ ಗಳಿಕೆಯಿಂದ ಚಿಕ್ಕಕುಟುಂಬದ ವ್ಯವಸಾಯಕ್ಷೇತ್ರ (ಫ್ಯಾಮಿಲಿ ಫಾರ್ಮ್) ಮಾಡಬಹುದು. ಅದು ಬೇಸಾಯುಗಾರನ ವೈಯಕ್ತಿಕ ಸೊತ್ತು. ಅವನ್ನು ಅವನು, ಅವನ ವಂಶಜರು ಅಬಾಧಿತವಾಗಿ ಉಪಭೋಗಿಸ ಬಹುದು. ತನ್ನ ಮನೆಗೆ ಹೊಂದಿ ಸಾಮೂಹಿಕ ಬೇಸಾಯುಗಾರನಿಗೆ ಈ ಕಾರ್ಯಕ್ಕಾಗಿ ಒಂದು ಭೂಮಿಯ ತುಂಡು ವೈಯಕ್ತಿಕ ಸೊತ್ತಾಗಿ ದೊರಕುತ್ತದೆ. ಅದರಲ್ಲಿ ಅವನು ಕೋಳಿ, ಹಂದಿ, ದನಗಳನ್ನು ಇಟ್ಟುಕೊಳ್ಳಬಹುದು. ಈ ಭೂಮಿ $\frac{5}{8}$ ಎಕರೆ ಯಿಂದ $2\frac{1}{4}$ ಎಕರೆಯವರೆಗೆ ಇರಬಹುದು.

ಬೇಸಾಯುಗಾರರ ಮೂಲಭೂತ, ಸಾಮಾಜಿಕಹಿತಗಳನ್ನು ಸಾಮೂಹಿಕ ಬೇಸಾಯವು ಕಾಯುತ್ತದೆ. ಅವರ ಗಳಿಕೆ, ಉನ್ನತಿಯ ಆಧಾರವೂ ಸಾಮೂಹಿಕ ಬೇಸಾಯವೇ. ಅವರ ವೈಯಕ್ತಿಕ ಹಾಗೂ ಕೌಟುಂಬಿಕ ಅವಶ್ಯಕತೆಗಳನ್ನು ಪೂರೈಸಿ ಅದು ಅವರ ಬೌದ್ಧಿಕ, ಸಾಂಸ್ಕೃತಿಕ ಉನ್ನತಿಯನ್ನು ಪ್ರೋತ್ಸಾಹಿಸುತ್ತದೆ. ಸಮಾಜವಾದಿ ಸಮಾಜದ ಸ್ಥಾಪನೆಗೆ ಅಗತ್ಯವಿದ್ದ ಸಾಮೂಹಿಕ ನಿರ್ಮಾಣದ ಜಾಗೃತಿಯನ್ನು ಸಾಮೂಹಿಕ ಬೇಸಾಯವು ಬೇಸಾಯುಗಾರರಲ್ಲಿ ಬೆಳೆಸುತ್ತದೆ.

ಕೆಲಸಗಳ ವ್ಯವಸ್ಥೆ : ಸಾಮೂಹಿಕ ಬೇಸಾಯಸಂಘದ ಸದಸ್ಯರು ಎಲ್ಲ ಭೂಮಿಯ ಅಭಿವೃದ್ಧಿ ಮತ್ತು ಸಾಗುವಳಿಯ ಕೆಲಸಗಳನ್ನು ಸಕಾಲದಲ್ಲಿ ಸಮರ್ಪಕ ವಾಗಿ ಮಾಡುವ ಹೊಣೆ ಹೊರುತ್ತಾರೆ. ಬೇಸಾಯ ಸಲಕರಣೆಗಳನ್ನು ಹಾಗೂ ಯಂತ್ರ ಗಳನ್ನು ಅವರು ತೃಪ್ತಿಕರವಾಗಿ ಉಪಯೋಗಿಸಿ, ಸುರಕ್ಷಿತವಾಗಿ ಇಡಬೇಕಾಗುತ್ತದೆ. ಸಾಮೂಹಿಕ ಬೇಸಾಯಸಂಘವು ಸದಸ್ಯರ ತಾಂತ್ರಿಕಜ್ಞಾನವನ್ನು ಹೆಚ್ಚಿಸಬೇಕು, ಪುಸ್ತಕ, ಪತ್ರಿಕೆ, ಆಕಾಶವಾಣಿ ಮೊದಲಾದ ಸಾಧನಗಳಿಂದ ಸದಸ್ಯರ ಸಾಂಸ್ಕೃತಿಕಉನ್ನತಿಯನ್ನು ಸಂಘವು ಬೆಳೆಸಬೇಕು. ಬೇಸಾಯುಗಾರರ ಮನೆಗಳನ್ನು ದುರಸ್ತು ಮಾಡಲು ಮತ್ತು ಅಲಂಕರಿಸಲು ಮತ್ತು ಉದ್ಯಾನ ಮೊದಲಾದ ಸಾಮಾಜಿಕ ಸೌಕರ್ಯಗಳನ್ನು ಸಂಘವು ಹೆಚ್ಚಿಸಬೇಕು. ಸ್ತ್ರೀಯರಿಗೆ ಉತ್ಪಾದನೆಯ ಕೆಲಸಗಳಲ್ಲಿ ಭಾಗವಹಿಸಲು ಸಂಘವು ಅನುಕೂಲ ಮಾಡಿಕೊಡಬೇಕು.

ಸದಸ್ಯತ್ವ, ಹಣಕಾಸು : 19 ವರ್ಷಕ್ಕೆ ಮೇಲ್ಪಟ್ಟ ಎಲ್ಲ ಬೇಸಾಯುಗಾರ ಸ್ತ್ರೀ, ಪುರುಷರೂ ಸಾಮೂಹಿಕ ಬೇಸಾಯಸಂಘದ ಸದಸ್ಯರಾಗಬಹುದು. ಕುಲಕರನ್ನು ಹಾಗೂ ಸಮಾಜ ಘಾತುಕರನ್ನು ಬೇಸಾಯಸಂಘದಲ್ಲಿ ಸೇರಿಸಿಕೊಳ್ಳುವುದಿಲ್ಲ. ಅನೇಕ ವರ್ಷಗಳಿಂದ ದುಡಿತ ಹಾಗೂ ಸಮಾಜಸೇವೆಯಿಂದ ಸಮಾಜದ ವಿಶ್ವಾಸಕ್ಕೆ ಪಾತ್ರರಾದ ಅವರ ಮಕ್ಕಳು ಬೇಸಾಯಸಂಘದ ಸದಸ್ಯರಾಗಬಹುದು.

ಬೇಸಾಯಸಂಘದಲ್ಲಿ ಸೇರಿದ 6 ವರ್ಷಗಳೊಳಗೆ ಸದಸ್ಯನು ಕುದುರೆ, ಬೀಜಗಳ ಕಿಮ್ಮತ್ತನ್ನು ಮುಟ್ಟಿಸಬೇಕು.

ಸಾಧಾರಣ ಸಭೆಯ ಒಪ್ಪಿಗೆಯಿಂದ ಸಂಘದಿಂದ ಸದಸ್ಯನನ್ನು ಹೊರತಳ್ಳಬಹುದು. ಜಿಲ್ಲಾ ಸೋವಿಯತ್ ಕಾರ್ಯಕಾರಿ ಸಮಿತಿಯ ಅಧ್ಯಕ್ಷನು ಈ ಬಗ್ಗೆ ಅಪೀಲಿನ ನಿರ್ಣಯ ಮಾಡುವನು.

ಪ್ರತಿಯೊಬ್ಬ ಸದಸ್ಯನೂ ಒಂದುಗೂಡಿಸಿದ ಹಿಡುವಳಿಯ ಪ್ರಕಾರ 20ರಿಂದ 40ರವರೆಗೆ ಸದಸ್ಯತ್ವದ ಪ್ರವೇಶ ಫೀ ಕೊಡಬೇಕು. ಸಂಘದ ¼ರಿಂದ ½ದವರೆಗೆ ನಿವ್ವಳಆದಾಯ ರಕ್ಷಿತನಿಧಿಯಲ್ಲಿ ಸೇರುತ್ತದೆ.

ಉತ್ಪತ್ತಿಯ ವಿತರಣೆ (ಧಾನ್ಯದ ರೂಪದಲ್ಲಿ) : ಒಟ್ಟು ಆದಾಯದಲ್ಲಿ ಸರಕಾರದ ಹಾಗೂ ಟ್ರಾಕ್ಟರ ಅಡ್ಡೆಯ ಬೇಸಾಯ ಸಾಲವನ್ನು ಮೊದಲು ಮುಟ್ಟಿಸಲಾಗುತ್ತದೆ. ಶೇಕಡಾ 10–15ರಷ್ಟು ಆದಾಯವನ್ನು ಬರುವ ವರ್ಷದ ಬೀಜ, ಮೇವುಗಳಿಗಾಗಿ ಕಾಯ್ದಿರಿಸಲಾಗುತ್ತದೆ. ಶೇಕಡಾ 2ರಷ್ಟು ಆದಾಯವನ್ನು ಅಂಗವಿಕಲರ ಕಲ್ಯಾಣಕ್ಕಾಗಿ ಹಾಗೂ ಬೇರೆ ಕಲ್ಯಾಣಕಾರ್ಯಗಳಿಗೆ ಇಡಲಾಗುತ್ತದೆ. ಇಷ್ಟೆಲ್ಲ ವಜಾ ತೆಗೆದ ಬಳಿಕ ಉಳಿದ ಉತ್ಪತ್ತಿಯನ್ನು ಸದಸ್ಯರಿಗೆ ದುಡಿತದ ದಿವಸಗಳ ಆಧಾರದ ಮೇಲೆ ಹಂಚಲಾಗುತ್ತದೆ. ಹಣದ ಆದಾಯದ ವಿತರಣೆ ಕೆಳಗಿನಂತಿರುತ್ತದೆ:

ಸರಕಾರದ ಸಾಲದ ಪಾವತಿ	...	ಶೇಕಡಾ 9.4%
ಬೇಸಾಯದ ವೆಚ್ಚ	...	ಶೇಕಡಾ 27.7%
ಸದಸ್ಯರ ದುಡಿತಕ್ಕೆ ಪ್ರತಿಫಲ	...	ಶೇಕಡಾ 62.9%
ಒಟ್ಟು	...	100%

ಇದಲ್ಲದೆ ಸಂಘವು ಸದಸ್ಯರಿಗೆ ಮೇವು, ಕಾಯಿಪಲ್ಲೆ, ಹಣ್ಣು, ಬೆಣ್ಣೆ, ಮಾಂಸ, ಮೊದಲಾದವುಗಳನ್ನು ಹಂಚುತ್ತದೆ. ಹೀಗೆ ಒಟ್ಟು ಆದಾಯದ ಅರ್ಧಭಾಗವು ಸದಸ್ಯರಿಗೆ ಮುಟ್ಟುತ್ತದೆ.

ದುಡಿತದ ಸಂಘಟನೆ ಹಾಗೂ ಶಿಸ್ತು

ಸಾಮಾನ್ಯವಾಗಿ ಎಲ್ಲ ಕೆಲಸಗಳನ್ನೂ ಸದಸ್ಯರೇ ಮಾಡುತ್ತಾರೆ. ವಿಶಿಷ್ಟ ಕೆಲಸವನ್ನು ಸಂಬಳದ ಆಳಿನಿಂದ ಮಾಡಿಸಲಾಗುತ್ತದೆ.

ವಿಭಿನ್ನ ಪೀಕುಗಳನ್ನು ಬೆಳೆಯಲು ಉತ್ಪಾದನೆಯ ದಲಗಳನ್ನು (ಬ್ರಿಗೇಡ್ಸ್) ಸಂಘಟಿಸಲಾಗುತ್ತದೆ. ಒಂದು ಸುಗ್ಗಿಯ ಸಲುವಾಗಿ, ನಿರ್ದಿಷ್ಟ ಪೀಕಿನ ಸಲುವಾಗಿ

ನಿರ್ದಿಷ್ಟ ಹೊಲ ಮತ್ತು ಅಗತ್ಯವಿದ್ದ ಬೇಸಾಯದ ಸಲಕರಣೆಗಳನ್ನು ದಳಕ್ಕೆ ಒದಗಿಸಲಾಗುತ್ತದೆ. ಬೆಳೆಉತ್ಪತ್ತಿಯದಳ. ಟ್ರಾಕ್ಟರದಳ. ಹೈನಗಾರಿಕೆಯದಳ ಇವೇ ಪ್ರಮುಖ ಉತ್ಪಾದನೆಯ ದಳಗಳು.

ಒಂದು ಉತ್ಪಾದನೆಯ ದಲದಲ್ಲಿ 30ರಿಂದ 80 ದುಡಿಮೆಗಾರರಿರುತ್ತಾರೆ. ಸಂಘದ ವ್ಯವಸ್ಥಾಪಕ ಸಮಿತಿಯು ಉತ್ಪಾದನೆಯ ದಳದ ನಾಯಕನನ್ನು ಆರಿಸುತ್ತದೆ. ದಳನಾಯಕನು ದುಡಿಮೆಗಾರರಿಗೆ ಕೆಲಸ ಹಂಚುತ್ತಾನೆ. ಕೆಲಸದ ಮೇಲ್ವಿಚಾರಣೆ ಮಾಡುತ್ತಾನೆ ಹಾಗೂ ಲೆಕ್ಕವಿಡುತ್ತಾನೆ.

'ಪ್ರತಿಯೊಬ್ಬನಿಂದಲೂ ಕೈಲಾದಷ್ಟು ಕೆಲಸ. ಪ್ರತಿಯೊಬ್ಬನಿಗೆ ಅವನು ಮಾಡಿದಷ್ಟು ಪ್ರತಿಫಲ. ದುಡಿಯದವನಿಗೆ ಊಟವೂ ಇಲ್ಲ'. ಈ ಸಮಾಜವಾದಿ ತತ್ವವೇ ರಶಿಯಾದಲ್ಲಿ ದುಡಿತಕ್ಕೆ ಉತ್ತೇಜನ ಕೊಡುವ ಶಕ್ತಿ ಹಾಗೂ ದುಡಿತದ ಸಂಘಟನದ ತಳಹದಿ. ಗರ್ಭಿಣಿಗೆ ಅರ್ಧದುಡಿತದ ದಿವಸ ಹಚ್ಚಿ ಹೆರಿಗೆಯ ಪೂರ್ವದಲ್ಲಿ 1 ತಿಂಗಳು ಮತ್ತು ನಂತರ 1 ತಿಂಗಳು ಬಿಡುವು ಕೊಡಲಾಗುತ್ತದೆ.

ಸಂಘದ ವ್ಯವಸ್ಥಾಪಕ ಸಮಿತಿಯು ದಿವಸಗಳನ್ನು (ವರ್ಕ್‌ಡೇಸ್) ನಿರ್ಧರಿಸುತ್ತವೆ ಹಾಗೂ ವರ್ಷದ ಕೊನೆಯಲ್ಲಿ ವಿತರಣೆಯ ವ್ಯವಸ್ಥೆ ಮಾಡುತ್ತದೆ.

ಎಲ್ಲ ಕೆಲಸಗಳನ್ನು 2 ತರಗತಿಗಳಲ್ಲಿ ಕೆಳಗಿನಂತೆ ವಿಂಗಡಿಸಲಾಗಿದೆ :

(i) ಎಲ್ಲಕ್ಕೂ ಸರಳ ಕೆಲಸ = 1 ದಿವಸಕ್ಕೆ ½ ದುಡಿತದ ದಿವಸ

(ii) ಎಲ್ಲಕ್ಕೂ ಹೆಚ್ಚಿನ ಜಾಣತನದ. ಪ್ರಯಾಸದ ಕೆಲಸ = 1 ದಿವಸಕ್ಕೆ 2 ದುಡಿತದ ದಿವಸ

ಇವುಗಳ ನಡುವೆ ನಡುತರಗತಿಗಳಿರುತ್ತವೆ.

ದನ. ಯಂತ್ರ. ಭೂಮಿ. ಬೆಳೆ ಮೊದಲಾದ ಸ್ಥಿತಿಗಳನ್ನು ಲಕ್ಷಿಸಿ ದುಡಿತದ ದಿವಸಗಳನ್ನು ನಿರ್ಧರಿಸಲಾಗುತ್ತದೆ. ನಿರ್ದಿಷ್ಟ ಪ್ರಮಾಣಕ್ಕಿಂತ ಕೆಲಸ ಕಡಮೆಯಾದರೆ ಕಡಮೆ. ಹೆಚ್ಚಾದರೆ ಹೆಚ್ಚು. ದುಡಿತದ ದಿವಸ ಕೊಡಲಾಗುತ್ತದೆ. ಉತ್ಪಾದನೆಯ ಶಕ್ತಿ ಹೆಚ್ಚಿಸಿದರೆ ಹೆಚ್ಚಿನ ಪುರಸ್ಕಾರ (ಬೋನಸ್) ದುಡಿತದ ದಿವಸಗಳಲ್ಲಿ ದೊರಕುತ್ತದೆ. ಪ್ರಮಾಣಕ್ಕಿಂತ ಹೆಚ್ಚಿನ ಉತ್ಪಾದನೆ ಸಾಧಿಸಿದ ದಳಕ್ಕೆ. ಅದರ ಸದಸ್ಯರಿಗೆ ಹಾಗೂ ನಾಯಕನಿಗೆ ಶೇಕಡಾ 10ರಿಂದ 20ರವರೆಗೆ ದುಡಿತದ ದಿವಸದ ಪುರಸ್ಕಾರ ದೊರಕುತ್ತದೆ. ಈ ವ್ಯವಸ್ಥೆಯಿಂದ ಉತ್ಪತ್ತಿಯು ಹೆಚ್ಚಲು ಉತ್ತೇಜನ ದೊರಕಿದೆ.

ಸದಸ್ಯನಿಗೆ ಅವನ ಸರಾಸರಿ ಗಳಿಕೆಯ ಅರ್ಧದಷ್ಟು ಮುಂಗಡವು ದೊರಕುತ್ತದೆ. ಸದಸ್ಯನು ಕೆಲಸದಲ್ಲಿ ಸೋಮಾರಿತನ ಅಥವಾ ಆಸ್ತಿಪಾಸ್ತಿಗಳ ಸಂರಕ್ಷಣೆಯಲ್ಲಿ ತಾತ್ಸಾರ ತೋರಿದಲ್ಲಿ ಅವನು ಹೆಚ್ಚು ದುಡಿದು ಕೊರತೆ ತುಂಬಬೇಕಾಗುತ್ತದೆ. ಕರ್ತವ್ಯ

ಲೋಪಕ್ಕೆ ಅಥವಾ ಶಿಸ್ತುಉಲ್ಲಂಘನಕ್ಕೆ ಲಾಂಛನ ಹಾಕಲಾಗುತ್ತದೆ ಅಥವಾ 5 ದುಡಿತದ ದಿವಸಗಳ ದಂಡ ಹಾಕಲಾಗುತ್ತದೆ. ಸದಸ್ಯನು ಸಂಘದ ಅಥವಾ ರಾಷ್ಟ್ರದ ದ್ರೋಹ ಬಗೆದರೆ ಉಗ್ರಶಿಕ್ಷೆಗೆ ಗುರಿಯಾಗುತ್ತಾನೆ.

ಸಾಮೂಹಿಕಬೇಸಾಯಸಂಘದ ಜನತಾಂತ್ರಿಕ ಆಡಳಿತ

ಸಾಧಾರಣ ಸಭೆಯೇ ಸಾಮೂಹಿಕ ಬೇಸಾಯಸಂಘದ ಸರ್ವೋಚ್ಚ ಹೊಣೆಗಾರ ಸಂಸ್ಥೆ. ಅದೇ ವ್ಯವಸ್ಥಾಪಕ ಸಮಿತಿಯನ್ನು ಬೇರೆ ಉಪಸಮಿತಿಗಳನ್ನು ಹಾಗೂ ಸಂಘದ ಅಧ್ಯಕ್ಷನನ್ನು ಆರಿಸುತ್ತದೆ. ಅದರ ಮಹತ್ವದ ಕೆಲಸಗಳು ಕೆಳಗಿನಂತಿವೆ :

(1) ಸದಸ್ಯರ ಪ್ರವೇಶ ಹಾಗೂ ಅವರನ್ನು ಹೊರತಳ್ಳುವುದು
(2) ಸುಧಾರಣೆ. ಕಟ್ಟಡ. ಉತ್ಪಾದನೆಗಳ ಯೋಜನೆಗಳ ರಚನೆ
(3) ದುಡಿತದ ದಿವಸಗಳ ಅಳತೆ. ಬೆಲೆಗಳ ನಿರ್ಧಾರ
(4) ಟ್ರ್ಯಾಕ್ಟರ ಅಡ್ಡೆಯ ಗುತ್ತಿಗೆಯ ಒಡಂಬಡಿಕೆ
(5) ನಿಯಮ, ಉಪನಿಯಮಗಳ ರಚನೆ
(6) ನಿಧಿಗಳ ನಿಶ್ಚಯ. ಆದಾಯದ ವಿತರಣೆ.

ಸಾಮಾನ್ಯವಾಗಿ ಅರ್ಧಸದಸ್ಯರು ಕೂಡಿದರೆ ಸಾಧಾರಣ ಸಭೆಯು ಗಣಪೂರ್ತಿ (ಕೋರಂ) ಆಗುತ್ತದೆ. ಮಹತ್ವದ ವಿಷಯಗಳ ನಿರ್ಣಯದಲ್ಲಿ $\frac{2}{3}$ ಸದಸ್ಯರಿಂದ ಗಣಪೂರ್ತಿ ಆಗುತ್ತದೆ. ಕೈಎತ್ತಿ ಬಹುಮತದಿಂದ ನಿರ್ಣಯಗಳು ಪಾಸಾಗುತ್ತವೆ.

ದೈನಂದಿನ ಕಾರ್ಯನಿರ್ವಹಣೆಗೆ 2 ವರ್ಷಗಳ ಸಲುವಾಗಿ 5ರಿಂದ 9 ಸದಸ್ಯರ ವ್ಯವಸ್ಥಾಪಕ ಸಮಿತಿಯ ಆಯ್ಕೆಯಾಗುತ್ತದೆ. ಸಂಘದ ಅಧ್ಯಕ್ಷನೇ ಇದರ ಅಧ್ಯಕ್ಷ. ಕನಿಷ್ಠ 15 ದಿವಸಗಳಿಗೊಮ್ಮೆ ವ್ಯವಸ್ಥಾಪಕ ಸಮಿತಿಯು ಸಭೆ ಸೇರುತ್ತದೆ. ಅಧ್ಯಕ್ಷನ ಶಿಫಾರಸಿನಿಂದ ದಳನಾಯಕನನ್ನು ಉಪಾಧ್ಯಕ್ಷನನ್ನು ಮತ್ತು ಬೇರೆ ಸಿಬ್ಬಂದಿಯವರನ್ನು ಇಂಥ ಸಭೆಯಲ್ಲಿ ಆರಿಸಲಾಗುತ್ತದೆ ಹಾಗೂ ನೇಮಿಸಲಾಗುತ್ತದೆ. ಅಧ್ಯಕ್ಷನು ದೈನಂದಿನ ಕೆಲಸದ ನಿರೀಕ್ಷಣೆ ಮಾಡುತ್ತಾನೆ.

ಆಯವ್ಯಯ ನಿರೀಕ್ಷಕ ಸಮಿತಿಯು 4 ವರ್ಷಗಳವರೆಗೆ ಆರಿಸಲ್ಪಡುತ್ತದೆ. 3 ತಿಂಗಳಿಗೊಮ್ಮೆ ಲೆಕ್ಕದ ನಿರೀಕ್ಷಣೆ ಮಾಡಿ ಎಲ್ಲ ವ್ಯವಹಾರಗಳನ್ನೂ ಅದು ಕಟ್ಟುನಿಟ್ಟಾಗಿ ಸರಿಪಡಿಸುತ್ತದೆ.

ಸಾಮೂಹಿಕಬೇಸಾಯಸಂಘದಲ್ಲಿ ದುಡಿಯುವ ಬೇಸಾಯಗಾರರು ತಮ್ಮ ಸಂತೋಷದಿಂದ ಸೇರಿ, ತಾವೇ ಅದರ ಎಲ್ಲ ವ್ಯವಹಾರಗಳನ್ನು ಕೂಡಿ ಚರ್ಚಿಸಿ ನಡೆಸುತ್ತಾರೆ. ಹೊರಗಿನವರ ಅಥವಾ ಒಳಗಿನವರ ಯಾರ ಸರ್ವಾಧಿಕಾರವೂ ಅವರ ಮೇಲೆ ಇರುವುದಿಲ್ಲ.

ಸಾಮೂಹಿಕಬೇಸಾಯದಿಂದ ಸಮೃದ್ಧಿ

ಸಾಮೂಹಿಕಬೇಸಾಯವು ಕಾರ್ಯರೂಪಕ್ಕೆ ಬರುವ ಮೊದಲು $\frac{1}{3}$ ಬೇಸಾಯಗಾರರು ಹೊಟ್ಟೆತುಂಬ ಅನ್ನ, ಮೈತುಂಬ ಬಟ್ಟೆ ಪಡೆಯುತ್ತಿರಲಿಲ್ಲ. ತುಣುಕು ರೊಟ್ಟಿಗಾಗಿ ಅವರು ಕುಲಕರ ಹೊಲಗಳಲ್ಲಿ ಹೇಸರಗತ್ತೆಯಂತೆ ದುಡಿಯುತ್ತಿದ್ದರು. ಈಗ ಸಾಮೂಹಿಕ ಬೇಸಾಯದ ಉನ್ನತಿಯಿಂದ ಬೇಸಾಯಗಾರರಿಗೆ ಇಂದಿನ ಚಿಂತೆಯೂ ಇಲ್ಲ, ನಾಳಿನ ಚಿಂತೆಯೂ ಇಲ್ಲ. ಉದ್ಯೋಗ ಹಾಗೂ ಉಪಜೀವನದ ಎಲ್ಲ ಸೌಲಭ್ಯಗಳು ಅವರಿಗೆ ದೊರೆತಿವೆ. ಅವರ ಮಡದಿಮಕ್ಕಳ ಜೋಪಾನದ ಭರವಸೆಯೂ ದೊರೆತಿದೆ.

ಕೆಲವೇ ವರ್ಷಗಳಲ್ಲಿ ದುರ್ಬಲ ರಶಿಯಾ, ಸಮೃದ್ಧ ಹಾಗೂ ಬಲಾಢ್ಯ ಸೋವಿಯತ್ ಸಮಾಜವಾದಿರಾಷ್ಟ್ರವಾದದ್ದು, ಸಾಮೂಹಿಕಬೇಸಾಯದ ಬಲದಿಂದಲೇ. 1932ರಿಂದ 1937ರವರೆಗೆ ಅಲ್ಲಿಯ ಬೇಸಾಯದ ಉತ್ಪತ್ತಿಯು ಇಮ್ಮಡಿಯಾಯಿತು; ದನಗಳು ಎರಡು ಪಟ್ಟು ಹೆಚ್ಚಿದವು; ಹಣದ ಆದಾಯ $3\frac{1}{2}$ ಪಟ್ಟು ಹೆಚ್ಚಿತು. ಅದರಿಂದ ಸೋವಿಯತ್ ಬೇಸಾಯಗಾರರ ಜೀವನವೂ ಸಮೃದ್ಧವಾಯಿತು.

ಸಾಮೂಹಿಕಬೇಸಾಯಗಾರರು ಆರೋಗ್ಯಕರ ಆಹಾರ ಉಣ್ಣುತ್ತಾರೆ; ಸುಂದರ ಉಡಿಗೆ ತೊಡಿಗೆಯನ್ನು ಧರಿಸುತ್ತಾರೆ; ಬೇರೆ ಜೀವನದ ಸಡಗರಗಳನ್ನೂ ಭೋಗಿಸುತ್ತಾರೆ. ಗ್ರಾಮೋಫೋನ್, ಕ್ಯಾಮರಾ, ವಯರ್‌ಲೆಸ್‌ಸೆಟ್, ಗಡಿಯಾರಗಳು, ಸೈಕಲ್ಲು ಮೊದಲಾದ ಸೌಕರ್ಯಗಳೆಲ್ಲ ಹೇರಳವಾಗಿ ಸೋವಿಯತ್ ಹಳ್ಳಿಗಳಲ್ಲಿ ಬಳಕೆಯಲ್ಲಿ ಬಂದಿದೆ. ಸಾಮೂಹಿಕಬೇಸಾಯದಿಂದ ಮಹಿಳೆಯರ ಜೀವನವೂ ಹೆಚ್ಚು ಸುಖಮಯವಾಗಿದೆ ಮತ್ತು ಉನ್ನತವಾಗಿದೆ. ಅವರೂ ದುಡಿಮೆಗಳಿಸಿ ತಮ್ಮ ಗಂಡಂದಿರ ಸರಿಸಮಾನ ಜೊತೆಗಾತಿಯರು ಮತ್ತು ಸಹಾಯಕರು ಆಗಿದ್ದಾರೆ. ಹೆರಿಗೆಯ ಮನೆ, ಶಿಶುವಿಹಾರ, ಮೊದಲಾದ ಸೌಕರ್ಯಗಳಿಂದ ಅವರು ದೇಶದ ಸಾಮಾಜಿಕ ಉನ್ನತಿಯಲ್ಲಿ ಸ್ವತಂತ್ರರಾಗಿ ಭಾಗವಹಿಸಲು ಅವರಿಗೆ ಸಾಕಷ್ಟು ಅವಕಾಶ ದೊರೆತಿದೆ. ಅದರಿಂದ ಅವರು ಎಲ್ಲ ರಂಗಗಳಲ್ಲೂ ಸ್ಥಾನ-ಮಾನಗಳನ್ನು ಪಡೆದಿದ್ದಾರೆ. ಸಾಮೂಹಿಕ ಬೇಸಾಯದಿಂದ ಉತ್ಪತ್ತಿ, ಆದಾಯಗಳು ಸಾಕಷ್ಟು ಹೆಚ್ಚಿದ್ದರಿಂದಲೇ ಇದೆಲ್ಲ ಉನ್ನತಿಯು ಸಾಧ್ಯವಾಗಿದೆ.

ಸಾಮೂಹಿಕಬೇಸಾಯದಿಂದ ಬೇಸಾಯದ ಸುಧಾರಣೆಯಲ್ಲಿ ಆದ ಸುಧಾರಣೆಗಳು ಪ್ರಶಂಸನೀಯವಾಗಿವೆ. ಉಜಬೆಕದ ಬರನಾಡಿನಲ್ಲಿ ಕೇವಲ 45 ದಿವಸಗಳಲ್ಲಿ ಸಾಮೂಹಿಕಬೇಸಾಯಗಾರರು ತಮ್ಮ ಶ್ರಮದಾನದಿಂದ 170 ಮೈಲು ಉದ್ದದ ಸ್ಟ್ಯಾಲಿನ್ ನೀರಾವರಿ ಕಾಲುವೆಯನ್ನು ರಚಿಸಿಕೊಂಡರು. ಅದರಿಂದ ಸಾವಿರಾರು ಎಕರೆ ಭೂಮಿಯಲ್ಲಿ ನೀರಾವರಿ ಸಾಗುವಳಿಯು ಸಾಧ್ಯವಾಯಿತು. ಬೇಸಾಯಸಂಘಗಳು ಸ್ಥಳೀಕ ಮಲಮೂತ್ರಗಳ ಗೊಬ್ಬರಗಳನ್ನಂತೂ ಹೇರಳವಾಗಿ ಉಪಯೋಗಿಸುತ್ತವೆ.

ಖನಿಜ ಗೊಬ್ಬರಗಳ ಪೂರೈಕೆ ಸಹ 1938ರವರೆಗೆ ಶೇಕಡಾ 350ರಷ್ಟು ಹೆಚ್ಚಿತು. ಸುಧಾರಿಸಿದ ಬೇಸಾಯ ಪದ್ಧತಿಗಳು ಎಲ್ಲೆಡೆ ಪ್ರಚಾರದಲ್ಲಿವೆ. ಈ ಸುಧಾರಣೆಗಳಿಂದ ಇಂದು ಸೋವಿಯತ್ ದೇಶ ಬೇಸಾಯದ ಉತ್ಪತ್ತಿಯಲ್ಲಿ ಸಮೃದ್ಧರಾಷ್ಟ್ರವಾಗಿದೆ.

ಸಾಮೂಹಿಕಬೇಸಾಯದಿಂದ ಸೋವಿಯತ್‌ಬೇಸಾಯಗಾರರಲ್ಲಿ ನಿರಕ್ಷರತೆಯು ನಿರ್ಮೂಲವಾಯಿತು. ಹಳ್ಳಿಗಳಲ್ಲಿ ಎಲ್ಲೆಡೆ, ಕೃಷಿಪ್ರಯೋಗಶಾಲೆ, ಪುಸ್ತಕಾಲಯ, ನಾಟ್ಯಮಂದಿರ ಮೊದಲಾದವು ಹಬ್ಬಿದೆ. ಬೇಸಾಯಗಾರರ ಸಾಂಸ್ಕೃತಿಕ ಉನ್ನತಿಯು ಹೆಚ್ಚಿದೆ. ಸಾಮೂಹಿಕಬೇಸಾಯಸಂಘಗಳಲ್ಲಿ ಹಳ್ಳಿಯಲ್ಲಿ ಹುಟ್ಟಿಬೆಳೆದ ಬೇಸಾಯ ಗಾರರ ಮಕ್ಕಳೇ ಸಾವಿರಾರು ಜನರು ಕೃಷಿತಜ್ಞರು, ಟ್ರಾಕ್ಟರ ತಜ್ಞರು, ಯಂತ್ರತಜ್ಞರು ಆಗಿದ್ದಾರೆ. ಅವರು ಹೆಚ್ಚಾಗಿ ಹಳ್ಳಿಯಲ್ಲಿ ದುಡಿಯುತ್ತಲೇ ಹೆಚ್ಚಿನ ತಾಂತ್ರಿಕ ತಜ್ಞತೆ ಯನ್ನು ಪಡೆದರು. ಬೇಸಾಯಗಾರರ ಅಂದವಾದ ಮನೆಗಳಲ್ಲಿ ಈಗ ಕೃಷಿತಜ್ಞರ, ಸಾಹಿತಿಗಳ ಗ್ರಂಥಗಳು ಕಾಣುತ್ತವೆ.

ಬಂಡವಲುಶಾಹಿ ರಾಷ್ಟ್ರಗಳ ವಿರೋಧದಿಂದ ಸೋವಿಯತ್ ಸಮಾಜವಾದಿ ರಾಷ್ಟ್ರವು ಯಾವಾಗಲೂ ವಿನಾಶದ ಗಂಡಾಂತರವನ್ನೆದುರಿಸುತ್ತಿತ್ತು. ಸಾಮೂಹಿಕ ಬೇಸಾಯದಿಂದ ಅದು ಆರ್ಥಿಕಸಮೃದ್ಧಿಯನ್ನು. ಸ್ವಾವಲಂಬನೆಯನ್ನು ಸಾಧಿಸಿ ತನ್ನ ಸಂರಕ್ಷಣೆ ಮಾಡಿಕೊಳ್ಳಲು ಸಾಧ್ಯವಾಯಿತು. ದೇಶದ ತೀವ್ರ ಔದ್ಯೋಗಿ ಕರಣವೂ ಸಾಮೂಹಿಕಬೇಸಾಯದಿಂದಲೇ ಸಾಧ್ಯವಾಯಿತು.

ದ್ವಿತೀಯ ಮಹಾಯುದ್ಧದಲ್ಲಿ ಸೋವಿಯತ್ ದೇಶದ ಅಪಾರವಾದ ವಿನಾಶ ವಾಯಿತು. ಸಾಮೂಹಿಕಬೇಸಾಯದ ಬಲದಿಂದಲೇ ಸೋವಿಯತ್ ದೇಶವು ಈ ಅಪಾರ ನಷ್ಟವನ್ನು ತುಂಬಿಕೊಂಡು ಎಲ್ಲ ಕ್ಷೇತ್ರಗಳಲ್ಲಿ ಇನ್ನೂ ಹೆಚ್ಚಿನ ಉನ್ನತಿಯನ್ನು ಸಾಧಿಸಿತು.

ಯುದ್ಧೋತ್ತರ ಅದ್ಭುತ ಪ್ರಗತಿ

ಸಾಮೂಹಿಕಬೇಸಾಯದ ಜನಶಕ್ತಿಯಿಂದ ಯುದ್ಧೋತ್ತರ ಕಾಲದಲ್ಲಿ ಸೋವಿಯತ್ ರಶಿಯಾ ದೇಶವು ಅದ್ಭುತಪ್ರಗತಿಯನ್ನು ಸಾಧಿಸಿದೆ. ಯುದ್ಧದಲ್ಲಿ ಯುಕ್ರೇನ, ಬೈಲೋರಷಿಯಾ ಮೊದಲಾದ ವಿಶಾಲವಾದ ಕೃಷಿ ಪ್ರಧಾನ ರಾಜ್ಯಗಳೇ ಜರ್ಮನ್ ನಾಜಿಗಳ ಕೈವಶವಾಗಿ ಹಾಳಾಗಿದ್ದವು. 70.000 ಗ್ರಾಮಗಳು ನೆಲಸಮ ವಾಗಿದ್ದವು. 98.000 ಸಾಮೂಹಿಕಬೇಸಾಯಸಂಘಗಳು (ಕೊಲ್ಖೋಜ್) 1876 ಸರಕಾರಿ ಫಾರ್ಮುಗಳು (ಸೋವ್ಖೋಜ್) ಮತ್ತು 2.890 ಟ್ರಾಕ್ಟರ ಅಡ್ಡೆಗಳು (ಎಮ್.ಟಿ.ಎಸ್.) ಹಾಳಾದವು. ಲಕ್ಷಾನುಗಟ್ಟಲೆ ಸಾಮೂಹಿಕಬೇಸಾಯಗಾರರು ಸಾವುನೋವಿಗೀಡಾದರು.

ಸಾಮೂಹಿಕಬೇಸಾಯದ ಬಲದಿಂದ ಸೋವಿಯತ್ ಸರಕಾರವು ಸೈನ್ಯಕ್ಕೆ ಹಾಗೂ ಜನತೆಗೆ ಆಹಾರದ ಕೊರತೆಯಾಗದಂತೆ ವ್ಯವಸ್ಥೆಮಾಡಲು ಸಾಧ್ಯವಾಯಿತು.

ಯುದ್ಧವು ಮುಗಿದ ಕೂಡಲೇ ಅದ್ಭುತ ಸಾಹಸದಿಂದ ತೀವ್ರವಾಗಿ ಸಾಮೂಹಿಕ ಬೇಸಾಯಗಾರರು ತಮ್ಮ ಬೇಸಾಯಸಂಘಗಳ ಪುನರ್ಜೀವನ ಮಾಡಿದರು.

ಲಕ್ಷಗಟ್ಟಲೆ ತರುಣ ತರುಣಿಯರು ಸ್ವಸಂತೋಷದಿಂದ 1954ರಲ್ಲಿ ಸೈಬೇರಿಯಾ. ಉರಾಳಗಳ ಬೆಂಗಾಡುಗಳಲ್ಲಿ ನೆಲೆಸಿ. ಅಲ್ಲಿಯ ಕಷ್ಟಕಾರ್ಪಣ್ಯಗಳನ್ನು ಸಹಿಸಿ, ಆ ಪ್ರದೇಶ ಗಳನ್ನು ಅಭಿವೃದ್ಧಿಗೊಳಿಸಿ ನಂದನವನವನ್ನಾಗಿ ಮಾಡಿದರು. ಅಲ್ಲಿ ಈಗ ಸುಂದರ ವಾದ ನಗರಗಳು ಕಂಗೊಳಿಸುತ್ತವೆ.

ಯೋಜನೆ. ಯಂತ್ರಗಳ ವಿಕಾಸ ಹೆಚ್ಚಿದಂತೆ. ಸಾಮೂಹಿಕಬೇಸಾಯಗಾರರಲ್ಲಿ ಸಾಮೂಹಿಕಜಾಗ್ರತಿ. ದೇಶಭಕ್ತಿ. ಸಂಘಟನಾಶಕ್ತಿ ಹೆಚ್ಚಿದಂತೆ. ಚಿಕ್ಕಬೇಸಾಯ ಸಂಘಗಳನ್ನೆಲ್ಲ ವಿಶಾಲವಾದ ಬೇಸಾಯಸಂಘಗಳನ್ನಾಗಿ ಸಂಘಟಿಸಲಾಯಿತು. 1932ರಲ್ಲಿ ಅವು 2.12.000 ಸಾಮೂಹಿಕಬೇಸಾಯಸಂಘಗಳಿದ್ದವು. ಅವು 1965ರಲ್ಲಿ 36,900 ವಿಶಾಲವಾದ ಬೇಸಾಯಸಂಘಗಳಲ್ಲಿ ವಿಲೀನಗೊಂಡವು. ಅವುಗಳಲ್ಲಿ ಬಿತ್ತಿದ ಕ್ಷೇತ್ರವು 9.15 ಕೋಟಿ ಹೆಕ್ಟೇರಿನಿಂದ 10.50 ಕೋಟಿ ಹೆಕ್ಟೇರಿನಷ್ಟು ಹೆಚ್ಚಿತು.

ಒಂದು ಸಾಮೂಹಿಕಬೇಸಾಯಸಂಘದ ವಿಲೀನದ ಪ್ರಗತಿಯ ಸರಾಸರಿ ಲೆಕ್ಕ ಕೆಳಗಿದೆ :

ವಿವರಗಳು	1940ರಲ್ಲಿ	1965ರಲ್ಲಿ
ಪರಿವಾರಗಳು	81	421
ಸಾಗಾದ ಕ್ಷೇತ್ರ (ಹೆಕ್ಟೇರು)	614	2.994
ಬಿತ್ತಿದ ಕ್ಷೇತ್ರ (ಹೆಕ್ಟೇರು)	492	2.843
ದನಗಳು	85	1.038
ಹಂದಿಗಳು	35	667
ಕುರಿ ಹಾಗೂ ಆಡುಗಳು	177	1,478
ಹಂಚಲಾಗದ ಆಸ್ತಿಪಾಸ್ತಿ (ಬೆಲೆ ರೂಬಲ್ಲು)	1.18,000	9,72,000
ಹಣದ ಆದಾಯ (ಬೆಲೆ ರೂಬಲ್ಲು)	88.000	5.50,000

ಪ್ರಾರಂಭದಲ್ಲಿ ಟ್ರಾಕ್ಟರ ಅಡ್ಡೆಗಳು ಸಾಮೂಹಿಕಬೇಸಾಯಸಂಘಗಳ ವಿಕಾಸದಲ್ಲಿ ಬಹಳ ನೆರವಾದವು. ಅವುಗಳ ತಾಂತ್ರಿಕ ಸಹಾಯ, ಮಾರ್ಗದರ್ಶನಗಳಿಂದ. ಬೇಸಾಯ ಸಂಘಗಳ ಉತ್ಪಾದನೆಯ ಸಾಧನಗಳೂ ಆದಾಯವೂ ಸಾಕಷ್ಟು ಹೆಚ್ಚಿದವು. ವಿಶಾಲ ವಾದ ಬೇಸಾಯಸಂಘಗಳ ತಾಂತ್ರಿಕ ಪ್ರಗತಿಗೆ ಟ್ರಾಕ್ಟರ ಅಡ್ಡೆಗಳ ಸಹಾಯ ಸಾಲದಾ ಯಿತು. ಆದ್ದರಿಂದ ತಮ್ಮ ಹೆಚ್ಚಿದಸಾಧನಗಳಿಂದ ವಿಶಾಲವಾದ ಬೇಸಾಯ

ಸಂಘಗಳೇ ಬೃಹತ್‌ಕೃಷಿಯಂತ್ರಗಳನ್ನು ಕೊಳ್ಳಲು ಅಣಿಯಾದವು. ಅದು ಅವಕ್ಕೆ ಹೆಚ್ಚು ಅನುಕೂಲವೂ. ಲಾಭದಾಯಕವೂ ಆಯಿತು. 1958ರಲ್ಲಿ ಸೋವಿಯತ್ ಸರಕಾರವು ಹೊಸ ಕಾನೂನು ಪಾಸುಮಾಡಿ ಟ್ರಾಕ್ಟರ ಅಡ್ಡೆಗಳ ಅನೇಕ ಉಪಯೋಗಿ ಯಂತ್ರಗಳನ್ನು ಪುಕ್ಕಟ್ಟೆಯಾಗಿಯೂ. ದೀರ್ಘಾವಧಿಯ ಸೋವಿ ಸಾಲದ ರೂಪ ದಲ್ಲಿಯೂ ಸಾಮೂಹಿಕಬೇಸಾಯಸಂಘಗಳಿಗೆ ಕೊಟ್ಟುಬಿಟ್ಟಿತು.

ಸೋವಿಯತ್ ಬೇಸಾಯಗಾರರ ಹೊಸ ಸಮೃದ್ಧ ಜೀವನ

ಈ ಉತ್ಪಾದನೆಯ ಸುಧಾರಣೆಗಳಿಂದ ಎಲ್ಲ ಬೇಸಾಯಸಂಘಗಳ ಒಟ್ಟು ಆದಾಯವು 1940ರಲ್ಲಿ 207 ಕೋಟಿ ರೂಬಲ್ಲು ಇದ್ದದ್ದು, 1966ರಲ್ಲಿ ಹೆಚ್ಚಿ 2,310 ಕೋಟಿ ರೂಬಲ್ಲು ಆಯಿತು. ಈ ಅವಧಿಯಲ್ಲಿ ಅವುಗಳ ಆಸ್ತಿಪಾಸ್ತಿಗಳ ಬೆಲೆಯು 277 ಕೋಟಿ ರೂಬಲ್ಲು ಇದ್ದದ್ದು 3,200 ಕೋಟಿ ರೂಬಲ್ಲು ಆಯಿತು. ಇದರಿಂದ ಬೇಸಾಯಗಾರರ ಜೀವನವೂ ಸಮೃದ್ಧವಾಯಿತು.

ಸೋವಿಯತ್‌ಹಳ್ಳಿಗಳಲ್ಲಿ ಈಗ ಶೇಕಡಾ 31ರಷ್ಟು ಬೇಸಾಯಗಾರರು ಮಾಧ್ಯಮಿಕ ಶಿಕ್ಷಣ ಪಡೆದಿರುತ್ತಾರೆ. 1965ರಲ್ಲಿ ಶೇಕಡಾ 67 ಬೇಸಾಯಸಂಘಗಳ ಅಧ್ಯಕ್ಷರು ಉಚ್ಚಮಾಧ್ಯಮಿಕ ಶಿಕ್ಷಣ ಹಾಗೂ ವಿಶಿಷ್ಟ ತರಬೇತಿ ಪಡೆದಿದ್ದರು. ಬೇಸಾಯಗಾರರ ಮಕ್ಕಳೇ ಆದ ಕೃಷಿಯಂತ್ರ ತಜ್ಞರು ಈಗ ಸೋವಿಯತ್ ಗ್ರಾಮಗಳ ಪ್ರಗತಿಶೀಲ ನಾಯಕರು. ಬೇಸಾಯದ ತಾಂತ್ರಿಕ ಪ್ರಗತಿಯಲ್ಲಿ ಹಾಗೂ ಸಮೃದ್ಧಿ ಯಲ್ಲಿ ಅವರು ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ಅವರ ಸಂಖ್ಯೆ 1965ರಲ್ಲಿ 32 ಲಕ್ಷ ಇತ್ತು.

19·4ರಲ್ಲಿ ಸೋವಿಯತ್ ದೇಶದ ಸಾಮೂಹಿಕ ಬೇಸಾಯಗಾರರಿಗೆ ನಿವೃತ್ತಿ ವೇತನ ಕೊಡುವ ಕಾನೂನನ್ನು ಜಾರಿಮಾಡಲಾಯಿತು. ಕಲ್ಯಾಣನಿಧಿಯ ಸಂಗ್ರಹವೂ ಬೇಸಾಯಸಂಘಗಳಲ್ಲಿ ಹೆಚ್ಚಿತು. ಸರಕಾರವು ಅದಕ್ಕೆ ಸರಿಸಮನಾಗಿ ತನ್ನ ವಂತಿಗೆ ಯನ್ನು ಕೊಟ್ಟಿತು. ಇದರಿಂದಲೇ ನಿವೃತ್ತಿ ವೇತನ ಕೊಡಲು ಹಾಗೂ ಅಂಗವಿಕಲರಿಗೆ ಮತ್ತು ನಿರ್ಗತಿಕರಿಗೆ ಸಹಾಯಮಾಡಲು ಸಾಧ್ಯವಾಯಿತು. 1965ರಲ್ಲಿ 65 ಲಕ್ಷ ಬೇಸಾಯಗಾರರಿಗೆ ಇಂಥ ನಿವೃತ್ತಿವೇತನವು ದೊರಕಿತು.

ಸಾಮೂಹಿಕಬೇಸಾಯವು ಸಾಧಿಸಿದ ಸಮೃದ್ಧಿಯನ್ನು ಅನೇಕ ಸಾಮೂಹಿಕ ಬೇಸಾಯದ ಗ್ರಾಮಗಳು ಎತ್ತಿತೋರಿಸುತ್ತಿವೆ. ಮಾಸ್ಕೋ ಪ್ರದೇಶದಲ್ಲಿ ಲೆನಿನ್ ಸಾಮೂಹಿಕ ಬೇಸಾಯಸಂಘವು ಇಂಥದೊಂದು ಮಾದರಿ ಗ್ರಾಮ. ಅದರಲ್ಲಿ 1965ರಲ್ಲಿ 1,400 ದನಗಳು, 1,500 ಹಂದಿಗಳು ಹಾಗೂ 70,000 ಕೋಳಿಗಳು ಇದ್ದವು. ಅದರ ಸದಸ್ಯರು ಸುಂದರ ಪಕ್ಕಾಮನೆಗಳಲ್ಲಿ ವಾಸಿಸುತ್ತಾರೆ. ಅನೇಕರ ಬಳಿ ಟೆಲಿವಿಜನ್ ಯಂತ್ರಗಳೂ ಉಂಟು. ಕ್ರಾಂತಿಯ ಮೊದಲು ಇಲ್ಲಿಯ ಬೇಸಾಯ ಗಾರರ ಸ್ಥಿತಿಯು ಬಹಳ ದಯನೀಯವಾಗಿತ್ತು.

ವ್ರೋಲಗ್ರಾಡ ಪ್ರದೇಶದಲ್ಲಿ 'ಡ್ಯೆರ್ಯೋಮಿನ್ಸ್ಕಿ' ಬೇಸಾಯಸಂಘವು ವಿಶಿಷ್ಟ ಸಮೃದ್ಧಿ ಸಾಧಿಸಿದೆ. ಅದರ ವಶದಲ್ಲಿ 30,000 ಹೆಕ್ಟೇರು ಭೂಮಿ ಇದೆ. ಅದರಲ್ಲಿ 21,000 ಹೆಕ್ಟೇರು ಸಾಗಾಗಿದೆ. ಅದರ ವಶದಲ್ಲಿ 14.000 ದನಗಳಿವೆ. 570 ಹೆಕ್ಟೇರಿನಲ್ಲಿ ಮಣ್ಣಿನ ಸಂರಕ್ಷಣೆಗಾಗಿ ಮರಳನ್ನು ತಡೆಗಟ್ಟುವ ಗಿಡಗಳನ್ನು ಬೆಳೆಸಲಾಗಿದೆ.

ಹೀಗೆ ಸಾಮೂಹಿಕಬೇಸಾಯದಿಂದ ಸೋವಿಯತ್‌ಹಳ್ಳಿಗಳಿಗೆ ಹಾಗೂ ಬೇಸಾಯಗಾರರಿಗೆ ಅಪಾರ ಉನ್ನತಿ ದೊರಕಿದೆ.

2) ಬಲ್ಗೇರಿಯಾದಲ್ಲಿ ಸಹಕಾರಿಬೇಸಾಯ

ಇನ್ನೊಂದು ಸಮಾಜವಾದಿ ದೇಶವಾದ ಬಲ್ಗೇರಿಯಾದಲ್ಲಿ 1879ರಲ್ಲಿಯೇ ಸಹಕಾರಿಬೇಸಾಯದ ಕಾರ್ಯಕ್ರಮವನ್ನು ಕೈಕೊಳ್ಳಲಾಗಿತ್ತು. 18–4–1945ರಂದು ಸಹಕಾರಿಬೇಸಾಯದ ತತ್ವ ಹಾಗೂ ನಿಯಮಗಳ ಬಗ್ಗೆ ಒಂದು ಕಾಯಿದೆಯನ್ನು ಜಾರಿಗೊಳಿಸಲಾಯಿತು. 18–3–1948ರಂದು ಇದರಲ್ಲಿ ಅಗತ್ಯವಿದ್ದ ಕೆಲವು ತಿದ್ದುಪಡಿಗಳನ್ನು ಮಾಡಲಾಯಿತು. 1948ರಲ್ಲಿ ಭೂಸುಧಾರಣೆಗಳ ಕಾಯಿದೆಯನ್ನು ಜಾರಿಗೊಳಿಸಿ ಜಮೀನುದಾರಿಯನ್ನು ನಿರ್ಮೂಲ ಮಾಡಿದ ಬಳಿಕ ಸಹಕಾರಿ ಬೇಸಾಯಕ್ಕೆ ಉತ್ತೇಜನ ದೊರಕಿತು. ಭೂಸುಧಾರಣೆಯ ಕಾಯಿದೆಯನ್ವಯ 50 ಎಕರೆಗಳಿಂದ 75 ಎಕರೆಗಳವರೆಗೆ ಭೂಹಿಡುವಳಿಯ ಪರಮಾವಧಿ ಮಿತಿಯನ್ನು ಗೊತ್ತುಪಡಿಸಲಾಯಿತು. ಅದರ ಪರಿಣಾಮವಾಗಿ ದೊಡ್ಡ ಭೂಮಾಲಿಕರಿಂದ 65.000 ಎಕರೆ ಭೂಮಿಯನ್ನು ಸರಕಾರವು ವಶಪಡಿಸಿಕೊಂಡು ಪುಕ್ಕಟೆಯಾಗಿ ಚಿಕ್ಕಬೇಸಾಯಗಾರರಲ್ಲಿ ಹಂಚಿಬಿಟ್ಟಿತು. ಸ್ವಯಂಸ್ಫೂರ್ತಿಯಿಂದ ಸಾಮೂಹಿಕಬೇಸಾಯಸಂಘಗಳನ್ನು ಸ್ಥಾಪಿಸಲು ಈ ಚಿಕ್ಕಬೇಸಾಯಗಾರರಿಗೆ ತಿಳಿವಳಿಕೆ, ಸವಲತ್ತು, ಉತ್ತೇಜನ ಕೊಟ್ಟು ಮನವೊಲಿಸಲಾಯಿತು. ಅವರು ಬಯಸಿದಾಗ ಬೇಸಾಯಸಂಘದಿಂದ ಹೊರಬೀಳುವ ಸ್ವಾತಂತ್ರ್ಯವನ್ನು ಅವರಿಗೆ ಕೊಡಲಾಯಿತು. ಬಲ್ಗೇರಿಯಾದಲ್ಲಿ ಕನಿಷ್ಠ 15 ಬೇಸಾಯಗಾರರು ಒಂದುಗೂಡಿ ಒಂದು ಸಾಮೂಹಿಕಬೇಸಾಯಸಂಘವನ್ನು ಸ್ಥಾಪಿಸಬಹುದು. ಇಂಥ ಬೇಸಾಯಗಾರರ ಹಿಡುವಳಿಗಳನ್ನೆಲ್ಲ ಒಂದೇ ಸಂಘದ ಕ್ಷೇತ್ರವಲ್ಲಿ ಕ್ರೋಢೀಕರಿಸಲಾಗುತ್ತದೆ. ಇಂಥ ಕ್ಷೇತ್ರದಲ್ಲಿ ಬೇಸಾಯಸಂಘದಲ್ಲಿ ಸೇರದವರ ಭೂಮಿ ಇದ್ದರೆ ಅವರಿಗೆ ಈ ಭೂಮಿಯ ಬದಲು ಬೇರೆಡೆ ಅಷ್ಟೇ ಭೂಮಿಯನ್ನು ಒದಗಿಸಲಾಗುತ್ತದೆ. ಸಹಕಾರಿಬೇಸಾಯಗಾರರು ಶೇರು, ಠೇವುಗಳ ರೂಪದಲ್ಲಿ ಬೇಸಾಯಸಲಕರಣೆಗಳನ್ನು ಒಂದುಗೂಡಿಸುತ್ತಾರೆ.

ಸಾಮೂಹಿಕಬೇಸಾಯಸಂಘದ ಆದಾಯ ಹಂಚಿಕೆ :

ಭೂಮಿಯ ಪ್ರತಿಫಲ	...	30%
ದುಡಿತದ ಪ್ರತಿಫಲ (ಒಡೆಯರು ಹಾಗೂ ಸದಸ್ಯರಿಗೆ)	...	60%
ನಿಧಿಗಳು ಹಾಗೂ ವಿಮಾ	...	10%
ಒಟ್ಟು	...	10%0

ಸರಿಯಾಗಿ ಬೆಲೆಕಟ್ಟಿ ಒಂದುಗೂಡಿಸಿದ ಭೂಮಿಯನ್ನು ಸಹ ಭೂನಿಧಿಯಲ್ಲಿ ಪರಿವರ್ತಿಸಲಾಗುತ್ತದೆ. ಶೇಕಡಾ 30ರಷ್ಟು ಭೂಮಿಯ ಪ್ರತಿಫಲವನ್ನು ಭೂ ಒಡೆಯರಿಗೆ ಭೂನಿಧಿಯಲ್ಲಿರುವ ಅವರ ಶೇರು ಪಾಲಿನ ಪ್ರಕಾರ ಹಂಚಲಾಗುತ್ತದೆ. ಶ್ರಮದಿವಸಗಳ ಪ್ರಕಾರ ಶ್ರಮದ ಪ್ರತಿಫಲವನ್ನು ಹಂಚಲಾಗುತ್ತದೆ.

ಈ ಕ್ರಮಗಳಿಂದ ಬಲ್ಗೇರಿಯಾದಲ್ಲಿ ಕ್ರಮೇಣವಾಗಿ ಸಹಕಾರಿಬೇಸಾಯದ ಒಳ್ಳೆಯ ಪ್ರಗತಿ ಆಗಿದೆ. 1945ರಲ್ಲಿ ಅಲ್ಲಿ 382 ಸಾಮೂಹಿಕಬೇಸಾಯಸಂಘಗಳಿದ್ದವು. ಒಟ್ಟು ಸಾಗಾದ ಭೂಮಿಯ ಶೇಕಡಾ 3.1 ಭೂಮಿಯು ಅವುಗಳ ವಶದಲ್ಲಿತ್ತು. 1952ರಲ್ಲಿ ಬೇಸಾಯಸಂಘಗಳ ಸಂಖ್ಯೆಯು 2,747ಕ್ಕೇರಿತು. ಅವುಗಳ ವಶದಲ್ಲಿಯ ಭೂಮಿಯು ಶೇಕಡಾ 60.5 ಕ್ಕೇರಿತು. 1957ರಲ್ಲಿ ಅದು 86.5ಕ್ಕೇರಿತು.

ಪ್ರಯೋಜನಗಳು

ಉತ್ಪಾದನೆ ಸಾಧನೆಗಳನ್ನೆಲ್ಲ ಒಂದುಗೂಡಿಸಿ ಸಾಮೂಹಿಕವಾಗಿ ಉಪಯೋಗಿಸಿದ್ದರಿಂದ ಉತ್ಪತ್ತಿಯು ಸಾಕಷ್ಟು ಹೆಚ್ಚಿತು. 1949ರಲ್ಲಿ ವೈಯಕ್ತಿಕ ಬೇಸಾಯಗಾರರಿಗಿಂತ, ಬೇಸಾಯಸಂಘಗಳು ಶೇಕಡಾ 17ರಷ್ಟು ಉತ್ಪತ್ತಿಯನ್ನು ಹೆಚ್ಚಿಸಿದವು. 1970ರಲ್ಲಿ ಈ ಹೆಚ್ಚಳವು ಶೇಕಡಾ 29ಕ್ಕೇರಿತು. ಇದರಿಂದ ದೇಶಕ್ಕೆ ಬೇಕಾಗುವ ಆಹಾರವನ್ನು ಬಹುಮಟ್ಟಿಗೆ ದೇಶದಲ್ಲಿಯೇ ಬೆಳೆಯಲಾಯಿತು. ಇತ್ತೀಚೆಗೆ ಚಿಕ್ಕ ಬೇಸಾಯಸಂಘಗಳನ್ನು ವಿಲೀನಗೊಳಿಸಿ ದೊಡ್ಡ ಬೇಸಾಯಸಂಘಗಳಲ್ಲಿ ಪರಿವರ್ತಿಸಲಾಗಿದೆ. ಇಂಥ ದೊಡ್ಡ ಬೇಸಾಯಸಂಘದವೂ ಸರಾಸರಿಯಾಗಿ 2,000 ಎಕರೆ ಭೂಮಿಯು ಇರುತ್ತದೆ. 3,450 ಬೇಸಾಯ ಸಂಘಗಳು ವಿಲೀನವಾಗಿ 625 ದೊಡ್ಡ ಬೇಸಾಯಸಂಘಗಳಾದವು.

ಹೀಗೆ ಕ್ರಮಿಕವಾಗಿ ತಿಳಿಸಿ, ಮನವೊಲಿಸಿ, ಸಾಮೂಹಿಕಬೇಸಾಯವನ್ನು ಹಬ್ಬಿಸಿದ್ದರಿಂದ ಬಲ್ಗೇರಿಯಾದಲ್ಲಿ ಸಾಮೂಹಿಕಬೇಸಾಯದ ಪ್ರಗತಿಯು ವೇಗದಿಂದ ನಡೆದು ಬೇಸಾಯದ ಉತ್ಪತ್ತಿಯನ್ನು ಸಾಕಷ್ಟು ಹೆಚ್ಚಿಸಿತು.

3) ಪೋಲೆಂಡ್‌ನಲ್ಲಿ ಸಹಕಾರಿಬೇಸಾಯ

ಪೋಲೆಂಡ್ ಸಹ ಒಂದು ಸಮಾಜವಾದಿ ದೇಶ. 1960ರಲ್ಲಿ ಪೋಲೆಂಡ್‌ನಲ್ಲಿ 1,800 ಸಹಕಾರಿಬೇಸಾಯಸಂಸ್ಥೆಗಳಿದ್ದವು. ಅವುಗಳಲ್ಲಿ 22,000 ಬೇಸಾಯ ಪರಿವಾರಗಳು ಸದಸ್ಯರಾಗಿದ್ದರು. ಮತ್ತು ಅವುಗಳ ವಶದಲ್ಲಿ 6 ಲಕ್ಷ ಎಕರೆ ಭೂಮಿ ಇತ್ತು. ವೈಯಕ್ತಿಕ ಹೊಲಗಳಿಗಿಂತ ಸಹಕಾರಿ ಹೊಲಗಳಲ್ಲಿ ಸರಾಸರಿಯಾಗಿ ಎಕರೆಗೆ 2–3 ಕ್ವಿಂಟಾಲಿನಷ್ಟು ಉತ್ಪತ್ತಿಯು ಹೆಚ್ಚಿತು.

ಪ್ರಾರಂಭದಲ್ಲಿ ಆದರ್ಶವಾದಿ ಆತುರತೆಯಿಂದ, ಬೇಸಾಯಗಾರರಿಗೆ ಸರಿಯಾದ ತಿಳಿವಳಿಕೆ ಕೊಡದೆ, ಸರಿಯಾದ ಮಾರ್ಗದರ್ಶನ, ಸಂಚಾಲನ ಮಾಡದೆ, ಹಣದ

ಪ್ರಲೋಭನ ತೋರಿಸಿ ಸಹಕಾರಿ ಬೇಸಾಯಸಂಘಗಳನ್ನು ಸಂಘಟಿಸಲಾಯಿತು. ಅದರ ಪರಿಣಾಮವಾಗಿ ಬೇಸಾಯಸಂಘಗಳ ಆಡಳಿತವು ಸರಿಯಾಗಿ ನಡೆಯಲಿಲ್ಲ. ಅಂಥ ಬೇಸಾಯಸಂಘಗಳು ಉತ್ಪಾದನೆಗೆ ಧಕ್ಕೆಹಚ್ಚಿದವು. ಕೆಟ್ಟು ಹೋದ ಸಂಘಗಳನ್ನು ನಿರ್ಮೂಲ ಮಾಡಲು ಹಾಗೂ ಒಳ್ಳೇ ಸಂಘಗಳನ್ನು ಭದ್ರಪಡಿಸಿ ಅಭಿವೃದ್ಧಿಗೊಳಿಸಲು ಅಲ್ಲಿಯ ಸರಕಾರವು ಕ್ರಮ ಕೈಕೊಂಡಿತು. ಈ ಕ್ರಮದಲ್ಲಿ 1955ರಲ್ಲಿ 9076 ಇದ್ದ ಬೇಸಾಯಸಂಘಗಳು ಕಡಮೆ ಆಗಿ 1957ರಲ್ಲಿ 1527 ಸಂಘಗಳು ಉಳಿದವು. 1958ರ ಕೊನೆಯುವರೆಗೆ ಸರಿಯಾದ ಪುನಃಸಂಘಟನೆಯಿಂದ ಅವು 1969 ಸಂಘ ಗಳಾದವು. ಪುನಃಸಂಘಟಿಸಲ್ಪಟ್ಟ ಬೇಸಾಯಸಂಘಗಳಲ್ಲಿ ಬೇಸಾಯಗಾರರು ಸಹಕಾರಿ ಬೇಸಾಯುದ ತತ್ವವನ್ನು ಸರಿಯಾಗಿ ಮನವರಿಕೆ ಮಾಡಿಕೊಂಡು ಸ್ವಯಂಸ್ಫೂರ್ತಿ ಮತ್ತು ಉತ್ಸಾಹಗಳಿಂದ ಸೇರಿದರು.

ಪೋಲಿಷ್‌ಸರಕಾರವು 26 ಸರಕಾರಿಫಾರ್ಮುಗಳನ್ನು ಪ್ರಾಯೋಗಿಕವಾಗಿ ಸಹಕಾರಿ ಬೇಸಾಯಸಂಘಗಳಾಗಿ ಪರಿವರ್ತಿಸಿತು. ಇಂಥ ಪ್ರತಿಯೊಂದು ಫಾರ್ಮಿನಲ್ಲಿ 125 ಎಕರೆಯಿಂದ 500 ಎಕರೆಗಳವರೆಗೆ ಭೂಮಿ ಇತ್ತು ಮತ್ತು ಸಾಕಷ್ಟು ಬೇಸಾಯ ಸಾಧನಗಳನ್ನು ಕೊಡಲಾಯಿತು. ಈ ಪ್ರಯೋಗಗಳು ಯಶಸ್ವಿಯಾದಲ್ಲಿ ಬೇರೆ ಸರಕಾರಿಫಾರ್ಮುಗಳಲ್ಲಿ ಸಹಕಾರಿ ಬೇಸಾಯವನ್ನು ಜಾರಿಮಾಡಲು ಪೋಲಿಷ್ ಸರಕಾರವು ಯೋಚಿಸುತ್ತಿದೆ. ಪ್ರಾರಂಭದಲ್ಲಿ ರಭಸದ ಸಂಘಟನದಿಂದ ಕೆಲವು ಲೋಪ ದೋಷಗಳಾದರೂ ಪೋಲಿಷ್‌ಸರಕಾರವು ಸರಿಯಾದ ಉಪಾಯಗಳಿಂದ ಸಹಕಾರಿ ಬೇಸಾಯವನ್ನು ಹಬ್ಬಿಸಲು ಯತ್ನಿಸುತ್ತಿದೆ.

ಪ್ರಾರಂಭದ ತೊಂದರೆಗಳ ನಂತರ ಸಾಮೂಹಿಕ ಬೇಸಾಯಸಂಘಗಳ ಉತ್ಪತ್ತಿ ಯನ್ನು ಹೆಚ್ಚಿಸಲು ಯಶಸ್ವಿ ಪ್ರಯತ್ನಗಳು ನಡೆದವು. 1962ರಲ್ಲಿಯ ಪ್ರತಿ ಹೆಕ್ಟೇರಿನ ಉತ್ಪತ್ತಿ ಪಟ್ಟಿಯೊಂದು ಇದನ್ನು ಸ್ಪಷ್ಟಪಡಿಸುತ್ತದೆ (ಕ್ವಿಂಟಾಲುಗಳು)

	ಗೋಧಿ	ರಾಯ್	ಜವೆಗೋಧಿ	ಒಟ್ಟು
ವೈಯಕ್ತಿಕ ಹೊಲಗಳಲ್ಲಿ ಸರಾಸರಿ	19.3	14.2	19.6	17.2
ಸಹಕಾರಿ ಹೊಲಗಳಲ್ಲಿ ಸರಾಸರಿ	23.1	17.00	23.3	20.1

ಇದರಿಂದ ಸಾಮೂಹಿಕಬೇಸಾಯಗಾರನ ಪಾರಿವಾರಿಕ ವಾರ್ಷಿಕ ಸರಾಸರಿ ಆದಾಯವೂ 17,704ರಲ್ಲಿ 20202 ಗಣನೀಯವಾಗಿ ಹೆಚ್ಚಾಯಿತು.

4) ಯುಗೋಸ್ಲೋವಿಯಾದಲ್ಲಿ ಸಹಕಾರಿಬೇಸಾಯ

ಯುಗೋಸ್ಲೋವಿಯಾ ಕೂಡ ಸಮಾಜವಾದಿ ದೇಶವಾದರೂ ಐತಿಹಾಸಿಕ ಪರಿಸ್ಥಿತಿಗಳಿಗನುಸರಿಸಿ ಆ ದೇಶದಲ್ಲಿನ ಸಮಾಜವಾದ ಭಿನ್ನವಾಗಿರುವಂತೆ ಸಮಾಜವಾದಿ ಬೇಸಾಯದ ಸ್ವರೂಪವೂ ಭಿನ್ನವಾಗಿದೆ. ಅಲ್ಲಿ (i) ಸರಕಾರಿ ಫಾರ್ಮುಗಳು

(ii) ಬೇಸಾಯಗಾರ ಹಾಗೂ ದುಡಿಮೆಗಾರರ ಸಹಕಾರಸಂಘಗಳು ಮತ್ತು (iii) ಸಾಮಾನ್ಯ ಬೇಸಾಯದ ಸಹಕಾರಸಂಘಗಳು ಹೀಗೆ ಮೂರು ಪ್ರಕಾರದ ಬೇಸಾಯದ ಉನ್ನತಿಗಾಗಿ ಸಂಘಟಿಸಲಾಯಿತು. ಸರಕಾರಿ ಫಾರ್ಮುಗಳನ್ನಂತೂ ಸರಕಾರವೇ ನೇರವಾಗಿ ನಡೆಸುತ್ತದೆ. ಬೇಸಾಯಗಾರ-ದುಡಿಮೆಗಾರರ ಸಹಕಾರ ಸಂಘಗಳು (ಪೀಜೆಂಟ್ಸ್ ವರ್ಕರ್ಸ್ ಕೋ-ಅಪರೇಟಿವ್ಸ್) ಸಹಕಾರಿಸಾಮೂಹಿಕಬೇಸಾಯಸಂಘಗಳಾಗಿವೆ. ಸಾಮಾನ್ಯ ಬೇಸಾಯದ ಸಹಕಾರ ಸಂಘಗಳು ವಿಶಿಷ್ಟ ಪ್ರಕಾರದ ಸೇವಾಸಹಕಾರಿಸಂಘಗಳು. ಇವು ಗುತ್ತಿಗೆಯ ಕೂಲಿನಿಂದ ಬೇಸಾಯಗಾರರ ಭೂಮಿಗಳನ್ನು ಸಾಗುವಮಾಡಿ ಅವರಿಗೆ ಗುತ್ತಿಗೆ ಕೊಡುತ್ತೇವೆ. 1945ರಲ್ಲಿ ಭೂಸುಧಾರಣೆಗಳ ಕಾಯಿದೆಯು ಜಾರಿಯಲ್ಲಿ ಬಂದನಂತರವೇ ಬೇಸಾಯದ ಪುನಃಸಂಘಟನೆಗಾಗಿ ಈ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. 1953ರಲ್ಲಿ ಮತ್ತೆ ಭೂಸುಧಾರಣೆಯ ಕಾಯಿದೆಯಲ್ಲಿ ಮಹತ್ವದ ತಿದ್ದುಪಡಿಗಳಾದವು.

ಪ್ರಾರಂಭದಲ್ಲಿ ಬೇಸಾಯಗಾರರ ಬಡತನ, ನಿರಕ್ಷರತೆಗಳ ಕಾರಣದಿಂದ ಸಾಮೂಹಿಕಬೇಸಾಯದ ಜಾಗೃತಿ, ಮುಂದಾಳುತನದ ಕೊರತೆ ಇದ್ದದ್ದರಿಂದ ಸಾಮೂಹಿಕಬೇಸಾಯದ ಪ್ರಗತಿಯಲ್ಲಿ ಅಡೆತಡೆಗಳುಂಟಾದವು. ಕ್ರಮೇಣವಾಗಿ ಅವು ಕಡಮೆ ಆಗಿ ಬೇಸಾಯಸಂಘಗಳ ಸಂಖ್ಯೆ ಹಾಗೂ ಅವುಗಳ ಉತ್ಪಾದಕ ಪ್ರಗತಿ ಹೆಚ್ಚಿದವು. 1952ರಲ್ಲಿ ಜಮೀನುದಾರರಿಂದ ಕಿತ್ತುಕೊಂಡ ವಿಶಾಲವಾದ ಭೂಮಿಗಳಲ್ಲಿ ಸರಕಾರಿಫಾರ್ಮುಗಳನ್ನು ಹಾಗೂ ವೈಯಕ್ತಿಕವಾಗಿ ಹಂಚಿದ ಭೂಮಿಗಳನ್ನು ಒಂದುಗೂಡಿಸಿ, ಬೇಸಾಯಗಾರರ ಹಾಗೂ ದುಡಿಮೆಗಾರರ ಸಹಕಾರಸಂಘಗಳನ್ನು ಸಂಘಟಿಸಲಾಯಿತು. 1952ರಲ್ಲಿ ಇಂಥ ಸಹಕಾರಸಂಘಗಳು 2,000 ಇದ್ದವು. ಅವು ಕ್ರಮೇಣ ಕಡಮೆ ಆದವು. 1952ರಲ್ಲಿ ಸಾಮಾನ್ಯ ಸಹಕಾರ ಸಂಘಗಳು 4,000ದಷ್ಟು ಇದ್ದರೂ, ಶೇಕಡಾ 52ರಷ್ಟು ಬಡಬೇಸಾಯಗಾರರ ಪರಿವಾರಗಳನ್ನು ಅವು ಆಕರ್ಷಿಸಿದ್ದವು.

ಬೇಸಾಯಗಾರ ದುಡಿಮೆಗಾರರ ಸಹಕಾರಸಂಘಗಳು ನೈಜ ಸಹಕಾರಿ ಬೇಸಾಯ ಸಂಘಗಳು. ಇವು ನಾಲ್ಕು ತೆರನಾಗಿವೆ

(i) ಮೊದಲನೆಯ ತೆರನಾದ ಬೇಸಾಯಸಂಘಗಳಲ್ಲಿ ಒಂದುಗೂಡಿಸಿದ ಭೂಮಿಗೆ ಪ್ರಚಲಿತದರದ ಶೇಕಡಾ 50ರಷ್ಟು ಗುತ್ತಿಗೆ(ಲಾವಣಿ)ದೊರಕುತ್ತದೆ. ಇವು 10 ಹೆಕ್ಟೇರಿಗಿಂತ ಕಡಮೆ ಹಿಡುವಳಿಯಾಗಿದೆ. ಇದು ಎಲ್ಲಕ್ಕೂ ಕೆಳಮಟ್ಟದ ಬೇಸಾಯ ಸಂಘಗಳು.

(ii) ಎರಡನೆಯ ತೆರನಾದ ಬೇಸಾಯ ಸಂಘಗಳಲ್ಲಿ ಒಂದುಗೂಡಿಸಿದ ಭೂಮಿಯ ಬೆಲೆ ಮೇಲೆ ರಾಷ್ಟ್ರೀಯ ಬ್ಯಾಂಕಿನ ದರಕ್ಕೆ ಮಿಕ್ಕದಷ್ಟು ಬಡ್ಡಿಯು ಸದಸ್ಯರಿಗೆ ದೊರೆಯುತ್ತದೆ.

(iii) ಮೂರನೆಯ ತೆರನಾದ ಬೇಸಾಯಸಂಘಗಳಲ್ಲಿ ಭೂಮಿಯ ಒಡೆತನದ ಹಕ್ಕು ಇನ್ನೂ ಉಳಿದಿರುತ್ತವೆ. ಆದರೆ ಅದರ ಮೇಲೆ ಲಾವಣಿ, ಬಡ್ಡಿ ಏನೂ ದೊರಕುವುದಿಲ್ಲ.

(iv) ನಾಲ್ಕನೆಯ ತೆರನಾದ ಬೇಸಾಯಸಂಘಗಳಲ್ಲಿ ಭೂಮಿಯ ಒಡೆತನದ ಎಲ್ಲ ಹಕ್ಕುಗಳೂ ನಿರ್ಮೂಲಗೊಂಡಿರುತ್ತವೆ. ಇವು ಪೂರ್ಣ ಸಾಮುದಾಯಿಕ ಬೇಸಾಯಸಂಘಗಳು. ಸ್ವಾತಂತ್ರ್ಯದ ಸಂಗ್ರಾಮದಲ್ಲಿ ಹೋರಾಡಿ ಮರಳಿ ಬಂದ ಸೈನಿಕರು ಮತ್ತು ಭೂರಹಿತ ಕಾರ್ಮಿಕರು ಒಂದುಗೂಡಿ ಇಂಥ ಪೂರ್ಣ ಸಮಾಜವಾದಿ ಬೇಸಾಯಸಂಘಗಳನ್ನು ಸ್ಥಾಪಿಸಿದ್ದಾರೆ.

ಈ ಎಲ್ಲ ಬೇಸಾಯಸಂಘಗಳಲ್ಲಿ ಪ್ರತಿಯೊಬ್ಬ ಸದಸ್ಯನಿಗೆ ವೈಯಕ್ತಿಕ ಕುಟುಂಬ ವ್ಯವಸಾಯಕ್ಕಾಗಿ ಅರ್ಧ ಎಕರೆಯಷ್ಟು ಭೂಮಿಯನ್ನು ಕೊಡಲಾಗುತ್ತದೆ. ಹೂಡುವ ದನಗಳನ್ನೂ ಬೇಸಾಯಸಲಕರಣೆಗಳನ್ನೂ ಈ ಸಂಘಗಳು ಒಂದುಗೂಡಿಸಿದ್ದಾರೆ. ಪ್ರತಿಯೊಬ್ಬ ಸದಸ್ಯನೂ ಒಂದು ಆಕಳು ಮತ್ತು ಕರು, 5 ಕುರಿ, 1 ಹಂದಿ ಹಾಗೂ ಮರಿಗಳನ್ನು ಸ್ವಂತಕ್ಕಾಗಿ ಇಟ್ಟುಕೊಂಡಿರುತ್ತಾರೆ. ಒಂದುಗೂಡಿಸಿದ ಸಲಕರಣೆಗಳಿಗೆ ಯೋಗ್ಯಬೆಲೆಯನ್ನು ಕೊಡಲಾಗುತ್ತದೆ. 3 ವರ್ಷಗಳ ನಂತರ ಬೇಸಾಯಸಂಘದಿಂದ ಹೊರಹೋಗುವ ಸ್ವಾತಂತ್ರ್ಯ ಸದಸ್ಯರಿಗಿರುತ್ತದೆ. ಭೂಮಿಯಲ್ಲಿ ಸಂಘವು ಮಾಡಿದ ಸುಧಾರಣೆಗಳ ತಕ್ಕ ಪರಿಹಾರವನ್ನು ಕೊಟ್ಟು ಹೊರಹೋಗುವ ಸದಸ್ಯನು ಭೂಮಿಯನ್ನು ವಾಪಸ್ಸು ಪಡೆಯಬಲ್ಲ. ಹೀಗೆ ಭೂಮಿಯನ್ನು ಕೊಡುವುದರಿಂದ ಸಂಘದ ಘನತೆಗೆ ಧಕ್ಕೆ ತಗಲುವುದೆಂದೆನಿಸಿದರೆ ಅದರ ಬದಲು ಬೇರೆ ಅಷ್ಟೇ ಬೆಲೆಯ ಭೂಮಿಯನ್ನಾಗಲೀ ಅಥವಾ ಸೂಕ್ತ ಪರಿಹಾರವನ್ನಾಗಲೀ ಅಂಥ ಸದಸ್ಯನಿಗೆ ಕೊಡಲಾಗುತ್ತದೆ.

ಪ್ರತಿಯೊಬ್ಬ ಸದಸ್ಯನೂ ಬೇಸಾಯಸಂಘದ ಒಂದಿಲ್ಲೊಂದು ಕೆಲಸದಲ್ಲಿ ಸ್ವತಃ ದೈಹಿಕವಾಗಿ ದುಡಿಯುತ್ತಾನೆ. ಸಾಮಾನ್ಯವಾಗಿ 30 ಸದಸ್ಯರ ಕಾರ್ಯದಳಗಳನ್ನು ರಚಿಸಲಾಗುತ್ತದೆ. ಕೆಲಸದ ಅನುಕೂಲತೆಗಾಗಿ ಕಾರ್ಯದಳಗಳಲ್ಲಿ ಚಿಕ್ಕಗುಂಪುಗಳನ್ನು ಮಾಡಲಾಗುತ್ತದೆ. ಈ ದಳಗಳ ಹಾಗೂ ಗುಂಪುಗಳ ನಾಯಕರು ಬೇಸಾಯದಲ್ಲಿ ತಜ್ಞರು ಹಾಗೂ ಅನುಭವಿಕರಾಗಿರುತ್ತಾರೆ. ಸುಗ್ಗಿಯಾದ ಬಳಿಕ ಆದಾಯವನ್ನು ಹಂಚಲಾಗುತ್ತದೆ. ಸದಸ್ಯರ ಸರಾಸರಿ ವಾರ್ಷಿಕ ಆದಾಯದ ಅರ್ಧದಷ್ಟು ಮುಂಗಡವನ್ನು ಸದಸ್ಯರಿಗೆ ಕೊಡಲಾಗುತ್ತದೆ. ಮಾಲಿನ ರೂಪದಲ್ಲಿಯೂ, ಹಣದ ರೂಪದಲ್ಲಿಯೂ ದುಡಿತದ ಕೂಲಿಯನ್ನು ಕೊಡಲಾಗುತ್ತದೆ. ಉತ್ಪಾದನೆಯ ವೆಚ್ಚ, ಯಂತ್ರಗಳ ಬದಲಾವಣೆಯ ವೆಚ್ಚ, ಹೊರಗಿನ ತಜ್ಞರ ಹಾಗೂ ಸಂಸ್ಥೆಗಳ ವೆಚ್ಚ ಮತ್ತು ಭೂಮಿಯ ಗುತ್ತಿಗೆ (ಲಾವಣಿ), ಬಡ್ಡಿ ಹಾಗೂ ಕೆಲವು ನಿಧಿಗಳಿಗಾಗಿ ಹಣದ ವಜಾ ತೆಗೆದು, ಉಳಿದ ಆದಾಯವನ್ನು ದುಡಿಯುವ ಸದಸ್ಯರಿಗೆ ದುಡಿತದ ಆಧಾರದ ಮೇಲೆ ಹಂಚಲಾಗುತ್ತದೆ. ರಕ್ಷಿತನಿಧಿ (ಮಾಲು, ಹಣ ಎರಡೂ ರೂಪದಲ್ಲಿ)

ಅಂಗವಿಕಲರ ಹಾಗೂ ನಿರ್ಗತಿಕರ ಯೋಗಕ್ಷೇಮಕ್ಕಾಗಿ ಸಮಾಜ ಕಲ್ಯಾಣ ನಿಧಿ, ಪುಸ್ತಕಾಲಯ, ರೇಡಿಯೋ ಮನರಂಜನೆ ಮುಂತಾದವುಗಳ ಸಲುವಾಗಿ ಸಾಂಸ್ಕೃತಿಕ ನಿಧಿ ಇವು ಮುಖ್ಯವಾದ ನಿಧಿ.

ತಾತ್ವಿಕ ವಿಚಾರಗಳ ಪ್ರಭಾವವನ್ನು ಬೀರಿ, ಸಹಾಯ ಸವಲತ್ತುಗಳನ್ನು ಕೊಟ್ಟು ಈ ಬೇಸಾಯಸಂಘಗಳಲ್ಲಿ ಸೇರಲು ಬೇಸಾಯಗಾರರಿಗೆ ಮನವೊಲಿಸಲಾಗಿದೆ. ಸಾಮೂಹಿಕಬೇಸಾಯಗಾರರಿಗೆ ಕೆಲವು ಕರಕಂದಾಯ, ಎತ್ತುವಳಿಗಳ ವಿನಾಯತಿ ಯನ್ನು ತೋರಿಸಲಾಗಿದೆ. ಸರಕಾರದ ವಿಶೇಷ ಸಾಲ ಸೌಲಭ್ಯಗಳನ್ನು ಈ ಸಂಘಗಳಿಗೆ ಕೊಡಲಾಗಿದೆ. 1949ರವರೆಗೆ 6,500 ಬೇಸಾಯಸಂಘಗಳನ್ನು ಸ್ಥಾಪಿಸಲಾಗಿತ್ತು. 1952ರವರೆಗೆ 7,000 ಬೇಸಾಯಸಂಘಗಳಾದವು. ಅವುಗಳ ವಶದಲ್ಲಿ 22.9 ಲಕ್ಷ ಹೆಕ್ಟೇರು ಭೂಮಿ ಇತ್ತು. ದೇಶದ ಒಟ್ಟು ಸಾಗುವ ಭೂಮಿಯ ಶೇಕಡಾ 15ರಷ್ಟು ಭೂಮಿಯು ಬೇಸಾಯಸಂಘಗಳ ವಶದಲ್ಲಿತ್ತು. ಅವುಗಳ ಬಳಿ 3,300 ಟ್ರಾಕ್ಟರು ಗಳು, 298 ಒಕ್ಕಣೆಯ ಯಂತ್ರಗಳು ಇದ್ದವು. ಈ ಸಂಘಗಳಲ್ಲಿ ಶೇಕಡಾ 34.7ರಷ್ಟು 1ನೇ ಹಾಗೂ 2ನೇ ಪ್ರಕಾರದ ಸಂಘಗಳೂ, ಶೇಕಡಾ 65.3ರಷ್ಟು 3ನೇ ಮತ್ತು 4ನೇ ಪ್ರಕಾರದ ಬೇಸಾಯಸಂಘಗಳೂ ಇದ್ದವು.

ಇವು ಹೆಚ್ಚಾಗಿ ಬಡಬೇಸಾಯಗಾರರ ಸಂಘಗಳೇ ಆಗಿದ್ದವು. ಅನುಕೂಲಸ್ಥ ಬೇಸಾಯಗಾರರು ಇವುಗಳಲ್ಲಿ ಸೇರಲಿಲ್ಲ. ಇವುಗಳಿಗೆ ಸಲಕರಣೆಗಳ ಕೊರತೆ ಇತ್ತು. ಶ್ರಮದ ಉಳಿತಾಯದಿಂದ ನಿರುದ್ಯೋಗದ ಸಮಸ್ಯೆಯೂ ಬೆಳೆಯಿತು. ಸಮನಾದ ಕೂಲಿ ಕೊಡುತ್ತಿದ್ದುದರಿಂದ ದುಡಿತಕ್ಕೆ ಉತ್ತೇಜನವೂ ಇರಲಿಲ್ಲ. ದಕ್ಷಮಾರ್ಗದರ್ಶನದ ಕೊರತೆಯಿಂದ ಕೆಲಸದಲ್ಲಿ ದಕ್ಷತೆಯ ಕೊರತೆಯೂ ಇತ್ತು. ಇದರಿಂದ ಉತ್ಪತ್ತಿಗೂ ಧಕ್ಕೆಹತ್ತಿತು.

1952–53ರಲ್ಲಿ ಬೇಸಾಯಸಂಘಗಳ ಪ್ರಗತಿಯನ್ನು ಸಮೀಕ್ಷಿಸಿ ಆ ಬಗ್ಗೆ ಧೋರಣವನ್ನು ಪುನಃ ವಿಮರ್ಶಿಸಲಾಯಿತು. ನಿರ್ಜೀವ ಬೇಸಾಯಸಂಘಗಳನ್ನು ಮುಚ್ಚಲಾಯಿತು. ಅನೇಕ ಬೇಸಾಯಸಂಘಗಳನ್ನು ಪುನಃಸಂಘಟಿಸಲಾಯಿತು. ಭೂಮಿಯ ಒಡೆತನವನ್ನು ಕಾಯ್ದಿರಿಸಲಾಯಿತು ಮತ್ತು ಅದಕ್ಕೆ ಯೋಗ್ಯಪ್ರತಿಫಲ ಕೊಡುವ ವ್ಯವಸ್ಥೆಯಾಯಿತು. ದುಡಿತಕ್ಕೆ ಉತ್ತೇಜನ ಕೊಡುವ ವೇತನ ಪದ್ಧತಿ ಗಳನ್ನು ಹಾಕಲಾಯಿತು. ಬೇಸಾಯಸಂಘಗಳ ಆಡಳಿತವನ್ನು ಹೆಚ್ಚು ಜನತಾಂತ್ರಿಕ ಮಾಡಲಾಯಿತು. ದಕ್ಷದುಡಿತಕ್ಕೆ ಶೇಕಡಾ 20ರಿಂದ 25ರವರೆಗೆ ವಿಶೇಷ ಪ್ರತಿಫಲ ಕೊಡುವ ವ್ಯವಸ್ಥೆಯಾಯಿತು. ನಿರ್ವಾಚಿತ ದುಡಿಮೆಗಾರರ ಸಮಿತಿಗಳು, ಬೇಸಾಯ ಸಂಘಗಳ ಸಂಘಟನೆ ಮತ್ತು ಸಂಚಾಲನದಲ್ಲಿ ಹೆಚ್ಚು ಆಸ್ಥೆವಹಿಸಹತ್ತಿದವು. ಬೇಸಾಯದ ಉತ್ಪಾದನದ ಸಾಧನಗಳ ಸಮಾಜೀಕರಣ ಹೆಚ್ಚಿದಂತೆ ಬೇಸಾಯಸಂಘ ಗಳನ್ನು ಹೆಚ್ಚಿಸುವ ಧೋರಣೆಯನ್ನು ಕೈಕೊಳ್ಳಲಾಯಿತು.

5) ಚೀನದಲ್ಲಿ ಬೇಸಾಯದ ಸಹಕಾರಿಸಂಘಗಳು

ಚೀನವು ಭಾರತಕ್ಕಿಂತಲೂ 20 ಕೋಟಿ ಹೆಚ್ಚು ಜನಸಂಖ್ಯೆಯುಳ್ಳ ಬೃಹತ್ ಕೃಷಿ ಪ್ರಧಾನದೇಶ. ಸಾಮ್ರಾಜ್ಯವಾದಿ ಶೋಷಣೆಯಿಂದ ಅದೂ ಜರ್ಜರಿತವಾಗಿ ಬಡತನ ದಲ್ಲಿ ಮುಳುಗಿತ್ತು. ಅದರ ಹಾಗೂ ಭಾರತದ ಗ್ರಾಮೀಣ ಸಮಸ್ಯೆಗಳು ಹಾಗೂ ಪರಿಸ್ಥಿತಿಗಳು ಬಹುಮಟ್ಟಿಗೆ ಸಮಾನವಾಗಿದ್ದವು. 1949ರಲ್ಲಿ ಸಾಮ್ಯವಾದಿ ಸರಕಾರದ ಸ್ಥಾಪನೆಯಾಗುವ ಮುಂಚೆ ಚೀನವು ಆರ್ಥಿಕ ವಿನಾಶದ ಹಾಗೂ ಅರಾಜಕತೆಯ ಸ್ಥಿತಿ ಯಲ್ಲಿತ್ತು. ಕಂಗಾಲತನದಿಂದ ಜನರು ತತ್ತರಿಸುತ್ತಿದ್ದರು. ಸಾಮ್ಯವಾದಿ ಸರಕಾರ ಮಾದೊಡನೆ ತೀವ್ರವಾದ ಕೆಲವೊಂದು ಗ್ರಾಮಾಂತರದ ಸುಧಾರಣೆಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತಂದು ಗ್ರಾಮೀಣ ಪರಿಸ್ಥಿತಿಗಳನ್ನು ದ್ರುತಗತಿಯಿಂದ ಆಮೂಲಾಗ್ರ ಬದಲಿಸಿ ಆರ್ಥಿಕಸಮೃದ್ಧಿಯನ್ನು ಸಾಧಿಸಿದೆ. 24 ವರ್ಷಗಳಿಂದ ರಾಷ್ಟ್ರಸಂಘದಲ್ಲಿ ಚೀನದ ಪ್ರವೇಶ ಬಲವಾಗಿ, ರಾಷ್ಟ್ರೀಯ ಸಮೃದ್ಧಿಗೆ ಪ್ರಾರಂಭದಲ್ಲಿ ಚೀನವು ಸಹಕಾರಿ ಸಾಮೂಹಿಕ ಬೇಸಾಯದಿಂದ ಸಾಧಿಸಿದ ಕೃಷಿಯ ಸಮೃದ್ಧಿಯು ಬಹುಮಟ್ಟಿಗೆ ಕಾರಣವಾಗಿದೆ. ನಾಗಪುರದಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸು ಭಾರತದ ಕೃಷಿಯ ವಿಕಾಸಕ್ಕಾಗಿ ಸಹಕಾರಿ ಬೇಸಾಯದ ಕಾರ್ಯಕ್ರಮವನ್ನು ಅಂಗೀಕರಿಸಿ ಮುಂದೆ ತೃತೀಯ ಪಂಚ ವಾರ್ಷಿಕ ಯೋಜನೆಯಲ್ಲಿ ದೇಶದ ತುಂಬ ಆ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸಿದುದು ಚೀನದಲ್ಲಿಯ ಬೇಸಾಯಸಂಘಗಳ ಪ್ರಗತಿಯಿಂದ ಪ್ರಭಾವಿತ ವಾಗಿ ಮಹತ್ವದವಾಗಿವೆ.

ಪ್ರಾರಂಭದ ಸಿದ್ಧತೆ

1949ರಲ್ಲಿ ಸಾಮ್ಯವಾದಿ ಸರಕಾರದ ಸ್ಥಾಪನೆಯಾದ ಬಳಿಕ ಮೊಟ್ಟಮೊದಲು 'ವ್ಯವಸಾಯ ಸುಧಾರಣೆಯ ಕಾಯಿದೆ' (ಅಗ್ರೇರಿಯನ್ ರಿಫಾರ್ಮ್ ಲಾ)ಯನ್ನು ಪಾಸುಮಾಡಿ. ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತಂದು ಜಮೀನುದಾರಿ ಪದ್ಧತಿಯನ್ನು ರದ್ದುಗೊಳಿಸಲಾಯಿತು. ಜಮೀನುದಾರರಿಂದ ಕಿತ್ತುಕೊಂಡ ಹೆಚ್ಚುವರಿ ಭೂಮಿ ಯನ್ನೆಲ್ಲ ಭೂರಹಿತರಿಗೆ ಹಾಗೂ ಚಿಕ್ಕಬೇಸಾಯಗಾರರಿಗೆ ಒಡೆತನದ ಹಕ್ಕುಕೊಟ್ಟು ಹಂಚಿಕೊಡಲಾಯಿತು. ಬೇಸಾಯದ ಉತ್ಪಾದನೆಯ ಶಕ್ತಿಗಳನ್ನು ಮುಕ್ತಗೊಳಿಸಿ ಉತ್ಪತ್ತಿಯನ್ನು ಹೆಚ್ಚಿಸುವುದೇ ಈ ಮಹತ್ವದ ಸುಧಾರಣೆಯ ಗುರಿಯಾಗಿತ್ತು. ಸ್ವಂತ ಪಾರಿವಾರಿಕ ಶ್ರಮದಿಂದ ಬೇಸಾಯದ ಕೆಲಸಗಳನ್ನು ಮಾಡುವವರು ಬೇಸಾಯ ಗಾರರೆಂದೂ, ಬೇರೆ ಬೇಸಾಯಗಾರರನ್ನು ದುಡಿಸಿ, ಅವರ ಶ್ರಮದ ಶೋಷಣ ದಿಂದಲೇ ತಾವು ಏನೂ ದುಡಿಯದೇ ಬೇಸಾಯ ನಡೆಸುವವರು ಜಮೀನುದಾರರೆಂದೂ ಕಾಯಿದೆಯಲ್ಲಿ ನಿರ್ಧರಿಸಲಾಯಿತು. ಭೂಮಿಯ ವಿತರಣೆಯ ಸರಾಸರಿ ಹಿಡುವಳಿಯ ದುಪ್ಪಟ್ಟಿಗಿಂತ ಹೆಚ್ಚಿನ ಭೂಮಿ ಗ್ರಾಮದಲ್ಲಿ ಯಾರ ಬಳಿಯೂ ಉಳಿಯದಂತಾಯಿತು. ಇದರಿಂದ ಗ್ರಾಮಗಳಲ್ಲಿ ಬೇಸಾಯಗಾರರಲ್ಲಿ ಬಹುಮಟ್ಟಿಗೆ ಹಿಡುವಳಿಗಳ ಸಮಾನತೆಯು ಬಂದಿತು.

ಚೀನದ ಗ್ರಾಮಗಳಲ್ಲಿ ಬೇಸಾಯಗಾರರ ಸಂಸ್ಥೆಗಳಿದ್ದವು (ಪೆಸೆಂಟ್ ಅಸೋಸಿ ಯೇಶನ್ಸ್). ಈ ಸಂಸ್ಥೆಗಳು ಸಭೆಗಳನ್ನು ಕೂಡಿಸಿ, ಸಾರ್ವಜನಿಕವಾಗಿ ಚರ್ಚಿಸಿ,

ಜನತಾಂತ್ರಿಕವಾಗಿ ಬೇಸಾಯಗಾರರ ಆರ್ಥಿಕ ವರ್ಗಗಳನ್ನು ನಿರ್ಧರಿಸಿ. ಭೂಮಿಯ ವಿತರಣದ ಮಹತ್ವದ ಕಾರ್ಯದಲ್ಲಿ ನೆರವಾದವು. ಗ್ರಾಮಾಂತರದ ಎಲ್ಲ ಸುಧಾರಣೆಗಳ ಅನುಷ್ಠಾನಕ್ಕೋಸುಗ ಈ ಬೇಸಾಯಗಾರರ ಸಂಸ್ಥೆಗಳು ಅಸ್ತ್ರಗಳಾದವು ಹಾಗೂ ಅಗತ್ಯವಿದ್ದ ಮುಂದಾಳುತನವನ್ನು ಒದಗಿಸಿದವು. ಈ ಸಂಸ್ಥೆಗಳಿಂದಲೇ ಬೇಸಾಯಗಾರ ಜನತೆಯಲ್ಲಿ ಎಲ್ಲ ಗ್ರಾಮಾಂತರ ಸುಧಾರಣೆಗಳ ಬಗ್ಗೆ ಅಗತ್ಯವಿದ್ದ ಜಾಗೃತಿಯನ್ನು ಬೆಳೆಸಲಾಯಿತು.

ಲೆನಿನ್ನರ ಸಮಾಜವಾದಿ ತತ್ವಗಳ ಪ್ರಕಾರವೇ ಚೀನದಲ್ಲೂ ಬೇಸಾಯಗಾರರ ಭೂಮಿಯ ಹಸಿವನ್ನು ತೃಪ್ತಿಪಡಿಸಲು ಹಾಗೂ ಅದರಿಂದ ಸಾಮ್ಯವಾದಿ ಪಕ್ಷದಲ್ಲಿ ಹಾಗೂ ಸರಕಾರದಲ್ಲಿ ಬೇಸಾಯಗಾರರ ವಿಶ್ವಾಸ ಬೆಳೆಸಲು ಭೂಮಿಯನ್ನು ವೈಯಕ್ತಿಕ ವಾಗಿಯೇ ಹಂಚಲಾಯಿತು. ಅದನ್ನು ಗುತ್ತಿಗೆ ಕೊಡಲು ಮಾರಲು ಸಹ ಬೇಸಾಯ ಗಾರರಿಗೆ ಹಕ್ಕನ್ನು ಕೊಡಲಾಯಿತು. ಇದರಿಂದ ಬೇಸಾಯಗಾರ ಜನತೆಯಲ್ಲಿ ಅಪೂರ್ವ ಉತ್ಸಾಹ ಬೆಳೆಯಿತು ಹಾಗೂ ಮುಂದಿನ ಎಲ್ಲ ಕಾರ್ಯಕ್ರಮಗಳಲ್ಲೂ ಸಾಮ್ಯವಾದಿ ಸರಕಾರವನ್ನು ಹಿಂಬಾಲಿಸಲು ಬೇಸಾಯಗಾರರು ಸಿದ್ಧರಾದರು. ಸಾಮ್ಯವಾದಿಗಳಿಗೆ ವೈಯಕ್ತಿಕ ಬೇಸಾಯದಲ್ಲಿ ವಿಶ್ವಾಸವಿರದಿದ್ದರೂ, ಸಾಮೂಹಿಕ ಬೇಸಾಯದಲ್ಲೇ ವಿಶ್ವಾಸವಿದ್ದರೂ ಒತ್ತಾಯದಿಂದ ಅದನ್ನು ಬೇಸಾಯಗಾರರ ಮೇಲೆ ಹೇರಲು ಹೋಗಲಿಲ್ಲ. ಅಂತಹ ಬಲಾತ್ಕಾರದಿಂದ 60 ಕೋಟಿ ಬೇಸಾಯಗಾರ ಜನತೆಯ ಬೆಂಬಲವನ್ನು ಕಳೆದುಕೊಂಡರೆ ತಮ್ಮ ಸರಕಾರವು ಸ್ಥಿರವಾಗಿ, ಭದ್ರವಾಗಿ ಉಳಿಯಲಾರದೆಂದು ಸಾಮ್ಯವಾದಿಗಳಿಗೆ ಗೊತ್ತಿತ್ತು. ಅದ್ದರಿಂದ ಕ್ರಮೇಣವಾಗಿ ತಮ್ಮ ಕೊರತೆ, ಕಂಗಾಲತನಗಳ ಅನುಭವದಿಂದಲೇ ವೈಯಕ್ತಿಕ ತುಂಡು ಬೇಸಾಯದ ನಿರರ್ಥಕತೆಯನ್ನು ಮನಗಾಣುವಂತೆಯೂ, ಸಾಮೂಹಿಕಬೇಸಾಯದ ಉಪಯುಕ್ತತೆ ಯನ್ನು ತಿಳಿದುಕೊಂಡು ಅದನ್ನು ಕೈಕೊಳ್ಳುವಂತೆಯೂ ಚೀನದ ಸಾಮ್ಯವಾದಿಗಳು ಬೇಸಾಯಗಾರ ಜನತೆಗೆ ಶಿಕ್ಷಣ ಕೊಡುವ ಹಾಗೂ ಮಾರ್ಗದರ್ಶನ ಮಾಡುವ ಮಾರ್ಗ ವನ್ನು ಅನುಸರಿಸಿದರು.

ರಶಿಯಾದಲ್ಲಿ ಭೂವಿತರಣೆಯ ನಂತರ ಆದಂತೆ ಚೀನದಲ್ಲೂ ಭೂವಿತರಣೆಯ ನಂತರ ಚಿಕ್ಕಬೇಸಾಯಗಾರರು ಶ್ರೀಮಂತ ಬೇಸಾಯಗಾರ (ಕುಲಕ)ರಿಗೆ ತಮ್ಮ ತುಂಡು ಭೂಮಿಗಳನ್ನು ಅಲ್ಪಸ್ವಲ್ಪ ಪ್ರತಿಫಲಕ್ಕಾಗಿ ಮಾರುತ್ತ ನಡೆದರು. ಮತ್ತೆ ಅವರು ಶ್ರೀಮಂತ ಬೇಸಾಯಗಾರರ ಕೂಲಿ ಆಳುಗಳಾಗಿ ದುಡಿಯುತ್ತ ಹೆಚ್ಚೆಚ್ಚು ಕಂಗಾಲತನದಲ್ಲಿ ಮುಳುಗಿದರು. ಸಹಕಾರಿಬೇಸಾಯದ ಕಾರ್ಯಕ್ರಮವನ್ನು ಜನಪ್ರಿಯಮಾಡಿ ಹಬ್ಬಿಸಿದಂತೆ ಬಡಬೇಸಾಯಗಾರರ ಭೂಮಿಯ ಮಾರಾಟವು ಕಡಮೆ ಯಾಯಿತು. ಸಹಕಾರಿಬೇಸಾಯದ ಅಂದೋಲನವು 1952ರಿಂದ ಬೆಳೆಯಹತ್ತಿತು.

ಪರಸ್ಪರ ಸಹಾಯಕ ಸಂಘಗಳು (ಮ್ಯೂಚುಯಲ್ ಏಡ್‌ಲೀಗ್ಸ್)

ಭೂವಿತರಣೆಯ ತರುವಾಯ ಬೇಸಾಯವನ್ನು ಪುನಃಸಂಘಟಿಸಲು ಮೊದಲ

ಹೆಚ್ಚಾಗಿ ತಾತ್ಕಾಲಿಕ ಹಾಗೂ ಸ್ಥಾಯೀ 'ಪರಸ್ಪರ ಸಹಾಯಕ ಸಂಘ'ಗಳನ್ನು ಸಂಘಟಿಸಲಾಯಿತು. ಕೆಲವೊಂದು ಬೇಸಾಯಗಾರರ ಪರಿವಾರಗಳು, ಭೂಮಿ ಇದ್ದರೆ ಭೂಮಿಸಹಿತವಾಗಿ, ಭೂಮಿ ಇರದಿದ್ದರೆ ಭೂಮಿ ಇಲ್ಲದೆಯೇ, ಒಂದುಗೂಡಿ ತಮ್ಮ ಶ್ರಮದ ಮುಯ್ಯಿಮಾಡಲು ಈ ಸಂಘವನ್ನು ಕಟ್ಟುತ್ತಿದ್ದರು. ಈ ಸಂಘದಲ್ಲಿ ಸದಸ್ಯರು ಬೇಸಾಯದ ಕೆಲಸಗಳಿಗಾಗಿ ತಮ್ಮ ಶ್ರಮದ ಆದಾನಪ್ರದಾನವಲ್ಲದೆ, ತಮ್ಮ ಬಳಿಯ ಹೂಡುವ ದನಗಳನ್ನು ಮತ್ತು ಬೇಸಾಯ ಸಲಕರಣೆಗಳನ್ನು ಸಹ ಆದಾನ-ಪ್ರದಾನ ಮಾಡುತ್ತಿದ್ದರು. ಇಂಥ ಆದಾನಪ್ರದಾನಗಳ ಜಮಾಖರ್ಚುಗಳ ಲೆಕ್ಕವನ್ನು ಸದಸ್ಯರ ಖಾತೆಗಳಲ್ಲಿ ಇಡಲಾಗುತ್ತಿತ್ತು. ಪ್ರತಿಯೊಂದು ಪ್ರಕಾರವ ಕೆಲಸಕ್ಕೆ 'ನಂಬರು' (ಪಾಯಿಂಟ್ಸ್)ಗಳನ್ನು ನಿರ್ಧರಿಸಲಾಗಿತ್ತು. ನಂಬರುಗಳಲ್ಲಿಯೇ ಲೆಕ್ಕಗಳನ್ನು ಇಡಲಾಗುತ್ತಿತ್ತು. ಸದಸ್ಯರು ತಂಡದಲ್ಲಿಯೇ ಯಾವನೊಬ್ಬ ಸದಸ್ಯನ ಹೊಲದಲ್ಲಿ ಯಾವುದಾದರೊಂದು ಬೇಸಾಯದ ಕೆಲಸ ಮಾಡುತ್ತಿದ್ದರು. ಇಂಥ ಹೊಲದ ಸದಸ್ಯನ ಖಾತೆಯಲ್ಲಿ ಮಾಡಿದ ಸದಸ್ಯರ ಕೆಲಸದ ನಂಬರುಗಳನ್ನು ಕಡವಾಗಿ ಖರ್ಚು ಹಿಡಿಯಲಾಗುತ್ತಿತ್ತು. ಸುಗ್ಗಿಯನಂತರ ಹುಟ್ಟುವಳಿಯ ಮಾರಾಟವಾದ ಬಳಿಕ ಪ್ರತಿಯೊಬ್ಬ ಸದಸ್ಯನಕೆಲಸಗಳ, ನಂಬರುಗಳ ಜಮಾಖರ್ಚುಗಳ, ಮುಯ್ಯಾಳು ರೂಪದಲ್ಲಿ ಬೇರೀಜುಮಾಡಿ, ಹೆಚ್ಚಿಗೆ ಆದ ಆಳುಗಳ ಅಥವಾ ನಂಬರುಗಳ ಲೆಕ್ಕವನ್ನು ಚುಕ್ತಾಹಣದ ರೂಪದಲ್ಲಿ ಅಥವಾ ಮಾಲಿನ ರೂಪದಲ್ಲಿ ತೀರಿಸಲಾಗುತ್ತಿತ್ತು. ಉದಾಹರಣೆಗೆ ವರ್ಷದಲ್ಲಿ ಬಸಪ್ಪನ ಹೊಲದಲ್ಲಿ ಮಲ್ಲಪ್ಪನು 300 ಮುಯ್ಯಾಳು ಗಳ ಅಥವಾ 3.000 ನಂಬರುಗಳ ಕೆಲಸ ಮಾಡಿದನೆಂದು ತಿಳಿಯಿರಿ. ಮಲ್ಲಪ್ಪನ ಹೊಲದಲ್ಲಿ ಬಸಪ್ಪನು 350 ಆಳುಗಳ ಅಥವಾ 3,500 ನಂಬರುಗಳ ಕೆಲಸವನ್ನು ಮಾಡಿದನೆನ್ನಿರಿ. ಅಂದರೆ ಬಸಪ್ಪನು ಮಲ್ಲಪ್ಪನಿಗೆ 50 ಆಳುಗಳ ಅಥವಾ 500 ನಂಬರುಗಳ ಕೆಲಸವನ್ನು ಕೊಟ್ಟಂತಾಯಿತು. ವರ್ಷದ ಕೊನೆಯಲ್ಲಿ ಮಲ್ಲಪ್ಪನು ಬಸಪ್ಪನಿಗೆ 50 ಮುಯ್ಯಾಳುಗಳ ಅಥವಾ 500 ನಂಬರು ಕೆಲಸದ ಹಣದ ಬೆಲೆಯನ್ನು ತೀರಿಸುತ್ತಾನೆ.

ಈ ಮುಯ್ಯಾಳು ಸಂಘಗಳಿಂದ ಬಡಬೇಸಾಯಗಾರರು ತಮ್ಮ ಬೇಸಾಯವನ್ನು ಹೆಚ್ಚು ಸುಧಾರಿಸಿ, ಉತ್ಪತ್ತಿಯನ್ನು ಹೆಚ್ಚಿಸಿಕೊಂಡರು. ವೈಯಕ್ತಿಕ ಬೇಸಾಯ ನಡೆಸುತ್ತಲೇ ಇಷ್ಟರಮಟ್ಟಿಗೆ ಅವರು ಬೇಸಾಯದಲ್ಲಿ ಸಹಕಾರವನ್ನು ಬೆಳೆಸಿಕೊಂಡರು. ಎತ್ತು ಹಾಗೂ ನೇಗಿಲುಗಳ ಹೆಚ್ಚು ಸಮಂಜಸ ಬಳಕೆ ಆಗಿ ಉಳುಮೆ, ಎಡೆ, ಬಿತ್ತನೆ ಮೊದಲಾದ ಎಲ್ಲ ಬೇಸಾಯದ ಕೆಲಸಗಳು ವೈಯಕ್ತಿಕ ಸಾಗುವಳಿಗಿಂತ ಹೆಚ್ಚು ಅಚ್ಚುಕಟ್ಟಾಗಿ ಆದವು. ಸುಧಾರಿಸಿದ ನೇಗಿಲು ಸಾಮಾನುಗಳನ್ನು ಕೊಂಡು ಬಳಸುವುದು ಈ ಸಂಘಗಳಿಂದ ಸಾಧ್ಯವಾಯಿತು. ಎಲ್ಲ ಬೇಸಾಯದ ಕೆಲಸಗಳು ಸಂಘಟನೆಯಿಂದ ಸಕಾಲದಲ್ಲಿ ಆಗುತ್ತಿದ್ದವು. ಈ ಸಂಘಗಳಿಂದ ಕೆಲವು ಸಹಾಯಕ ಉದ್ಯೋಗಗಳನ್ನೂ, ರಸ್ತೆನಿರ್ಮಾಣ, ಸಾರ್ವಜನಿಕ ಕಟ್ಟಡಗಳನಿರ್ಮಾಣ ಮುಂತಾದ ಕೆಲಸಗಳನ್ನೂ ಕೈಕೊಳ್ಳುವುದು ಸಾಧ್ಯವಾಯಿತು.

ಬೇಸಾಯದ ಉತ್ಪಾದಕರ ಸಂಘಗಳ ಬೆಳವಣಿಗೆ (ಅಗ್ರಿಕಲ್ಚರಲ್ ಪ್ರೊಡ್ಯೂಸರ್ಸ್ ಕೋಆಪರೇಟಿವ್ಸ್)

ಕ್ರಮೇಣವಾಗಿ ಬೇಸಾಯಗಾರರಲ್ಲಿ ಸಹಕಾರಿ ಜಾಗೃತಿಯನ್ನು ಬೆಳಸಿ. ಸಹಕಾರಿ ಸಾಮೂಹಿಕ ಬೇಸಾಯದ ಪ್ರಯೋಜನಗಳನ್ನು ಬೇಸಾಯಗಾರರಿಗೆ ಮನದಟ್ಟು ಮಾಡಿ, ಬೇಸಾಯದ ಉತ್ಪಾದಕರ ಸಹಕಾರಸಂಘಗಳನ್ನು ಸಂಘಟಿಸಲಾಯಿತು. ಈ ಸಂಘಗಳಲ್ಲಿ ಪ್ರಾರಂಭಿಕ ಉತ್ಪಾದಕ ಸಹಕಾರಸಂಘಗಳು. ಹಾಗೂ ಮುಂದರಿದ ಉತ್ಪಾದಕರ ಸಹಕಾರಸಂಘಗಳು ಎಂದು ಎರಡು ಪ್ರಕಾರಗಳಿದ್ದವು. ಪ್ರಾರಂಭದಲ್ಲಿ ಈ ಆಂದೋಲನದಲ್ಲಿ ಅನೇಕ ಅಡೆತಡೆಗಳು ಸ್ವಾಭಾವಿಕವಾಗಿ ಬಂದವು. ಬೇಸಾಯಗಾರ ಜನತೆಯಲ್ಲಿ ಸಾಕಷ್ಟು ಜಾಗೃತಿ. ಅನುಭವ ಇರಲಿಲ್ಲ. ಸಾಮ್ಯವಾದಿ ಕಾರ್ಯಕರ್ತರಲ್ಲಿ ಆದರ್ಶವಾದಿ ಉತ್ಸಾಹವಿದ್ದರೂ. ದೈನಂದಿನ ಆಡಳಿತ. ಸಂಚಾಲನೆಯಲ್ಲಿ ಬೇಸಾಯಸಂಘಗಳಿಗೆ ಮಾರ್ಗದರ್ಶನ ಮಾಡಲು ಸಾಕಷ್ಟು ಅನುಭವ. ದಕ್ಷತೆ ಇರಲಿಲ್ಲ. ಈ ಸ್ಥಿತಿಯಲ್ಲಿ ಅನೇಕ ಕಡೆಗೆ ಬೇಸಾಯದ ಉತ್ಪಾದಕರ ಸಹಕಾರ ಸಂಘಗಳು ತೃಪ್ತಿಕರವಾಗಿ ನಡೆಯಲಿಲ್ಲ. ಕೆಲವು ಸಂಘಗಳನ್ನು ಮುಚ್ಚಬೇಕಾಯಿತು: ಕೆಲವನ್ನು ಪುನಃಸಂಘಟಿಸಬೇಕಾಯಿತು. ಸಾಮ್ಯವಾದಿ ಮುಂದಾಳುಗಳಲ್ಲಿ ಹಾಗೂ ಕಾರ್ಯಕರ್ತರಲ್ಲಿ ಸಹ ಈ ಸಂಘಗಳ ಯಶಸ್ಸಿನ ಬಗ್ಗೆ ಹೊಯ್ದಾಟವಿತ್ತು. ಚೀನದ ಅಧ್ಯಕ್ಷರಾದ ಮಾವತ್ಸೇತುಂಗರೇ ಸ್ವತಃ ಎರಡು ತಿಂಗಳು 1954ರಲ್ಲಿ ದೇಶದಲ್ಲೆಲ್ಲ ಸಂಚರಿಸಿ ಬೇಸಾಯಸಂಘಗಳನ್ನು ಅಭ್ಯಸಿಸಿ ಅವುಗಳ ತೀವ್ರ ಬೆಳವಣಿಗೆಗಾಗಿ ಮಹತ್ವದ ಸಲಹೆಗಳನ್ನು ಸರಕಾರಕ್ಕೂ, ನಾಯಕರಿಗೂ. ಕಾರ್ಯಕರ್ತರಿಗೂ ಕೊಟ್ಟರು. ಮುಂದೆ ಈ ಬೇಸಾಯಸಂಘಗಳ ಬೆಳವಣಿಗೆಯು ದ್ರುತಗತಿಯಿಂದ ಆಯಿತು.

ಸಾಮೂಹಿಕ ಬೇಸಾಯಸಂಘಗಳಲ್ಲಿ ಮೊದಲಿಗಿಂತ ಹೆಚ್ಚಿನ ಉತ್ಪಾದನೆ ಯೋಜನೆಗಳು, ಹೆಚ್ಚಿನ ಸುಧಾರಣೆಗಳು ಆದವು: ಸಲಕರಣೆಗಳನ್ನು ಹೆಚ್ಚು ಸಮರ್ಪಕವಾಗಿ ಬಳಸಲಾಯಿತು. ಇದರಿಂದ ಸ್ವಾಭಾವಿಕವಾಗಿ ಇವುಗಳಲ್ಲಿ ಬೇಸಾಯದ ಉತ್ಪತ್ತಿಯೂ ಹೆಚ್ಚಿತು.

ಪ್ರಾಥಮಿಕ ಉತ್ಪಾದಕರ ಸಂಘಗಳು ಭಾರತದ ಸಂಯುಕ್ತಬೇಸಾಯಸಂಘಗಳಂತಿದ್ದವು. ಈ ಸಂಘದಲ್ಲಿ ಭೂಮಿಯ ವೈಯಕ್ತಿಕ ಒಡೆತನವನ್ನು ಇಡಲಾಗಿತ್ತು. ಆದಕ್ಕಾಗಿ ಉತ್ಪತ್ತಿಯ ಕೆಲವು ಭಾಗವನ್ನು ಭೂಮಿಯ ಪ್ರತಿಫಲವನ್ನಾಗಿ ಹಂಚಲಾಗುತ್ತಿತ್ತು. ಅದರಿಂದ ಬೇಸಾಯದ ಮಡಿತಕ್ಕೆ ಪೂರ್ಣ ಉತ್ತೇಜನವಿರಲಿಲ್ಲ. ವೈಯಕ್ತಿಕ ಒಡೆತನದ ಭೇದಭಾವಗಳಲ್ಲಿ ಭೂಸುಧಾರಣೆಗಳಿಗೂ ಸಾಕಷ್ಟು ಅವಕಾಶ ದೊರಕಲಿಲ್ಲ. ಆದ್ದರಿಂದ ಬೇಸಾಯಗಾರರಲ್ಲಿ ಹೆಚ್ಚೆಚ್ಚು ಸಹಕಾರಿ ಹಾಗೂ ಸಮಾಜವಾದಿ ಜಾಗೃತಿಯನ್ನು ಬೆಳೆಸಿ. ಮನವೊಲಿಸಿ. ಪ್ರಾಥಮಿಕ ಉತ್ಪಾದಕರ ಸಹಕಾರ ಸಂಘಗಳನ್ನು ಮುಂದುವರಿದ ಉತ್ಪಾದಕರ ಸಂಘಗಳಲ್ಲಿ ಪರಿವರ್ತಿಸಲಾಯಿತು. ಎಲ್ಲ ಆರ್ಥಿಕಕ್ಷೇತ್ರಗಳಲ್ಲೂ ಈ ಕಾಲಕ್ಕೆ ನಡೆದ ಸಮಾಜವಾದಿ ಆರ್ಥಿಕ ವಿಕಾಸವು ಈ

ಪರಿವರ್ತನೆಗೆ ಅನುಕೂಲವಾದ ವಾತಾವರಣವನ್ನುಂಟು ಮಾಡಿತು. ಹೆಚ್ಚು ತೀವ್ರ ಗತಿಯಿಂದ ಭೂಸುಧಾರಣೆಗಳನ್ನು ಮಾಡಲು ಬೇಸಾಯವನ್ನು ಸುಧಾರಿಸಿ ಉತ್ಪತ್ತಿಯನ್ನು ಹೆಚ್ಚಿಸಲು. ಬೇಸಾಯಗಾರ ಜನತೆಯನ್ನು ಸುಧಾರಿಸಲು ಉತ್ಪಾದನೆಯನ್ನು ಹೆಚ್ಚಿಸಿ ದೇಶವನ್ನು ಸ್ವಾವಲಂಬಿ ಮಾಡಲು ಮತ್ತು ದೇಶದ ರಕ್ಷಣೆಯನ್ನು ಭದ್ರಪಡಿಸಲು ಸಹಕಾರಿ ಸಾಮೂಹಿಕ ಬೇಸಾಯಸಂಘಗಳ (ಮುಂದರಿದ ಉತ್ಪಾದಕರ ಸಂಘಗಳ) ಪ್ರಗತಿಯನ್ನು ತೀವ್ರಗತಿಯಿಂದ ಸಾಧಿಸಲಾಯಿತು. ಕೃಷಿಪ್ರಧಾನ ದೇಶವಾದ ಚೀನಾದಲ್ಲಿ ಸಮಾಜವಾದದ ಯಶಸ್ವಿ ಸ್ಥಾಪನೆಗೆ. ಸಮಾಜವಾದಿ ಬೇಸಾಯದ ವಿಕಾಸ ಅತ್ಯಗತ್ಯವಾಗಿತ್ತು. ಈ ಧ್ಯೇಯವನ್ನು ಇಟ್ಟುಕೊಂಡೇ ಅಲ್ಲಿಯ ರಾಷ್ಟ್ರ ನಾಯಕರು ಹಾಗೂ ಕಾರ್ಯಕರ್ತರು ತೀವ್ರ ತತ್ವನಿಷ್ಠೆಯಿಂದ ಬೆಳೆಸಿದರು. ಅದಕ್ಕೋಸುಗ ಗ್ರಾಮಾಂತರದಲ್ಲಿ ಸಮಾಜವಾದಿ ಆದರ್ಶ ಹಾಗೂ ವಾತಾವರಣದ ಬಿರುಗಾಳಿಯನ್ನೇ ಹಬ್ಬಿಸಲಾಯಿತು. ಅದರ ಓಜಸ್ವೀ ಪ್ರಭಾವದಿಂದ ಬೇಸಾಯಗಾರ ಜನತೆಯೆಲ್ಲ ಕೇವಲ ತಮ್ಮ ಆರ್ಥಿಕ ಉನ್ನತಿಯ ಸ್ಫೂರ್ತಿಯಿಂದಷ್ಟೇ ಅಲ್ಲ. ದೇಶದಲ್ಲಿ ತೀವ್ರವಾಗಿ ಸಮಾಜವಾದದ ಯಶಸ್ವಿ ಸ್ಥಾಪನೆ ಮಾಡುವ ಬಲವಾದ ಸ್ಫೂರ್ತಿಯಿಂದ ಸಾರ್ವತ್ರಿಕವಾಗಿ ಮುಂದುವರಿದ ಸಾಮೂಹಿಕಬೇಸಾಯಸಂಘಗಳನ್ನು ಸ್ಥಾಪಿಸಿದರು. ಅದೊಂದು ಪ್ರಭಾವಶಾಲಿ ಜನ . ಅಂದೋಲನವಾಗಿ ಬೆಳೆಯಿತು.

ಉತ್ಪಾದಕರ ಸಹಕಾರಸಂಘಗಳ ಸಂಘಟನೆ

ಸರಕಾರದ ಬೇರೆ ಬೇರೆ ಮಟ್ಟಗಳಲ್ಲಿ ಸಹಕಾರಿಬೇಸಾಯಸಂಘಗಳಿಗೆ ಸಹಾಯ ಮಾಡಲು ಹಾಗೂ ಮಾರ್ಗದರ್ಶನ ಮಾಡಲು ವಿಶೇಷ ಸಮಿತಿಗಳಿದ್ದವು. ಸರಕಾರದ ತಜ್ಞರು, ಬೇಸಾಯ ಸುಧಾರಣೆಗಳ ಪ್ರಚಾರ ಕೇಂದ್ರಗಳು. ಇಂಥ ಎಲ್ಲ ವಿಶಿಷ್ಟ ಇಲಾಖೆಗಳು ಆದ್ಯತೆಕೊಟ್ಟು ಬೇಸಾಯಸಂಘಗಳಿಗೆ ಎಲ್ಲ ಸಹಾಯ ಹಾಗೂ ಮಾರ್ಗದರ್ಶನ ಕೊಡುತ್ತಿದ್ದವು. ಸಹಕಾರಿಬೇಸಾಯಸಂಘಗಳಿಗೆ ಪ್ರೋತ್ಸಾಹಿಸಿ ಅವನ್ನು ಯಶಸ್ವಿಗೊಳಿಸುವುದು ರಾಷ್ಟ್ರರಕ್ಷಣೆಯಷ್ಟು ಮಹತ್ವದ ಕಾರ್ಯವೆಂಬ ಉತ್ಸಾಹದಿಂದ ಬೇಸಾಯಸಂಘಗಳಿಗೆ ಸಹಾಯ ಮಾಡಲಾಗುತ್ತಿತ್ತು. ವ್ಯವಸಾಯ ವಿದ್ಯಾಲಯಗಳು. ವ್ಯವಸಾಯದ ಸಂಶೋಧನೆಯ ಕೇಂದ್ರಗಳು ಎಲ್ಲವೂ ಬೇಸಾಯ ಸಂಘಗಳೊಡನೆ ಸಂಪರ್ಕ ಇಟ್ಟುಕೊಂಡು, ಅವುಗಳ ಸಮಸ್ಯೆಗಳನ್ನು ಅಭ್ಯಸಿಸಿ, ಪರಿಹರಿಸುವಲ್ಲಿ ನೆರವಾದವು. ಸಹಕಾರಿ ಬೇಸಾಯಸಂಘಗಳನ್ನು ಪ್ರೋತ್ಸಾಹಿಸುವ ಒಬ್ಬ ಅಧಿಕಾರಿಯ ಅಥವಾ ಇಲಾಖೆಯ ಕಾರ್ಯವಷ್ಟೇ ಆಗಿರಲಿಲ್ಲ. ಎಲ್ಲ ಇಲಾಖೆಗಳೂ. ಸಂಸ್ಥೆಗಳೂ ಸಹಕಾರಿ ಬೇಸಾಯವನ್ನು ಯಶಸ್ವಿಗೊಳಿಸಲು ಟೊಂಕ ಕಟ್ಟಿದ್ದವು. ಅವೆಲ್ಲವುಗಳಲ್ಲಿ, ಸಂಬಂಧಿಸಿದ ಅಧಿಕಾರಿಗಳಲ್ಲಿ ಹಾಗೂ ನಾಯಕರಲ್ಲಿ ಸಹಕಾರಿ ಬೇಸಾಯದಲ್ಲಿ ಮತ್ತು ಸಮಾಜವಾದದಲ್ಲಿ ಅನನ್ಯ ತಾತ್ವಿಕ ವಿಶ್ವಾಸವಿತ್ತು.

ಚೀನಾದಲ್ಲಿ ಸಹಕಾರಸಂಘಗಳನ್ನು ನೊಂದಾಯಿಸಲು ಪ್ರತ್ಯೇಕವಾಗಿ ಒಬ್ಬ ರಿಜಿಸ್ಟ್ರಾರರು ಇರಲಿಲ್ಲ; ಸಹಕಾರಿಕಾಯಿದೆಯೂ ಇರಲಿಲ್ಲ. ಕೇಂದ್ರ ಸರಕಾರದ

ನೆರವಿನಿಂದ, ಸಾಮ್ಯವಾದಿ ಪಕ್ಷದ ನೆರವಿನಿಂದ ಉತ್ಪಾದಕರಸಂಘಗಳು, ವಿಭಿನ್ನ ಪರಿಸ್ಥಿತಿಗಳಿಗೆ ಹೊಂದುವಂತೆ, ತಮ್ಮ ನಿಯಮ ಕಟ್ಟಳೆಗಳನ್ನು ರಚಿಸಿಕೊಂಡವು. ಎಲ್ಲ ಉತ್ಪಾದಕರ ಸಂಘಗಳ ಅನುಭವಗಳನ್ನು ಕ್ರೋಢೀಕರಿಸಿ 1956ರಲ್ಲಿ 'ಬೇಸಾಯದ ಉತ್ಪಾದಕರ ಸಹಕಾರಸಂಘಗಳ ಮಾದರಿ ನಿಯಮ'ಗಳನ್ನು ಚೀನದ ಸಂಪತ್ತು ಅಂಗೀಕರಿಸಿತು.

ಉತ್ಪಾದಕರ ಸಂಘಗಳಲ್ಲಿ ಸೇರಲು ಬೇಸಾಯಗಾರರನ್ನು ಒತ್ತಾಯಿಸಕೂಡದು: ಮಾದರಿ ಬೇಸಾಯಸಂಘಗಳ ಯಶಸ್ಸಿನ ಪ್ರಭಾವದಿಂದ ಅವರನ್ನು ಬೇಸಾಯಸಂಘಗಳಲ್ಲಿ ಸೇರಲು ಆಕರ್ಷಿಸಬೇಕೆಂದು ಮಾದರಿ ನಿಯಮಗಳಲ್ಲಿ ವಿಧಿಸಲಾಯಿತು. 16 ವರ್ಷಕ್ಕೆ ಮೇಲ್ಪಟ್ಟ ಎಲ್ಲ ಬೇಸಾಯಗಾರರ ಸ್ತ್ರೀ-ಪುರುಷರೂ ಉತ್ಪಾದಕರ ಸಂಘಗಳ ಸದಸ್ಯರಾಗಬಲ್ಲರು. ಆರಂಭದಲ್ಲಿ ಹಿಂದಿನ ಜಮೀನುದಾರರಿಗೆ ಅಥವಾ ಕ್ರಾಂತಿ ವಿರೋಧಿಗಳಿಗೆ ಬೇಸಾಯಸಂಘದ ಸದಸ್ಯತ್ವ ದೊರಕುತ್ತಿರಲಿಲ್ಲ. ಆದರೆ ಅವರಿಗೆ ಅಲ್ಲಿ ದುಡಿಯಲು ಅವಕಾಶವಿತ್ತು. ನಿರಂತರ ದೈಹಿಕ ಕಾಯಕದಿಂದ ಅವರು ಸುಧಾರಣೆ ಹೊಂದಿದ ಬಳಿಕ ಅವರನ್ನು ಬೇಸಾಯಸಂಘಗಳಲ್ಲಿ ಸೇರಿಸಿಕೊಳ್ಳಲು ಅವಕಾಶವಿತ್ತು. ಬೇರೆ ಸಮಾಜವಾದಿ ದೇಶಗಳಲ್ಲಿಯಂತೆ ಚೀನಾದಲ್ಲೂ ಪಾರಿವಾರಿಕ ಕೈತೋಟಕ್ಕಾಗಿ (ಫ್ಯಾಮಿಲಿ ಫಾರ್ಮ್) ಪ್ರತಿಯೊಬ್ಬ ಸಾಮೂಹಿಕಬೇಸಾಯಗಾರನಿಗೆ ಸ್ವಲ್ಪ ಭೂಮಿಯನ್ನು ಕೊಡಲಾಗಿತ್ತು. ಇಂಥ ಭೂಮಿಯು 1ರಿಂದ 1¼ ಗುಂಟೆಯವರೆಗೆ ಇತ್ತು.

ಭೂಮಿಯ ಪ್ರತಿಫಲ

ಪ್ರಾಥಮಿಕ ಉತ್ಪಾದಕರ ಸಂಘಗಳಲ್ಲಿ ಪ್ರತಿಯೊಬ್ಬ ಸದಸ್ಯನಿಗೆ ಅವನು ಒಂದುಗೂಡಿಸಿದ ಭೂಮಿಯ ಸಲುವಾಗಿ ಭೂಮಿಯ ಪ್ರತಿಫಲವನ್ನು ಕೊಡಲಾಗುತ್ತಿತ್ತು. ಇಂಥ ಪ್ರತಿಫಲವು ಬೇಸಾಯಸಂಘದ ಒಟ್ಟು ಆದಾಯದಲ್ಲಿ ದುಡಿತದ ಪ್ರತಿಫಲದ ಭಾಗಕ್ಕಿಂತ ಕಡಮೆ ಭಾಗವಿರುತ್ತಿತ್ತು. ಪ್ರತಿಯೊಬ್ಬ ಸದಸ್ಯನಿಗೆ ಅವನು ಕೂಡಿಸಿದ ಭೂಮಿಯ ಪ್ರಕಾರ, ಫಲವತ್ತತೆ, ವಿಸ್ತಾರಗಳಿಗನುಸರಿಸಿ ಅದನ್ನು ಹಂಚಲಾಗುತ್ತಿತ್ತು. ಅದರಿಂದ ಬೇಸಾಯಸಂಘದಲ್ಲಿ ದುಡಿತಕ್ಕೆ ಉತ್ತೇಜನವು ದೊರಕಿತು. ಆರಂಭದಲ್ಲಿ ಭೂಮಿಯ ಪ್ರತಿಫಲವನ್ನು ತೀರ ಕಡಮೆ ಇಡದೆ ಸಾಕಷ್ಟು ಆಕರ್ಷಕ ಪ್ರಮಾಣದಲ್ಲಿ ಇಡಲಾಗಿತ್ತು. ಅದರಿಂದ ಬೇಸಾಯಸಂಘದಲ್ಲಿ ಭೂಮಿಯನ್ನು ಸೇರಿಸಲು ಆಕರ್ಷಣವೂ ದೊರಕಿತು; ಮತ್ತು ಭೂಮಿರಹಿತರಿಗೆ ಅಥವಾ ಕಡಮೆ ಭೂಮಿಯುಳ್ಳವರಿಗೆ ಹೆಚ್ಚಿಗೆ ದುಡಿಯುವ ಮತ್ತು ಆದಾಯಗಳಿಸುವ ಅವಕಾಶವೂ ದೊರಕಿತು.

ಭೂಮಿಯನ್ನು ಒಂದುಗೂಡಿಸಿದಾಗಲೇ ಪ್ರಾರಂಭದಲ್ಲಿ ಭೂಮಿಯ ಪ್ರತಿಫಲವನ್ನು ನಿರ್ಧರಿಸಲಾಗುತ್ತಿತ್ತು ಮತ್ತು ಅದನ್ನು ಸ್ಥಿರಗೊಳಿಸಲಾಗುತ್ತಿತ್ತು. ಹೆಚ್ಚಿದ ಉತ್ಪತ್ತಿ ಆದಾಯಗಳು ಸಾಮೂಹಿಕ ದುಡಿತದ ಫಲವಾದ್ದರಿಂದ ಅವನ್ನು ದುಡಿತದ ಮೇಲೆಯೇ ಹಂಚಲಾಗುತ್ತಿತ್ತು. ಭೂಮಿಯ ಪ್ರತಿಫಲವು ಸಾಮಾನ್ಯವಾಗಿ ಒಟ್ಟು

ಉತ್ಪತ್ತಿಯ ಶೇಕಡಾ 30ರಿಂದ 45ರವರೆಗೆ ಆಗುತ್ತಿತ್ತು. ಆದರೆ ಇದರಲ್ಲಿ ಒಡೆಯನೇ ಸರಕಾರಕ್ಕೆ 'ಬೇಸಾಯದ ತೆರಿಗೆ'ಯನ್ನು ಕೊಡಬೇಕಾಗುತ್ತಿತ್ತು. ಈ ತೆರಿಗೆಯು ಸರಾಸರಿಯಾಗಿ ಒಟ್ಟು ಉತ್ಪತ್ತಿಯ ಶೇಕಡಾ 15ರಿಂದ 23ರವರೆಗೆ ಬೀಳುತ್ತಿತ್ತು ಅಂದರೆ ನಿವ್ವಳ ಭೂಮಿಯ ಪ್ರತಿಫಲವು ಒಟ್ಟು ಉತ್ಪತ್ತಿಯ ಶೇಕಡಾ 15ರಿಂದ 20ರವರೆಗೆ ಆಗುತ್ತಿತ್ತು. ಉತ್ಪತ್ತಿಯು ಹೆಚ್ಚುತ್ತ ಹೋದಂತೆ ಈ ಪ್ರಮಾಣವು ಕಡಮೆ ಆಗುತ್ತಹೋಗುತ್ತಿತ್ತು.

ಬೇರೆ ಉತ್ಪಾದನೆಯ ಸಾಧನಗಳ ಸೇರ್ಪಡೆ

ಭೂಮಿ ಅಲ್ಲದೆ ಹೂಡುವ ದನಗಳನ್ನೂ, ರಂಟೆ, ಕುಂಟೆ, ಗಾಡಿ ಮೊದಲಾದ ಬೇಸಾಯದ ಸಲಕರಣೆಗಳನ್ನೂ, ನೀರಾವರಿ ಪಂಪುಗಳನ್ನೂ ಸಾಮೂಹಿಕ ಬೇಸಾಯ ಸಂಘದಲ್ಲಿ ಸಾಮೂಹಿಕಬೇಸಾಯದ ಹೆಚ್ಚಿನ ಪ್ರಯೋಜನ ಪಡೆಯಲು ಸದಸ್ಯರು ಒಂದುಗೂಡಿಸಿದರು. ಸ್ಥಳಿಕ ಬೆಲೆಗೆ ಇಂಥ ಸಾಧನಗಳನ್ನು ಕೊಂಡುಕೊಳ್ಳಲಾಗುತ್ತಿತ್ತು ಮತ್ತು ಬೆಲೆಯ ರಕಮನ್ನು ಅವುಗಳ ಒಡೆಯರಿಗೆ 3–5 ವರ್ಷಗಳ ಕಂತುಗಳಲ್ಲಿ ಮುಟ್ಟಿಸಲಾಗುತ್ತಿತ್ತು. ಚಹಾ, ರೇಶ್ಮೆಯ ತೋಟಗಳನ್ನು ಸಹ ಇದೇ ರೀತಿಯಾಗಿ ಪರಿಹಾರವನ್ನು ಕೊಟ್ಟು ಕೂಡಿಸಿಕೊಳ್ಳಲಾಯಿತು.

ದುಡಿತದ ಅಳತೆಗಳು (ವರ್ಕ್‌ನಾರ್ಮ್ಸ್)

ಸಾಮೂಹಿಕಬೇಸಾಯದಲ್ಲಿ ಎಲ್ಲರ ದುಡಿತವೂ ಸರಿಸಮಾನವೆಂದ ಬಳಿಕ ಸೋಮಾರಿತನ, ಮೈಗಳ್ಳತನ ಬೆಳೆಯುವುದೊಂದು ಸಮಸ್ಯೆ ಇರುತ್ತದೆ. ಈ ಸಮಸ್ಯೆಯನ್ನು ಪರಿಹರಿಸಿ ದುಡಿತಕ್ಕೆ ಉತ್ತೇಜನ ಒದಗಿಸಲು ಚೀನದ ಉತ್ಪಾದಕರ ಸಂಘಗಳಲ್ಲಿ 'ದುಡಿತದ ಅಳತೆ'ಗಳನ್ನು ನಿರ್ಧರಿಸಲಾಗುತ್ತಿತ್ತು. ಯಾವುದೊಂದು ಬೇಸಾಯ ಕೆಲಸದಲ್ಲಿ ಒಂದು 'ದುಡಿತದ ಅಳತೆ' ಎಂದರೆ ಓರ್ವ ಸರಾಸರಿ ಶಕ್ತಿಯ ದುಡಿಮೆಗಾರನು ಒಂದು ದಿವಸದಲ್ಲಿ ಮಾಡಬಲ್ಲ ಕೆಲಸವೆಂದರ್ಥ. ಉತ್ಪಾದಕರ ಸಂಘಗಳಲ್ಲಿ ದುಡಿಯುವ ಸದಸ್ಯರು ಒಬ್ಬ ಸರಾಸರಿ ಶಕ್ತಿಯ ದುಡಿಮೆಗಾರ ಸದಸ್ಯನಿಗೆ, ಸರಾಸರಿ ಶಕ್ತಿಯ ಹೂಡುವ ದನಗಳನ್ನು ಮತ್ತು ಸಲಕರಣೆಗಳನ್ನು ಕೊಟ್ಟು ಇಂಥ ಕೆಲಸವನ್ನು ಮಾಡಿಸುತ್ತಿದ್ದರು. ಆ ಕೆಲಸದ ಪ್ರಮಾಣವನ್ನು ಒಂದು 'ದುಡಿತದ ದಿವಸ' (ವರ್ಕ್‌ಡೇ) ಅಥವಾ 'ದುಡಿತದ ಅಳತೆ' ಅಥವಾ 'ಅಳು' ಎಂದು ಅವರು ನಿರ್ಧರಿಸುತ್ತಿದ್ದರು. ಎಲ್ಲ ಕೆಲಸಗಳಿಗೂ ಹೀಗೆ ಪ್ರಯೋಗ ಪರೀಕ್ಷೆಗಳಿಂದ ಅಳತೆಗಳನ್ನು ನಿರ್ಧರಿಸಲಾಗುತ್ತಿತ್ತು. ಈ ಕೆಲಸದ ಅಳತೆಗಳು ಚೀನೀ ಸಾಮೂಹಿಕಬೇಸಾಯಸಂಘಗಳ ವೈಶಿಷ್ಟ್ಯವೆಂದು ಹೇಳಬಹುದು. ವಿಭಿನ್ನ ಬೆಳೆಗಳಿಗೆ ವಿಭಿನ್ನ ಅಳತೆಗಳಾಗುತ್ತಿದ್ದವು. ಒಂದೊಂದು ಬೇಸಾಯಸಂಘದಲ್ಲಿ ಇಂಥ ಕೆಲಸದ ಅಳತೆಗಳು ನೂರಾರು ಇರುತ್ತಿದ್ದವು. ಗೊಬ್ಬರ ಹಾಕುವುದು, ಮಾಲುಹೇರುವುದು ಮುಂತಾದ ಕೆಲಸಗಳಿಗೆ ಸಹ ಅಳತೆಗಳನ್ನು ನಿರ್ಧರಿಸಲಾಗಿತ್ತು. ಈ ಕೆಲಸದ ಅಳತೆಗಳಲ್ಲಿ ಹೆಚ್ಚಿನ ಲೆಕ್ಕದ ಅನುಕೂಲತೆಗಾಗಿ ತರಗತಿಗಳನ್ನು ನಿರ್ಧರಿಸಲಾಗಿತ್ತು. ಲೇನ್‌ಮಿನ್ ಬೇಸಾಯಸಂಘದ ಕೆಲಸದ ಅಳತೆಗಳನ್ನೂ, ತರಗತಿಗಳನ್ನೂ ಉದಾಹರಣೆಗಾಗಿ ಈ ಮುಂದೆ ಕೊಡಲಾಗಿದೆ:

ಲೀನವಿನ್ ಬೇಸಾಯಸಂಘದ ಕೆಲಸದ ಅಳತೆಗಳು

ತರಗತಿ	ದರ	ವರ್ಗೀಕರಣದ ಆಧಾರ
1.	1.2 ಶ್ರಮದಿವಸ (ಲೇಬರ್‌ಡೇ) = 12 ಕೂಲಿಯ ಏಕಮಾನ (ವೇಜ್ ಯೂನಿಟ್ಸ್)	ಸುಗ್ಗಿಯಲ್ಲಿ ದಕ್ಷ ಹಾಗೂ ಭಾರಿ ಕೆಲಸ ಅಥವಾ ಉತ್ಪಾದನೆಗೆ ಮಹತ್ವದ ಕೆಲಸ.
2.	1.1 ಶ್ರಮದಿವಸ = 11 ಕೂಲಿಯ ಏಕಮಾನ	ಇಂಥ ಸುಗ್ಗಿಯಲ್ಲಿ ಅರ್ಧದಕ್ಷ ಅಥವಾ ಭಾರೀ ಕೆಲಸ.
3.	1.0 ಶ್ರಮದಿವಸ = 10 ಕೂಲಿಯ ಏಕಮಾನ	ಸುಗ್ಗಿಯಲ್ಲದ ಸಮಯದಲ್ಲಿ ಸಾಧಾರಣ ಕೆಲಸ ಅಥವಾ ಸುಗ್ಗಿಯಲ್ಲಿ ಹಗುರು ಕೆಲಸ.
4.	0.9 ಶ್ರಮದಿವಸ = 9 ಕೂಲಿಯ ಏಕಮಾನ	ಸಾಧಾರಣ ಸಮಯದಲ್ಲಿ ಹೆಚ್ಚು ಹಗುರು ಕೆಲಸ
5.	0.8 ಶ್ರಮದಿವಸ = 8 ಕೂಲಿಯ ಏಕಮಾನ	ಸಾಧಾರಣ ಸಮಯದಲ್ಲಿ ಅತಿ ಹಗುರು ಕೆಲಸ

ಒಂದು ಸರಾಸರಿ 'ಶ್ರಮದಿವಸ' ಎಂದರೆ 10 ಕೂಲಿಯ ಏಕಮಾನಗಳು. ಸಾಮಾನ್ಯವಾಗಿ ಒಬ್ಬ ಸರಾಸರಿ ದುಡಿಮೆಗಾರನು 10 ಗಂಟೆ ದುಡಿಯುತ್ತಾನೆಂಬ ಗ್ರಹಿಕೆಯಿಂದ 1 ಗಂಟೆಗೆ ಒಂದು ಕೂಲಿಯ ಏಕಮಾನ ಗೊತ್ತುಪಡಿಸಲಾಗಿತ್ತು. ಬಿತ್ತನೆ 1ನೇ ತರಗತಿಯ ಕೆಲಸವಾಗಿತ್ತು ಮತ್ತು ಉಳುಮೆ 3ನೇ ತರಗತಿಯ ಕೆಲಸವಾಗಿತ್ತು. ಕಳೆ ತೆಗೆಯುವುದು 4ನೇ ತರಗತಿಯ ಕೆಲಸವಾಗಿತ್ತು. ಗೊತ್ತುಪಡಿಸಿದ ಸರಾಸರಿ ಕೆಲಸದ ಅಳತೆಗಿಂತ ಹೆಚ್ಚಿನ ಕೆಲಸ ಸದಸ್ಯನು ಮಾಡಿದನೆಂದರೆ ಅವನಿಗೆ ದರದ ಪ್ರಕಾರ ಹೆಚ್ಚಿನ ಶ್ರಮದಿವಸಗಳನ್ನು ಅಥವಾ ಕೂಲಿಯ ನಂಬರುಗಳನ್ನು ಕೊಡಲಾಗುತ್ತಿತ್ತು. ಭೂಮಿ, ಬೆಳೆ, ಮಳೆಗಾಳಿಗಳ ಪರಿಸ್ಥಿತಿಗಳ ಪ್ರಕಾರ ದುಡಿತದ ಅಳತೆಗಳು ಹೆಚ್ಚುಕಡಮೆ ಆಗುತ್ತಿದ್ದವು.

ಕೆಲಸದ ವಿತರಣೆ ಹಾಗೂ ಕೆಲಸದ ದಳಗಳು (ವರ್ಕ್‌ಟೀಮ್ಸ್)

ಬೇಸಾಯಸಂಘದಲ್ಲಿ ಸದಸ್ಯರಿಗೆ ಕೆಲಸ ಹಂಚಿಕೊಡುವುದು ಹಾಗೂ ಮಾಡಿದ ಕೆಲಸವನ್ನು ಸರಿಯಾಗಿ ಅಳೆಯುವುದು ಒಂದು ದುಸ್ತರ ಕೆಲಸ. ಇದಕ್ಕಾಗಿ ಪ್ರತ್ಯೇಕವಾಗಿ ಮೇಲ್ವಿಚಾರಕರನ್ನು ಅಥವಾ ಕಾರಭಾರಿಗಳನ್ನು ನೇಮಿಸಿರಲಿಲ್ಲ. ಉತ್ಪಾದಕ ದುಡಿತದಿಂದ ಮೇಲ್ವಿಚಾರಣೆಯನ್ನು ಬೇರ್ಪಡಿಸುವುದರಿಂದ ಅನವಶ್ಯವಾಗಿ ಮೇಲ್ವಿಚಾರಣೆಯ ವೆಚ್ಚ ಬೇಸಾಯಸಂಘದ ಮೇಲೆ ಹೊರೆಯಾಗುವುದಲ್ಲದೆ ಮೇಲ್ವಿಚಾರಕರದೊಂದು ಪ್ರತ್ಯೇಕವಾದ ಶೋಷಕರ ವರ್ಗವಾಗುವುದೆಂದು ಅವರ ಗ್ರಹಿಕೆ ಇತ್ತು. ಶ್ರಮವಿಭಜನೆಗಾಗಿ ಸಾಮೂಹಿಕ ಹೊಣೆಗಾರಿಕೆಯುಳ್ಳ ಉತ್ಪಾದಕದಳಗಳನ್ನು (ಪ್ರೊಡಕ್ಷನ್ ಟೀಮ್ಸ್) ಮತ್ತು ಅದಕ್ಕಿಂತ ಚಿಕ್ಕಉತ್ಪಾದಕಗುಂಪುಗಳನ್ನು

(ಪ್ರೊಡಕ್ಷನ್ ಗ್ರೂಪ್ಸ್) ಚೀನದ ಬೇಸಾಯಸಂಘಗಳು ಸಂಘಟಿಸಿದವು. ಜನತಾಂತ್ರಿಕ ವಾಗಿ ಸದಸ್ಯರೇ ಇಂಥ ದಳಗಳನ್ನು ಹಾಗೂ ಗುಂಪುಗಳನ್ನು ರಚಿಸುತ್ತಿದ್ದರು. ಅವುಗಳ ನಾಯಕರನ್ನು ಸಹ ಹೀಗೆಯೇ ಆಯ್ಕೆ ಮಾಡಲಾಗುತ್ತಿತ್ತು. ಮೊದಲು ಒಂದೊಂದು ಕೆಲಸಕ್ಕಾಗಿ ತಾತ್ಕಾಲಿಕವಾಗಿ ಇಂಥ ದಳ, ಗುಂಪುಗಳ ರಚನೆಯಾಗುತ್ತಿತ್ತು. ಮುಂದೆ ಸ್ಥಾಯಿರೂಪದಿಂದ ವರ್ಷದವರೆಗೆ ಇವುಗಳ ರಚನೆಯಾಗಹತ್ತಿತು. ಒಂದು ಉತ್ಪಾದಕ ದಳಕ್ಕೆ ಒಂದು ನಿರ್ದಿಷ್ಟ ಹೊಲವನ್ನೂ, ಉತ್ಪಾದನೆಯ ಸಾಧನಸಲಕರಣೆಗಳನ್ನೂ ಕೊಡಲಾಗುತ್ತಿತ್ತು. ದಳವು ಸಂಪೂರ್ಣಹೊಣೆಗಾರಿಕೆಯಿಂದ ಆ ಹೊಲದ ಉತ್ಪಾದನೆಯ ಯೋಜನೆಯನ್ನು ತಯಾರಿಸಿ ಕಾರ್ಯಗತ ಮಾಡುತ್ತಿತ್ತು. ಮುದುಕರಿಗೆ, ದುರ್ಬಲರಿಗೆ ಸಹ ತಮ್ಮ ಶ್ರಮದಿಂದ ಸ್ವಲ್ಪ ಆದಾಯ ಸಂಪಾದಿಸಲು ಅವಕಾಶ ಮಾಡಿಕೊಡಬೇಕಾಗುತ್ತಿತ್ತು. ಸಾಯಂಕಾಲ ದಳನಾಯಕನು ಪ್ರತಿಯೊಬ್ಬ ಸದಸ್ಯನ ಕೆಲಸವನ್ನೂ ಅಳೆದು ಆದಕ್ಕೆ ತಕ್ಕ 'ಶ್ರಮದಿವಸ'ಗಳನ್ನು ಹಚ್ಚುತ್ತಿದ್ದನು. ಪ್ರತಿಯೊಬ್ಬ ದಳನಾಯಕನು ದಿನಾಲು ನಿರ್ದಿಷ್ಟ ಸಮಯದಷ್ಟು ಉತ್ಪಾದಕ ಶ್ರಮ ಮಾಡಲೇ ಬೇಕಾಗುತ್ತಿತ್ತು.

ಶ್ರಮಶಕ್ತಿ, ದಕ್ಷತೆ, ನಾಯಕನ ಯೋಗ್ಯತೆ ಇವೆಲ್ಲವುಗಳನ್ನು ಲಕ್ಷದಲ್ಲಿರಿಸಿ ಸರಿಸಮಾನವಾಗುವಂತೆ ಹಾಗೂ ಯಾವಾಗಲೂ ಕೆಲಸದಲ್ಲಿ ತೊಡಗಿಸುವಂತೆ ದಳಗಳ ರಚನೆಯಾಗುತ್ತಿತ್ತು. ದಳದಲ್ಲಿ ಕೆಲಸದ ಅನುಕೂಲತೆಗಾಗಿ ಚಿಕ್ಕಗುಂಪುಗಳ ರಚನೆಯೂ ಆಗುತ್ತಿತ್ತು. ಒಂದು ದಳದಲ್ಲಿ 100 ಸದಸ್ಯರವರೆಗೆ ಮಿಡಿಯುವವರಿರುತ್ತಿದ್ದರು. ಗುಂಪಿನಲ್ಲಿ 20–25 ಜನರಿರುತ್ತಿದ್ದರು.

ಕೆಲಸದ ಪ್ರಕಾರ ಪ್ರತಿಫಲ ಹಾಗೂ ನಿಶ್ಚಿತ ಉತ್ಪತ್ತಿ

ಚೀನೀಬೇಸಾಯಸಂಘಗಳಲ್ಲಿ ಕೆಲಸದ ಪ್ರಕಾರ ಪ್ರತಿಫಲ ಕೊಡುವ ಪದ್ಧತಿಯಲ್ಲಿ ಉತ್ಪತ್ತಿಯ ಹೊಣೆಗಾರಿಕೆಯನ್ನೂ ಸೇರಿಸಲಾಗಿತ್ತು. ಪ್ರತಿಯೊಂದು ಉತ್ಪಾದಕ ದಳವು ತನಗೆ ದೊರೆತ ಸಾಧನಗಳಿಂದ ನಿಶ್ಚಿತ ಪ್ರತಿಏಕರೆಯ ಉತ್ಪತ್ತಿಯನ್ನು ಕೊಡುವ ಭರವಸೆ ಕೊಡಬೇಕಿತ್ತು. ಗೊತ್ತುಪಡಿಸಿದ ಉತ್ಪತ್ತಿಯ ಮಿತಿಗಿಂತ ಹೆಚ್ಚು ಕೊಟ್ಟಲ್ಲಿ ಆ ದಳಕ್ಕೆ 'ಶ್ರಮದಿವಸ'ಗಳ ಪುರಸ್ಕಾರವು ದೊರಕುತ್ತಿತ್ತು. ಅದರಂತೆ ಮಿತಿಗಿಂತ ಕಡಮೆ ಬೆಳೆದಲ್ಲಿ 'ಶ್ರಮದಿವಸ'ಗಳ ಕಡಿತದ ದಂಡವನ್ನೂ ಅಂಥ ದಳವು ತೆತ್ತಬೇಕಾಗುತ್ತಿತ್ತು. ಅನಿರೀಕ್ಷಿತ ನೈಸರ್ಗಿಕ ಕುತ್ತುಗಳು ಒದಗಿದ ಸಂದರ್ಭದಲ್ಲಿ ಅವುಗಳನ್ನು ಲಕ್ಷಿಸಿ, ಸವಲತ್ತು ತೋರಿಸಲಾಗುತ್ತಿತ್ತು. ಮಿಡಿತದ ಆಧಾರದ ಮೇಲೆ ಸದಸ್ಯರಿಗೆ ಕಾಳಿನ ರೂಪದಲ್ಲಿ, ಹಣದ ರೂಪದಲ್ಲಿ ಮುಂಗಡ ಕೊಡಲಾಗುತ್ತಿತ್ತು.

ಒಳ್ಳೆಯ ಕೆಲಸಕ್ಕೆ ಉತ್ತೇಜನಗಳು

ವಿಶೇಷ ದಕ್ಷ ಕೆಲಸಕ್ಕಾಗಿ ವೈಯಕ್ತಿಕ ಸದಸ್ಯರಿಗೆ ಹಾಗೂ ದಳಗಳಿಗೆ ಬಹುಮಾನ ಗಳನ್ನು ಕೊಡಲಾಗುತ್ತಿತ್ತು. ಒಟ್ಟು ಪ್ರತಿಫಲದ ಶೇಕಡಾ 10ರಷ್ಟು ಇಂಥ ಬಹು

ಮಾನಗಳಿಗಾಗಿ ಖರ್ಚು ಆಗುತ್ತಿತ್ತು. ಉತ್ಪತ್ತಿಯ ವಿಶೇಷ ಹೆಚ್ಚಳಕ್ಕಾಗಿಯೂ ಇಂಥ ಬಹುಮಾನವನ್ನು ಕೊಡಲಾಗುತ್ತಿತ್ತು. ಇಂಥ ಸ್ಪರ್ಧೆಗಳನ್ನು ಏರ್ಪಡಿಸಿ ಬೇರೆ ಬೇರೆ ಮಟ್ಟಗಳಲ್ಲಿ ಆದರ್ಶಉತ್ಪಾದಕರನ್ನೂ, ಆದರ್ಶಉತ್ಪಾದಕದಳಗಳನ್ನೂ ಆಯ್ಕೆಮಾಡಿ ಅವರಿಗೆ ಗೌರವಿಸಲಾಗುತ್ತಿತ್ತು. ಸುಧಾರಿಸಿದ ಬೇಸಾಯಪದ್ಧತಿಗಳ ಬಗ್ಗೆ ಪುಸ್ತಕ ಪತ್ರಿಕೆಗಳಿಂದ ಸಾಮೂಹಿಕಬೇಸಾಯಗಾರರಲ್ಲಿ ಜಾಗೃತಿಯನ್ನು ಒಂದೇಸಮನೆ ಬೆಳೆಸಲಾಗುತ್ತಿತ್ತು.

ಸಾಧಾರಣಸಭೆ ಮತ್ತು ವ್ಯವಸ್ಥಾಪಕಸಮಿತಿ ಹಾಗೂ ಆಡಳಿತ

ಸದಸ್ಯರ ಸಾಧಾರಣ ಸಭೆಯು ಉತ್ಪಾದಕರ ಸಂಘದ ಸರ್ವೋಚ್ಚಅಧಿಕಾರದ ಸಂಸ್ಥೆ. ಸಂಘದ ಎಲ್ಲ ಮಹತ್ವದ ವಿಷಯಗಳನ್ನು ಸಾಧಾರಣಸಭೆಯೇ ನಿರ್ಣಯಿಸುತ್ತಿತ್ತು. ಉತ್ಪಾದಕರ ಸಂಘವು ಬಹು ದೊಡ್ಡದಾಗಿದ್ದರೆ ಸದಸ್ಯರ ಪ್ರತಿನಿಧಿಗಳು ಕೂಡಿ ಸಾಧಾರಣಸಭೆಯನ್ನು ನಡೆಸುತ್ತಿದ್ದರು.

ದೈನಂದಿನ ಆಡಳಿತವನ್ನು ನಡೆಸಲು ಸಾಧಾರಣ ಸಭೆಯು 5ರಿಂದ 15 ಸದಸ್ಯರುಳ್ಳ ಒಂದು ವ್ಯವಸ್ಥಾಪಕಸಮಿತಿಯನ್ನು ಆಯ್ಕೆಮಾಡುತ್ತಿತ್ತು. ಇದರಲ್ಲಿ ಬೇರೆ ಬೇರೆ ಸದಸ್ಯರಿಗೆ ವಿಭಿನ್ನ ಜವಾಬ್ದಾರಿಯ ಕೆಲಸಗಳನ್ನು ವಹಿಸಿ ಸದಸ್ಯರಲ್ಲಿ ಮುಂದಾಳುತನದ ಸಾಮರ್ಥ್ಯವನ್ನು ಬೆಳೆಸಲಾಗುತ್ತಿತ್ತು. ಉತ್ಪಾದಕರ ಸಂಘಗಳ ಪದಾಧಿಕಾರಿಗಳು ಉತ್ಪಾದನೆಯ ಶ್ರಮದಲ್ಲಿ ಭಾಗವಹಿಸುತ್ತಿದ್ದರು. ಮೇಲ್ವಿಚಾರಣೆಯ ವೆಚ್ಚದ ಮಿತಿಯನ್ನು ಪ್ರಾಥಮಿಕ ಉತ್ಪಾದಕರ ಸಂಘದಲ್ಲಿ ಒಟ್ಟು ಆದಾಯದ ಶೇಕಡಾ 1ರವರೆಗೆ, ಮುಂದುವರಿದ ಉತ್ಪಾದಕರ ಸಂಘದಲ್ಲಿ ಶೇಕಡಾ ½ದಷ್ಟು ನಿರ್ಧರಿಸಲಾಗುತ್ತಿತ್ತು.

3ರಿಂದ 9 ಸದಸ್ಯರುಳ್ಳ ಮೇಲ್ವಿಚಾರಣಾಸಮಿತಿಯನ್ನು ಆರಿಸಲಾಗುತ್ತಿತ್ತು. ಅದು ವ್ಯವಸ್ಥಾಪಕಸಮಿತಿಯ ವ್ಯವಹಾರಗಳೆಲ್ಲವನ್ನೂ ಪರೀಕ್ಷಿಸುತ್ತಿತ್ತು.

ಆದಷ್ಟು ಸ್ಥಳಿಕರನ್ನು ಲೆಕ್ಕದ ತಪಾಸಕರನ್ನಾಗಿ ನೇಮಿಸಲಾಗುತ್ತಿತ್ತು. ಸಹಕಾರ ಸಂಘಗಳು ಹಾಗೂ ಬೇಸಾಯದ ಬ್ಯಾಂಕು ಸರಿಯಾಗಿ ಲೆಕ್ಕವಿಡುವಲ್ಲಿ ಉತ್ಪಾದಕರ ಸಂಘಗಳಿಗೆ ನೆರವಾಗುತ್ತಿದ್ದವು.

ಉತ್ಪಾದನೆಯ ಪ್ರತಿವರ್ಷದ ವೆಚ್ಚಕ್ಕಾಗಿ, ಅಂದರೆ ಬೀಜ, ಗೊಬ್ಬರ ಮುಂತಾದುವುಗಳಿಗಾಗಿ ಉತ್ಪಾದಕರ ಸಂಘದ ಸದಸ್ಯರು ಹಣದ ರೂಪದಲ್ಲಾಗಲಿ, ಕಾಳಿನ ರೂಪದಲ್ಲಾಗಲಿ, ಸಂಘಕ್ಕೆ ಶೇರುವಂತಿಗೆ ಕೊಡುತ್ತಿದ್ದರು. ಅದರಂತೆ ಬೇಸಾಯದ ಬಂಡವಾಳಿಗೆ ಅಂದರೆ ಎತ್ತು, ನೇಗಿಲು, ಗಾಡಿ ಮುಂತಾದ ಸಲಕರಣೆಗಳಿಗಾಗಿ ಅವರು ಅನುಕೂಲವಾದ ಕಂತುಗಳಲ್ಲಿ ಶೇರುವಂತಿಗೆ ಕೊಡುತ್ತಿದ್ದರು.

ಬೇಸಾಯದ ಒಟ್ಟುಆದಾಯದ ವಿತರಣೆಯನ್ನು ಉತ್ಪಾದಕರ ಸಂಘದಲ್ಲಿ ಈಮುಂದಿನಂತೆ ಮಾಡಲಾಗುತ್ತಿತ್ತು :

ಬರುವ ವರ್ಷದ ಉತ್ಪಾದನೆಯ ವೆಚ್ಚಕ್ಕಾಗಿ ರಕ್ಷಿತ ನಿಧಿ (ಬೇಸಾಯ ಸಲಕರಣೆಗಳನ್ನು ಕೊಳ್ಳಲು ಬಳಸಲಾಗುತ್ತಿತ್ತು)	ಸದ್ಯದ ಉತ್ಪಾದನೆಯ ವೆಚ್ಚದಷ್ಟು ... ಶೇ. 8ರಿಂದ 12.
ಸಾರ್ವಜನಿಕ ಹಿತಕ್ಕಾಗಿ ಕಲ್ಯಾಣನಿಧಿ	... ಶೇ. 1ರಿಂದ 2

ಉಳಿದ ಆದಾಯವನ್ನು ಭೂಮಿಯ ಪ್ರಕಾರ ಭೂಮಿಯ ಪ್ರತಿಫಲವನ್ನೂ. ಶ್ರಮದಿವಸಗಳ ಪ್ರಕಾರ ಶ್ರಮದ ಪ್ರತಿಫಲ ಹಂಚಲು ಉಪಯೋಗಿಸಲಾಗುತ್ತಿತ್ತು.

ಸಿಬ್ಬಂದಿಯ ತರಬೇತಿ

ಪ್ರಾರಂಭದಲ್ಲಿ ಸಾಮ್ಯವಾದಿ ಪಕ್ಷದ ಕಾರ್ಯಕರ್ತರು ಹಾಗೂ ಸರಕಾರಿ ಅಧಿಕಾರಿಗಳು ಗ್ರಾಮಗಳಲ್ಲಿ ಹೋಗಿ ಉತ್ಪಾದಕಸಂಘಗಳನ್ನು ಸಂಘಟಿಸುವಲ್ಲಿ ಹಾಗೂ ನಡೆಸುವಲ್ಲಿ ನೆರವಾದರು. ಮುಂದೆ ಒಂದೊಂದು ಸಂಘಕ್ಕೆ 5 ಪದಾಧಿಕಾರಿ ಗಳಂತೆ 10 ಲಕ್ಷ ಉತ್ಪಾದಕರ ಸಂಘಗಳಿಗೆ 50 ಲಕ್ಷ ಸ್ಥಳಿಕಕಾರ್ಯಕರ್ತರನ್ನು ತಮ್ಮ ಸಂಘಗಳ ಸಂಚಾಲನೆಗಾಗಿ ತರಬೇತಿಗೊಳಿಸಲಾಯಿತು. ಸರಕಾರದ ತಾಂತ್ರಿಕ ಸಂಸ್ಥೆಗಳು ತರಬೇತಿಯ ಬೃಹದ್‌ಕಾರ್ಯದಲ್ಲಿ ನೆರವಾದವು ಮತ್ತು ಮುಂದೆ ಸಹ ಉತ್ಪಾದಕರ ಸಂಘಗಳ ಪ್ರಗತಿಯಲ್ಲಿ, ಸಂಚಾಲನೆಯಲ್ಲಿ ಮಾರ್ಗದರ್ಶನ ಮಾಡು ತ್ತಿದ್ದವು. ತರಬೇತಿಯಲ್ಲಿ ಉತ್ಪಾದನೆಯ ಸುಧಾರಣೆ. ಲೆಕ್ಕಪತ್ರ ಶ್ರಮಸಂಘಟನ ಹಾಗೂ ಸಮಾಜವಾದ. ತಾತ್ವಿಕ ನಿಷ್ಠೆ ಮುಂತಾದ ವಿಷಯಗಳನ್ನು ಕಲಿಸಲಾಗುತ್ತಿತ್ತು.

ಉತ್ಪಾದಕರ ಸಂಘಗಳು ತಮ್ಮ ಸಾಧನಗಳ ಆಧಾರದ ಮೇಲೆ ಉತ್ಪಾದನೆಯ ಕಾರ್ಯಕ್ರಮಗಳನ್ನೂ. ಯೋಜನೆಯನ್ನೂ ತಯಾರಿಸಿ. ಕಾರ್ಯಗತ ಮಾಡುತ್ತಿದ್ದವು. ತಾಂತ್ರಿಕಸಂಸ್ಥೆಗಳು ಈ ಕಾರ್ಯದಲ್ಲಿ ತಾಂತ್ರಿಕ ಮಾರ್ಗದರ್ಶನ ಮಾಡುತ್ತಿದ್ದವು.

ಸಾಮ್ಯವಾದಿ ಪಕ್ಷದ ಕಾರ್ಯಕರ್ತರು ಉತ್ಪಾದಕರ ಸಂಘಗಳಲ್ಲಿ ಪ್ರತ್ಯಕ್ಷವಾಗಿ ಸೇರಿ. ಉತ್ಪಾದನೆಯಲ್ಲಿ ಭಾಗವಹಿಸಿ. ಸಂಘಗಳಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಇದನ್ನು ತಮ್ಮ ಮಹತ್ವದ ರಾಜಕೀಯ ಹಾಗೂ ರಾಷ್ಟ್ರೀಯ ಕಾರ್ಯವೆಂದು ಅವರು ಭಾವಿಸುತ್ತಿದ್ದರು.

ಉತ್ಪಾದಕರ ಸಹಕಾರ ಸಂಘಗಳಿಗೆ ಸಹಾಯ ಸವಲತ್ತುಗಳು

i) **ನಿಶ್ಚಿತ ಬೆಲೆಗಳು :** ಸರಕಾರವೇ ಎಲ್ಲ ಮಹತ್ವದ ಬೇಸಾಯದ ಹುಟ್ಟುವಳಿ ಯನ್ನು ಕೊಳ್ಳುತ್ತಿತ್ತು. ಸರಕಾರವೇ ಆಹಾರಧಾನ್ಯ ಹಾಗೂ ಬೇರೆ ಮಹತ್ವದ ಸಾಮಾನುಗಳನ್ನು ಪಟ್ಟಣದ ಜನತೆಗೆ ಪೂರೈಸುತ್ತಿತ್ತು. ಬಿತ್ತನೆಯ ಪೂರ್ವದಲ್ಲಿಯೇ ಬೇಸಾಯದ ಹುಟ್ಟುವಳಿಗಳ ಧಾರಣೆಗಳನ್ನು ನಿಶ್ಚಯಿಸಿ ಜಾಹೀರು ಪಡಿಸಲಾಗುತ್ತಿತ್ತು. ಕೃಷಿಗೆ ಬೇಕಾಗುವ ಬೀಜ, ಗೊಬ್ಬರ. ಯಂತ್ರ ಸಾಮಾನುಗಳು ಮುಂತಾದವುಗಳ

ಯೋಗ್ಯ ಧಾರಣೆಯನ್ನು ನಿಶ್ಚಯಿಸಿ ಉತ್ಪಾದಕರ ಸಂಘಗಳಿಗೆ ಆದ್ಯತೆಯಿಂದ ಪೂರೈಸಲಾಗುತ್ತಿತ್ತು. ಈ ಧೋರಣೆಯಿಂದ ಉತ್ಪಾದಕರ ಸಂಘಗಳ ಪ್ರಗತಿಗೆ ಬಹಳ ಉತ್ತೇಜನ ದೊರಕಿತು. ಅವು ನಿಶ್ಚಿಂತವಾಗಿ, ನಿಶ್ಚಿತಭರವಸೆಯಿಂದ ಉತ್ಪಾದನೆಯ ಕಾರ್ಯವನ್ನು ನಡೆಸುತ್ತಿದ್ದವು. ಬೆಲೆಗಳ ಏರಿಳಿತಗಳಿಂದ ಬಡಬೇಸಾಯಗಾರರು ಅಪಾರ ನಷ್ಟಕ್ಕೀಡಾಗುತ್ತಿದ್ದರು. ಸಾಮ್ಯವಾದಿ ಸರಕಾರದ ಮೊದಲು ಕೋಮಿಂಟಾಂಗ ಆಡಳಿತದಲ್ಲಿ ಬೆಲೆಗಳ ಏರಿಳಿತ, ಅಸಮಾನತೆ ಶೇಕಡಾ 100ಕ್ಕಿಂತ ಹೆಚ್ಚಿಗೆ ಇರುತ್ತಿತ್ತು. ಈ ಏರಿಳಿತದ ಹೊಯ್ದಾಟದ ಸಂಪೂರ್ಣ ನಿರ್ಮೂಲನ ಸಾಮ್ಯವಾದಿ ಸರಕಾರದ ಅತಿ ದೊಡ್ಡ ಸಾಧನೆ ಆಗಿತ್ತು. ಇದರಿಂದ ಬೇಸಾಯಗಾರ ಜನತೆಯಲ್ಲಿ ಅದು ಅಪಾರ ವಿಶ್ವಾಸವನ್ನು ಬೆಳೆಸಿತು. ಇಂಥ ನಿಶ್ಚಿತ ಬೆಲೆಗಳಿಗೆ ಉತ್ಪಾದಕರ ಸಂಘಗಳ ಹುಟ್ಟುವಳಿಯ ಬಹುಭಾಗವನ್ನು ಸರಕಾರವೇ ಕೊಳ್ಳುತ್ತಿತ್ತು. ಅದಕ್ಕೆ ಯೋಗ್ಯ ಬೆಲೆಯನ್ನು ಕೊಡಲಾಗುತ್ತಿತ್ತು. ಬೇಸಾಯಗಾರರಿಗೆ ಸಾಲುವಷ್ಟು ಮಾಲನ್ನು ಅವರಿಗೆ ಬಿಡಲಾಗುತ್ತಿತ್ತು. ಮಾರಾಟ ಮಾಡುವ ಹೆಚ್ಚಿನ ಉತ್ಪತ್ತಿಯನ್ನು ಮಾತ್ರ ಸರಕಾರವು ಕೊಳ್ಳುತ್ತಿತ್ತು.

ii) **ಪೂರೈಕೆ :** ಬೇಸಾಯಗಾರರಿಗೆ ಬೇಕಾಗುವ ಗೊಬ್ಬರ, ಬೀಜ, ಔಷಧಿಗಳು, ಕಬ್ಬಿಣ, ನೇಗಿಲು ಮುಂತಾದ ಎಲ್ಲ ಸಾಮಾನುಗಳನ್ನೂ ಯೋಗ್ಯ ಬೆಲೆಗೆ ಉತ್ಪಾದಕರ ಸಂಘಗಳಿಗೆ ಆದ್ಯತೆಯಿಂದ ಪೂರೈಸಲಾಗುತ್ತಿತ್ತು. ಅವಕ್ಕೆ ಇದೊಂದು ದೊಡ್ಡ ಉತ್ತೇಜನ. ಶ್ರೀಮಂತ ಬೇಸಾಯಗಾರರೇ ಅವನ್ನೆಲ್ಲ ಕೊಂಡು ಬಳಸುವುದಷ್ಟೇ ಅಲ್ಲ, ಕಳ್ಳಸಂತೆಯಲ್ಲಿ ಎರಡುಮೂರು ಪಟ್ಟು ಬೆಲೆಗೆ ಮಾರುವ ಸ್ಥಿತಿ ಅಲ್ಲಿರಲಿಲ್ಲ. ಅದರಂತೆ ಬೇಸಾಯಗಾರರ ನಿತ್ಯಬಳಕೆಯ ಸರಕುಗಳೂ ಅವರಿಗೆ ಚಿಂತೆ ಇಲ್ಲದೆ ಪೂರೈಕೆ ಗುತ್ತಿದ್ದವು. ಮಾರಾಟಸಂಘಗಳ ಮುಖಾಂತರವೇ ಈ ಪೂರೈಕೆಯ ಕೆಲಸವು ಸರಾಗವಾಗಿ ನಡೆಯುತ್ತಿತ್ತು.

iii) **ಕರಕಂದಾಯ :** ಕೋಮಿಂಟಾಂಗ ಆಡಳಿತದಲ್ಲಿ ಬೇಸಾಯಗಾರರು ತಮ್ಮ ಉತ್ಪತ್ತಿಯ ಶೇಕಡಾ 50ರಷ್ಟು ಪಾಲನ್ನು ಕಂದಾಯ, ಗುತ್ತಿಗೆಯ ರೂಪದಲ್ಲಿ ಕೊಡುತ್ತಿದ್ದರು. ಸಾಮ್ಯವಾದಿ ಸರಕಾರದ ಸ್ಥಾಪನೆಯ ನಂತರ ಭೂ ಮಾಲಿಕರಿಗೆ ಕೊಡಬೇಕಾದ ಗುತ್ತಿಗೆ (ಲಾವಣಿ)ಯಂತೂ ಬಂದಾಯಿತು. ಸರಕಾರಕ್ಕೆ ಕೊಡಬೇಕಾದ ಕಂದಾಯವನ್ನು ಉತ್ಪತ್ತಿಯ ಶೇಕಡಾ 15ರಿಂದ 23ರಷ್ಟಕ್ಕೆ ಇಳಿಸಲಾಯಿತು. ಇದನ್ನು ಬೇಸಾಯಸಂಘಗಳು ಹೆಚ್ಚಾಗಿ ಕಾಳಿನ ರೂಪದಲ್ಲಿಯೇ ಕೊಡುತ್ತಿದ್ದವು. ಹೊಸದಾಗಿ ಅಭಿವೃದ್ಧಿಗೊಳಿಸಿದ ಭೂಮಿಯ ಮೇಲೆ ಕಂದಾಯವನ್ನು ಹೇರುತ್ತಿದ್ದಿಲ್ಲ.

ಟ್ರಾಕ್ಟರು ಮುಂತಾದ ಯಂತ್ರಗಳ ಸೇವೆಯನ್ನು ಯೋಗ್ಯಬೆಲೆಗೆ ಅಥವಾ ಸವಲತ್ತಿನ ಬೆಲೆಗೆ ಸರಕಾರವೇ ಉತ್ಪಾದಕರ ಸಂಘಗಳಿಗೆ ಒದಗಿಸುತ್ತಿತ್ತು. ಸವಲತ್ತಿನ ಬೆಲೆಯಿಂದ ಸುಧಾರಿಸಿದ ಬೇಸಾಯ ಸಲಕರಣೆಗಳನ್ನು ಬೇಸಾಯಸಂಘಗಳಿಗೆ ಒದಗಿಸ

ಲಾಗುತ್ತಿತ್ತು. ಅವುಗಳ ದೋಷದಿಂದ ನಷ್ಟವಾಗುತ್ತಿದ್ದರೆ ಸರಕಾರವು ಅಂಥ ಸಲಕರಣೆ ಗಳನ್ನು ವಾಪಸ್ಸು ತೆಗೆದುಕೊಂಡು ಉತ್ಪಾದಕರ ಸಂಘಗಳ ನಷ್ಟವನ್ನು ತಪ್ಪಿಸುತ್ತಿತ್ತು.

iv) **ಕೃಷಿಸಾಲ:** ಸಾಮ್ಯವಾದಿ ಸರಕಾರದ ಆಡಳಿತದಲ್ಲಿ ಖಾಸಗೀ ಸಾಹು ಕಾರರ ಸಾಲಗಳು ನಿರ್ಮೂಲವಾದುವು. ಬೇಸಾಯದ ಉತ್ಪಾದನೆಗಾಗಿ ಉತ್ಪಾದಕರ ಸಂಘಗಳಿಗೆ ಜನತಾ ಬ್ಯಾಂಕಿನಿಂದ ಸಾಲವು ಸಾಕಷ್ಟು ದೊರಕಿತು. ಇಂಥ ಸಾಲದ ರಕಮು 1950ರಲ್ಲಿ 40 ಕೋಟಿ ರೂಪಾಯಿ ಇದ್ದದ್ದು, 1953ರಲ್ಲಿ 252 ಕೋಟಿ ರೂಪಾಯಿಗೆ ಹೆಚ್ಚಿತು. 1955ರಲ್ಲಿ ಕೃಷಿ ಬ್ಯಾಂಕನ್ನು ಸ್ಥಾಪಿಸಲಾಯಿತು. ಮುಂದೆ ಅದರಿಂದಲೇ ಉತ್ಪಾದಕರ ಸಂಘಗಳಿಗೆ ಬೇಸಾಯದ ಸಾಲ ದೊರಕಹತ್ತಿತು. ಬೇಸಾಯ ಗಾರರಿಗೆ ಕೆಲಮಟ್ಟಿಗೆ ಅವರ ಬಳಕೆಯ ಅವಶ್ಯಕತೆಗಳಿಗೆ ಸಹ ಸಾಲವನ್ನು ಒದಗಿಸ ಲಾಗುತ್ತಿತ್ತು. ಉತ್ಪಾದಕರ ಸಂಘಗಳ ಮುಖಾಂತರ ಬೇಸಾಯಗಾರರಿಗೆ ಸಾಲವನ್ನು ಒದಗಿಸಿ, ಸುಗ್ಗಿಯ ಕಾಲಕ್ಕೆ ಅದನ್ನು ಉತ್ಪಾದಕರ ಸಂಘಗಳ ಮುಖಾಂತರವೇ ವಸೂಲು ಮಾಡಲಾಗುತ್ತಿತ್ತು. 1956ರಲ್ಲಿ 640 ಕೋಟಿರೂಪಾಯಿಗಳ ಸಾಲವನ್ನು ಒದಗಿಸಲಾಗಿತ್ತು. ಬಡಬೇಸಾಯಗಾರರಿಗೆ ಸವಲತ್ತಿನ ಬಡ್ಡಿಯ ದರದಿಂದ ಸಾಲವನು ಒದಗಿಸಲಾಗುತ್ತಿತ್ತು.

ಉತ್ಪಾದಕರ ಸಹಕಾರ ಸಂಘವು ಅರ್ಜಿ ತಳಿಸಿದ 3–4 ದಿವಸಗಳಲ್ಲಿ ಸಾಲವನ್ನು ಪಡೆಯುತ್ತಿತ್ತು. ಅದು ಒಂದು ಉತ್ಪಾದನೆಯ ಯೋಜನೆಯನ್ನು ತಯಾರಿಸಿ, ಅದರ ಒಂದು ಪ್ರತಿಯನ್ನು ಕೃಷಿ ಬ್ಯಾಂಕಿಗೂ. ಒಂದು ಪ್ರತಿಯನ್ನು ಹಿಸಿಯಾಂಗ ಸರಕಾರಕ್ಕೂ ಕಳಿಸುತ್ತಿತ್ತು. ಅದರ ಮೇಲೆ ಯಾವ ಆಧಾರ, ಕಾರಣ ಅಥವಾ ಸರಕಾರದ ಭರವಸೆಯನ್ನು ಬ್ಯಾಂಕು ಕೇಳುತ್ತಿರಲಿಲ್ಲ. ಸುಗ್ಗಿಯ ಕಾಲಕ್ಕೆ ಸಾಲದ ವಸೂಲಿಯೂ ಸುಲಭವಾಗಿ ಆಗುತ್ತಿತ್ತು. ಸಾಲದ ಸೊಸ್ತಿ ಬಾಕಿಯು ಶೇಕಡಾ 5ಕ್ಕಿಂತ ಹೆಚ್ಚಿಗೆ ಇರಲಿಲ್ಲ. ಉತ್ಪತ್ತಿಯ ಹೆಚ್ಚಳದಿಂದ, ಮುಂದಾಳುಗಳಲ್ಲಿರುವ ಭರವಸೆ ಯಿಂದ ಸುಲಭವಾಗಿ ಸಾಲಗಳನ್ನು ವಾಪಸ್ಸು ಕೊಡಲಾಗುತ್ತಿತ್ತು.

ಸಾಗಾದ ಭೂಮಿ ಭಾರತಕ್ಕಿಂತ ಚೀನಾದಲ್ಲಿ ಕಡಮೆ ಇತ್ತು. ಆದರೂ 1956ರಲ್ಲಿ ಅಗತ್ಯವಿದ್ದ 750 ಕೋಟಿ ರೂಪಾಯಿಗಳ ಸಾಲದಲ್ಲಿ ಶೇಕಡಾ 6ರಷ್ಟು ಮಾತ್ರ ಭಾರತದಲ್ಲಿ ಬೇಸಾಯಗಾರರಿಗೆ ಸಹಕಾರಿಸಂಘಗಳಿಂದ ಮತ್ತು ಸರಕಾರದಿಂದ ದೊರಕಿತ್ತು. ಆ ಕಾಲಕ್ಕೆ ಚೀನದಲ್ಲಿ ಆಗಸ್ಟ್ 1956ರಲ್ಲಿ 560 ಕೋಟಿ ರೂಪಾಯಿಗಳ ಬೇಸಾಯ ಸಾಲವು ಸರಕಾರದಿಂದ ಹಾಗೂ ಕೃಷಿ ಬ್ಯಾಂಕಿನಿಂದ ಬೇಸಾಯದ ಉತ್ಪಾದಕರ ಸಂಘಗಳಿಗೆ ದೊರಕಿತ್ತು.

ಉತ್ಪಾದಕರ ಸಂಘಗಳ ಸಾಧನೆಗಳು

ಉತ್ಪಾದಕರ ಸಂಘಗಳ ಬೆಳವಣಿಗೆಯಾದ ಬಳಿಕ ಮೂರು ವರ್ಷಗಳಲ್ಲಿ ಚೀನದಲ್ಲಿ ಆಹಾರ ಧಾನ್ಯಗಳ ಉತ್ಪತ್ತಿಯು ಶೇಕಡಾ 15ರಿಂದ 30ರವರೆಗೆ ಹೆಚ್ಚಿತು. ಮಾರುಕಟ್ಟೆಗೆ

ಬಂದ ಮಾಲಿನಿಂದ ಈ ಹೆಚ್ಚಳವು ಸ್ಪಷ್ಟವಾಗಿ ಗೋಚರವಾಗುತ್ತಿತ್ತು. 1911ರಿಂದ 1949ರವರೆಗೆ ಚೀನದಲ್ಲಿ ಆರ್ಥಿಕ ಅರಾಜಕತೆಯೇ ಇದ್ದಂತಿತ್ತು. ಪ್ರಥಮಬಾರಿಗೆ ಅಲ್ಲಿ ಶಾಂತಿ ವ್ಯವಸ್ಥೆಯು ನೆಲಸಿ. ಮಿತಿಮೀರಿದ ಹಣದುಬ್ಬರವು ನಿರ್ಮೂಲವಾಗಿತ್ತು. ಅದ್ದರಿಂದ ಸರಕಾರದಲ್ಲಿ ಜನಸಾಮಾನ್ಯರ ವಿಶ್ವಾಸವು ಬೆಳೆದಿತ್ತು. ಈ ಉತ್ಸಾಹದಿಂದ ಉತ್ಪತ್ತಿಯನ್ನು ಹೆಚ್ಚಿಸಿದ್ದಲ್ಲದೆ ಜನರು ಮಾರುಕಟ್ಟೆಯಲ್ಲಿ ಅದನ್ನು ಮಾರುತ್ತಲೂ ಇದ್ದರು. ಇದೇ ವಿಶ್ವಾಸ. ಉತ್ಸಾಹಗಳಿಂದ ಜನರು ಬೇಸಾಯದ ಉತ್ಪಾದಕರ ಸಹಕಾರಸಂಘಗಳನ್ನು ಸ್ಥಾಪಿಸಿದರಲ್ಲದೆ ಅವುಗಳ ಸಹಾಯದಿಂದ ಉತ್ಪತ್ತಿಯನ್ನು ಹೆಚ್ಚಿಸಿದರು.

ಉತ್ಪತ್ತಿಯನ್ನು ಹೆಚ್ಚಿಸಿದ ಉಪಾಯಗಳು

ಭೂಮಿ, ಶ್ರಮ, ಬಂಡವಾಳಗಳ ಉತ್ಪಾದನೆಯ ಸಾಧನಗಳನ್ನು ಬೇಸಾಯದ ಉತ್ಪಾದಕರ ಸಂಘಗಳು ಹೆಚ್ಚು ಪರಿಣಾಮಕಾರಿಯಾಗಿ ಸಂಘಟಿಸಿ, ಯೋಜನಾ ಬದ್ಧವಾಗಿ ಉಪಯೋಗಿಸಿದ್ದರಿಂದಲೇ ಅವುಗಳಿಂದ ಉತ್ಪತ್ತಿಯ ಹೆಚ್ಚಳವಾಯಿತು. ಅವು ನೀರಾವರಿಯ ಸೌಲಭ್ಯಗಳನ್ನು ಹೆಚ್ಚಿಸಿ ಉಪಯೋಗಿಸಿದವು. ಅವು ಭೂ ಅಭಿವೃದ್ಧಿಯ ಕಾರ್ಯಗಳನ್ನು ವಿಸ್ತರಿಸಿದವು. ಅವು ಸಂಘಟಿತ ಶ್ರಮದಿಂದ ಉತ್ತಮ ಬೀಜಗಳನ್ನು, ಹೇರಳವಾಗಿ ಗೊಬ್ಬರಗಳನ್ನು ಹಾಗೂ ಸುಧಾರಿಸಿದ ಬೇಸಾಯ ಪದ್ಧತಿಗಳನ್ನು ಬಳಸಿದವು.

i) **ನೀರಾವರಿ ಹಾಗೂ ಭೂಅಭಿವೃದ್ಧಿ** : ಲಿಯಾನಿಂಗ ಪ್ರಾಂತದಲ್ಲಿ ಒಂದು ಉತ್ಪಾದಕರ ಸಹಕಾರಿಸಂಘವು 18 ತಿಂಗಳಲ್ಲಿ 128 ಚಿಕ್ಕಬಾವಿಗಳನ್ನು ತನ್ನ ಸದಸ್ಯರ ಶ್ರಮಶಕ್ತಿಯಿಂದಲೇ ತೋಡಿತು. ಒಂದೊಂದು ಬಾವಿಯಿಂದ ಸರಾಸರಿ ಯಾಗಿ 2 ಎಕರೆಯಲ್ಲಿ ನೀರಾವರಿ ಸಾಗುವಳಿ ಆಯಿತು. ಇನ್ನೊಂದು ಬೇಸಾಯ ಸಂಘವು 40 ಹಾರ್ಸ್‌ಪವರ್ ಮತ್ತು 50 ಹಾರ್ಸ್‌ಪವರ್ ಎರಡು ವಿದ್ಯುತ್ತಿನ ನೀರಾವರಿ ಪಂಪುಗಳನ್ನು ಹಚ್ಚಿ 150 ಎಕರೆ ಭೂಮಿಯಲ್ಲಿ ನೀರಾವರಿ ಬೇಸಾಯ ವನ್ನು ಕೈಗೊಂಡಿತು. ನೂರಾರು ಸಂಘಗಳ ಇಂಥ ಸಾಧನೆಗಳಿದ್ದವು. ಇಷ್ಟು ಸ್ವಲ್ಪ ಸಮಯದಲ್ಲಿ ಚಿಕ್ಕ ಬಡಬೇಸಾಯಗಾರರು. ಬೇಸಾಯಸಂಘಗಳಿಲ್ಲದೆ, ವೈಯಕ್ತಿಕ ವಾಗಿ ಈ ಸಾಧನೆಗಳನ್ನು ಪಡೆಯುವುದು ಗೊತ್ತಿರಲಿಲ್ಲ.

ಉತ್ಪಾದಕರ ಸಹಕಾರಸಂಘಗಳು ವೈಯಕ್ತಿಕ ಹೊಲಗಳ ಬೇಲಿ ಹಾಗೂ ಬದು ಗಳನ್ನು ತೆಗೆದುಹಾಕಿ ಸಾಗುವಳಿ ಭೂಮಿಯನ್ನು ವಿಸ್ತರಿಸಿದುವು. ಹೊಸ ಪಡಭೂಮಿ ಯನ್ನು ಅವು ಅಭಿವೃದ್ಧಿಗೊಳಿಸಿ ಸಾಗುವಳಿಯಲ್ಲಿ ತಂದವು. ಹೆಚ್ಚು ಭೂಮಿಯ ಸಾಗು ವಳಿಯಿಂದ ಬೇಸಾಯಗಾರರಿಗೆ ಹೆಚ್ಚಿನ ಉದ್ಯೋಗಾವಕಾಶ ಹೆಚ್ಚು ಉತ್ಪತ್ತಿ. ಹೆಚ್ಚು ಆದಾಯಗಳು ದೊರಕಿದವು.

ಲಿನಮಿನ ಗ್ರಾಮದಲ್ಲಿ ಶ್ರಮದಾನದ ಸಂಘಟನದಿಂದ ಅಲ್ಲಿಯ ಉತ್ಪಾದಕರ ಸಹಕಾರ ಸಂಘವು ಹೊಳೆಗೆ ಒಡ್ಡುಹಾಕಿಸಿ 500 ಎಕರೆಯಷ್ಟು ಭೂಮಿಯಲ್ಲಿ ನೀರಾವರಿ ಬೇಸಾಯವನ್ನು ವಿಸ್ತರಿಸಿತು.

ಸಹಕಾರ ಬೇಸಾಯದ ಆಂದೋಲನವು ವಿಸ್ತರಿಸುವ ಪೂರ್ವದಲ್ಲಿ ಚೀನದ ಚಿಕ್ಕಬೇಸಾಯಗಾರರಿಗೆ ಬಿತ್ತಲು ಸುಧಾರಿಸಿದ ಬೀಜಗಳು ದೊರೆಯುತ್ತಿರಲಿಲ್ಲ. ಉತ್ಪಾದಕರ ಸಹಕಾರ ಸಂಘಗಳು ತಮ್ಮ ಹೊಲದಲ್ಲಿ ಸ್ವಲ್ಪ ಭೂಮಿಯನ್ನು ತೆಗೆದು, ಅದರಲ್ಲಿ ಹೆಚ್ಚು ಇಳುವರಿ ಕೊಡುವ ಸುಧಾರಿಸಿದ ಬೀಜಗಳನ್ನು ಬೆಳೆದು ಅವುಗಳ ಪ್ರಚಾರ ಮಾಡಿದವು.

ii) **ಗೊಬ್ಬರ ಸಂಗ್ರಹ ಹಾಗೂ ಬಳಕೆ :** ಎಲ್ಲ ಸ್ಥಳೀಕ ಸಾಮಗ್ರಿಗಳಿಂದ ಗೊಬ್ಬರಗಳನ್ನು ತಯಾರಿಸಲು ಚೀನದ ಉತ್ಪಾದಕರ ಸಹಕಾರ ಸಂಘಗಳು ಒಂದು ಆಂದೋಲನವನ್ನೇ ನಡೆಸಿದವು. ಹಸುರೆಲೆ ಗೊಬ್ಬರ, ಹಂದಿಯ ಗೊಬ್ಬರ, ಕೆರೆಯಿಂದ ಹೂಳು, ನದಿಗಳಿಂದ ರೇವೆ, ಕಕ್ಕಸಗೊಬ್ಬರ, ಮೂತ್ರಗೊಬ್ಬರ ಮುಂತಾದ ಎಲ್ಲ ಪ್ರಕಾರದ ಗೊಬ್ಬರಗಳನ್ನೂ ಸಂಗ್ರಹಿಸಿ ವಿಪುಲವಾಗಿ ಬಳಸಲಾಯಿತು. ಈ ಸಾಧನೆ ಹೊರಗಿನ ಸಂದರ್ಶಕರನ್ನು ಮುಗ್ಧಮಾಡುತ್ತಿತ್ತು. ಬಿದಿರಿನ ಗಳಕ್ಕೆ 2 ಬಕೆಟ್ಟು ಗಳನ್ನು ಕಟ್ಟಿ ಅವುಗಳಲ್ಲಿ ನದಿಯ ರೇವೆಯನ್ನು ತುಂಬಿ ಹೊತ್ತು ತಂದು ಬೇಸಾಯ ಗಾರರು ಸಾಮೂಹಿಕವಾಗಿ ಹೊಲಕ್ಕೆ ಹಾಕುತ್ತಿದ್ದರು. ಪ್ರತಿಯೊಬ್ಬ ಬೇಸಾಯಗಾರ ಒಂದು ದಿನದಲ್ಲಿ ಸುಮಾರು 1,200 ಕ್ಯಾಲಿ (=1300 ಪೌಂಡು) ಹೂಳನ್ನು ಹೊರುತ್ತಿದ್ದನು. ಉತ್ಪಾದಕರ ಸಂಘಗಳಲ್ಲಿ ಈ ಮಹತ್ವದ ಗೊಬ್ಬರ ಸಂಗ್ರಹಕ್ಕಾಗಿ ಅಪಾರ ಜನಶಕ್ತಿಯ ಅಗಾಧವಾದ ಬಳಕೆ ಆಗುತ್ತಿತ್ತು. ಪಟ್ಟಣದ ಬಳಿ ಇರುವ ಉತ್ಪಾದಕರ ಸಂಘಗಳ ಸದಸ್ಯರು ಪಟ್ಟಣಗಳಿಂದ ಸಾಮೂಹಿಕವಾಗಿ ಕಕ್ಕಸದ ಗೊಬ್ಬರ ವನ್ನು ತಂದು ಹೊಲಕ್ಕೆ ಹಾಕುತ್ತಿದ್ದರು.

iii) **ಸುಧಾರಿಸಿದ ಬೇಸಾಯ ಪದ್ಧತಿಗಳು :** ಸಂಘಟಿತ ಶ್ರಮಶಕ್ತಿಯಿಂದ ಚೀನಾದ ಉತ್ಪಾದಕರ ಸಂಘಗಳು ಸುಧಾರಿಸಿದ ಬೇಸಾಯ ಪದ್ಧತಿಗಳನ್ನು ಕೈಕೊಳ್ಳು ವುದು ಸಾಧ್ಯವಾಯಿತು. ಎರಡು ಬೆಳೆ ಬೆಳೆಯುವ ಕ್ಷೇತ್ರವನ್ನು ಹೆಚ್ಚಿಸಿ ಉತ್ಪತ್ತಿ ಯನ್ನು ಶೇಕಡಾ 20ರಿಂದ 30ರಷ್ಟು ಹೆಚ್ಚಿಸಲಾಯಿತು. ಆಳವಾದ ಉಳುಮೆ, ಸಕಾಲದಲ್ಲಿ ಕಳೆ ಮುಂತಾದ ಬೇಸಾಯದ ಕೆಲಸಗಳನ್ನು ಉತ್ಪಾದಕರ ಸಂಘಗಳು ಸಂಘಟಿತ ಶ್ರಮದಿಂದ ಹೆಚ್ಚು ಪರಿಣಾಮಕಾರಿಯಾಗಿ ಮಾಡುತ್ತಿದ್ದವು.

ಉತ್ಪಾದಕರ ಸಂಘಗಳ ಸಂಘಟಿತ ಶ್ರಮಶಕ್ತಿಯಿಂದ ಮಹಾಪೂರದಂಥ ನೈಸರ್ಗಿಕ ವಿಪತ್ತುಗಳನ್ನು ಬೇಸಾಯಗಾರರು ಯಶಸ್ವಿಯಾಗಿ ಎದುರಿಸಿದರು. ಮಹಾಪೂರ ಬಂದಾಗ್ಗೆ ಅಥವಾ ಅತಿವೃಷ್ಟಿಯಿಂದ ಹೊಲಗಳಲ್ಲಿ ಅತಿಯಾಗಿ ನೀರು ತುಂಬಿದ್ದರೆ ಸಹಕಾರಿ ಬೇಸಾಯಗಾರರು ಸಂಘಟಿತ ಶ್ರಮದಾನದಿಂದ ಕಾಲುವೆ ತೋಡಿ ನೀರನ್ನು ಹೊರಗೆ ಹಾಕುತ್ತಿದ್ದರು. ವೈಯಕ್ತಿಕವಾಗಿ ಈ ಕೆಲಸ ಸಾಧಿಸುತ್ತಿರಲಿಲ್ಲ.

ಚಿಕ್ಕಬೇಸಾಯಗಾರರ ಬಳಿ ಸಲಕರಣೆಗಳ ಕೊರತೆ ಇರುವುದರಿಂದ ಅಥವಾ ರೋಗ, ಆಪತ್ತುಗಳಿಂದ ಅವರ ತುಂಡು ವೈಯಕ್ತಿಕ ಬೇಸಾಯ ಕುಂಟುತ್ತದೆ ಹಾಗೂ ಉತ್ಪತ್ತಿ ಕಡಮೆ ಆಗುವುದುಂಟು. ಆದರೆ ಉತ್ಪಾದಕರ ಸಂಘಗಳಲ್ಲಿ ಬೇಸಾಯಗಾರರ ಇಂಥ ವೈಯಕ್ತಿಕ ತೊಂದರೆಗಳ ನಿವಾರಣೆ ಸಾಮೂಹಿಕ ಜನಶಕ್ತಿಯಿಂದ ಆಯಿತು.

(iv) **ಉದ್ಯೋಗಾವಕಾಶ ಹಾಗೂ ಆದಾಯ:** ಮೊದಲಿಗಿಂತ ಬೇಸಾಯಗಾರರಿಗೆ ಹೆಚ್ಚಿಗೆ ಉದ್ಯೋಗಾವಕಾಶ ದೊರಕಿತು. ಅವರ ಆದಾಯ ಹೆಚ್ಚಿ. ಅವರ ಜೀವನ ಸ್ಥಿತಿಯು ಸುಧಾರಿಸಿತು. ವಿಶೇಷವಾಗಿ ಬೇಸಾಯಗಾರರ ಮಹಿಳೆಯರಿಗೆ ಬೇಸಾಯಸಂಘಗಳಲ್ಲಿ ಹೆಚ್ಚಿಗೆ ಉದ್ಯೋಗ ದೊರಕಿತು. ಸಾಮಾನ್ಯವಾಗಿ ಮಹಿಳೆಯರ ಹಾಗೂ ಪುರುಷರ ಉದ್ಯೋಗದ ಅನುಪಾತ 2 : 3 ಇತ್ತು.

ಪ್ರತಿಯೊಬ್ಬ ಸದಸ್ಯನ ಸರಾಸರಿ ದೈನಿಕ ಆದಾಯವು 0.70 ಯೂಆನ್ (140 ರೂ)ದಿಂದ 3.9 ಯೂಆನ್ (7.80 ರೂ.)ವರೆಗೆ ಇತ್ತು. ಆದಾಯದ ದರಗಳು ಹೆಚ್ಚುಕಡಮೆ ಇದ್ದವು. ಆದರೆ ಸರಾಸರಿಯಾಗಿ ಒಂದು 'ಶ್ರಮದಿವಸ'ದ ಬೆಲೆ 1.5 ಯೂಆನ್ (3ರೂ.) ಇತ್ತು. ಒಂದು ಕುಟುಂಬದ ಸರಾಸರಿ ವಾರ್ಷಿಕ ಆದಾಯವು 400ರಿಂದ 450 ಯೂಆನ್ (800 ರೂ.ದಿಂದ 900 ರೂ.)ದವರೆಗೆ ಇತ್ತು. 1952ನೇ ವರ್ಷದ ತುಲನೆಯಲ್ಲಿ ಆದಾಯದ ಹೆಚ್ಚಳ ಶೇಕಡಾ 13ರಿಂದ 15ರವರೆಗೆ ಆಗಿತ್ತು. ಸ್ಥಳಿಕ ಪರಿಸ್ಥಿತಿಗಳಿಗನುಸರಿಸಿ ಸಹಾಯಕ ಉದ್ಯೋಗಗಳನ್ನೂ ಸದಸ್ಯರಿಗೆ ಒದಗಿಸಲಾಗುತ್ತಿತ್ತು. ಎರಡು ಮೂರು ಉತ್ಪಾದಕಸಂಘಗಳು ಕೂಡಿ ಅಲ್ಲಲ್ಲಿ ಒಂದು ಚಿಕ್ಕ ಅಕ್ಕಿಯ ಗಿರಣಿಯನ್ನು ನಡೆಸುತ್ತಿದ್ದವು.

(v) **ಸಾಮಾಜಿಕ ಕಲ್ಯಾಣ ಕಾರ್ಯ:** ಶೇಕಡಾ 2ರಷ್ಟು ಆದಾಯವನ್ನು ಉತ್ಪಾದಕರ ಸಹಕಾರ ಸಂಘಗಳು ಸಾಮಾಜಿಕ ಕಲ್ಯಾಣಕಾರ್ಯಗಳಿಗಾಗಿ ತೆಗೆದಿಡುತ್ತಿದ್ದವು. ಈ ಹಣವನ್ನು ಸಾಂಸ್ಕೃತಿಕ ಕಾರ್ಯಗಳಿಗಾಗಿ ಹಾಗೂ ಅಂಗವಿಕಲರಿಗೆ ಮತ್ತು ದುರ್ಬಲರಿಗೆ ಸಹಾಯ ಮಾಡಲು ಉಪಯೋಗಿಸಲಾಗುತ್ತಿತ್ತು. ಕೆಲವು ಉತ್ಪಾದಕರ ಸಹಕಾರಸಂಘಗಳು ಮಹಿಳೆಯರಿಗೆ ನಿಶ್ಚಿಂತರಾಗಿ ದುಡಿಯುವ ಅನುಕೂಲ ಮಾಡಿಕೊಡಲು ಶಿಶುವಿಹಾರಗಳನ್ನು ನಡೆಸುತ್ತಿದ್ದವು. ಲೀನಮೀನ ಸಹಕಾರ ಸಂಘದಲ್ಲಿ 729 ಬೇಸಾಯಗಾರ್ತಿಯರು ದುಡಿಯುತ್ತಿದ್ದರು. ಅವರ 111 ಶಿಶುಗಳ ಯೋಗಕ್ಷೇಮ ನೋಡಿಕೊಳ್ಳಲು ಆ ಸಂಘವು 14 ಶಿಶುವಿಹಾರಗಳನ್ನು ನಡೆಸಿತ್ತು. ನಿರಕ್ಷರತೆಯನ್ನು ಹೋಗಲಾಡಿಸಲು ಪ್ರೌಢಶಾಲೆಗಳನ್ನು ಬೇಸಾಯಸಂಘಗಳು ನಡೆಸಿದ್ದವು. ಔಷಧೋಪಚಾರದ ಸೌಲಭ್ಯವನ್ನು ಎಲ್ಲ ಉತ್ಪಾದಕರ ಸಂಘಗಳು ಒದಗಿಸಿದ್ದವು. ದೊಡ್ಡ ಸಹಕಾರಸಂಘಗಳು ನಾಟ್ಯಮಂದಿರಗಳನ್ನು ಸಹ ನಡೆಸಿದ್ದವು. ಬೇಸಾಯಸಂಘಗಳು ಇವೆಲ್ಲ ಸಾಮಾಜಿಕ ಚಟುವಟಿಕೆಗಳನ್ನು ತಮ್ಮ ಹೆಚ್ಚಿದ ಆದಾಯದಿಂದಲೇ ನಡೆಸುವುದು ಸಾಧ್ಯವಾಗುತ್ತದೆಂಬುದು ಸ್ಪಷ್ಟವಿದೆ.

(vi) **ಶ್ರಮಸಂಘಟನದ ಸಾಧನೆ:** ಉದಾರ ಸಾಲದ ಧೋರಣೆಯಿಂದ ಬಿಡುವಿನ ಸಮಯದಲ್ಲಿ ಹೇರಳವಾದ ಶ್ರಮಶಕ್ತಿಯನ್ನು ಸಂಘಟಿಸಿ ಅಭಿವೃದ್ಧಿಯ ಕಾರ್ಯಗಳನ್ನು ಕೈಕೊಳ್ಳಲು ಪ್ರೋತ್ಸಾಹಿಸಲಾಯಿತು. ಲಿಯಾನಿಂಗಪ್ರಾಂತ ಒಂದರಲ್ಲೇ ಈ ಧೋರಣೆಯಿಂದ ಒಂದೇ ಚಳಿಗಾಲದಲ್ಲಿ 3ಲಕ್ಷಬಾವಿಗಳನ್ನು ತೋಡಲಾಯಿತು; 10,000 ಚಿಕ್ಕಒಡ್ಡುಗಳನ್ನು ರಚಿಸಲಾಯಿತು; ಕಕ್ಕಸ ಗೊಬ್ಬರ ವನ್ನು ಸಂಗ್ರಹಿಸಲು 1ಲಕ್ಷಕಕ್ಕಸಗಳನ್ನು ಕಟ್ಟಿಸಲಾಯಿತು. ಈ ಬಾವಿಗಳಿಂದ ನೀರಾವರಿ ಸಾಗುವಳಿಯ ಕ್ಷೇತ್ರವು 1.9 ಲಕ್ಷ ಹೆಕ್ಟೇರದಿಂದ 3.9 ಲಕ್ಷ ಹೆಕ್ಟೇರ್‌ಗಳವರೆಗೆ ಏರಿತು. ಅಂದರೆ ಶೇಕಡಾ 100ರಷ್ಟು ಹೆಚ್ಚಳವಾಯಿತು. ಇಡಿಯ ದೇಶದಲ್ಲಿ ನೀರಾವರಿ ಸಾಗುವಳಿಯ ಕ್ಷೇತ್ರವು ಈ ಅವಧಿಯಲ್ಲಿ 160ಲಕ್ಷ ಎಕರೆಯಷ್ಟು ಹೆಚ್ಚಿತ್ತು. ಕಳೆದ 6 ವರ್ಷಗಳಲ್ಲಿ ಆದ ಪ್ರಗತಿ ಒಂದೇ ವರ್ಷದಲ್ಲಿ ಆಗಿತ್ತು.

ಚೀನದಲ್ಲಿ ಟ್ರಾಕ್ಟರುಗಳನ್ನು ಹಾಗೂ ಕೃಷಿಯ ದೊಡ್ಡಯಂತ್ರಗಳನ್ನು ಹೆಚ್ಚು ಬಳಸುತ್ತಿರಲಿಲ್ಲ. ಆದ್ದರಿಂದ ಇದ್ದ ಚಿಕ್ಕ ಸಲಕರಣೆಗಳನ್ನೇ ಸುಧಾರಿಸಲಾಗಿತ್ತು. ನೀರಾವರಿ ಹಾಗೂ ಭೂಸುಧಾರಣೆಯಿಂದ ಚೀನದಲ್ಲಿ ಬೇಸಾಯದ ಸುಧಾರಣೆಯು ಭರದೀದ ನಡೆಯಿತು. ಉತ್ಪಾದಕರ ಸಹಕಾರಸಂಘಗಳು ಉತ್ಪತ್ತಿಯನ್ನು ಸಾಕಷ್ಟು ಹೆಚ್ಚಿಸಿದವು. ಕ್ರಾಂತಿಯ ಮೊದಲು ಚೀನವು 20 ಲಕ್ಷ ಟನ್ ಆಹಾರ ಧಾನ್ಯಗಳನ್ನು ಪರದೇಶಗಳಿಂದ ಆಮದು ಮಾಡುತ್ತಿತ್ತು. ಉತ್ಪಾದಕರ ಸಹಕಾರಸಂಘಗಳ ಆಂದೋಲನದನಂತರ ಅದು ಉತ್ಪತ್ತಿಯ ಕೊರತೆಯನ್ನು ತುಂಬಿ ಸ್ವಲ್ಪ ಆಹಾರ ಧಾನ್ಯಗಳನ್ನು ನಿರ್ಯಾತ ಮಾಡಿತು.

ಬೇಸಾಯಗಾರರಲ್ಲಿ ಉತ್ಸಾಹ, ತೃಪ್ತಿಗಳು ತುಂಬಿದ್ದವು. ಅವರು ಮೊದಲಿ ಗಿಂತ ಉತ್ತಮಸ್ಥಿತಿಯಲ್ಲಿರುವರೆಂದು ಹೇಳಿ ತಮ್ಮ ಉಣ್ಣೆಯ ಬಟ್ಟೆ, ಹೊಸ ಸಾಮಾನುಗಳನ್ನು ತೋರಿಸುತ್ತಿದ್ದರು. ಬಲಾತ್ಕಾರದಿಂದ ಬೇಸಾಯವನ್ನು ಅಥವಾ ಜೀವನವನ್ನು ನಡೆಸುತ್ತಿರುವ ಲಕ್ಷಣಗಳು ಕಾಣುತ್ತಿರಲಿಲ್ಲ.

ಚೀನೀ ಬೇಸಾಯಸಂಘಗಳ ಯಶಸ್ಸಿನ ಕಾರಣಗಳು

ಸುಮಾರು 5 ವರ್ಷಗಳ ಅವಧಿಯಲ್ಲಿ ಚೀನಾ ದೇಶದ ತುಂಬ ಬೇಸಾಯದ ಉತ್ಪಾದಕರ ಸಹಕಾರ ಸಂಘಗಳನ್ನು ಹಬ್ಬಿಸಿ ಬೇಸಾಯವನ್ನು ಸಮಾಜವಾದಿ ತತ್ವಗಳ ತಳಹದಿಯ ಮೇಲೆ ಪುನಃಸಂಘಟಿಸಿ, ಬೇಸಾಯದ ಉತ್ಪತ್ತಿಯನ್ನು ಸಾಕಷ್ಟು ಹೆಚ್ಚಿಸಿದ ಸಾಧನೆ ಎಲ್ಲರಿಗೂ ಚಮತ್ಕಾರವಾಗಿಯೇ ತೋರಿತು. ಇಂಥ ಅದ್ಭುತ ಸಾಧನೆಯ ಕಾರಣಗಳನ್ನು ವಿಶ್ಲೇಷಿಸುವುದು ಸೂಕ್ತ.

(i) **ಭೂಸುಧಾರಣೆಗಳು :** ಚೀನದ ಗ್ರಾಮಾಂತರದಲ್ಲಿ ಆಮೂಲಾಗ್ರ ಬದ ಲಾವಣೆ ಮಾಡಿದ ಭೂಸುಧಾರಣೆಗಳ ಕಾನೂನು ಬೇಸಾಯಗಾರ ಜನತೆಯ ಮೇಲೆ ಮಹತ್ವದ ಪ್ರಭಾವ ಬೀರಿತು. ಕಾನೂನನ್ನು ಬಹಳ ತ್ವರಿತವಾಗಿ ಅನುಷ್ಠಾನಕ್ಕೆ

ತರಲಾಯಿತು. ಇದರಿಂದ ಬೇಸಾಯಗಾರ ಜನತೆಯಲ್ಲಿ ಸಾಮ್ಯವಾದಿ ಸರಕಾರದ ಮುಂದಿನ ಕಾರ್ಯಕ್ರಮದಲ್ಲಿ ಅಂದರೆ ಉತ್ಪಾದಕರ ಸಹಕಾರಸಂಘಗಳ ಕಾರ್ಯಕ್ರಮ ದಲ್ಲಿ ವಿಶ್ವಾಸ, ಉತ್ಸಾಹ, ಬೆಳೆದವು. ಈ ಕಾರ್ಯಕ್ರಮವನ್ನು ಕಾರ್ಯಗತ ಮಾಡುವ ಸಾಮ್ಯವಾದಿ ಪಕ್ಷದಲ್ಲಿ, ಅದರ ಮುಂದಾಳುಗಳಲ್ಲಿ ಬೇಸಾಯಗಾರ ಜನತೆಯ ವಿಶ್ವಾಸ ಬೆಳೆಯಿತು. ಸಹಕಾರಿ ಬೇಸಾಯದ ಕಾರ್ಯಕ್ರಮಕ್ಕೆ ಇದರಿಂದ ಬಹಳ ಅನುಕೂಲ ವಾತಾವರಣವು ಬೆಳೆಯಿತು.

ಭೂ ಸುಧಾರಣೆಯ ಮೊದಲು ಶೇಕಡಾ 10ರಷ್ಟು ಜಾಗೀರದಾರರ ವಶದಲ್ಲಿ ಶೇಕಡಾ 53ರಷ್ಟು ಉತ್ತಮವಾದ ಸಾಗುವಳಿ ಭೂಮಿ ಇತ್ತು. ಶೇಕಡಾ 90ರಷ್ಟು ಬಡ ಹಾಗೂ ಮಧ್ಯಮ ತರಗತಿಯ ಬೇಸಾಯಗಾರರ ವಶದಲ್ಲಿ ಶೇಕಡಾ 41ರಷ್ಟು ಬಡಕಲು ಸಾಗುವಳಿ ಭೂಮಿ ಇತ್ತು. ಬೇಸಾಯದಲ್ಲಿ ದುಡಿಯದ ಜಮೀನುದಾರ ರಿಂದ ಒಟ್ಟು ಸಾಗಾದ 27.5 ಕೋಟಿ ಎಕರೆ ಭೂಮಿಯಲ್ಲಿ ಸುಮಾರು 11.8 ಕೋಟಿ ಎಕರೆ ಭೂಮಿಯನ್ನು ಕಸಿದುಕೊಂಡು 30 ಕೋಟಿ ಬಡಬೇಸಾಯಗಾರರಲ್ಲಿ ಉಚಿತವಾಗಿ ಹಂಚಲಾಯಿತು. ಸರಾಸರಿ ಪಾರಿವಾರಿಕ ಹಿಡುವಳಿಯ ಎರಡು ಪಟ್ಟಿಗಿಂತ ಹೆಚ್ಚಿನ ಭೂಮಿ ಯಾರ ವಶದಲ್ಲೂ ಉಳಿಯಲಿಲ್ಲ. ಇದಲ್ಲದೆ ಜಮೀನುದಾರರಿಂದ ಕಿತ್ತು ಕೊಂಡ 3.8 ಕೋಟಿ ಮನೆಗಳನ್ನು, 3 ಕೋಟಿ ಹೂಡುವ ದನಗಳನ್ನು, 3.9 ಕೋಟಿ ಬೇಸಾಯ ಸಲಕರಣೆಗಳನ್ನು ಸಹ ಮತ್ತು 50 ಲಕ್ಷ ಟನ್ ಆಹಾರ ಧಾನ್ಯಗಳನ್ನು ಬೇಸಾಯಗಾರರಲ್ಲಿ ಹಂಚಲಾಯಿತು.

ಭೂಸುಧಾರಣೆಯ ಕಾನೂನನ್ನು ಬೇಸಾಯಗಾರರ ಸಂಸ್ಥೆಗಳ ಮುಖಾಂತರ ಕಾರ್ಯಗತ ಮಾಡಲಾಯಿತು. ಎಲ್ಲಮಟ್ಟದಲ್ಲೂ ಈ ಸಂಸ್ಥೆಗಳನ್ನು ಸ್ಥಾಪಿಸ ಲಾಗಿತ್ತು. ಜಮೀನುದಾರರ. ಬೇಸಾಯಗಾರರ ವರ್ಗಗಳನ್ನು ಬೇಸಾಯಗಾರರ ಸಂಸ್ಥೆಗಳೇ ನಿರ್ಧರಿಸಿದವು. ಅವುಗಳೇ ಭೂಮಿಯ ಸರಿಯಾದ ವಿತರಣೆಯನ್ನು ಮಾಡಿದವು. ಅವುಗಳ ನಿರ್ಣಯಗಳಿಗೆ ಸಾಮ್ಯವಾದಿ ಸರಕಾರವು ಮನ್ನಣೆಕೊಟ್ಟಿತು. ಈ ವ್ಯವಸ್ಥೆಯಿಂದ ಬೇಸಾಯಗಾರರನ್ನು ಸಂಘಟಿಸಿ, ಅವರಲ್ಲಿ ರಾಜಕೀಯ ಜಾಗ್ರತಿ ಯನ್ನು ಹೆಚ್ಚಿಸಿ ಭೂ ಸುಧಾರಣೆಯ ಅನುಷ್ಠಾನದಲ್ಲಿ ಅವರನ್ನು ಸಕ್ರಿಯವಾಗಿ ಭಾಗವಹಿಸುವಂತೆ ಮಾಡಲಾಯಿತು. ಅದರಿಂದ ಚೀನದ ಸಾಮ್ಯವಾದಿ ಸರಕಾರ ಹಾಗೂ ಪಕ್ಷಗಳ ಮತ್ತು ಬೇಸಾಯಗಾರ ಜನತೆಯ ಘನಿಷ್ಟ ಸಂಪರ್ಕವು ಇನ್ನೂ ಹೆಚ್ಚು ಅನ್ಯೋನ್ಯವಾಯಿತು. ಈ ಜನಸಂಪರ್ಕವು ಹಾಗೂ ಜನತೆಯ ವಿಶ್ವಾಸವು ಸಾಮೂಹಿಕ ಬೇಸಾಯದ ಮುಖಾಂತರ ಬೇಸಾಯದ ಸಮಾಜವಾದಿ ಪರಿವರ್ತನೆಗೆ ಪರಿಣಾಮಕಾರಿ ಅಸ್ತ್ರವಾಯಿತು.

(ii) **ಕ್ರಮಿಕ ಕಾರ್ಯಾಚರಣೆ:** ಬೇಸಾಯಗಾರ ಜನತೆಯ ಮೇಲೆ ಒಮ್ಮೆಲೇ ಒತ್ತಾಯದಿಂದ ಸಾಮೂಹಿಕ ಬೇಸಾಯವನ್ನು ಹೇರಿ ಅವರ ಅಸಂತೋಷ, ಅವಿಶ್ವಾಸ ಗಳನ್ನು ಸಂಪಾದಿಸುವುದು ಸಾಮ್ಯವಾದಿ ಪಕ್ಷಕ್ಕೆ ಇಷ್ಟವಿರಲಿಲ್ಲ. ಅದರಿಂದ ತಾನು

ನಿಂತ ಆಧಾರದ ಗಿಡದ ಬುಡವನ್ನು ತಾನೇ ಕಡಿದುಕೊಂಡಂತಾಗುತ್ತಿತ್ತು. ಜನತೆಯ ಬೆಂಬಲ ಕಳಕೊಂಡರೆ ಅದು ದುರ್ಬಲವಾಗುತ್ತಿತ್ತು. ಆದ್ದರಿಂದ ಕ್ರಮೇಣವಾಗಿ ಬೇಸಾಯಗಾರ ಜನತೆಯಲ್ಲಿ ಸಮಾಜವಾದಿ ಜಾಗೃತಿಯನ್ನು ಹೆಚ್ಚಿಸಿ, ಸಾಮೂಹಿಕ ಬೇಸಾಯಕ್ಕೆ ಅನುಕೂಲವಾದ ವಾತಾವರಣವನ್ನು ಬೆಳೆಸಲು ಚೀನಾದಲ್ಲಿ ಪ್ರಾರಂಭದಲ್ಲಿ ಭೂ ಸುಧಾರಣೆ ಜಾರಿಗೆ ಬಂದೊಡನೆ ಎಲ್ಲೆಡೆಗೂ 'ಪರಸ್ಪರ ಸಹಾಯ ಸಂಘ'ಗಳನ್ನು ಸ್ಥಾಪಿಸಲಾಯಿತು. 1954ರವರೆಗೆ ಶೇಕಡಾ 60ರಷ್ಟು ಬೇಸಾಯಗಾರರ ಪರಿವಾರಗಳು ಪರಸ್ಪರ ಸಹಾಯಕಸಂಘಗಳಲ್ಲಿ ಸೇರಿದ್ದವು. ಪರಸ್ಪರ ಸಹಾಯಕಸಂಘದಲ್ಲಿ ವೈಯಕ್ತಿಕ ಸಾಗುವಳಿಯನ್ನೇ ನಡೆಸುತ್ತಿದ್ದ ಬೇಸಾಯಗಾರರು ತಾತ್ಕಾಲಿಕವಾಗಿ, ಬೇಸಾಯಕೆಲಸಗಳನ್ನು ಚೆನ್ನಾಗಿ. ಬೇಗ ಮುಗಿಸಲು, ನಿರ್ದಿಷ್ಟ ಕೆಲಸದಲ್ಲಿ ಮಾತ್ರ ಮುಖ್ಯ ಮಾಡಲು ಅಥವಾ ಶ್ರಮದ ಆದಾನ ಪ್ರಧಾನಮಾಡಲು ಒಂದುಗೂಡಿ ದುಡಿಯುತ್ತಿದ್ದರು.

ಇದೇ ಕಾಲಕ್ಕೆ ಸಾಮ್ಯವಾದಿ ಪಕ್ಷದ ಉತ್ಸಾಹಿ ತರುಣ ಕಾರ್ಯಕರ್ತರು ಚಿಕ್ಕಚಿಕ್ಕ 15–20 ಸದಸ್ಯರ ಬೇಸಾಯದ ಉತ್ಪಾದಕರ ಸಹಕಾರಸಂಘಗಳನ್ನು ಪ್ರಾತ್ಯಕ್ಷಿಕೆಗಾಗಿ ಸಂಘಟಿಸಿದರು. ಒಂದು ಗ್ರಾಮದಲ್ಲಿ ಅನೇಕ ಸಂಘಗಳಿರುತ್ತಿದ್ದವು. ಈ ಸಂಘಗಳಲ್ಲಿ ಶೇಕಡಾ 40–45ರಷ್ಟು ಆದಾಯವನ್ನು ಭೂಮಿಯ ಪ್ರತಿಫಲವನ್ನಾಗಿ ಕೊಡಲಾಗುತ್ತಿತ್ತು. ಮುಂದೆ 1955ರಲ್ಲಿ ಪೂರ್ಣರೂಪದ ಸಾಮುದಾಯಕ ಬೇಸಾಯಸಂಘಗಳು ಅಂದರೆ ಮುಂದುವರಿದ ಬೇಸಾಯದ ಉತ್ಪಾದಕರ ಸಹಕಾರ ಸಂಘಗಳನ್ನು ಸಂಘಟಿಸಲಾಯಿತು. ಇವುಗಳಲ್ಲಿ ಭೂಮಿಯು ಬೇಸಾಯ ಸಾಮೂಹಿಕ ಸೊತ್ತಾಗಿದ್ದದರಿಂದ ಒಡೆತನದ ಪ್ರತಿಫಲವನ್ನು ಏನನ್ನೂ ಕೊಡಲಾಗುತ್ತಿರಲಿಲ್ಲ. ದುಡಿತದ ಮೇಲೆಯೇ ಆದಾಯವನ್ನು ಹಂಚಲಾಗುತ್ತಿತ್ತು. ಹೀಗೆ ಉತ್ಪಾದಕರ ಸಂಘಗಳು ಕ್ರಮಿಕವಾಗಿ ವಿಕಾಸಗೊಂಡವು. ಆದರಂತೆಯೇ ಪ್ರಾರಂಭದಲ್ಲಿ ಇಂಥ ಬೇಸಾಯಸಂಘಗಳಲ್ಲಿ ಕೇವಲ ಬಡಬೇಸಾಯಗಾರರನ್ನು ಸೇರಿಸಲಾಗುತ್ತಿತ್ತು. ಬೇಸಾಯಸಂಘಗಳು ಭದ್ರವಾದಂತೆ ಮಧ್ಯಮ ತರಗತಿಯ ಬೇಸಾಯಗಾರರನ್ನು ಮತ್ತು ಅನಂತರ ಹಿಂದಿನ ಜಮೀನುದಾರರನ್ನು ಮತ್ತು ಶ್ರೀಮಂತ ಬೇಸಾಯಗಾರರನ್ನು ಅವುಗಳಲ್ಲಿ ಸೇರಿಸಿಕೊಳ್ಳಲಾಯಿತು. ಹೀಗೆ ಕ್ರಮಿಕ ವಿಕಾಸ ಮತ್ತು ಸ್ವಸಂತೋಷದ ತತ್ವಗಳ ತಳಹದಿಯ ಮೇಲೆಯೇ ಉತ್ಪಾದಕರ ಸಹಕಾರಸಂಘಗಳ ಬೆಳವಣಿಗೆಯಾಯಿತು.

(iii) **ತಾಂತ್ರಿಕ ಹಾಗೂ ಸಹಕಾರಿ ಆಡಳಿತ:** ಚೀನದ ಉತ್ಪಾದಕರ ಸಹಕಾರಿ ಸಂಘಗಳಲ್ಲಿ ಸರಿಯಾದ ಶ್ರಮಸಂಘಟನವು ಮತ್ತೊಂದು ಮಹತ್ವದ ವೈಶಿಷ್ಟ್ಯ. ಇಂಥ ಶ್ರಮಸಂಘಟನದಲ್ಲಿ ದಳದುಡಿತ (ಟೀಮ್ ವರ್ಕ್), ದುಡಿತದಶಿಸ್ತು (ವರ್ಕ್ ಡಿಸಿಪ್ಲೀನ್) ಹಾಗೂ ದುಡಿತಕ್ಕೆ ಉತ್ತೇಜನ (ಲೇಬರ್ ಇನ್‌ಸೆಂಟೀವ್) ಮತ್ತು ಉತ್ಪಾದನೆಯ ಯೋಜನೆ ಹಾಗೂ ಕಾರ್ಯಕ್ರಮಗಳು. ಇವೆಲ್ಲವುಗಳ ಸಮರ್ಪಕವಾದ ವ್ಯವಸ್ಥೆ ಮಾಡಲಾಯಿತು. ಈ ವ್ಯವಸ್ಥೆಯು ಉತ್ಪಾದಕರ ಸಹಕಾರಸಂಘಗಳ

ಯಶಸ್ಸಿಗೆ ಬಹಳ ಸಹಾಯಕವಾಯಿತು. ದುಡಿಯುವ ಸದಸ್ಯರೆಲ್ಲರ ಸೂಕ್ತವಾದ ಶ್ರಮದಳಗಳನ್ನು (ವರ್ಕ್ ಟೀಮ್ಸ್) ಮತ್ತು ಅದಕ್ಕೂ ಚಿಕ್ಕವಾದ ಉತ್ಪಾದಕ ಗುಂಪು (ಪ್ರೊಡಕ್ಷನ್ ಗ್ರೂಪ್ಸ್)ಗಳನ್ನು ಸಂಘಟಿಸಲಾಗಿತ್ತು. ಅವುಗಳಲ್ಲಿ ಸದಸ್ಯರಿಂದಲೇ ಆಯ್ಕೆಯಾದ ದಳನಾಯಕರಿರುತ್ತಿದ್ದರು. ಪ್ರತಿಯೊಂದು ಉತ್ಪಾದಕರ ಸಂಘದಲ್ಲಿ ಸದಸ್ಯರಿಂದ ಜನತಾಂತ್ರಿಕವಾಗಿ ಆಯ್ಕೆಯಾದ ವ್ಯವಸ್ಥಾಪಕ ಸಮಿತಿ ಹಾಗೂ ಮೇಲ್ವಿಚಾರಕ ಸಮಿತಿ ಇರುತ್ತಿದ್ದವು. ಯೋಗ್ಯತೆಗನುಸರಿಸಿ ಕೆಲಸವನ್ನು ವಹಿಸಲಾಗುತ್ತಿತ್ತು. ಕೆಲಸದ ಪ್ರಕಾರ ದುಡಿತದ ಪ್ರತಿಫಲ ಕೊಡುವ ವ್ಯವಸ್ಥೆ ಬಹಳ ಪರಿಣಾಮಕಾರಿಯಾಗಿತ್ತು. ಕೆಲಸದ ಅಳತೆಗಳನ್ನು (ವರ್ಕ್‌ನಾರ್ಮ್ಸ್) ಮತ್ತು ಅವುಗಳಿಗೆ ದರಗಳನ್ನು ಸರಿಯಾಗಿ ಯೋಜಿಸಲಾಗಿತ್ತು. ಈ ವ್ಯವಸ್ಥೆಯಿಂದ ದುಡಿತಕ್ಕೆ ಸಮರ್ಪಕವಾದ ಉತ್ತೇಜನಗಳಾಗಿದ್ದವು. ಸರಕಾರವು ಪ್ರತಿಯೊಂದು ಪ್ರದೇಶದಲ್ಲಿ ಸ್ಥಾಪಿಸಿದ್ದ ತಜ್ಞರ 'ತಾಂತ್ರಿಕ ಪ್ರಚಾರದ ಕೇಂದ್ರಗಳು' ಪ್ರತಿಯೊಂದು ಉತ್ಪಾದಕರ ಸಂಘಕ್ಕೂ ಸಕಾಲದಲ್ಲಿ ಉತ್ಪಾದನೆಯ ಯೋಜನೆಯನ್ನು ತಯಾರಿಸಿ ಕೊಟ್ಟು ತಕ್ಕ ತಾಂತ್ರಿಕ ಮಾರ್ಗದರ್ಶನ ಮಾಡಿದವು. ಬೀಜ, ಗೊಬ್ಬರ ಮುಂತಾದ ಬೇಸಾಯದ ಅವಶ್ಯಕತೆಗಳನ್ನು ಸಕಾಲದಲ್ಲಿ, ಸಾಕಷ್ಟು, ಉತ್ಪಾದಕರ ಸಂಘಗಳಿಗೆ ಪೂರೈಕೆ ಮಾಡಲಾಗುತ್ತಿತ್ತು. ಅವುಗಳ ಮುಖ್ಯ ಹುಟ್ಟುವಳಿಗಳ ಮಾರಾಟದ ನಿಶ್ಚಿತ ವ್ಯವಸ್ಥೆಯು ಸರಕಾರದಿಂದಲೇ ಆಗುತ್ತಿತ್ತು. ಅದಕ್ಕೆ ಮೊದಲೇ ಜಾಹೀರುಪಡಿಸಿದ ಯೋಗ್ಯ ನಿಶ್ಚಿತ ಬೆಲೆಗಳು ದೊರಕುತ್ತಿದ್ದುವು.

(iv) **ಬೇಸಾಯ ಹುಟ್ಟುವಳಿಯ ಖರೀದಿ:** ಚೀನದ ಸಾಮ್ಯವಾದಿ ಪಕ್ಷವು ಬೇಸಾಯಗಾರ ಜನತೆಯಲ್ಲಿ ಬೆರೆತು ಬೇಸಾಯಗಾರರ ಅನ್ಯೋನ್ಯ ವಿಶ್ವಾಸವನ್ನು ಸಂಪಾದಿಸಿತು. ಚಿಯಾಂಗ್‌ಕೈಶೇಕನ ಆಡಳಿತದಲ್ಲಿ ಹಣದುಬ್ಬರವು ಮಿತಿ ಮೀರಿ ಹೆಚ್ಚಿ, ಹುಟ್ಟುವಳಿಯ ಬೆಲೆಗಳ ಏರಿಳಿತಕ್ಕೆ ಮಿತಿಯೇ ಇರಲಿಲ್ಲ. ಸಾಮ್ಯವಾದಿ ಸರಕಾರದ ಸ್ಥಾಪನೆಯಾದ ಕೂಡಲೇ ಬೇಸಾಯದ ಹುಟ್ಟುವಳಿಗೆ ನಿಶ್ಚಿತ ಬೆಲೆಗಳ ವ್ಯವಸ್ಥೆಯಾಯಿತು. ಜೊತೆಯಲ್ಲಿಯೇ ಬೇಸಾಯಗಾರರು ಕೊಳ್ಳುತ್ತಿದ್ದ ದಿನನಿತ್ಯದ ಸರಕುಗಳನ್ನು ಯೋಗ್ಯಬೆಲೆಗೆ ಅವರಿಗೆ ಪೂರೈಸುವ ಸಮರ್ಪಕವಾದ ವ್ಯವಸ್ಥೆಯಾಯಿತು. ಈ ಸುಧಾರಣೆಗಳಿಂದ ಬೇಸಾಯಗಾರ ಜನತೆಯಲ್ಲಿ ಸಾಮ್ಯವಾದಿ ಪಕ್ಷದ ಬಗ್ಗೆ, ಸಾಮ್ಯವಾದಿ ಕಾರ್ಯಕರ್ತರ ಬಗ್ಗೆ ಹಾಗೂ ಸಾಮ್ಯವಾದಿ ಸರಕಾರದ ಬಗ್ಗೆ ನಿಸ್ಸೀಮ ಭಕ್ತಿ ಬೆಳೆದಿತ್ತು. ಅದರಿಂದ ಸಾಮ್ಯವಾದಿ ಪಕ್ಷ ಹಾಗೂ ಸರಕಾರ ಹಾಕಿಕೊಟ್ಟ ಪ್ರತಿಯೊಂದು ಕಾರ್ಯಕ್ರಮವನ್ನು ಬೇಸಾಯಗಾರರು ಶ್ರದ್ಧೆಯಿಂದ ಅನುಷ್ಠಾನಕ್ಕೆ ತರುತ್ತಿದ್ದರು. ಅವರಲ್ಲಿ ಉತ್ಸಾಹ ತುಂಬಿ, ಹೆಜ್ಜೆಹೆಜ್ಜೆಗೆ ಮಾರ್ಗದರ್ಶನ ಮಾಡಲು ಪ್ರತಿಯೊಂದು ಉತ್ಪಾದಕರ ಸಂಘದಲ್ಲೂ ಸಾಮ್ಯವಾದಿ ಆದರ್ಶ ತತ್ವಗಳಿಂದ ತುಂಬಿದ ಸಕ್ರಿಯ ಕಾರ್ಯಕರ್ತರಿದ್ದರು. ಇವರೆಲ್ಲರೂ ಅಲ್ಲಿಯೇ ಹುಟ್ಟಿಬೆಳೆದ ಬೇಸಾಯಗಾರರ ಮಕ್ಕಳೇ ಆಗಿದ್ದರು; ಬೇಸಾಯದಲ್ಲಿ ದುಡಿಯುತ್ತಿರುವವರೇ ಆಗಿದ್ದರು. ಸಾಮ್ಯವಾದಿ ಪಕ್ಷವು ಅವರನ್ನು ಪಕ್ಷದಲ್ಲಿ ಸದಸ್ಯರನ್ನಾಗಿ ಸೇರಿಸಿಕೊಂಡು ಅವರಿಗೆ ತಾತ್ವಿಕ ಹಾಗೂ ತಾಂತ್ರಿಕ ಶಿಕ್ಷಣವನ್ನು ಕೊಟ್ಟು ಸಕ್ರಿಯ ಕಾರ್ಯಕರ್ತರನ್ನಾಗಿ

ಮಾಡಿತ್ತು. ಇಂಥ ಕಾರ್ಯಕರ್ತರು ತಮ್ಮ ಕಠೋರ ದುಡಿತ, ಅಪ್ರತಿಮ ತ್ಯಾಗ, ಸಾಹಸಗಳಿಂದ ಹಾಗೂ ತತ್ವನಿಷ್ಠೆಯಿಂದ ಬೇಸಾಯಗಾರರಲ್ಲಿ ಬೆರೆತು ಅವರ ಮೇಲೆ ಬಹಳ ಪ್ರಭಾವ ಬೀರುತ್ತಿದ್ದರು. ಉತ್ಪಾದಕರ ಸಂಘಗಳಿಗೆ ಇಂಥ ಉಚ್ಚತರಗತಿಯ ನಾಯಕರು ದೊರಕಿದ್ದರು. ಅವರೇ ಬೇಸಾಯಗಾರರಲ್ಲಿ ಸಹಕಾರಿಬೇಸಾಯದ ಬಗ್ಗೆ ನಿಷ್ಠೆಯನ್ನು ಬೆಳೆಸಿ, ಅವರನ್ನು ಉತ್ಪಾದಕರ ಸಂಘಗಳಲ್ಲಿ ಸಂಘಟಿಸಿ ಅವರಿಗೆ ಸತತವಾಗಿ ಮಾರ್ಗದರ್ಶನ ಮಾಡುತ್ತಿದ್ದರು. ಈ ಕಾರ್ಯಕರ್ತರು ಬೇಸಾಯ ಗಾರರಿಗೆ ಹುಕುಂಕೊಡುವ 'ಬಡಾಸಾಹೇಬರು' ಆಗಿರದೆ. ಅವರ ಸ್ನೇಹಿತರು. ತತ್ವ ದರ್ಶಕರು ಹಾಗೂ ಮಾರ್ಗದರ್ಶಕರು ಆಗಿರುತ್ತಿದ್ದರು. ಉತ್ಪಾದಕರ ಸಹಕಾರ ಸಂಘಗಳ ಸಂಘಟನದಲ್ಲಿ ಸರಕಾರಿ ಅಧಿಕಾರಿಗಳ ಪಾತ್ರವು ಗೌಣವಾಗಿತ್ತು.

(v) ಆರೋಪ ಸಭೆಗಳು (ಅಕ್ಯುಸೇಶನ್ ಮೀಟಿಂಗ್ಸ್) : ಗ್ರಾಮಗಳಲ್ಲಿ ಸಾರ್ವಜನಿಕ ಸಭೆಗಳನ್ನು ಏರ್ಪಡಿಸಿ ಜಮೀನುದಾರರ ಮೇಲಿನ ಘೋರ ಆರೋಪಗಳ ವಿಚಾರಣೆಯಾಗಿ ಅವರ ಕ್ರೂರ ಅಪರಾಧಗಳಿಗಾಗಿ ಅವರಿಗೆ ಕಠೋರ ಶಿಕ್ಷೆಯನ್ನು ವಿಧಿಸಲಾಯಿತು. ಇಂಥ ಹಿಂಸಾಚಾರದಿಂದ ಭಯಭೀತರಾಗಿ ಬೇಸಾಯಗಾರರು ತಂಡೋಪತಂಡವಾಗಿ ಉತ್ಪಾದಕರ ಸಹಕಾರಸಂಘಗಳಲ್ಲಿ ಸೇರಿದರೆಂದು ಒಂದು ಸಂದೇಹ. ಚೀನದಲ್ಲಿ ಜಮೀನುದಾರರು ತಮ್ಮ ಶ್ರೀಮಂತಿಕೆ. ದರ್ಪ. ಅಧಿಕಾರಿಗಳ ದುರುಪಯೋಗ ಮಾಡಿ ಬೇಸಾಯಗಾರರ ಮೇಲೆ ರಾಕ್ಷಸೀ ದಬ್ಬಾಳಿಕೆ ಮಾಡಿದ್ದರು. ಈ ದಬ್ಬಾಳಿಕೆಯಿಂದ ಬೇಸಾಯಗಾರರು ಆತಂಕಗೊಂಡು ತಲೆ ಮೇಲೆತ್ತುತ್ತಿರಲಿಲ್ಲ; ಯಾವ ರಾಜಕೀಯ ಹಾಗೂ ವಿಧಾಯಕ ಚಟುವಟಿಕೆಯಲ್ಲೂ ಅವರು ಭಯದಿಂದ ಮುಂದೆ ಹೆಜ್ಜೆ ಇಡುತ್ತಿರಲಿಲ್ಲ. ಬೇಸಾಯಗಾರರು ಹಾಗೆಯೇ ನಿಃಸತ್ವರಾಗಿದ್ದರೆ ಅಲ್ಲಿ ಯಾವ ರಾಜಕೀಯ ಅಥವಾ ಆರ್ಥಿಕ ಪುನರ್ರಚನೆಯೂ ಸಾಧ್ಯವಾಗುತ್ತಿರಲಿಲ್ಲ. ಬೇಸಾಯಗಾರ ಜನತೆಯಲ್ಲಿಯ ಈ ದಬ್ಬಾಳಿಕೆಯ ಆತಂಕವನ್ನು ದೂರಮಾಡಿ. ಜಾಗೃತಿ, ಉತ್ಸಾಹಗಳನ್ನು ಬೆಳೆಸಿ. ರಾಷ್ಟ್ರದ ಆರ್ಥಿಕನಿರ್ಮಾಣದಲ್ಲಿ ಅವರನ್ನು ಎಳೆಯಬೇಕಾಗಿತ್ತು. ಅಂತೆಯೇ ಉದ್ದೇಶಪೂರ್ವಕವಾಗಿ ಸಾಮ್ಯವಾದಿಗಳು ಗ್ರಾಮ ದಲ್ಲಿಯೇ 'ಜನತಾ ನ್ಯಾಯಾಲಯವನ್ನು ಏರ್ಪಡಿಸಿ. ಜಮೀನುದಾರರ ಆರೋಪಗಳ ವಿಚಾರಣೆ ನಡೆಸಿ ಅವರಿಗೆ ಕಠೋರ ದಂಡವನ್ನು ವಿಧಿಸಿದರು. ಇಂಥ ನ್ಯಾಯ ವಿಚಾರಣೆ ಹಾಗೂ ದಂಡವಿಧಾನದಿಂದ ಜಮೀನುದಾರರ ದಬ್ಬಾಳಿಕೆಯ ಬಗ್ಗೆ ಬೇಸಾಯಗಾರರಿಗೆ ನಿರಂತರವಾಗಿ ನೆಲೆಸಿದ್ದ ಆತಂಕವು ದೂರವಾಯಿತಷ್ಟೇ. ಅದರಿಂದ ಅವರಲ್ಲಿ ಆತಂಕ, ಭೀತಿ ಬೆಳೆದುವೆಂಬುದು ಕಲ್ಪನೆ ಮಾತ್ರ. ಏಕೆಂದರೆ ಇಂಥ ನ್ಯಾಯ ವಿಚಾರಣೆಯಲ್ಲಿ ಬಡಬೇಸಾಯಗಾರರು ಆರೋಪಿಗಳು ಅಥವಾ ದಂಡ ಪಾತ್ರರಿರಲಿಲ್ಲ; ದಬ್ಬಾಳಿಕೆ ಮಾಡಿದ ಜಮೀನುದಾರರ ನ್ಯಾಯ ವಿಚಾರಣೆಯಲ್ಲಿ ಬಡಬೇಸಾಯಗಾರರೇ ಆರೋಪ ಹೊರಿಸುವ, ವಿಚಾರಣೆ ನಡೆಸುವ ಹಾಗೂ ದಂಡ ವಿಧಿಸುವ ನ್ಯಾಯಾಧೀಶರಾಗುತ್ತಿದ್ದರು. 30 ಕೋಟಿ ಬಡಬೇಸಾಯಗಾರರ ಬೆಂಬಲ ದಿಂದಲೇ ಚೀನದ ಸಾಮ್ಯವಾದಿ ಪಕ್ಷವು ಅಲ್ಪಸಂಖ್ಯಾತ ಜಮೀನುದಾರರ ಮರ್ಧನ ಮಾಡಿತು. ಅದು 30 ಕೋಟಿ ಬೇಸಾಯಗಾರರನ್ನು ಬಂದೂಕಿನ ಬಲದಿಂದ

ಬೇಸಾಯಸಂಘಗಳಲ್ಲಿ ಸೇರಿಸಲೆತ್ನಿಸಿದರೆ ಅದರ ಅಸ್ತಿತ್ವವೇ ಲೋಪವಾಗುತ್ತಿತ್ತು. ಬೇಸಾಯಗಾರರಲ್ಲಿ ಬಂದೂಕದ ಬಲದಿಂದ ಭೀತಿ ತುಂಬಿ ಸಹಕಾರಿಬೇಸಾಯ ಬೆಳೆಸುವುದಿದ್ದರೆ 1949–50ರಲ್ಲಿಯೇ ಅದು ಸಹಕಾರಿಬೇಸಾಯದ ಆಂದೋಲನ ವನ್ನು ಪ್ರಾರಂಭಿಸಬಹುದಿತ್ತು. 5–6 ವರ್ಷ ಬೇಸಾಯಗಾರರಲ್ಲಿ ಪ್ರಚಾರ, ಜಾಗೃತಿ ಬೆಳೆಸುವ ಪ್ರಯಾಸ ಅದು ಮಾಡಬೇಕಾಗಿರಲಿಲ್ಲ ಮತ್ತು ಪರಸ್ಪರ ಸಹಾಯಕ ಸಂಘ. ಪ್ರಾಥಮಿಕ ಉತ್ಪಾದಕರ ಸಹಕಾರ ಸಂಘಗಳ ಕ್ರಮಿಕ-ವಿಕಾಸಗಳ ಸೋಪಾನ ಗಳನ್ನು ಅದು ಅನುಸರಿಸುತ್ತಿರಲಿಲ್ಲ. ಬಹುಸಂಖ್ಯಾತ ಬಡಬೇಸಾಯಗಾರರ ವಿಶ್ವಾಸ, ಬೆಂಬಲಗಳನ್ನು ಪಡೆಯುವುದಕ್ಕಾಗಿಯೇ ಮತ್ತು ಸಹಕಾರಿಬೇಸಾಯದ ಆಂದೋಲನ ಕ್ಕಾಗಿ ಅವರಲ್ಲಿ ಉತ್ಸಾಹ ಬೆಳೆಸುವುದಕ್ಕಾಗಿಯೇ ಸಾಮ್ಯವಾದಿ ಪಕ್ಷವು ಪ್ರಚಾರ, ಜನಸಂಪರ್ಕ, ಕ್ರಮಿಕವಿಕಾಸಗಳ ಉಪಾಯಗಳನ್ನು ಕೈಕೊಂಡಿತು. ಅದೇ ಉದ್ದೇಶ ಕ್ಕಾಗಿ ಜಮೀನುದಾರರ ಈ ನ್ಯಾಯ ವಿಚಾರಣೆಗಳನ್ನು ಗ್ರಾಮಗಳಲ್ಲಿ ಅದು ಏರ್ಪಡಿಸಿತು.

ಚೀನದಲ್ಲಿ ಏಕಪಕ್ಷೀಯ ಸಾಮ್ಯವಾದಿ ಸರಕಾರವಿದ್ದುದರಿಂದ ತನ್ನ ಸಹಕಾರಿ ಬೇಸಾಯದ ಕಾರ್ಯಕ್ರಮದ ಬಗ್ಗೆ ಜನತೆಯಲ್ಲಿ ಅದು ಹೆಚ್ಚು ಸುಲಭವಾಗಿ ಪ್ರಚಾರ ಮಾಡಿತು. ಅಲ್ಲಿ ಆ ಕಾರ್ಯಕ್ರಮವನ್ನು ಒಪ್ಪದವರಿಗೆ ವಿರೋಧಿ ಪ್ರಚಾರ ಮಾಡುವ ಸ್ವಾತಂತ್ರ್ಯ ಮಾತ್ರವಿರಲಿಲ್ಲ. ಆದರೆ ಬೇಸಾಯಸಹಕಾರಸಂಘದಲ್ಲಿ ಪೂರ್ಣ ಸ್ವಸಂತೋಷದಿಂದ ಸೇರಿಸುವ ತತ್ವವನ್ನು ಕಡ್ಡಾಯವಾಗಿ ಸಾಮ್ಯವಾದಿ ಸರಕಾರ ಹಾಗೂ ಪಕ್ಷಗಳು ಪಾಲಿಸುತ್ತಿದ್ದವು. ತರುಣಕಾರ್ಯಕರ್ತರು ಆವೇಶದಲ್ಲಿ ಈ ಧೋರಣೆಯನ್ನು ತಿರಸ್ಕರಿಸಿದಲ್ಲಿ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳ ಲಾಗುತ್ತಿತ್ತು.

ಬೇಸಾಯಗಾರರನ್ನು ಬಲಾತ್ಕಾರದಿಂದ ಬೇಸಾಯಸಂಘಗಳಲ್ಲಿ ಸೇರಿಸಿದ್ದರೆ ಅವರಲ್ಲಿ ಬೇಸಾಯದ ಉತ್ಪತ್ತಿ ಹೆಚ್ಚಿಸಲು ಉತ್ಸಾಹ ಬೆಳೆಯುವುದಂತೂ ಸಾಧ್ಯವೇ ಇರು ತ್ತಿದ್ದಿಲ್ಲ. ಆದರೆ ಅಲ್ಲಿ ದೇಶದ ಸಮಾಜವಾದಿ ನಿರ್ಮಾಣಕ್ಕಾಗಿ ಕಠೋರ ಪಂಡಿತ ಪರಾಕ್ರಮ ತ್ಯಾಗಮಾಡಲು, ಬೇಸಾಯಗಾರ ಜನತೆಯಲ್ಲಿ ಹಾಗೂ ಅವರ ತರುಣರ ಕಾರ್ಯಕರ್ತರಲ್ಲಿ ಉತ್ಕ್ರಾಂತಿಯ ಉತ್ಸಾಹವು ತುಂಬಿ ತುಳುಕುತ್ತಿತ್ತು. ಉತ್ಪಾದಕರ ಸಹಕಾರಸಂಘಗಳ ಸಮೃದ್ಧಿಯು ಇಂಥ ವಿಧಾಯಕ ಉತ್ಸಾಹದಿಂದಲೇ ಬೆಳೆದಿತ್ತಲ್ಲದೆ ಅಂಥ ಸಮೃದ್ಧಿಯು ಮುಂದಿನ ನಿರ್ಮಾಣ ಕಾರ್ಯಕ್ಕೂ ಅವರಲ್ಲಿ ಉತ್ಸಾಹವನ್ನು ಬೆಳೆಸಿತ್ತು.

(vi) **ಬೇರೆ ಆರ್ಥಿಕ ಕ್ಷೇತ್ರಗಳ ವಿಕಾಸ :** ಉದ್ಯೋಗ, ವ್ಯಾಪಾರ, ಗುಡಿ ಕೈಗಾರಿಕೆ ಮುಂತಾದ ಎಲ್ಲ ಆರ್ಥಿಕ ಚಟುವಟಿಕೆಗಳಿಗೂ ಈ ಕಾಲದಲ್ಲಿ ಸಮಾಜವಾದಿ ಯೋಜನೆಯು ವ್ಯಾಪಿಸಿತು. ಈ ಎಲ್ಲ ಕ್ಷೇತ್ರಗಳಲ್ಲಿ ಸಹಕಾರಿ ಸಾಮೂಹಿಕ ಸಂಸ್ಥೆ ಗಳನ್ನು ಸ್ಥಾಪಿಸಲಾಯಿತು. ಹೀಗೆ ಸುತ್ತಲಿನ ಸಮಾಜವಾದಿ ವಾತಾವರಣವು ಬೇಸಾಯಗಾರ ಜನತೆಯ ಮೇಲೆ ತನ್ನ ಪ್ರಭಾವ ಬೀರಿ ಅವರನ್ನು ಸಾಮೂಹಿಕ ಬೇಸಾಯದ ಕಾರ್ಯಕ್ರಮಕ್ಕಾಗಿ ತರಬೇತಿಗೊಳಿಸಿತು.

(vii) **ತರುಣರ ಪಾತ್ರ :** ಈ ಕಾಲಕ್ಕೆ ಗ್ರಾಮಾಂತರ ಚೀನಾದಲ್ಲಿ ಮುಂದಾಳು ಗಳನ್ನು ಸಂಘಟಿಸಿ ತರಬೇತಿಗೊಳಿಸಿದ್ದು ಅದ್ಭುತ ಸಾಧನೆ. ಈ ತತ್ವನಿಷ್ಠ ಪರಾಕ್ರಮಿ· ಗ್ರಾಮೀಣ ಮುಂದಾಳುಗಳೆಲ್ಲರೂ 20–30 ವರ್ಷದ ತರುಣ ತರುಣಿಯರೇ ಆಗಿದ್ದರು. ಉತ್ಪಾದಕರ ಸಹಕಾರ ಸಂಘಗಳು ಹೊಸ ಪ್ರಕಾರದ ಆರ್ಥಿಕ ಸಂಸ್ಥೆ ಗಳಾಗಿದ್ದವು. ಅವುಗಳಲ್ಲಿ ಹೊಸ ಜೀವನ ಪದ್ಧತಿ. ಹೊಸ ಜೀವನದೃಷ್ಟಿ ಕೋನ ಗಳಿದ್ದವು. ಇಂಥ ಹೊಸ ಜೀವನದ ವಿಚಾರಗಳು ಸಾಮಾನ್ಯವಾಗಿ ಮುದುಕರು. ಬೆಳೆಯುವ ತರುಣರು ಬೇಗ ಇವನ್ನು ಅಲ್ಲಿ ಅಳವಡಿಸಿಕೊಂಡರಷ್ಟೇ ಅಲ್ಲ, ಜನತೆಯಲ್ಲಿ ಹುಮ್ಮಸ್ಸಿನಿಂದ ಹೊಸವಿಚಾರಗಳನ್ನು ತುಂಬಿದರು. ಅವರು ಜನತೆಯಲ್ಲಿ ವಿನಯ, ಆತ್ಮೀಯತೆಗಳಿಂದ ಬೆರೆತು. ಅವರ ವಿಶ್ವಾಸ ಸಂಪಾದಿಸಿ, ಜಾಣ್ಮೆಯಿಂದ ಹೊಸವಿಚಾರಗಳನ್ನು ಬೆಳೆಸಿದರು. ತಮ್ಮ ಕಠೋರ ದುಡಿತ, ತ್ಯಾಗ, ಸೇವೆಗಳಿಂದ ಅವರು ಬೇಸಾಯಗಾರರಿಗೆ ಹೊಸಸಂಸ್ಥೆಗಳ ಹೊಸವಿಚಾರಗಳ ಬಗ್ಗೆ ಮನವರಿಕೆ ಮಾಡಿ, ಪ್ರಭಾವ ಬೀರಿ ಅವನ್ನು ಅಂಗೀಕರಿಸಹಚ್ಚಿದರು. ತರುಣರಿಗೆ ಇಂಥ ತಾತ್ವಿಕ ಹಾಗೂ ತಾಂತ್ರಿಕ ತರಬೇತಿಯನ್ನು ಕೊಡಲಾಗುತ್ತಿತ್ತು. ಅನೇಕ ಉತ್ಪಾದಕರ ಸಂಘ ಗಳಲ್ಲಿ 20–30 ವರ್ಷಗಳ ತರುಣಿಯರು ನಾಯಿಕೆಯರಾಗಿದ್ದರು. ಜನರ ಮೇಲೆ ಅವರ ಪ್ರಭಾವ ಪುರುಷರಿಗಿಂತ ಕಡಮೆ ಏನೂ ಇರಲಿಲ್ಲ. ಸಾಮಾನ್ಯವಾಗಿ ಪ್ರತಿ ಯೊಂದು ಉತ್ಪಾದಕರ ಸಂಘದಲ್ಲಿ ಅಧ್ಯಕ್ಷ. ಉಪಾಧ್ಯಕ್ಷರಲ್ಲಿ ಒಬ್ಬರು ಪುರುಷರಿದ್ದರೆ, ಒಬ್ಬರು ಮಹಿಳೆಯರು ಇರುತ್ತಿದ್ದರು.

(6) ಇಸ್ರೇಲ್ ಗ್ರಾಮಪರಿವಾರಗಳು (ಕಿಬ್ಬುಜ್)

ಸಹಕಾರಿ ಬೇಸಾಯವಷ್ಟೇ ಏಕೆ. ಸಹಕಾರಿಜೀವನದಲ್ಲಿ ಸಹ ಚಿಕ್ಕ ಇಸ್ರೇಲ್ ದೇಶವು ಚಮತ್ಕಾರಿಕ ಉನ್ನತಿಯನ್ನು ಸಾಧಿಸಿದೆ. ಅದರ ಗ್ರಾಮಪರಿವಾರಗಳು ಅಥವಾ ಸಾಮೂಹಿಕ ಜೀವನದ ಗ್ರಾಮಗಳು ಸಮಸ್ತ ಮಾನವ ಜಾತಿಗೆ ಆರ್ಥಿಕ ಸಾಮಾಜಿಕ ಅಷ್ಟೇ ಅಲ್ಲ ನೈತಿಕ ಹಾಗೂ ವಿಧಾಯಕ ಆಹ್ವಾನವಾಗಿವೆ. ಇಸ್ರೇಲಿನ ನೂರಾರು ಗ್ರಾಮ ಪರಿವಾರಗಳಲ್ಲಿ ಅಥವಾ ಸಾಮೂಹಿಕ ಜೀವನದ ಗ್ರಾಮಗಳಲ್ಲಿ ಅಂತಿಮ ಸಾಮ್ಯವಾದಿ ಸಮಾಜದ ಆದರ್ಶ ಹಾಗೂ ಸರ್ವೋದಯ ಸಮಾಜದ ಆದರ್ಶ ನನಸಾಗಿದೆ. ಅಲ್ಲಿ ಕ್ರಿಯಾತ್ಮಕ ಸರ್ವೋದಯ ಸಮಾಜವಿದೆ. ಅಲ್ಲಿ ಯಾವ ಸಂಚಾಲಕರ ಪ್ರತ್ಯಕ್ಷ ಅಥವಾ ಪರೋಕ್ಷ ಆದೇಶವಿಲ್ಲದೆ, ಕೂಲಿ. ವೇತನಗಳ ಉತ್ತೇಜನವೂ ಇಲ್ಲದೆ, ಕೇವಲ ಮಾನವೀಯ ಸಾಮಾಜಿಕ ಅಥವಾ ಆಧ್ಯಾತ್ಮಿಕ ಸ್ಫೂರ್ತಿ ಉತ್ತೇಜನ ಗಳಿಂದ ಸಾವಿರಾರು ಜನ ಪುರುಷರು, ಮಹಿಳೆಯರು. ಮಕ್ಕಳು ಹುಮ್ಮಸ್ಸಿನಿಂದ ಕಾಯಕ ಮಾಡುತ್ತಿದ್ದಾರೆ, ಜೀವನ ನಡೆಸಿದ್ದಾರೆ, ದೇಶದ ಸಮೃದ್ಧಿಯನ್ನು ಸಾಧಿಸಿದ್ದಾರೆ.

ಇಂಥ ಸಾಮೂಹಿಕ ಸರ್ವೋದಯ ಜೀವನ ನಡೆಸುವಲ್ಲಿ ಯಾವ ಪರೋಕ್ಷ ಆರ್ಥಿಕ ಆಡಳಿತದ ಅಥವಾ ಸಾಮಾಜಿಕ ಒತ್ತಾಯವೂ ಅಲ್ಲಿ ಕಾಣುವುದಿಲ್ಲ. ಈ ಗ್ರಾಮ ಪರಿವಾರಗಳಲ್ಲಿ ವಾಸಿಸುವವರು ಪೂರ್ಣ ಸ್ವಯಂಸ್ಫೂರ್ತಿಯಿಂದ ತತ್ವನಿಷ್ಠೆಯಿಂದ ಮತ್ತು ದೇಶಭಕ್ತಿಯಿಂದ ಅಲ್ಲಿ ನೆಲೆಸಿದ್ದಾರೆ. ಅವುಗಳನ್ನು ತ್ಯಜಿಸಿ ಬೇರೆಡೆ ಹೋಗಿ

ಸ್ವತಂತ್ರವಾಗಿ ವೈಯಕ್ತಿಕ ದುಡಿತ ಹಾಗೂ ಜೀವನ ನಡೆಸಲು ಸಹ ಅಲ್ಲಿಯ ನಿವಾಸಿಗಳಿಗೆ ಶಾಬ್ದಿಕ ಸ್ವಾತಂತ್ರ್ಯವಷ್ಟೇ ಅಲ್ಲ. ಆರ್ಥಿಕ ಅವಕಾಶವೂ ಇದೆ. ಇಸ್ರೇಲ್‌ನಲ್ಲಿ ಅಂಥ ಸ್ವತಂತ್ರದುಡಿತ, ಸ್ವತಂತ್ರ ಜೀವನ. ಸ್ವತಂತ್ರ ಆಸ್ತಿಗಳಿಕೆ ನಡೆಸುವ ಗ್ರಾಮಗಳೂ ಇವೆ. ಇಸ್ರೇಲ್ ನಾಗರಿಕರಿಗೆ ಬೇಕಾದ ಗ್ರಾಮದಲ್ಲಿ ನೆಲೆಸುವ ಸ್ವಾತಂತ್ರ್ಯ ಮತ್ತು ಅವಕಾಶ ಎರಡೂ ಇವೆ.

ಇಸ್ರೇಲ್ ನಿವಾಸಿಗಳು ವಿಶಿಷ್ಟ ಐತಿಹಾಸಿಕಪರಿಸ್ಥಿತಿಗಳಲ್ಲಿ. ವಿಶಿಷ್ಟವಾದ ಸ್ಫೂರ್ತಿ, ಉತ್ತೇಜನಗಳಿಂದ ತಮ್ಮ ಗ್ರಾಮ ಪರಿವಾರಗಳನ್ನು, ಸಾಮೂಹಿಕಬೇಸಾಯ ಸಂಘಗಳನ್ನು ಸ್ಥಾಪಿಸಿದ ಸತ್ಯವನ್ನು ನಿರಾಕರಿಸುವಂತಿಲ್ಲ. ಅದೇ ಪರಿಸ್ಥಿತಿಗಳು ಭಾರತದಲ್ಲಿಲ್ಲ; ಅಂಥ ಸ್ಫೂರ್ತಿ ಉತ್ತೇಜನಗಳೂ ಇಲ್ಲಿಲ್ಲ. ಆದ್ದರಿಂದ ಇಸ್ರೇಲಿ ನಿವೇಶಗಳ ಅಂಥ ಅನುಕರಣ ಸಾಧ್ಯವಿಲ್ಲ. ಆದರೂ ಅಲ್ಲಿಯ ಅನುಭವಗಳಿಂದ ಭಾರತದಲ್ಲಿ ಸಹಕಾರಿಬೇಸಾಯದ ಬೆಳವಣಿಗೆಗಾಗಿ ಅನೇಕ ಮಾರ್ಗದರ್ಶಕ ಪಾಠಗಳಿವೆ.

ಐತಿಹಾಸಿಕ ಪರಿಸ್ಥಿತಿಗಳ ಹಿನ್ನೆಲೆ

ಮೇ 1948ರಲ್ಲಿ ಸ್ವತಂತ್ರ ಇಸ್ರೇಲ್ ರಾಷ್ಟ್ರದ ಸ್ಥಾಪನೆಯಾಯಿತು. ಅದಕ್ಕೂ ಪೂರ್ವದಿಂದಲೇ 1905ರಿಂದಲೇ ಜಗತ್ತಿನ ವಿಭಿನ್ನ ದೇಶಗಳಲ್ಲಿ ಹರಡಿದ ಮತ್ತು ದಬ್ಬಾಳಿಕೆಯಿಂದ ನೊಂದ ಬೆಂದ ಯಹೂದಿಗಳನ್ನು ತಮ್ಮ ಪವಿತ್ರ 'ಯಹೂದಿಗಳ ಧರ್ಮಭೂಮಿ' (ಜ್ಯೂಯಿಷ್ ಹೋಮ್‌ಲ್ಯಾಂಡ್)ಯಲ್ಲಿ ನೆಲೆಸಲು ಸಹಕಾರಿ ನಿವೇಶಗಳನ್ನು ಸ್ಥಾಪಿಸುವ ಕಾರ್ಯಕ್ರಮವನ್ನು 'ಯಹೂದಿ ಧರ್ಮದ ಆಂದೋಳನ' (ಝಿಯೋನಿಸ್ಟ್ ಮೂಮೆಂಟ್) ಪ್ರಾರಂಭಿಸಿತು. 1948ರಲ್ಲಿ ಇಸ್ರೇಲ್‌ನಲ್ಲಿ ಯಹೂದಿಗಳ ಜನಸಂಖ್ಯೆಯು 6 ಲಕ್ಷ ಮಾತ್ರ ಇತ್ತು. ಈಗ ಅದು 25 ಲಕ್ಷ ಆಗಿದೆ. 1948ರಲ್ಲಿ ಯಹೂದಿಗಳ ಗ್ರಾಮನಿವೇಶಗಳ ಸಂಖ್ಯೆಯು 259 ಮಾತ್ರ ಇತ್ತು: ಈಗ ಅದು ತ್ರಿಗುಣವಾಗಿದೆ. ಇಸ್ರೇಲ್‌ನಲ್ಲಿ ನೆಲೆಸಲು ಹೊಸವಾಗಿ ಬಂದವರು ವಿಭಿನ್ನ ದೇಶಗಳಿಂದ ಬಂದಿದ್ದರು: ಅವರು ವಿಭಿನ್ನ ಭಾಷೆ ಮಾತಾಡುತ್ತಿದ್ದರು: ವಿಭಿನ್ನ ಪರಿಸ್ಥಿತಿಗಳಲ್ಲಿ ಬೆಳೆದು. ಶಿಕ್ಷಣ ಪಡೆದು. ವಿಭಿನ್ನ ವ್ಯಾಪಾರ ಉದ್ಯೋಗಗಳನ್ನು ಮಾಡಿದ್ದರು. ಅವರೆಲ್ಲರನ್ನೂ ಇಲ್ಲಿ ಒಂದೇ ರಾಷ್ಟ್ರದ ಅನ್ಯೋನ್ಯ ನಿಷ್ಠನಾಗರಿಕರನ್ನಾಗಿ ಮಾಡಿ ಸೇರಿಸಿಕೊಳ್ಳುವುದು ಮತ್ತು ಅವರೆಲ್ಲರನ್ನೂ ಉದ್ಯೋಗದಲ್ಲಿ ತೊಡಗಿಸಿ ಅವರಿಗೆ ಉಪಜೀವನ ಒದಗಿಸುವುದು ಬಹು ದೊಡ್ಡ ಸಮಸ್ಯೆಯಾಗಿತ್ತು. ಇಸ್ರೇಲ್ ಭೂಮಿಯು ಬರಡಾಗಿತ್ತು ಅಥವಾ ಬೆಂಗಾಡಾಗಿತ್ತು. ಸರಾಸರಿ ಮಳೆ 15–20 ಅಂಗುಲಕ್ಕಿಂತ ಕಡಮೆ. ನೆಗೇವದ ವಿಶಾಲವಾದ ನಿರ್ಜನ ಮರುಭೂಮಿ ಬೇರೆ ಇತ್ತು; ಅಲ್ಲಿ ಒಂದು ಅಂಗುಲ ಮಳೆ. ಇಸ್ರೇಲ್ ಸರಕಾರದ ಬಳಿ ಅಥವಾ ಜನರ ಬಳಿ ಸಮೃದ್ಧ ಸಂಪನ್ಮೂಲಗಳೂ ಇರಲಿಲ್ಲ.

ಈ ನೈಸರ್ಗಿಕ ಪ್ರತಿಕೂಲ ಪರಿಸ್ಥಿತಿಗಳಲ್ಲದೆ ಜನ್ಮದಿಂದಲೇ ಇಸ್ರೇಲ್ ದೇಶವು ಸುತ್ತಲಿನ ಸುಮಾರು 9 ಕೋಟಿ ಜನಸಂಖ್ಯೆಯುಳ್ಳ ಅರಬ್ ರಾಷ್ಟ್ರಗಳಿಂದ ರಾಜಕೀಯ

ಹಾಗೂ ಸೈನಿಕ ಆಕ್ರಮಣವನ್ನು ಎದುರಿಸುವುದು ಹತ್ತಿತು. ಯುಕ್ತರಾಷ್ಟ್ರಸಂಘದ ನಿರ್ಣಯದ ಮೊದಲಿನ ಪ್ಯಾಲೆಸ್ಟೈನದ ವಿಭಜನೆಯಾಗಿ 1948ರಲ್ಲಿ ಪ್ರತ್ಯೇಕವಾಗಿ ಇಸ್ರೇಲ್ ರಾಷ್ಟ್ರದ ಸ್ಥಾಪನೆಯಾಗಿತ್ತು. ಈ ವಿಭಜನೆಯಿಂದ ತೀವ್ರವಾಗಿ ಅತೃಪ್ತಗೊಂಡ ಅರಬ್ ರಾಷ್ಟ್ರಗಳು ಇಸ್ರೇಲ್ ಅಸ್ತಿತ್ವವನ್ನೇ ಅಳುಕಿಸಲು ಹಾತೊರೆಯುತ್ತಿದ್ದವು. ಇಂಥ ಅಸಾಧಾರಣವಾದ ನೈಸರ್ಗಿಕ ಅಂತರಾಷ್ಟ್ರೀಯ ಪರಿಸ್ಥಿತಿಗಳಲ್ಲಿ ಚಿಕ್ಕ ಇಸ್ರೇಲ್ ರಾಷ್ಟ್ರವು ತನ್ನ ಅಸ್ತಿತ್ವವನ್ನು ಉಳಿಸಿಕೊಂಡು, ತನ್ನ ಸಮೃದ್ಧಿಯನ್ನು ಸಾಧಿಸಿ. ಹೊರಗಿನಿಂದ ವಲಸೆ ಬಂದ ಲಕ್ಷಗಟ್ಲೆ ಯಹೂದಿಗಳನ್ನು ನೆಲೆಸಿ ತನ್ನ ಸಂರಕ್ಷಣೆಯನ್ನು ಭದ್ರಪಡಿಸಿಕೊಳ್ಳಬೇಕಾಗಿತ್ತು. ಇಂಥ ಅಸಾಧಾರಣ ಸಮಸ್ಯೆಗಳ ಪರಿಹಾರಕ್ಕಾಗಿಯೇ ಇಸ್ರೇಲ್ ದೇಶವು ಸಹಕಾರಿ ಬೇಸಾಯದ ಹಾಗೂ ಸಾಮೂಹಿಕ ಜೀವನದ ನಿವೇಶಗಳನ್ನು ಬೆಳೆಸುವ ಜಟಿಲ ಕಾರ್ಯಕ್ರಮವನ್ನು ಕೈಕೊಂಡಿತು ಮತ್ತು ಯಶಸ್ವಿಯಾಗಿ ಅನುಷ್ಠಾನಕ್ಕೆ ತಂದಿತು.

ಈ ಕಾರ್ಯಕ್ರಮದ ಯಶಸ್ವಿಯಾದ ಅನುಷ್ಠಾನದಲ್ಲಿ ವಿಭಿನ್ನದೇಶಗಳಿಂದ ಬಂದ ಯಹೂದಿಗಳ ಭಾವೈಕ್ಯತೆ ಹಾಗೂ ವಿಲೀನೀಕರಣವು ಬಹಳ ಮಹತ್ವದ ಕಾರ್ಯವಾಗಿತ್ತು. ಏಕಧರ್ಮದ ಭಕ್ತಿ ಅಲ್ಲದೆ. ಇವರೆಲ್ಲರಲ್ಲಿ ಬೆಳೆದ ಏಕಹಿಬ್ರೂ ಭಾಷೆಯ ಭಿತ್ತಿಯೂ ಈ ಭಾವೈಕ್ಯಕ್ಕೆ ಸಹಾಯಕವಾಯಿತು. ತನ್ನ ಸಹಕಾರಿ ನಿವೇಶಗಳ ಮುಖಾಂತರವೇ ಇಸ್ರೇಲ್ ದೇಶವು ಲಕ್ಷಗಟ್ಲೆ ವಿಭಿನ್ನ ಪ್ರಕಾರದ ಯಹೂದಿಗಳನ್ನು ತನ್ನಲ್ಲಿ ಸಮಾವೇಶ ಮಾಡಿಕೊಂಡು, ವ್ಯಾಪಕವಾಗಿ ಉತ್ಪಾದಕ ನಿರ್ಮಾಣ ಕಾರ್ಯದಲ್ಲಿ, ಮುಖ್ಯವಾಗಿ ಬೇಸಾಯದ ಸಮೃದ್ಧಿಯಲ್ಲಿ ಅವರನ್ನು ಯಶಸ್ವಿಯಾಗಿ ತೊಡಗಿಸುವುದು ಸಾಧ್ಯವಾಯಿತು.

ಭೂಮಿ ಹಾಗೂ ಉತ್ಪಾದನೆ

ಇಸ್ರೇಲ್‌ನಲ್ಲಿ ಸಾಮಾನ್ಯವಾಗಿ ಭೂಮಿಯೆಲ್ಲವೂ ರಾಷ್ಟ್ರೀಯ ಸೊತ್ತಾಗಿದೆ. ಶೇಕಡಾ 5.7ರಷ್ಟು ಭೂಮಿ ಮಾತ್ರ ವೈಯಕ್ತಿಕ ಒಡೆತನದಲ್ಲಿದೆ. ರಾಷ್ಟ್ರೀಯ ಅಥವಾ ಸಂಸ್ಥೆಯ ಸಾಮಾಜಿಕ ಸೊತ್ತಿನ ಭೂಮಿಯನ್ನು ಬೇಸಾಯಸಂಘಗಳಿಗೆ ಅಥವಾ ವೈಯಕ್ತಿಕ ಬೇಸಾಯಗಾರರಿಗೆ ನಾಮಮಾತ್ರದ ಗುತ್ತಿಗೆ (ಲಾವಣಿ)ಗಾಗಿ ದೀರ್ಘಾವಧಿಯ ಕರಾರಿನಿಂದ ಕೊಡಲಾಗುತ್ತದೆ. ಅದನ್ನು ಆಗಾಗ್ಗೆ ಮುಂದುವರಿಸಲಾಗುತ್ತದೆ. ಆದ್ದರಿಂದ ಜಮೀನುದಾರಿಯನ್ನು ತೆಗೆದುಹಾಕಿ ಭೂಸುಧಾರಣೆಯನ್ನು ಜಾರಿಗೆ ತರುವ ಸಮಸ್ಯೆ ಇಸ್ರೇಲ್‌ದಲ್ಲಿರಲಿಲ್ಲ. ಸಾಗುವಳಿಗೆ ಗುತ್ತಿಗೆಗಾಗಿ ಕೊಡಲಾದ ಭೂಮಿಯನ್ನು ವಿಭಜಿಸುವ ಅಥವಾ ಮಾರುವ ಹಕ್ಕು ಇಲ್ಲವೇ ಇಲ್ಲ. ಇಸ್ರೇಲವು ಕೃಷಿ ಪ್ರಧಾನ ದೇಶವಲ್ಲ. ಅಲ್ಲಿ ಕೇವಲ ಶೇಕಡಾ 13ರಷ್ಟು ಜನಸಂಖ್ಯೆಯು ಮಾತ್ರ ಕೃಷಿಯಲ್ಲಿ ತೊಡಗಿದೆ. ಆದರೂ ಪ್ರತಿ ಪರಿವಾರಕ್ಕೆ 10 ಎಕರೆಗಿಂತ ಕಡಮೆ ಸಾಗುವಳಿ ಭೂಮಿ ಇದೆ.

ಯಹೂದಿ ಧರ್ಮದ ಮೂಲತತ್ವಗಳಲ್ಲಿ 'ಕಾಯಕವೇ ಕೈಲಾಸ'ಕ್ಕೆ ಅಥವಾ ಉತ್ಪಾದಕ ದೈಹಿಕ ಶ್ರಮಕ್ಕೆ ಅದರಲ್ಲೂ ಬೇಸಾಯದ ದುಡಿತಕ್ಕೆ ಪ್ರಾಧಾನ್ಯತೆ ಇತ್ತು.

2,000 ವರ್ಷಗಳ ಹಿಂದೆ ಇಸ್ರೇಲ್‌ದಿಂದ ಓಡಿಹೋಗಿ ಬೇರೆ ದೇಶಗಳಲ್ಲಿ ನೆಲಸಿದ ಯಹೂದಿಗಳು ಸಮೃದ್ಧ ವರ್ತಕರು, ಉದ್ಯೋಗಪತಿಗಳು, ಬುದ್ಧಿಜೀವಿಗಳಾದರು; ತಮ್ಮ ಮೂಲ ಧಾರ್ಮಿಕ ಪವಿತ್ರ ಕೃಷಿ ಹಾಗೂ ಕುರಿಸಂಗೋಪನಗಳ ಉದ್ಯೋಗಗಳಿಂದ ಅವರು ದೂರಾದರು. ಯಹೂದಿಗಳು ಬೇರೆ ದೇಶಗಳಲ್ಲಿ ವ್ಯಾಪಾರ ಉದ್ಯೋಗಗಳಲ್ಲಿ ಸಂಪನ್ನರಾದದ್ದರಿಂದಲೇ ಅಲ್ಲಿಯ ಸ್ಥಳಿಕ ಜನರು ಯಹೂದಿಗಳು ಶೋಷಕರೆಂಬ ತಿರಸ್ಕಾರದ ಭಾವನೆಯಿಂದ ಅವರನ್ನು ವಿರೋಧಿಸುತ್ತಿದ್ದರು. ಯಾವುದೇ ಉದ್ಯೋಗದಲ್ಲಿದ್ದರೂ ಯಹೂದಿಗಳು ತಮ್ಮ ಮೂಲ ಉತ್ಪಾದಕ ಶ್ರಮ ಪ್ರತಿಷ್ಠೆಯ ಹಬ್ಬಗಳನ್ನು ಭಕ್ತಿಯಿಂದ ಆಚರಿಸುತ್ತಿದ್ದರು. ಅಂತೆಯೇ 'ಯಹೂದಿ ಧರ್ಮಭೂಮಿ' ಯನ್ನು ಸ್ಥಾಪಿಸುವ ಆಂದೋಲನದಲ್ಲಿ 'ಬೇಸಾಯದ ಪವಿತ್ರ ಉತ್ಪಾದಕ ಶ್ರಮಕ್ಕೆ ಮರಳಿ' ಎಂಬ ಕರೆಯನ್ನು ಕೊಡಲಾಯಿತು. ಈ ಆಂದೋಲನದ ಅಗ್ರದೂತರು ಮತ್ತು ನಾಯಕರು ಗಾಂಧೀಜಿಯವರ ಉತ್ಪಾದಕ ಶ್ರಮ ಪ್ರತಿಷ್ಠೆಯ ತಳಹದಿಯ ಮೇಲೆಯೇ ತಮ್ಮ ಧರ್ಮಭೂಮಿಯನ್ನು ಸ್ಥಾಪಿಸುವ ಗುರಿ ಇಟ್ಟುಕೊಂಡಿದ್ದರು. ಅಂತೆಯೇ ಪ್ರಾರಂಭದಲ್ಲಿ ಬೇರೆ ದೇಶಗಳಲ್ಲಿ ಬುದ್ಧಿಜೀವಿಗಳಾಗಿದ್ದವರು, ವರ್ತಕರು ಮೊದಲಾದವರು ಉತ್ಪಾದಕ ಶ್ರಮಪ್ರತಿಷ್ಠೆಯ ಭಾವದಿಂದಲೇ ಒಂದು ಸ್ವಯಂ ಸ್ಫೂರ್ತಿಯಿಂದ ಕಠೋರವಾಗಿ ದುಡಿಯುವ ಬೇಸಾಯಗಾರರಾದರು. ಅವರು ಕ್ರಿಯಾತ್ಮಕ ಗಾಂಧೀತತ್ವದ ಪಾಲಕರೆಂದರೆ ತಪ್ಪಾಗಲಾರದು. ಅವರೇ ಇಸ್ರೇಲ್‌ನಲ್ಲಿ ಸಹಕಾರಿ ಬೇಸಾಯದ ನಿವೇಶನಗಳನ್ನು ಸ್ಥಾಪಿಸುವ ಅಗ್ರದೂತರಾದರು.

ಉತ್ಪತ್ತಿಯ ಹೆಚ್ಚಳ: ಇಸ್ರೇಲ್‌ದಲ್ಲಿ ಉತ್ಪಾದಕ ಶ್ರಮಪ್ರತಿಷ್ಠೆ ಮೌಖಿಕವಾಗಿ ಅಥವಾ ಉಪಾಸನೆಯ ಸ್ವರೂಪದ್ದಾಗಿ ಉಳಿಯಲಿಲ್ಲ. ನಾಯಕರು, ಕಾರ್ಯಕರ್ತರು ಪ್ರಯಾಸದಿಂದ ದುಡಿದು ಬೇಸಾಯಗಾರರಲ್ಲಿ ಅದನ್ನು ಕ್ರಿಯಾತ್ಮಕವಾಗಿ ಹಬ್ಬಿಸಿದರು. ಅದರಿಂದ ಅಲ್ಲಿ ಉತ್ಪತ್ತಿಯು ಹೆಚ್ಚಳವಾದದ್ದನ್ನು ಕೆಳಗಿನ ಮಾಹಿತಿಯಿಂದ ಮನಗಾಣಬಹುದು.

ಉತ್ಪಾದನಾವಸ್ತುಗಳು	ವರ್ಷ 1948–49 (ಸಾವಿರಟನ್ನುಗಳಲ್ಲಿ)	ವರ್ಷ 1957–58 (ಸಾವಿರಟನ್ನುಗಳಲ್ಲಿ)
ಹಣ್ಣು	272	435
ಆಲೂಗಡ್ಡೆ, ಕಾಯಿಪಲ್ಲೆ	106	363
ಗೋಧಿ	21	53
ಹಾಲು (ಸಾವಿರ ಲೀಟರು)	85,950	2,58,000

10 ವರ್ಷಗಳ ಹಿಂದೆ ಕೃಷಿ ಉತ್ಪತ್ತಿಯಲ್ಲಿ ಇಸ್ರೇಲ್ ಕೊರತೆಯ ರಾಷ್ಟ್ರವಾಗಿತ್ತು. 1960ರಲ್ಲಿ ಸಮೃದ್ಧಿಯನ್ನು ಸಾಧಿಸಿ, ಜನಸಂಖ್ಯೆಯು ಮೂರರಷ್ಟು ಹೆಚ್ಚಿದ್ದರೂ, ಕೃಷಿಉತ್ಪತ್ತಿಯಲ್ಲಿ ಅದು ಸ್ವಾವಲಂಬಿಯಾಯಿತು. ಅಲ್ಲಿ ಉತ್ಪತ್ತಿಯ ಹೆಚ್ಚಳದ ಉಪಾಯಗಳು ಗಮನಾರ್ಹವಾಗಿವೆ.

ಮಿಶ್ರ ಬೇಸಾಯ : ಇಸ್ರೇಲ್‌ದಲ್ಲಿ ಬಹು ವ್ಯಾಪಕವಾಗಿ ಬಂಜರು ಭೂಮಿಯ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಕೈಕೊಂಡು ಸಾಗುವಳಿಯ ಕ್ಷೇತ್ರವನ್ನು ದ್ವಿಗುಣ ಗೊಳಿಸಲಾಯಿತು. ಅತಿ ಉಚ್ಚ ತರಗತಿಯ ಮಿಶ್ರಬೇಸಾಯವನ್ನು ಅಲ್ಲಿ ಬೆಳೆಸ ಲಾಯಿತು. ಬೆಳೆಗಳ ಉತ್ಪತ್ತಿಯ ಆದಾಯ ಶೇಕಡಾ 20ರಷ್ಟಿದ್ದರೆ, ಕೋಳಿತತ್ತಿಗಳ ಆದಾಯವು ಶೇಕಡಾ 18ರಷ್ಟಿತ್ತು. ಹಾಲು, ಮಾಂಸದ ಉತ್ಪತ್ತಿಯ ಆದಾಯ ಶೇಕಡಾ 17 ರಷ್ಟಿತ್ತು: ಹಣ್ಣಿನ ಉತ್ಪತ್ತಿಯ ಆದಾಯ ಶೇಕಡಾ 11ರಷ್ಟಿತ್ತು. ಅಲ್ಲಿ ಪ್ರತಿ ದನಕ್ಕೆ ಹಾಲಿನ ವಾರ್ಷಿಕ ಸರಾಸರಿ ಉತ್ಪತ್ತಿ 4230 ಲೀಟರು ಇತ್ತು; ಜಗತ್ತಿನಲ್ಲಿ ಹೆಚ್ಚಿನ ಹಾಲಿನ ಉತ್ಪತ್ತಿಯ ದೇಶವು ಅದಾಗಿತ್ತು.

ಯಾಂತ್ರಿಕ ಕೃಷಿ : ಬೇಸಾಯದ ತಾಂತ್ರಿಕ ಸುಧಾರಣೆಗಳನ್ನು ಇಸ್ರೇಲು ಹೆಚ್ಚಿಸಿತು. ಸರಾಸರಿಯಾಗಿ 200 ಎಕರೆಗೆ ಒಂದರಂತೆ ಟ್ರಾಕ್ಟರುಗಳನ್ನು ಬಳಸಲಾಯಿತು.

ನೀರಾವರಿ : ಇಸ್ರೇಲ್‌ದಲ್ಲಿ ಮಳೆ ತೀರ ಕಡಮೆ. ಅಲ್ಲಿರುವ ಮೂರು ಹೊಳೆಗಳು ಚಿಕ್ಕವು. ಆದ್ದರಿಂದ ಇದ್ದ ನೀರನ್ನು ಬಹಳ ಮಿತವಾಗಿ ಬಳಸಲು ಅಲ್ಲಿ ನೂರಾರು ಮೈಲುಗಳ ಪೈಪುಗಳನ್ನು ಹಾಕಲಾಗಿದೆ: ವ್ಯಾಪಕವಾಗಿ 'ತುಷಾರ ನೀರಾವರಿ ಪದ್ಧತಿ' (ಸ್ಪ್ರಿಂಕಲರ್ ಇರಿಗೇಶನ್)ಯನ್ನು ಅಲ್ಲಿ ಕೈಕೊಳ್ಳಲಾಗಿದೆ.

ಅಭಿವೃದ್ಧಿ ಬಂಡವಾಳ : ಈ ಎಲ್ಲ ಅಭಿವೃದ್ಧಿಗಳಲ್ಲಿ ಸರಕಾರ ಹಾಗೂ 'ಯಹೂದಿಗಳ ರಾಷ್ಟ್ರೀಯ ನಿಧಿ' (ಜ್ಯೂಯಿಷ್ ನ್ಯಾಶನಲ್ ಫಂಡ್)ಯು ಹೇರಳವಾಗಿ ಬಂಡವಾಳವನ್ನು ತೊಡಗಿಸಿದೆ. ಕೆಳಗಿನ ಅಂಕಿಗಳು ಅದನ್ನು ಸ್ಪಷ್ಟಪಡಿಸುತ್ತವೆ.

ವರ್ಷ	ಸರಕಾರದಿಂದ (ಲಕ್ಷ ಪೌಂಡು)	ಯಹೂದಿಗಳ ರಾಷ್ಟ್ರೀಯ ನಿಧಿಯಿಂದ (ಲಕ್ಷ ಪೌಂಡು)	ಒಟ್ಟು ತೊಡಗಿಸಿದ ಬಂಡವಾಳದ ಶೇಕಡಾ
1949–50	99	167	19.7
1953–54	508	612	28.3

ವಿಭಿನ್ನ ಸಹಕಾರಿ ಬೇಸಾಯಸಂಘಗಳು

ಇಸ್ರೇಲ್ ಸಹಕಾರಿ ಆಂದೋಲನದಲ್ಲಿ ಸಹಕಾರಿ ಬೇಸಾಯಸಂಘಗಳಿಗೆ ಬಹಳ ಮಹತ್ವದ ಸ್ಥಾನವಿದೆ. ಅವುಗಳ ಸಾಧನೆಗಳೂ ಅದ್ಭುತವಾಗಿವೆ. ಅವುಗಳ ವರ್ಗೀಕರಣ ಕೆಳಗಿನಂತಿದೆ :

ಗ್ರಾಮ ಪರಿವಾರಗಳು ಅಥವಾ ಸಾಮೂಹಿಕ ಜೀವನದ ಗ್ರಾಮಗಳು (ಕಿಬ್ಬುಜಿಮ್)	230
ವೈಯಕ್ತಿಕ ಬೇಸಾಯದ ನಿವೇಶಗಳು (ಮೊಶ್‌ವಿಮ್)	283
ಸಾಮೂಹಿಕ ಬೇಸಾಯದ ನಿವೇಶಗಳು (ಮೊಶ್‌ವಿಮ್ ಶಿಟುಫಿಮ್)	20
ಒಟ್ಟು	533

ಈ ಸಹಕಾರಿ ಬೇಸಾಯಸಂಘಗಳಿಗೆ ದುಡಿಮೆಗಾರರ ಬೇಸಾಯಸಂಘಗಳೆಂದೂ ಕರೆಯಲಾಗುತ್ತದೆ. ಇವುಗಳಲ್ಲಿ ಸದಸ್ಯರೆಲ್ಲರೂ ಸ್ವತಃ ವೈಹಿಕವಾಗಿ ಬೇಸಾಯದ ಕೆಲಸಗಳನ್ನು ಮಾಡುತ್ತಾರ ಇವುಗಳಲ್ಲಿ ಕೂಲಿಯ ಆಳುಗಳನ್ನು ದುಡಿಯಲು ಹಚ್ಚಲಾಗುವುದಿಲ್ಲ.

ಇವಲ್ಲದೆ ಮಧ್ಯಮ ವರ್ಗದ ಕೃಷಿಕಬೇಸಾಯಸಂಘಗಳಿವೆ. ಇವುಗಳ ಸದಸ್ಯರು ವೈಯಕ್ತಿಕವಾಗಿ ಸಾಗುವಳಿ ನಡೆಸುತ್ತಾರೆ. ಕೂಲಿಯ ಆಳುಗಳನ್ನು ಇಟ್ಟು ಸಾಗುವಳಿ ನಡೆಸುತ್ತಾರೆ. ಇವುಗಳ ಪ್ರತ್ಯೇಕವಾದ ಕೇಂದ್ರ ಸಂಯುಕ್ತಸಂಘಗಳಿವೆ. ದುಡಿಮೆಗಾರರ ಸಂಯುಕ್ತಸಂಘಗಳೊಡನೆ ಇವುಗಳ ಸಂಬಂಧವಿರುವುದಿಲ್ಲ.

ದುಡಿಮೆಗಾರರ ಬೇಸಾಯಸಂಘಗಳು ಮೂರು ಪ್ರಕಾರಗಳಿರುತ್ತವೆ: (1) ಗ್ರಾಮ ಪರಿವಾರಗಳು ಅಥವಾ ಸಾಮೂಹಿಕ ಜೀವನದ ಗ್ರಾಮಗಳು (ಕಿಬ್ಬುಜಿಮ್): ಇವುಗಳಲ್ಲಿ ಸದಸ್ಯರು ಸಾಮೂಹಿಕ ಬೇಸಾಯವನ್ನಷ್ಟೇ ಅಲ್ಲ ಸಾಮೂಹಿಕ ಜೀವನವನ್ನು ನಡೆಸುತ್ತಾರೆ.

(2) ವೈಯಕ್ತಿಕ ಬೇಸಾಯದ ವಸತಿಗಳು (ಮೊಶ್‌ಎವ್): ಇವುಗಳಲ್ಲಿ ವೈಯಕ್ತಿಕವಾಗಿ ಹಂಚಿದ ಭೂಮಿಯಲ್ಲಿ ವೈಯಕ್ತಿಕ ಸಾಗುವಳಿಯನ್ನು ನಡೆಸಲಾಗುತ್ತದೆ. ಸ್ವಂತ ದುಡಿಮೆಯನ್ನು ಕಡ್ಡಾಯವಾಗಿ ನಡೆಸಲಾಗುತ್ತದೆ.

(3) ಸಾಮೂಹಿಕ ಬೇಸಾಯದ ವಸತಿಗಳು (ಮೊಶ್‌ವಿವ್ ಶಿಟುಫಿಮ್): ಇವುಗಳಲ್ಲಿ ಸಾಗುವಳಿಯನ್ನು ಸಾಮೂಹಿಕವಾಗಿ ನಡೆಸಲಾಗುತ್ತದೆ. ಆದರೆ ಜೀವನವನ್ನು ವೈಯಕ್ತಿಕವಾಗಿ ನಡೆಸಲಾಗುತ್ತದೆ.

ಗ್ರಾಮ ಪರಿವಾರ ಅಥವಾ ಸಾಮೂಹಿಕ ಜೀವನದ ಗ್ರಾಮಗಳು (ಕಿಬ್ಬುಜಿಮ್)

ರಾಷ್ಟ್ರೀಯ ಜೀವನದಲ್ಲಿ ಗ್ರಾಮಪರಿವಾರಗಳ ಬಹಳ ಮಹತ್ವದ ಸ್ಥಾನವಿದೆ. ಇವುಗಳ ಸಾಧನೆಯೂ ಅದ್ಭುತವಾಗಿದೆ. ಗ್ರಾಮಪರಿವಾರಗಳ ತಾಯಿ 'ಡೆಗ್ಯಾನಿಯಾ' (ಹೂವು) ಎಂಬ ಮೊದಲನೇ ಗ್ರಾಮಪರಿವಾರವು 1905ರಲ್ಲಿ ಜೋರದಾನ ನದಿಯ ದಂಡೆಯ ಮೇಲೆ ಸ್ಥಾಪಿಸಲ್ಪಟ್ಟಿತ್ತು. ಈಗ ಇಸ್ರೇಲ್‌ನಲ್ಲಿ ಒಟ್ಟು 230 ಗ್ರಾಮ ಪರಿವಾರಗಳಿದ್ದು, ಅವುಗಳಲ್ಲಿ 8,500 ಜನಸಂಖ್ಯೆ ಇದೆ. ಇದು ಒಟ್ಟು ಜನಸಂಖ್ಯೆಯ ಶೇಕಡಾ 5ರಷ್ಟು. ಬೇಸಾಯಗಾರರ ಜನಸಂಖ್ಯೆಯು ಶೇಕಡಾ 34ರಷ್ಟು ಇದೆ. 45 ಗ್ರಾಮಗಳು 33 ವರ್ಷದವು. 1,000 ಗ್ರಾಮಗಳು 12ರಿಂದ 32 ವರ್ಷದವು, ಇವೆ: ಈ ಗ್ರಾಮಪರಿವಾರಗಳು ರಾಷ್ಟ್ರೀಯ ಆರ್ಥಿಕಸಮೃದ್ಧಿಯ ಸಾಧನೆಯ ಹಾಗೂ ರಾಷ್ಟ್ರರಕ್ಷಣೆಯಲ್ಲಿ ಬಹಳ ಮಹತ್ವದ ಪಾತ್ರವಹಿಸಿವೆ. ಹೆಚ್ಚಾಗಿ ಅವು ಗಡಿಯಲ್ಲೇ ಇರುವುದರಿಂದ ಅವು ರಾಷ್ಟ್ರದ ಪಹರೇದಾರರ ಕಾರ್ಯಮಾಡುತ್ತಿವೆ

ಪ್ರಮುಖ ಮುಂದಾಳುಗಳು ಗ್ರಾಮಪರಿವಾರಗಳಲ್ಲಿ ದುಡಿದು ಮುಂದಾದವರಿದ್ದಾರೆ. ಅವು 'ಶ್ರಮಪ್ರತಿಷ್ಠೆ'ಯ ಹಾಗೂ 'ಬೇಸಾಯಪ್ರತಿಷ್ಠೆ'ಯ ಆದರ್ಶ ಆಧಾರಗಳಾಗಿವೆ. ಗ್ರಾಮಪರಿವಾರದಲ್ಲಿ ಜೀವನದ ಎಲ್ಲ ಚಟುವಟಿಕೆಗಳನ್ನು ಸಾಮೂಹಿಕವಾಗಿ ನಡೆಸಲಾಗುತ್ತದೆ.

ಕೃಷಿ : ಇದು ಗ್ರಾಮಪರಿವಾರದ ಮುಖ್ಯ ಉದ್ಯೋಗ, ಕೋಳಿಯ ಸಾಕಾಣಿಕೆ, ಕುರಿಸಂಗೋಪನೆ, ತೋಟಗಾರಿಕೆ ಮುಂತಾದ ಎಲ್ಲವೂ ಇದರಲ್ಲಿ ಸೇರಿರುತ್ತವೆ. ಪ್ರತಿಯೊಂದು ಗ್ರಾಮಪರಿವಾರದ ವಶದಲ್ಲಿ ಅತ್ಯಾಧುನಿಕ ಕೃಷಿಯಂತ್ರಗಳಿರುತ್ತವೆ. ಗ್ರಾಮಪರಿವಾರಗಳು ಕೃಷಿಯ ಅದ್ಭುತ ಸಮೃದ್ಧಿಯನ್ನು ಸಾಧಿಸಿವೆ. 'ಕಿನೆರೆಟ' ಎಂಬ ಒಂದು ಗ್ರಾಮಪರಿವಾರವು 40 ವರ್ಷಗಳಲ್ಲಿ ಸಾಧಿಸಿದ ಪ್ರಗತಿಯು ಈ ಕೆಳಗಿನಂತಿದೆ :

	ವರ್ಷ	
ಉತ್ಪಾದನಾವಸ್ತುಗಳು	1913–14	1952–53
ಹಸುರು ಮೇವು (ಮೆಟ್ರಿಕ್ ಟನ್)	52	2400
ಹಾಲು (ಸಾವಿರ ಲೀಟರು)	64	531
ತತ್ತಿ (ಮೊಟ್ಟೆ) (ಸಾವಿರ)	84	1708
ಕಾಯಿಪಲ್ಲೆ (ತರಕಾರಿ) (ಮೆಟ್ರಿಕ್ ಟನ್)	50	722

ಹೀಗೆಯೇ ಎಲ್ಲ ಗ್ರಾಮಪರಿವಾರಗಳು ಪ್ರಗತಿಯನ್ನು ಸಾಧಿಸಿವೆ. ಇಸ್ರೇಲ್‌ನ ಒಟ್ಟು ಕೃಷಿ ಉತ್ಪತ್ತಿಯಲ್ಲಿ ಶೇಕಡಾ 36ರಷ್ಟು ಗ್ರಾಮಪರಿವಾರಗಳ ಪಾಲು ಇರುತ್ತದೆ.

ಉದ್ಯೋಗ : ಅನೇಕ ಗ್ರಾಮಪರಿವಾರಗಳು ಕಬ್ಬಿಣದ ಪೈಪು, ನೀರಾವರಿ ಪಂಪು, ತುಷಾರ ನೀರಾವರಿಯ ಯಂತ್ರ ಮೊದಲಾದವನ್ನು ತಯಾರಿಸುವ ಉದ್ಯೋಗಗಳನ್ನು ನಡೆಸುತ್ತಿವೆ.

ವಸತಿ, ಆಹಾರ, ಚಿಕಿತ್ಸೆ : ಗ್ರಾಮಪರಿವಾರವು ಆಹಾರ, ಚಿಕಿತ್ಸೆ, ವಸತಿ ಮುಂತಾದ ಎಲ್ಲ ಜೀವನಾವಶ್ಯಕತೆಗಳನ್ನೂ ಸದಸ್ಯರಿಗೆ ಸಾಮೂಹಿಕವಾಗಿ ಒದಗಿಸುತ್ತದೆ. ಇದಕ್ಕಾಗಿ ಗ್ರಾಮಪರಿವಾರದಲ್ಲಿ ಸಾಮೂಹಿಕ ಭೋಜನಾಲಯ, ಶಿಶುವಿಹಾರ, ಬಾಲಮಂದಿರ. ಮುಂತಾದ ಸೌಕರ್ಯಗಳಿರುತ್ತವೆ.

ಶಿಕ್ಷಣ : ಜನನವಾದೊಡನೆಯೇ ಮಕ್ಕಳ ಯೋಗಕ್ಷೇಮ ಹಾಗೂ ಶಿಕ್ಷಣದ ಹೊಣೆಯನ್ನು ಗ್ರಾಮಪರಿವಾರವು ವಹಿಸಿಕೊಳ್ಳುತ್ತದೆ. ಶಿಶುಗಳ ಪಾಲನೆಯನ್ನು ಸಾಮೂಹಿಕ ಶಿಶುವಿಹಾರದಲ್ಲಿ ಮಾಡಲಾಗುತ್ತದೆ. ತಾಯಿಯು ಆಗಾಗ್ಗೆ ತನ್ನ ಮಗುವಿಗೆ ಮೊಲೆ ಉಣ್ಣಿಸಲು ಹೋಗುತ್ತಾಳೆ. 18 ವರ್ಷಗಳವರೆಗೆ ಹೀಗೆಯೇ ಬೇರೆ ಬೇರೆ ಸ್ಥಳಗಳಲ್ಲಿ ಮಕ್ಕಳು ಸಾಮೂಹಿಕವಾಗಿ ಶಿಕ್ಷಣ ಪಡೆಯುತ್ತವೆ. ಮಧ್ಯಾಹ್ನ 4 ಗಂಟೆನಂತರ. ಭಾನುವಾರ ಮತ್ತು ರಜೆಯ ದಿವಸ ಮಕ್ಕಳು ತಮ್ಮ ತಾಯಿತಂದೆಗಳ

ಜೊತೆಗೆ ಇರುತ್ತಾರೆ. ವಿಶೇಷ ತರಬೇತಿ ಪಡೆದ ಮಹಿಳಾ ಸದಸ್ಯರೇ ಈ ಮಕ್ಕಳ ಸಂಸ್ಥೆಗಳನ್ನು ನಡೆಸುತ್ತಾರೆ. ಒಬ್ಬ ಮಹಿಳೆ 3ರಿಂದ 5ರವರೆಗೆ ಶಿಶುಗಳ ಪಾಲನೆ ಮಾಡುತ್ತಾಳೆ. ಬಾಲಮಂದಿರದಿಂದ ಪ್ರಾಸ್ತಮಿಕ ಶಿಕ್ಷಣವು ಪ್ರಾರಂಭವಾಗುತ್ತದೆ. 6 ವರ್ಷಕ್ಕೆ ಮೇಲ್ಪಟ್ಟ ಮಕ್ಕಳು ಮಕ್ಕಳ ಸಾಮೂಹಿಕ ಬೇಸಾಯಸಂಘಗಳ ಸದಸ್ಯರಾಗಿರುತ್ತಾರೆ. ಈ ಮಕ್ಕಳ ಸಂಘಗಳು ಚಿಕ್ಕ ಗ್ರಾಮಪರಿವಾರಗಳೇ ಆಗಿರುತ್ತವೆ. ಅವನ್ನು ಮಕ್ಕಳೇ ನಡೆಸುತ್ತಾರೆ. ಶಿಕ್ಷಕರು ಮಾರ್ಗದರ್ಶನ ಮಾಡುತ್ತಾರೆ. ವೈಯಕ್ತಿಕಸೊತ್ತಿನ ಮೋಹ ಬಿಟ್ಟು ಗ್ರಾಮಪರಿವಾರದ ಆದರ್ಶಗಳನ್ನೇ ತುಂಬಿ ಕೊಂಡಂಥ ಹೊಸ ಪೀಳಿಗೆಯನ್ನು ಸಾಮೂಹಿಕ ಶಿಕ್ಷಣ ಪದ್ಧತಿಯಿಂದ ತಯಾರಿಸ ಲಾಗುತ್ತಿದೆ. ಈ ಪ್ರಯತ್ನದಲ್ಲಿ ಸಾಕಷ್ಟು ಯಶಸ್ಸು ದೊರಕಿದೆ ಎಂದು ಹೇಳ ಬಹುದು.

ಸಾಂಸ್ಕೃತಿಕ ಜೀವನ: ಗ್ರಾಮಪರಿವಾರಗಳು ಉತ್ತಮವಾದ ಗ್ರಂಥಾಲಯ ಗಳನ್ನು ನಡೆಸುತ್ತವೆ. ಡೆಗ್ಯಾನಿಯಾ ಗ್ರಾಮಪರಿವಾರದ ಗ್ರಂಥಾಲಯದಲ್ಲಿ 30,000 ಉತ್ತಮ ಗ್ರಂಥಗಳಿವೆ. ಕೆಲವು ಗ್ರಾಮಪರಿವಾರಗಳಲ್ಲಿ ನಾಟಕ ಮಂದಿರಗಳೂ, ಚಿತ್ರಮಂದಿರಗಳೂ ಇರುತ್ತವೆ.

ಸದಸ್ಯತ್ವ : 18 ವರ್ಷಕ್ಕೆ ಮೇಲ್ಪಟ್ಟ ಪ್ರತಿಯೊಬ್ಬ ಪುರುಷ ಹಾಗೂ ಮಹಿಳೆ ಗ್ರಾಮಪರಿವಾರದ ಸದಸ್ಯರಾಗಬಹುದು. ಸಾಧಾರಣ ಸಭೆಯು ಅಂಥ ಸದಸ್ಯತ್ವ ವನ್ನು ಮನ್ನಿಸಬೇಕು. ಒಂದು ವರ್ಷ ಸದಸ್ಯನು ಸಿದ್ಧತೆಯ ಅವಧಿಯಲ್ಲಿರುತ್ತಾನೆ. ಈ ಅವಧಿಯಲ್ಲಿ ಅವನು ವೈಯಕ್ತಿಕ ಸ್ವತ್ತಿನ, ವೈಯಕ್ತಿಕ ಗಳಿಕೆಯ ವಿಚಾರಗಳನ್ನು ಬಿಡುವುದನ್ನು ಕಲಿಯಬೇಕಾಗುತ್ತದೆ. ಅವನ ಸ್ವಂತ ಆಸ್ತಿ ಏನಾದರೂ ಇದ್ದರೆ ಅದನ್ನು ಅವನು ಗ್ರಾಮಪರಿವಾರಕ್ಕೆ ಕೊಡಬೇಕಾಗುತ್ತದೆ. ಗ್ರಾಮಪರಿವಾರವನ್ನು ತೊರೆದು ಹೋಗುವಾಗ ಅವನು ಏನನ್ನೂ ವಾಪಸ್ಸು ಪಡೆಯನು. ಸಾಮೂಹಿಕ ಜೀವನಕ್ಕೆ ಹೊಂದಿಕೊಳ್ಳುವುದನ್ನು ಅವನು ಕಲಿಯಬೇಕು. ಗ್ರಾಮಪರಿವಾರವು ಅವನ ಆರ್ಥಿಕ, ಸಾಮಾಜಿಕ, ಆಧ್ಯಾತ್ಮಿಕ ಜೀವನದ ಎಲ್ಲ ಯೋಗಕ್ಷೇಮವನ್ನು ವಹಿಸುವುದು.

ಸಂಚಾಲನ ಹಾಗೂ ಆಡಳಿತ : ಗ್ರಾಮಪರಿವಾರವು ಒಂದು ಸಹಕಾರಸಂಘ. ಸಂಘದ ನಿಯಮದ ಪ್ರಕಾರ ಅದರ ಸಂಚಾಲನೆಯು ಹಾಗೂ ಕಾರ್ಯಗಳು ನಡೆಯು ತ್ತವೆ; ಲೆಕ್ಕತಪಾಸಣೆಯೂ ಆಗುತ್ತದೆ. ಗ್ರಾಮಪರಿವಾರದ ಸಾಧಾರಣ ಸಭೆಯು ವಾರದಲ್ಲಿ ಒಂದೆರಡು ಸಲ ಕೂಡಿ ಮಹತ್ವದ ವಿಷಯಗಳ ನಿರ್ಣಯ ಮಾಡುತ್ತದೆ. ದೈನಂದಿನಕಾರ್ಯಗಳನ್ನು ನಡೆಸಲು ಮಹತ್ವದ ಸಮಿತಿಗಳಿರುತ್ತವೆ. ಸರತಿಯ ಮೇಲೆ ಈ ಸಮಿತಿಗಳಲ್ಲಿ ಎಲ್ಲ ಸದಸ್ಯರೂ ಒಂದಿಲ್ಲೊಂದು ಹೊಣೆ ವಹಿಸಿಕೊಂಡು ಮುಂದಾಳುತನವನ್ನು ಕಲಿಯಬೇಕಾಗುತ್ತದೆ. ವರ್ಷಕ್ಕೊಮ್ಮೆ ಸಾಧಾರಣ ಸಭೆಯು ಸಮಿತಿಗಳನ್ನು, ಪದಾಧಿಕಾರಿಗಳನ್ನು ಆರಿಸುತ್ತದೆ. ಸಾಧಾರಣ ಕಾರ್ಯದರ್ಶಿಯು ಮುಖ್ಯ ಸಂಚಾಲಕ ಸಾಧಾರಣ ಸಭೆಯು ಗ್ರಾಮಪರಿವಾರದ ಸಂಪತ್ತು; ಅದರ

ಕಾರ್ಯದರ್ಶಿ ಮುಂತಾದವರು ಸರಕಾರದ ಉಚ್ಚ ಅಧಿಕಾರಿಗಳಿದ್ದಂತೆ. ಇಸ್ರೇಲ್ ಗ್ರಾಮಪರಿವಾರವು ಪ್ರಾಚೀನ ಗ್ರೀಸದ 'ನಗರರಾಜ್ಯ'(ಸಿಟಿ ಸ್ಟೇಟ್)ದಂತಿದೆ.

ಗ್ರಾಮಪರಿವಾರದಲ್ಲಿ ಸದಸ್ಯರಿಗೆ ಅವರ ಒಲವು ಹಾಗೂ ತರಬೇತಿಗೆ ತಕ್ಕಂತೆ ಕೆಲಸಗಳನ್ನು ಸಾಮಾನ್ಯವಾಗಿ ಸ್ಥಿರವಾಗಿಯೇ ಕೊಡಲಾಗುತ್ತದೆ. ಅಡಿಗೆ, ಮುಸುರೆ ಮುಂತಾದ ಬೇಸರಿಸುವ ಕೆಲಸಗಳನ್ನು ಸರತಿಯಂತೆ ಹಂಚಲಾಗುತ್ತದೆ. ಸಮಿತಿಗಳ ಸದಸ್ಯರಾಗಲು ಅಥವಾ ಪದಾಧಿಕಾರಿಗಳಾಗಲು ಅಲ್ಲಿ ಕಚ್ಚಾಟವಿರುವುದಿಲ್ಲ. ಆಗ್ರಹ ದಿಂದ ಮನವೊಲಿಸಿ ಅಂಥ ಹೊಣೆಗಾರಿಕೆಯನ್ನು ಸದಸ್ಯರ ಮೇಲೆ ಹೇರಲಾಗುತ್ತದೆ. ದಿನಾಲು ಸಂಜೆಗೆ ಮರುದಿವಸದ ಕೆಲಸಗಳ ಹೊಣೆಗಾರಿಕೆಯ ಪಟ್ಟಿಯನ್ನು ತೂಗು ಹಾಕಲಾಗುತ್ತದೆ.

ಲೆಕ್ಕಪತ್ರ : ಗ್ರಾಮಪರಿವಾರದಲ್ಲಿ ವೇತನ, ಕೂಲಿಕೊಡುವ ಪದ್ಧತಿ ಇರ ದಿದ್ದರೂ ಪ್ರತಿಯೊಂದು ಕೆಲಸದ ಶಾಖೆಯಲ್ಲಿ ಆಳುಗಳ ಲೆಕ್ಕವಿಡಲಾಗುತ್ತದೆ. ಕೆಲಸ ಗಳಲ್ಲಿ ಅರ್ಧದಷ್ಟು ಉತ್ಪಾದಕ ಕೆಲಸಗಳು ಇರುತ್ತವೆ; ಅರ್ಧದಷ್ಟು ಶಿಕ್ಷಣ, ಚಿಕಿತ್ಸೆ, ಮಕ್ಕಳ ಪಾಲನೆ, ಕಾವಲು ಮುಂತಾದ ಅನುತ್ಪಾದಕ ಸೇವೆಗಳ ಕೆಲಸಗಳಿರುತ್ತವೆ. ಅಲ್ಲದೆ ಈ ಶಾಖೆಯಲ್ಲಿ ಸೈನಿಕ ಸೇವೆಯ ಕೆಲಸ, ಯುವಕ ಆಂದೋಲನದ ಸೇವೆ ಮುಂತಾದ ಕೆಲಸಗಳನ್ನು ಹಿಡಿಯಲಾಗುತ್ತದೆ. ಇಂಥ ಅನುತ್ಪಾದಕ ಸೇವೆಗಳಿಗೆ ಸಹ ಗ್ರಾಮಪರಿವಾರದಿಂದಲೇ ವೆಚ್ಚಕೊಡಬೇಕಾಗುತ್ತದೆ. ಹೀಗೆ ಗ್ರಾಮಪರಿವಾರಗಳ ತಮ್ಮ ಆದಾಯದಿಂದಲೇ ಇಂಥ ಅನುತ್ಪಾದಕ ಸೇವೆಗಳ ವೆಚ್ಚವನ್ನು ವಹಿಸುತ್ತವೆ.

ಸಾಮಾಜಿಕ ಹಾಗೂ ನೈತಿಕ ತತ್ವಗಳು : ಗ್ರಾಮಪರಿವಾರಗಳ ಸಮೃದ್ಧಿಗೆ ಸ್ಫೂರ್ತಿಕೊಟ್ಟ ಮಹತ್ವದ ಸಾಮಾಜಿಕ, ನೈತಿಕ ತತ್ವಗಳನ್ನು ತಿಳಿಯುವುದಗತ್ಯ.

(ಅ) **ಸ್ವಂತ ದೈಹಿಕ ಉತ್ಪಾದಕಶ್ರಮ :** ಪ್ರಾರಂಭದ ಗ್ರಾಮಪರಿವಾರಗಳ ಆಗ್ರದೂತರು ಅರಬ ಕೂಲಿಯವರನ್ನು ಹಚ್ಚಿ, ಹಣ್ಣಿನ ತೋಟಗಾರಿಕೆ ನಡೆಸುವು ದನ್ನು ವಿರೋಧಿಸಿದರು. ಗ್ರಾಮಪರಿವಾರದೊಳಗೆ ಕೂಲಿಯಶ್ರಮ ಹಚ್ಚಿ ಶ್ರಮದ ಶೋಷಣೆ ಮಾಡಕೂಡದೆಂದು ಅವರು ನಿರ್ಬಂಧಿಸಿದರು. ಸದಸ್ಯರ ಸ್ವಂತ ಶ್ರಮ ದಿಂದಲೇ ಎಲ್ಲ ಕೆಲಸಗಳಾಗತಕ್ಕದ್ದೆಂದು ಅವರು ವಿಧಿಸಿದರು. ಬಹು ಸಂಖ್ಯೆಯಲ್ಲಿ ಯಹೂದಿ ನಿರಾಶ್ರಿತರು ವಲಸೆ ಬಂದ ಬಳಿಕ, ಗ್ರಾಮಪರಿವಾರದ ತತ್ವಗಳನ್ನು ಅವರು ಒಪ್ಪದಿರುವಾಗ, ಅವರಿಗೆ ಉದ್ಯೋಗ, ಉಪಜೀವನ ಒದಗಿಸಲು ಸ್ವಂತ ಶ್ರಮದ ತತ್ವವನ್ನು ಸ್ವಲ್ಪ ಸಡಿಲಗೊಳಿಸಿತಾದರೂ ಸ್ಫೂರ್ತಿಯ ಆದರ್ಶ ಈಗಲೂ ಅದೇ ಇದೆ.

(ಆ) **ಪೂರ್ಣಸಮಾನತೆ :** 'ಪ್ರತಿಯೊಬ್ಬನಿಂದಲೂ ಯೋಗ್ಯತೆಗನುಸರಿಸಿ ದುಡಿತ, ಪ್ರತಿಯೊಬ್ಬನಿಗೂ ಅವನ ಅವಶ್ಯಕತೆಗಳ ಪೂರೈಕೆ' ಈ ಉಚ್ಚತಮ ಕೌಟುಂಬಿಕ

ತತ್ವ ಗ್ರಾಮಪರಿವಾರದ ಆಧಾರ. ಇದೇ ಸಾಮ್ಯವಾದದ ಮತ್ತು ಸರ್ವೋದಯದ ಉಚ್ಚತಮ ತತ್ವ. ಈ ತತ್ವವನ್ನು 225 ಗ್ರಾಮಪರಿವಾರಗಳಲ್ಲಿ, ಇಸ್ರೇಲದಲ್ಲಿ ಸುಮಾರು 80,000–85,000 ಜನರು ಸರಾಸರಿಯಾಗಿ 20–30 ವರ್ಷಗಳಿಂದ ಸಕ್ರಿಯವಾಗಿ ಆಚರಿಸುತ್ತ ಬಂದಿದ್ದಾರೆ. ಈ ಅದ್ಭುತ ಸಾಧನೆ ಸಾಮ್ಯವಾದಿಗಳಿಗೆ, ಸರ್ವೋದಯದ ಭಕ್ತರಿಗೆ, ಇಡಿಯ ಮಾನವ ಜಾತಿಗೆ ಒಂದು ಸಾಮಾಜಿಕ, ನೈತಿಕ ಆಹ್ವಾನವಾಗಿದೆ. ಗಾಂಧೀಜಿಯವರು ಬೋಧಿಸಿದಂತೆ ಅಲ್ಲಿ ಎಲ್ಲಕೆಲಸಗಳನ್ನೂ ಸಾಮಾಜಿಕ ದೃಷ್ಟಿಯಿಂದ ಸರಿಸಮಾನವೆಂದು ಗಣಿಸಲಾಗುತ್ತದೆ. ಅವು ಮೇಲು, ಕೀಳು ಎಂದು ಅವುಗಳ ಹೆಚ್ಚುಕಡಮೆ ಬೆಲೆ ಮಾಡಲಿಕ್ಕೇ ಆಗದು. ಆದ್ದರಿಂದ ಸಮಾಜದ ಹಿತಕ್ಕೆ ಅಲ್ಲಿ ಒಬ್ಬ ಪ್ರಾಧ್ಯಾಪಕನ ಮಹತ್ವವಿದ್ದಂತೆ, ಒಬ್ಬ ಅಗಸನ ಅಥವಾ ಅಡಿಗೆಯವಳ ಮಹತ್ವವೂ ಸಮನಾಗಿ ಇದೆ ಎಂದು ಭಾವಿಸಲಾಗುತ್ತದೆ. ಅಂತೆಯೇ ಎಲ್ಲ ಕೆಲಸಗಾರರ ಮಾನವೋಚಿತ ಜೀವನಾವಶ್ಯಕತೆಗಳನ್ನು ಸಮನಾಗಿ ಅಂದರೆ ಜೇಲಿನ ಸಮಾನತೆಯಿಂದಲ್ಲ; ಆದರೆ ಮಾನವೀಯ ಅವಶ್ಯಕತೆಯ ದೃಷ್ಟಿಯಿಂದ ಸಮನಾಗಿ ಪೂರೈಸುವ ಹೊಣೆಗಾರಿಕೆ ಗ್ರಾಮಪರಿವಾರದ ಮೇಲೆ ಇರುತ್ತದೆ. ಒಬ್ಬ ರೋಗಿ, ಮಗು ಅಥವಾ ಮುದುಕ, ದೈಹಿಕವಾಗಿ ಒಬ್ಬ ಪ್ರಾಯದವನಷ್ಟು ಹೆಚ್ಚು ಕೆಲಸ ಮಾಡುವುದಾಗಲಿಕ್ಕಿಲ್ಲ; ಆದರೆ ಸಾಮಾಜಿಕ ನ್ಯಾಯ, ಸಮಾನತೆಯ ದೃಷ್ಟಿಯಿಂದ ಪರಿವಾರದಲ್ಲಿ ಮಾಡಿದಂತೆ ಪ್ರಾಯದವನಿಗಿಂತ ಹೆಚ್ಚು ಹಾಲನ್ನು ರೋಗಿಗೆ ಅಥವಾ ಮಗುವಿಗೆ ಒದಗಿಸಲಾಗುತ್ತದೆ.

(ಇ) **ಹಣದ ವ್ಯವಹಾರದ ಲೋಪ :** ಗ್ರಾಮಪರಿವಾರದೊಳಗಂತೂ ಸದಸ್ಯರಲ್ಲಿ, ಪರಸ್ಪರ ಕೊಡಕೊಳ್ಳುವ ಅಥವಾ ಕೆಲಸಕ್ಕೆ ಪಗಾರ, ಕೂಲಿ ಮುಂತಾದ ಹಣದ ವ್ಯವಹಾರಗಳೇ ಇಲ್ಲ. ಸಾಮೂಹಿಕ ಭೋಜನಾಲಯ, ಸಾಮೂಹಿಕ ಸಂಸ್ಥೆಗಳಲ್ಲಿ ಅವರ ಎಲ್ಲ ಅವಶ್ಯಕತೆಗಳ ಪೂರೈಕೆಯಾಗುತ್ತದೆ. ರಜೆಯಲ್ಲಿ ವಿಶ್ರಾಂತಿ ಧಾಮಕ್ಕೆ ಹೋದಾಗ್ಗ, ವೆಚ್ಚಕ್ಕಾಗಿ ಅಥವಾ ಸಣ್ಣಪುಟ್ಟ ಸ್ವಂತದ ವೆಚ್ಚಗಳಿಗಾಗಿ ಗ್ರಾಮಪರಿವಾರವು ಸದಸ್ಯರಿಗೆ ಹಣವನ್ನು ಸ್ವಲ್ಪ ಜೇಬಿನ ವೆಚ್ಚವಾಗಿ ಕೊಡುತ್ತದೆ. ಯಾವನೊಬ್ಬ ಸದಸ್ಯನಿಗೆ ಹೊರಗಿನಿಂದ ಹೆಚ್ಚಿನ ಕಾಣಿಕೆ ಅಥವಾ ಆಸ್ತಿ, ಸಂಬಳ ಮುಂತಾದ್ದು ದೊರೆತರೆ ಅದನ್ನು ಅವನು ಹಿಂದೆಮುಂದೆ ನೋಡದೆ ತನ್ನ ಗ್ರಾಮ ಪರಿವಾರಕ್ಕೆ ಕೊಟ್ಟುಬಿಡಬೇಕಾಗುತ್ತದೆ. ಅಂದರೆ ಗ್ರಾಮಪರಿವಾರದ ಸದಸ್ಯ ಒಬ್ಬ ಮಂತ್ರಿಯಾದರೆ ಅವನು ತನ್ನ ಸಂಬಳವನ್ನೆಲ್ಲ ಗ್ರಾಮಪರಿವಾರಕ್ಕೆ ಕೊಟ್ಟುಬಿಡುತ್ತಾನೆ. ಗ್ರಾಮಪರಿವಾರವು ಅವನ ಅವಶ್ಯಕತೆಗಳನ್ನು ಪೂರೈಸುತ್ತದೆ.

(ಈ) **ವರ್ಗರಹಿತ ಸಮಾಜ:** ಅಲ್ಲಿನ ಗ್ರಾಮಪರಿವಾರದಲ್ಲಿ ಆರ್ಥಿಕ ವರ್ಗಗಳಾಗಲಿ, ಮೇಲುಕೀಳು ಕೆಲಸಗಳ ವರ್ಗಗಳಾಗಲಿ ಇಲ್ಲವೇ ಇಲ್ಲ. ಗ್ರಾಮಪರಿವಾರದ ಸದಸ್ಯನು ಮಂತ್ರಿ ಆಗಿದ್ದರೆ. ರಜೆಯಲ್ಲಿ ತನ್ನ ಗ್ರಾಮಪರಿವಾರಕ್ಕೆ ಬಂದಾಗ ಯಾವ ಸಂಕೋಚವಿಲ್ಲದೆ ಸಾಮೂಹಿಕ ಭೋಜನಾಲಯದಲ್ಲಿ ಊಟಕ್ಕೆ ಕೊಡುತ್ತಾನೆ ಅಥವಾ ಹೊಲದಲ್ಲಿ ಕಳೆ ಕೀಳುತ್ತಾನೆ.

(ಉ) **ಸಾಮೂಹಿಕ ಸಮೃದ್ಧಿ :** ಇಸ್ರೇಲ್ ಗ್ರಾಮುಪರಿವಾರಗಳು ಸನ್ಯಾಸಿಗಳ ಮಠಗಳಲ್ಲ. ಭೌತಿಕ. ಜೀವನಗಳ ಸೌಲಭ್ಯಗಳನ್ನು ತ್ಯಜಿಸುವ ಆದರ್ಶ ಅಲ್ಲಿ ಇಲ್ಲ. ಅವು ಲೌಕಿಕ ಹಾಗೂ ಆರ್ಥಿಕ ಸಂಸ್ಥೆಗಳು. ಸಾಮೂಹಿಕ ದುಡಿತದಿಂದ ಸಾಮೂಹಿಕ ವಾಗಿಯೇ ಇಂಥ ಸೌಲಭ್ಯಗಳನ್ನು ಹೆಚ್ಚಿಸಬೇಕೆಂಬ ಆದರ್ಶ ಅಲ್ಲಿದೆ. ಒಬ್ಬ ಹರಕು ಚಿಂದಿ ತೊಟ್ಟು. ಇನ್ನೊಬ್ಬ ಸೂಟು ಹಾಕಬೇಕೆಂಬ ಆದರ್ಶ ಅಲ್ಲಿ ಇಲ್ಲ.

(ಊ) **ಗ್ರಾಮುಪರಿವಾರದಲ್ಲಿ ಸ್ಫೂರ್ತಿ ಮತ್ತು ಉತ್ತೇಜನ:** ಗ್ರಾಮು ಪರಿವಾರದಲ್ಲಿ ಸದಸ್ಯರ ಕೆಲಸದ ಆಳತೆ ಇಲ್ಲ: ಕೂಲಿ, ಪಗಾರಗಳಿಲ್ಲವೆಂದ ಬಳಿಕ ಅಲ್ಲಿ ದುಡಿಯುವುದಕ್ಕೆ ಸ್ಫೂರ್ತಿ. ಉತ್ತೇಜನಗಳೇನು ಎಂದು ಅನುಮಾನ. ವೈಯಕ್ತಿಕ, ಆರ್ಥಿಕ ಅಥವಾಭೌತಿಕ ಲಾಭವು ಅಲ್ಲಿ ದುಡಿತಕ್ಕೆ ಉತ್ತೇಜನವಾಗಿಲ್ಲವೆಂಬುದು ಸ್ಪಷ್ಟ. ಆದರೆ ಅಲ್ಲಿ ಬೇರೆ ಬಲವಾದ ಸಾಮಾಜಿಕ, ಆರ್ಥಿಕ ಹಾಗೂ ನೈತಿಕ ಉತ್ತೇಜನಗಳು ಗ್ರಾಮುಪರಿವಾರದ ಸದಸ್ಯರಿಗೆ ಹೆಚ್ಚು ದಕ್ಷತೆಯಿಂದ ದುಡಿಯಲು ಸ್ಫೂರ್ತಿ ಕೊಡುತ್ತವೆ. 'ಕಾಯಕವೇ ಕೈಲಾಸ' ಅಂಥದೊಂದು ಉತ್ತೇಜನ ಸಾಮಾಜಿಕ ವಾತಾವರಣದಿಂದ ಹಾಗೂ ಸಾಮೂಹಿಕ ಶಿಕ್ಷಣದಿಂದ ಅಲ್ಲಿಯ ಸದಸ್ಯರಲ್ಲಿ ಮುಖ್ಯವಾಗಿ ಹೊಸ ಪೀಳಿಗೆ ಯಲ್ಲಿ ಅಂಥ ಮನೋಭಾವನೆ ಬೆಳೆದಿದೆ. ಸಮಾಜದಲ್ಲಿ ಪ್ರಮುಪ್ರತಿಷ್ಠೆ ಅಲ್ಲಿ ಬಹಳವಿದೆ. ಅದರಿಂದ ಸಾಮೂಹಿಕ ಬೇಸಾಯಗಾರರು ಆಟದಲ್ಲಿಯ ಮೇಲಾಟದ ಭಾವದಿಂದ ತಮ್ಮ ಗ್ರಾಮುಪರಿವಾರಕ್ಕಾಗಿ ಹೆಚ್ಚೆಚ್ಚು ದುಡಿಯುತ್ತಾರೆ. ದುಡಿತದ ಗೌರವದ ಬಗ್ಗೆ ಸಾಮಾಜಿಕ ಅಭಿಪ್ರಾಯವೂ ಜನರ ಮೇಲೆ ಪ್ರಭಾವಬೀರಿ ದಕ್ಷತೆಯಿಂದ ದುಡಿ ಯಲು ಅವರಿಗೆ ಪ್ರೇರೇಪಿಸುತ್ತದೆ. ಆರ್ಥಿಕ ಉತ್ತೇಜನವೂ ಅಲ್ಲಿ ಇಲ್ಲದೆ ಇಲ್ಲ. ಇಂದು ಹೊರಗೆ ಆರ್ಥಿಕ ವಿಷಮತೆಯು ಸಮಾಜದಲ್ಲಿ ತೀವ್ರ. ಅನಿಶ್ಚಿತ ಭವಿಷ್ಯಗಳ ವಾತಾವರಣದಲ್ಲಿ ಯಾವಾಗಲೂ ದುಡಿಮೆಗಾರರು ಚಿಂತೆಯಲ್ಲಿ ಮುಳುಗಿರುತ್ತಾರೆ. ಆದರೆ ಇಸ್ರೇಲ್ ಗ್ರಾಮುಪರಿವಾರವು ತನ್ನ ಸದಸ್ಯರಿಗೆ ಎಲ್ಲ ಮಾನವೀಯ ಅವಶ್ಯಕತೆ ಗಳನ್ನು. ಅನುಕೂಲತೆಗಳನ್ನು ಒದಗಿಸುವ ನಿಶ್ಚಿತ ಭರವಸೆ ಕೊಡುತ್ತಿರುವುದರಿಂದ ಅದರ ಸದಸ್ಯರು ನಿಶ್ಚಿಂತರಾಗಿರುತ್ತಾರೆ. ಗ್ರಾಮುಪರಿವಾರದಲ್ಲಿ ತಮ್ಮ ಹಾಗೂ ಪರಿವಾರದ ಭವಿಷ್ಯ ಭದ್ರವಾಗಿದೆ ಎಂದು ಅವರಿಗೆ ನಿಶ್ಚಿತ ಭರವಸೆ ಇದೆ. ಎಲ್ಲರಿಗೂ ಇಂಥ ನಿಶ್ಚಿತ ನಿಶ್ಚಿಂತ ಜೀವನವು ಗ್ರಾಮುಪರಿವಾರದ ಸಮೃದ್ಧಿಯಿಂದ ದೊರಕು ತ್ತಿರುವುದೇ ದುಡಿತಕ್ಕೆ ಬಹು ಪರಿಣಾಮಕಾರಿ ಭೌತಿಕ ಹಾಗೂ ಆರ್ಥಿಕ ಉತ್ತೇಜನ ವಾಗಿದೆ.

(ಋ) **ಗ್ರಾಮುಪರಿವಾರದ ಭವಿಷ್ಯ :** ಯಹೂದಿಗಳ 'ಧರ್ಮರಾಜ್ಯ'ವನ್ನು ಸ್ಥಾಪಿಸುವ ಸ್ಫೂರ್ತಿಯು ಇಸ್ರೇಲ್‌ನ ಹೊರಗಿನ ದೇಶಗಳ ಸಾವಿರಾರು ಯಹೂದಿ ಯುವಕ ಯುವತಿಯರನ್ನು ಆಕರ್ಷಿಸಿತು. ಅವರೆಲ್ಲರೂ ಇಸ್ರೇಲ್‌ನಲ್ಲಿ ನೆಲಸಲು ಗ್ರಾಮುಪರಿವಾರಗಳನ್ನು ಸ್ಥಾಪಿಸಿದರು. ಗ್ರಾಮುಪರಿವಾರಗಳಿಂದಲೇ ಅವರು ಕಾಲೂರಿ ಇಸ್ರೇಲ್‌ನಲ್ಲಿ ನಿಲ್ಲುವುದು ಸಾಧ್ಯವಾಯಿತು. ಗ್ರಾಮುಪರಿವಾರಗಳಿಂದಲೇ ಅವರು ವಿಪರೀತ ಪರಿಸ್ಥಿತಿಗಳನ್ನೆಲ್ಲ ಎದುರಿಸಿ ಇಸ್ರೇಲದ ಸ್ಥಾಪನೆ ಹಾಗೂ ಸಂರಕ್ಷಣೆ ಮಾಡು

ವುದು ಸಾಧ್ಯವಾಯಿತು. ತಮ್ಮ ಸಮೃದ್ಧಿಯನ್ನೂ ಅವರು ಅವುಗಳಿಂದಲೇ ಸಾಧಿಸಿದರು. ಆ ಅಗ್ರದೂತರು ಹೊರದೇಶಗಳಲ್ಲಿ ಬಹಳಷ್ಟು ಯಹೂದಿ ವಿರೋಧದ ದಬ್ಬಾಳಿಕೆಯನ್ನೂ ಹಾಗೂ ಬವಣೆಗಳನ್ನೂ ಅನುಭವಿಸಿದ್ದರು. ಆದರೆ ಸ್ವತಂತ್ರ ಇಸ್ರೇಲ್‌ನಲ್ಲಿಯೇ ಹುಟ್ಟಿ ಬೆಳೆದ ಯಹೂದಿ ತರುಣರಿಗೆ ಈ ಅನುಭವಗಳು ಮತ್ತು ಅವುಗಳಿಂದ ಬಂದ ಸ್ಫೂರ್ತಿಯು ಇಲ್ಲ. ಅವರೂ ಗ್ರಾಮಪರಿವಾರಗಳ ವಾಸ್ತವಿಕ ಸಾಮೂಹಿಕ ಜೀವನದ ವಾತಾವರಣದಲ್ಲಿ ಹಾಗೂ ಸಂಸ್ಕಾರಗಳಲ್ಲಿ ಅವರು ಬೆಳೆದಿರುವುದರಿಂದ ಅವರಿಗೆ ತಮ್ಮ ಗ್ರಾಮಪರಿವಾರಗಳಲ್ಲಿ ಭಕ್ತಿ, ಆಸಕ್ತಿ ಇದೆ. ಹೊರಗಿನ, ಸುತ್ತಲಿನ ವ್ಯಕ್ತಿವಾದಿ ಜೀವನದ ಆಕರ್ಷಣೆಯು ಅವರ ಮೇಲೆ ಆಘಾತ ಮಾಡುತ್ತಿದ್ದರೂ ಅವರ ಗ್ರಾಮಪರಿವಾರಗಳ ಭಕ್ತಿ ಕಡಮೆ ಆಗಿಲ್ಲ.

ಹೊಸದಾಗಿ ಬೇರೆ ದೇಶಗಳಿಂದ ಇತ್ತೀಚೆಗೆ ವಲಸೆ ಬಂದ ಯಹೂದಿಗಳಿಗೆ ಮಾತ್ರ ಪ್ರಾರಂಭದ ಅಗ್ರದೂತರ ಬವಣೆಗಳ ಅನುಭವವೂ ಇಲ್ಲ, ಸ್ಫೂರ್ತಿಯೂ ಇಲ್ಲ. ಅದ್ದರಿಂದ ಗ್ರಾಮಪರಿವಾರಗಳಲ್ಲಿ ಭಕ್ತಿಯೂ ಇಲ್ಲ. ಆದ್ದರಿಂದ ಈಚೆಗೆ 10 ವರ್ಷಗಳಲ್ಲಿ ಹೊಸ ಗ್ರಾಮಪರಿವಾರಗಳ ಸ್ಥಾಪನೆಯಾಗಿಲ್ಲ. ಅಲ್ಲದೆ ಇತ್ತೀಚೆಗೆ ಊಟಉಡಿಗೆಗಳಲ್ಲಿ ವೈಯಕ್ತಿಕ ಅಭಿರುಚಿಗಳಿಗೂ ಗ್ರಾಮಪರಿವಾರಗಳಲ್ಲಿ ಅವಕಾಶ ದೊರಕುತ್ತಿವೆ. ಅದರಿಂದ ಗ್ರಾಮಪರಿವಾರದ ಮೂಲತತ್ವಗಳಿಗೆ ಧಕ್ಕೆ ಇಲ್ಲವೆಂದು ಗ್ರಾಮಪರಿವಾರಗಳ ಸದಸ್ಯರ ವಿಶ್ವಾಸ. ಹೀಗೆ ಗ್ರಾಮಪರಿವಾರಗಳು ಅಭವೃವಾಗಿರದಿದ್ದರೂ, ವ್ಯಕ್ತಿವಾದಿ, ಸ್ಪರ್ಧಾತ್ಮಕ ಸಮಾಜದೊಡನೆ ಸ್ಪರ್ಧೆ ಮಾಡಬೇಕಾಗಿದೆ.

(ಊ) **ಮಹಿಳೆಯರ ಸಮಸ್ಯೆ :** ಗ್ರಾಮಪರಿವಾರಗಳಲ್ಲಿ ತತ್ವಶಃ ಸ್ತ್ರೀ ಪುರುಷರು ಸಮನಾಗಿದ್ದಾರೆ. ಸ್ತ್ರೀಯರು ಆರ್ಥಿಕವಾಗಿ ಸ್ವತಂತ್ರರೂ ಆಗಿದ್ದಾರೆ. ಅವರನ್ನು ಉತ್ಪಾದಕ ಕಾರ್ಯಗಳಲ್ಲಿ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಲು ಸಾಧ್ಯವಿದ್ದಷ್ಟು ಹೆಚ್ಚು ಅನುಕೂಲತೆಗಳನ್ನು ಗ್ರಾಮಪರಿವಾರಗಳು ನಿರ್ಮಿಸಿವೆ. ಆದರೂ ಗ್ರಾಮಪರಿವಾರಗಳಲ್ಲಿ ಅನುತ್ಪಾದಕ ಸೇವೆಗಳು ಹೆಚ್ಚಿವೆ. ಇಂಥವುಗಳಲ್ಲಿ ಹೆಚ್ಚಾಗಿ ಮಹಿಳೆಯರನ್ನೇ ತೊಡಗಿಸಲಾಗುತ್ತದೆ. ಸಾಮೂಹಿಕ ಭೋಜನಾಲಯಗಳಲ್ಲಿ, ಸಾಮೂಹಿಕ ಶಿಶುಗೃಹಗಳಲ್ಲಿ ಸ್ತ್ರೀಯರೇ ಹೆಚ್ಚಾಗಿ ಕೆಲಸ ಮಾಡುತ್ತಾರೆ. ಅವರು ವೈಯಕ್ತಿಕವಾಗಿ ತಾವು ತಮ್ಮ ಪರಿವಾರಗಳಲ್ಲಿ ಮಾಡುತ್ತಿದ್ದ ಕೆಲಸಗಳನ್ನೇ ಮಾಡಬೇಕಾಗಿದೆ. ಅನೇಕ ಮಹಿಳೆಯರಿಗೆ ಅದರಿಂದ ಅಸಮಾಧಾನ. ಅದರಂತೆ ಮಕ್ಕಳ ಸಾಮೂಹಿಕ ಪಾಲನೆಯಿಂದಲೂ ಕೆಲವು ತಾಯಿಯರಿಗೆ ಸಮಾಧಾನವಿಲ್ಲ. ಈ ಸಮಸ್ಯೆಗಳನ್ನು ಗ್ರಾಮಪರಿವಾರಗಳು ಎದುರಿಸುತ್ತಿವೆ.

ವೈಯಕ್ತಿಕ ಬೇಸಾಯದ ವಸತಿಗಳು (ಮೋಶವಿಮ್ ಒವಿಡಿಮ್)

ಗ್ರಾಮಪರಿವಾರದ ಸಾಮೂಹಿಕ ಜೀವನದಿಂದ ತೃಪ್ತಿಪಡದ ಯಹೂದಿ ವಲಸೆಗಾರರು ಈ ಬೇಸಾಯಸಂಘಗಳನ್ನು ಸ್ಥಾಪಿಸಿದರು. ಮೊದಲು ಇಂಥ ವಸತಿ

ಗಳನ್ನು ಸ್ಥಾಪಿಸಿದವರು ಗ್ರಾಮಪರಿವಾರಗಳಲ್ಲಿಯೇ ಇದ್ದವರು, ಅವನ್ನು ಬಿಟ್ಟು ಬಂದಿದ್ದರು. ಪ್ರಥಮ ವೈಯಕ್ತಿಕ ಬೇಸಾಯದ ವಸತಿಯು ನಹಲಾಲದಲ್ಲಿ 1921ರಲ್ಲಿ ಸ್ಥಾಪಿಸಲ್ಪಟ್ಟಿತು. ಹೊಸ ವಲಸೆಗಾರರಂತೂ ಗ್ರಾಮಪರಿವಾರಗಳಲ್ಲಿ ಸೇರದೆ ವೈಯಕ್ತಿಕ ಬೇಸಾಯದ ವಸತಿಗಳನ್ನೇ ಸಂಘಟಿಸಿದರು. 1948ರಿಂದ 1958ರವರೆಗೆ ವಲಸೆಬಂದ ಶೇಕಡಾ 80ರಷ್ಟು ಯಹೂದಿಗಳು ವೈಯಕ್ತಿಕ ಬೇಸಾಯದ ವಸತಿಗಳಲ್ಲಿ ಸೇರಿದರು. ಹೀಗಾಗಿ ಅವುಗಳ ಸಂಖ್ಯೆ ಶೀಘ್ರವಾಗಿ ಗ್ರಾಮಪರಿವಾರಗಳಿಗಿಂತ ಹೆಚ್ಚು ಬೆಳೆದಿದೆ.

ವೈಯಕ್ತಿಕ ಬೇಸಾಯದ ವಸತಿಯು ಕೆಳಗಿನ ಮೂಲತತ್ವಗಳನ್ನು ನಿಷ್ಠೆಯಿಂದ ಪಾಲಿಸುತ್ತಿದೆ :

(1) ಭೂಮಿಯ ರಾಷ್ಟ್ರೀಯ ಒಡೆತನ
(2) ಸ್ವತಂತ್ರ ಶ್ರಮ
(3) ಪರಸ್ಪರ ಸಹಾಯ
(4) ಸಹಕಾರಿ ಖರೀದಿ (ವಿಕ್ರೀ)

ಈ ಬೇಸಾಯುಸಂಘದಲ್ಲಿ, ಭಾರತದಲ್ಲಿ ಸ್ಥಾಪಿತವಾದ ಬೇಸಾಯುಸಂಘದಲ್ಲಿ ಮಾಡಿದಂತೆ ಭೂಮಿಯನ್ನು ಖಂಡಗಳಲ್ಲಿ ವಿಭಜಿಸಿ, ಒಂದೊಂದು ಖಂಡವನ್ನು ಒಬ್ಬೊಬ್ಬ ಸದಸ್ಯನಿಗೆ ವೈಯಕ್ತಿಕ ಸಾಗುವಳಿಗಾಗಿ ಹಂಚಲಾಗುತ್ತದೆ. ಬೀಜ, ಗೊಬ್ಬರ, ಕ್ರಿಮಿನಾಶಕ, ಯಂತ್ರಸೇವೆ ಮೊದಲಾದ ಬೇಸಾಯದ ಅವಶ್ಯಕತೆಗಳನ್ನು ಸದಸ್ಯರಿಗೆ ಸಂಘವೇ ಪೂರೈಸುತ್ತದೆ. ಇದೊಂದು ವಿಶಿಷ್ಟ ಸಹಕಾರಿ ಸಂಘವೇ ಆಗಿದೆ.

ಭೂಮಿಯು ರಾಷ್ಟ್ರೀಯ ಸೊತ್ತಾದ್ದರಿಂದ ಅದನ್ನು ಲಾವಣಿ ಹಚ್ಚುವ ಅಥವಾ ಮಾರುವ ಹಕ್ಕು ಸದಸ್ಯರಿಗಿಲ್ಲ. ಅದನ್ನು ಅವರು ಸಾಗುಮಾಡಬಹುದಷ್ಟೇ. ಪ್ರತಿಯೊಬ್ಬ ಸದಸ್ಯನಿಗೆ ಅವನು ತನ್ನ ಸ್ವಂತ ಪರಿವಾರದ ಶ್ರಮದಿಂದ ಮಾತ್ರ ಸಾಗುಮಾಡಬಹುದಾದಷ್ಟು ಭೂಮಿಯನ್ನು ಹಂಚಲಾಗುತ್ತ.ವೆ

ಕಾರ್ಯ

ವೈಯಕ್ತಿಕ ಬೇಸಾಯದ ಸಹಕಾರಿ ಸಮಿತಿಯು ವಿವಿಧ ಚಟುವಟಿಕೆಗಳನ್ನು ನಡೆಸುತ್ತದೆ. ಅವುಗಳಲ್ಲಿ ಮುಖ್ಯವಾದವು ಕೆಳಗಿನಂತಿವೆ :

(1) ಬೀಜ, ಗೊಬ್ಬರ, ಕ್ರಿಮಿನಾಶಕ ಮುಂತಾದ ಬೇಸಾಯದ ಅವಶ್ಯಕತೆಗಳ ಹಾಗೂ ಸದಸ್ಯರ ಬಳಕೆಯ ಸಾಮಾನುಗಳ ಸಹಕಾರಿ ಖರೀದಿ ಹಾಗೂ ಪೂರೈಕೆ.

(2) ಟ್ರಾಕ್ಟರ್ ಮೊದಲಾದ ಕೃಷಿ ಯಂತ್ರಗಳನ್ನು ಸಂಘದಲ್ಲಿ ಇಟ್ಟು ಸದಸ್ಯರಿಗೆ ಅವುಗಳ ಸೇವೆಯನ್ನು ಒದಗಿಸುವುದು.

(3) ಕೂಲಿ ಆಳು ಇಡಲು ಬಾರದ್ದರಿಂದ. ಕೇವಲ ಕೌಟುಂಬಿಕ ಶ್ರಮದಿಂದ ನೀಗದ ಘಡಭೂಮಿಯ ಅಭಿವೃದ್ಧಿ ಹಾಗೂ ಒಣಭೂಮಿಯ ಸಾಗುವಳಿಯನ್ನು ಸಾಮೂಹಿಕವಾಗಿಯೇ ನಡೆಸುವುದು. ಅದರಂತೆ ತೋಟಗಾರಿಕೆಯನ್ನು ಸಾಮೂಹಿಕ ವಾಗಿ ನಡೆಸುವುದು.

(4) ಕೃಷಿಯ ಎಲ್ಲ ಮಾರುವ ಹುಟ್ಟುವಳಿಯನ್ನು ಸಂಘದ ಮುಖಾಂತರ ಒಟ್ಟಾಗಿ ಮಾರಲಾಗುತ್ತದೆ. ಕೇಂದ್ರ ಮಾರಾಟ ಸಂಘವೇ ಮಾಲನ್ನು ಮಾರಿಕೊಡುತ್ತದೆ.

(5) ಸದಸ್ಯರಿಗೆ ಸಂಘವು ಮನರಂಜನೆಯ. ಚಿಕಿತ್ಸೆಯ. ಶಿಕ್ಷಣ ಸೌಲಭ್ಯಗಳನ್ನು ಒದಗಿಸುತ್ತದೆ. ಅದಕ್ಕಾಗಿ ಸದಸ್ಯರು ಸಮನಾಗಿ ತೆರಿಗೆ ಕೊಡುತ್ತಾರೆ.

(6) ಬೇಸಾಯ ಕೆಲಸಗಳಲ್ಲಿ ಸದಸ್ಯರಿಗೆ ಪರಸ್ಪರ ಸಹಾಯ ಒದಗಿಸುವ ವ್ಯವಸ್ಥೆ ಮಾಡಲಾಗುತ್ತದೆ.

ಆಡಳಿತ, ಲೆಕ್ಕಪತ್ರ

ಎಲ್ಲ ಸಹಕಾರ ಸಂಘಗಳಲ್ಲಿ ಇದ್ದಂತೆ ಸಾಧಾರಣ ಸಭೆಯು ಎಲ್ಲ ಮಹತ್ವದ ವಿಷಯಗಳನ್ನು ನಿರ್ಣಯಿಸುತ್ತದೆ. ದೈನಂದಿನ ಕಾರ್ಯನಿರ್ವಹಣೆಗಾಗಿ ವಿಭಿನ್ನ ಸಮಿತಿಗಳಿರುತ್ತವೆ.

ಪ್ರತಿಯೊಬ್ಬ ಸದಸ್ಯನ ವಿವರವಾದ ಲೆಕ್ಕವಿಡಲಾಗುತ್ತದೆ. ಅವನು ಪಡೆದ ಮಾಲು. ಹಣ, ಸೇವೆಗಳ ಲೆಕ್ಕ ಹಾಗೂ ಅವನು ಸಂಘಕ್ಕೆ ಕೊಟ್ಟ ಮಾಲು. ಹಣದ ಲೆಕ್ಕ ಅದರಲ್ಲಿರುತ್ತದೆ. ತನ್ನ ಠೇವಣಾತಿಗಳನ್ನು ಅವನು ಅಲ್ಲಿಯೇ ಇಡಬೇಕಾಗು ತ್ತದೆ, ಹೊರಗಿನ ಬ್ಯಾಂಕಿನಲ್ಲಿ ಇಡಲಾರ.

ಎಲ್ಲ ಕಾರ್ಯಗಳನ್ನು ಲಾಭ-ನಷ್ಟಗಳಿಲ್ಲದಂತೆಯೇ ಕೇವಲ ಸೇವೆಗಾಗಿ ನಡೆಸ ಲಾಗುತ್ತದೆ. ವರ್ಷದ ಕೊನೆಯಲ್ಲಿ ಲಾಭ ಉಳಿಸಿದರೆ ಅದನ್ನು ಸದಸ್ಯರಿಗೆ ಹಂಚ ಲಾಗುತ್ತದೆ. ನಷ್ಟವಾದರೆ ಅವನ್ನು ಸದಸ್ಯರಿಂದ ತುಂಬಿಸಲಾಗುತ್ತದೆ.

ಈ ಸಂಘದಲ್ಲಿ ನಿಧಿಗಳನ್ನು ಕಾದಿಡುವ ಪದ್ಧತಿ ಇಲ್ಲ. ಅಗತ್ಯಬಿದ್ದಾಗ ಹೊಸ ಶೇರುಧನವನ್ನು ಸಂಗ್ರಹಿಸಲಾಗುತ್ತದೆ ಅಥವಾ ಸಾಲವನ್ನು ಪಡೆಯಲಾಗುತ್ತದೆ.

ಉತ್ಪಾದನೆ

ತಾಂತ್ರಿಕವಾಗಿ ಈ ಸಂಘದಲ್ಲಿಯ ಸದಸ್ಯರ ಕೃಷಿಯು ಉನ್ನತ ಮಟ್ಟದ್ದಾಗಿರು ತ್ತದೆ, ಸುಧಾರಿಸಿದ ಬೀಜ. ಗೊಬ್ಬರ, ಸಲಕರಣೆಗಳನ್ನು. ಸುಧಾರಿಸಿದ ಬೇಸಾಯ ಪದ್ಧತಿಗಳನ್ನು ಎಲ್ಲ ಸದಸ್ಯರೂ ಉಪಯೋಗಿಸುತ್ತಾರೆ. ತಮ್ಮ ಪಾರಿವಾರಿಕ ಶ್ರಮ ವನ್ನು ತೀವ್ರವಾಗಿ ಬಳಸುತ್ತಾರೆ. ಆದರೆ ಅಂಥ ಶ್ರಮವು ಸೀಮಿತವಾಗಿರುವುದರಿಂದ

ಕೂಲಿಯು ಶ್ರಮ ಪಡ್ಡಬಾರದೆಂಬ ನಿರ್ಬಂಧವಿರುವುದರಿಂದ ವೈಯಕ್ತಿಕ ಬೇಸಾಯದ ವಸತಿ ಸಂಘದ ಸದಸ್ಯರೂ ಕೆಲವು ಕಾರ್ಯಗಳಲ್ಲಿ ಮತ್ತು ಬೆಳೆಗಳಲ್ಲಿ. ಸಾಮೂಹಿಕ ಬೇಸಾಯ ಮಾಡಬೇಕಾಗುತ್ತದೆ.

ಸಾಮೂಹಿಕ ಬೇಸಾಯದ ವಸತಿಗಳು (ಮೊಶವಿಮ್ ಶಿಟುಫಿಮ್)

ಈ ಸಹಕಾರಿ ಬೇಸಾಯಸಂಘವು ಮೊದಲಿನ ಎರಡು ಪ್ರಕಾರದ ಬೇಸಾಯ ಸಂಘಗಳ ಸಂಕರರೂಪ. ಗ್ರಾಮಪರಿವಾರದಂತೆ ಇದರಲ್ಲಿ ಬೇಸಾಯ ಹಾಗೂ ಎಲ್ಲ ಉದ್ಯೋಗಗಳನ್ನು ಸಾಮೂಹಿಕವಾಗಿಯೇ ನಡೆಸಲಾಗುತ್ತದೆ: ಜೀವನವನ್ನು ಮಾತ್ರ ವೈಯಕ್ತಿಕ ಬೇಸಾಯದ ವಸತಿಯಂತೆ ಪ್ರತ್ಯೇಕವಾಗಿ ತಮ್ಮ ತಮ್ಮ ಪರಿವಾರಗಳಲ್ಲಿ ಸದಸ್ಯರು ನಡೆಸುತ್ತಾರೆ. ಇದರಲ್ಲಿ ಸಾಮೂಹಿಕ ಭೋಜನಾಲಯ ಅಥವಾ ಸಾಮೂಹಿಕ ಶಿಶುವಿಹಾರಗಳಿರುವುದಿಲ್ಲ.

ಕೆಲಮಟ್ಟಿಗೆ ಈ ಬೇಸಾಯಸಂಘವು ಭಾರತದ ಸಹಕಾರಿ ಸಾಮುದಾಯಕ ಸಂಘವನ್ನು ಹೋಲುತ್ತದೆ: ಆದರೆ ಹೋಲಿಕೆಗಿಂತ ವ್ಯತ್ಯಾಸವೇ ಬಹಳವಿರುತ್ತದೆ. ಭಾರತದ ಸಾಮುದಾಯಕ ಬೇಸಾಯಸಂಘದಂತೆ ಇಸ್ರೇಲಿನ ಸಾಮೂಹಿಕ ಬೇಸಾಯದ ವಸತಿಯಲ್ಲಿಯೂ ಭೂಮಿಯ ಒಡೆತನ. ಭೂಮಿಯ ಪ್ರತಿಫಲವಿರುವುದಿಲ್ಲ. ಆದರೆ ಇಸ್ರೇಲಿನ ಸಾಮೂಹಿಕ ಬೇಸಾಯದ ವಸತಿಯಲ್ಲಿ ದುಡಿತದ ಪ್ರಕಾರ ಕೂಲಿ ಅಥವಾ ವೇತನವಿರುವುದಿಲ್ಲ. ಅಲ್ಲಿ ದುಡಿಯುವ ಸದಸ್ಯರ ಪರಿವಾರಗಳಲ್ಲಿಯ ಜನಸಂಖ್ಯೆಯ ಪ್ರಕಾರ ವೇತನವನ್ನು ಕೊಡಲಾಗುತ್ತದೆ. ಅದರಿಂದ ಸದಸ್ಯರು ತಮಗಿಷ್ಟವಿದ್ದಂತೆ ಊಟ. ಉಡಿಗೆ ಮೊದಲಾದ ಸೌಕರ್ಯಗಳ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಪ್ರತಿಯೊಬ್ಬ ಸದಸ್ಯನಿಗೆ ಒಂದು ವಾಸದ ಮನೆಯನ್ನು ಹಾಗೂ ಕೆಲವು ಸಾಮಾನ್ಯ ಜೀವನ ಸೌಲಭ್ಯಗಳನ್ನು ಸಂಘವು ಒದಗಿಸುತ್ತದೆ. ಮಹಿಳೆಯರು ಸದಸ್ಯರಿದ್ದರೂ ಹೊಲದಲ್ಲಿ ದುಡಿಯುವ ಕಡ್ಡಾಯವಿಲ್ಲ. ಅವರಿಗೆ ಮನೆಗೆಲಸಗಳೇ ತುಂಬ ಇರುತ್ತವೆ. ಎಲ್ಲ ಸದಸ್ಯರ ಕೆಲಸ ಅಥವಾ ದುಡಿತವನ್ನು ಸರಿಸಮ ಎಂದು ಗಣಿಸಲಾಗುತ್ತದೆ.

ಆಡಳಿತ

ಗ್ರಾಮಪರಿವಾರಗಳಂತೆಯೇ ಈ ಬೇಸಾಯಸಂಘಗಳಲ್ಲಿ ಸಾಮೂಹಿಕಬೇಸಾಯ ನಡೆಸಲು ವಿಭಿನ್ನ ಸಮಿತಿಗಳಿರುತ್ತವೆ. ಸದಸ್ಯರಿಗೆ ಕೆಲಸ ಹಂಚಲೂ ಒಂದು ಸಮಿತಿಯು ಇರುತ್ತದೆ.

ಮಹಿಳೆಯರು ಸಾಮಾನ್ಯವಾಗಿ ತಮ್ಮ ಮನೆಗೆಲಸ ಹಾಗೂ ಕೈತೋಟದ ಕೆಲಸ ಮಾಡುತ್ತಾರೆ. ಸಂಘದ ಸಾಮಾಜಿಕ ಕೆಲಸ, ಬಿಡುವಿದ್ದಾಗ, ಅಲ್ಪಸ್ವಲ್ಪ ಮಾಡಬಹುದು. ಯಾವಳೊಬ್ಬ ಮಹಿಳೆ ಅಸ್ವಸ್ಥಳಾಗಿ ತನ್ನ ಮನೆಗೆಲಸ ನಡೆಸುವುದಾಗದಿದ್ದರೆ ಪರಸ್ಪರ ಸಹಾಯದ ತತ್ವದ ಪ್ರಕಾರ ಅವಳ ಮನೆಗೆಲಸ ಮತ್ತೊಬ್ಬಳಿಂದ ಮಾಡಿಸುವ ವ್ಯವಸ್ಥೆಯನ್ನು ಕೆಲಸದ ಸಮಿತಿಯು ಮಾಡುತ್ತದೆ.

ಒಂದು ಸಾಮಾನ್ಯ ವಸ್ತುಭಂಡಾರದಿಂದ ಸದಸ್ಯರು ತಮಗೆ ಅಗತ್ಯವಿದ್ದ ಸಾಮಾನುಗಳನ್ನು ಉದ್ರಿಯಾಗಿ ಕೊಳ್ಳುತ್ತಾರೆ. ಬೇಸಾಯಸಂಘವು ತಿಂಗಳಿಗೊಮ್ಮೆ ಅವರಿಗೆ ಕೊಡಬೇಕಾದ ವೇತನದಲ್ಲಿ ಈ ಉದ್ರಿಯನ್ನು ಮುಟ್ಟಿಸುತ್ತದೆ.

ಪ್ರಥಮ ಸಾಮೂಹಿಕ ಬೇಸಾಯದ ವಸತಿಯು 1942ರಲ್ಲಿ ಸ್ಥಾಪಿಸಲ್ಪಟ್ಟಿತ್ತು. 1960ರವರೆಗೆ 20 ಸಾಮೂಹಿಕ ಬೇಸಾಯದ ವಸತಿಗಳು ಸ್ಥಾಪಿಸಲ್ಪಟ್ಟಿದ್ದವು. ಈ ಸಾಮೂಹಿಕ ಬೇಸಾಯದ ವಸತಿಗಳ ಭವಿತವ್ಯವು ಅಷ್ಟೊಂದು ಉಜ್ವಲ ಕಾಣುವುದಿಲ್ಲ.

ಹೊಸ ವಲಸೆಗಾರರ ವಸತಿಗಳು (ನೊಶರ್ ಒಲಿವುï)

1948ರಿಂದ 1958ರವರೆಗೆ ಆಫ್ರಿಕಾ, ಏಷಿಯಾದ ಅನೇಕ ದೇಶಗಳಿಂದ ಬಹುಸಂಖ್ಯೆಯಲ್ಲಿ ಯಹೂದಿ ವಲಸೆಗಾರರು ಬಂದರು. ಅವರಲ್ಲಿ ಯುರೋಪಿನಿಂದ ಮೊದಲು ಬಂದ ಯಹೂದಿ ಅಗ್ರಣೀತರ ಸಾಮೂಹಿಕ ಜೀವನದ ಸ್ಫೂರ್ತಿ ಇರಲಿಲ್ಲ. ಅವರ ಶೈಕ್ಷಣಿಕ, ಸಾಂಸ್ಕೃತಿಕ ಮಟ್ಟವೂ ಕಡಮೆ ತರಗತಿಯದಿತ್ತು. ಆದ್ದರಿಂದ ಅವರನ್ನು ಗ್ರಾಮಪರಿವಾರಗಳಲ್ಲಿ ಸಮಾವೇಶ ಮಾಡುವುದು ಸಾಧ್ಯವಾಗಲಿಲ್ಲವೆಂದು ಮೊದಲೇ ಹೇಳಲಾಗಿದೆ. ಅವರಿಗೆ ನೆಲೆಸಲು ಪ್ರತ್ಯೇಕವಾದ ವಸತಿಗಳನ್ನು, ಕೇಂದ್ರ ಇಸ್ರೇಲಿನಲ್ಲಿ 2,50,000 ಎಕರೆ ಭೂಮಿಯಲ್ಲಿ ಸ್ಥಾಪಿಸಲಾಯಿತು.

ನಾಲ್ಕು ಪ್ರಕಾರದ ಭೂಮಿಯನ್ನು ವಲಸೆ ಬಂದವರಿಗೆ ಹಂಚಲಾಗಿದೆ. (1) ಪ್ರತಿಯೊಬ್ಬ ಸದಸ್ಯನಿಗೆ 20ರಿಂದ 30ಡುನಾಮುವಂತೆ (4 ಡುನಾಮು = 1 ಎಕರೆ) ಮಿಶ್ರಬೇಸಾಯಕ್ಕಾಗಿ ಕೊಡಲಾಗಿದೆ. ಇವರಲ್ಲಿ ಹೈನದ ಉದ್ಯೋಗ ಮುಖ್ಯವಾದದ್ದು. (2) ಹಣ್ಣಿನ ತೋಟಕ್ಕಾಗಿ ಅನುಕೂಲವಾದ ಭೂಮಿಯನ್ನು ಕೊಡಲಾಗಿದೆ. (3) ಹತ್ತಿಯಂಥ ಉದ್ಯೋಗದ ಪೀಕಿಗೆ ಅನುಕೂಲವಾದ ಭೂಮಿಯನ್ನು ಹಂಚಲಾಗಿದೆ. (4) ಒಣಬೇಸಾಯಕ್ಕೆ ಅನುಕೂಲವಾದ ಭೂಮಿಯನ್ನು ಕೊಡಲಾಗಿದೆ. ಅದರಲ್ಲಿ ಸದಸ್ಯರು ಕುರಿಸಂಗೋಪನ, ದನಸಂಗೋಪನ, ಸಹ ನಡೆಸುತ್ತಾರೆ. ಕುಟುಂಬದ ಜನಸಂಖ್ಯೆಯ ಪ್ರಕಾರ ಭೂಮಿಯನ್ನು ಹಂಚಲಾಗುತ್ತದೆ. ಸಾಮಾನ್ಯವಾಗಿ ಪ್ರತಿಯೊಂದು ಪರಿವಾರಕ್ಕೆ ಆದಾಯವು ಸಮನಾಗಿ ಬರುವಂತೆ 300 ಡುನಾಮುದವರೆಗೆ ಭೂಮಿಯನ್ನು ಪ್ರತಿಯೊಂದು ಪರಿವಾರಕ್ಕೆ ಹಂಚಲಾಗಿದೆ.

ಪ್ರಾರಂಭದ ವಲಸೆಗಾರರಲ್ಲಿ ಇಸ್ರೇಲಿನ ವಿಭಿನ್ನ ಪ್ರಕಾರದ ವಸತಿಗಳ ಹಾಗೂ ಬೇಸಾಯಸಂಘಗಳ ಪ್ರಚಾರ ಮಾಡಲಾಯಿತು. ಅವರನ್ನು ತಿರುಗಾಡಿಸಿ ಕೆಲವು ಸಂಘಗಳನ್ನು ತೋರಿಸಲಾಯಿತು. ಕೊನೆಗೆ ಅವರ ಆಯ್ಕೆಯ ಪ್ರಕಾರ ಅವರನ್ನು ಪ್ರತ್ಯೇಕವಾದ ವಿಭಿನ್ನ ವಸತಿಗಳಲ್ಲಿ ನೆಲೆಸಲಾಯಿತು. ಅದು ಹೆಚ್ಚಾಗಿ ವೈಯಕ್ತಿಕ ಬೇಸಾಯದ ವಸತಿಯ ಆಧಾರದ ಮೇಲೆಯೇ ನಡೆಯುತ್ತದೆ. ಪ್ರತಿಯೊಬ್ಬ ಸದಸ್ಯನಿಗೆ ಅಲ್ಲಿ ಅವನಿಗೆ ಅಗತ್ಯವಿದ್ದ ಬಂಡವಲಿನ ¾ರಷ್ಟು ಭಾಗವನ್ನು 40 ವರ್ಷದಲ್ಲಿ ಮುಟ್ಟಿಸ

ಬೇಕಾದ ಸೋವೀ ಸಾಲದ ರೂಪದಲ್ಲಿ ಕೊಡಲಾಯಿತು. ಸಾಲವನ್ನು 10 ವರ್ಷಗಳ ನಂತರ ಮುಟ್ಟಿಸಲು ಪ್ರಾರಂಭಿಸಬೇಕಿತ್ತು. ಹೊಲದಲ್ಲಿ ಒಂದು ಮನೆ, ಕೋಳಿಯ ಮನೆ, 1 ಆಕಳು, 100 ಕೋಳಿಯಮರಿ, 2 ಪರಿವಾರಕ್ಕೊಂದು ಹೂಡುವ ಕುದುರೆ, ಇಷ್ಟನ್ನು ಸಹಾಯಧನದ ರೂಪದಲ್ಲಿ ಪ್ರತಿಯೊಬ್ಬ ಸದಸ್ಯನಿಗೆ ಕೊಡಲಾಯಿತು. ನೀರಾವರಿಯ ಅಭಿವೃದ್ಧಿ, ಹಣ್ಣಿನ ತೋಟದ ಅಭಿವೃದ್ಧಿ, ರಸ್ತೆನಿರ್ಮಾಣ ಮುಂತಾದ ಕೆಲಸಗಳಲ್ಲಿ ಸದಸ್ಯರನ್ನು ತೊಡಗಿಸಿ, ಅವರ ಸಂಬಳದಿಂದ ಸ್ವಲ್ಪಸ್ವಲ್ಪವಾಗಿ ಸಾಲವನ್ನು ಮುಟ್ಟಿಸಿಕೊಳ್ಳಲಾಯಿತು.

ವಿಸ್ತರಣಾ ಕಾರ್ಯ : ಪ್ರತಿಯೊಂದು 80ರಿಂದ 100 ಪರಿವಾರಗಳ ಒಂದು ವಸತಿಗೆ ಇಬ್ಬರು ಸಹಕಾರಿ ಶಿಕ್ಷಕರು ಒಬ್ಬ ಬೇಸಾಯದ ಶಿಕ್ಷಕ ಮತ್ತು ಒಬ್ಬಳು ಗೃಹಶಾಸ್ತ್ರ ಕಲಿಸುವ ಶಿಕ್ಷಕಿ, ಹೀಗೆ ನಾಲ್ವರು ಶಿಕ್ಷಕರನ್ನು ನೇಮಿಸಲಾಗುತ್ತಿತ್ತು. ಕ್ರಮೇಣವಾಗಿ 10–12 ವರ್ಷಗಳಲ್ಲಿ ವಲಸೆಗಾರರು ಪೂರ್ಣ ನೆಲಸಿ ತಮ್ಮ ವ್ಯವಹಾರ ಗಳನ್ನು ತಾವೇ ನಡೆಸುವಂತಾದ ಬಳಿಕ ಈ ಶಿಕ್ಷಕರನ್ನು ವಾಪಸ್ಸು ತೆಗೆದುಕೊಳ್ಳಲಾಯಿತು. ಈ ಪ್ರದೇಶದಲ್ಲಿ ಗ್ರಾಮಪರಿವಾರದ ಅಥವಾ ಸಾಮೂಹಿಕ ಬೇಸಾಯದ ವಸತಿ ಆಗಿದ್ದರೆ ಅಂಥಲ್ಲಿ ಸದಸ್ಯರಿಗೆ ಮಾರ್ಗದರ್ಶನಕ್ಕಾಗಿ ಮತ್ತು ತರಬೇತಿ ಕೊಡಲು ಹಳೆಯ ಗ್ರಾಮಪರಿವಾರಗಳಲ್ಲಿ ದುಡಿದು ತರಬೇತಿ ಹೊಂದಿದ ಹಾಗೂ ಅನುಭವ ಇದ್ದ ಇಬ್ಬರು ಶಿಕ್ಷಕರನ್ನು ಕೊಡಲಾಗುತ್ತಿತ್ತು. ಸಂಬಂಧಿಸಿದ ಕೇಂದ್ರ ಸಹಕಾರ ಸಂಸ್ಥೆಗಳು ಈ ಹೊಸ ವಸಾಹತುಗಾರರಲ್ಲಿ ಪ್ರಚಾರ, ಮಾರ್ಗದರ್ಶನದ ಕೆಲಸ ಮಾಡಿದವು.

ಹೊಸ ವಸತಿಗಾರರ ತಾಂತ್ರಿಕ ದಕ್ಷತೆಯನ್ನು ಹೆಚ್ಚಿಸಿ ಉತ್ಪತ್ತಿಯನ್ನು ದೇಶದಲ್ಲಿ ಸಾಧಿಸಿದ ಮಟ್ಟಕ್ಕೆ ಹೆಚ್ಚಿಸಲು 2 ವರ್ಷಗಳವರೆಗೆ ಅವರ ಭೂಮಿಯಲ್ಲಿಯೇ ಅವರಿಗೆ ಸರಕಾರಿ ಸಿಬ್ಬಂದಿಯ ಮೇಲ್ವಿಚಾರಣೆಯಲ್ಲಿ ಕೂಲಿಯ ಕರಾರಿನಿಂದ ದುಡಿಯಲು ಹಚ್ಚಲಾಯಿತು. ಮುಂದೆ ಅವರು ದಕ್ಷತೆ ಪಡೆದ ಬಳಿಕ ಸಾಮಾನ್ಯವಾಗಿ 3 ವರ್ಷಕ್ಕೆ ಸ್ವಂತ ಸಾಗುವಳಿಗಾಗಿ ಅವರಿಗೆ ಭೂಮಿಯ ಖಂಡವನ್ನು ಕೊಡಲಾಯಿತು. ಹಣ್ಣಿನ ತೋಟವನ್ನು 6 ವರ್ಷಗಳ ನಂತರ ಕೊಡಲಾಯಿತು.

4–5 ಗ್ರಾಮಗಳಿಗೊಂದು ಅಭಿವೃದ್ಧಿ ಕೇಂದ್ರವನ್ನು ಸ್ಥಾಪಿಸಿ ಈ ವಸತಿ ಗಾರರಿಗೆ ಶಿಕ್ಷಣ, ಚಿಕಿತ್ಸೆ ಮೊದಲಾದ ಸೌಲಭ್ಯಗಳನ್ನು ಮಿತವ್ಯಯದಿಂದ ಒದಗಿಸ ಲಾಯಿತು.

ಸಹಕಾರ ಸಂಘಗಳ ಸಂಘಟನೆ : ಈ ವಸತಿಗಾರರಿಗೆ ಸಹಕಾರ ಸಂಘಗಳ ಬಗ್ಗೆ ಏನೂ ಜ್ಞಾನವಿರಲಿಲ್ಲ. ಅವರಲ್ಲಿ ಸಹಕಾರ ಸಂಘಗಳನ್ನು ಸಂಘಟಿಸುವುದು ದೊಡ್ಡ ಸಮಸ್ಯೆಯಾಗಿತ್ತು. ಜಡತತ್ವಗಳಿಗೆ ಅಲ್ಲಿ ಅಂಟಿಕೊಳ್ಳಲಾಗಲಿಲ್ಲ. 'ಜನರಿಗಾಗಿ ಸಹಕಾರ ಸಂಘ; ಸಹಕಾರ ಸಂಘಕ್ಕಾಗಿ ಜನರಲ್ಲ' ಎಂಬುದನ್ನು ಅಲ್ಲಿ ಲಕ್ಷ್ಯದಲ್ಲಿಟ್ಟು

ಹೊಸ ವಸತಿಗಾರರ ಮನೋಭಾವಕ್ಕೆ. ತಿಳಿವಳಿಕೆಗೆ ನಿಲುಕುವಂಥ ಹೊಸಪದ್ಧತಿಗಳನ್ನು ಸಂಶೋಧಿಸಲಾಯಿತು. ವಸತಿಗಾರರ ವಿಶ್ವಾಸವನ್ನು ಬೆಳೆಸಿ ಅವರಿಂದ ಉತ್ಪತ್ತಿ ಹೆಚ್ಚಿಸಬೇಕಿತ್ತು. ಆದ್ದರಿಂದ ಮೊದಲು ಅವರನ್ನು ನೆಲೆಸಿ. ದುಡಿಸಿ ಅವರಿಗೆ ಉಪಜೀವನ ಕೊಡುವ ಕೆಲಸವನ್ನು ಒಂದು ಸರಕಾರಿ ಕೆಲಸದಂತೆ ಮಾಡಲಾಯಿತು. ಪ್ರಾರಂಭದಲ್ಲಿ ಕೇಂದ್ರ ಸಹಕಾರ ಸಂಸ್ಥೆಗಳು ತಮ್ಮ ಶಾಖೆಗಳನ್ನು ಅಥವಾ ತಮಗೆ ಜೋಡಿಸಿದ ಮಾರಾಟದ ಸಂಘಗಳನ್ನು ಸ್ಥಾಪಿಸಿದವು. ಅವುಗಳ ಮೇಲ್ವಿಚಾರಣೆಯನ್ನು ಕೇಂದ್ರ ಸಂಸ್ಥೆಗಳೇ ಮಾಡುತ್ತಿದ್ದವು. ಇಂಥ ಸಂಸ್ಥೆಗಳ ದಕ್ಷತೆ ಹೆಚ್ಚಿ. ವಸತಿಗಾರರು ಸಹಕಾರದ ಲಾಭಗಳನ್ನು ಮನಗಂಡಾಗ ಪ್ರತ್ಯೇಕವಾದ ಸಹಕಾರ ಸಂಸ್ಥೆಗಳನ್ನು ಅಲ್ಲಿ ಸ್ಥಾಪಿಸಲಾಯಿತು. ಇಸ್ರೇಲಿನಲ್ಲಿ ಬೇಸಾಯದ ಹುಟ್ಟುವಳಿಯನ್ನೆಲ್ಲ ಸಹಕಾರಿ ಮಾರಾಟ ಸಂಘಗಳ ಮುಖಾಂತರ ಮಾರುವ ಕಡ್ಡಾಯವಿದ್ದರೂ ಹೊಸ ವಸತಿಗಾರರ ಸಲುವಾಗಿ ಅದನ್ನು ಸಡಿಲಗೊಳಿಸಲಾಯಿತು. ಅವರು ತಮ್ಮ ಮಾಲನ್ನು ವ್ಯೆಯಕ್ತಿಕ ವರ್ತಕರಿಗೂ ಮಾರಬಹುದಿತ್ತು. ಹೀಗೆ ಸಹಕಾರದಲ್ಲಿ ಕ್ರಮೇಣವಾಗಿ ವಸತಿಗಾರರ ವಿಶ್ವಾಸ ಬೆಳೆಯುವಂತೆ ಅವರಿಗೆ ಶಿಕ್ಷಣ ಕೊಡಲಾಯಿತು. ಸ್ಥಳಿಕ ಮುಂದಾಳುತನ ಬೆಳೆದಂತೆ ಕೇಂದ್ರ ಸಂಸ್ಥೆಗಳ ಸ್ಥಳದಲ್ಲಿ ವಸತಿಗಾರರು ತಮ್ಮವೇ ಸಹಕಾರಸಂಘಗಳನ್ನು ಸಂಘಟಿಸಲು ಅವರಿಗೆ ಸ್ಫೂರ್ತಿ ಕೊಡಲಾಯಿತು ಮತ್ತು ಮಾರ್ಗದರ್ಶನ ಮಾಡಲಾಯಿತು. ಈ ಜಾಣತನದ ಧೋರಣೆಯಿಂದಲೇ ಹೊಸ ವಸತಿಗಾರರಲ್ಲಿ ಸಹಕಾರಿ ಆಂದೋಲನೆಯು ಯಶಸ್ವಿಯಾಗಿ ಬೆಳೆಯಿತು.

ಭಾರತದಲ್ಲಿ ಭೂಸುಧಾರಣೆಯ ಕಾನೂನು ಅನುಷ್ಠಾನಕ್ಕೆ ಬಂದಲ್ಲಿ ಹೆಚ್ಚುವರಿ ತುಂಡುಭೂಮಿ ಪಡೆದ ಚಿಕ್ಕಬೇಸಾಯಗಾರರನ್ನು ನೆಲೆಸುವ ಸಮಸ್ಯೆ ಇಂಥದೇ ಇದೆ. ಅಥವಾ ಹೊಸ ಭೂಮಿಯಲ್ಲಿ ಭೂಮಿಹೀನ ಕಾರ್ಮಿಕರನ್ನು ನೆಲೆಸುವ ಸಮಸ್ಯೆ ಹೀಗೆಯೇ ಇದೆ. ಇಂಥ ಸಮಸ್ಯೆಗಳ ಪರಿಹಾರಕ್ಕಾಗಿ ಹೊಸ ವಸತಿಗಳನ್ನು ಸ್ಥಾಪಿಸುವಲ್ಲಿ ಇಸ್ರೇಲಿನ ಈ ಹೊಸ ವಸತಿಗಳ ಅನುಭವವು ಭಾರತಕ್ಕೆ ಉಪಯುಕ್ತವೆನಿಸಬಹುದು.

ಜರ್ಮನಿಯ ಪ್ರಜಾತಾಂತ್ರಿಕ ಗಣರಾಜ್ಯದಲ್ಲಿ ಸಹಕಾರಿ ಬೇಸಾಯ

ಜರ್ಮನಿಯ ಪ್ರಜಾತಾಂತ್ರಿಕ ಗಣರಾಜ್ಯವು (ಜರ್ಮನ್ ಡೆಮಾಕ್ರಟಿಕ್ ರಿಪಬ್ಲಿಕ್ ಸಮಾಜವಾದಿ ಪೂರ್ವ ಜರ್ಮನಿಯು) ಅತಿ ಹೆಚ್ಚಿನ ಉದ್ಯೋಗ ಪ್ರಧಾನ ದೇಶವಾದರೂ. ಅಲ್ಲಿ ಕೃಷಿಗೆ ಬಹಳ ಮಹತ್ವವಿದೆ. ಕೃಷಿ ಉತ್ಪಾದನೆಯಲ್ಲಿ ಯುರೋಪಿನಲ್ಲಿ ಅದರ ಐದನೇ ಸ್ಥಾನವಿದೆ. ಅಲ್ಲಿ 17 ಕೋಟಿ ಜನಸಂಖ್ಯೆ ಇದ್ದು ಶೇಕಡಾ 60ರಷ್ಟು ಪ್ರದೇಶವನ್ನು ಕೃಷಿಗಾಗಿ ಬಳಸಲಾಗುತ್ತಿದೆ. ಶೇಕಡಾ 17ರಷ್ಟು ಜನರು ಮಾತ್ರ ಕೃಷಿ ಉತ್ಪಾದನೆಯಲ್ಲಿ ತೊಡಗಿದ್ದಾರೆ. ರಾಷ್ಟ್ರೀಯ ಆದಾಯದಲ್ಲಿ ಶೇಕಡಾ 10ರಷ್ಟು ಮಾತ್ರ ಕೃಷಿಯ ಆದಾಯವಿದೆ. ಈ ಪರಿಸ್ಥಿತಿಗಳಲ್ಲಿ ಕೃಷಿ ಉತ್ಪತ್ತಿಯಿಂದ ಇಡಿಯ ದೇಶದ ಜನಸಂಖ್ಯೆಗೆ ಆಹಾರವನ್ನು ಪೂರೈಸಬೇಕು: ಉನ್ನತ ಉದ್ಯೋಗಗಳಿಗೆ ಕಚ್ಚಾ

ಮಾಲನ್ನು ಪೂರೈಸಬೇಕು; ಉದ್ಯೋಗದ ಸರಕುಗಳಿಗೆ ಮಾರುಕಟ್ಟೆಯನ್ನು ಬಹುಮಟ್ಟಿಗೆ ಪೂರೈಸಬೇಕು; ಎಲ್ಲಕ್ಕೂ ಮಿಗಿಲಾಗಿ ಶೇಕಡಾ 17ರಷ್ಟು ಜನರು ಕೃಷಿಯ ಸಮೃದ್ಧಿಯನ್ನು ಸಾಧಿಸಿ ದೇಶದ ಈ ಸಮಸ್ಯೆಗಳನ್ನು ಪರಿಹರಿಸಬೇಕು.

ಆ ದೇಶದಲ್ಲಿ ಬೇಸಾಯದ ಉತ್ಪಾದಕರ ಸಹಕಾರ ಸಂಘಗಳನ್ನು ದೇಶದ ತುಂಬಾ ಸಂಘಟಿಸಿ ಕೃಷಿ ಉತ್ಪತ್ತಿಯನ್ನು ಸಾಕಷ್ಟು ಹೆಚ್ಚಿಸಿ, ಮೇಲ್ಕಾಣಿಸಿದ ರಾಷ್ಟ್ರೀಯ ಸಮಸ್ಯೆಗಳನ್ನು ಬಹುಮಟ್ಟಿಗೆ ಪರಿಹರಿಸಲಾಯಿತು. ಕೃಷಿಯ ತೀವ್ರವಾದ ಯಾಂತ್ರೀಕರಣವು ಅಲ್ಲಿಯ ಕೃಷಿಯ ಸಮೃದ್ಧಿಗೆ ಒಂದು ಮಹತ್ವದ ಸಾಧನ. 1959ರವರೆಗೆ ಬೇಸಾಯದ ಶೇಕಡಾ 50ರಷ್ಟು ಕೆಲಸಗಳ ಯಾಂತ್ರೀಕರಣವು ಅಲ್ಲಿ ಆಗಿತ್ತು. ಕೃಷಿಕರ ಜನಸಂಖ್ಯೆ ಕಡಮೆ ಇದ್ದರೂ ಯಾಂತ್ರೀಕರಣದ ಸಹಾಯದಿಂದ ಅವರಿಗೆ ಸಾಕಷ್ಟು ಬಿಡುವು ದೊರಕಿ ತಮ್ಮ ಹಾಗೂ ತಮ್ಮ ಗ್ರಾಮಗಳ ಸಾಂಸ್ಕೃತಿಕ ಉನ್ನತಿಯನ್ನು ಸಾಧಿಸುವುದು ಸಾಧ್ಯವಾಯಿತು. ಕೃಷಿಯ ಸಮೃದ್ಧಿಗೆ ಅಲ್ಲಿ ಹೇರಳವಾದ ರಾಸಾಯನಿಕ ಗೊಬ್ಬರಗಳ ಬಳಕೆಯೂ ಒಂದು ಸಾಧನ. ರಾಸಾಯನಿಕ ಸರಕುಗಳ ಉದ್ಯೋಗವು ಪೂರ್ವಜರ್ಮನಿಯಲ್ಲಿ ಉನ್ನತಮಟ್ಟದಲ್ಲಿದೆ.

ಪೂರ್ವಜರ್ಮನಿಯಲ್ಲಿ ಬೇಸಾಯದ ಸರಕುಗಳನ್ನೆಲ್ಲ. ಆಹಾರ ಸಾಮಗ್ರಿಗಳನ್ನು ಸಹ ಬಹುಮಟ್ಟಿಗೆ ರೂಪಾಂತರ ಮಾಡಿ ಬಳಸಲಾಗುತ್ತದೆ. ಇಂಥ ರೂಪಾಂತರದ ಉದ್ಯೋಗಗಳನ್ನು ಶೇಕಡಾ 28ರಷ್ಟು ಉದ್ಯೋಗ ಕಾರ್ಮಿಕರು ತೊಡಗಿದ್ದಾರೆ. ಒಟ್ಟು ಉದ್ಯೋಗಗಳ ಆದಾಯದಲ್ಲಿ ಈ ರೂಪಾಂತರ ಉದ್ಯೋಗಗಳ ಪಾಲು ಶೇಕಡಾ 30 ಇದೆ.

ಪ್ರಜಾತಾಂತ್ರಿಕ ಭೂ ಸುಧಾರಣೆ

ಪೂರ್ವಜರ್ಮನಿಯಲ್ಲಿ 1945ರಲ್ಲಿ ಹಿಟ್ಲರನ ನಾಜಿ ಆಡಳಿತವು ಕೊನೆಗೊಂಡ ನಂತರ ಸಮಾಜವಾದಿ ಪ್ರಜಾತಾಂತ್ರಿಕ ಗಣರಾಜ್ಯದ ಸ್ಥಾಪನೆಯಾಯಿತು. ಭೂ ಸುಧಾರಣೆಯ ಕಾನೂನು ಸಮಾಜವಾದಿ ಸರಕಾರದ ಅತಿದೊಡ್ಡ ಮಹತ್ವದ ಸುಧಾರಣೆಯಾಗಿತ್ತು.

1939ರಲ್ಲಿ ಶೇಕಡಾ 1.1ರಷ್ಟು ದೊಡ್ಡ ಜಹಗೀರದಾರರ (ಜಂಕರ್ಸ್) ವಶದಲ್ಲಿ ಶೇಕಡಾ 28.3ರಷ್ಟು ಉತ್ತಮ ಸಾಗುವಳಿ ಭೂಮಿ ಇತ್ತು. ಇವರ ಪ್ರತಿಯೊಬ್ಬರ ಸರಾಸರಿ ಹಿಡುವಳಿ 100 ಹೆಕ್ಟೇರಿಗಿಂತ ಹೆಚ್ಚಿಗೆ ಇತ್ತು. 5 ಹೆಕ್ಟೇರಿಗಿಂತ ಕಡಮೆ ಭೂಮಿಯನ್ನು ಶೇಕಡಾ 56ರಷ್ಟು ಬಡಬೇಸಾಯಗಾರರ ಬಳಿ ಕೇವಲ 9.2ರಷ್ಟು ಬಡಕಲು ಸಾಗುವಳಿ ಭೂಮಿ ಇತ್ತು. ಬಡಬೇಸಾಯಗಾರರು ಜಹಗೀರದಾರರ ಸಲುವಾಗಿ ಹೇಸರಗತ್ತೆಯಂತೆ ದುಡಿದೂ ಕಂಗಾಲತನದಲ್ಲಿ ಕೊರಗುತ್ತಿದ್ದರು. ಜಾಗೀರುದಾರರು ಬಡಬೇಸಾಯಗಾರರ ಶೋಷಣಮಾಡಿ ವಿಲಾಸದಲ್ಲಿ ತೇಲಾಡುತ್ತಿದ್ದರು. ಈ ಜಹಗೀರುದಾರರೇ ಅಲ್ಲಿಯ ಸಾಮ್ರಾಜ್ಯವಾದಿ ಮತ್ತು ನಾಜಿ ಸರಕಾರದ ಆಧಾರ

ಸ್ತಂಭಗಳಾಗಿದ್ದರು. ಜಗತ್ತನ್ನೇ ಜಯಿಸಿ ಈ ತಮ್ಮ ಶೋಷಣೆ. ವಿಧಾನಗಳನ್ನು ಪರಮಾವಧಿ ಹೆಚ್ಚಿಸಲು ಈ ಮಹಾನುಭಾವರೇ ಎರಡೂ ಜಾಗತಿಕ ಯುದ್ಧಗಳನ್ನು ಪ್ರಾರಂಭಿಸಿ, ಘೋರ ಮಾನವ ಸಂಹಾರಕ್ಕೆ ಕಾರಣರಾದರು. ಇವರ ರಾಜಕೀಯ, ಆರ್ಥಿಕ ಪ್ರಭುತ್ವವನ್ನು ಸದೆಬಡಿಯದೆ ಇವರ ಶಾಂತಿಪ್ರಿಯ ಪ್ರಜಾತಾಂತ್ರಿಕ ಜರ್ಮನಿಯ ಸ್ಥಾಪನೆ ಅಸಾಧ್ಯವಿತ್ತು. ಈ ಮಹತ್ವದ ಉದ್ದೇಶವನ್ನು ಈಡೇರಿಸಿ, ಜರ್ಮನಿಯ ಬೇಸಾಯಗಾರ ಜನತೆಯ ಉನ್ನತಿಯನ್ನು ಸಾಧಿಸಲು ಭೂಸುಧಾರಣೆಯ ಮಹತ್ವದ ಕಾರ್ಯವನ್ನು ಸಮಾಜವಾದಿ ಸರಕಾರವು ಕೈಗೊಂಡಿತು.

ನಾಜಿ ಆಡಳಿತವು ನಡೆಸಿದ ಪ್ರಳಯಾಂತಕಾರಿ ಯುದ್ಧವು ಕೊನೆಗೊಂಡ ಬಳಿಕ ಲಕ್ಷಗಟ್ಟಲೆ ಸೈನಿಕರು ಹಾಗೂ ನಿರಾಶ್ರಿತರು ಜರ್ಮನಿಗೆ ಮರಳಿದರು. ಇವರಿಗೆ ಮನೆ, ಉದ್ಯೋಗ ಏನೂ ಇರಲಿಲ್ಲ. ಇವರನ್ನು ಸೇರಿಸಿ, ಇವರಿಗೆ ಉದ್ಯೋಗ, ಉಪಜೀವನ ಒದಗಿಸುವ ದೊಡ್ಡ ಸಮಸ್ಯೆ ಸರಕಾರದೆದುರು ಇತ್ತು. ಭೂಸುಧಾರಣೆಯಿಂದ ಅತ್ಯಾಚಾರಿ ಜಾಗೀರದಾರರಿಂದ ಭೂಮಿಯನ್ನು ಕಿತ್ತುಕೊಂಡು ಈ ನಿರಾಶ್ರಿತರನ್ನು ನೆಲೆಸಲು ಅದನ್ನು ಹಂಚಲಾಯಿತು.

ವಿನಾಶಕಾರಿ ಯುದ್ಧದಿಂದ ಬೇಸಾಯದ ಉತ್ಪತ್ತಿಯೂ ಬಹಳ ಕೆಳಗಿಳಿದಿತ್ತು. ಆಹಾರಧಾನ್ಯಗಳ ಉತ್ಪತ್ತಿಯು 1934–38ರಲ್ಲಿ ಪ್ರತಿ ಹೆಕ್ಟೇರಿಗೆ 20.6 ಕ್ವಿಂಟಾಲಿನಿಂದ 1946ರಲ್ಲಿ 9408 ಕ್ವಿಂಟಾಲಿಗಿಳಿದಿತ್ತು. ಭೂಸುಧಾರಣೆಯಿಂದ ಉತ್ಪಾದನೆಯ ಸಾಧನಗಳನ್ನು ಮುಕ್ತಮಾಡಿ, ಬಡಬೇಸಾಯಗಾರರಿಗೆ ಭೂಮಿಯನ್ನು ಹಂಚಿ ಬೇಸಾಯದ ಪ್ರಗತಿಗೆ ಪ್ರೋತ್ಸಾಹ ಕೊಡಲಾಯಿತು. ಅದರಿಂದಲೇ ಕೃಷಿ ಉತ್ಪತ್ತಿಯನ್ನು ಹೆಚ್ಚಿಸುವುದು ಸಾಧ್ಯವಿತ್ತು.

ಭೂಸುಧಾರಣೆಯಿಂದ 100 ಹೆಕ್ಟೇರಿಗಿಂತ ಹೆಚ್ಚು ಭೂಮಿಯುಳ್ಳ ಜಾಗೀರುದಾರರಿಂದ ಮತ್ತು ನಾಜಿ ಯುದ್ಧಾಪರಾಧಿಗಳಿಂದ ಅವರ ಭೂಮಿಯನ್ನೆಲ್ಲ ಯಾವುದೇ ಪರಿಹಾರವಿಲ್ಲದೆ ಕಿತ್ತುಕೊಳ್ಳಲಾಯಿತು. ಭೂಮಿಯ ಜೊತೆಗೆ ಅವರ ಬಳಿ ಇದ್ದ ಕೃಷಿಯಂತ್ರ, ಹೂಡುವ ದನಗಳು ಮೊದಲಾದ ಸಾಧನ ಸಲಕರಣೆಗಳನ್ನು ಯಾವ ಪರಿಹಾರವಿಲ್ಲದೆ ಅವರಿಂದ ಕಸಿದುಕೊಳ್ಳಲಾಯಿತು. ಈ ಎಲ್ಲ ಭೂಮಿ ಸಲಕರಣೆಗಳನ್ನೂ ಭೂರಹಿತ ಕೃಷಿ ಕಾರ್ಮಿಕರಿಗೆ ಮತ್ತು ಚಿಕ್ಕಹಿಡುವಳಿದಾರರಾದ ಬಡ ಬೇಸಾಯಗಾರರಿಗೆ ನಾಮಮಾತ್ರದ ಬೆಲೆಗೆ ಹಂಚಲಾಯಿತು. ಹಿಡುವಳಿಯ ಗರಿಷ್ಠ ಮಿತಿಯನ್ನು 8 ಹೆಕ್ಟೇರು ಇಡಲಾಯಿತು. 2.10.276 ಕೃಷಿ ಕಾರ್ಮಿಕರಿಗೆ 16,96.000 ಹೆಕ್ಟೇರು ಭೂಮಿಯನ್ನು 1.22.321 ಚಿಕ್ಕ ಬಡಬೇಸಾಯಗಾರರಿಗೆ 3.32.600 ಹೆಕ್ಟೇರು ಭೂಮಿಯನ್ನು ಹೀಗೆ ಹಂಚಲಾಯಿತು.

ಭೂರಹಿತ ಕೃಷಿ ಕಾರ್ಮಿಕರ ಹಾಗೂ ಬಡಬೇಸಾಯಗಾರ ಮುಖಾಂತರವೇ ಜನತಾಂತ್ರಿಕವಾಗಿ ಭೂ ಸುಧಾರಣೆಯನ್ನು ತ್ವರಿತವಾಗಿ ಅನುಷ್ಠಾನಕ್ಕೆ ತರಲಾಯಿತು.

ಇವರ 'ಭೂ ಸುಧಾರಣೆಯ ಸಮಿತಿ'ಗಳನ್ನು ಈ ಕಾರ್ಯಕ್ಕಾಗಿ ಸ್ಥಾಪಿಸಲಾಯಿತು. ಈ ಸಮಿತಿಗಳೇ ಜಹಗೀರುದಾರರ. ಅವರಿಂದ ಕಿತ್ತುಕೊಳ್ಳಬೇಕಾದ ಭೂಮಿಯ ವಿತರಣೆಯಲ್ಲಿ ಭೂಮಿಯನ್ನು ಪಡೆಯುವ ಬಡಬೇಸಾಯಗಾರರ ಮಾಹಿತಿಯನ್ನೆಲ್ಲ ಮುಂಚಿತವಾಗಿ ತಯಾರಿಸಿದವು ಮತ್ತು ವಿತರಣೆಯ ಕೆಲಸವನ್ನು ಅವೇ ಮಾಡಿದವು. ಸರಕಾರದ ಆಡಳಿತ ಯಂತ್ರವು ಅವರಿಗೆ ಸಹಾಯ ಮಾತ್ರ ಮಾಡಿತು.

ಭೂ ಸುಧಾರಣೆಯ ಅನುಷ್ಠಾನವನ್ನು ವಿಫಲಗೊಳಿಸಲು ಜಾಗೀರುದಾರರು ಎಲ್ಲ ವಿಘಾತಕ ಪ್ರಯತ್ನಗಳನ್ನೂ ಮಾಡಿದರು. ಕೊಲೆ. ಸುಲಿಗೆ. ಕೊಳ್ಳೆ ಎಲ್ಲವೂ ಅವರಿಂದ ನಡೆದವು. ಆದರೆ ಜನಶಕ್ತಿಯ ಬಲದಿಂದ ಇಂಥ ವಿಘಾತಕ ಚಟುವಟಿಕೆಗಳನ್ನು ಸದೆ ಬಡೆಯಲಾಯಿತು. ನಿರಂತರ ಶೋಷಣೆ. ನರಸಂಹಾರಗಳಿಗೆ ಕಾರಣರಾದ ಜಾಗೀರುದಾರರಿಗೆ. ಕಿತ್ತುಕೊಂಡ ಭೂಮಿಯ ಬದಲು. ಯಾವ ಪರಿಹಾರವನ್ನೂ ಕೊಡುವುದು ಅಲ್ಲಿಯ ಸರಕಾರಕ್ಕೆ ಉಚಿತವೆನಿಸಲಿಲ್ಲ.

ಭೂ ಸುಧಾರಣೆಯ ಪೂರ್ವದಲ್ಲಿ ಜರ್ಮನಿಯ ಗ್ರಾಮಗಳಲ್ಲಿ ಜಾಗೀರುದಾರರ ನಿರಂಕುಶ ಪ್ರಭುತ್ವವಿತ್ತು. ಭೂ ಸುಧಾರಣೆಯ ನಂತರ ಅದು ಕುಗ್ಗಿ ಅಲ್ಲಿ ಬಡಬೇಸಾಯಗಾರರ ಪ್ರಭಾವವು ಬೆಳೆಯಿತು. 1939–46ರವರೆಗೆ 5 ಹೆಕ್ಟೇರಿಗಿಂತ ಕಡಮೆ ಭೂಮಿಯುಳ್ಳ ಶೇಕಡಾ 56 ಬಡಬೇಸಾಯಗಾರರ ಬಳಿ ಕೇವಲ ಶೇ. 9 ಬಡಕಲು ಸಾಗುವಳಿ ಭೂಮಿ ಇತ್ತು. ಅದೇ ಕಾಲಕ್ಕೆ 100 ಹೆಕ್ಟೇರಿಗಿಂತ ಹೆಚ್ಚು ಉತ್ತಮ ಭೂಮಿಯುಳ್ಳ ಶೇ. 1.1 ಜಹಗೀರುದಾರರ ಬಳಿ ಶೇಕಡಾ 28.3ರಷ್ಟು ಉತ್ತಮ ಭೂಮಿ ಇತ್ತು. 1946ರನಂತರ 10 ಹೆಕ್ಟೇರದವರೆಗೆ ಹಿಡುವಳಿಯುಳ್ಳ ಶೇ. 76.1 ಬೇಸಾಯಗಾರರ ವಶದಲ್ಲಿ ಶೇ. 37.3 ಒಳ್ಳೇ ಭೂಮಿಯು ಬಂದಿತು.

ಬೇಸಾಯಗಾರರಿಗೆ ತಮ್ಮ ಬೇಸಾಯವನ್ನು ಸುಧಾರಿಸಲು ಎಲ್ಲ ಸೌಲಭ್ಯಗಳನ್ನು ಒದಗಿಸಲಾಯಿತು. ಅದರಿಂದ ಬೇಸಾಯದ ಸಮೃದ್ಧಿಯೂ ಆಗಿ ಉತ್ಪತ್ತಿಯ ಹೆಚ್ಚಳವಾಯಿತು. ಆಹಾರಧಾನ್ಯಗಳ ಸರಾಸರಿ ಉತ್ಪತ್ತಿ 1934–38ರಲ್ಲಿ ಪ್ರತಿ ಹೆಕ್ಟೇರಿಗೆ 20.6 ಕ್ವಿಂಟಾಲು ಇದ್ದದ್ದು 1957ರಲ್ಲಿ 26.5 ಕ್ವಿಂಟಾಲಿಗೆ ಹೆಚ್ಚಿತು. ಇದರಂತೆಯೇ ಬೇರೆ ಉತ್ಪತ್ತಿಯೂ ಹೆಚ್ಚಿತು.

ಕೃಷಿ ಉತ್ಪಾದಕರ ಸಹಕಾರಿ ಸಂಘಗಳ ಬೆಳವಣಿಗೆ

ಭೂಮಿಯ ವಿತರಣೆ ಮಾಡಿ. ಸಾಕಷ್ಟು ಸೌಲಭ್ಯಗಳನ್ನು ಒದಗಿಸಿದರೂ ವೈಯಕ್ತಿಕ ತುಂಡು ಬೇಸಾಯದಿಂದ ಬೇಸಾಯದ ಪರಮಾವಧಿ ವೈಜ್ಞಾನಿಕ ಸಮೃದ್ಧಿ ಸಾಧ್ಯವಿಲ್ಲವೆಂದು ಜರ್ಮನಿಯ ಬಡಬೇಸಾಯಗಾರರು ಮನಗಂಡರು. ಬೇಸಾಯದ ವೈಜ್ಞಾನಿಕ ಪ್ರಗತಿ ಇಲ್ಲದೆ ಅವರ ಬಡತನ ದೂರವಾಗುವಂತಿರಲಿಲ್ಲ. ಆದ್ದರಿಂದ 1952ರಿಂದ ಅವರು ಸ್ವಸಂತೋಷದಿಂದ ಒಂದುಗೂಡಿ, ತಮ್ಮ ಹಿಡುವಳಿಗಳನು

ಒಂದುಗೂಡಿಸಿ. ಕೃಷಿ ಉತ್ಪಾದಕರ ಸಹಕಾರ ಸಂಘಗಳನ್ನು ಸಂಘಟಿಸಹತ್ತಿದರು. 1960ರವರೆಗೆ ಎಲ್ಲ ಬೇಸಾಯಗಾರರೂ ಇಂಥ ಉತ್ಪಾದಕರ ಸಹಕಾರಸಂಘಗಳಲ್ಲಿ ಸೇರಿಬಿಟ್ಟರು.

1952ರವರೆಗೆ ಶೇಕಡಾ 80.5ರಷ್ಟು ಉದ್ಯೋಗಗಳ ರಾಷ್ಟ್ರೀಕರಣವಾಯಿತು. ಹೀಗೆ ಒಂದುಕಡೆಗೆ ಉದ್ಯೋಗದ ಕ್ಷೇತ್ರದಲ್ಲಿ ಸಮಾಜವಾದವನ್ನು ಸ್ಥಾಪಿಸಿ ಇನ್ನೊಂದು ಕಡೆಗೆ ಚಿಕ್ಕ ತುಂಡು ವೈಯಕ್ತಿಕ ಬೇಸಾಯವನ್ನೇ ಮುಂದುವರಿಸಿದ್ದರೆ ದೇಶದ ಸಮಾಜವಾದಿ ವಿಕಾಸವೇ ಮುಗ್ಗರಿಸುತ್ತಿತ್ತು. ಆದ್ದರಿಂದ ಬೇಸಾಯ ಕ್ಷೇತ್ರದಲ್ಲೂ ಬೇಗ ಸಮಾಜವಾದದ ವಿಕಾಸ ಮಾಡಲು ಕೃಷಿ ಉತ್ಪಾದಕರ ಸಹಕಾರಸಂಘಗಳನ್ನು ಸಂಘಟಿಸುವುದು ಅನಿವಾರ್ಯವಾಯಿತು. 1960ರಲ್ಲಿ ಶೇಕಡಾ 84.2ರಷ್ಟು ಸಾಗುವಳಿ ಭೂಮಿಯು ಕೃಷಿ ಉತ್ಪಾದಕರ ಸಹಕಾರಸಂಘಗಳ ವಶದಲ್ಲಿ ಬಂತು.

ವಿಶಾಲವಾದ ರಾಷ್ಟ್ರೀಯ ಒಡೆತನದ ಫಾರ್ಮುಗಳು ಸಾಮೂಹಿಕ ಬೇಸಾಯದ ಮಾದರಿಗಳಾಗಿದ್ದವು. ಅವು ಸರಕಾರಿ ಫಾರ್ಮುಗಳು. ಅವು ಕೃಷಿಉತ್ಪಾದಕರ ಸಹಕಾರಸಂಘಗಳನ್ನು ಸಂಘಟಿಸುವಲ್ಲಿ ಹಾಗೂ ನಡೆಸುವಲ್ಲಿ ಬೇಸಾಯಗಾರರಿಗೆ ಮಾರ್ಗದರ್ಶನ ಮಾಡಿದವು ಹಾಗೂ ನೆರವು ಕೊಟ್ಟವು. ಈ ಸರಕಾರಿ ಫಾರ್ಮುಗಳು ಉತ್ತಮ ಬೀಜಗಳನ್ನು ಹಾಗೂ ಬೀಜದ ಹೋರಿಗಳನ್ನು ತಯಾರಿಸಿ ಹಂಚುವ ಕೇಂದ್ರಗಳೂ ಆಗಿದ್ದವು. 1960ರಲ್ಲಿ 669 ರಾಷ್ಟ್ರೀಯ ಫಾರ್ಮುಗಳು ಜರ್ಮನಿಯ ಸಮಾಜವಾದಿ ಗಣರಾಜ್ಯದಲ್ಲಿದ್ದವು. ಅವುಗಳ ವಶದಲ್ಲಿ ಶೇಕಡಾ 8.1 ಸಾಗುವಳಿ ಭೂಮಿ ಇತ್ತು.

ಕೃಷಿಯಂತ್ರಗಳ ಅಡ್ಡೆಗಳ ಸಹಾಯ

1952ರಲ್ಲಿ ಜರ್ಮನಿಯ ಗಣರಾಜ್ಯದಲ್ಲಿ ಕೃಷಿಯಂತ್ರಗಳ ಅಡ್ಡೆಗಳನ್ನು (ಮಶಿನ್ ಟ್ರಾಕ್ಟರ್ ಸ್ಟೇಶನ್ಸ್ – ಎಂ.ಟಿ.ಎಸ್.) ವ್ಯಾಪಕವಾಗಿ ಸ್ಥಾಪಿಸಲಾಯಿತು. ಬೇಸಾಯದ ಎಲ್ಲ ಕೆಲಸಗಳ ಯಾಂತ್ರೀಕರಣ ಮಾಡಿ ಸಮಾಜವಾದಿ ಬೇಸಾಯದ ವಿಕಾಸಕ್ಕೆ ಅನುಕೂಲವಾಗುವಂತೆ ಬೇಸಾಯದ ಉತ್ಪಾದನೆಯ ಸಾಧನಗಳ ವಿಕಾಸ ಮಾಡುವುದೇ ಈ ಮಹತ್ವದ ಕಾರ್ಯಕ್ರಮದ ಗುರಿಯಾಗಿತ್ತು. ಕೃಷಿಯಂತ್ರಗಳ ಅಡ್ಡೆಗಳು ಕೃಷಿ ಉತ್ಪಾದಕರ ಸಹಕಾರಸಂಘಗಳಿಗೆ ಎಲ್ಲ ಬೇಸಾಯ ಕೆಲಸಗಳಲ್ಲಿ ಸವಲತ್ತಿನ ಬೆಲೆ ಹಾಗೂ ಕರಾರಿನಿಂದ ಎಲ್ಲ ಬಗೆಯ ಯಾಂತ್ರಿಕ ಸೇವೆಗಳನ್ನು ಪೂರೈಸಿದವು. ಅಲ್ಲದೆ ಉತ್ಪಾದಕರ ಸಂಘಗಳ ಸಂಘಟನ ಹಾಗೂ ಸಂಚಾಲನದಲ್ಲಿ ಯಂತ್ರಅಡ್ಡೆಗಳು ತಾಂತ್ರಿಕ ಮಾರ್ಗದರ್ಶನ ಮಾಡಿದವು; ಉತ್ಪಾದಕರ ಸಂಘಗಳ ಸಿಬ್ಬಂದಿಗೆ ಅವು ತರಬೇತಿ ಕೊಟ್ಟವು. ಮುಂದೆ ಉತ್ಪಾದಕರ ಸಂಘಗಳು ಸಮೃದ್ಧವಾದಂತೆ ಸವಲತ್ತಿನ ಬೆಲೆ ಮತ್ತು ಕಾಡುಗಳ ಕರಾರಿನಿಂದ ಯಾಂತ್ರಿಕ ಅಡ್ಡೆಯ ಕೃಷಿ ಯಂತ್ರಗಳನ್ನೇ ಉತ್ಪಾದಕರ ಸಂಘಗಳಿಗೆ ವರ್ಗಾಯಿಸಲಾಯಿತು.

ಸಂಘಟನೆ, ಸಂಚಾಲನೆ ತತ್ವಗಳು ಹಾಗೂ ನಿಯಮಗಳು

ಕೃಷಿ ಉತ್ಪಾದಕರ ಸಹಕಾರಸಂಘಗಳನ್ನು ಸ್ವಸಂತೋಷ ಹಾಗೂ ಕ್ರಮಿಕ-ವಿಕಾಸ ತತ್ವಗಳ ಆಧಾರದ ಮೇಲೆ ಸಂಘಟಿಸಲಾಯಿತು. ತೀವ್ರಕೃಷಿ ಅಭಿವೃದ್ಧಿ ಹಾಗೂ ಉತ್ಪತ್ತಿಯ ಹೆಚ್ಚಳದಿಂದ ಬೇಸಾಯದ ಕ್ಷೇತ್ರದಲ್ಲಿ ಸಮತಾವಾದ ಸ್ಥಾಪಿಸುವುದೇ ಈ ಕಾರ್ಯಕ್ರಮದ ಗುರಿಯಾಗಿತ್ತು.

ಬೇಸಾಯಗಾರರ ಭೂಮಿಯ ಆಸಕ್ತಿಯನ್ನು ತೃಪ್ತಿಗೊಳಿಸಲು ಮೂರು ಪ್ರಕಾರದ ಉತ್ಪಾದಕರ ಸಹಕಾರಸಂಘಗಳಲ್ಲಿ ಬೇಸಾಯಗಾರ ಭೂಮಿಯ ಒಡೆತನ ವನ್ನು ಕಾದಿಡಲಾಗಿದೆ. ಉತ್ಪಾದಕರ ಸಂಘದಿಂದ ಯಾವನೊಬ್ಬ ಸದಸ್ಯನು ಹೊರಬಿದ್ದರೆ ಅವನಿಗೆ ಅಂಚಿನಲ್ಲಿ ಅಷ್ಟೇ ಬೆಲೆಯ ಭೂಮಿಯ ಬೇರೆ ತುಂಡನ್ನು ಕೊಡುವ ನಿಯಮ ವಿದೆ. ಆದರೆ ಮೊದಲಿನ ಎರಡು ಪ್ರಕಾರದ ಸಂಘಗಳಲ್ಲಿ ಭೂಮಿಯ ಪ್ರತಿಫಲವನ್ನು ಕೆಲವಂಶಕೊಟ್ಟರೆ ಮೂರನೇ ಪ್ರಕಾರದ ಉಚ್ಚತಮ ಉತ್ಪಾದಕರ ಸಂಘದಲ್ಲಿ ಯಾವ ಭೂಮಿಯ ಪ್ರತಿಫಲವನ್ನೂ ಕೊಡಲಾಗುವುದಿಲ್ಲ. ಅಲ್ಲಿ ಹಿಡುವಳಿಗಳ ಬೇಲಿ, ಬದು, ಬಾಂದುಗಳೂ ನಿರ್ಮೂಲವಾಗಿರುತ್ತವೆ. ಆದರೂ ನಾಮಮಾತ್ರದ ಭೂಮಿಯ ಒಡೆತನವಿದ್ದು, ಭೂಮಿಯ ವೈಯಕ್ತಿಕ ಖಾತೆಗಳನ್ನು ಕಾದಿಡಲಾಗುತ್ತದೆ.

ಕ್ರಮೇಣವಾಗಿ ಸದಸ್ಯರ ವಶದಲ್ಲಿರುವ ಕೃಷಿ ಯಂತ್ರಗಳನ್ನೂ, ಸಲಕರಣೆಗಳನ್ನೂ ಒಂದುಗೂಡಿಸಲಾಗುತ್ತದೆ. ಮೊದಲಿನ ಎರಡು ಪ್ರಕಾರದ ಸಂಘಗಳಲ್ಲಿ ಬಾಡಿಗೆಯ ಕರಾರಿನಿಂದ ಅವನ್ನು ಬಳಸಲಾಗುತ್ತದೆ. 3ನೇ ತರಗತಿಯ ಉತ್ಪಾದಕರ ಸಂಘದಲ್ಲಿ ಅವುಗಳ ಯೋಗ್ಯಬೆಲೆ ನಿರ್ಧರಿಸಿ 'ಸಾಮಾನುಗಳ ಶೇರು' (ಇನ್ವೆಂಟರಿ ಶೇರ್)ಗಳ ರೂಪದಲ್ಲಿ ಒಂದುಗೂಡಿಸಿ ಸಂಘದ ಸೊತ್ತನ್ನಾಗಿ ಪರಿವರ್ತಿಸಲಾಗುತ್ತದೆ.

ಕೃಷಿ ಉತ್ಪಾದಕರ ಸಹಕಾರ ಸಂಘಗಳು ಮೂರು ಪ್ರಕಾರವಿರುತ್ತವೆ. ಮೊದಲನೇ ಮತ್ತು ಎರಡನೇ ಪ್ರಕಾರಗಳಲ್ಲಿ ಅವುಗಳ ಸ್ವರೂಪ ಪೂರ್ಣ ಸಮಾಜವಾದಿ ಆಗಿರುವು ದಿಲ್ಲ. ಭೂಮಿ ಹಾಗೂ ಬೇಸಾಯ ಸಲಕರಣೆಗಳು ವೈಯಕ್ತಿಕ ಒಡೆತನದಲ್ಲಿದ್ದು ಅವಕ್ಕೆ ಪ್ರತಿಫಲವನ್ನು ಕೊಡಲಾಗುತ್ತದೆ. ಎರಡನೇ ಪ್ರಕಾರದ ಸಂಘದಲ್ಲಿ ಒಂದನೇ ಪ್ರಕಾರದ ಸಂಘಕ್ಕಿಂತ ಈ ಒಡೆತನದ ಪ್ರತಿಫಲ ಕಡಮೆ ಆಗುತ್ತದೆ. ಮೂರನೇ ತರಗತಿಯ ಉಚ್ಚತಮ ಸಂಘದಲ್ಲಿ ಒಡೆತನದ ಪ್ರತಿಫಲವೇನೂ ಇರುವುದಿಲ್ಲ. ಎಲ್ಲ ಪ್ರತಿಫಲವನ್ನೂ ದುಡಿತದ ಮೇಲೆಯೇ ಹಂಚಲಾಗುತ್ತದೆ.

16 ವರ್ಷಕ್ಕೆ ಮೇಲ್ಪಟ್ಟ ಎಲ್ಲ ಸ್ತ್ರೀಪುರುಷ ಬೇಸಾಯಗಾರರೂ ಕೃಷಿ ಉತ್ಪಾದಕರ ಸಹಕಾರಸಂಘದ ಸದಸ್ಯರಾಗುತ್ತಾರೆ. ದೊಡ್ಡಹಿಡುವಳಿದಾರರು ತಮ್ಮ ಹೆಚ್ಚು ಭೂಮಿಯನ್ನು ಉತ್ಪಾದಕರ ಸಂಘದಲ್ಲಿ ಒಂದುಗೂಡಿಸಿದರೆ ಸರಾಸರಿ

ಹಿಡುವಳಿಯ ಕ್ಷೇತ್ರಕ್ಕೆ ಮಾತ್ರ ಅವನು ಪ್ರತಿಫಲ ಪಡೆಯುತ್ತಾನೆ: ಹೆಚ್ಚಿನ ಕ್ಷೇತ್ರ ಅವನ ಖಾತೆಯಲ್ಲಿದ್ದರೂ ಅದಕ್ಕೆ ಯಾವ ಪ್ರತಿಫಲವೂ ಇರುವುದಿಲ್ಲ.

ಎಲ್ಲ ಸಹಕಾರಸಂಘಗಳಂತೆ ಉತ್ಪಾದಕರ ಸಂಘದಲ್ಲಿ ಸಾಧಾರಣ ಸಭೆಯು ಸಂಘದ ಸರ್ವೋಚ್ಚ ಅಧಿಕಾರದ ಸಂಸ್ಥೆ. ದೈನಂದಿನ ಕಾರ್ಯಸಂಚಾಲನೆಗಾಗಿ 2 ವರ್ಷದ ಅವಧಿಯ ವ್ಯವಸ್ಥಾಪಕ ಸಮಿತಿಯನ್ನೂ ಬೇರೆ ಸಮಿತಿಗಳನ್ನೂ ಸಾಧಾರಣ ಸಭೆಯೇ ಆರಿಸುತ್ತದೆ. ಎಲ್ಲ ಮಹತ್ವದ ಕಾರ್ಯಕ್ರಮಗಳನ್ನೂ, ನಿರ್ಣಯಗಳನ್ನೂ ಸಾಧಾರಣ ಸಭೆಯೇ ಮಾಡುತ್ತದೆ.

ಉತ್ಪಾದಕರ ಸಂಘಗಳಲ್ಲಿ ಶ್ರಮಸಂಘಟನ

'ಪ್ರತಿಯೊಬ್ಬನಿಗೂ ಅವನ ದುಡಿತಕ್ಕೆ ತಕ್ಕಫಲ' ಎಂಬ ಸಮಾಜವಾದಿ ತತ್ವದ ಪ್ರಕಾರ ದುಡಿತದ ಪ್ರತಿಫಲವನ್ನು ಸದಸ್ಯರಿಗೆ ಹಂಚಲಾಗುತ್ತದೆ. ಈ ತತ್ವವೇ ಜರ್ಮನಿಯ ಕೃಷಿ ಉತ್ಪಾದಕರ ಸಂಘಗಳಲ್ಲಿ ಶ್ರಮಸಂಘಟನದ ಹಾಗೂ ದುಡಿತದ ಉತ್ತೇಜನದ ಆಧಾರ. ಸಮಾಜವಾದಿ ಉತ್ಪಾದನೆಯನ್ನು ಹೆಚ್ಚಿಸಲು ಇಲ್ಲಿ ಸರಿಯಾದ ಉತ್ಪಾದನೆಯ ದಳಗಳನ್ನು ಮತ್ತು 'ಶ್ರಮದ ಗುಂಪು'ಗಳನ್ನು ಸಂಘಟಿಸಲಾಗುತ್ತದೆ. ಇದರಿಂದ ಸರಿಯಾದ ದುಡಿತದ ಶಿಸ್ತು ಉತ್ಪಾದನೆಯಲ್ಲಿ ಇರುತ್ತದೆ.

ಸ್ಥಾಯಿಉತ್ಪಾದನೆಯ ದಳಗಳನ್ನು ಹಾಗೂ ಸ್ಥಾಯಿಶ್ರಮದ ಗುಂಪುಗಳನ್ನು ಸಂಘಟಿಸಲಾಗಿದೆ. ಸ್ಥಾಯಿಉತ್ಪಾದನೆಯ ದಳಕ್ಕೆ ಕೆಲವೊಂದು ಉತ್ಪಾದನೆಯ ಸಾಧನಗಳನ್ನು ಕೊಟ್ಟು, ನಿರ್ದಿಷ್ಟ ಉತ್ಪಾದನೆಯ ಕಾರ್ಯಗಳ ಹೊಣೆಗಾರಿಕೆಯನ್ನು ಉತ್ಪಾದನೆಯ ದಳಗಳ ಮೇಲೆ ಹೊರಿಸಲಾಗುತ್ತದೆ. ದನಗಳ ಉತ್ಪಾದನೆಯ ದಳಗಳಿಗೆ ನಿರ್ದಿಷ್ಟ ಸಂಖ್ಯೆಯಲ್ಲಿ ದನಗಳನ್ನು ವಹಿಸಲಾಗುತ್ತದೆ. ಅವುಗಳ ಜೋಪಾನದ ಹೊಣೆ ಅವುಗಳದೇ. ಈ ದಳಗಳ ಹಾಗೂ ಗುಂಪುಗಳ ನಾಯಕರನ್ನು ವ್ಯವಸ್ಥಾಪಕ ಸಮಿತಿಯು ನೇಮಿಸುತ್ತದೆ. ಇವರೆಲ್ಲ ದಕ್ಷ ದುಡಿಮೆಗಾರರೂ, ನಿಸ್ಸ್ವಾರ್ಥ ಸಂಚಾಲಕರೂ ಇರುತ್ತಾರೆ. ಅವರು ಸದಸ್ಯರಿಗೆ ಕೆಲಸ ಹಂಚುತ್ತಾರೆ. ಅದರ ಮೇಲ್ವಿಚಾರಣೆ ಮಾಡುತ್ತಾರೆ ಮತ್ತು ಲೆಕ್ಕಪತ್ರ ಇಡುತ್ತಾರೆ.

ಕೂಲಿ ಆಳುಗಳನ್ನು ಕೆಲಸಕ್ಕೆ ಹಚ್ಚುವುದನ್ನು ನಿರ್ಬಂಧಿಸಲಾಗಿದೆ. ಸದಸ್ಯರು ತಾವೇ ಸ್ವಂತ ಶ್ರಮದಿಂದ ಎಲ್ಲ ಕೆಲಸಗಳನ್ನೂ ಮಾಡಬೇಕಾಗುತ್ತದೆ. ತಜ್ಞರು ಹಾಗೂ ಲೇಖಕರನ್ನು ಮಾತ್ರ ಉತ್ಪಾದಕರ ಸಂಘವು ನೇಮಿಸಿಕೊಳ್ಳಬಹುದು.

ಆದಾಯ ವಿತರಣೆ

ಸಹಕಾರಸಂಘದ ಉನ್ನತಿಗೆ ಹಾಗೂ ಸದಸ್ಯರ ಉನ್ನತಿಗೆ ಅನುಕೂಲವಾಗುವಂತೆ ಸಹಕಾರಸಂಘದ ಆದಾಯವನ್ನು ಹಂಚಲಾಗುತ್ತದೆ.

ಬೇಸಾಯ ಸಾಧನಗಳ ಮೂಲನಿಧಿ

ಇದರಲ್ಲಿ ಬೇಸಾಯದ ಮೂಲಬಂಡವಾಳವಾದ ಕಟ್ಟಡ, ಕೃಷಿಯಂತ್ರ ಮುಂತಾದವು ಇರುತ್ತದೆ. ಪ್ರತಿವರ್ಷದ ಬೇಸಾಯದ ಆದಾಯದಲ್ಲಿ 1 ಮತ್ತು 2ನೇ ಪ್ರಕಾರದ ಸಂಘಗಳಲ್ಲಿ ಆದಾಯದ ಶೇಕಡಾ 15ರಿಂದ 20ರವರೆಗೆ ಪಾಲನ್ನು ಈ ನಿಧಿಯಲ್ಲಿ ಸೇರಿಸಿ ಬೆಳೆಸಲಾಗುತ್ತದೆ. ಮೂರನೇ ಪ್ರಕಾರದ ಸಂಘದಲ್ಲಿ ಈ ನಿಧಿಯನ್ನು ಹೆಚ್ಚಿಸಲು ಶೇಕಡಾ 8ರಿಂದ 20ರವರೆಗೆ ಆದಾಯವನ್ನು ಸೇರಿಸಲಾಗುತ್ತದೆ. ಬೀಜದ ನಿಧಿ, ಮೇವಿನ ನಿಧಿ ಹೀಗೆ ಬೇರೆ ಬೇರೆ ನಿಧಿಗಳಿರುತ್ತವೆ. ಹಣದ ರೂಪ ಹಾಗೂ ಮಾಲಿನ ರೂಪ ಎರಡು ರೀತಿಯಲ್ಲೂ ಪ್ರತಿಫಲವನ್ನು ಹಂಚಲಾಗುತ್ತದೆ. ಹಣದ ಆದಾಯವನ್ನು ದುಡಿತಕ್ಕೆ 1ನೇ ಪ್ರಕಾರದ ಸಂಘದಲ್ಲಿ ಶೇಕಡಾ 60ರಷ್ಟು, 2ನೇ ಪ್ರಕಾರದಲ್ಲಿ ಶೇಕಡಾ 70ರಷ್ಟು ಹಾಗೂ ಮೂರನೇ ಪ್ರಕಾರದ ಸಂಘದಲ್ಲಿ ಶೇಕಡಾ 80ರಷ್ಟು ಹಂಚಲಾಗುತ್ತದೆ. ಅದೇ ಪ್ರಕಾರ ಉತ್ಪತ್ತಿಯ ವಿತರಣೆಯನ್ನು 1ನೇ ಪ್ರಕಾರದಲ್ಲಿ 40ರಷ್ಟು, 2ನೇ ಪ್ರಕಾರದಲ್ಲಿ ಶೇಕಡಾ 30ರಷ್ಟು ಹಾಗೂ 3ನೇ ಪ್ರಕಾರದಲ್ಲಿ ಶೇಕಡಾ 20ರಷ್ಟು ಹಂಚಲಾಗುತ್ತದೆ.

ಕೆಲಸದ ಅಳತೆಗಳು

ದುಡಿತಕ್ಕೆ ತಕ್ಕ ಪ್ರತಿಫಲ ಕೊಟ್ಟು ಉತ್ತೇಜನ ಕೊಡಲು ಪ್ರತಿಯೊಬ್ಬ ಸದಸ್ಯನು ಮಾಡಿದ ಕೆಲಸವನ್ನೂ ಅಳೆಯಲು ಕೆಲಸದ ಅಳತೆಗಳನ್ನು ಗೊತ್ತುಪಡಿಸಲಾಗಿದೆ. ಉದಾಹರಣೆಗೆ ಮೆಕ್ಕೇಜೋಳ ಬಿತ್ತನೆಮಾಡುವುದು ಒಂದು 'ಶ್ರಮಘಟಕ'. ಒಬ್ಬ ಸದಸ್ಯನಿಗೆ 8 ಗಂಟೆಯ ದುಡಿತಕ್ಕೆ 0.32 ಹೆಕ್ಟೇರು ಇರುತ್ತದೆ. ಕೆಲಸದ ಅಳತೆಗಿಂತ ಹೆಚ್ಚು ಕೆಲಸ ಮಾಡಿದರೆ, ಅಂದರೆ 0.48 ಹೆಕ್ಟೇರಿನ ಕೆಲಸ ಮಾಡಿದರೆ ಆ ಸದಸ್ಯನಿಗೆ 1.5 'ಶ್ರಮಘಟಕಗಳು' ದೊರಕುತ್ತವೆ. ಒಂದು ಶ್ರಮಘಟಕವೆಂದರೆ ಒಬ್ಬ ದುಡಿಮೆಗಾರ ಸರಾಸರಿಯಾಗಿ ನಿರ್ದಿಷ್ಟ ದುಡಿತದ ಸಮಯದಲ್ಲಿ ಮಾಡುವ ಕೆಲಸ. ಕೆಳಗಿನ ಪಟ್ಟಿಯಲ್ಲಿ ಶ್ರಮಘಟಕಗಳ ಉದಾಹರಣೆಗಳನ್ನು ಕೊಡಲಾಗಿದೆ:

ಅ.ಸ	ಕೆಲಸದ ವಿವರ	ಕೆಲಸದ ಅಳತೆ ವಿಸ್ತಾರ	ದಿವಸದ ಕೆಲಸದ ಅಳತೆ	ಶ್ರಮ ಘಟಕಗಳು: ಟ್ರಾಕ್ಟರಸಂಚಾಲಕನಿಗೆ	ಶ್ರಮ ಘಟಕಗಳು: ಬೇರೆ ಸಹಾಯಕನಿಗೆ
1	2	3	4	5	6
1.	ಬಿತ್ತನೆ 40 ಹಾ. ಪದ ಟ್ರಾಕ್ಟರು ಮತ್ತು 3 ಬಿತ್ತನೆ	9 ಮೀಟರ್	18.0 ಹೆಕ್ಟೇರು	1.6	1.2
2.	ಯಂತ್ರಗಳುಅದೇ ಕೆಲಸ – 2 ಕುದುರೆ	3 ಮೀಟರ್	6.0 ಹೆಕ್ಟೇರು	1.4	1.2

	1	2	3	4	
3.	ಉಳುಮೆ 40 ಹಾ.ಪ ಟ್ರಾಕ್ಟರು 3 ಕುಳ	28 ಸೆಮೀ ಭಾರಿ ಮಣ್ಣು	1.2 ಹೆಕ್ಟೇರು	1.6	—
4.	ಉಳುಮೆ-2 ಕುದುರೆ, 1 ಕುಳ	28 ಸೆಮೀ ಭಾರಿ ಮಣ್ಣು	0.32 ಹೆಕ್ಟೇರು	1.4	—
5.	ಕುಂಟೆ-40 ಹಾ.ಪ ಟ್ರಾಕ್ಟರ್	2.5 ಸೆಮೀ ಭಾರಿ ಮಣ್ಣು	5.2	1.4	—
6.	ಗೋಧಿಯ ಕೊಯ್ಲು ಒಕ್ಕಣೆ	3 ಮೀ	6.0	2.0	1.6

ವರ್ಷದ ಕೊನೆಯಲ್ಲಿ ವೆಚ್ಚಗಳನ್ನು ಹಾಗೂ ನಿಧಿಗಳನ್ನು ತೆಗೆದು ಉಳಿದ ಆದಾಯವನ್ನು ಶ್ರಮಘಟಕಗಳ ಆಧಾರದ ಮೇಲೆ ಹಂಚಲಾಗುತ್ತದೆ. ಸಾಮಾನ್ಯವಾಗಿ ಸದಸ್ಯನು ಗಳಿಸಬಹುದಾದ ಶ್ರಮಘಟಕಗಳ ಶೇಕಡಾ 70ರಷ್ಟು ಭಾಗವನ್ನು ಅವನಿಗೆ ಮುಂಗಡವಾಗಿ ಕೊಡಲಾಗುತ್ತದೆ. ಇದರಿಂದ ಅವನು ತನ್ನ ಜೀವನ ವೆಚ್ಚವನ್ನು ಸಾಗಿಸುತ್ತಾನೆ.

ಬೇರೆ ಸಮಾಜವಾದಿ ದೇಶಗಳಲ್ಲಿ ಮಾಡಿದಂತೆ ಇಲ್ಲಿಯೂ ಸಹಕಾರಿ ಬೇಸಾಯಗಾರನ ವೈಯಕ್ತಿಕ ಪಾರಿವಾರಿಕ ಕೈತೋಟಕ್ಕಾಗಿ ಪ್ರತಿಯೊಬ್ಬ ಸದಸ್ಯನಿಗೆ ಸ್ವಲ್ಪ ಭೂಮಿಯನ್ನು, ದನಕರುಗಳನ್ನೂ ಕೊಡಲು ಅವಕಾಶವಿದೆ. ಇಂಥ ಭೂಮಿ 0.5 ಹೆಕ್ಟೇರದವರೆಗೆ ಇರುತ್ತದೆ. 2 ಆಕಳು, 2 ಹಂದಿ, 5 ಕುರಿ ಕೋಳಿ ಮುಂತಾದವುಗಳನ್ನು ಸದಸ್ಯನು ಇಟ್ಟುಕೊಳ್ಳಬಹುದು.

ಕೃಷಿ ಯಂತ್ರಗಳ ಅಡ್ಡೆಯ ಸಂಬಂಧ

ನಿರ್ದಿಷ್ಟ ಕರಾರುಗಳಿಂದ ಕೃಷಿಯಂತ್ರಗಳ ಅಡ್ಡೆಯು ಉತ್ಪಾದಕರ ಸಹಕಾರ ಸಂಘಕ್ಕೆ ಬೇಸಾಯ ಕೆಲಸಗಳಲ್ಲಿ ಯಾಂತ್ರಿಕ ಸೇವೆಗಳನ್ನು ಪೂರೈಸುತ್ತದೆ. ಈ ಕಾರ್ಯದಲ್ಲಿ ಎರಡೂ ಸಂಸ್ಥೆಗಳ ಅನ್ಯೋನ್ಯ ಸಹಕಾರವು ಒಂದು ವಿಶಿಷ್ಟವಾದ 'ಸ್ಕೋನೇಬೆಕ್ ಪದ್ಧತಿ'ಯ ಆಧಾರದ ಮೇಲೆ ಸ್ಥಿರವಾಗಿರುತ್ತದೆ. ಈ ಪದ್ಧತಿಯಲ್ಲಿ ಉತ್ಪಾದಕರ ಸಹಕಾರ ಸಂಘದ ಸಿಬ್ಬಂದಿಯಲ್ಲಿ ತಾಂತ್ರಿಕ ತಜ್ಞತೆ ಇರದೇ ಇರುವುದರಿಂದ ತಾತ್ಕಾಲಿಕವಾಗಿ ಯಾಂತ್ರಿಕ ಅಡ್ಡೆಯ ಸಿಬ್ಬಂದಿಯ ತಾಂತ್ರಿಕ ನಿಯಂತ್ರಣವನ್ನು ಪಾಲಿಸುವ ಕರಾರು ಇರುತ್ತದೆ. ಆದರೆ ಉತ್ಪಾದಕರ ಸಹಕಾರ ಸಂಘದ ತಾಂತ್ರಿಕ ತಜ್ಞತೆ ಹೆಚ್ಚಿದಂತೆ ಈ ನಿಯಂತ್ರಣವನ್ನು ಸಡಿಲಗೊಳಿಸಲಾಗುತ್ತದೆ ಮತ್ತು ಮುಂದೆ ಸಹಕಾರಿ ಸಂಘದ ಉನ್ನತಿಯನ್ನು ಲಕ್ಷಿಸಿ ಅಡ್ಡೆಯ ಯಂತ್ರಗಳನ್ನು ಸವಲತ್ತಿನ ಕಂತುಗಳಿಂದ ಸಹಕಾರ ಸಂಘಕ್ಕೆ ವರ್ಗಾಯಿಸಲಾಗುತ್ತದೆ. ಆಗ ಕೃಷಿಯಾಂತ್ರಿಕ ಅಡ್ಡೆಯು ಕೇವಲ 'ಕೃಷಿಯಂತ್ರಗಳ ದುರಸ್ತಿಯ ಅಡ್ಡೆ'ಯಾಗಿ ಉಳಿಯುತ್ತದೆ.

ಕೃಷಿ ಉತ್ಪಾದಕರ ಸಹಕಾರಸಂಘಗಳ ಅಭಿವೃದ್ಧಿ

ಮೊದಲನೇ ಎರಡು ಪ್ರಕಾರದ ಉತ್ಪಾದಕರ ಸಹಕಾರ ಸಂಘಗಳು ತಮ್ಮ ಹೆಚ್ಚಿನ ಆದಾಯವನ್ನು ದನಸಂಗೋಪನ, ಕೋಳಿ ಸಾಕಾಣಿಕೆ ಮುಂತಾದ ಉದ್ಯೋಗ ಗಳಿಂದ ಪಡೆಯುತ್ತವೆ. ವೈಯಕ್ತಿಕ ಬೇಸಾಯಗಾರರಿಗಿಂತ ಇವು ಹೆಚ್ಚಿನ ಉತ್ಪತ್ತಿ ಯನ್ನು ಪಡೆದವು. ಈ ಬೇಸಾಯಸಂಘಗಳು ಭದ್ರವಾಗಿ ತಮ್ಮ ಹೆಚ್ಚಿನ ಉನ್ನತಿ ಯಿಂದ ಸಾಮೂಹಿಕ ಕಟ್ಟಡಗಳನ್ನು ಯಂತ್ರಗಳನ್ನು ಪಡೆದ ಬಳಿಕ ಮೂರನೇ ಪ್ರಕಾರದ ಬೇಸಾಯಸಂಘಗಳನ್ನು ಸಂಘಟಿಸಲಾಯಿತು. ಇವುಗಳಿಂದ ಸಮಾಜವಾದಿ ವಿಕಾಸದ ಹೊಸಗ್ರಾಮಗಳ ನಿರ್ಮಾಣವಾಗಿದೆ. ಕೆಳಗಿನ ಪಟ್ಟಿಯಲ್ಲಿ ಉತ್ಪಾದಕರ ಸಂಘಗಳ ಪ್ರಗತಿಯನ್ನು ಕಾಣಬಹುದು :

ವರ್ಷ	ಸಹಕಾರ ಸಂಘಗಳು ಮತ್ತು ಅವುಗಳ ಶೇಕಡಾವಾರು			ಅವುಗಳ ವಶದಲ್ಲಿ ಶೇಕಡಾ ಭೂಮಿ			ಬೇಸಾಯ ಗಾರರ ಶೇ. ಸಂಖ್ಯೆ	ಒಟ್ಟು ಸದಸ್ಯರು	ಒಟ್ಟು ಸಂಘಗಳು
	i	ii	iii	i	ii	iii			
1952	86.6	4.8	8.6	80.3	6.4	13.3	3.3	37,300	1,906
1960	66.1	1.1	32.8	36.4	0.7	62.09	84.7	9,54,246	19,354

ಕೃಷಿಯಂತ್ರಗಳಿಂದ ಕೊಟ್ಟ ತಾಂತ್ರಿಕ ಸಹಾಯ ಸವಲತ್ತುಗಳು ಉತ್ಪಾದಕರ ಸಂಘಗಳ ಸಮೃದ್ಧಿಗೆ ಬಹಳ ಮಹತ್ವದವಾಗಿದ್ದವು. ಈ ಸಂಘಗಳು ಉತ್ಪಾದನೆಯ ಕರಕಂದಾಯಗಳಿಂದ ವಿನಾಯಿತಿ ಪಡೆದಿವೆ. ವೈಯಕ್ತಿಕ ಸದಸ್ಯರಿಂದ ಅವರ ಆದಾಯದ ಮೇಲೆ ಸವಲತ್ತಿನಿಂದ ತೆರಿಗೆಯನ್ನು ವಸೂಲು ಮಾಡಲಾಗುತ್ತದೆ. ಈ ಸಂಘಗಳು ಸೋವಿ ಬಡ್ಡಿಯಿಂದ ಕಟ್ಟಡಗಳಿಗಾಗಿ ಯಂತ್ರಗಳಿಗಾಗಿ, ಅಭಿವೃದ್ಧಿಗಳಿಗಾಗಿ ಹಾಗೂ ಸಹಾಯಕ ಉದ್ಯೋಗಗಳ ಸಲುವಾಗಿ ಧೀರ್ಘಾವಧಿ ಸಾಲಗಳನ್ನು ಸರಕಾರದಿಂದ ಪಡೆಯುತ್ತವೆ. ಸಾಲಗಳನ್ನು ವಸೂಲು ಮಾಡುವ ವಿಶಿಷ್ಟ ಪದ್ಧತಿಯನ್ನು ಕೆಳಗೆ ತೋರಿಸಲಾಗಿದೆ :

ಸಾಲಗಳ ಉದ್ದೇಶ	ವಸೂಲು ಮಾಡುವ ಸಾಲದ ಶೇಕಡಾ ರಕಮು
ದೊಡ್ಡ ಕಟ್ಟಡಗಳು	1 ಪ್ರತಿವರ್ಷಕ್ಕೆ
ಬೇರೆ ಕಟ್ಟಡಗಳು	2 ,,
ದುರಸ್ತಿಗಳು	2 ,,
ದನಗಳು	20 ,,
ಯಂತ್ರಗಳು ಹಾಗೂ ಕೃಷಿಸಲಕರಣೆಗಳು	10 ,,

ಬೀಜ, ಗೊಬ್ಬರ ಮುಂತಾದ ಸಾಗುವಳಿಯ ವಾರ್ಷಿಕ ಅವಶ್ಯಕತೆಗಳಿಗೋಸುಗ ಅವು ಸೋವಿದರದ ಅಲ್ಪಾವಧಿ ಸಾಲಗಳನ್ನು ಪಡೆಯುತ್ತವೆ. ವಿಭಿನ್ನ ಉದ್ಯೋಗ

ಸಂಸ್ಥೆಗಳು ಕರಾರು ಮಾಡಿಕೊಂಡು ಉತ್ಪಾದಕರ ಸಹಕಾರ ಸಂಘಗಳಿಗೆ ನೆರವನ್ನು ನೀಡುತ್ತವೆ.

ಉತ್ಪಾದಕರ ಸಹಕಾರ ಸಂಘಗಳ ಯಶಸ್ಸು

ಕೃಷಿಉತ್ಪಾದಕರ ಸಹಕಾರಸಂಘಗಳು ವೈಯಕ್ತಿಕ ಬೇಸಾಯಗಾರರಿಗಿಂತ ಬೇಸಾಯದ ಉತ್ಪತ್ತಿಯಲ್ಲಿ ಹೆಚ್ಚಿನ ಸಮೃದ್ಧಿಯನ್ನು ಸಾಧಿಸಿ ಪೂರ್ವ ಜರ್ಮನಿಯ ಬೇಸಾಯಗಾರರ ಜೀವನವನ್ನು ಬಹಳಷ್ಟು ಸುಧಾರಿಸಿವೆ. ಕೆಳಗಿನ ಪಟ್ಟಿಯು ಉತ್ಪತ್ತಿಯ ಪ್ರಗತಿಯನ್ನು ಸ್ಪಷ್ಟಪಡಿಸುತ್ತದೆ:

ಪ್ರತಿ ಹೆಕ್ಟೇರಿಗೆ ಕ್ವಿಂಟಾಲಿನಲ್ಲಿ ಸರಾಸರಿ ಉತ್ಪತ್ತಿ

ಬೆಳೆಗಳು	ವೈಯಕ್ತಿಕ ಬೇಸಾಯಗಾರನ ಹೊಲದಲ್ಲಿ	ಸಹಕಾರ ಸಂಘಗಳಲ್ಲಿ 1959ರಲ್ಲಿ	ಸಹಕಾರ ಸಂಘಗಳಲ್ಲಿ 1960ರಲ್ಲಿ	ಶರಾ
ಆಹಾರ ಧಾನ್ಯಗಳು	23.8	24.8	27.3	1970ರಲ್ಲಿ
ಬೇಳೆಕಾಳುಗಳು	8.6	9.3	12.00	ಮೂರನೇ ಬಾರಿಗೆ
ಎಣ್ಣೆ ಬೆಳೆ	12.8	13.9	14.2	ತರಗತಿಯ ಉತ್ಪಾದ
ನಾರಿನ ಬೆಳೆ	16.4	18.8	21.5	ಕರ ಸಂಘಗಳು ಹೆಚ್ಚು
ಹಸುರು ಮೇವು	54.6	59.1	68.9	ಆದ್ದರಿಂದ ಉತ್ಪತ್ತಿ
ಹಸುರು ಮತ್ತು ಹೂಳಿಟ್ಟ				ಯು ಹೆಚ್ಚಿತು.
ಮೆಕ್ಕೆ ಜೋಳದ ಮೇವು	297.8	309.1	35.6	
ಆಲೂಗಡ್ಡೆ	—	—	191.7	
ಸಕ್ಕರೆಯ ಬೀಟಗಡ್ಡೆ	—	—	286.0	

ಅದರಂತೆಯೇ ಪಶುಸಂಗೋಪನ ಉದ್ಯೋಗದಲ್ಲಿ ಸಹ ಉತ್ಪಾದಕರ ಸಂಘಗಳು ವೈಯಕ್ತಿಕ ಬೇಸಾಯಗಾರರಿಗಿಂತ ಹೆಚ್ಚಿನ ಸಮೃದ್ಧಿಯನ್ನು ಸಾಧಿಸಿದವೆಂದು ಕೆಳಗಿನ ಪಟ್ಟಿಯು ಸ್ಪಷ್ಟಪಡಿಸುತ್ತದೆ:

ವಿವರಗಳು	ವೈಯಕ್ತಿಕ ಬೇಸಾಯಗಾರನಿಂದ	ಸಹಕಾರ ಸಂಘಗಳಿಂದ
ಮಾಂಸದ ದನಗಳು	100	106.9
ಬೇರೆ ದನಗಳು	117.8	147.5
ಹಾಲು (ಶೇ. 3.5 ಜಿಡ್ಡು)	112.3	114.8
ಮೊಟ್ಟೆಗಳು		240

1958ರಲ್ಲಿ 100 ಎಂದು ಆಧಾರಹಿಡಿದು 1959ರ ತುಲನಾತ್ಮಕ ಪ್ರಗತಿಕೊಟ್ಟಿದೆ

ಹಣದ ಸರಾಸರಿ ಆದಾಯವು ಉತ್ಪಾದಕರ ಸಂಘಗಳಲ್ಲಿ 1957ರ ತುಲನೆಯಲ್ಲಿ 1959ರಲ್ಲಿ 130.2ರಷ್ಟು ಹೆಚ್ಚಿತ್ತು. ಪ್ರತಿ ಹೆಕ್ಟೇರಿನ ನಿವ್ವಳ ಆದಾಯವು, ವೆಚ್ಚವನ್ನು ವಜಾತೆಗೆದ ಬಳಿಕ, 1957ರಲ್ಲಿ 275 ಡಿ.ಎಮ್. (11.70 ಡಿ.ಎಮ್. = 1 ಪೌಂಡು) ದಿಂದ 1960ರಲ್ಲಿ 643 ಡಿ.ಎಮ್.ನಷ್ಟು ಹೆಚ್ಚಿತು. ಅದರಿಂದ ಶ್ರಮಘಟಕಗಳ ಮೌಲ್ಯವು 1957ಕ್ಕಿಂತ 1959ರಲ್ಲಿ ಶೇ. 189.9 ಹೆಚ್ಚಿತು. ಇದಲ್ಲದೆ ಸಹಕಾರಿ ಬೇಸಾಯಗಾರರು ಉತ್ಪಾದಕರ ಸಂಘಗಳಿಂದ ಸಾಮಾನಿನ ರೂಪದಲ್ಲಿ ಬೇರೆ ಪ್ರತಿಫಲ ಪಡೆದರು. ಹೀಗೆ ಜರ್ಮನಿಯ ಗಣರಾಜ್ಯದಲ್ಲಿ ಒಬ್ಬ ಸಹಕಾರಿ ಬೇಸಾಯಗಾರನ ಸರಾಸರಿ ವಾರ್ಷಿಕ ಆದಾಯವು 7,000 ಡಿ.ಎಮ್.ನಿಂದ 8000 ಡಿ.ಎಮ್.ನವರೆಗೆ ಇರುತ್ತದೆ. 1960ರಲ್ಲಿ ಒಬ್ಬ ಔದ್ಯೋಗಿಕ ಕಾರ್ಮಿಕನ ಸರಾಸರಿ ವಾರ್ಷಿಕ ಆದಾಯವು 6804 ಡಿ.ಎಮ್.ಇತ್ತು. ಔದ್ಯೋಗಿಕ ಕಾರ್ಮಿಕರ ಮಟ್ಟಕ್ಕೆ ಸಹಕಾರಿ ಬೇಸಾಯಗಾರರ ಜೀವನ ಮಟ್ಟವು ಮುಟ್ಟಿತೆಂಬುದು ಸ್ಪಷ್ಟವಿದೆ.

ಬೇಸಾಯದ ಉತ್ಪತ್ತಿಯು ಹೆಚ್ಚಳವು ಮಾರಾಟಕ್ಕೆ ಮಾರುಕಟ್ಟೆಗೆ ಹೆಚ್ಚೆಚ್ಚು ಬಂದಂತೆ ದೇಶದ ಸಮಸ್ತ ಜನತೆಯ ಅವಶ್ಯಕತೆಗಳ ಪೂರೈಕೆಯಾಗುತ್ತದೆ ಮತ್ತು ದೇಶದ ಉನ್ನತಿಯು ಹೆಚ್ಚುತ್ತದೆ. ಅಲ್ಲದೆ ಅದರಿಂದ ಬೇಸಾಯಗಾರರ ಜೀವನದ ಉನ್ನತಿಯೂ ಸ್ಪಷ್ಟವಾಗುತ್ತದೆ. ಏಕೆಂದರೆ ಬೇಸಾಯಗಾರರು ಉಂಡು ಹೆಚ್ಚಿನದನ್ನು ಮಾರುತ್ತಾರೆ ಮತ್ತು ಮಾರಿದ ಉತ್ಪತ್ತಿಯಿಂದ ತಮ್ಮ ಜೀವನದ ಬೇರೆ ಅವಶ್ಯಕತೆಗಳನ್ನು ಹೆಚ್ಚು ಪೂರೈಸಿಕೊಳ್ಳುತ್ತಾರೆ. ಇಂಥ ತುಲನಾತ್ಮಕ ಮಾರಾಟದ ಪ್ರಗತಿಯು ಕೆಳಗಿನಂತಿದೆ :

ವಿವರಗಳು	ಜಾಗೀರದಾರರ ಫಾರ್ಮು	ವೈಯುಕ್ತಿಕ ಬೇಸಾಯಗಾರನ ಫಾರ್ಮು	ಉತ್ಪಾದಕ ಸಹಕಾರಸಂಘಗಳು	
	1935	1952	1955	1958
ಹಾಲು (ಪ್ರತಿ ಹೆಕ್ಟೇರಿಗೆ ಸರಾಸರಿ ಕೆ.ಜಿ.)	1–291	410	420	458
ಮಾಂಸ (ಪ್ರತಿ ಹೆಕ್ಟೇರಿಗೆ ಸರಾಸರಿ ಕೆ.ಜಿ.)	1–53	86	100	149
ಧಾನ್ಯ ಹಾಗೂ ಪಶುಸಂಪತ್ತು (ಪ್ರತಿ ಹೆಕ್ಟೇರಿಗೆ ಸರಾಸರಿ ಕಾಳಿನ ಅಳತೆ)	20.7	19.8	19.6	24.5
ಶೇಕಡಾ ಪಶು ಸಂಪತ್ತು	22	41	45	49

ಈ ಅಂಕಿಸಂಖ್ಯೆಗಳಿಂದ ಜರ್ಮನಿಯ ಪ್ರಜಾತಾಂತ್ರಿಕ ಗಣರಾಜ್ಯದಲ್ಲಿ ಕೃಷಿ ಉತ್ಪಾದಕರ ಸಹಕಾರ ಸಂಘಗಳಿಂದ ಬೇಸಾಯಗಾರ ಜನತೆಯ ಸಮೃದ್ಧಿಯ ಸಾಧನೆಯು ಸ್ಪಷ್ಟವಾಗುತ್ತದೆ.

ಪಾರಿಭಾಷಿಕ ಶಬ್ದಕೋಶ

ಅಢಾವೆ ಪತ್ರಿಕೆ	Balance Sheet
ಅನಾರ್ಥಿಕ ಹಿಡುವಳಿ	Uneconomic holding
ಅನುತ್ತೇಜಕ	Disincentive
ಅರೆಉದ್ಯೋಗ	Under-employment
ಆದಾಯದ ಪ್ರಾಪ್ತಿ	Return
ಆದಾಯದ ವಿತರಣೆ	Distribution of income
ಆದಾಯ ವೆಚ್ಚಗಳ ಪಟ್ಟಿ	Income-expenditure statement
ಇಳಿಕೆ ಆದಾಯ ನಿಯಮ	Law of diminishing returns
ಉತ್ಪಾದನೆಯ ದಳ	Production brigade
ಉತ್ಪಾದನೆಯ ಯೋಜನೆ	Production Plan
ಉತ್ಪಾದನೆಯ ವೆಚ್ಚ	Cost of Production
ಉತ್ಪಾದನೆಯ ಸಾಧನಗಳು	Means of Production
ಉದ್ಯೋಗ ಸಂಸ್ಥೆ	Firm
ಉದ್ಯೋಗಾವಕಾಶ	Employment opportunities
ಕುಲಕ (ರಶಿಯದ ಶ್ರೀಮಂತ ಬೇಸಾಯಗಾರ)	Kulak (Rich Former in Russia)
ಕೆಲಸದ ಅಳತೆ	Work-norm
ಕೂಲಿಯ ಶ್ರಮ	Wage-labour
ಕೆಲಸಕ್ಕೆ ತಕ್ಕ ಪ್ರತಿಫಲ	Remuneration accordingtowork
ಕೆಲಸಕ್ಕೆ ತಕ್ಕ ಪ್ರತಿಫಲ ಕೊಡುವ ಪದ್ಧತಿ	Piece wages system
ಕೆಲಸದ ವಿತರಣೆ	Work distribution or assignment
ಕೆಲಸದ ರಿಜಿಸ್ಟರ್	Work register
ಕಲ್ಯಾಣ ರಾಜ್ಯ	Welfare state
ಕಾರ್ಯನಿರ್ವಾಹಕ (ಸಂಚಾಲಕ)	Managing Director
ಕಾಲ್ಪನಿಕ ಸಮಾಜವಾದ	Utopean socialism
ಕೃಷಿಕ ತಜ್ಞ	Agronomist
ಕೃಷಿ ಆಧಾರಿತ ಉದ್ಯೋಗ	Agro-industry
ಕೌಟುಂಬಿಕ ಹೊಲ	Household farm
ಗ್ರಾಮೀಣ ಸಹಕಾರ ಸಂಘಗಳು (ಚೀನಾದಲ್ಲಿ)	Agrarian Co-operative (in China)
ಗ್ರಾಮೋದ್ಯೋಗ ಹಾಗೂ ಗುಡಿ ಕೈಗಾರಿಕೆಗಳು	Village and cottage industries
ಗುತ್ತಿಗೆ	Rent
ಗೊಂತಿ ಬೇಸಾಯ	Traditional Co-operative farming
ಚಿಕ್ಕಹಿಡುವಳಿದಾರರು	Small holders
ಟ್ರಾಕ್ಟರ್ ಅಡ್ಡೆ	Tractor station
ತರಬೇತಿ	Training
ತಾಂತ್ರಿಕ ಮಾರ್ಗದರ್ಶನ	Technical guidance
ತೀವ್ರಬೇಸಾಯ	Intensive farming
ತುಂಡು ಭೂ ಹಿಡುವಳಿಗಳು	Fragmentation holdings
ದಳನಾಯಕ	Brigade leader
ದಿನಗೂಲಿಯ ಪದ್ಧತಿ	Time wage system
ದುಡಿತದ ಉತ್ತೇಜನ	Labour incentive (work incentive)
ದುಡಿತದ ಶಿಸ್ತು	Work discipline

ದುಡಿತದ ಪ್ರತಿಫಲ	Work remuneration
ದುಡಿತದ ಹೆಚ್ಚಿನ ಲಾಭ	Labour bonus
ನಿಧಿ	Fund
ನಿರ್ದೇಶಕ ತತ್ವ	Guidingprinciple
ಪತ್ತು (ಕೃಷಿ)	Credit (Agricultural)
ಪರಂಪರಾಗತ ಸಹಕಾರಿ ಬೇಸಾಯ	Traditional Co-operative farming
ಪಾರಿವಾರಿಕ ಬೇಸಾಯ	Family farming
ಪೀಕು ಒಕ್ಕುವ ಯಂತ್ರ	Combine harvester
ಪುನಃಸಂಘಟನ ಹಾಗೂ ದೃಢೀಕರಣ	Re-organisation and consolidation
ಪುನಃಸಂಸ್ಕರಣ ತರಬೇತಿ	Re-orientation training
ಪ್ರಗತಿಯ ಸಮೀಕ್ಷೆ	Evaluation of progress
ಪ್ರಾತ್ಯಕ್ಷಿಕೆಯ ಬೇಸಾಯಸಂಘಗಳು	Demonstration co-operative farms
ಫಡ್	Phad(Traditional co-operative farm)
ಫಲಿಸುವ ಅವಧಿ	Gestation period
ಬಡಬೇಸಾಯಗಾರರು	Poor peasant's or farmers
ಬಡಬೇಸಾಯಗಾರರ ಸಮಿತಿ	Poor peasant's committee
ಬದಿ ಪಟ್ಟಿ	Border strip
ಬಂಡವಾಳ ನಿರ್ಮಾಣ	Capital formation
ಬಂಡವಾಳಶಾಹಿ	Capitalism
ಭೂಮಿ ಮತ್ತು ಹೈಸಿಯತ್ ರಿಜಿಸ್ಟರ್	Land haisiyat register
ಭೂಮಿಯನ್ನು ಒಂದುಗೂಡಿಸುವಿಕೆ	Pooling of land
ಭೂಮಿಯನ್ನು ಒಂದುಗೂಡಿಸುವ ಕರಾರುಪತ್ರ	Land pooling agreement
ಭೂಮಿಯ ಪ್ರತಿಫಲ	Return for land
ಭೂಮಿಯ ಹೆಚ್ಚಿನ ಲಾಭ	Land dividend
ಭೂಮಿಯ ಅಭಿವೃದ್ಧಿಯ ಪರಿಹಾರ	Compensation for land development
ಭೂ ಸುಧಾರಣೆಯ ಕಾನೂನು	Land reform act
ಭೂ ಹಿಡುವಳಿಯ ಗರಿಷ್ಠ ಮಿತಿ	Land ceiling
ಭೂಮಿಯ ಸಮಾಜೀಕರಣ	Socialisation of land
ಬೆಳೆಯ ಉತ್ಪತ್ತಿ	Productivity
ಬೇಸಾಯದ ಆದಾಯ	Agricultural income
ಬೇಸಾಯದ ಆದಾಯಕರ	Agricultural income-tax
ಬೇಸಾಯ ಉತ್ಪತ್ತಿಯ ಹೆಚ್ಚಳ	Agricultural surplus
ಬೇಸಾಯದ ಉತ್ಪತ್ತಿ	Agricultural output
ಬೇಸಾಯಗಾರರ ಸಂಸ್ಥೆಗಳು	Peasants Associations
ಬೇಸಾಯಗಾರರ ಉತ್ಪಾದಕರ ಸಂಘಗಳು	Agricultural Producers co-operatives
ಬೇಸಾಯ ಸಂಚಾಲನೆ (ಹಿಡುವಳಿ ನಿರ್ವಹಣೆ)	Farm management
ಬೇಸಾಯಗಾರ ಕಾರ್ಮಿಕರ ಸಹಕಾರ ಸಂಘ	Peasant worker's co-operative

ಬೇಸಾಯಸಂಘದ ಆರ್ಥಿಕಭದ್ರತೆ	Viability of co-operative farm
ಬೇಸಾಯದ ಸಮಾಜವಾದಿ ಪರಿವರ್ತನ	Socialist transformation of agriculture
ಮಧ್ಯಮ ಬೇಸಾಯಗಾರ	Middle peasant
ಮಾದರಿ ಪ್ರಯೋಗ ಕ್ಷೇತ್ರ	Pilot Project
ಮಾರಾಟ ಕರ	Sales tax
ಮೌಲ್ಯಮಾಪಕ ಸಮಿತಿ	Assessment committee
ಮೌವು (ಚೀನಅಳತೆ)	0.16 Acres
ಯಾಂತ್ರೀಕರಣ	Mechanisation
ಯುಆನ(ಚೀನದ ನಾಣ್ಯ)	Rs. 2
ಯೋಗ್ಯತೆಗೆ ತಕ್ಕ ಕೆಲಸ	Work according to ability
ರಷಿಯಾದ ಸಾಮ್ಯವಾದಿ ಕ್ರಾಂತಿ	Bolshevik revolution in Russia
ರಾಜ್ಯಸಹಕಾರಿ ಬೇಸಾಯಸಂಘಗಳ ಸಂಯುಕ್ತಸಂಘ	State co-operative farming societies federation
ರಾಜ್ಯದ ಸಹಕಾರಿ ಬೇಸಾಯದ ಸಲಹಾಮಂಡಳಿ	State co-operative farming advisary board
ಲಾಭನಷ್ಟಗಳ ಪಟ್ಟಿ	Profit and loss account
ಲಾಭ ವಿತರಣೆ	Distribution of profit
ವ್ಯವಸ್ಥಾಪಕ ಸಮಿತಿ	Managing committee
ವಿಸ್ತರಣಾ ಸಿಬ್ಬಂದಿ	Extension staff
ವಿಸ್ತಾರದ ಆರ್ಥಿಕತೆ	Economy cf scale
ವಿಸ್ತಾರದ ಅನಾರ್ಥಿಕತೆ	Diseconomy of scale
ವಿಲೀನೀಕರಣ	Amalgamation
ವೃದ್ಧಾಪ್ಯ ವಿಶ್ರಾಂತಿ ವೇತನ	Oldage pension
ವೈಯಕ್ತಿಕ ಬೇಸಾಯದ ಗ್ರಾಮ (ಇಸ್ರೇಲಿನಲ್ಲಿ)	Moshav (in Israel)
ಶ್ರಮಸಂಘಟನ	Labour organisation
ಶ್ರಮಸಂಪತ್ತು	Labour resource
ಶ್ರಮ ವಿತರಣೆ	Work distribution
ಶ್ರಮದಿವಸ	Work day
ಶ್ರಮದಾನದಳ (ರಷಿಯಾದಲ್ಲಿ)	Subbatniks (in Russia)
ಸಭೆಯ ನಡವಳಿಕೆಗಳು ಅಥವಾ ಕಾರ್ಯಕಲಾಪಗಳು	Minutes or proceedings of a meeting
ಸಹಕಾರಿ ಮಧ್ಯವರ್ತಿ ಬ್ಯಾಂಕು	Co-operative Central bank
ಸಹಕಾರಿ ಬೇಸಾಯಸಂಘ	Co-operative farming society (General word)
ಸಹಕಾರಿ ಉತ್ತಮ ಪದ್ಧತಿಯ ಬೇಸಾಯಸಂಘ	Co-operative better farming society
ಸ್ಥಳಿಕ ಮುಂದಾಳು	Local leader
ಸಂಚಾಲಕ	Manager
ಸಾಮೂಹಿಕ ಜೀವನದಗ್ರಾಮ	Kibbutz
ಸಾಮೂಹಿಕ ಬೇಸಾಯದ ಗ್ರಾಮ	Moshav shitufi
ಸಾಮಾನ್ಯ ಬೇಸಾಯಗಾರರ ಸಹಕಾರಿ ಸಂಘ	General agricultural co-operative
ಸಾರ್ವತ್ರಿಕ ಶ್ರಮಸೇವೆ	Universal labour service
ಸಾಮ್ಯವಾದ	Communism
ಸಾಮೂಹಿಕ ಬೇಸಾಯ	Joint cultivation

ಸಹಕಾರಿ ರೈತ ಪದ್ಧತಿಯ ಬೇಸಾಯಸಂಘ	Co-operative peasant farming society
ಸಹಕಾರಿ ಸಂಯುಕ್ತ ಬೇಸಾಯಸಂಘ	Co-operative Joint farming society
ಸಹಕಾರಿ ಸಾಮುದಾಯಿಕ ಬೇಸಾಯಸಂಘ	Co-operative collective farming society
ಸಹಕಾರಿ ಬೇಸಾಯದ ಕಾರ್ಯಸಮಿತಿಯ ವರದಿ	Report of working groups on co-operative farming
ಸಹಕಾರಿಬೇಸಾಯದ ನಿರ್ದೇಶಕ ಸಮಿತಿಯ ವರದಿ	Report of committee of direction on co-operative farming
ಸಹಕಾರಿ ಮಾರಾಟ	Co-operative marketing
ಸಹಕಾರಿ ಬೇಸಾಯದ ವಿಶೇಷಾಧಿಕಾರಿ	Special officer for co-operative farming
ಸಹಕಾರಿ ಬೇಸಾಯಸಂಘದ ಪೋಟ ನಿಯಮಗಳು	Byelaws of a co-operative farming society
ಸಮಾಜವಾದ	Socialism
ಸಮಾಜವಾದಿ ಪಂಚಾಯಿತಿ	Soviet
ಸಹಾಯಕ ಉದ್ಯೋಗಗಳು	Subsidiary in industry
ಸ್ವಂತ ಸಾಗುವಳಿ	Self cultivation
ಸಾಮೂಹಿಕ ಅಭಿವೃದ್ಧಿ ಕ್ಷೇತ್ರ	Community development block
ಸುಧಾರಿಸಿದ ಬೇಸಾಯಪದ್ಧತಿ	Improval agricultural practice
ಸಾಂದ್ರಬೇಸಾಯ	Intensive farming
ಸಾಧನಸಂಪತ್ತು	Resources
ಸಾಧಾರಣ ಸಭೆ	General body meeting
ಹಣದವೆಚ್ಚ	Money cost
'ಹೆಚ್ಚು ಆಹಾರ ಬೆಳೆಯಿರಿ' ಯೋಜನೆ	Grow more food scheme
ಹೆಚ್ಚುವರಿ ಭೂಮಿ	Surplus land
ಹಿಡುವಳಿಗಳ ಸಂಯೋಜನೆ	Consolidation of holdings

ಆಧಾರ ಗ್ರಂಥಗಳು

1. ಎ.ಜಿ.ಅಂಗಡಿ:, **ಸಹಕಾರಿ ಬೇಸಾಯ ದರ್ಶನ,** ಬೆಂಗಳೂರು : ಮೈಸೂರು ರಾಜ್ಯ ಸಹಕಾರಿ ಬೇಸಾಯ ಸಂಘಗಳ ಒಕ್ಕೂಟ, 1971.

2. Asher Meniv and Akiv Levinsky., *Hand book of the Kibubtz.* Israel: Publication Department of World Secretariat of ICHOD HABONIM-Tel Aviv.

3. Dan Leon., *The Kibbutz.* Israel: Israel Horizons and World Hashomer Hatzair-Tel Aviv. 1964.

4. Gerhard Seidel and Others., *Agriculture in the German Democratic Republic.* VEB-Edition, Leipzig, 1962.

5. Goyal, S. K., *Some Aspects of Co-operative Farming in India.* New York: Asia Publishing House, 1966.

6. Laxminarayan, H. and Kissen Kanungo., *Glimpses of Co-operative Farming in India.* Bombay: Asia Publishing House, 1967.

7. Karpinsky, V. A., *What are Collective Farms.* London: Lindsay Drummond Ltd., C. Bucking am Street, WC.Z.1944.

8. Klusro, A. M. and Agarwal, A. N., *Problem of Co-operative Farming in India.* Bombay: Asia Publishing House, 1961.

9. Martynov, V., *Lenin on the Socialist Transformation of Agriculture.* Moscow: Novosti Press Agency Publishing House, 1973.

10. Noch Malkosh., *Co-operation in Israel.* II Edition, Hevrat Ovdim, General Co-operative Association of Jewis and Labour in Israel, 1958.

11. Popov, V., *Agriculture in the U.S.S.R.* Moscow: Progress Publishers, 1967.

12. —— *Co-operative Farming Policy & Programme.* Govt. of India Publication, 1961.

13. Repoıt of Committee of Direction on Co-operative Farming. (Gadgil Committee), Govt. of India Publication, 1966.

14. —— *Report of Indian Delegation to China on Agrarian Co-operatives*. (R. K. Patil Delegation), Govt. of India Publication, May 1957.

15. —— *Report of Study Team on Working of Co-operative Movement in Yugoslovia and Israel.* Govt. of India Publication, 1960.

16. —— *Report of Working Group on Co-operative Farming.* (Nijalingappa Committee), Vol. I & II, Govt. of India Publication December 1959.

ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದ ಪ್ರಕಟಣೆಗಳು

1.	ಸುಭಿಕ್ಷತೆಗೆ ತೆರೆದ ಬಾಗಿಲು	(ಪ್ರತಿಗಳು ತೀರಿವೆ)	ರೂ.	2–00
2.	ಪೀಡೆ ನಿರ್ವಹಣೆ	(,,)		5–00
3.	ಕೀಟ ವಿಂಗಡಣೆ			15–00
4.	ಕೀಟ ಹತೋಟಿ	(ದ್ವಿತೀಯ ಮುದ್ರಣ)		12–50
5.	ಸಾಕುಪ್ರಾಣಿಗಳ ಶರೀರಕ್ರಿಯಾ ಶಾಸ್ತ್ರ (ಭಾಗ I)		ಸಾದಾ ಪ್ರತಿ	16–25
6.	ತರಕಾರಿ ಬೇಸಾಯ	(ಪ್ರತಿಗಳು ತೀರಿವೆ)		12–50
7.	ಕೃಷಿ ರಸಾಯನ ಶಾಸ್ತ್ರ ಶಬ್ದಾರ್ಥ ನಿರೂಪಣಾವಳಿ		ಸಾದಾ ಪ್ರತಿ	6–25
			ಕ್ಯಾಲಿಕೊ ಪ್ರತಿ	10–00
8.	ಮಣ್ಣು ಮತ್ತು ನೀರು ಸಂರಕ್ಷಣಾ ಕೈಪಿಡಿ		ಸಾದಾ ಪ್ರತಿ	15–00
			ಕ್ಯಾಲಿಕೊ ಪ್ರತಿ	19–00
9.	ರೈತರ ನೆಚ್ಚುಮೆಚ್ಚಿನ ಮರಗಳು		ಸಾದಾ ಪ್ರತಿ	15–00
			ಕ್ಯಾಲಿಕೊ ಪ್ರತಿ	19–00
10.	ಸಾಕುಪ್ರಾಣಿಗಳ ಶರೀರಕ್ರಿಯಾ ಶಾಸ್ತ್ರ (ಭಾಗ II)		ಸಾದಾ ಪ್ರತಿ	11–25
			ಕ್ಯಾಲಿಕೊ ಪ್ರತಿ	15–00
11.	ಮೈಸೂರು ರಾಜ್ಯದಲ್ಲಿ ಕೃಷಿ	(ಪ್ರತಿಗಳು ತೀರಿವೆ)		12–50
12.	ಮಣ್ಣು ಮತ್ತು ನೀರು ನಿರ್ವಹಣೆ		ಸಾದಾ ಪ್ರತಿ	15–00
			ಕ್ಯಾಲಿಕೊ ಪ್ರತಿ	19–00
13.	ಮಣ್ಣು		ಸಾದಾ ಪ್ರತಿ	11–25
			ಕ್ಯಾಲಿಕೊ ಪ್ರತಿ	15–00
14.	ಕೃಷಿ ಸಹಕಾರ		ಸಾದಾ ಪ್ರತಿ	6–25
			ಕ್ಯಾಲಿಕೊ ಪ್ರತಿ	10–00
15.	ಕಳೆಗಳು ಮತ್ತು ಕಳೆಗಳ ನಿಯಂತ್ರಣ		ಸಾದಾ ಪ್ರತಿ	15–00
			ಕ್ಯಾಲಿಕೊ ಪ್ರತಿ	19–00
16.	ಗೋಸಂಪತ್ತು		ಸಾದಾ ಪ್ರತಿ	6–00
			ಕ್ಯಾಲಿಕೊ ಪ್ರತಿ	10–00
17.	ಧಾನ್ಯ ದಾಸ್ತಾನು ತತ್ವ ಮತ್ತು ಪದ್ಧತಿಗಳು		ಸಾದಾ ಪ್ರತಿ	7–50
			ಕ್ಯಾಲಿಕೊ ಪ್ರತಿ	11–25
18.	ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆ		ಸಾದಾ ಪ್ರತಿ	17–50
			ಕ್ಯಾಲಿಕೊ ಪ್ರತಿ	21–25
19.	ಪಶುವೈದ್ಯಕೀಯ ವಿಜ್ಞಾನ		ಸಾದಾ ಪ್ರತಿ	7–50
			ಕ್ಯಾಲಿಕೊ ಪ್ರತಿ	11–25
20.	ಹೊಲದ ಬೆಳೆಗಳಿಗೆ ಬೀಳುವ ಕೆಲವು ಕೀಟಗಳು		ಸಾದಾ ಪ್ರತಿ	8–25
			ಕ್ಯಾಲಿಕೊ ಪ್ರತಿ	12–00

21.	ಟ್ರಾಕ್ಟರು ಹಾಗೂ ಟ್ರಾಕ್ಟರುಗಳನ್ನು ಸುಸ್ಥಿತಿಯಲ್ಲಿಡುವ ಕ್ರಮಗಳು	ಸಾದಾ ಪ್ರತಿ ಕ್ಯಾಲಿಕೊ ಪ್ರತಿ	7–50 12–50
22.	ಸಾಕುಪ್ರಾಣಿಗಳ ಶರೀರಕ್ರಿಯಾ ಶಾಸ್ತ್ರ (ಭಾಗ III)	ಸಾದಾ ಪ್ರತಿ ಕ್ಯಾಲಿಕೊ ಪ್ರತಿ	10–00 15–00
23.	ಕೃಷಿ ವಿಸ್ತರಣ ಶಿಕ್ಷಣ ಪದ್ಧತಿಗಳು	ಸಾದಾ ಪ್ರತಿ ಕ್ಯಾಲಿಕೊ ಪ್ರತಿ	11–25 16–25
24.	ಕಣಜದ ಪೀಡೆಗಳು ಮತ್ತು ಅವುಗಳ ಹತೋಟಿ	ಸಾದಾ ಪ್ರತಿ ಕ್ಯಾಲಿಕೊ ಪ್ರತಿ	15–00 19–00
25.	ಸಸ್ಯವರ್ಗೀಕರಣ ಶಾಸ್ತ್ರ	ಸಾದಾ ಪ್ರತಿ ಕ್ಯಾಲಿಕೊ ಪ್ರತಿ	15–00 20–00
26.	ಪೌಷ್ಟಿಕ ಆಹಾರ	ಸಾದಾ ಪ್ರತಿ ಕ್ಯಾಲಿಕೊ ಪ್ರತಿ	9–00 14–00
27.	ಕಡಲ ಮೀನುಗಾರಿಕೆ	ಸಾದಾ ಪ್ರತಿ ಕ್ಯಾಲಿಕೊ ಪ್ರತಿ	5–00 10–00
28.	ಧಾನ್ಯದ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		10–75
29.	ಕಬ್ಬಿನ ಬೆಳೆಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		4–50
30.	ಶಿಶುವಿಹಾರ (ದ್ವಿತೀಯ ಮುದ್ರಣ)	ಸಾದಾ ಪ್ರತಿ	6–00
31.	ಬೇಳೆಕಾಳು ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		7–50
32.	ಕೃಷಿ ಎಂಜಿನಿಯರಿಂಗ್ ಪಠ್ಯಪುಸ್ತಕ ಸಮೀಕ್ಷಣೆ	ಸಾದಾ ಪ್ರತಿ ಕ್ಯಾಲಿಕೊ ಪ್ರತಿ	9–50 14–00
33.	ಇಲಿಗಳು ಹಾಗೂ ಅವುಗಳ ನಿಯಂತ್ರಣ	ಸಾದಾ ಪ್ರತಿ ಕ್ಯಾಲಿಕೊ ಪ್ರತಿ	9–50 13–25
34.	ತರಕಾರಿ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		12–50
35.	ಹಣ್ಣಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		16–25
36.	'ಕ್ಯಾನಿಂಗ್' ಆಹಾರ ಜೋಪಾಸನೆಯ ಒಂದು ಆಧುನಿಕ ವಿಧಾನ	ಸಾದಾ ಪ್ರತಿ ಕ್ಯಾಲಿಕೊ ಪ ತಿ	16–25 21–00
37.	ಅಲಂಕಾರ ಸಸ್ಯಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		10–75
38.	ಜೀವಕೋಶ ಕ್ರಿಯಾಶಾಸ್ತ್ರ ಮತ್ತು ಜೀವರಸಾಯನಶಾಸ್ತ್ರ	ಸಾದಾ ಪ್ರತಿ ಕ್ಯಾಲಿಕೊ ಪ್ರತಿ	20–00 25–00

39. ಎಲುಬು ಶಾಸ್ತ್ರ — ಸಾದಾ ಪ್ರತಿ 11–25
ಕ್ಯಾಲಿಕೊ ಪ್ರತಿ 16–25

40. ಕಡಲೆಕಾಯಿ (ಶೇಂಗಾ) — ಸಾದಾ ಪ್ರತಿ 10–00
ಕ್ಯಾಲಿಕೊ ಪ್ರತಿ 15–00

41. ಗಣಿತಶಾಸ್ತ್ರ ಪ್ರವೇಶಿಕೆ (ಭಾಗ I) — ಸಾದಾ ಪ್ರತಿ 25–00
ಕ್ಯಾಲಿಕೊ ಪ್ರತಿ 30–00

42. ತೆಂಗು, ಅಡಿಕೆ ಹಾಗೂ ಇತರ ಗರಿಮರಗಳ
ಕೀಟಗಳು ಹಾಗೂ ಅವುಗಳ ಹತೋಟಿ — 9–00

43. ಪ್ಲಾಂಟೇಶನ್ ಅಳೆಗಳಿಗೆ ಬೀಳುವ ಕೀಟಗಳು ಹಾಗೂ
ಅವುಗಳ ಹತೋಟಿ — 12–00

44. ಗಣಿತಶಾಸ್ತ್ರ ಪ್ರವೇಶಿಕೆ (ಭಾಗ II) — ಸಾದಾ ಪ್ರತಿ 16–00
ಕ್ಯಾಲಿಕೊ ಪ್ರತಿ 20–00

45. ಭಾರತದಲ್ಲಿ ಕೋಳಿಸಾಕಣೆ — ಸಾದಾ ಪ್ರತಿ 22–50
ಕ್ಯಾಲಿಕೊ ಪ್ರತಿ 27–50

46. ಎಣ್ಣೆಬೀಜ (ಕಾಳು)ಗಳ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ
ಅವುಗಳ ಹತೋಟಿ — 7–50

47. ಕಲ್ಲಿಂನಾರು (ಭೂತಾಳೆ)ಗಿಡಗಳು — ಸಾದಾ ಪ್ರತಿ 5–00

48. ಭಾರತೀಯ ಗ್ರಾಮೀಣ ಯುವಕ ರೈತ ಸಂಘಗಳ — ಸಾದಾ ಪ್ರತಿ 8–25
ಸಂಘಟನೆ — ಕ್ಯಾಲಿಕೊ ಪ್ರತಿ 13–25

49. ಹತ್ತಿ (ನೂಲು) ಮತ್ತು ನಾರಿನ ಬೆಳೆಗಳಿಗೆ ಬೀಳುವ
ಕೀಟಗಳು ಹಾಗೂ ಅವುಗಳ ಹತೋಟಿ — 10–00

50. ಹಸುರೆಲೆ ಗೊಬ್ಬರ, ಮೇವು ಹಾಗೂ ಉಪ್ಪುನೇರಳೆ ಬೆಳೆಗಳಿಗೆ
ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ — 5–00

51. ಮಾದಕ (ಹೊಗೆಸೊಪ್ಪು, ಗಾಂಜ) ಹಾಗೂ ಸಾಂಬಾರ
(ಅರಿಶಿನ ಇತ್ಯಾದಿ) ಬೆಳೆಗಳಿಗೆ ಬೀಳುವ ಕೀಟಗಳು
ಹಾಗೂ ಅವುಗಳ ಹತೋಟಿ — 3–75

52. ದೊಡ್ಡರೋಗ — 5–00

53. ಸಸ್ಯ ಸಾಮ್ರಾಜ್ಯ — ಸಾದಾ ಪ್ರತಿ 52–00
ಕ್ಯಾಲಿಕೊ ಪ್ರತಿ 30–00

54. ಮೂಲ ಅರ್ಥಶಾಸ್ತ್ರ — ಸಾದಾ ಪ್ರತಿ 19–00
ಕ್ಯಾಲಿಕೊ ಪ್ರತಿ 24–00

55. ಕೃಷಿ ಉಪಯೋಗಿ ಕೆಲವು ವೃಕ್ಷಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ 4–50

56. ಜೇನುಸಾಕಣೆ ಸಾದಾ ಪ್ರತಿ 17–50
ಕ್ಯಾಲಿಕೊ ಪ್ರತಿ 22–50

57. ಭಾರತದಲ್ಲಿ ಜೇನುಸಾಕಣೆ ಸಾದಾ ಪ್ರತಿ 20–00

58. ಪಶುರೋಗಗಳು ಮತ್ತು ಸಾರ್ವಜನಿಕ ಆರೋಗ್ಯ ಸಾದಾ ಪ್ರತಿ 12–50
ಕ್ಯಾಲಿಕೊ ಪ್ರತಿ 17–50

59. ತರಕಾರಿ ಬೆಳೆಗಳ ಕೀಟನಿಯಂತ್ರಣ ಸಾದಾಪ್ರತಿ 12–50
ಕ್ಯಾಲಿಕೊ ಪ್ರತಿ 19–00

60. ಮೀನುಗಾರಿಕೆ ಸಾದಾ ಪ್ರತಿ 10–00
ಕ್ಯಾಲಿಕೊ ಪ್ರತಿ 15–00

61. ಸಾಕುಪ್ರಾಣಿಗಳ ಭ್ರೂಣಶಾಸ್ತ್ರ ಸಾದಾಪ್ರತಿ 20–00
ಕ್ಯಾಲಿಕೊ ಪ್ರತಿ 25–00

62. ಕೃಷಿ ರಸಾಯನಶಾಸ್ತ್ರ ಪಾರಿಭಾಷಿಕ ಶಬ್ದಕೋಶ 3–25

63. ರೇಖಾತ್ಮಕ ಬೀಜಗಣಿತ ಸಾದಾ ಪ್ರತಿ 30–00
ಕ್ಯಾಲಿಕೊ ಪ್ರತಿ 35–00

64. ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ ಕ್ಯಾಲಿಕೊ ಪ್ರತಿ 125–00

65. ಸಾಕುಪ್ರಾಣಿ ಮೂಲದ ಸೋಂಕು ರೋಗಗಳು ಸಾದಾ ಪ್ರತಿ 7–50
ಕ್ಯಾಲಿಕೊ ಪ್ರತಿ 12–50

66. ಸಂಸ್ಕೃತಿಯ ರೂಪಿಕೆಗಳು ಸಾದಾ ಪ್ರತಿ 17–00
ಕ್ಯಾಲಿಕೊ ಪ್ರತಿ 22–00

67. ಹುಲಿ-ಭಾರತದ ರಾಷ್ಟ್ರೀಯ ಮೃಗ ಸಾದಾ ಪ್ರತಿ 20–00
ಕ್ಯಾಲಿಕೊ ಪ್ರತಿ 24–00

68. ಜೋಳ ಸಾದಾ ಪ್ರತಿ 10–10
ಕ್ಯಾಲಿಕೊ ಪ್ರತಿ 15–00

69. ಕುರಿಸಾಕಣೆ ಸಾದಾ ಪ್ರತಿ 10–00
ಕ್ಯಾಲಿಕೊ ಪ್ರತಿ 15–00

70. ಪ್ರಾಣಿಗಳ ವರ್ತನೆ ಸಾದಾಪ್ರತಿ 17–00
ಕ್ಯಾಲಿಕೊ ಪ್ರತಿ 22–00

71. ಸಸ್ಯ ತಳಿಅಭಿವೃದ್ಧಿ ವಿಧಾನಗಳು ಕ್ಯಾಲಿಕೊ ಪ್ರತಿ 60–00

72. ಆಹಾರ ಸೂಕ್ಷ್ಮಜೀವಿ ವಿಜ್ಞಾನದಲ್ಲಿ ಪ್ರಾಮುಖ್ಯತೆ ಪಡೆದಿರುವ ಸೂಕ್ಷ್ಮಜೀವಿಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ ಭಾಗ-1) 8-50

73. ಸಹಕಾರಿ ಬೇಸಾಯ

ಸಾದಾ ಪ್ರತಿ 16-00
ಕ್ಯಾಲಿಕೊ ಪ್ರತಿ 21-00

ಅಚ್ಚಿನಲ್ಲಿರುವ ಪ್ರಕಟಣೆಗಳು

74. ಸಾವಯವ ರಸಾಯನಶಾಸ್ತ್ರ
75. ಮಣ್ಣು-ನಿರ್ವಹಣೆ, ಸಂರಕ್ಷಣೆ ಹಾಗೂ ಬೆಳೆ ಉತ್ಪಾದಕತೆ
76. ಕೃಷಿ ಅನಿಲಯಂತ್ರ ಹಾಗೂ ಟ್ರಾಕ್ಟರುಗಳು
77. ನೀರಾವರಿ ತತ್ವ ಹಾಗೂ ಪದ್ಧತಿಗಳು
78. ಮಣ್ಣು ಶಿಲೀಂಧ್ರ ಕೈಪಿಡಿ
79. ಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ
80. ಕೆಲವು ಸಸ್ಯಗಳ ವೈಜ್ಞಾನಿಕ ಇಂಗ್ಲಿಷ್ ಹಾಗೂ ಕನ್ನಡ ಹೆಸರುಗಳು
81. ಬೀಜಗಣಿತ ಪರಿಚಯ
82. ಆಧುನಿಕ ಹೈನಾಗಾರ ದನಗಳ ನಿರ್ವಹಣೆ
83. ಹಂದಿಯ ಭ್ರೂಣಶಾಸ್ತ್ರ
84. ಮೀನು ಮತ್ತು ಸಾಗರೋತ್ಪನ್ನ ಆಹಾರಗಳ ಶೀತಜೋಪಾಸನೆ
85. ಸಾಕುಪ್ರಾಣಿಗಳ ಕೀಲು ಮತ್ತು ಸ್ನಾಯುಶಾಸ್ತ್ರ
86. ಮತ್ಸ್ಯಶಾಸ್ತ್ರ
87. ಹಣ್ಣು ಮತ್ತು ತರಕಾರಿ ಸಂರಕ್ಷಣೆ
88. ಕೃಷಿ ಅರ್ಥಶಾಸ್ತ್ರ
89. ತೆಂಗು
90. ಕೋಶ
91. ಆಹಾರ ರಕ್ಷಣೆ ಕೆಡುವಿಕೆ ಹಾಗೂ ತತ್ವಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ ಭಾಗ-2)
92. ಸೂಕ್ಷ್ಮಜೀವಿ ಜಗತ್ತು